ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೪೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೯

ಸ್ಥಿತಿ ಪ್ರಕರಣ

ಕನ್ನಡಿಸಿದವರು :
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಂಟಿಂಗ್ ವರ್ಕ್ಸ್,
೨೧, ಮನವಾರ್ತೆಪೇಟೆ, ಬೆಂಗಳೂರು ನಗರ.
೧೯೪೮

ಯೋಗವಾಸಿಷ್ಠ

ಸಂಪುಟ ೯

ಸ್ಥಿತಿ ಪ್ರಕರಣ

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ—ಸಂಖ್ಯೆ ೩೪

ಶ್ರೀ ವಸಿಷ್ಠ ಮಹರ್ಷಿ ವಿರಚಿತವೂ ಶ್ರೀ ವಾಲ್ಮೀಕಿ ಮಹರ್ಷಿ ಪ್ರೋಕ್ತವೂ
ಆದ

ಯೋಗವಾಸಿಷ್ಠ

ಸಂಪುಟ ೯

ಸ್ಥಿತಿ ಪ್ರಕರಣ

ಕನ್ನಡಿಸಿದವರು :
ವೇದಾಂತ ಶಿರೋಮಣಿ
ಮಣಿಕುಂಡಲಂ ಎಸ್. ವೆಂಕಟೇಶ ಶಾಸ್ತ್ರಿ

ಶ್ರೀ ಗುರುನಾಥ ಪ್ರಿಂಟಿಂಗ್ ವರ್ಕ್ಸ್,
೨೧, ಮನವಾರ್ತೆಪೇಟೆ, ಬೆಂಗಳೂರು ನಗರ.
೧೯೪೮

ಪೀಠಿಕೆ

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣ ಗ್ರಂಥ. ಇದಕ್ಕೆ ವಾಸಿಷ್ಠರಾಮಾಯಣ ಎಂದೂ ಹೆಸರುಂಟು. ಅದ್ವೈತ ಗುರುಪರಂಪರೆಯ ಆದ್ಯರಾದ ವಸಿಷ್ಠರು "ಸೃಷ್ಟಿಯ ಮೊದಲು ದಿನಗಳಲ್ಲಿ ಲೋಕದಲ್ಲಿ ಶಾಂತಿಯು ನೆಲೆಗೊಳ್ಳಲೆಂದು ಭಗವಂತನಾದ ಚತುರ್ಮುಖನು ಉಪದೇಶಿಸಿದ ಜ್ಞಾನವಿದ್ಯೆ"ಯನ್ನು ಶ್ರೀರಾಮನ ಚಿತ್ತಶಾಂತಿಗೆಂದು ಹೇಳಿದರೆಂದೂ, ಅದನ್ನೇ ವಾಲ್ಮೀಕಿಗಳು ಬ್ರಹ್ಮನಾಜ್ಞೆಯಿಂದ ಗ್ರಂಥವಾಗಿ ವಿರಚಿಸಿದರೆಂದೂ ಈ ಗ್ರಂಥದಲ್ಲಿ ಹೇಳಿದೆ. ವಿದ್ಯಾರಣ್ಯರು ನಿಶ್ಚಲದಾಸರು ಮೊದಲಾದ ಅದ್ವೈತಾಚಾರ್ಯರನೇಕರು ಈ ಗ್ರಂಥದ ಅನೇಕಾಂಶಗಳನ್ನು ತಮ್ಮ ಗ್ರಂಥಗಳಲ್ಲಿ ಸಂಗ್ರಹಿಸಿದ್ದಾರೆ. ವಾಸಿಷ್ಠ ಸಿದ್ಧಾಂತವೂ ಶಾಂಕರಸಿದ್ಧಾಂತವೂ ಕೆಲವೆಡೆಗಳಲ್ಲಿ ಭಿನ್ನೈಸುವುದೆಂದು ಕೆಲವರ ಅಭಿಪ್ರಾಯವಿದೆ. ಆದರೂ ಅದ್ವೈತ ಸಂಪ್ರದಾಯವನ್ನು ಹಿಡಿದ ಮುಮುಕ್ಷುಗಳೂ ಜಿಜ್ಞಾಸುಗಳೂ ಈ ಗ್ರಂಥವನ್ನು ಪರಮಾದರದಿಂದ ಅಧ್ಯಯನ ಮಾಡುತ್ತಾರೆ.

ಭೋಗೈಕಪರಾಯಣರಾದ ಆಧುನಿಕ ನಾಗರಿಕತೆಯ ದೇಶಗಳಲ್ಲಿಯೇ ಹುಟ್ಟಿ ಬೆಳೆದ ಅನೇಕ ದಾರ್ಶನಿಕರು ನಿರೂಪಿಸಿರುವ ಸಿದ್ಧಾಂತಗಳಿಗೂ ಈ ವಾಸಿಷ್ಠ ಸಿದ್ಧಾಂತಕ್ಕೂ ಎಷ್ಟೋ ಅಂಶಗಳಲ್ಲಿ ಏಕತಾನತೆಯು ಇರುವುದು ಒಂದು ವಿಶೇಷ ಸಂಗತಿ.

ಈ ಗ್ರಂಥದಲ್ಲಿ ನಿರ್ಣಯಸಾಗರ ಪ್ರೆಸ್ಸಿನಲ್ಲಿ ತಾತ್ಪರ್ಯಪ್ರಕಾಶವೆಂಬ ವ್ಯಾಖ್ಯಾನದೊಡನೆ ಮುದ್ರಿತವಾಗಿರುವ ಮೂಲವನ್ನೇ ಬಹುಮಟ್ಟಿಗೆ ಅನುಸರಿಸಲಾಗಿದೆ. ಹಿಂದೆ ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ ಗುಂಡಶಾಸ್ತ್ರಿಗಳು ಕೃಷ್ಣರಾಜವೈಭವನೆಂಬ ಹೆಸರಿನಿಂದ ವೈರಾಗ್ಯ, ಮುಮುಕ್ಷು, ವ್ಯವಹಾರ, ಉತ್ಪತ್ತಿ, ಸ್ಥಿತಿ ಉಪಶಮಗಳೆಂಬ ಮೊದಲಿನೈದು ಪ್ರಕರಣಗಳನ್ನು ಮೂಲ-ಅನುವಾದ ಸಹಿತವಾಗಿ ಪ್ರಕಟಿಸಿದ್ದರು. ಈಗ ಇಲ್ಲಿ ಪ್ರಕಟವಾಗಿರುವ ಅನುವಾದವು ಸ್ವತಂತ್ರವು ಅವಶ್ಯವೆಂದು ತೋರಿದ ಕಡೆಗಳಲ್ಲಿಯೂ ಗ್ರಂಥಾಂತರಗಳಲ್ಲಿ ಹೇಳಿರುವುದು ಓದುಗರ ಗಮನಕ್ಕೆ ಬಂದು ಓದಿದ ವಿಷಯವು ದೃಢವಾಗಲೆಂದೂ ಟಿಪ್ಪಣಿಗಳನ್ನು ಕೊಡಲಾಗಿದೆ.

ಭಾರತವಿಂದು ಜಾಗ್ರತವಾಗಿದೆ. ಮಾದರಿಯ ಮೈಸೂರು ಅಕ್ಷರ ಪ್ರಚಾರವನ್ನು ದೇಶಾದ್ಯಂತವೂ ಹರಡಿ ಕೀರ್ತಿವಂತವಾಗಿದೆ. ನಾನಾಮುಖವಾಗಿ ಬೆಳೆಯುತ್ತಿರುವ ದೇಶದ ಸೌಭಾಗ್ಯ ಮಂದಿರಕ್ಕೆ ಕಲಶವಾಗಿ ಜನರಲ್ಲಿ ವಿದ್ಯಾವಂತರಾಗಬೇಕೆಂಬ ಆಸೆ ಬಲವಾಗುತ್ತಿದೆ. ಕಲಿತ ವಿದ್ಯೆಗಳೆಲ್ಲವೂ ಸಾರ್ಥಕವಾಗಬೇಕಾದರೆ ಬ್ರಹ್ಮವಿದ್ಯೆಯನ್ನು ಕಲಿಯಲೇಬೇಕೆಂಬ ಪ್ರಾಚೀನರ ಉಪದೇಶವೆಂದು ಎಲ್ಲರ ಮನಸ್ಸಿಗೂ ಬರುವ ಕಾಲವೂ ಬಂದಿದೆ. ಇಂತಹ ಸಂಧಿಕಾಲಗಳಲ್ಲಿ ಈ ಗ್ರಂಥವು ಸುಲಭ ಕನ್ನಡದಲ್ಲಿ ಬರುವುದು ಕನ್ನಡಲೋಕದ ಸುದೈವ. ಕಾವ್ಯಶೈಲಿಯಲ್ಲಿ ವೇದಾಂತವನ್ನು ಇಷ್ಟು ಸುಂದರವಾಗಿ ಸುಲಭವಾಗಿ ಬೋಧಿಸುವ ಗ್ರಂಥ ಇನ್ನೊಂದಿಲ್ಲ. ಇದನ್ನು ಓದಿ ಅರ್ಥಮಾಡಿಕೊಳ್ಳಲು ಗ್ರಂಥಾಂತರಗಳ ಸಹಾಯವು ಬೇಕಿಲ್ಲ. ಶ್ರದ್ಧೆಯೊಂದಿದ್ದರೆ ಸಾಕು: ಅದರಿಂದ ಈ ಗ್ರಂಥದಿಂದ ಆಗುವ ಲೋಕೋಪಕಾರವು ಅಷ್ಟಿಷ್ಟಲ್ಲ.

ಈ ಗ್ರಂಥವು ಈ ರೂಪದಲ್ಲಿ ಬರುವುದಕ್ಕೆ ಕಾರಣರು ನಮ್ಮನ್ನಾಳುವ ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜೇಂದ್ರ ಒಡೆಯರು ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಅವರು. ಈ ಗ್ರಂಥ ಪಠನ ಪಾಠನಗಳಿಂದ ಲಭಿಸುವ ಶ್ರೇಯಸ್ಸೆಲ್ಲವೂ ಮಹಾಸನ್ನಿಧಾನಕ್ಕೇ ಸೇರಿದುದು.

ಈ ಕಾರ್ಯಕ್ಕೆ ತನ್ನನ್ನು ನಿಯಮಿಸಿದ ಆಳುವ ಮಹಾಸ್ವಾಮಿಯವರಿಗೆ ಅನುವಾದಕನು ಅತ್ಯಂತ ಕೃತಜ್ಞನಾಗಿ ಈ ಗ್ರಂಥದ ಅಧ್ಯಯನದಿಂದ ತನಗೆ ಆದ ಪರೋಪಕಾರವನ್ನು ನೆನೆದು ಸಮಸ್ತ ಸನ್ಮಂಗಳಾನಿ ಭವಂತು ಎಂದು ಹರಕೆ ಹೊರುತ್ತಾನೆ.

ಬೆಂಗಳೂರು ನಗರ
೧೦-೧೨-೪೮

ದೇವುಡು.

ಸೂಚನೆ:—ಈ ಸಂಪುಟವನ್ನು ವೇದಾಂತ ಶಿರೋಮಣಿ ಬ್ರಹ್ಮಶ್ರೀ ಮ. ಸು. ವೆಂಕಟೇಶ ಶಾಸ್ತ್ರಿಗಳು ಕನ್ನಡಿಸಿದ್ದಾರೆ.

ವಿಷಯ ಸೂಚಿಕೆ

ಶ್ರೀ

ಯೋಗವಾಸಿಷ್ಠ

ಸ್ಥಿತಿ ಪ್ರಕರಣ

ಪಂಚತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಜಯಂತಿ ತೇ ಮಹಾಶೂರಾಃ ಸಾಧವೋ ಯೈರ್ವಿನಿರ್ಜಿತಂ ।
ಅವಿದ್ಯಾಮೇದುರೋಲ್ಲಾಸೈಃ ಸ್ವಮನೋ ವಿಷಯೋನ್ಮುಖಂ ॥ ೧ ॥

ಮೂವತ್ತೈದನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಮ, ಲೋಕದಲ್ಲಿ ಸಹಜವಾಗಿಯೇ, ಅವಿದ್ಯಾಮಯವಾದ ಪ್ರಾಪಂಚಿಕ ಭೋಗಗಳಲ್ಲಿ ಉಲ್ಲಾಸದಿಂದ ವಿಷಯಾಭಿಮುಖವಾಗಿ ಸರ್ವದಾ ಓಡುತ್ತಿರುವ ತಮ್ಮ ಮನಸ್ಸನ್ನು ಯಾವ ಸಾಧುಗಳು ಜಯಿಸುವರೋ ಅವರೇ ಸರ್ವೋತ್ಕೃಷ್ಟ ಮಹಾ ಶೂರರು. (ಮಹಾ ಸಾಮ್ರಾಜ್ಯಗಳನ್ನು ಕಟ್ಟಿ ಲೋಕೈಕವೀರರೆಂಬ ಖ್ಯಾತಿಯನ್ನು ಸಂಪಾದಿಸಿ, ದಿಗ್ವಿಜಯ ಮಾಡಿದವರೂ ಕೂಡ ಇಂದ್ರಿಯಗಳೆಂಬ ಶತ್ರುಗಳಿಂದ ಪರಾಜಿತರಾಗುವರು. ಇಂದ್ರಿಯಗಳೆಂಬ ಶತ್ರುವನ್ನು ಜಯಿಸುವುದು ಎಂತಹವನೇ ಆಗಿರಲಿ ಬಹುಕಷ್ಟ. ಇಂದ್ರಿಯಗಳನ್ನು ಗೆದ್ದು ಸ್ವಾಧೀನಪಡಿಸಿಕೊಂಡಿರುವವನೇ ನಿಜವಾಗಿಯೂ ಮಹಾ ಶೂರನು) ಇಲ್ಲಿ ಮಹಾ ಶೂರಾಃ ಎಂದು ಹೇಳುವುದಕ್ಕಿಂತಲೂ ಮಹಾ ಧೀರಾಃ ಎಂದು ಹೇಳಿದರೆ. 'ವಿಕಾರಹೇತೌ ಸತಿ ಕ್ರಿಯಂತೇ ಯೇಷಾಂ ನ ಚೇತಾಂಸಿತ ಏವ ಧೀರಾಃ' ಎಂದು ಕಾಳಿದಾಸನು ಕುಮಾರ ಸಂಭವದಲ್ಲಿ ಹೇಳಿರುವಂತೆ ಇನ್ನೂ ಚೆನ್ನಾಗಿ ಕಾಣುವುದು.

ಸಂಸಾರಸ್ಯಾಸ್ಯ ದುಃಖಸ್ಯ ಸರ್ವೋಽಪದ್ರವದಾಯಿನಃ ।
ಉಪಾಯ ಏಕ ಏವಾಸ್ತಿ ಮನಸಃ ಸ್ವಸ್ಯ ನಿಗ್ರಹಃ ॥ ೨ ॥

ಶ್ರೂಯತಾಂ ಜ್ಞಾನಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಂ ।
ಭೋಗೇಚ್ಛಾಮಾತ್ರಕೋ ಬಂಧಸ್ತತ್ತ್ಯಾಗೋ ಮೋಕ್ಷ ಉಚ್ಯತೇ ॥ ೩ ॥

ಕಿಮನ್ಯೈಃ ಶಾಸ್ತ್ರಸಂದರ್ಭೈಃ ಕ್ರಿಯತಾಮಿದಮೇವ ತು ।
ಯದ್ಯತ್ ಸ್ವಾದ್ವಿಹ ತತ್ಸರ್ವಂ ದೃಶ್ಯತಾಂ ವಿಷವಹ್ನಿವತ್ ॥ ೪ ॥

ವಿಷಮಾ ವಿಷಯಾನುಭೋಗಾಃ ಪ್ರವಿಚಾರ್ಯ ಪುನಃ ಪುನಃ ।
ಉಪರಿಷ್ಟಾತ್ ಪರಿತ್ಯಜ್ಯ ಸೇವ್ಯಮಾನಾಃ ಸುಖಾವಹಾಃ ॥ ೫ ॥

---

೨. ಸಕಲ ವಿಧಗಳಿಂದ ಉಪದ್ರವಗಳನ್ನು ಕೊಡತಕ್ಕುದ್ದಾಗಿಯೂ ಸರ್ವ ದುಃಖಮಯವಾಗಿಯೂ ಇರುವ ಈ ಸಂಸಾರವು ನಿವೃತ್ತಿಯಾಗಲು, ತನ್ನ ಮನಸ್ಸಿನ ನಿಗ್ರಹವೆಂಬುದು ಒಂದೇ ಒಂದು ಉಪಾಯವು ಇರುವುದು. (ಬೇರೆ ಇನ್ಯಾವ ಉಪಾಯವೂ ಇಲ್ಲ.)

೩. ಈ ಜ್ಞಾನಯೋಗದ ಸರ್ವಸಾರಭೂತವಾದ ಒಂದು ರಹಸ್ಯವನ್ನು ಹೇಳುವೆನು ಕೇಳು. ಮತ್ತು ಕೇಳಿ, ಬಳಿಕ ಮನಸ್ಸಿನಲ್ಲಿ ಅದರ ದೃಢನಿಶ್ಚಯ ವುಳ್ಳವನನಾಗು. ಭೋಗೇಚ್ಛೆಯೆಂಬುದೇ ಬಂಧವು. ಅದನ್ನು ಬಿಡುವಿಕೆಯೇ ಮೋಕ್ಷವು. ಇದೇ ಸಕಲ ತತ್ತ್ವಶಾಸ್ತ್ರಗಳ ಪರಮ ಸಿದ್ಧಾಂತವೆಂದು ತಿಳಿ.

೪. ಇತರ ಶಾಸ್ತ್ರವಿಚಾರಗಳನ್ನು (ಸಂದರ್ಭಗಳನ್ನು) ವಿಮರ್ಶೆಮಾಡಿ ತಿಳಿ ಯುವುದರಿಂದ ಆಗುವ ಪ್ರಯೋಜನವು ಯಾವುದೂ ಇಲ್ಲ. ಆದಕಾರಣ, ಜ್ಞಾನ ಯೋಗದ ತತ್ತ್ವಶಾಸ್ತ್ರದ ಅಭ್ಯಾಸಬಲದಿಂದ ಈ ಪ್ರಪಂಚದಲ್ಲಿ ಯಾವಯಾವುದು ಆಪಾತರಮಣೀಯವಾಗಿಯೂ ಹಿತಕರವಾಗಿಯೂ ಇರುವಂತೆ ಮನಸ್ಸಿಗೆ ತೋರು ವುದೋ, ಅದನ್ನೆಲ್ಲ ವಸ್ತುತಃ ವಿಷದಂತೆಯೂ ಕೆಂಡದಂತೆಯೂ ಭಾಸ ಪರಿತ್ಯಾಗ ಮಾಡಿದರೆ ಸಾಕಾಗಿರುವುದು. (ವಿಷಯಗಳಲ್ಲಿ ದೋಷದರ್ಶನದಿಂದ ಅವುಗಳ ಭೋಗಕ್ಕೆ ಮನಸ್ಸಿನಲ್ಲಿ ಅವಕಾಶಕೊಡದೆ ಇರಬೇಕು.)

೫. ವಿಷಯಗಳ ಗುಣದೋಷಾದಿಗಳನ್ನು ಸರಿಯಾಗಿ ವಿಚಾರಮಾಡಿ ತಿಳಿದು ಕೊಳ್ಳದೆ ಹಠಾತ್ತಾಗಿ ಅವುಗಳನ್ನು ತ್ಯಾಗಮಾಡುವುದರಿಂದ ಮನಸ್ಸಿಗೆ ಪಶ್ಚಾತ್ತಾಪ ರೂಪವಾದ ವ್ಯಥೆಯು ಉಂಟಾಗುವುದು ಸಹಜವೇ ! ಆದರೆ ಅವುಗಳ ಸ್ವರೂಪವನ್ನು

ದೋಷಾನ್ಪ್ರಸವತಿ ಸ್ಫಾರಾನ್ ವಾಸನಾವಲಿತಾ ಮತಿಃ ।
ಕೀರ್ಣಕಂಟಕಬೀಜಾ ಭೂಃ ಕಂಜಕಪ್ರಸರಂ ಯಥಾ ॥ ೬ ॥

ಅಲಗ್ನವಾಸನಾಜಾಲಾ ಮತಿಃ ಪ್ರಸರವರ್ಜಿತಾ ।
ಅದೃಷ್ಟರಾಗದ್ವೇಷಾ ಯಾ ಶಮಮೇತಿ ತನ್ಯೈಃ ಪರಂ ॥ ೭ ॥

ಶುಭಾಶುಭಾ ನಸದ್ ಗ್ಲಾನೀನ್ ಪ್ರಸೂತೇ ಸುಗುಣಾನ್ ಸದಾ ।
ಫಲದಾನಂಕುರಾನ್ ಕಾಲೇ ಶ್ರೇಷ್ಠಬೀಜವತೀವ ಭೂಃ ॥ ೮ ॥

ಗುರುಶಾಸ್ತ್ರೋಪದೇಶಕ್ರಮದಿಂದ ಸ್ಪಷ್ಟವಾಗಿ ವಿಮರ್ಶೆಮಾಡಿ, ಅವುಗಳ ದೋಷಗಳನ್ನು ಮನಗಂಡು, ಬಳಿಕ ಅವುಗಳನ್ನು ಪರಿತ್ಯಾಗಮಾಡಿದರೆ ಆಗ ಅದು ಆಪಾತತಃ ಕಟುವಾಗಿ ತೋರಿದರೂ ಪರಿಣಾಮದಲ್ಲಿ ಮಹಾ ಸುಖಕರವಾಗುವುದು; ಯಾವ ಬಗೆಯ ವ್ಯಥೆಗೂ ಅವಕಾಶವಿರುವುದಿಲ್ಲ. ಮತ್ತು ಪುನಃ ಪುನಃ ಚೆನ್ನಾಗಿ ವಿಚಾರಮಾಡಿ, ಸಹನಾಭ್ಯಾಸವನ್ನು ಪಡೆದ ತರುವಾಯ ಭೋಗವಾಸನೆಗಳನ್ನು ತ್ಯಾಗಮಾಡಿ ವಿಷಯಗಳನ್ನು ಅನುಭವಿಸುತ್ತಿದ್ದರೂ ಕೂಡ, ಅವು ಸುಖಾವಹವಾಗಿಯೇ ಪರಿಣಮಿಸುವುವು.

೬. ಮುಳ್ಳು ಗಿಡಗಳ ಬೀಜಗಳನ್ನು ಚೆನ್ನಾಗಿ ಹದಗೊಳಿಸಿದ ಭೂಮಿಯಲ್ಲಿ ಬಿತ್ತಿದರೆ ಆ ಭೂಮಿಯು ವಿಶೇಷವಾಗಿ ಮುಳ್ಳುಗಿಡಗಳನ್ನೇ ಹೇಗೆ ಬೆಳೆಯಿಸುವುದೋ ಹಾಗೆಯೇ ಭೋಗವಾಸನೆಯಿಂದ ವ್ಯಾಪ್ತವಾದ ಮತಿಯು ಪುನಃ ಪುನಃ ವಿಷಯ ಸ್ಮರಣೆಯನ್ನುಂಟುಮಾಡಿ ಅತ್ಯಂತ ಪ್ರಬಲವಾದ ರಾಗಾದಿ ದೋಷಗಳ ಉತ್ಪತ್ತಿಗೆ ಕಾರಣವಾಗುವುದು. (ಆದಕಾರಣ, ಭೋಗವಾಸನೆಯನ್ನು ಸರ್ವಥಾ ಪರಿತ್ಯಜಿಸಬೇಕು.)

೭. ಯಾವ ಮತಿಯು (ಬುದ್ಧಿಯು) ವಿವಿಧ ಭೋಗ ವಾಸನಾಜಾಲಗಳ ಸಂಪರ್ಕ (ಸಂಬಂಧ) ಶೂನ್ಯವಾಗಿ, ರಾಗದ್ವೇಷಾದಿ ದೋಷಗಳನ್ನು ಕಾಣದೆ ಅವಿಕಾರಿಯಾಗಿರುವುದೋ, ಅದರ ಪ್ರಸರಣೆಯು ಸುತರಾಂ ಇಲ್ಲವಾಗುವುದು. ಬಳಿಕ ಅದು ಕಾಲಕ್ರಮದಿಂದ ಶೀಘ್ರದಲ್ಲಿಯೇ ಅತ್ಯುತ್ತಮವಾದ ಶಾಂತಿಯನ್ನು ಪಡೆಯುವುದು. (ಪ್ರಸರಣ–ಚಾಂಚಲ್ಯ)

೮. ಸಕಾಲದಲ್ಲಿ ಶ್ರೇಷ್ಠವಾದ ವ್ರೀಹ್ಯಾದಿ (ಭತ್ತ) ಬೀಜಗಳನ್ನು ಬಿತ್ತಿದ ಹಸನಾದ ಭೂಮಿಯು ಉತ್ತಮ ಫಲದಾಯಕಗಳಾದ ಸಸಿಗಳನ್ನು ಮೊಳೆಯಿಸು

ಶುಭಭಾವಾನುಸಂಧಾನಾತ್ ಪ್ರಸನ್ನೇ ಮನಸಿ ಸ್ಥಿತೇ ।
ಶನೈಃ ಶನೈಃ ಪ್ರಶಾಂತೇ ಚ ಮಿಥ್ಯಾಜ್ಞಾನಘನಾಂಬುದೇ ॥ ೯ ॥

ವೃದ್ಧಿಂ ಯಾತೇ ಚ ಸೌಜನ್ಯೇ ಯಕ್ಷ್ಣೇ ಶುಕ್ಲ ಇವೋಡುಪೇ ।
ವಿವೇಕೇ ಪ್ರಸೃತೇ ಪುಣ್ಯೇ ನಭಸೀವಾರ್ಕತೇಜಸಿ ॥ ೧೦ ॥

ಧೃತಾವತರ್ವಿವೃದ್ಧಾಯಾಂ ಮುಕ್ತಾಯಾಮಿವ ಕೀಚಕೇ ।
ಸ್ಥಿತಾವಂತಃ ಕೃತಾರ್ಥಾಯಾಂ ಮಧೌವಿವ ನಿಶಾಕರೇ ॥ ೧೧ ॥

ಫಲಿತೇ ಶೀತಲಚ್ಛಾಯೇ ಸತ್ಸಂಗಸಫಲದ್ರುಮೇ ।
ಪ್ರವತ್ಯಾನಂದಸುರಸೇ ಸಮಾಧಿಸರಲದ್ರುಮೇ ॥ ೧೨ ॥

ಮನೋ ಭವತಿ ನಿರ್ದ್ವಂದ್ವಂ ನಿಷ್ಕಾಮಂ ನಿರುಪದ್ರವಂ ।
ಪ್ರಶಾಂತಚಾಪಲಾನರ್ಥಶೋಕಮೋಹಭಯಾಮಯಂ ॥ ೧೩ ॥

ವಂತೆ, ಶುಭವಾದ ಮತಿಯು ಸಕಲ ಕ್ಲೇಶ ವಿನಿರ್ಮುಕ್ತಗಳಾದ ಜ್ಞಾನಸಮಾಧಿ ವಿಶ್ರಾಂತಿರೂಪ ಮೋಕ್ಷಸಾಧಕ ಶುಭ ಫಲಪ್ರದಾಯಕಗಳಾದ ಶಾಂತಿದಾಂತ್ಯಾದಿ ಸುಗುಣಗಳನ್ನೇ ಸರ್ವದಾ ಪ್ರಸವಿಸುವುದು.

೯–೧೩. ಹೀಗೆ ಶುಭಾವಹವಾದ ಭಾವಗಳನ್ನು ಅನುಸಂಧಾನಮಾಡುವುದರಿಂದ ಮನಸ್ಸು ಪ್ರಸನ್ನವಾಗಿ (ನಿರ್ಮಲವಾಗಿ) ಇರುವುದು. ಮಿಥ್ಯಾಜ್ಞಾನವೆಂಬ ದಟ್ಟವಾದ ಮೇಘಗಳ ಸಾಲು ಮೆಲ್ಲಮೆಲ್ಲಗೆ ಪ್ರಶಾಂತವಾಗುವುದು. ಶುಕ್ಲಪಕ್ಷದಲ್ಲಿ ಚಂದ್ರಕಲೆಯಂತೆ ಸೌಜನ್ಯವು ದಿನೇ ದಿನೇ ವೃದ್ಧಿಹೊಂದುವುದು. ನಿರ್ಮಲವಾದ ಆಕಾಶವಲ್ಲಿ ಸೂರ್ಯನ ತೇಜಸ್ಸು ಚೆನ್ನಾಗಿ ಆವರಿಸುವಂತೆ(ಹರಡುವಂತೆ)ಅತಿಪವಿತ್ರಪದ ಪುಣ್ಯತಮವೂ ಆದ ಸದಸದ್ವಿವೇಕವು ನಿರರ್ಗಳವಾಗಿ ಪ್ರಸರಿಸುವುದು. ಕೀಚಕವೆಂಬ ವೇಣುವಿಶೇಷ(ಬಿದುರು)ದೊಳಗೆ ಮುಕ್ತಾಫಲ(ಮುತ್ತು)ಗಳು ಉದ್ಭವಿಸಿ ವೃದ್ಧಿಹೊಂದುವಂತೆ, ಮನಸ್ಸಿನೊಳಗೆ ಇಂದ್ರಿಯನಿಗ್ರಹವೆಂಬ ಧೈರ್ಯವು ವೃದ್ಧಿಹೊಂದುವುದು. (ವೇಣುಗಳೊಳಗೆ ಮುತ್ತುಗಳು ಉದ್ಭವಿಸುವುವು ಎಂದು ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ.) ಮನಸ್ಸಿನಲ್ಲಿ ಅದರ ಸ್ಥಿತಿಯು ಚೈತ್ರಮಾಸದಲ್ಲಿನ ಚಂದ್ರನಂತೆ ಆತ್ಮಸೌಖ್ಯಲಾಭದಿಂದ ಕೃತಾರ್ಥತೆಯನ್ನು ಪಡೆಯುವುದು. ಮತ್ತು ಬಹುತಂಪಾದ ನೆರಳಿನಿಂದ ಸಂತಾಪ ಪರಿಹಾರಕವಾದ ಸತ್ಸಂಗವೆಂಬ ಫಲವೃಕ್ಷವು ಫಲಭರಿತವಾಗುವುದು. ಸಮಾಧಿಯೆಂಬ ಸರಳ ವೃಕ್ಷವು (ಧೂಪದ ಗಿಡ) ಆನಂದ

ಕ್ಷೀಣಶಾಸ್ತ್ರಾರ್ಥಸಂದೇಹಂ ವಿಗತಾಶೇಷಕೌತುಕಂ
ನಿರಸ್ತಕಲ್ಪನಾಜಾಲಂ ಮೋಹಮುಕ್ತಮಲೇಪಕಂ || ೧೪ ||

ನಿರೀಹಂ ನಿರುಪಾಕ್ರೋಶಂ ನಿರಪೇಕ್ಷಂ ನಿರಾಧಿಕಂ ।
ಸಂಶಾಂತಶೋಕನೀಹಾರಮಸಕ್ತಂ ಗ್ರಂಥಿವರ್ಜಿತಂ || ೧೫ ||

ಸಂದೇಹೋಗ್ರಸುತಂ ಸಾಗ್ರಂ ಸತೃಷ್ಣಾದಾರಪಂಜರಂ ।
ನಾಶಯಿತ್ವಾ ಸ್ವಮಾತ್ಮಾನಂ ಸಾಧಯತ್ಯರ್ಥವೈಶ್ವರಂ || ೧೬ ||

ರಸವನ್ನು ಸ್ರವಿಸುತ್ತಿರುವುದು. ಆಗ ಇಂತಹ ಉತ್ತಮ ಸ್ಥಿತಿಯಲ್ಲಿ ಮನಸ್ಸು ಶೀತೋಷ್ಣಸುಖದುಃಖಾದಿ ದ್ವಂದ್ವಗಳಿಂದ ವಿನಿರ್ಮುಕ್ತವಾಗಿಯೂ, ಕಾಮರಹಿತ ವಾಗಿಯೂ, ಸಕಲೋಪದ್ರವಶೂನ್ಯವಾಗಿಯೂ, ಆಗುವುದು. ಇದರ ಚಾಪಲ್ಯ, ಅನರ್ಥ, ಶೋಕ, ಮೋಹ, ಭಯ ಮುಂತಾದ ಸಕಲ ರೋಗಗಳೂ ನಿರ್ನಾಮ ವಾಗಿ ಪ್ರಶಾಂತವಾಗುವುವು.

೧೪-೧೫. ಶಾಸ್ತ್ರಾರ್ಥ ವಿಷಯಕವಾದ ಮನಸ್ಸಿನ ಸಂಶಯಗಳೆಲ್ಲವೂ ನಿಶ್ಶೇಷ ವಾಗಿ ನಾಶಹೊಂದುವುವು. ವಿಚಿತ್ರವಾದ ವಿಷಯಗಳನ್ನು ಕಾಣಬೇಕೆಂಬ ಮಾನ ಸಿಕ ಕುತೂಹಲಗಳು ಸಮಗ್ರವಾಗಿ ತೊಲಗುವುವು. ಮನಸ್ಸು ಪೂರ್ವದಂತೆ ಬಗೆ ಬಗೆಯಾದ ಕಲ್ಪನಾಜಾಲಗಳನ್ನು ಸಂಕಲ್ಪಿಸದೆ ಸ್ವಸ್ಥವಾಗುವುದು. ಮೋಹದಿಂದ ಬಿಡುಗಡೆಯನ್ನು ಪಡೆದು ನಿರ್ಲೇಪವಾಗಿಬಿಡುವುದು. ಮತ್ತು ಕೂಡಲೇ ಮನಸ್ಸು ನಿಸ್ಪೃಹವಾಗುವುದು (ನಿರೀಹಂ) (ಯಾವುದನ್ನೂ ಪ್ರಿಯವೆಂದು ಆಶಿಸುವುದಿಲ್ಲ) ಅಪ್ರಿಯವಾದುದನ್ನು ಆಗ್ರಹದಿಂದ ನಿರಾಕರಿಸುವುದಿಲ್ಲ. (ನಿರುಪಾಕ್ರೋಶಂ) ಪ್ರಿಯ ಪ್ರಾಪ್ತಿಗಾಗಿ ಪ್ರವರ್ತಿಸುವುದೂ ಇಲ್ಲ. (ನಿರಪೇಕ್ಷಂ) ಮನೋವ್ಯಥೆಗಳೆಲ್ಲವೂ ಬಿಟ್ಟು ಹೋಗುವುವು. ಭ್ರಾಂತಿ ಮೂಲವಾದ ಶೋಕವೆಂಬ ಹಿಮವು ಜ್ಞಾನವೆಂಬ ಸೂರ್ಯೋದಯದಿಂದ ಕರಗಿ ಥಟ್ಟನೆ ಕಾಣದೆ ಹೋಗುವುದು. ಎಲ್ಲಿದರಲ್ಲಿಯೂ ಆಸಕ್ತಿಯು ಬಿಟ್ಟುಹೋಗುವುದು. ಹೃದಯ ಗ್ರಂಥಿಗಳು ಭೇದಿಸಲ್ಪಡುವುವು.

೧೬. ಇಂತಹ ಸರ್ವೋತ್ತಮವಾದ (ಕೃತಕೃತ್ಯ)ಸ್ಥಿತಿಯನ್ನು ಪಡೆದ ಮನಸ್ಸು ತನ್ನಲ್ಲಿಯೇ ಉದ್ಭವಿಸುವ ನಾನಾವಿಧಗಳಾದ ಸಂಶಯಗಳೆಂಬ ದುಷ್ಪುತ್ರರಿಂದ ಪರಿವೃತವಾಗಿಯೂ ಶಾಖಾಪ್ರಾಯಗಳಾದ ಬಹುವಿಧ (ವಿವಿಧ) ಮನೋರಥಾರಂಭ ಗಳಿಂದ ಸಹಿತವಾಗಿಯೂ ತೃಷ್ಣೆಯೆಂಬ ಪತ್ನಿಯೊಡನೆ ಸ್ಥೂಲ ದೇಹವೆಂಬ ಪಂಜರದಲ್ಲಿ (ಮನೆಯಲ್ಲಿ) ವಾಸಮಾಡುತ್ತಲೂ ಇರುವ ಸ್ವಕೀಯವಾದ ಮನ

ಆತ್ಮಸೀವರತಾಹೇತೋರ್ ವಿಕಲ್ಪಾಂಶ್ಛಾಯಮುಜ್ಝತಿ ।
ಸಂಸ್ಮೃತ್ಯ ಪ್ರಭುತಾಮೇಷು ಜಹಾತಿ ತೃಣವತ್ತನುಂ ॥ ೧೭ ॥

ಸ್ವರೂಪವನ್ನು ನಾಶಗೊಳಿಸಿ ಜಗದಧೀಶ್ವರನಾದ ಪ್ರತ್ಯಗಾತ್ಮಸ್ವರೂಪವೆಂಬ (ಜೀವನ್ಮುಕ್ತಿ) ಪರಮ ಪುರುಷಾರ್ಥವನ್ನು ಸಾಧಿಸಿಕೊಳ್ಳುವುದು. (ಅಂದರೆ ಅಂತಹ ಪಕ್ವವಾದ ಮನಸ್ಸು ತೃಷ್ಣೆಯನ್ನು ತ್ಯಾಗಮಾಡಿ ಸಕಲ ಸಂಶಯಗಳನ್ನು ನೀಗಿಕೊಂಡು ತಾನೇ ಲಯವಾಗಿಬಿಡುವುದು. ಹೀಗೆ ಮನೋಲಯವಾದ ಬಳಿಕ ಪರಮಾತ್ಮಸಾಕ್ಷಾತ್ಕಾರ ಲಾಭವಾಗುವುದು ಎಂದರ್ಥ.)

(ಸಾಂಖ್ಯ ಬೌದ್ಧ, ನೈಯಾಯಿಕಾದಿ ನಾನಾವಾದಿಗಳು ಬಗೆಬಗೆಯಾಗಿ ಆತ್ಮಸ್ವರೂಪವನ್ನು ತಮ್ಮ ಶಾಸ್ತ್ರಗಳಲ್ಲಿ ಪ್ರತಿಪಾದಿಸುವುದರಿಂದ ಅಪ್ರಬುದ್ಧರ ಮನಸ್ಸಿನಲ್ಲಿ 'ಆತ್ಮನು ಯಾರು? ಆತ್ಮಸ್ವರೂಪವೆಂತಹುದು? ಆತ್ಮಲಾಭಕ್ಕೆ ಸಾಧನಗಳಾವುವು? ಕರ್ಮಗಳಿಂದ ಆತ್ಮಲಾಭವಾಗುವುದೋ? ಅಥವಾ ಜ್ಞಾನದಿಂದಲೋ? ಅಥವಾ ಜ್ಞಾನಕರ್ಮಗಳ ಸಮುಚ್ಚಯದಿಂದಲೋ? ಜ್ಞಾನ ವೆಂತಹುದು? ಅದು ಹೇಗೆ ಯಾವ ಸಾಧನಗಳಿಂದ ಪ್ರಾಪ್ಯವು? ಮೋಕ್ಷದ ಸ್ವರೂಪವು ಯಾವುದು? ಸ್ವರ್ಗಾದಿಗಳಂತೆ ಲೋಕಾಂತರಗಳಲ್ಲಿ ಪ್ರಾಪ್ತವಾಗತಕ್ಕುದೇ? ಅದಕ್ಕೆ ಪ್ರಮಾಣವಾವುದು? ಇತ್ಯಾದಿ ನಾನಾ ಅಸಂಖ್ಯಾಕವಾದ ಸಂಶಯಗಳು ಪರಂಪರೆಯಾಗಿ ತಲೆದೋರುತ್ತಲೇ ಇರುವುವು. ಈಬಗೆಯಾದ ಸಂಶಯಗಳನ್ನೇ ಇಲ್ಲಿ ಮನಸ್ಸಿನ ದುಷ್ಪುತ್ರರೆಂದು ಹೇಳಿರುವುದು.)

೧೭. (ಮನಸ್ಸು ತನ್ನ ಸ್ವರೂಪವನ್ನು ನಾಶಪಡಿಸಿಕೊಳ್ಳುವ ಕ್ರಮವು ಯಾವುದು? ಎಂದರೆ) ಇವನು ನನ್ನ ಶತ್ರುವು ಅವನು ಮಿತ್ರನು. ಇದು ನನಗೆ ಅನುಕೂಲವು ಅದು ಪ್ರತಿಕೂಲವು. ಇದು ನೀಚವು, ಅದು ಉಚ್ಚವು. ಇತ್ಯಾದಿ ಅನ್ಯೋನ್ಯ ವಿರುದ್ಧಗಳಾದ ನಾನಾ ವಿಕಲ್ಪಗಳೇ ಮನಸ್ಸನ್ನು ಪೋಷಿಸಿ ವೃದ್ಧಿಗೊಳಿಸುವ ಸಾಧನಗಳು. ಈ ವಿಕಲ್ಪಗಳನ್ನು ಉತ್ಪಾದನೆ ಮಾಡುವುದರಲ್ಲಿ ಹೇಗೋ ಹಾಗೆಯೇ ಅವುಗಳನ್ನು ನಿಗ್ರಹಿಸುವ ವಿಷಯದಲ್ಲಿಯೂ ಕೂಡ ತನಗೆ (ಮನಸ್ಸಿಗೆ) ಸಂಪೂರ್ಣವಾದ ಸಾಮರ್ಥ್ಯವಿದ್ದೇ ಇರುವುದು ಎಂಬ ಸ್ಮರಣೆಯು (ಯೋಚನೆಯು) ಪ್ರಥಮತಃ ಮನಸ್ಸಿಗೆ ಬರಬೇಕು. ಹೀಗೆ ಸ್ಮರಣೆಯುಂಟಾದ ಕೂಡಲೇ ಮನಸ್ಸು ತನ್ನ ಪೋಷಕಗಳಾದ ಪೂರ್ವೋಕ್ತ ಶತ್ರು ಮಿತ್ರಾದಿ ವಿಕಲ್ಪ

ಮನಸೋಽಭ್ಯುದಯೋ ನಾಶೋ ಮನೋನಾಶೋ ಮಹೋದಯಃ ।
ಜ್ಞಮನೋ ನಾಶಮಭ್ಯೇತಿ ಮನೋಽಜ್ಞಸ್ಯ ವಿವರ್ಧತೇ ॥ ೧೮ ॥

ಮನೋಮಾತ್ರಂ ಜಗಚ್ಚಕ್ರಂ ಮನಃ ಪರ್ವತಮಂಡಲಂ ।
ಮನೋ ವ್ಯೋಮ ಮನೋ ದೇಹೋ ಮನೋ ಮಿತ್ರಂ ಮನೋ ರಿಪುಃ ॥ ೧೯ ॥

ಗಳನ್ನೆಲ್ಲ ಬಿಟ್ಟುಬಿಡುವುದು. ತರುವಾಯ ಅದು ತನ್ನ ದೇಹವನ್ನು ಒಂದು ತೃಣದಂತೆ ತಿರಸ್ಕಾರಮಾಡಿ ಪರಿತ್ಯಜಿಸುವುದು.

(ದೇಹಾಹಂಭಾವದಿಂದ ದೃಢಸಂಸ್ಕಾರವನ್ನು ಪಡೆದು, ಮನಸ್ಸು ಎದುವರೆವಿಗೆ ದೇಹಾಕಾರವಾಗಿರುವುದೋ ಅದುವರೆವಿಗೂ ದೇಹಾನುಕೂಲವಿಷಯಗಳಲ್ಲಿ ರಾಗವೂ ಅಂತೆಯೇ ಪ್ರತಿಕೂಲ ವಿಷಯುಗಳಲ್ಲಿ ದ್ವೇಷವೂ ಉದ್ಭವಿಸಿ ಕ್ರಮೇಣ ಹೆಚ್ಚುವುದರಿಂದ ಸಾವಿರಾರು ವಿಕಲ್ಪಗಳು ಅಂಕುರಿಸುವುವು. ಇವುಗಳಿಂದ ಮನಸ್ಸು ಪರಿಪುಷ್ಟವಾಗುವುದು. ದೇಹಾಹಂಭಾವವು ಕ್ಷೀಣವಾದೊಡನೆಯೇ ವಿಕಲ್ಪಗಳೂ ಇಲ್ಲ. ಅದರ ಮೂಲಕ ಮನಸ್ಸು ಲಯವಾಗಿಬಿಡುವುದು.)

೧೮. ಮನಸ್ಸು ಸುಪುಷ್ಟವಾಗಿ ಅಭ್ಯುದಯುವನ್ನು ಪಡೆಯುವುದೇ ವಾಸ್ತವವಾಗಿ ಅದರ ನಾಶವೆನ್ನಿಸುವುದೇ ಹೊರತು, ಮನೋನಾಶವು ವಸ್ತುತಃ ನಾಶವಲ್ಲವೇ ಅಲ್ಲವು. ಮನೋನಾಶವೇ ಪರಮ ನಿಶ್ಶ್ರೇಯಿಸಹೇತುವಾದ ಮಹಾ ಅಭ್ಯುದಯವೆಂಬುದು ನಿರ್ವಿವಾದವು. ಬ್ರಹ್ಮಾತ್ಮೈಕ್ಯಜ್ಞಾನಿಯ ಮನಸ್ಸು ಸಂಪೂರ್ಣ ನಾಶವನ್ನು ಪಡೆಯುವುದು. ಆದರೆ ಅಜ್ಞಾನಿಯ ಮನಸ್ಸು ಇನ್ನೂ ಹೆಚ್ಚಾಗಿ ವೃದ್ಧಿಹೊಂದುತ್ತಲೇ ಇರುವುದು. (ಆದಕಾರಣ, ಮನಸ್ಸು ತನ್ನ ವಿನಾಶಕ್ಕಾಗಿ ಪ್ರವರ್ತಿಸುವುದು ಸಮನುಗತವೇ ಸರಿ.)

[ಮನಸ್ಸು ಆತ್ಮಭಾವದಿಂದ ಅಭ್ಯುದಯುವನ್ನು ಅಪೇಕ್ಷಿಸುವುದೇ ಹೊರತು, ಸ್ವತಂತ್ರವಾದ ಮನೋಭಾವದಿಂದಲ್ಲವು. ಆತ್ಮಭೂತವಾದುದಕ್ಕೆ ಮನೋಭಾವವು ಸರ್ವಾನರ್ಥಕಾರಿಯೇ ಸರಿ. ಆ ಮನೋಭಾವವು ನಾಶವಾಗುವುದೇ ಸರ್ವಾನರ್ಥನಿವೃತ್ತಿರೂಪ ನಿರತಿಶಯ ಬ್ರಹ್ಮಾನಂದ ಪ್ರಾಪ್ತಿಯೆಂಬ ಮಹಾ ಅಭ್ಯುದಯುವು. ಎಂದು ಭಾವ.]

೧೯. ಮನಸ್ಸೆಂಬುದು ಮಾತ್ರವೇ ಚಕ್ರದಂತೆ ಸರ್ವದಾ ಪರಿವರ್ತಿತವಾದ ಈ ದೃಶ್ಯ ಬ್ರಂಹ್ಮಾಂಡಮಂಡಲವು. ಮನಸ್ಸೇ ಪರ್ವತಗಳ ಸಮೂಹವು. ಮನಸ್ಸೇ

ವಿಕಲ್ಪಕಲುಷಾ ಯಾ ಸ್ಯಾಚ್ಚಿತ್ತತ್ತ್ವಸ್ಯಾತ್ಮವಿಸ್ಮೃತಿಃ ।
ಮನ ಇತ್ಯುಚ್ಯತೇ ಸೇಯಂ ವಾಸನಾ ಭವಭಾಗಿನೀ ॥ ೨೦ ॥

ಚೇತ್ಯಾನುಪಾತಕಲಿತಚಿನ್ಮಾತ್ರೇ ಽಸ್ಥಿತಾಭಿಧಂ ।
ಮನಾಗ್ವಿಕಲ್ಪಕಲುಷಂ ಚಿತ್ತತ್ವಂ ಜೀವ ಉಚ್ಯತೇ ॥ ೨೧ ॥

ಚೇತ್ಯಪ್ರಪತಿತಂ ರೂಢಸಂಜ್ಞಮಜ್ಞತ್ವಮಾಗತಂ ।
ತದೇವಾಧಿಕನಿಃಸಾರಂ ಕಲ್ಪಯತೇಽನ್ತರ್ಮನಸ್ತಯಾ ॥ ೨೨ ॥

ಆಕಾಶವು. ಈ ದೇಹವೂ ಮನಸ್ಸೇ. ಶತ್ರುಮಿತ್ರಾದಿಗಳೂ (ಸರ್ವವೂ) ಮನಸ್ಸೇ. (ಈ ಕಾರಣದಿಂದ, ಜಗದ್ರೂಪವಾದ ಅನರ್ಥ ಪರಂಪರೆಗೆಲ್ಲಾ ಮನಸ್ಸಿನ ಅಭಿವೃದ್ಧಿಯೇ ಮೂಲಕಾರಣವೆಂದೂ ಮನೋಲಯದಿಂದ ಮಾತ್ರವೇ ಸರ್ವಾನರ್ಥಮಯವಾದ ಸಂಸಾರಬಂಧ ನಿವೃತ್ತಿಯು ಸಾಧ್ಯವೆಂದೂ ತಿಳಿಯಬೇಕು.)

೨೦. ಚಿತ್ತತ್ತ್ವವು (ಚಿತ್-ತತ್ತ್ವವು) ಅನೇಕ ವಿಧಗಳಿಂದ ವಿಕಲ್ಪಗಳಿಂದ ದೂಷಿತವಾಗಿ, ಸ್ವಾತ್ಮಸ್ವರೂಪವನ್ನು ಮರೆತುಬಿಡುವಿಕೆಯೆಂಬುದೇ (ಶಾಸ್ತ್ರದಲ್ಲಿ) ಮನಸ್ಸೆಂದು ಹೇಳಲ್ಪಟ್ಟಿರುವುದು. (ಆತ್ಮಸ್ವರೂಪವಿಸ್ಮೃತಿಯೇ ನಾನಾವಿಧ ವಿಕಲ್ಪವಾಸನೆಗಳಿಗೆ ನಿಮಿತ್ತವು. ಈ ವಿಕಲ್ಪವಾಸನೆಗಳೇ ಮನಸ್ಸಿನ ಸ್ವರೂಪವು) ಇದನ್ನೇ ಸಂಸಾರಭಾಗಿನಿಯಾದ ವಾಸನೆಯೆಂದೂ ಕರೆಯುವರು. (ಇಂತಹ ಮನಸ್ಸಿನ ಸ್ವರೂಪವನ್ನು ಅತ್ಯವಶ್ಯವಾಗಿ ಬಿಡಬೇಕಾದುದು.)

೨೧. ವಿಷಯವು ವಾಸನಾರೂಪದಿಂದ ಮನಸ್ಸಿನಲ್ಲಿ ಪ್ರವೇಶಮಾಡುವುದರಿಂದ ಪರಿಚ್ಛಿನ್ನವಾದ ಚಿನ್ಮಾತ್ರದಲ್ಲಿ ಸ್ಥಿತಿಯು (ಇರುವಿಕೆಯು) ಎಂಬ ಶಬ್ದ ವ್ಯವಹಾರ ಯೋಗ್ಯತೆಯುಳ್ಳ ಮತ್ತು ಸ್ವಲ್ಪಮಾತ್ರವೇ ವಿಕಲ್ಪ ವಾಸನೆಗಳಿಂದ ದೂಷಿತವಾದ ಚಿತ್ತತ್ತ್ವವು (ಚಿತ್-ತತ್ತ್ವ) ಜೀವನೆಂದು ವ್ಯವಹರಿಸಲ್ಪಡುವುದು. (ಈ ಜೀವನೇ ಮನಸ್ಸಿನಿಂದ ಬದ್ಧನಾಗುವನು.)

೨೨. (ಚೇತ್ಯ) ವಿಷಯೋನ್ಮುಖವಾಗಿ ಪ್ರವಹಿಸುತ್ತಾ, ಚಿರಕಾಲಿಕವಾದ ಅಭ್ಯಾಸವಶದಿಂದ ಅಲ್ಲಿಯೇ ಆತ್ಮತ್ವಾಭಿಮಾನವನ್ನು ಬಲಪಡಿಸಿಕೊಂಡಿರುವ, ಸ್ವಸ್ವರೂಪವನ್ನು ಮರೆತಿರುವ ಆ ಜೀವಸ್ವರೂಪವೇ ಸಾವಿರಾರು ವಿಕಲ್ಪಗಳಿಂದ ಮೋಹಪರವಶವಾಗಿ, ಸಾರಭೂತವಾದ ತನ್ನ ಸುಖಸ್ವಭಾವವನ್ನು ಕಳೆದುಕೊಂಡು

ನಾತ್ಮಾ ಸಂಸಾರಿಪುರುಷೋ ನ ಶರೀರಂ ನ ಶೋಣಿತಂ ।
ಜಡಂ ಸರ್ವಂ ಶರೀರಾದಿ ದೇಹೀ ಖವದಲೇಪಕಃ ॥ ೨೩ ॥

ಶರೀರೇ ಕಣಶಃ ಕೃತ್ತೇ ನಾಸ್ತ್ಯನ್ಯದ್ರುಧಿರಾದಿಕಾತ್ ।
ನಿರ್ಭಿನ್ನೇ ಕದಲೀಸ್ತಂಭೇ ನಾಸ್ತ್ಯನ್ಯತ್ಪಲ್ಲವಾದೃತೇ ॥ ೨೪ ॥

ಮನೋ ಜೀವೋ ನರಂ ವಿದ್ಧಿ ತದೇವಾಕಾರಮಾಗತಂ ।
ಆತ್ಮನಾತ್ಮಾನಮಾದತ್ತೇ ಸ್ವವಿಕಲ್ಪಾತ್ಮಕಲ್ಪಿತಂ ॥ ೨೫ ॥

ಯಾವಾಗ ಅತ್ಯಂತ ನಿಸ್ಸಾರವಾಗಿಬಿಡುವುದೋ ಆಗ ಅದಕ್ಕೆ 'ಮನಸ್' ಎಂಬ ಸಂಜ್ಞೆಯು [ಭೇದದಿಂದ] ಕಲ್ಪಿತವಾಗುವುದು.

೨೩. ಈ ಜೀವ ಮತ್ತು ತದುಪಾಧಿಭೂತ ಮನಸ್ಸುಗಳಿಗಿಂತ ಪೃಥಕ್ಕಾಗಿರುವ ಶುದ್ಧ ಚಿನ್ಮಾತ್ರರೂಪ ಆತ್ಮನಾದರೋ ಸಂಸಾರಿಯಾದ ಜೀವನೂ ಅಲ್ಲ. ಶರೀರವೂ ಅಲ್ಲ. ರಕ್ತವೂ ಅಲ್ಲ. ಏಕೆಂದರೆ, ಶರೀರಾದಿಗಳೆಲ್ಲವೂ ಕೇವಲ ಜಡವು. ದೇಹಿಯಾದ ಆತ್ಮನು ಚೇತನನು. ಆಕಾಶದಂತೆ ನಿರ್ಲೇಪನಾದವನು.

೨೪. ಬಾಳೆಯ ಕಂಬವನ್ನು [ಗಿಡ] ಸಿಗಿದು ಒಳಗೆ ನೋಡಿದರೆ ಸುಳಿಗಳಂತೆ ಇರುವ ಬಾಳೆ ಪಟ್ಟೆಗಳು ಮಾತ್ರವೇ ಕಾಣುವುದಲ್ಲದೆ ಮತ್ತಾವುದೂ ಇರುವುದಿಲ್ಲ. ಅಂತೆಯೇ, ಈ ಜಡವಾದ ದೇಹವನ್ನು ಚೂರು ಚೂರಾಗಿ ಕತ್ತರಿಸಿದರೂ ಅದರೊಳಗೆ ರಕ್ತ ಮಾಂಸಾದಿಗಳ ಹೊರತು ಬೇರೆ ಯಾವುದೂ ಇರುವುದಿಲ್ಲ.

[ನಾಹಂ ದೇಹಃ, ನ ಚ ಪ್ರಾಣಾಃ, ನೇಂದ್ರಿಯಾಣಿ ತಥೈವಚ, ನಮನಶ್ಚ ನ ಬುದ್ಧಿಶ್ಚ ನೈವಚಿತ್ತಮಹಂಕೃತಿಃ॥ನಾಹಂ ಪೃಥ್ವೀ ಚಸಲಿಲಂ ನವಹ್ನಿಃ ನಾನಿಲೋಽಪಿ ಖಂ । ನಗಂಧೋ ನರಸೋ ರೂಪಂ ಸ್ಪರ್ಶಃ ಶಬ್ದಶ್ಚನಾಸ್ಮ್ಯಹಂ ॥ ದೇಹ, ಪ್ರಾಣಗಳು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಚತುರ್ವಿಧವಾದ ಅಂತಃಕರಣ, ಪೃಥಿವ್ಯಾದಿ ಪಂಚಭೂತಗಳು, ಗಂಧಾದಿ ತನ್ಮಾತ್ರಗಳು, ಇವು ಯಾವುದೊಂದೂ 'ಅಹಂ' [ಆತ್ಮನು] ಅಲ್ಲವೇ ಅಲ್ಲವು.]

೨೫. ಮನಸ್ಸೇ ಜೀವನು; ರಾಮ, ಅದನ್ನೇ ಪುರುಷನೆಂದೂ ತಿಳಿ. ಅದೇ ತನ್ನ ನಾನಾ ವಿಕಲ್ಪಗಳಿಂದ ತಾನಾಗಿಯೇ ಕಲ್ಪಿತವಾಗಿ, ಅನೇಕ ವಿಧವಾದ ಆಕಾರವನ್ನು ಹೊಂದಿರುವ ತನ್ನನ್ನೇ ಬಹುವಿಧವಾಗಿ ಗ್ರಹಿಸುವುದು.

ಸ್ವವಿಕಲ್ಪಾನ್ನರಸ್ತತ್ರ ಪ್ರಸಾರ್ಯರ್ಜ ರಚಯತ್ಯಲಂ ।
ಜಾಲಾಮಾತ್ಮನಿಬಂಧಾಯ ಕೋಶಕಾರಕೃಮಿರ್ಯಥಾ ॥ ೨೬ ॥

ಇಮಂ ದೇಹಭ್ರಮಂ ತ್ಯಕ್ತ್ವಾ ದೇಶಕಾಲಾಂತರೇ ಪುನಃ ।
ಶರೀರತ್ವಮಥಾದತ್ತೇ ಪಲ್ಲವತ್ವಮಿವಾಂಕುರಃ ॥ ೨೭ ॥

ಯಾದೃಗ್ವಾಸನಮೇತತ್ಸ್ಯಾತ್ ಮನಸ್ತಾದೃಕ್ ಪ್ರಜಾಯತೇ ।
ಜಾತಂ ಸ್ವಪಿತಿ ಯಚ್ಚಿತ್ತಂ ತತ್ಸ್ವಪ್ನೇ ನಿಶಿ ತಿಷ್ಠತಿ ॥ ೨೮ ॥

ಆಮ್ಲಂ ಮಧುರಸಾಸಿಕ್ತಂ ಮಧುರಂ ಮಧುರಂಜಿತಂ ।
ಬೀಜಂ ಪ್ರತಿವಿಷಾಕಲ್ಪಸಿಕ್ತಂ ಚ ಕಟು ಜಾಯತೇ ॥ ೨೯ ॥

---

೨೬. ಈ ಬಗೆಯಾದ ಸ್ಥಿತಿಯಲ್ಲಿ, ಜೀವನು ಬಹುಪ್ರಕಾರಗಳಿಂದ ವಿಕಲ್ಪ ವಾಸನೆಗಳನ್ನು ಭಾವಿಸಿಕೊಂಡು ಜೇಡರಹುಳುವಿನಂತೆ ತನ್ನ ಬಂಧನಕ್ಕಾಗಿ ತಕ್ಕಷ್ಟು ಪ್ರಬಲವಾದ [ಸಂಸಾರವೆಂಬ] ಬಲೆಯನ್ನು ತನಗೆ ತಾನೆ ವಿರಚಿಸಿಕೊಳ್ಳುವನು.

೨೭. ಸ್ವಲ್ಪಕಾಲಾನಂತರ ಈ ದೇಹದ ಮೇಲಣ ಭ್ರಾಂತಿಯನ್ನು ಬಿಟ್ಟು, ಅಂಕುರವು [ಮೊಳಕೆ] ಪಲ್ಲವ [ಚಿಗುರೆಲೆ] ಭಾವವನ್ನು ಹೊಂದುವಂತೆ, ಪುನಃ ಬೇರೆ ಬೇರೆ ದೇಶಕಾಲಗಳಲ್ಲಿ ದೇಹಾಂತರಭಾವವನ್ನು ಸ್ವೀಕರಿಸುವನು.

೨೮. ಈ ರೀತಿಯಾಗಿ ಈ ಮನಸ್ಸು ಯಾವ ಬಗೆಯ ವಾಸನೆಯುಳ್ಳದ್ದಾಗಿರುವುದೋ ಅಂತಹ ವಾಸನಾಮಯವಾಗಿಯೇ ಉದ್ಭವಿಸುವುದು. ಇದು [ಮನಸ್ಸು] ರಾತ್ರಿಯಲ್ಲಿ ಯಾವ ವಸ್ತುರೂಪವಾಗಿ ಧ್ಯಾನಿಸಿ ಮಲಗಿಕೊಳ್ಳುವುದೋ ಅದೇ ರೂಪವಾಗಿಯೇ ಸ್ವಪ್ನದಲ್ಲಿಯೂ ಇದ್ದುಬಿಡುವುದು.

೨೯. ಹುಣಿಸೆ ಮುಂತಾದ ಒಂದು ಹುಳಿಯಾಗಿರುವ ಬೀಜವನ್ನು ಮಧುರಸದಲ್ಲಿ ನೆನೆಯಿಸಿ ಭೂಮಿಯಲ್ಲಿ ಬಿತ್ತಿ ಮಧುರ ಜಲವನ್ನೇ ಸುರಿದು ಬೆಳೆಯಿಸಿದರೆ ಅದು ಮೊಳಕೆಯಾಗಿ ಹೊರಟು ಕಾಲಕ್ರಮದಿಂದ ದೊಡ್ಡ ಮರವಾಗಿ ಕೊನೆಗೆ ಫಲಕಾಲದಲ್ಲಿಯೂ ಕೂಡ ಮಧುರ ರಸದೊಳಗೆಯೇ ಅದ್ದಿ ಇಟ್ಟರೆ ಅದು ಮಧುರವೇ ಆಗುವುದು. ಅದೇ ಬೀಜವನ್ನೇ ವಿಷಸದೃಶಗಳಾದ ದತ್ತೂರ, ಹೊಂಗೆ ಮುಂತಾದವುಗಳ ರಸಗಳಲ್ಲಿ ನೆನೆಯಿಸಿ ಬಿತ್ತಿ ಫಲಕಾಲದಲ್ಲಿಯೂ ಅದೇ ರಸದಲ್ಲಿ ಅದ್ದಿದರೆ, ಅದೂ ಕಹಿಯಾಗಿಯೇ ಪರಿಣಮಿಸುವುದು. [ಇದು ತಾ-ಪ್ರ-ಟೀಕಾಕಾರರ ಅಭಿ

ಶುಭವಾಸನಯಾ ಚೇತೋ ಮಹತ್ತ್ವಾ ಜಾಯತೇ ಮಹತ್ ।
ಭವತೀಂದ್ರಮನೋರಾಜ್ಯ ಇಂದ್ರತಾ ಸ್ವಪ್ನಭಾಙ್ನರಃ ॥ ೩೦ ॥

ಕ್ಷುದ್ರವಾಸನಯಾ ಚೇತಃ ಕ್ಷುದ್ರತಾಮಪಿ ಪೇಲವಾಂ ।
ಪಿಶಾಚವಿಭ್ರಮಾತ್ಸ್ವಪ್ನೇ ಪಿಶಾಚಾನ್ನಿಶಿ ಪಶ್ಯತಿ ॥ ೩೧ ॥

ಸರಸಿ ಸ್ಫಾರನೈರ್ಮಲ್ಯೇ ಕಾಲುಷ್ಯಂ ಯಾತಿ ನ ಸ್ಥಿತಿಂ ।
ತಥೈವ ಸ್ಫಾರಕಾಲುಷ್ಯೇ ಪ್ರಸಾದೋ ಯಾತಿ ನ ಸ್ಥಿತಿಂ ॥ ೩೨ ॥

ಮನಸಿ ಸ್ಫಾರಕಾಲುಷ್ಯೇ ತದ್ರೂಪಂ ಜಾಯತೇ ಫಲಂ ।
ತಥೈವ ಸ್ಫಾರನೈರ್ಮಲ್ಯೇ ತದ್ರೂಪಂ ಜಾಯತೇ ಫಲಂ ॥ ೩೩ ॥

ಪ್ರಾಯ. ಹೀಗೆ ಆರಾಮ ಶಾಸ್ತ್ರದಲ್ಲಿ ಉಕ್ತವಾಗಿದೆಯೆಂದೂ ಲೋಕಾನುಭವ ಸಿದ್ಧವೆಂದೂ ಅವರು ಹೇಳುವರು.]

೩೦. ಮಹತ್ತಾದ ಶುಭವಾಸನೆಯಿಂದ ಮನಸ್ಸೂ ಮಹತ್ತಾಗುವುದು. ಮನಸ್ಸಿನಲ್ಲಿ ಸರ್ವದಾ ಇಂದ್ರಪದವಿಯನ್ನು ಅನುಭವಿಸಲೇಬೇಕೆಂದು ಭಾವಿಸತಕ್ಕ ಮನುಷ್ಯನು ಸ್ವಪ್ನದಲ್ಲಿ ತಾನು ಇಂದ್ರಪದವಿಯನ್ನು ಅನುಭವಿಸಿಯೇ ತೀರುವನು.

೩೧. ಇದರಂತೆಯೇ ಕ್ಷುಲ್ಲಕವಾದ ದುಷ್ಟವಾಸನೆಗಳಿಂದ ಚಿತ್ತವೂ, ಕೃಶವೂ, ಕ್ಷುದ್ರವೂ ಆಗುವುದು. ಹಗಲು ಹೊತ್ತಿನಲ್ಲೆಲ್ಲ, ಮನಸ್ಸಿನಲ್ಲಿ ಪಿಶಾಚಭ್ರಾಂತಿ ಯನ್ನು ಕಲ್ಪಿಸಿಕೊಂಡು ಭಾವಿಸುತ್ತಿದ್ದರೆ, ಮನುಷ್ಯನು ರಾತ್ರಿ ಕನಸಿನಲ್ಲಿಯೂ ಪಿಶಾಚಗಳನ್ನೇ ಕಾಣುವನು.

೩೨-೩೩. ಕಾಲುಷ್ಯವು ನಿಶ್ಶೇಷವಾಗಿ ಕಳೆದು ಸಂಪೂರ್ಣವಾಗಿ ನೈರ್ಮಲ್ಯ ವುಳ್ಳದ್ದಾಗಿರುವ ಸರೋವರದಲ್ಲಿ ಕಾಲುಷ್ಯವು ಎಂದಿಗೂ ನೆಲೆಸುವುದಿಲ್ಲ. ಅಂತೆಯೇ ಕಾಲುಷ್ಯ ಪರಿಪೂರ್ಣವಾದ ಸರಸ್ಸಿನಲ್ಲಿ ನೈರ್ಮಲ್ಯವು ನೆಲೆಸಿರುವುದಿಲ್ಲ. ಈ ದೃಷ್ಟಾಂತಾನುಸಾರವಾಗಿಯೇ ಮನಸ್ಸು ಮಾಲಿನ್ಯ (ಕಾಲುಷ್ಯ) ದಿಂದ ಪರಿಪೂರ್ಣ ವಾಗಿ ದುಷ್ಟವಾಗಿದ್ದರೆ ಫಲವೂ ಅದಕ್ಕೆ ಅನುರೂಪವಾಗಿಯೇ ಲಭಿಸುವುದು. ಹಾಗಲ್ಲದೆ ಮನಸ್ಸಿನೊಳಗೆ ನೈರ್ಮಲ್ಯವು ತುಂಬಿದ್ದರೆ ಆಗಲೂ ಅದಕ್ಕೆ ಅನುಗುಣ ವಾದ ಶುಭಫಲವೇ ದೊರಕುವುದು.

ತ್ಯಜತ್ಯುದಾರಾಂ ನ ಗತಿಂ ಕ್ಷೀಣೋಽಪ್ಯನಿಶಮುತ್ತಮಃ ।
ಉದ್ಯೋಗವಾನವಿರತಂ ಪೂರಣಾಶಾಮಿವೋಡುಪಃ ॥ ೩೪ ॥

ನೇಹ ಬಂಧೋ ನ ಮೋಕ್ಷೋಽಸ್ತಿ ನಾಬಂಧೋಽಸ್ತಿ ನ ಬಂಧತಾ ।
ಮಿಥ್ಯೋತ್ಥಿತೈವ ಮಾಯೇಯಮಿಂದ್ರಜಾಲಲತಾ ಯಥಾ ॥ ೩೫ ॥

ಗಂಧರ್ವನಗರಾಕಾರಾ ಮೃಗತೃಷ್ಣಾ ಇವೋತ್ಥಿತಾ ।
ದ್ವಿಚಂದ್ರವಿಭ್ರಮಾಭಾಸಾ ದ್ವೈತೈಕತ್ವ ವಿವರ್ಜಿತಾ ॥ ೩೬ ॥

ಸರ್ವೈವ ಬ್ರಹ್ಮಸತ್ತೇಯಂ ಮಿಥ್ಯೈಷಾ ಪರಮಾರ್ಥತಾ ।
ಪರಿಸ್ಫುರತಿ ನಿಃಸಾರಃ ಸಂಸಾರೋಽಯಮಸನ್ಮಯಃ ॥ ೩೭ ॥

ನಾನಂತೋಽಹಂ ವರಾಕೋಽಹಮಿತಿ ದುರ್ನಿಶ್ಚಯೋದಿತಃ ।
ಅನಂತೋಽಸ್ಮೀಶ್ವರೋಽಸ್ಮೀತಿ ನಿಶ್ಚಯೇನ ವಿಲೀಯತೇ ॥ ೩೮ ॥

---

೩೪. ಚಂದ್ರನು ಕೃಷ್ಣಪಕ್ಷದಲ್ಲಿ ದಿನದಿನಕ್ಕೂ ಕ್ಷಯಿಸಿ, ಅತ್ಯಂತ ಕೃಶನಾಗುವನು. ಆದರೂ ಪುನಃ ಶುಕ್ಲಪಕ್ಷದಲ್ಲಿ ದಿನಕ್ರಮದಿಂದ ಸಕಲಕಲಾಪರಿಪೂರ್ಣನಾಗುವ ಆಶೆಯನ್ನು ಎಂದಿಗೂ ಬಿಡದಿರುವಂತೆ ಸಂತತವೂ ಉದ್ಯಮಶೀಲನಾದ ಉತ್ತಮ ಪುರುಷನು ದೇಶೋಪಪ್ಲವಾದಿಗಳಿಂದ ದಾರಿದ್ರ್ಯ ಮೊದಲಾದ ತೊಂದರೆಗಳಿಗೆ ಸಿಕ್ಕಿ ಕೃಶನಾಗಿದ್ದರೂ ತನ್ನ ಮಹತ್ತಾದ ಚಿತ್ತಪ್ರಸಾದನ ಗತಿಯನ್ನು (ಶಾಂತಿ, ಸಮಾಧಾನ ಮೊದಲಾದ) ಸಂತತವೂ ಬಿಡದೆ ಇರುವನು.

೩೫–೩೮. [ಪ್ರಕಾರಾಂತರದಿಂದ ವಿಚಾರ ಮಾಡಿದರೂ ಕೂಡ ಚಿತ್ತ ನೈರ್ಮಲ್ಯವನ್ನು ಪಡೆದ ಜ್ಞಾನಿಗೆ ಪುನಃ ಮನಸ್ಸಿನಲ್ಲಿ ಕಾಲುಷ್ಯವುಂಟಾಗಬಹುದೆಂಬ ಪ್ರಸಕ್ತಿಗೂ ಅವಕಾಶವಿಲ್ಲ.] ಹೇಗೆಂದರೆ–ಪರಮಾರ್ಥ ದೃಷ್ಟಿಯಿಂದ ಈ ಜಗತ್ತಿನಲ್ಲಿ ಬಂಧವೆಂಬುದೂ ಇಲ್ಲ. ಮೋಕ್ಷವೂ ಇಲ್ಲ. ಬಂಧದ ಅಭಾವವೂ ಇಲ್ಲ. ಬಂಧದ ಸದ್ಭಾವವೂ ಇಲ್ಲ. ಇಂದ್ರಜಾಲ ವಿದ್ಯೆಯ ಮಾಯಾಶಕ್ತಿಯಿಂದ ಮಾಯಕವಾಗಿಯೇ ಕಾಣುವ ಲತೆಯಂತೆ ಈ ಮಾಯೆಯು ಕೇವಲ ಮಿಥ್ಯಾರೂಪವಾಗಿಯೇ ಎದ್ದು ಕಾಣುತ್ತಿರುವುದು. ಈ ಪ್ರಪಂಚಮಾಯೆಯು ಗಂಧರ್ವನಗರ ಸದೃಶವಾಗಿಯೂ ಮರೀಚಿಕಾಜಲ (ಬಿಸಿಲುಗುದುರೆ)ದಂತೆಯೂ ಆಕಾಶದಲ್ಲಿ ಕಾಣುವ ಚಂದ್ರದ್ವಯ ಭ್ರಮೆಯಂತೆಯೂ ಅತ್ಯಂತ ಮೃಷಾ (ಸುಳ್ಳು–ಮಿಥ್ಯೆ)ರೂಪವಾಗಿ ಎದ್ದು ಪ್ರತಿಭಾಸಿಸುವುದು. ಈ ಪ್ರಪಂಚ ಮಾಯೆಯೆಲ್ಲವೂ ಬ್ರಹ್ಮಸತ್ತೆಯೇ [ಪ್ರಪಂಚಕ್ಕೆ ಸ್ವತಂತ್ರವಾದ ಸತ್ತೆಯು (ಅಸ್ತಿತ್ವ-ಇರುವಿಕೆ) ಇಲ್ಲವೇ ಇಲ್ಲ.

ಸರ್ವಗೇ ಸ್ವಾತ್ಮನಿ ಸ್ವಚ್ಛ ಏಷೋಽಹಮಿತಿ ಭಾವನಾ ।
ಏತತ್ತದ್ಬಂಧನಂ ಲೋಕೇ ಸ್ವವಿಕಲ್ಪೋಪಕಲ್ಪಿತಂ ॥ ೩೯ ॥

ಬಂಧಮೋಕ್ಷದಶಾಹೀನಾ ದ್ವಿತ್ವೈಕತ್ವವಿವರ್ಜಿತಾ ।
ಸರ್ವೈವ ಬ್ರಹ್ಮಸತ್ತೇಯಮಿತ್ಯೇಷಾ ಪರಮಾರ್ಥತಾ ॥ ॥ ೪೦ ॥

ನೈರ್ಮಲ್ಯಪ್ರಾಪ್ತಮರಣಮಸಕ್ತಂ ಸರ್ವಸೃಷ್ಟಿಷು ।
ಅಮನಸ್ತ್ವಮಿಹಾಪನ್ನಂ ಬ್ರಹ್ಮ ಪಶ್ಯತಿ ನಾನ್ಯಥಾ ॥ ೪೧ ॥

ಪ್ರಪಂಚವು ಅಸತಿ (ಮಿಥ್ಯೆಯು) ಬ್ರಹ್ಮವೊಂದೇ ಸತ್ಯವು.] ಇದರಲ್ಲಿ ದ್ವೈತ ಏಕತ್ವ ಗಳೆಂಬ ಯಾವ ಭೇದವೂ ಎಂದಿಗೂ ಇಲ್ಲವೇ ಇಲ್ಲ. ಇದೇ ಪರಮಾರ್ಥವು. 'ನಾನು ಅನಂತನಲ್ಲ; ನಾನು ಅತ್ಯಂತ ತುಚ್ಛನು.' ಇತ್ಯಾದಿ ನಾನಾ ಸಂಕುಚಿತ ರೂಪವಾಗಿ ಆತ್ಮನು ಭ್ರಾಂತಿಯಿಂದ [ಸ್ವಾತ್ಮತತ್ತ್ವಜ್ಞಾನರಾಹಿತ್ಯದಿಂದ] ಕಲ್ಪಿಸಿ ಕೊಳ್ಳುವ ದುರಭಿಸಂಧಿಯ ದೆಸೆಯಿಂದ ನಿಸ್ಸಾರವೂ ಅಸದ್ರೂಪವೂ ಆದ ಈ ಸಂಸಾರವು ಸ್ಫುರಿಸುವುದು. ಈ ವೃಷಾಕಲ್ಪಿತವಾದ ಸಂಸಾರವು 'ನಾನು ಅನಂತನು, ನಾನು ಈಶ್ವರನು' ಎಂಬ ತತ್ತ್ವಾವಧಾರಣದಿಂದ ಲಯಹೊಂದುವುದು.

೩೯. ಸರ್ವಗತನೂ, ನಿತ್ಯ ಶುದ್ಧನೂ, ನಿರವದ್ಯನೂ, ಆಗಿರುವ ಸ್ವಾತ್ಮನಲ್ಲಿ– 'ನಾನು ಈ ದೇಹೇಂದ್ರಿಯ ಮಾತ್ರರೂಪನು.' ಎಂಬುದಾಗಿ ತಾನಾಗಿಯೇ ತನ್ನ ವಿಕಲ್ಪಗಳಿಂದ ಕಲ್ಪಿಸಿಕೊಳ್ಳುವ ಪರಿಚ್ಛಿನ್ನ (ಮೊಟಕಾದ-ಸಂಕುಚಿತವಾದ) ಭಾವನೆಯೇ ಅವನಿಗೆ ಬಂಧನವೆನ್ನಿಸುವುದು.

೪೦. ವಸ್ತುತಃ ಈ ಬ್ರಹ್ಮಸತ್ತೆಯು ಅಪರಿಚ್ಛಿನ್ನವು ಸರ್ವಗತವು. ಸರ್ವರೂಪವು. ಇದರಲ್ಲಿ ಬಂಧಮೋಕ್ಷಾದಿ ಅವಸ್ಥೆಗಳೂ ಅಲ್ಲವು. ದ್ವೈತ, ಏಕತ್ವ ಮೊದಲಾದ ಯಾವುದೊಂದು ಭೇದದೃಷ್ಟಿಯೂ ಇಲ್ಲವು. ಹೀಗೆಂಬುದೇ ಪರಮಾರ್ಥಭೂತವಾದ ಸಿದ್ಧಾಂತವು.

೪೧. ಯಾವ ಮನಸ್ಸು, ನೈರ್ಮಲ್ಯಾತಿಶಯದಿಂದ ಸನ್ನಿಹಿತವಾದ ತನ್ನ ವಿನಾಶವುಳ್ಳದ್ದಾಗಿ, (ಆದಕಾರಣವೇ) ಅಮನೋಭಾವವನ್ನು ಪಡೆದುದಾಗಿ [ತಾನು ಇದ್ದರೂ ಇಲ್ಲದಂತೆಯೇ ಇರುತ್ತಾ] ಸಕಲ ಲೌಕಿಕ ವ್ಯವಹಾಗಳಲ್ಲಿಯೂ ಅನಾಸಕ್ತವಾರುವುದೋ ಅಂತಹ ಮನಸ್ಸೇ ಈ ಅಧಿಕಾರಿ ಶರೀರದಲ್ಲಿಯೇ ಬ್ರಹ್ಮಸಾಕ್ಷಾತ್ಕಾರ

ಮನೋ ನಿರ್ಮಲತಾಂ ಯಾತಂ ಶುಭಸಂತಾನವಾರಿಭಿಃ ।
ಬ್ರಾಹ್ಮೀಂ ದೃಷ್ಟಿಮುಪಾಧತ್ತೇ ರಾಗಂ ಶುಕ್ಲಪಟೋ ಯಥಾ ॥ ೪೨ ॥

ಸರ್ವಮೇವ ಮಮಾತ್ಮೇತಿ ಸರ್ವಭಾವನಯಾನಘ ।
ಹೇಯಾದೇಯಬಲೇ ಕ್ಷೀಣೇ ಬಂಧಮೋಕ್ಷೋ ವಿಮುಚ್ಯತಾಂ ॥ ೪೩ ॥

ಶುದ್ಧಸ್ಯ ಮನಸಃ ಕಾಯಶಾಸ್ತ್ರವೈರಾಗ್ಯ ಬುದ್ಧಿಭಿಃ ।
ಅಭಿಜಾತೋಪಲಸ್ಯೇವ ಜಗತ್ತ್ರಸ್ಯೇತಿ ವಿದ್ಯುತಿಃ ॥ ೪೪ ॥

ವನ್ನು ಪಡೆಯುವುದು. ಅನ್ಯಥಾ [ಹೀಗಿಲ್ಲದಿದ್ದರೆ] ಮನಸ್ಸಿಗೆ ಬ್ರಹ್ಮ ಸಾಕ್ಷಾತ್ಕಾರ ಯೋಗ್ಯತೆಯು ಹೇಗೂ ಎಂದಿಗೂ ಸಂಭವಿಸುವುದಿಲ್ಲವು.

[ಇಹೈವ ತೈಃ ಜಿತಸ್ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ। ನಿರ್ದೋಷಂ ಹಿ ಸಮಂ ಬ್ರಹ್ಮ. ತಸ್ಮಾತ್ ಬ್ರಹ್ಮಣಿ ತೇ ಸ್ಥಿತಾಃ॥ ಭಗವದ್ಗೀತಾ ೫-೧೮. 'ಅತ್ರ ಬ್ರಹ್ಮ ಸಮಶ್ನುತೇ' ತಮೇವಂ ವಿದ್ವಾನ್ ಅಮೃತ ಇಹ ಭವತಿ. ಇತ್ಯಾದಿ ಶ್ರುತಿಗಳು ಜೀವನ್ಮುಕ್ತಿ ಪ್ರತಿಪಾದಕಗಳು.]

೪೨. ಶುಭ ಸಂತಾನ [ಸಮಾಧಿಯ ಅಭ್ಯಾಸ ವಶದಿಂದ ಜನ್ಯವಾದ ಧರ್ಮೋಪಚಯ] ವೆಂಬ ಶುದ್ಧೋದಕದಿಂದ ನಿರ್ಮಲವಾಗಿ ಪ್ರಕ್ಷಾಳಿತವಾದ ಸ್ವಚ್ಛಮನಸ್ಸು ಬಿಳಿಯ ವಸ್ತ್ರವು ಕೆಂಪು ಬಣ್ಣವನ್ನು ಚೆನ್ನಾಗಿ ಗ್ರಹಿಸುವಂತೆ ಬ್ರಹ್ಮಜ್ಞಾನವನ್ನು [ಸರ್ವತ್ರ ಬ್ರಹ್ಮದೃಷ್ಟಿಯನ್ನು] ಪಡೆಯಲು ಸಮರ್ಥವಾಗುವುದು.

೪೩. ಅಯ್ಯಾ ಅವಿದ್ಯಾದೋಷರಹಿತನಾದ ರಾಮ, 'ಸರ್ವವೂ ಕೂಡ ನನ್ನ ಆತ್ಮವೇ' ಎಂಬುದಾಗಿ ಸರ್ವತ್ರ ಆತ್ಮ ಭಾವನೆಯನ್ನು ಮಾಡುವುದರಿಂದ, ಇದು ಹೇಯ ಅದು ಉಪಾದೇಯ [ಹೇಯ-ತ್ಯಾಜ್ಯ. ಉಪಾದೇಯ-ಗ್ರಾಹ್ಯ] ಎಂಬ ಭೇದಜ್ಞಾನರೂಪ ಮಾನಸಿಕ ಶಕ್ತಿಯು ನಾಶಹೊಂದುವುದು. ಬಳಿಕ ಸಂಸಾರ ಬಂಧವೆಂಬ ಶಬ್ದವೇ ಇಲ್ಲವಾಗುವುದು. [ಮೋಕ್ಷವು ಬಂಧಸಾಪೇಕ್ಷವಾದುದರಿಂದ] ಬಂಧವೇ ಇಲ್ಲವಾದಮೇಲೆ ಮೋಕ್ಷವೆಂಬುದು ಎಲ್ಲಿರುವುದು? ಹೀಗೆ ಬಂಧಮೋಕ್ಷ ರೂಪ ವ್ಯವಹಾರವೇ ವಿಚ್ಛಿನ್ನವಾಗಿಬಿಡುವುದು.

ಪದಾರ್ಥೇ ನೈಕತಾಮೇತ್ಯ ಮನಸೋ ನೈಕತಾನತಾ ।
ಅಸತ್ಯಜ್ಞಾನದೃಷ್ಟಿಂ ತಾಂ ವಿದ್ಧಿ ಕ್ಷಣವಿನಾಶಿನೀಂ ॥ ೪೫ ॥

ಸಬಾಹ್ಯಾಭ್ಯಂತರಂ ತ್ಯಕ್ತ್ವಾ ಸರ್ವಾಂ ದೃಶ್ಯದೃಶಂ ಯದಾ ।
ಮನಸ್ತಿಷ್ಠತಿ ತಲ್ಲೀನಂ ಸಂಪ್ರಾಪ್ತಂ ತತ್ಪದಂ ತದಾ ॥ ೪೬ ॥

ದೃಶ್ಯದೃಷ್ಟಿಃ ಸ್ಫುಟಾ ಯೇಯಂ ಸಾ ಹ್ಯವಶ್ಯಮಸನ್ಮಯೀ ।
ತನ್ಮಯತ್ವಂ ಚ ಮನಸಃ ಸ್ವರೂಪಂ ವಿದ್ಧಿ ನೇತರತ್ ॥ ೪೭ ॥

---

೪೪. ಮನೋರಥಮಾತ್ರ ಕಲ್ಪಿತಗಳಾದ ಪ್ರಾಸಾದಾದಿಗಳಂತೆ, ಈ ದೇಹಾದಿ ಬಂಧವೂ ಕೂಡ ಕೇವಲ ಮನೋವಿಕಾರಮಾತ್ರವಾಗಿರುವುದರಿಂದ ಅಸತ್ಯವೆಂದೇ ತಿಳಿಯಬೇಕು. ಹೇಗೆಂದರೆ, ಸ್ವಚ್ಛವಾದ ಸ್ಫಟಿಕ ಶಿಲೆಯು ತನ್ನ ಸಮೀಪದಲ್ಲಿರುವ ನಾನಾವಸ್ತುಗಳ ಪ್ರತಿಬಿಂಬವನ್ನು ಸ್ವೀಕರಿಸುವಂತೆ ಶುದ್ಧವಾದ ಮನಸ್ಸು ಪ್ರಥಮತಃ ಅನಧಿಕಾರಿ ಮತ್ತು ಅಧಿಕಾರಿ ಶರೀರಾಭಿಮಾನದ ದೆಸೆಯಿಂದ ದೇಹರೂಪವಾಗುವುದು. ಅನಂತರ ಸಚ್ಛಾಸ್ತ್ರ ಶ್ರವಣಾಭಿಮಾನದಿಂದ ಶಾಸ್ತ್ರರೂಪವಾಗಿಯೂ, ತರುವಾಯ ವೈರಾಗ್ಯರೂಪವಾಗಿಯೂ, ಬಳಿಕ ಆತ್ಮಜ್ಞಾನಾಭಿಮಾನದಿಂದ ಆತ್ಮಜ್ಞಾನರೂಪವಾಗಿಯೂ ಇತ್ಯಾದಿ ವಿವಿಧ ರೂಪವಾಗಿ ಪ್ರತಿಭಾಸಿಸುವುದು. ಇಂತಹ ಮನಸ್ಸಿನ ಪ್ರತಿಭಾಸವನ್ನೇ ಜಗತ್ ಎಂದೂ ಸಂಸಾರವೆಂದೂ ಶಾಸ್ತ್ರಗಳಲ್ಲಿ ವ್ಯವಹರಿಸುವರು.

೪೫-೪೬. ಮನಸ್ಸು ಪರಮಾತ್ಮನೆಂಬ ಪರಮಾರ್ಥ ಸತ್ಯವಸ್ತುವಿನೊಂದಿಗೆ ಐಕ್ಯವನ್ನು ಹೊಂದಿ ಅದೊಂದರಲ್ಲಿಯೇ ಸ್ಥಿರವಾಗಿ (ತದೇಕಾಯತ್ತವಾಗಿ) ನೆಲೆಸದೆ ಇರುವಿಕೆಯೇ ಅಸತ್ಯಜ್ಞಾನದೃಷ್ಟಿ (ಅಸತ್ಯವಸ್ತುದರ್ಶನ) ಯಾಗುವುದು. ಇದು ಕ್ಷಣ ಕಾಲದೊಳಗಾಗಿ ನಾಶಹೊಂದತಕ್ಕದು ಎಂದು ತಿಳಿಯಬೇಕು. ತನ್ನ ಹೊರಗೂ ಒಳಗೂ ಸಕಲ ದೃಶ್ಯ ಜ್ಞಾನವನ್ನು ಸಮಗ್ರವಾಗಿ ಪರಿತ್ಯಾಗಮಾಡಿ, ಮನಸ್ಸು ಯಾವಾಗ ಪರಮಾತ್ಮನಲ್ಲಿ ಸ್ವತಃ ಲೀನವಾಗಿ ನಿಲ್ಲುವುದೋ ಆಗಲೇ ಆ ಪರಮ ಪದವು (ಮೋಕ್ಷಪದವಿಯು) ಸಿಕ್ಕಿಯೇ ಬಿಟ್ಟಿತೆಂದೂ ತಿಳಿಯಬೇಕು.

೪೭. ಯಾವ ಈ ದೃಶ್ಯಜ್ಞಾನವು ಸ್ಫುಟವಾಗಿರುವುದೋ ಅದು ಅತ್ಯವಶ್ಯಕವಾಗಿ ಕೇವಲ ಅಸತ್ಯಭೂತವಾದುದೇ ಸರಿ. ಮತ್ತು ಮನಸ್ಸು ಅಂತಹ ದೃಶ್ಯ ಜ್ಞಾನಮಯವಾಗಿರುವಿಕೆಯೇ ಆ ಮನಸ್ಸಿನ ಸ್ವರೂಪವೆಂದು ತಿಳಿಯಬೇಕು. ಅದು ಬೇರೆ ಯಾವುದೂ ಅಲ್ಲವು.

ಆದ್ಯಂತಯೋರ್ವಿನಾಶಿತ್ವಾನ್ಮಧ್ಯೇಽಪಿ ತದಸನ್ಮಯಂ ।
ಅಜ್ಞಾತಮನಸಸ್ತೇನ ದುಃಖಿತಾ ಹಸ್ತಸಂಸ್ಥಿತಾ ॥ ೪೮ ॥

ಆತ್ಮೈವೇದಂ ಜಗದಿತಿ ವಿನಾಭಾವೇನ ದುಃಖದಾ ।
ದೃಶ್ಯಶ್ರೀರನ್ಯಥಾ ತ್ವೇಷಾ ಭೋಗಭೋಕ್ಷಪ್ರದಾಯಿನೀ ॥ ೪೯ ॥

ಜಲಮನ್ಯತ್ತರಂಗೋಽನ್ಯ ಇತಿ ನಾನಾತಯಾಽಜ್ಞತ್ ।
ಜಲಮೇವ ತರಂಗೋಽಯ ಮಿತ್ಯೇಕತ್ವಾತ್ಕಿಲ ಜ್ಞತಾ ॥ ೫೦ ॥

---

೪೮. ಈ ದೃಶ್ಯವು ಆದಿಯಲ್ಲಿಯೂ ಅಂತದಲ್ಲಿಯೂ ವಿನಶ್ವರವಾಗಿರುವದರಿಂದ [ಅಸತ್ಯವಾಗಿರುವದರಿಂದ] ಮಧ್ಯಕಾಲದಲ್ಲಿಯೂ ಕೂಡ ಇದು ಅತ್ಯಂತ ಅಸದ್ರೂಪವೇ ಸರಿ. ಆದಕಾರಣ, ಹೀಗೆ ಮನಸ್ಸು ಅಸನ್ಮಯವಾದುದೆಂದು ಅದರ ಸ್ವರೂಪಜ್ಞಾನವಿಲ್ಲದಿರುವ ಅವಿವೇಕಿಗೆ ದುಃಖಾನುಭವವು ಕರತಲಗತವಾದ ವಸ್ತುವಿನಂತೆ ಸರ್ವದಾ ಸ್ವತಸ್ಸಿದ್ಧವಾಗಿರುವುದು.

(ಆದಾವಂತೇಚಯನ್ನಾಸ್ತಿ ವರ್ತಮಾನೇಪಿ ತತ್ ತಥಾ । ವಿತಥೈಃ ಸದೃಶಾಃ ಸಂತಃ ಅವಿತಥಾ ಇವಲಕ್ಷಿತಾಃ ॥ ಮೃಗತೃಷ್ಣಿಕಾದಿಗಳು ಆದ್ಯಂತಗಳಲ್ಲಿ ಇಲ್ಲದಿರುವುದರಿಂದ ಮಧ್ಯಕಾಲದಲ್ಲಿಯೂ ಇಲ್ಲವೆಂದೇ ನಿಶ್ಚಿತವಾಗಿವೆ. ಅಂತೆಯೇ ದೃಶ್ಯಪ್ರಪಂಚವೂ ಅಸತ್ತಾದ ಮೃಗತೃಷ್ಣಿಕಾದಿಗಳಿಗೆ ಸದೃಶಗಳಾಗಿದ್ದರೂ ಸದ್ವಸ್ತುಗಳಂತೆ ಅನಾತ್ಮಜ್ಞರಾದ ಮೂಢರಿಗೆ ತೋರುವುದು. ಮಾಂಡೂಕ್ಯಕಾರಿಕೆ ವೈತಥ್ಯ ಪ್ರಕರಣ ಶ್ಲೋಕ ೪.)

೪೯. "ಈ ಜಗತ್ತೆಲ್ಲವೂ ಆತ್ಮವೇ" (ಆತ್ಮನಿಗಿಂತ ಬೇರೆಯಾದ ಜಗತ್ತೇ ಇಲ್ಲ) ಎಂಬ ದೃಢವಾದ ಜ್ಞಾನವು (ಭಾವನೆಯು) ಇಲ್ಲದೆ ಹೋದರೆ, ಸಮೃದ್ಧವಾದ ಈ ದೃಶ್ಯವು ಕೇವಲ ದುಃಖಪ್ರದವಾಗುವುದು. ಹಾಗಲ್ಲದೆ ಸರ್ವತ್ರ ಆತ್ಮಭಾವನೆಯು ನೆಲೆಸಿಬಿಟ್ಟರೋ ಆಗ ಇದೇ ದೃಶ್ಯವು ಭೋಗಮೋಕ್ಷಪ್ರದವಾಗುವುದು.

೫೦. "ಜಲವೂ (ನೀರು) ತರಂಗವೂ (ಅಲೆ) ಬೇರೆ ಬೇರೆ ಅತ್ಯಂತ ವಿಭಿನ್ನವಾದುವು" ಎಂದು ಜಲತರಂಗಗಳನ್ನು ನಾನಾರೂಪವಾಗಿ (ಭಿನ್ನ ಭಿನ್ನವಾಗಿ) ತಿಳಿದು ವ್ಯವಹರಿಸುವವನು ಕೇವಲ ಮೂಢನಾದ ಅವಿವೇಕಿಯೆಂಬುದರಲ್ಲಿ ಸಂದೇಹವೇ ಇಲ್ಲವಷ್ಟೆ. ಹಾಗೆಯೇ "ತರಂಗವೆಂಬುದು ಜಲವೇ ಹೊರತು ಬೇರೆಯಾದ ವಸ್ತುವಲ್ಲ" ಎಂದು ಜಲತರಂಗಗಳ ಐಕ್ಯವನ್ನು ತಿಳಿದವನೇ ಪ್ರಾಜ್ಞನೆನ್ನಿಸುವನು.

ದುಃಖಮಾಯಾತ್ಯಸದಿತಿ ಹೇಯೋಪಾದೇಯರೂಪಿ ಯತ್ ।
ತದಭಾವೇನ ತು ಜ್ಞಾನಾದಾನಂತ್ಯಮವಶಿಷ್ಯತೇ ॥ ೫೧ ॥

ಸಂಕಲ್ಪಕಲ್ಪಿತತ್ವಾಚ್ಚ ಮನೋರೂಪಮಸನ್ಮಯಂ ।
ಅಸನ್ಮಯವಿನಾಶೇ ತು ಕಃ ಶೋಕೋ ವದ ರಾಘವ ॥ ೫೨ ॥

ಅವತ್ಸಲೋ ಯಥಾ ಬಂಧುರರಾಗದ್ವೇಷಯಾ ಧಿಯಾ ।
ದೃಶ್ಯತೇ ಪಶ್ಯ ತದ್ವತ್ತ್ವಂ ತತ್ತ್ವಂ ಪಂಜರಮಾತ್ಮನಃ ॥ ೫೩ ॥

---

೫೧. ಹೇಯ–ಉಪಾದೇಯ, ಪ್ರಿಯ–ಅಪ್ರಿಯ, ಇತ್ಯಾದಿ ಬಹು ಪ್ರಕಾರವಾದ ಭೇದ ಬುದ್ಧಿಯು ಅತ್ಯಂತ ಅಸತ್ ಆದುದು. ಅದರ ಮೂಲಕವಾಗಿ ಜನನ ಮರಣಾದಿರೂಪವಾದ ಸಾಂಸಾರಿಕ ದುಃಖವು ಅನುಸರಿಸಿಕೊಂಡು ಬರುವುದು. ಆದ್ದರಿಂದ, ಇಂತಹ ಭೇದ ಬುದ್ಧಿಯನ್ನು ಪರಿಹರಿಸಿಕೊಳ್ಳಲು ತಕ್ಕ ಪ್ರಯತ್ನವನ್ನು ಮಾಡಬೇಕು. ಹೇಯೋಪಾದಿಯ ಬುದ್ಧಿಯು ತೊಲಗಿಹೋಗುವುದರಿಂದಲಾದರೋ, ಆತ್ಮಯಾಥಾರ್ಥ್ಯಜ್ಞಾನವು ದೃಢವಾಗಿ ಆವಿರ್ಭವಿಸಿ, ದೇಶಕಾಲಾದಿಗಳಿಂದ ಅಪರಿಚ್ಛಿನ್ನವಾದ (ಮೊಟಕಾಗದ) (ಅಪರಿಮಿತವಾದ) ಆತ್ಮಸ್ವರೂಪವು ಮಾತ್ರವೇ ಅವಶಿಷ್ಟವಾಗುವುದು.

೫೨. ಅಯ್ಯಾ ರಾಘವ, ಈ ಮನೋಬುದ್ಧ್ಯಾದಿರೂಪ ದ್ವೈತಪ್ರಪಂಚವು ಧನಧಾನ್ಯಾದಿಗಳಂತೆ ಸತ್ಯವಾಗಿ, ತನ್ನ ಸುಖೋಪಕರಣವಾಗಿ, ಪ್ರಿಯವಾಗಿ ವ್ಯವಹಾರದಲ್ಲಿ ತೋರಿದರೂ, ಅದು ಕೇವಲ ಸಂಕಲ್ಪದಿಂದ ಕಲ್ಪಿತವಾಗಿರುವ ಕಾರಣ, ವಸ್ತುತಃ ಸುತರಾಂ ಅತ್ಯಂತಾಸತ್ ಆದುದೆ; ಸಂದೇಹವಿಲ್ಲ. (ಸ್ವರೂಪತಃ ಎಂದೆಂದಿಗೂ ಅಸತ್ಯವೇ ಆಗಿರುವ ವಂಧ್ಯಾಪುತ್ರಾದಿಗಳ ವಿನಾಶದಿಂದ ಪ್ರಪಂಚದಲ್ಲಿ ಯಾವನಿಗೆ ದುಃಖವುಂಟಾಗುವುದು ? ಆದಕಾರಣ, ಅತ್ಯಂತಾಸತ್ತಾದ ಈ ದ್ವೈತ ಪ್ರಪಂಚವು ನಷ್ಟವಾದರೂ ಜ್ಞಾನಿಗೆ ದುಃಖವುಂಟಾಗುವುದಿಲ್ಲ.) (ಅಜ್ಞಾನಿಯು ವಿಮೂಢನಾಗಿ ಕಾರಣವಿಲ್ಲದೆ ವ್ಯರ್ಥವಾಗಿ ಶೋಕಿಸುವನು ಎಂದು ಭಾವ.)

೫೩. ರಾಗದ್ವೇಷಗಳಿದ್ದರೆ, ಇಷ್ಟಹಾನಿಯಿಂದಲೂ, ಅನಿಷ್ಟಪ್ರಾಪ್ತಿಯಿಂದಲೂ ಶೋಕವು ಉಂಟಾಗಬಹುದು. ರಾಗದ್ವೇಷಗಳನ್ನು ಬಿಟ್ಟುಬಿಟ್ಟು, ಉದಾಸೀನ ಭಾವದಿಂದ ವ್ಯವಹರಿಸುವವನಿಗೆ ಶೋಕದ ಪ್ರಸಕ್ತಿಯೇ ಇಲ್ಲವಷ್ಟೆ. ಆದುದರಿಂದ ತಮ್ಮಲ್ಲಿ ಸ್ನೇಹವಿಲ್ಲದಿರುವ ಅಪರಿಚಿತನಾದ ಬಂಧುವನ್ನು ಲೋಕದಲ್ಲಿ ಜನರು

ಅವತ್ಸಲಾದ್ಯಥಾ ಬಂಧೋಃ ಸುಖದುಃಖೈರ್ನ ಲಿಪ್ಯತೇ ।
ತತ್ತ್ವೇನ ಸಂಪರಿಜ್ಞಾನಾತ್ತಥಾ ತತ್ತ್ವಚಯಾತ್ಮನಃ ॥ ೫೪ ॥

ತದನಾದಿ ಶಿವಂ ಜ್ಞಾನಂ ಯನ್ಮಧ್ಯಂ ದ್ರಷ್ಟೃದೃಶ್ಯಯೋಃ ।
ತಸ್ಮಿನ್ಸತ್ಯೇ ಮನಃ ಶಾಂತಂ ಪಾಂಸುರ್ವಾಯುಕ್ಷಯೇ ಯಥಾ ॥ ೫೫ ॥

ಉಪಶಾಂತೇ ಮನೋವಾಯೌ ದೇಹಪಾಂಸುಃ ಪ್ರಶಾಮ್ಯತಿ ।
ಪುನಃ ಸಂಸಾರನಗರೇ ನ ನೀಹಾರಃ ಪ್ರವರ್ತತೇ ॥ ೫೬ ॥

ರಾಗದ್ವೇಷರಹಿತವಾದ ಬುದ್ಧಿಯಿಂದ ಉದಾಸೀನರಾಗಿ ಕಾಣುವಂತೆ, ನೀನು ಪೃಥಿವ್ಯಾದಿ ಪಂಚಭೂತಗಳ ತತ್ತ್ವರೂಪವಾದ ನಿನ್ನ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳನ್ನು (ಪಂಜರಪ್ರಾಯ) ಉದಾಸೀನದೃಷ್ಟಿಯಿಂದ ನೋಡುವವನಾಗು.

೫೪. ಅವತ್ಸಲ (ನಿಸ್ನೇಹ)ನಾದ ಬಂಧುವಿನ ಮೂಲಕ ಸಂಭವಿಸಬಹುದಾದ ಸುಖದುಃಖಗಳು ಮೊದಲಾದವುಗಳಿಂದ, ಜನರು ಸ್ವಲ್ಪಮಾತ್ರವೂ ವಿಕಾರವನ್ನು ಹೊಂದದೆ ಹೇಗೆ ನಿರ್ಲಿಪ್ತರಾಗಿಯೇ ಇರುವರೋ, ಹಾಗೆಯೇ ಶರೀರ ತತ್ತ್ವವನ್ನು ಯಥಾರ್ಥವಾಗಿ ತಿಳಿದುಕೊಂಡಿರುವ ಜ್ಞಾನಿಯು ಭೂತರಾಶಿ ಸ್ವಭಾವವಾದ (ಸ್ಥೂಲ ಮತ್ತು ಸೂಕ್ಷ್ಮ) ದೇಹದ್ವಯಪಂಜರದ ಮೂಲಕವಾದ ಸುಖದುಃಖಗಳಿಂದ ತಾನು ಸಂಪರ್ಕಪಡೆಯದೆ ನಿರ್ಲಿಪ್ತನಾಗಿಯೇ ಇರುವನು.

೫೫. ದ್ರಷ್ಟೃ (ನೋಡುವವನು) ದೃಶ್ಯ (ನೋಡಲ್ಪಡತಕ್ಕದ್ದು)ಗಳೆಂಬೀ ಎರಡರ ಮಧ್ಯವೆನ್ನಿಸುವ (ದೃಕ್-ರೂಪ) ದೃಗ್ರೂಪವಾದ ಜ್ಞಾನವು ಯಾವುದೋ ಅದು ಅನಾದಿಯು ; ಸದಾ ಮಂಗಳಕರವಾದುದು. (ಶಿವಂ-ನಿತ್ಯನಿರತಿಶಯಾನಂದರೂಪವು) ಅಂತಹ ಪರಮಾರ್ಥ ಸತ್ಯವಾದ ಜ್ಞಾನವು ದೃಢವಾಗಿಬಿಟ್ಟರೆ, ಗಾಳಿಯು ಬೀಸದೆ ನಿಂತುಹೋದಾಗ ಧೂಳು ತಾನಾಗಿಯೇ ಶಾಂತವಾಗುವಂತೆ ಮನಸ್ಸು ಸ್ವತಏವ ಲಯಹೊಂದುವುದು. (ಶಾಂತವಾಗುವುದು)

೫೬. ಮನಸ್ಸು ಎಂಬ ವಾಯುವು ಶಾಂತವಾಗಿಬಿಟ್ಟಕೂಡಲೇ ಸ್ಥೂಲ ದೇಹವೆಂಬ ಧೂಳಿಯೂ ಪ್ರಶಾಂತವಾಗಿಬಿಡುವುದು. (ಅಸತ್ ಆಗಿಬಿಡುವುದು. ಅಂದರೆ ಮನೋಲಯಮಾತ್ರದಿಂದಲೇ ಸ್ಥೂಲದೇಹವೂ ಇದ್ದರೂ ಇಲ್ಲವಾಗಿಬಿಡುವುದು.) ಸಂಸಾರಕ್ಕೆ ನಗರದಂತೆ ಅಧಿಷ್ಠಾನವಾಗಿರುವ ಪ್ರತ್ಯಗಾತ್ಮನಲ್ಲಿ (ಸಂಸಾರನಗರೇ)

ವಾಸನಾಪ್ರಾವೃಷಿ ಕ್ಷೀಣೇ ಸಂಸ್ಥಿತೌ ರಾಮಮಾಗತೇ ।
ಜಾಡ್ಯೇ ಜನಿತಹೃತ್ಕಂಪೇ ಪಂಕೇ ಶೋಷಮುಪಾಗತೇ ॥ ೫೭ ॥

ಶುಷ್ಕೇ ತೃಷ್ಣಾವಟೇ ಶಾಂತೇ ಮಂದೇ ಹೃದಯಕಾನನೇ ।
ಕ್ಷೀಣೇಷ್ವಕ್ಷಕದಂಬೇಷು ಮಿಥ್ಯಾಜ್ಞಾನಘನೇ ಕ್ಷತೇ ॥ ೫೮ ॥

ಕ್ಷೀಯತೇ ಮೋಹಮಿಹಿಕಾ ಪ್ರಭಾತ ಇವ ಶರ್ವರೀ ॥
ಕ್ವಾಪಿ ಗಚ್ಛತಿ ತಜ್ಜಾಡ್ಯಂ ವಿಷಂ ಮಂತ್ರಹತಂ ಯಥಾ ॥ ೫೯ ॥

ದೇಹಾದ್ರೌ ನ ಭಯಕ್ಷುದ್ರಾಃ ಸಂತಃ ಪ್ರಸರಂತ್ಯಲಂ ।
ನೋಲ್ಲಸಂತಿ ಲಸತ್ಪಕ್ಷಾಃ ಸಂಕಲ್ಪೋಗ್ರಕಲಾಪಿನಃ ॥ ೬೦ ॥

ಹಿಮದಂತೆ ಆವರಕವಾದ ಅವಿದ್ಯೆಯು (ನೀಹಾರಃ) ಮೊದಲೇ ನಾಶವಾಗಿಬಿಟ್ಟಿರುವ ಕಾರಣ ಪುನಃ ಎಂದಿಗೂ ಪ್ರವರ್ತಿಸುವುದಿಲ್ಲ.

೫೭-೫೯. ವಾಸನೆಯೆಂಬ ಮಳೆಗಾಲವು ಕಳೆದುಹೋಗಲಾಗಿ, ಸ್ವಸ್ವರೂಪ ಸ್ಥಿತಿಯು ಮನಸ್ಸಿನಲ್ಲಿ ವಿಹರಿಸುತ್ತಿರಲಿಕ್ಕಾಗಿ ಎದೆ ನಡುಗುವಷ್ಟುಮಟ್ಟಿಗೆ ಭಯವನ್ನುಂಟುಮಾಡುತ್ತಿದ್ದ ಮೌಢ್ಯವೆಂಬ ಶೈತ್ಯವು ತೊಲಗಿಹೋಗಲಾಗಿ, ಪಾಪವೆಂಬ ಕೆಸರು ಒಣಗಿಹೋಗಲು, ತೃಷ್ಣೆ (ಅತಿಯಾದ ಆಸೆ) ಯೆಂಬ ಹಳ್ಳವು ನೀರಸವಾಗಿ ಹೋಗಲಾಗಿ ಹೃದಯವೆಂಬ ಅರಣ್ಯವು ರಾಗದ್ವೇಷಾದಿಗಳೆಂಬ ಪೊದೆಗಳಿಲ್ಲದೆ ಮೆಲ್ಲ ಮೆಲ್ಲನೆ (ಕ್ರಮೇಣ) ಶಾಂತವಾಗುತ್ತಿರಲು (ಮೋಹ ಭಯ ಮುಂತಾದ ಉಪದ್ರವಗಳಿಲ್ಲದೆ ಹೋಗಲು) ಇಂದ್ರಿಯಗಳೆಂಬ ಕದಂಬ ವೃಕ್ಷಗಳು ವಿಕಾಸಗೊಳ್ಳದೆ ಕ್ಷಯ ಹೊಂದುತ್ತಿರಲಿಕ್ಕಾಗಿ ಮಿಥ್ಯಾಜ್ಞಾನವೆಂಬ ಮೇಘವು ಚದುರಿ ಅದೃಶ್ಯವಾಗಿ ಹೋಗಲಾಗಿ ಪ್ರಾತಃಕಾಲದಲ್ಲಿ ರಾತ್ರಿಯು ಕ್ಷಯಿಸುವಂತೆ ಮೋಹವೆಂಬ ಹಿಮವು ನಿರ್ನಾಮವಾಗಿ ನಾಶಹೊಂದುವುದು. ಗಾರುಡಾದಿ ಮಂತ್ರ ಶಕ್ತಿಯಿಂದ ವಿಷವು ಹೇಗೋ ಹಾಗೆ ಪೂರ್ವದ ಆ ಜಡತ್ವ ಎಲ್ಲಿಯೋ ಹೋಗಿಬಿಡುವುದು.

೬೦. ಶರೀರವೆಂಬ ಪರ್ವತದಲ್ಲಿ ಭಯಗಳೆಂಬ ಕ್ಷುದ್ರ ನದಿಗಳು (ಸಣ್ಣ ಹೊಳೆಗಳು) ಪೂರ್ವದಂತೆ ವಿಶೇಷವಾಗಿ ಹರಿಯುವುದಿಲ್ಲ. ಅಂದವಾದ ಗರಿಗಳಿಂದ ಶೋಭಿಸುತ್ತಿರುವ ಸಂಕಲ್ಪಗಳೆಂಬ ದೊಡ್ಡ ನವಿಲುಗಳು ಉಲ್ಲಾಸಗೊಂಡು ವಿಹರಿಸುವುದಿಲ್ಲ.

ಪರಾಂ ನಿರ್ಮಲತಾಮೇತಿ ಸಂವಿದಾಕಾಶಗೋಚರಃ ।
ರಾಜತೇಽತಿತರಾಮುಚ್ಚೈಃ ಜೀವಾದಿತ್ಯೋ ಮಹೋದಯಃ ॥ ೬೧ ॥

ಘನಮೋಹಭರೋನ್ಮುಕ್ತಾ ವಿವಿಕ್ತತ್ವಂ ಪರಂ ಗತಾಃ ।
ಸಮಯೇ ಹ್ಯತಿಶೋಭಂತೇ ಧೌತಾ ಆಶಾ ಮಹಾದಿಶಃ ॥ ೬೨ ॥

ಭೃಶಮಾಭಾತಿ ವಿಮಲಾ ಮುದಿತಾಕಾಶಮಂಜರೀ ।
ಶೀತಲೀಕೃತದಿಕ್ಚಕ್ರಾ ಶರದ್ವ್ಯೋಮ್ನೀವ ಚಂದ್ರಿಕಾ ॥ ೬೩ ॥

ಸರ್ವಸಂಪತ್ಪ್ರಕಾಶೇನ ಪರಮಾನಂದದಾಯಿನಾ ।
ಭೃಶಂ ಸಫಲತಾಮೇತಿ ಸುವಿವಿಕ್ತಾ ವಿವೇಕ ಭೂಃ ॥ ೬೪ ॥

---

೬೧. ಸ್ವರೂಪಜ್ಞಾನವೆಂಬ ಅಂತರಿಕ್ಷದಲ್ಲಿ ಜೀವನೆಂಬ ಸೂರ್ಯನು ಅಪರೋಕ್ಷನಾಗಿ (ಪ್ರತ್ಯಕ್ಷ) ಸ್ಫುರಿಸುತ್ತಾ, ಅವಿದ್ಯಾದಿಮಲ (ದೋಷ)ವಿರಹಿತನಾಗಿ ಅತ್ಯಂತ ನೈರ್ಮಲ್ಯವನ್ನು ಹೊಂದವನು ಮತ್ತು ನಿರತಿಶಯಾನಂದರೂಪ ಸ್ವಾತ್ಮ ಲಾಭದಿಂದ ಅತ್ಯುನ್ನತವಾದ ಅಭ್ಯುದಯ (ಶ್ರೇಯಸ್ಸ)ವನ್ನು ಪಡೆದು ನಿತ್ಯ ಶುದ್ಧ ಬುದ್ಧನಾಗಿ ಅತ್ಯಧಿಕವಾಗಿ ವಿರಾಜಿಸುತ್ತಿರುವನು.

೬೨. ಇಂತಹ ಪ್ರಶಾಂತವಾದ ಸಮಾಧಿಕಾಲವೆಂಬ ಶರದೃತುವಿನಲ್ಲಿ ಆಶೆಗಳೆಂಬ ದಿಕ್ಕುಗಳು ಅತಿಶಯವಾದ ಮೋಹಜಾಲವೆಂಬ ಮೇಘಮಾಲೆಯ ಆವರಣದಿಂದ ಬಿಡಲ್ಪಟ್ಟವುಗಳಾಗಿಯೂ, ಉತ್ತಮವಾದ ವಿವೇಕವೆಂಬ ಪ್ರತ್ಯೇಕವಾದ ಸ್ಥಿತಿಯನ್ನು [ವಿಭಕ್ತತ್ವ] ಹೊಂದಿದವುಗಳಾಗಿಯೂ ರಜೋಗುಣವೆಂಬ ಧೂಳಿನಿಂದ ಕೆಡಿಸಲ್ಪಡದೆಯೂ [ಅದೂಷಿತಗಳಾಗಿಯೂ] ನಿಜವಾಗಿಯೂ ಬಹುಮಟ್ಟಿಗೆ ಶೋಭಿಸುತ್ತಿರುವುವು.

೬೩. ಪುಣ್ಯಫಲಾನುಸಾರಿಯಾದ ಚಿತ್ತವೃತ್ತಿಯೆಂಬ ಚಿತ್ತಾಕಾಶದ ಮಂಜರಿಯು ಶರದೃತುವಿನ ನಿರ್ಮಲವಾದ ಆಕಾಶದಲ್ಲಿ ಬೆಳದಿಂಗಳಂತೆ [ಚಂದ್ರಿಕೆಯಂತೆ] ಎಲ್ಲ ದಿಕ್ಕುಗಳನ್ನೂ ಶೀತಲವನ್ನಾಗಿ ಮಾಡುತ್ತ ಅತ್ಯಂತ ನಿರ್ಮಲವಾಗಿ ವಿರಾಜಿಸುವುದು.

೬೪. ಅವಿದ್ಯಾದಿದೋಷಗಳೆಂಬ ಕೆಟ್ಟ ಕಳೆಗಳು ಇಲ್ಲದಂತೆ ಚೆನ್ನಾಗಿ ಪರಿಶೋಧಿಸಲ್ಪಟ್ಟು ಹದಗೊಳ್ಳಿಸಿರುವ ವಿವೇಕವೆಂಬ ಭೂಮಿಯು. ಆತ್ಮವೆಂಬ ಫಲ

ಸಪರ್ವತವನಾಭೋಗಂ ಪರಮಾಲೋಕಸುಂದರಂ ।
ಅಚ್ಛಾಚ್ಛಂ ಶೀತಲಚ್ಛಾಯಂ ಜಾಯತೇ ಭುವನಾಂತರಂ || ೬೫ ||

ವಿಸ್ತಾರಿತಂ ಸುಸುಮತಾಂ ಸ್ಫಾರಿತಂ ಸ್ಫಟಿಕಾಕೃತಿಂ ।
ಉಪೈತಿ ಹೃತ್ಸರಃ ಸ್ವಚ್ಛಂ ನೀರಜೋಂಬುಜಕೋಶಕಂ || ೬೬ ||

ದಿಂದ ಕೂಡಿಕೊಂಡು ಬಹಳವಾಗಿ ಶೋಭಿಸುವುದು. ಈ ಆತ್ಮನೆಂಬ ಫಲವು ನಿರತಿಶಯಾನಂದ ಪ್ರದವಾದುದು ಮತ್ತು ಸರ್ವಸಂಪತ್ಪ್ರಕಾಶವಾದುದು.

[ಸರ್ವಸಂಪತ್ಪ್ರಕಾಶಃ-ಆತ್ಮನು, ಸರ್ವಾಃಸಂಪದಃ-ಸಕಲ ವೈಷಯಿಕಾನಂದ ಲೇಶಗಳನ್ನು, ಸ್ವಾಂತರ್ಭಾವೇಣ-ತನ್ನೊಳಗೆ ಅಡಗಿಸಿಕೊಂಡು, ಪ್ರಕಾಶಯತಿ-ಪ್ರಕಾಶಪಡಿಸುವವನು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯ ಗಳಿಂದ ಉಂಟಾಗುವ ಸುಖಗಳು ಅತಿ ತುಚ್ಛ (ಸುಖಾಭಾಸಗಳು) ಸುಖಲವಗಳು. ಈ ಪ್ರಾಪಂಚಿಕ (ವೈಷಯಿಕ) ಸುಖಗಳೆಲ್ಲವೂ ನಿತ್ಯವೂ ನಿರತಿಶಯವೂ ಆದ ಬ್ರಹ್ಮಾ ನಂದದ ಅತಿಸೂಕ್ಷ್ಮತಮವಾದ ಕಣಗಳು. ಈ ಆನಂದಲವಗಳೆಲ್ಲವೂ ಅಖಂಡವಾದ ಬ್ರಹ್ಮಾನಂದದಲ್ಲಿ ಅಂತರ್ಗತವಾದುವು. ಆತ್ಮನು ಸ್ವಾಂತರ್ಗತವಾದ ಈ ಸುಖ ಲವಗಳನ್ನು ಪ್ರಕಾಶಪಡಿಸುವನು ಎಂದರ್ಥ. ಸಸ್ಯಫಲ ಎಂಬ ಪಕ್ಷದಲ್ಲಿ-ಸರ್ವೇಷಾಂ ಕೃಷೀವಲಾದೀನಾಂ–ಸಕಲ ರೈತರು ಮುಂತಾದವರ, ಭಾವಿಸಂಪದಃ-ಮುಂದೆ ದೊರ ಕುವ ಸಂಪತ್ತುಗಳನ್ನು, ಪ್ರಕಾಶಯತಿ-ಪ್ರಕಾಶಪಡಿಸುವುದು ಎಂದರ್ಥ.]

೬೫. ಈ ಸಮಾಧಿಯೆಂಬ ಶರತ್ಕಾಲದಲ್ಲಿ ಕುಲಪರ್ವತಗಳಿಂದಲೂ ಮಹಾರಣ್ಯ ಶ್ರೇಣಿಗಳಿಂದಲೂ ಸಹಿತವಾದ ಸಮಸ್ತ ಭುವನಾಂತರಾಳವೂ ಅತ್ಯಂತ ನಿರ್ಮಲ ವಾಗಿಯೂ ಪರಮಾಲೋಕ ಸುಂದರವಾಗಿಯೂ ಶೀತಲಚ್ಛಾಯವಾಗಿಯೂ ಆಗುವುದು.

[ತತ್ತ್ವಪಕ್ಷದಲ್ಲಿ ಪರಮಾಲೋಕೇನ-ಆತ್ಮಪ್ರಕಾಶದಿಂದ, ಸುಂದರ-ಅತಿ ರಮ ಣೀಯವಾದುದು. ತತ್ತ್ವಪಕ್ಷದಲ್ಲಿ ಶೀತಲಾ–ಛಾಯಾ-ತಾಪತ್ರಯರಹಿತವಾದ ಚಿದಾಭಾಸವು, ಯಸ್ಮಿನ್-ಉಳ್ಳದ್ದು. ಶರತ್ಕಾಲದ ಪಕ್ಷದಲ್ಲಿ ಚೆನ್ನಾಗಿ ಪ್ರಕಾಶಿಸು ತ್ತಿರುವ ಸೂರ್ಯಚಂದ್ರರ ತೇಜಸ್ಸಿನಿಂದ ಸುಂದರವಾದುದು. ಶರತ್ಕಾಲದ ಪಕ್ಷ ದಲ್ಲಿ ಬಹು ತಂಪಾದ ಕಾಂತಿಯುಳ್ಳದ್ದು ಎಂದರ್ಥ.]

೬೬. ಮನಸ್ಸೆಂಬ ಸರೋವರವು ಪರಿಚ್ಛೇದವೆಂಬ (ಅಲ್ಪವಾದ ಪರಿಮಿತಿ) ಕಟ್ಟೆಯು ಕಳೆದುಹೋದುದರಿಂದ ವಿಸ್ತರಿಸಲ್ಪಟ್ಟದ್ದಾಗಿಯೂ, ವಿವೇಕವೆಂಬ ಜಲವು

ಹೃತ್ಪದ್ಮಕೋಶಾನ್ಮಲಿನಃ ಸ್ವಾಹಂಕಾರಮಧುವ್ರತಃ ।
ಅಪುನರ್ದರ್ಶನಾಯೈವ ಚಂಚಲಃ ಕ್ವಾಪಿ ಗಚ್ಛತಿ ॥ ೬೭ ॥

ಭವತ್ಯಪಗತಾಕ್ಷೇಪಃ ಸರ್ವಗಃ ಸರ್ವನಾಯಕಃ ।
ನಿರ್ವಾಸನಃ ಶಾಂತಮನಾಃ ಸ್ವದೇಹನಗರೇಶ್ವರಃ ॥ ೬೮ ॥

ವಿಚಾರಣಾಸಮಧಿಗತಾತ್ಮದೀಪಕೋಽ
ಮನಸ್ಯಲಂ ಪರಿಗಲಿತೇವ ಧೀರಧೀಃ ।
ವಿಲೋಕಯನ್ ಕ್ಷಯಭವನೀರಸಾ ಗತೀ
ಗತಜ್ವರೋ ವಿಲಸತಿ ದೇಹಪತ್ತನೇ ॥ ೬೯ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಸ್ಥಿತಿಪ್ರಕರಣೇ
"ಉಪಶಮವರ್ಣನಂ" ನಾಮಪಂಚತ್ರಿಂಶಃ ಸರ್ಗಃ

ಹೆಚ್ಚಿದುದರಿಂದ ಅಭಿವೃದ್ಧಿಯನ್ನು ಹೊಂದಿಸಲ್ಪಟ್ಟದ್ದಾಗಿಯೂ, ರಾಜಸವೃತ್ತಿಗಳೆಂಬ ಧೂಳಿಯಿಂದ ರಹಿತವಾಗಿಯೂ, ಹೃದಯವೆಂಬ ಪದ್ಮಕೋಶವುಳ್ಳದ್ದಾಗಿಯೂ, ಸ್ಫಟಿಕಶಿಲೆಯಂತೆ ಅತ್ಯಂತ ಸ್ವಚ್ಛವಾದ ಆಕಾರವುಳ್ಳದ್ದಾಗಿಯೂ, ಸರ್ವತ್ರ ಸಮತಾಜ್ಞಾನವೆಂಬ ಒಂದೇ ಸಮನಾದ ಸ್ಥಿತಿಯನ್ನು ಹೊಂದುವುದು.

೬೭. ಈ ಕಾಲದಲ್ಲಿ ಅತ್ಯಂತ ಮಲಿನವಾಗಿಯೂ (ಅಹಂಕಾರವು ಪಾಪಮಯವಾಗಿ ಮಲಿನ ದುಂಬಿಯು ಬಣ್ಣದಲ್ಲಿ ಕಪ್ಪಾಗಿರುವುದರಿಂದ ಮಲಿನ) ಅತಿ ಚಂಚಲವಾಗಿಯೂ ಇರುವ ಅಹಂಕಾರವೆಂಬ ಭ್ರಮರವು ಪುನಃ ಕಾಣಿಸದೆ ಇರುವುದಕ್ಕಾಗಿಯೇ ಹೃದಯವೆಂಬ ಪದ್ಮಕೋಶದ ದೆಸೆಯಿಂದ ಎಲ್ಲಿಗೋ ಹಾರಿಹೋಗಿಬಿಡುವುದು.

೬೮. ಈ ಸಮಯದಲ್ಲಿ, ತನ್ನ ದೇಹವೆಂಬ ನಗರಿಗೆ ರಾಜನಾಗಿರುವ ಜೀವನು ದೇಶಕಾಲಾದಿಗಳ ಸಂಕೋಚವು (ಪರಿಚ್ಛೇದವು) ಇಲ್ಲದವನಾದುದರಿಂದ ಸರ್ವಗತನೂ ಸರ್ವೇಶ್ವರನೂ, ಸಕಲ ವಾಸನಾರಹಿತನೂ, ಪ್ರಶಾಂತಮನಸ್ಕನೂ ಆಗಿ ನಿರಾತಂಕನಾಗಿರುವನು.

೬೯. ಈ ಪ್ರಕಾರವಾಗಿ, ವಾಸನಾಕ್ಷಯದ ಮೂಲಕ, ಮನಸ್ಸು ಸಂಪೂರ್ಣವಾಗಿ ಲೀನವಾಗಿಬಿಡಲು (ಮನೋಲಯವಾಗಲಾಗಿ) ಜೀವನ್ಮುಕ್ತನೆಂಬ ರಾಜನು ತನ್ನ ಅವಿದ್ಯಕದೋಷಾಜಾಲಗಳನ್ನೆಲ್ಲ ವಿವೇಕದಿಂದ ಕಡೆಗಾಣಿಸಿ, ಯಾವುದ

ರಿಂದಲೂ ವಿಕಾರಗೊಳ್ಳದ (ಧೀರವಾದ) ಬುದ್ಧಿಯುಳ್ಳವನಾಗಿ ಮರಣ ಜನನ ಗತಿಗಳನ್ನು (ಪಾರಲೌಕಿಕ ಮತ್ತು ಐಹಲೌಕಿಕಗಳೆಂದ ಗತಿಗಳನ್ನು) ನಿಸ್ಸಾರ (ನೀರಸ) ಗಳೆಂದು ಮನಗಂಡು, ಗುರುಶಾಸ್ತ್ರಗಳ ಸಹಾಯದಿಂದ ಆತ್ಮ ತತ್ತ್ವ ವಿಚಾರಮಾಡಿ ಆತ್ಮೈಕತ್ವಜ್ಞಾನವೆಂಬ ಮಹಾದೀಪವನ್ನು ದೊರಕಿಸಿಕೊಂಡು ತ್ರಿವಿಧ ಸಂತಾಪ ರಹಿತನಾಗಿ, ಸ್ವದೇಹವೆಂಬ ರಾಜಧಾನಿಯೊಳಗೆ ನಿರಂತರವೂ ಸಕಲ ವಿಲಾಸಗಳಿಂದ ವಿಹರಿಸಿಕೊಂಡಿರುವನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಉಪಶಮವರ್ಣನ" ಎಂಬ ಮೂವತ್ತೈದನೆಯ ಸರ್ಗವು.

ಷಟ್‌ತ್ರಿಂಶಃ ಸರ್ಗಃ

ಶ್ರೀರಾಮ ಉವಾಚ:—

ಯಥೇದೃಶಂ ಸ್ಥಿತಂ ವಿಶ್ವಂ ವಿಶ್ವಾತೀತೇ ಚಿದಾತ್ಮನಿ ।
ತನ್ಮೇ ಕಥಯ ಹೇ ಬ್ರಹ್ಮನ್ ಪುನರ್ಬೋಧವಿವೃದ್ಧಯೇ ॥ ೧ ॥

ಶ್ರೀವಸಿಷ್ಠ ಉವಾಚ—

ಯಥೋರ್ಮಯೋಽನಭಿವ್ಯಕ್ತಾ ಭಾವಿನಃ ಪಯಸಿ ಸ್ಥಿತಾಃ ।
ನ ಸ್ಥಿತಾಶ್ಚಾತ್ಮನೋಽನ್ಯತ್ವಾಚ್ಚಿತ್ತತ್ವೇ ಸೃಷ್ಟಯಸ್ತಥಾ ॥ ೨ ॥

ಮೂವತ್ತಾರನೆಯ ಸರ್ಗ

೧. ಶ್ರೀರಾಮನು ಹೇಳಿದನು:—ಎಲೈ ಬ್ರಹ್ಮಜ್ಞರೇ, ಸಕಲ ಜಗತ್ತಿಗೂ ಅತೀತನಾಗಿರುವ ಆ ಚಿದಾತ್ಮನಲ್ಲಿ ಇಂತಹ ಪೂರ್ವೋಕ್ತ ಪ್ರಕಾರವಾದ ವಿಶ್ವವು (ಜಗತ್ತು) ಹೇಗೆ ಇರುವುದು ? ನನಗೆ ಜ್ಞಾನವು ವೃದ್ಧಿಯಾಗುವುದಕ್ಕಾಗಿ ಈ ವಿಚಾರವನ್ನು ಪುನಃ ದಯೆಮಾಡಿ ಉಪದೇಶಿಸಬೇಕು.

೨. ಶ್ರೀ ವಸಿಷ್ಠನು ಹೇಳಿದನು. ನೀರು ನಿಶ್ಚಲವಾಗಿರುವಾಗ ಅಲೆಗಳು ಕಾಣುವುದಿಲ್ಲ. ಅವು ನೀರಿನಲ್ಲಿ ಮುಂದೆ ಹುಟ್ಟತಕ್ಕವುಗಳಾಗಿದ್ದರೂ, ನಿಶ್ಚಲವಾದ ನೀರಿನಲ್ಲಿಯೂ ಅಲೆಗಳು ಅಭಿವ್ಯಕ್ತಿಯಿಲ್ಲದೆ (ಅನಭಿವ್ಯಕ್ತವಾಗಿ) ಇದ್ದುಕೊಂಡಿವೆ. ಹೀಗೆ ಅಲೆಗಳು ನೀರಿನಲ್ಲಿ ಇದ್ದರೂ ಕೂಡ, ಅವು ಅಭಿವ್ಯಕ್ತವಾಗದಿರುವಾಗ, ಇಲ್ಲದಂತೆಯೇ ನಾವು ಭಾವಿಸುವೆವು. ಇದರಂತೆಯೇ ಈ ಸೃಷ್ಟಿಗಳು (ಜಗತ್ತುಗಳು) ಸದ್ರೂಪನಾದ ಆತ್ಮನಿಗಿಂತ ಅನ್ಯವಾದುದರಿಂದಲೂ ಇವು ಸ್ವತಃ ಸತ್ತ್ವ (ಸತ್ತಾ) ಶೂನ್ಯವಾಗಿರುವುದರಿಂದಲೂ ಇವು ಚಿತ್ ತತ್ತ್ವದಲ್ಲಿ ಇಲ್ಲವೇಇಲ್ಲವೆಂದು ತಿಳಿಯಬೇಕು. (ಬ್ರಹ್ಮಸತ್ತೆಯಿಂದಲೇ ಈ ಜಗತ್ತು ಸ್ಥಿತಿಯನ್ನು ಪಡೆದಿರುವುದೇ ಹೊರತು ಇದಕ್ಕೆ ಪ್ರತ್ಯೇಕವಾಗಿ ಸ್ವತಃ ಸತ್ತೆಯು (ಸ್ಥಿತಿ) ಇಲ್ಲವು. ಬ್ರಹ್ಮಸ್ವರೂಪಜ್ಞಾನವಿಲ್ಲದುದರಿಂದ ಅಜ್ಞರಿಗೆ ಮಾತ್ರವೇ ಈ ಜಗತ್ತು ಪ್ರತ್ಯೇಕವಾದ ಸ್ವಸತ್ತೆಯಿಂದ ಸ್ಥಿತಿಯನ್ನು ಪಡೆದಿರುವಂತೆ ತೋರುವುದು) ಎಂದು ಭಾವ.

ಯಥಾ ಸರ್ವಗತಃ ಸೌಕ್ಷ್ಮ್ಯಾದಾಕಾಶೋ ನೋಪಲಕ್ಷ್ಯತೇ ।
ತಥಾ ನಿರಂಶಶ್ಚಿದ್ಭಾವಃ ಸರ್ವಗೋಽಪಿ ನ ಲಕ್ಷ್ಯತೇ ॥ ೩ ॥

ಸುಸ್ಥಿತೇವಾಸ್ಥಿತೇವಾಂತಃ ಪ್ರತಿಭಾಸ್ತಿ ಮಣೌ ಯಥಾ ।
ನ ಸತ್ಯಭೂತಾ ನಾಸತ್ಯಾ ತಥೇಯಂ ಸೃಷ್ಟಿರಾತ್ಮನಿ ॥ ೪ ॥

ಸ್ವಾಧಾರೈರಂಬುದೈಃ ಸ್ವಸ್ಥೈರ್ನ ಸ್ಪೃಷ್ಟಂ ಗಗನಂ ಯಥಾ ।
ಚಿತ್ಸ್ಥೈಃ ಸರ್ಗೈಶ್ಚಿದಾಧಾರೈರ್ನ ಸ್ಪೃಷ್ಟಾ ಚಿತ್ಪರಾ ತಥಾ ॥ ೫ ॥

ಜಲಧಿಸ್ಥಿತತತ್ತೇಜೋ ಯಥಾಂಗ ಪ್ರತಿಬಿಂಬತಿ ।
ತಥಾ ಪುರ್ಯಷ್ಟಕೈಷ್ವೇವ ವಿದ್ಧಿ ದೇಹೇಷು ಲಕ್ಷ್ಯತೇ ॥ ೬ ॥

---

೩. ಆಕಾಶವು ಸರ್ವತ್ರವ್ಯಾಪಿಸಿಕೊಂಡಿರುವುದಾದರೂ ಅದಿ ಸೂಕ್ಷ್ಮವಾಗಿರುವ ಕಾರಣ ಅದು ಕಾಣಿಸದೆ ಇರುವಂತೆಯೇ ನಿರವಯುವವಾಗಿ ಅತಿ ಸೂಕ್ಷ್ಮವಾಗಿರುವ ಚಿದ್ಭಾವವು ಸರ್ವಗತವಾಗಿದ್ದರೂ ಕೂಡ ಗೋಚರವಾಗದೆ ಇರುವುದು.

೪. ಸ್ಫಟಿಕ, ವಜ್ರ ಮುಂತಾದ ಸ್ವಚ್ಛ ದ್ರವ್ಯಗಳೊಳಗೆ ಪ್ರತಿಬಿಂಬವು ಇರುವಂತೆಯೂ ಇಲ್ಲದಂತೆಯೂ ಹೇಗೆ ತೋರುತ್ತಿರುವುದೋ ಹಾಗೆಯೇ ಈ ಸೃಷ್ಟಿಯು (ಜಗತ್ತು) ಸದ್ರೂಪನಾದ ಆತ್ಮನಲ್ಲಿ ಸತ್ಯಭೂತವಾಗಿಯೂ ಇಲ್ಲ. ಮತ್ತು ಅಸತ್ಯ (ಮಿಥ್ಯೆ)ವಾಗಿಯೂ ಇಲ್ಲ.

೫. ಆಕಾಶವೇ ಆಧಾರವಾಗಿರುವ ಮತ್ತು ಆಕಾಶದಲ್ಲಿಯೇ ಇರುವ ಮೇಘಗಳ ಸಂಪರ್ಕವು (ಗಗನಕ್ಕೆ) ಆಕಾಶಕ್ಕೆ ಹೇಗೆ ಇಲ್ಲವೋ ಹಾಗೆಯೇ ಚಿತ್ತಿನಲ್ಲಿಯೇ ಇದ್ದುಕೊಂಡು ಚಿತ್ತೇ ಆಧಾರವಾಗಿ ಉಳ್ಳ ಜಗತ್ತಿನ ಸಂಪರ್ಕವು ಪರಾತ್ಪರವಾದ ಚಿತ್ತಿಗೂ ಉಂಟಾಗುವುದಿಲ್ಲ.

೬. ಜಲವನ್ನು ಆಶ್ರಯಿಸಿಕೊಂಡಿರುವ ಅದರ ತೇಜಸ್ಸು, ಜಲದ ಜೊತೆಯಲ್ಲಿ ಸೇರಿಕೊಂಡಿರುವಾಗ ಅಗೋಚರವಾಗಿರುವುದು. (ವಿದ್ಯುಚ್ಛಕ್ತಿಯು electricity ಅಗೋಚರ) ಆದರೆ ಜಲದಲ್ಲಿ ಪ್ರತಿಬಿಂಬಿಸುವ ತೇಜಸ್ಸು ಸ್ಫುಟವಾಗಿ ಗೋಚರವಾಗುವುದು. (ಜಲದಲ್ಲಿ ಸೂರ್ಯಾದಿಗಳ ಪ್ರತಿಬಿಂಬವು ಗೋಚರ) ಇದರಂತೆಯೇ ಅತಿ ಸೂಕ್ಷ್ಮವಾದ ಚಿತ್ತು ಘಟಾದಿಗಳಲ್ಲಿ ಗೋಚವಾಗುವುದಿಲ್ಲ. ಆದರೆ ಪುರ್ಯಷ್ಟಕಾತ್ಮಕಗಳಿಂದ ದೇಹಗಳಲ್ಲಿ ಮಾತ್ರವೇ ಗೋಚರವಾಗುವುದು.

ಸರ್ವಸಂಕಲ್ಪರಹಿತಾ ಸರ್ವಸಂಜ್ಞಾವಿವರ್ಜಿತಾ ।
ಸೈಷಾ ಚಿದವಿನಾಶಾತ್ಮಾ ತಜ್ಜ್ಞೇತ್ಯಾದಿಕೃತಾಭಿಧಾ ॥ ೭ ॥

ಆಕಾಶಶತಭಾಗಾಚ್ಛಾ ಜ್ಞೇಷು ನಿಷ್ಕಲರೂಪಿಣೀ ।
ಸಕಲಾಕಲಸಂಸಾರಸ್ವರೂಪೈಕಾತ್ಮ್ಯದರ್ಶಿನೀ ॥ ೮ ॥

ತರಂಗಾದಿಮಯಿಾ ಸ್ಫಾರಾ ನಾನಾತಾ ಸಲಿಲಾರ್ಣವೇ ।
ತಸ್ಮಾನ್ನ ವ್ಯತಿರೇಕೇಣ ಯಥಾ ಭಾವವಿಕಾರಿಣೀ ॥ ೯ ॥

ತ್ವತ್ತಾಮತ್ತಾ ಮಯೀ ಸ್ಫಾರಾ ನಾನಾತೇಯಂ ಚಿದಾರ್ಣವೇ ।
ಚಿನ್ಮಾತ್ರವ್ಯತಿರೇಕೇಣ ತಥಾ ನೈವ ಪ್ರಕಾಶತೇ ॥ ೧೦ ॥

[ಭೂತಗಳು, ಇಂದ್ರಿಯಗಳು, ಪ್ರಾಣವಾಯುಗಳು, ಮನಸ್ಸು, ಬುದ್ಧಿ, ಕರ್ಮ, ವಾಸನೆ, ಅವಿದ್ಯೆ ಇವುಗಳ ಸಮೂಹಕ್ಕೆ ಪುರ್ಯಷ್ಟಕವೆಂದು ಸಂಜ್ಞೆ.]

೭. ಈ ಚಿತ್ತು ಸಕಲ ಸಂಕಲ್ಪರಹಿತವಾಗಿಯೂ, ಸಕಲ ಸಂಜ್ಞಾಶೂನ್ಯವಾಗಿಯೂ ಅವಿನಾಶಿ ಸ್ವರೂಪವಾಗಿಯೂ ಇರುವುದು. ಆದುದರಿಂದ, ಇದರಲ್ಲಿ ದೃಶ್ಯ, ಜೀವ ಮುಂತಾದ ಸಂಜ್ಞೆಗಳು (ನಾಮಗಳು) ಕಲ್ಪಿತವಾಗಿರುವುವು. ಮತ್ತು ಇದು ಪ್ರತಿಬಿಂಬಿಸುವಿಕೆಯು. ತದಧೀನವಾದ ಕಾಮ, ಸಂಕಲ್ಪ, ನಾಮರೂಪಾದಿ ಭಾಜನತ್ವದಿಂದ ಮಾತ್ರವೇ ಹೊರತು ವಾಸ್ತವವಾದುದಲ್ಲ ಎಂದು ತಿಳಿಯಬೇಕು.

೮. ಈ ಚಿತ್ತು ಜ್ಞಾನಿಗಳ ಅನುಭವದಲ್ಲಿ ಆಕಾಶಕ್ಕಿಂತಲೂ ನೂರರಷ್ಟು ಹೆಚ್ಚು ನಿರ್ಮಲತರವಾಗಿಯೂ, ಸೂಕ್ಷ್ಮತರವಾಗಿಯೂ ಕಾಣುವುದು. ನಿರರ್ಥಕವಾದ (ಅಥವಾ ಅತಿ ಸೂಕ್ಷ್ಮ) ಸಕಲ ಸಂಸಾರ ಸ್ವರೂಪವುಳ್ಳದ್ದಾಗಿರುವುದು. ಆತ್ಮೈಕ್ಯವನ್ನು (ಅಭೇದವನ್ನು) ಪ್ರದರ್ಶಿಸುತ್ತಿರುವುದು.

[ಅಕಲಂ–ಅತ್ಯಂತ ಜೀರ್ಣವಾಗಿ (ಕಾರ್ಯಾಕ್ಷಮವಾಗಿ) ನಿರರ್ಥಕವಾದುದು. ಅಮಲಂ–ಎಂಬ ಪಾಠಾಂತರವನ್ನು ಇಟ್ಟುಕೊಂಡರೆ, ಮಾಯಾಮಲ ರಹಿತವಾದುದು ಎಂದರ್ಥ.]

೯–೧೦. ಈ ಕಾರಣದಿಂದಲೇ, ಸಮುದ್ರದ ಜಲದಲ್ಲಿ ತರಂಗ ಫೇನ ಬುದ್ಬುದ (ಅಲೆ, ನೊರೆ, ನೀರಿನಮೇಲಣ ಗುಳ್ಳೆ) ಇತ್ಯಾದಿ ಅನೇಕ ಪ್ರಕಾರಮಯವಾದ, ಭಾವ ವಿಕಾರಗಳುಳ್ಳ ನಾನಾತ್ವವು (ಅನೇಕತ್ವವು-ಭೇದವು) ಪ್ರಕಟವಾಗಿ (ಸ್ಫುಟ

ಚಿಚ್ಚಿನೋತಿ ಚಿತಂ ಚೇತ್ಯಂ ತೇನೇದಂ ಸ್ಥಿತಮಾತ್ಮನಿ ।
ಅಜ್ಞೇ ಜ್ಞೇ ತ್ವನ್ಯದಾಯಾತಮನ್ಯದಸ್ತೀತಿ ಕಲ್ಪನಾ ॥ ೧೧ ॥

ಅಜ್ಞೇಷ್ವಸತ್ಸ್ವಭಾವೋಗ್ರಸಂಸಾರಗಣಗರ್ಭಿಣೀ ।
ಜ್ಞೇಷು ಪ್ರಕಾಶರೂಪೈವ ಸಕಲೈಕಾತ್ಮಿಕಾ ಸತೀ ॥ ೧೨ ॥

ವಾಗಿ) ಕಂಡರೂ ಅವೆಲ್ಲವೂ ಸಮುದ್ರಜಲಕ್ಕಿಂತ ಪ್ರತ್ಯೇಕವಾಗಿ ಹೇಗೆ ಇಲ್ಲವೇ ಇಲ್ಲವೋ ಹಾಗೆಯೇ, 'ನೀನು, ನಾನು' 'ಅದು, ಇದು' ಮೊದಲಾದ ನಾನಾರೂಪಗಳಾಗಿ ಷಡ್ಭಾವವಿಕಾರಗಳಿಗೊಳಗಾಗಿ ಸರ್ವಾನುಭವ ಗೋಚರವಾಗಿ ಭ್ರಾಂತಿಯಿಂದ ಸ್ಫುರಿಸುತ್ತಲಿರುವ ಈ ಭೇದವು (ದ್ವೈತವು) ಚಿತ್ತಿನಲ್ಲಿ, ಕೇವಲವಾದ ಚಿತ್ತಿಗಿಂತ ಪೃಥಕ್ಕಾಗಿ ಎಂದೆಂದಿಗೂ ಪ್ರಕಾಶಿಸುವುದೇ ಇಲ್ಲ.

೧೧. ಅಯ್ಯಾ ರಾಮ, 'ಚಿತ್ತು ಚೇತ್ಯವನ್ನು (ದೃಶ್ಯ-ಜಗತ್ತು) ಪ್ರಕಟಪಡಿಸುವುದು' ಎಂದು ನೀನು ಭಾವಿಸುವೆಯಾದರೆ, ಆಗ 'ಚಿತ್ತು ಚಿತ್ತನ್ನೇ ಪ್ರಕಟಪಡಿಸುವುದು' ಎಂದು ಭಾವಿಸುವವನಾಗು. ಚಿತ್ತಿಗಿಂತ ಪ್ರತ್ಯೇಕವಾದ ಚೇತ್ಯವು ಬೇರೊಂದು ಇರುವುದೆಂದು ಭಾವಿಸಬೇಡ. ಹೀಗೆ ಮನನಮಾಡಿದ್ದೇ ಆದರೆ ಆಗ ಅದರಿಂದ ಚಿತ್ತು ತಾನು ತನ್ನಲ್ಲಿಯೇ ವ್ಯಾಪಾರಮಾಡುವುದು ಎಂಬುದು ಅಸಂಭವವಾಗುವ ಕಾರಣ ಈ ಚಿತ್‌ಸ್ವರೂಪವು ತನ್ನಲ್ಲಿಯೇ ಅವಿಕಾರಿಯಾಗಿ ಇರುವುದು; ಬೇರೆ ಯಾವುದೊಂದನ್ನೂ ಪ್ರಕಟಗೊಳಿಸುವುದಿಲ್ಲ ಎಂಬ ಅಂಶವು ಫಲಿಸುವುದು. (ಇದರಿಂದ ಚೇತ್ಯವೆಂಬುದು ಯಾವುದೊಂದು ಚಿತ್ತಿನಿಂದ ಬೇರೆಯಾಗಿ ಇಲ್ಲವೇ ಇಲ್ಲ. ಭ್ರಾಂತಿಯಿಂದ ಕಲ್ಪಿತವಾಗಿ ತೋರುವ ಈ ಚೇತ್ಯವು ತನಗೆ ಅಧಿಷ್ಠಾನವಾದ ಚಿತ್ತಿನಲ್ಲಿಯೇ ಇರುವುದು. ಇದಕ್ಕೆ ಬೇರೆ ಸತ್ತೆಯೇ ಇಲ್ಲವು. ಎಂಬುದು ನಿರ್ವಿವಾದವಾಯಿತು.) ಇದು ಪರಮಾರ್ಥದೃಷ್ಟಿಯು. ಆದರೆ, ಯಾವನು ತಾನು ಅಜ್ಞನಾಗಿದ್ದರೂ ತನ್ನನ್ನು ಪ್ರಾಜ್ಞನೆಂದು ತಿಳಿದಿರುವನೋ ಅವನ ದೃಷ್ಟಿಯಲ್ಲಿ 'ಈಗ ಒಂದು ಇದೆ, ಇನ್ನೊಂದು ಹೊಸದಾಗಿ ಈಗ ಬಂದಿತು, ಮತ್ತೊಂದು ಹೋಯಿತು.' ಇತ್ಯಾದಿ ಅನೇಕಾನೇಕ ಕಲ್ಪನೆಗಳು ಅಜ್ಞಾನ ವಿಜೃಂಭಿತಗಳಾಗಿ ತಲೆದೋರುವುವು.

೧೨. ಈ ಚಿತ್ತು ಅಜ್ಞಾನಿಗಳ ದೃಷ್ಟಿಯಲ್ಲಿ ಅಸತ್ಯ (ಮಿಥ್ಯಾ) ಸ್ವಭಾವಗಳಾಗಿಯೂ, ಅತಿ ಭಯಂಕರಗಳಾಗಿಯೂ ಇರುವ ಸಂಸಾರ ಪರಂಪರೆಗಳನ್ನು ತನ್ನೊಳಗೆ ಅಡಗಿಸಿಕೊಂಡದ್ದಾಗಿರುವುದು. ಪ್ರಾಜ್ಞರ ದೃಷ್ಟಿಯಿಂದಲಾದರೋ

ಅನುಭೂತಿವಶಾನ್ನಿತ್ಯಮರ್ಕಾದೀನಾಂ ಪ್ರಕಾಶಿನೀ ।
ಸ್ವಾದಿನೀ ಸರ್ವಭೂತಾನಾಂ ಭಾವಿನೀ ಭವಭೋಗಿನಾಂ ॥ ೧೩ ॥

ನಾಸ್ತಮೇತಿ ನ ಚೋದೇತಿ ನೋತ್ತಿಷ್ಠತಿ ನ ತಿಷ್ಠತಿ ।
ನ ಚಾಯಾತಿ ನ ವಾ ಯಾತಿ ನ ಚೇಹ ನ ಚ ನೇಹ ಚಿತ್ ॥ ೧೪ ॥

ಸದಾ ಸ್ವಯಂಜ್ಯೋತಿಸ್ಸ್ವರೂಪವಾಗಿಯೇ, ಅಖಂಡವಾಗಿಯೇ, ಅದ್ವಿತೀಯಾತ್ಮಕವಾಗಿಯೇ, ಪಾರಮಾರ್ಥಿಕ ಸತ್ತಾರೂಪವಾಗಿಯೇ ಇರುವುದು.

[ಶುಕ್ತಿರಜತಾದಿಗಳ ಸತ್ತೆಯು ಪ್ರಾತಿಭಾಸಿಕ ವ್ಯವಹಾರಯೋಗ್ಯವಾದ ಜಾಗ್ರದ್ದೃಶ್ಯದ ಸತ್ತೆಯು ವ್ಯಾವಹಾರಿಕ ಕಾಲತ್ರಯಾಬಾಧ್ಯವಾದ ಆತ್ಮ ಸತ್ತೆಯು ಪಾರಮಾರ್ಥಿಕ.]

೧೩. ಈ ಚಿತ್ತು ಸದಾ ಸರ್ವಾನುಭವಗೋಚವಾಗಿರುವುದರಿಂದ, ಸೂರ್ಯ ಚಂದ್ರಾದಿ ತೇಜಸ್ಸುಗಳಿಗೆಲ್ಲ ಇದೇ ಪ್ರಕಾಶಕವಾಗಿರುವುದು. ಸಕಲ ಪ್ರಾಣಿಗಳಿಗೂ ವಿಷಯ ರಸಾಸ್ವಾದನೆ ಮಾಡುವುದಕ್ಕೆ ಇದೇ ನಿಮಿತ್ತಭೂತವಾದುದು. ಸಂಸಾರ ಭೋಗಾನುಭವಮಾಡತಕ್ಕವರಿಗೆ ಇದೇ ಚಿನ್ಮಾದಿ ನಿಮಿತ್ತವಾಗಿಯೂ ಇರುವುದು.

["ನ ತತ್ರ ಸೂರ್ಯೋಭಾತಿ ನ ಚಂದ್ರತಾರಕಂ ನೇಮಾವಿದ್ಯುತೋ ಭಾಂತಿ ಕುತೋಯಮಗ್ನಿಃ । ತಮೇವ ಭಾಂತಮನು ಭಾತಿಸರ್ವಂ ತಸ್ಯಭಾಸಾಸರ್ವಮಿದಂ ವಿಭಾತಿ ॥" "ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಂ । ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋವಿದ್ಧಿಮಾಮಕಂ ॥" ಭಗವದ್ಗೀತಾ. "ಆನಂದಾದ್ಧ್ಯೇವಖಲ್ವಿಮಾನಿಭೂತಾನಿ ಜಾಯಂತೇ" ಇತ್ಯಾದಿ ತೈತ್ತಿರೀಯೋಪನಿಷತ್, ಇವುಗಳನ್ನು ಗಮನಿಸಿ]

೧೪. ಈ ಚಿತ್ತುಅಸ್ತವನ್ನು ಹೊಂದುವುದೂ ಇಲ್ಲ.ಎಂದಿಗೂ ಉದಯಹೊಂದುವುದೂ ಇಲ್ಲ. ಏಳುವುದೂ ಇಲ್ಲ. ಕೂಡುವುದೂ ಇಲ್ಲ. ಬರುವುದೂ ಇಲ್ಲ. ಅಥವಾ ಹೋಗುವುದೂ ಇಲ್ಲ. ಅದು 'ಇಲ್ಲಿ ಇದೆ' ಎಂಬುದೂ ಇಲ್ಲ. ಅದು ಅಲ್ಲಿ ಇಲ್ಲವೆಂಬುದೂ ಸುತರಾಂ ಇಲ್ಲವು. (ಹೀಗೆ ಚಿತ್ತು ಜನನಾದಿ ಯಾವ ವಿಕಾರಗಳೂ ಸುತರಾಂ ಇಲ್ಲದೆ ಸರ್ವದಾ ಸರ್ವತ್ರ ಸರ್ವಾನುಗತವಾಗಿ, ಸರ್ವಾನುಭವಗೋಚರವಾಗಿ, ಸರ್ವಾತ್ಮಕವಾಗಿದ್ದುಕೊಂಡಿದೆ.) [ಅಜ್ಞರ ಜನ್ಮಾದಿಗಳಿಗೆ ನಿಮಿತ್ತವಾಗಿ

ಸೈಷಾ ಚಿದಮಲಾಕಾರ ಸ್ವಯಮಾತ್ಮನಿ ಸಂಸ್ಥಿತಾ ।
ರಾಘವೇತ್ಥಂ ಪ್ರಪಂಚೇನ ಜಗನ್ನಾಮ್ನಾ ವಿಜೃಂಭತೇ ॥ ೧೫ ॥

ತೇಜಃಪುಂಜೈರ್ಯಥಾ ತೇಜಃ ಪಯಃಪೂರೈರ್ಯಥಾ ಪಯಃ ।
ಪರಿಸ್ಫುರತಿ ಸಂಸ್ಪಂದೈಸ್ತಥಾ ಚಿತ್ಸರ್ಗವಿಭ್ರಮೈಃ ॥ ೧೬ ॥

ತತ್ಸ್ವಭಾವೇನ ಚಿನ್ನಾಮ್ನಾ ಸರ್ವಗೇನೋದಿತಾತ್ಮನಾ ।
ಪ್ರಕಾಶೇನಾಪ್ರಕಾಶೇನ ನಿರಂಶೇನಾಂಧಾರಿಣಿ ॥ ೧೭ ॥

ಸ್ವಯಂ ಸ್ವಕಲನಾಭೋಗಾದನಂತಂ ಪದಮುಜ್ಝತಾ ।
ಅಹಮಸ್ಮೀತಿ ಭಾವೇನ ಗಚ್ಛತಾ ಜ್ಞಪದಂ ಶನೈಃ ॥ ೧೮ ॥

ನಾನಾತಾಯಾಂ ಪ್ರರೂಢಾಯಾಮಸ್ಯಾಂ ಸಂಸೃತಿಪೂರ್ವಕಂ ।
ಭಾವಾಭಾವಗ್ರಹೋತ್ಸರ್ಗಪದೇ ಸ್ಥಿತಿಮುಪಾಗತೇ ॥ ೧೯ ॥

ಪುರ್ಯಷ್ಟಕಸ್ಪಂದಶತೈಃ ಕರೋತಿ ನ ಕರೋತಿ ಚ ।
ಉತ್ಸೇಧನೇತಿ ಭೂಕೋಶಕೋಟರಸ್ಥೋಽಂಕುರೋತ್ಕರಃ ॥ ೨೦ ॥

ದ್ದರೂ, ಪ್ರಾಜ್ಞದೃಷ್ಟಿಯಿಂದ ಈ ಚಿತ್ತು ಕೂಟಸ್ಥವೂ ಅಪರಿಚ್ಛಿನ್ನವೂ, ಸದಾ ಏಕರೂಪವೂ ಆಗಿದೆ. ಎಂದು ತಾತ್ಪರ್ಯ.]

೧೫. ಅಯ್ಯಾ ರಾಘವ, ಪೂರ್ವೋಕ್ತಪ್ರಕಾರವಾಗಿ ಅತ್ಯಂತ ನಿರ್ಮಲಸ್ವರೂಪವಾದ ಆ ಚಿತ್ತು, ತನ್ನಲ್ಲಿಯೇ ತಾನು ಇದ್ದುಗೊಂಡು (ಅವಿಕಾರಿಯಾಗಿಯೇ) ಹೀಗೆ ಇಷ್ಟು ಬಗೆಬಗೆಯಾಗಿ ಬಹು ವಿಸ್ತೃತವಾಗಿರುವ ಜಗತ್ ಎಂಬ ಹೆಸರಿನಿಂದ ವಿವರ್ತಿತವಾಗಿರುವುದು.

೧೬. (ಇಂತಹ ಚಿತ್ತಿನ ವಿವರ್ತವೂ ಕೂಡ ಪರಮಾರ್ಥತಃ ಚಿತ್ತೇ ಬೇರೆಯಲ್ಲ. ಹೇಗೆಂದರೆ) ತೇಜಸ್ಸು ಸ್ವಲ್ಪ ಚಲನೆಯನ್ನು ಪಡೆದು ಅನೇಕ ವಿಧಗಳಿಂದ ತೇಜೋರಾಶಿಗಳಾಗಿ ಹೇಗೆ ಕಾಣಿಸುವುದೋ ಮತ್ತು ಜಲವು ಚಲನೆಯನ್ನು ಹೊಂದಿ (ಅನೇಕ ಪ್ರವಾಹಗಳಾಗಿ ಹರಿದು) ಅನೇಕ ಜಲರಾಶಿಗಳಾಗಿ ಹೇಗೆ ಕಾಸುವುದೋ ಹಾಗೆಯೇ ಈ ಚಿತ್ತು ಸ್ವಲ್ಪಮಾತ್ರ ಚಲನೆ ಹೊಂದಿ ನಾನಾಕಾರಣಗಳಾದ ಪ್ರಪಂಚರೂಪವಾಗಿ (ಭ್ರಾಂತಿಯಿಂದ) ಸ್ಫುರಿಸುವುದು.

೧೭–೨೦. (ಆತ್ಮನು ಸ್ವತಃ ನಿತ್ಯ ಶುದ್ಧನಾಗಿದ್ದರೂ ಕೂಡ, ಅವಿದ್ಯೆಯಿಂದ

ವ್ಯೋಮ ಸೌಷಿರ್ಯಮಾದತ್ತೇ ಸರ್ವಮೂರ್ತ್ಯವಿರೋಧಿ ಯತ್ ।
ಸ್ಪಂದೈಕಧರ್ಮವಾನ್ವಾತೋ ರಸರೂಪತಯಾ ಜಲಂ ॥ ೨೧ ॥

ಸೃಷ್ಟಿವಿಭ್ರಮಾಕಾರವಾಗಿ ಸ್ಫುರಿಸುವುದರಿಂದಲೇ ಸೃಷ್ಟಿಕರ್ತನೆನ್ನಿಸುವನು. ಬೇರೆ ವಿಧದಿಂದಲ್ಲವು. ಅದು ಹೇಗೆಂದರೆ) ಆತ್ಮಸ್ವರೂಪವು ಚಿತ್ ಎಂಬ ಹೆಸರುಳ್ಳದ್ದು. ಇದು ವ್ಯವಹಾರದಶೆಯಲ್ಲಿ ಸರ್ವಗತವೂ ಉದಯದಿಂದ ಕೂಡಿದುದೂ ಆಗಿರುವುದು. ಇದು ಸ್ವಭಾವತಃ ಪ್ರಕಾಶಾತ್ಮಕವು (ಜ್ಞಾನಸ್ವರೂಪವು) ಆದರೆ ವ್ಯವಹಾರದಲ್ಲಿ "ನಾಹಂ ಜಾನಾಮಿ" (ನನಗೆ ತಿಳಿಯದು-ನಾನು ಅಜ್ಞನು) ಎಂದು ತಿಕದುಕೊಳ್ಳು ವುದರಿಂದ, ಅಪ್ರಕಾಶವೂ ಆಗಿರುವುದು. ವಸ್ತುತಃ ನಿರವಯುವವಾದರೂ ಭ್ರಾಂತಿ ಯಿಂದ ಸಾವಯುವವಾಗಿರುವಂತೆ ತೋರುವುದು. ಅವಿದ್ಯೆಯಲ್ಲಿ ತಾನು ಪ್ರತಿ ಬಿಂಬಿಸುವಿಕೆಯೆಂಬ ಕೃತಿಮವೇಷದಿಂದ ಅಪರಿಚ್ಛಿನ್ನವಾದ (ಪರಿಪೂರ್ಣವಾದ-ಅಖಂಡವಾದ) ಸ್ವಸ್ವರೂಪವನ್ನು ಮರೆತುಬಿಟ್ಟಿರುವಂತೆ ಕಾಣುವುದು. 'ಅಹಂ ಅಸ್ಮಿ' (ನಾನು ಹೀಗೆ ಇದ್ದೇನೆ) ಎಂಬ ಅಭಿಮಾನದಿಂದ ಕ್ರಮೇಣ ಜೀವಭಾವವನ್ನು ಪಡೆಯುವುದು. ಇಂತಹ ಚಿದ್ವಸ್ತುವಿನಿಂದ ಜನನಮರಣ ಪ್ರವಾಹರೂಪ ಸಂಸಾರ ಪೂರ್ವಕವಾಗಿ ಈ ಬಹುವಿಧವಾದ ಭೇದಜ್ಞಾನವು ವಿರೂಢವಾಗುವುದು. (ದೃಢ ಪಡುವುದು.) ಇದು ಇದೆ; ಇದು ಇಲ್ಲ; (ಭಾವ, ಅಭಾವ) ಇದು ಹೇಯ; ಇದು ಉಪಾದೇಯ. (ಗ್ರಹ-ಉತ್ಸರ್ಗ) ಎಂಬ ಬುದ್ಧಿಗಳಿಗೆ ಆಸ್ಪದವಾದ ದೇಹಾತ್ಮ ಭಾವವು ಸ್ಥಿರವಾಗಿ ನಿಲ್ಲುವುದು. ಬಳಿಕ, ಆತ್ಮಭಾವವನ್ನು ಅಧ್ಯಾಸಮಾಡಿದ (ಆರೋಪಿಸಿದ) ಪುರ್ಯಷ್ಟಕದ (ದೇಹದ) ಅನೇಕ ಚಲನಗಳೆಂಬ ವಿಹಿತ ನಿಷಿದ್ಧ ಕರ್ಮಗಳಿಂದ ಭೋಗ್ಯವಾದ ಜಗತ್ತನ್ನು ಸೃಷ್ಟಿಸಿಕೊಳ್ಳುವುದು. ಪಾರಮಾರ್ಥಿಕ ದೃಷ್ಟಿಯಿಂದಲಾದರೋ ಅದು ಸೃಷ್ಟಿಮಾಡುವುದೇ ಇಲ್ಲ. ಅಂದರೆ ಈ ಸೃಷ್ಟಿಯೂ ಅಸತ್ಯವೇ. ಮತ್ತು ಈ ಸ್ಥಿತಿಯಲ್ಲಿ, ಭೂಗರ್ಭವೆಂಬ ಕೋಟರದೊಳಗಿರುವ ಬೀಜಾಂಕುರಗಳ ಸಮೂಹವು ಅಭಿವೃದ್ಧಿಹೊಂದುವುದು.

೨೧. (ಹೀಗೆ ಭೂಗರ್ಭದಿಂದ ಅಂಕುರ ರೂಪವಾಗಿ ವೃದ್ಧಿಹೊಂದುವುದಕ್ಕೂ ಕೂಡ, ಚಿತ್ತು ಇತರ ಭೂತಗಳ ಭಾವದಿಂದ ಸಹಾಯವನ್ನೆಸಗುವುದು. ಹೇಗೆಂದರೆ–) ಸರ್ವ ಪ್ರಾಣಿಗಳಿಗೂ ಅವಿರೋಧಿಯಾದ ಆಕಾಶವು, ಅಂಕುರಕ್ಕೆ ಹೊರಹೊರಡಲು ಅನುಕೂಲಿಸುವಂತೆ ಅವಕಾಶವನ್ನು ಕಲ್ಪಿಸಿಕೊಡುವುದು. ಸರ್ವದಾ ಚಲನ ಸ್ವಭಾವವುಳ್ಳ ವಾಯುವು ಅಂಕುರವನ್ನು ಮೇಲಕ್ಕೆ ಏಳುವಂತೆ ಸೆಳೆಯುವುದು. ಜಲವು ತನ್ನ ರಸದಿಂದ ಅಂಕುರವನ್ನು ನೆನೆಯಿಸಿ ಬೆಳೆಯಿಸುವುದು.

ದೃಢೋರ್ವೀ ಪ್ರಕಟಂ ತೇಜಃ ಸ್ಥಿತಿಮಂತಿ ಜಗಂತಿ ಚ ।
ಪ್ರತಿಬಂಧಾಭ್ಯನುಜ್ಞಾಸು ಕಾಲಃ ಕಲನಯಾ ಸ್ಥಿತಃ ॥ ೨೨ ॥

ಪುಷ್ಪೇಷು ಗಂಧತಾಂ ಯಾತಿ ಶನೈಃ ಸಂಚಿತಕೇಸರಂ ।
ವೃತ್ಕ್ಯೋಟರರಸೋಲ್ಲಾಸಃ ಸ್ಥಾಣುತಾಮೇತಿ ಭೂತಲೇ ॥ ೨೩ ॥

ಮೂಲಸ್ಥಾಃ ಫಲಮಾಯಾಂತಿ ಪೇಲವಾ ರಸಲೇಶಕಾಃ ।
ಸಂನಿವೇಶಂ ವ್ರಜಂತ್ಯೇತಾ ರೇಖಾಃ ಪಲ್ಲವಪಾಲಿಷು ॥ ೨೪ ॥

ನವತಾಮನುಗೃಹ್ಣಾತಿ ಶಕ್ರಬಾಣಾಸನೇನ ಚ ।
ಯೋಯೋ ಭವತ್ಯವಿರತಂ ಸಂಸ್ಥಾನೇನ ವನೇನ ಚ ॥ ೨೫ ॥

---

೨೨. ಹೀಗೆಯೇ, ಅಂಕುರದ ಮೂಲವು ದೃಢವಾಗಿ ನಿಲ್ಲುವುದಕ್ಕಾಗಿ ಭೂಮಿಯು ದೃಢವಾಗುವುದು. ತೇಜಸ್ಸು ರೂಪವನ್ನುಂಟುಮಾಡಿ ಪ್ರಕಟಗೊಳಿಸುವುದು. ಹೀಗೆಯೇ ಎಲ್ಲ ಜಗತ್ತುಗಳೂ ಸ್ಥಿತಿಯನ್ನು ಕೊಡುವುದರಿಂದಲೂ ವಿಘಾತಪಡಿಸದಿರುವುದರಿಂದ ಆಯಾ ಕಾರ್ಯಗಳಿಗೆ ಅನುಕೂಲಗಳಾಗುವುವು. ಮತ್ತು ಹೇಮಂತ ಮುಂತಾದ ಕಾಲವು ಬತ್ತ, ಗೋಧಿ ಮುಂತಾದ ಉತ್ತಮ ಫಲ ಸಸ್ಯಗಳ ಬೆಳವಣಿಗೆಗೆ ವಿರೋಧಕರವಾದ ಕಳೆ, ಹುಲ್ಲು ಮೊದಲಾದವು ಹುಟ್ಟದಂತೆ ಪ್ರತಿಬಂಧ ಮಾಡುತ್ತಲೂ, ಫಲಸಸ್ಯಗಳ ಬೆಳೆಗೆ ಅನುಕೂಲ ಮಾಡುತ್ತಲೂ ಬೀಜಗಳಿಗೆ ಪರಿಣಾಮಾವಸ್ಥೆಯನ್ನು ಉಂಟುಮಾಡುವುದು.

೨೩. (ಚಿತ್ತು ಪೂರ್ವಪುಣ್ಯಾದಿಭಾವಾಪನ್ನವಾಗಿ ಗಂಧಾದಿರೂಪದಿಂದ ವಿವರ್ತವಾಗುವುದು. ಹೇಗೆಂದರೆ–) ಆ ಚಿತ್ತು, ಹೂಗಳಲ್ಲಿ ಕ್ರಮವಾಗಿ ಕೇಸರ, ಪರಾಗಾದಿಗಳನ್ನು ಕೂಡಿಸಿಕೊಂಡು ಗಂಧರೂಪವನ್ನು ಪಡೆಯುವುದು. ಭೂಮಿಯಲ್ಲಿ ಮಣ್ಣಿನೊಳಗಡೆ ಇರುವ ರಸರೂಪದಿಂದ ಉಲ್ಲಾಸಗೊಂಡು ವೃಕ್ಷದ ರೂಪವನ್ನು ಧರಿಸುವುದು.

೨೪. ಅಂತೆಯೇ ಬೇರುಗಳಲ್ಲಿರುವ ಅತಿ ಸೂಕ್ಷ್ಮವಾದ ರಸಲವ ಭಾವಾಪನ್ನವಾಗಿ ಚಿತ್ತು ಫಲರೂಪವನ್ನು ಹೊಂದುವುದು. ಈ ರಸಗಳೇ ಎಲೆಗಳ ಮಧ್ಯದಲ್ಲಿ ಪ್ರವೇಶಿಸಿ (ಗೆರೆ) ರೇಖೆಗಳಾಗಿ ಚಿಗುರು, ಎಲೆ ಮೊದಲಾದ ಆಕಾರವನ್ನು ಧರಿಸುವುದು.

೨೫, ಈ ಚಿತ್ತು ಇಂದ್ರಧನುಸ್ಸಿಗೆ (ಕಾಮನಬಿಲ್ಲು) ಸಮನಾದ ನೂತನತ್ವವನ್ನು (ಹೊಸಭಾವನ್ನು) ವೃಕ್ಷಕ್ಕೆ ಸಂಪಾದಿಸಿಕೊಟ್ಟು ಅನುಗ್ರಹ ಮಾಡುತ್ತದೆ.

ವಸಂತಮುಪತಿಷ್ಠಂತಿ ಪುಷ್ಪಪಲ್ಲವರಾಶಯಃ ।
ನಿದಾಘವಿಧಿಮಾಯಾಂತಿ ದೈವದಾಹವಿಭೂತಯಃ ॥ ೨೬ ॥

ಪ್ರಾವೃಟ್ಸಮಯಮಾಹಂತೇ ನೀಲಾ ಜಲದರಾಶಯಃ ।
ಶರದಂ ಚಾನುಧಾವಂತಿ ಸಮಗ್ರಾಃ ಫಲರಾಶಯಃ ॥ ೨೭ ॥

ಹೇಮಂತೇ ಹಿಮಹಾಸಿನ್ಯೋ ಭವಂತಿ ಕಕುಭೋ ದಶ ।
ನಯಂತ್ಯುಪಲತಾಂಬು ಶಿಶಿರೇ ಶೀತಲಾನಿಲಾಃ ॥ ೨೮ ॥

ನ ಜಹಾತಿ ಸ್ವಮರ್ಯಾದಾಂ ಕಾಲೋ ಯುಗಮಯೀಮಿಮಾಂ ।
ತರಂಗಿಣೀತರಂಗೌಘಲೀಲಯಾ ಯಾಂತಿ ಸೃಷ್ಟಯಃ ॥ ೨೯ ॥

ಮತ್ತು ಸಂತತವೂ ಹೊಸ ಹೊಸದಾದ ಬೇರೆ ಬೇರೆ ಸನ್ನಿವೇಶ (ಆಕಾರ)ವನ್ನು ಹೊಂದುತ್ತ ನೂತನತ್ವವನ್ನು ಸಂಪಾದಿಸುವ ಅನುಗ್ರಹವಾಗುವುದು.

೨೬-೨೮. (ಈ ಚಿತ್ತು ಋತು ರೂಪದಿಂದಲೂ ಕಾರ್ಯಕ್ಕೆ ಸಹಕಾರಿಯಾಗಿರುವುದು. ಹೇಗೆಂದರೆ–) ಪುಷ್ಪಗಳ ಮತ್ತು ಪಲ್ಲವಗಳ ರಾಶಿಗಳು ವಸಂತಋತುವನ್ನು ಸೇವಿಸುವುವು. ಸೂರ್ಯನ ತೇಜಸ್ಸಿನಲ್ಲಿರುವ ತಾಪಶಕ್ತಿಗಳು ಗ್ರೀಷ್ಮಋತುವನ್ನು ಸೇರುವುವು. ಕಪ್ಪಾದ ಮೇಘಪಂಗ್ತಿಗಳು ವರ್ಷಾಕಾಲವನ್ನು ಆಶಿಸುವುವು. ಸಂಪೂರ್ಣಗಳಾದ ಸಕಲ ಫಲರಾಶಿಗಳೂ ಶರತ್ಕಾಲವನ್ನು ಅನುಸರಿಸಿಕೊಂಡಿರುವುವು. ಹೇಮಂತಋತುವಿನಲ್ಲಿ ಹತ್ತು ದಿಕ್ಕುಗಳೂ ಹಿಮಮಯವಾಗಿ ಕಿರುನಗೆಯನ್ನು ಸೂಸುವಂತೆ ಕಾಣುವುವು. ಶಿಶಿರಋತುವಿನಲ್ಲಿ ತಣ್ಣಗಿರುವ ವಾಯುಗಳು ಬೀಸಿ ನೀರನ್ನು ಕಲ್ಲಿನಂತೆ ಗಡ್ಡೆ ಕಟ್ಟಿಸುವುವು.

೨೯. ಮತ್ತು ಈ ಚಿತ್ತಿನ ಭಾವದಿಂದಲೇ ಕಾಲವು ಯುಗರೂಪವಾದ ತನ್ನ ವ್ಯವಸ್ಥೆಯನ್ನು ಬಿಡದೆ ನಡೆಯಿಸುವುದು. ಈ ವಿಧವಾಗಿ ನದಿಯ ತರಂಗ ಸಮುದಾಯಗಳಂತೆ ಸೃಷ್ಟಿಗಳು ಲೀಲಾರೂಪವಾಗಿ ಹೋಗುತ್ತಲೂ ಬರುತ್ತಲೂ ಇರುವುವು.

೩೦. ಈ ಚಿತ್ತೇ ನಿಯತಿ (ವಿಧಿ-ದೈವ)ರೂಪದಿಂದ ಜಗತ್ತಿನ ಸ್ಥಿತಿಯನ್ನು ವ್ಯವಸ್ಥೆಮಾಡುವುದು. ಸ್ಥೈರ್ಯ ರೂಪ ಚಾತುರ್ಯವನ್ನು ಮಾಡಿ ತೋರಿಸುವುದು. ಸಕಲ ಪ್ರಾಣಿಗಳಿಗೂ ವಸ್ತುಗಳಿಗೂ ಆಧಾರವಾದ ಸ್ವಭಾವವುಳ್ಳದ್ದಾಗಿ ಭೂಮಿಯ ರೂಪದಿಂದ ಪ್ರಳಯಕಾಲ ಪರ್ಯಂತ ಧೀರವಾಗಿ ನಿಲ್ಲುವುದು.

ನಿಯತಿಃ ಸ್ಥಿತಿಮಾಯಾತಿ ಸ್ಥೈರ್ಯಚಾತುರ್ಯಕಾರಿಣೀ ।
ತಿಷ್ಠತ್ಯಾಪ್ರಲಯಂ ಧೀರಾ ಧಾರಾಧರಣಧರ್ಮಿಣೀ ॥ ೩೦ ॥

ಚತುರ್ದಶವಿಧಾನೀಹ ಭೂತಾನಿ ಭುವನಾಂತರೇ ।
ನಾನಾಚಾರವಿಹಾರಾಣಿ ನಾನಾವಿರಚನಾನಿ ಚ ॥ ೩೧ ॥

ಪುನಃ ಪುನರ್ವಿಲೀಯಂತೇ ಜಾಯಂತೇ ಚ ಪುನಃ ಪುನಃ ।
ಧಾರಾಪರಂಪರಾ ಯಾತಿ ವಿನಾ ವಾರೀವ ಬುದ್ಬುದಾಃ ॥ ೩೨ ॥

ಆಯಾತಿ ಯಾತಿ ಪರಿತಿಷ್ಠತಿ ಲೀಲಯಾತಿ
ಸ್ವಾರ್ಥಾನುಪಾರ್ಜಯತಿ ಧಾವತಿ ಜನ್ಮನಾಶೈಃ ।
ಉನ್ಮತ್ತವದ್ವಿಹಿತಭಾವನಮಾಹಿತೇಹಾ
ಮುಗ್ಧಾ ಕೃತಾಂತವಿವಶಾ ಜನತಾ ವರಾಕೀ ॥ ೩೩ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಸ್ಥಿತಿಪ್ರಕರಣೇ
"ಚಿದಾದಿತ್ಯಸ್ವರೂಪವರ್ಣನಂ" ನಾಮ ಷಟ್‌ತ್ರಿಂಶಃ ಸರ್ಗಃ

೩೧–೩೨. ಚತುರ್ದಶ (ಹದಿನಾಲ್ಕು) ಲೋಕಗಳಲ್ಲಿರುವ ಅನೇಕ ವಿಧಗಳಿಂದ ಆಚಾರಗಳೂ, ವಿಹಾರಗಳೂ, ವ್ಯವಹಾರಗಳೂ ಉಳ್ಳ ಹದಿನಾಲ್ಕುವಿಧ ಪ್ರಾಣಿವರ್ಗಗಳೂ ಕೂಡ ಈ ಚಿತ್ತೇ ಅಲ್ಲದೆ ಬೇರೆಯಿಲ್ಲ. ಇವುಗಳು ಮತ್ತೆಮತ್ತೆ ಲಯ ಹೊಂದುತ್ತಲೂ ಪುನಃ ಪುನಃ ಉದಯಿಸುತ್ತಲೂ ಇವೆ. ಇಂತಹ ಈ ಭೂತಸಂಘಗಳ ಅನುಸ್ಯೂತವಾದ (ಧಾರಾಕಾರವಾದ) ಜನನ ಮರಣ ಪರಂಪರೆಯು ನೀರಿನ ಮೇಲೆ ಕಾಣುತ್ತಿದ್ದ ಗುಳ್ಳೆ (ಬುದ್ಬುದ)ಗಳು (ಸೂರ್ಯಾತಪದಿಂದ) ನೀರು ಒಣಗಿ ಇಲ್ಲವಾದಾಗ ಅಡಗಿಹೋಗುವಂತೆ ತತ್ತ್ವಜ್ಞಾನೋದಯದಿಂದ ಅವಿದ್ಯಾನಾಶವಾದೊಡನೆಯೇ ಸ್ವತಏವ ಸುತರಾಂ ಅಡಗಿಹೋಗುವುದು.

೩೩. ಅತಿ ತುಚ್ಛವಾದ ಈ ಜನಸಮುದಾಯವು (ಅನೇಕ ಕೋಟಿ ಬ್ರಹ್ಮಾಂಡ ರೂಪವಾಗಿಯೂ, ಆ ಬ್ರಹ್ಮಾಂಡಗಳೊಳಗಿರುವ ಸಕಲ ಪ್ರಾಣಿ ರೂಪವಾಗಿಯೂ ಇರುವ ಲೋಕಗಳ ಸಮುದಾಯವು) ಜನ್ಮಾಂತರೀಯ ಕರ್ಮ ವಾಸನಾನುಸಾರವಾಗಿ ಉದ್ಭವಿಸಿದ ಕಾಮನೆಯುಳ್ಳದ್ದಾಗಿ, ನಿಯತಿಪರವಶವಾಗಿ, ಆತ್ಮಸ್ವರೂಪ

ವಿಚಾರವೂ ಜ್ಞಾನವೂ ಇಲ್ಲದೆ, ಮೋಹಿತವಾಗಿ ಹುಚ್ಚನಂತೆ ಈ ಲೋಕದಲ್ಲಿ ಮತ್ತೆ ಮತ್ತೆ ಬರುತ್ತಲೂ ಪುನಃ ಪರಲೋಕಗಳಿಗೆ ಹೋಗುತ್ತಲೂ ಇರುವುದು. ತನ್ನ ಸುತ್ತಲೂ ಸ್ಥಾವರಾದಿ ಜನ್ಮಗಳನ್ನು ಪಡೆದು ಇರುವುದು. ಭೋಗೇಚ್ಛೆಯಿಂದ ಅತಿಶಯವಾಗಿ ಐಹಿಕಾಮುಷ್ಮಿಕ ಭೋಗೋಪಾಯಿಗಳಾದ ಧನ ಧರ್ಮಾದಿ ಸ್ವಾರ್ಥ ಗಳನ್ನು ಸಂಪಾದನೆ ಮಾಡುವುದು. ಕ್ರಮವಾಗಿ ಮೇಲಿಂದಮೇಲೆ ಜನನಮರಣ ಗಳನ್ನು ಪಡೆಯುತ್ತಾ ಈ ಸಂಸಾರಮಾರ್ಗದಲ್ಲಿ ಓಡುತ್ತ ತೊಳಲುತ್ತಿರುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ಚಿದಾದಿತ್ಯಸ್ವರೂಪವರ್ಣನ"ಎಂಬ ಮೂವತ್ತಾರನೆಯ ಸರ್ಗವು.

ಸಪ್ತತ್ರಿಂಶಃ ಸರ್ಗಃ

ಶ್ರೀವಸಿಷ್ಠ ಉವಾಚ—

ಇತ್ಥಂ ಸ್ಥಿರತರಾಕಾರಾಃ ಸಂಸಾರಾವಲಯೋಽಭಿತಃ ।
ಸ್ವಭಾವಾದ್ಬ್ರಹ್ಮಣಃ ಸರ್ವಾಃ ಪುನರಾಯಾಂತಿ ಯಾಂತಿ ಚ ॥ ೧ ॥

ಸ್ವತಃ ಸರ್ವಮಿದಂ ಜಾತಮನ್ಯೋನ್ಯಂ ಹೇತುತಾಂ ಗತಂ ।
ಅನ್ಯೋನ್ಯಮಭಿನಶ್ಯತ್ತತ್ಸ್ವತ ಏವ ವಿಲೀಯತೇ ॥ ೨ ॥

ಸ್ವತೋಽಸ್ಪಂದೋಽಪಿ ತು ಸ್ಪಂದೋ ಯಥಾ ಗಾಧಜಲೋದರೇ ।
ತಥೈವೇಯಮಸತ್ಸಚ್ಚ ಚಿದೇವ ಪರಿದೃಶ್ಯತೇ ॥ ೩ ॥

ಮೂವತ್ತೇಳನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ರಾಮ, ಪೂರ್ವಸರ್ಗದಲ್ಲಿ ವರ್ಣಿಸಿದ ರೀತಿಯಾಗಿ, ಅತ್ಯಂತ ಸ್ಥಿರವಾದ ಆಕಾರವುಳ್ಳ ಸರ್ವ ಜಗತ್ಸಮುದಾಯಗಳು ಸ್ವಭಾವವಾದ ಬ್ರಹ್ಮನ ದೆಸೆಯಿಂದಲೇ ಪುನಃ ಪುನಃ ಬರುತ್ತಲೂ ಹೋಗುತ್ತಲೂ ಇರುವುವು. (ಚಿತ್ತೇ ಜಗದ್ರೂಪವಾಗಿ ಅವಸ್ಥಿತವಾಗಿರುವುದರಿಂದ ಚಿತ್ಸ್ವರೂಪ ಸ್ಥಿತಿಯೇ ಜಗತ್ ಸ್ಥಿತಿಯೆಂದು ಅರ್ಥ.)

೨. ಹೀಗೆ ಪರಸ್ಪರ ಕಾರಣಭೂತವಾಗಿರುವ ಈ ಸಕಲ ಜಗತ್ತು ತನಗೆ ಅಧಿಷ್ಠಾನವಾದ ಚೈತನ್ಯದ ದೆಸೆಯಿಂದಲೇ ಉದಯಿಸಿರುವುದು. ಅದು ಅನ್ಯೋನ್ಯ ಕಾರಣವಾಗಿ ನಾಶಹೊಂದುವಾಗಲೂ ಸ್ವತ ಏವ ಸ್ವಾಧಿಷ್ಠಾನವಾದ ಬ್ರಹ್ಮನಲ್ಲಿಯೇ ಲಯ ಹೊಂದುವುದು.

೩. ಅಗಾಧವಾದ ಜಲಾಶಯದ ಮಧ್ಯದಲ್ಲಿ ಜಲದಿಂದ ವ್ಯಾಪ್ತವಾಗದಿರುವ ಪ್ರದೇಶವು ಸ್ವಲ್ಪವೂ ಇಲ್ಲದಿರುವ ಕಾರಣ, ನೀರು ಸ್ವಲ್ಪ ಚಲಿಸಿದರೂ ಅದು

ವ್ಯೋಮನ್ಯೇವ ನಿರಾಕಾರೇ ನಿದಾಘಾತ್ಸರಿತೋ ಯಥಾ ।
ಲಕ್ಷ್ಯಂತೇ ತದ್ವದೇವೇಮಾಶ್ಚಿತ್ತತ್ತ್ವೇ ಸೃಷ್ಟಿದೃಷ್ಟಯಃ ॥ ೪ ॥

ಯಥಾ ಮದವಶಾದಾತ್ಮಾ ಸೋಽನ್ಯವತ್ಪ್ರತಿಭಾಸತೇ ।
ತಥೈವ ಚಿತ್ತ್ವಾಚ್ಚಿದ್ಧಾತುಃ ಸ ಏವಾಸ ಇವ ಸ್ಥಿತಃ ॥ ೫ ॥

ನ ಚೇದಂ ಸದಸನ್ನೇದಂ ತತ್ಸ್ಥಾತತ್ಸ್ಥತಯಾ ಚಿತಃ ।
ನಾತಿರಿಕ್ತಾತಿರಿಕ್ತಾ ಚ ಕಟಕಾದಿಷು ಹೇಮತಾ ॥ ೬ ॥

ಅಸ್ಪಂದವಾಗಿಯೇ (ಚಲನವಿಲ್ಲದುದಾಗಿಯೇ) ಕಾಣುವಂತೆ, ಈ ಚಿತ್ತೇ ಸ್ವತಃ ಸತ್ತಾಗಿಯೂ, ಅಸತ್ ಆಗಿಯೂ ಕಾಣಲ್ಪಡುವುದು.

೪. ವಸ್ತುತಃ ನಿರಾಕಾರವಾದ ಆಕಾಶದಲ್ಲಿಯೇ ಸೂರ್ಯಾತಪದ ತೀಕ್ಷ್ಣತೆಯಿಂದ (ಭ್ರಾಂತಿಯ ಮೂಲಕ) ಮೃಗತೃಷ್ಣಿಕೆಗಳು (ಮರೀಚಿಕೆ-ಬಿಸಿಲ್ಗುದುರೆ) ಹೇಗೆ ಕಾಣಿಸಿಕೊಳ್ಳುವುದೋ ಹಾಗೆಯೇ ನಿರಾಕಾರವಾದ ಚಿತ್ತತ್ತ್ವ (ಚಿತ್‌ತತ್ತ್ವ) ದಲ್ಲಿ ಈ ಸೃಷ್ಟಿ ದೃಷ್ಟಿಗಳು ಅಜ್ಞಾನದಿಂದ ಮಿಥ್ಯೆಯಾಗಿಯೇ ಕಾಣಿಸುವುವು.

೫. ಪಿತ್ತಾದಿ ದೋಷವಶದಿಂದ ಮದವಿಕಾರವೇರಿದ ಮನುಷ್ಯನಿಗೆ ಅವನ ಆ ಶರೀರವೇ ಗರ್‍ರನೆ ಸುತ್ತದೆ ಇರುವುದಾದರೂ, ಸುತ್ತುತ್ತಲಿರುವ ಬೇರೆ ದೇಹದಂತೆ ಹೇಗೆ ಪ್ರತಿಭಾಸಿಸುವುದೋ ಹಾಗೆಯೇ ಚಿತ್ಸಾರವಾದ ಪರಬ್ರಹ್ಮವು ಚಿತ್ಸ್ವಭಾವದ ದೆಸೆಯಿಂದ ವಸ್ತುತಃ ಚಿತ್ತೇ ಆಗಿದ್ದರೂ ಅಚಿತ್ತಿನಂತೆ (ಚಿತ್ ಅಲ್ಲದುದರಂತೆ) ತೋರುತ್ತಿರುವುದು.

೬. ಚಿತ್ತು ಪ್ರಪಂಚರೂಪವಾಗಿರುವುದು ಎಂದು ತಿಳಿದಾಗ ಈ ಜಗತ್ತು ಅಸತ್ಯವಲ್ಲವಾಗುವುದು ಅಂದರೆ ಸತ್ಯವೇ ಆಗುವುದು. ಹಾಗಲ್ಲದೆ ಚಿತ್ತು ಜಗದ್ರೂಪವಾಗಿಲ್ಲವು ಎಂದು ತಿಳಿದರೆ ಆಗ ಅದು ಸತ್ಯವಲ್ಲವಾಗುವುದು. (ಅಸತ್ಯವಾಗುವುದು.) ಕಟಕ ಕೇಯೂರ ಮೊದಲಾದವುಗಳ ರೂಪದಲ್ಲಿರುವ ಚಿನ್ನವು (ಸುವರ್ಣವು) ಕಟಕಾದಿಗಳಿಗಿಂತ ಅನತಿರಿಕ್ತ (ಅಭಿನ್ನ)ವಾಗಿಯೂ, ಅತಿರಿಕ್ತ (ಭಿನ್ನ)ವಾಗಿಯೂ ಇರುವುದು ಅಲ್ಲವೇ? [ಸದ್ರೂಪವಾದ ಚಿತ್ತೇ ಜಗದ್ರೂಪವನ್ನು ಧರಿಸುವುದರಿಂದ ಜಗತ್ತನ್ನು ಅಸತ್ ಎಂದು ಹೇಳುವುದಕ್ಕಾಗುವುದಿಲ್ಲ.

ಯೇನ ಶಬ್ದಂ ರಸಂ ರೂಪಂ ಗಂಧಂ ಜಾನಾಸಿ ರಾಘವ ।
ಸೋಽಯಮಾತ್ಮಾ ಪರಂ ಬ್ರಹ್ಮ ಸರ್ವಮಾಪೂರ್ಯ ಸಂಸ್ಥಿತಃ ॥ ೭ ॥

ನಾನೈಕತ್ವಾದತೀತಾತ್ತು ಸರ್ವಗಾದಮಲಾತ್ಮನಃ ।
ದ್ವಿತೀಯಾ ಕಲನಾ ನಾಸ್ತಿ ಕಾಚಿನ್ನೇತರಥಾ ಕ್ವಚಿತ್ ॥ ೮ ॥

ರಾಮ ಭಾವನಾದನ್ಯಸ್ಯ ಭಾವಾಭಾವಾಃ ಶುಭಾಶುಭಾಃ ।
ಸೃಷ್ಟಯಃ ಪರಿಕಲ್ಪ್ಯಂತೇಽನಾತ್ಮನ್ಯೇವಾಥವಾತ್ಮನಿ ॥ ೯ ॥

ಜಗತ್ತು ಜ್ಞಾನದಿಂದ ಬಾಧಿತವಾಗುವುದರಿಂದ ಸತ್ ಎಂದು ಹೇಳುವುದಕ್ಕೂ ಸಾಧ್ಯವಿಲ್ಲ. ಹೀಗೆ ಜಗತ್ತು ಅನಿರ್ವಚನೀಯವೆಂದು ಅಭಿಪ್ರಾಯ.]

೭. ಅಯ್ಯಾ ರಾಘವ, ಯಾವುದರಿಂದ ನೀನು ಶಬ್ದಸ್ಪರ್ಶರೂಪ ರಸಗಂಧಾದಿಗಳ ಅನುಭವವನ್ನು ಪಡೆಯುವಿಯೋ ಅದೇ ಚಿತ್ತು. ಇವನೇ ಆತ್ಮನು. ಇವನೇ ಪರಬ್ರಹ್ಮವು. ಸಮಸ್ತವನ್ನೂ ವ್ಯಾಪಿಸಿಕೊಂಡು ಪರಿಪೂರ್ಣನಾಗಿರುವ ಸರ್ವಾಂತರ್ಯಾಮಿಯೂ ಇವನೇ. [ಇವೆಲ್ಲವೂ ಒಂದೇ ಅರ್ಥಕೊಡುವ ಪರ್ಯಾಯ ಪದಗಳು. "ಯೇನರೂಪಂರಸಂಗಂಧಂ ಶಬ್ದಾನ್ ಸ್ಪರ್ಶಾಂಶ್ಚಮೈಥುನಾನ್, ಏತೇನೈವ ವಿಜಾನಾತಿ ಕಿಮತ್ರಪರಿಶಿಷ್ಯತೇ ॥ ಏತದ್ವೈತತ್ ಕಠೋಪನಿಷತ್.]

೮. ಈ ನಾನಾತ್ವ (ಬಹುತ್ವ) ಏಕತ್ವ ಮುಂತಾದ ಸಕಲ ಭೇದ ವ್ಯವಹಾರವೂ ಕೇವಲ ಮಿಥ್ಯಾಭೂತವಾದುದು. ಸರ್ವಗತನೂ (ಮಾಯಾದಿ ಸಕಲ ವಿಧ ಮಲರಹಿತನೂ) ನಿತ್ಯ ಶುದ್ಧನೂ ಆಗಿರುವ ಆತ್ಮನು ಸಕಲ ಭೇದ ವ್ಯವಹಾರವನ್ನೂ ಅತಿಕ್ರಮಿಸಿರತಕ್ಕವನು. ಈ ಕಾರಣದಿಂದ ಬೇರೆ ರೀತಿಯಾಗಿ ಎರಡನೆಯದಾದ ಯಾವುದೊಂದು (ದ್ವೈತ) ಕಲ್ಪನೆಯೂ ಎಲ್ಲಿಯೂ ಯಾವಾಗಲೂ ಇಲ್ಲವೇ ಇಲ್ಲ. [ಇದರಿಂದ ಅದ್ವಿತೀಯವಾದ ಪರಬ್ರಹ್ಮನಿಗೂ ನಾನಾ ಪ್ರತ್ಯಗಾತ್ಮಗಳಿಗೂ ಐಕ್ಯವು ಹೇಗೆ ಉಪಪನ್ನವಾಗುವುದು ? ಎಂಬ ಪ್ರಶ್ನೆಗೆ ಸಮಾಧಾನವು ಹೇಳಿದುದಾಯಿತು.]

೯. ಅಯ್ಯಾ ರಾಮ, ಇತರ ವಸ್ತುವಿಗೆ ಭಾವಾಭಾವ (ಅಸ್ತಿತ್ವ–ನಾಸ್ತಿತ್ವ) ಗಳೂ ಶುಭಾಶುಭಗಳು ಅನೇಕಾನೇಕ ಸೃಷ್ಟಿಗಳೂ ವಾಸನಾವಶದಿಂದಲೇ ಕಲ್ಪಿಸಲ್ಪಡುವುವು. ಅವು ಮಾಯಿಕ (ಅವಿದ್ಯಕ) ದೃಷ್ಟಿಯಿಂದ ಅನಾತ್ಮಭೂತಮಾಯೆಯಲ್ಲಿಯೇ ಅಥವಾ ತಾತ್ತ್ವಿಕ ದೃಷ್ಟಿಯಿಂದ ಆತ್ಮನು ಮಾತ್ರವೇ ಇರುವ ಕಾರಣ ಆ ಆತ್ಮನಲ್ಲಿಯೇ ಎಂದು ತಿಳಿಯಬೇಕು.

ಗ॥ ಯಸ್ಮಾದಾತ್ಮನೋ ವ್ಯತಿರಿಕ್ತೇ ವಸ್ತುನಿ ಸಿದ್ಧೇ ಸತಿ ತತ್ರೇಚ್ಛಾ ಪ್ರವರ್ತತೇ । ಯತ್ರ ಸ್ವಾತ್ಮನೋ ವ್ಯತಿರಿಕ್ತಂ ನ ಕಿಂಚಿದಪಿ ಸಂಭವತಿ ತತ್ರಾತ್ಮಾ ಕಿಮಿವ ವಾಂಛತು ಕಿಮನುಸ್ಮರ್ತು ಧಾವತು ಕಿಮುಪೈತು ॥ ೧೦ ॥

ಅಥ ಇದಮಿಾಹಿತಮಿದಮನೀಹಿತಮಿತ್ಯಾತ್ಮಾನಂ ನ ಸ್ಪೃಶಂತಿ ವಿಕಲ್ಪಾಃ ॥

ಅತೋ ನಿರಿಚ್ಛತಾಯಾಮಾತ್ಮಾ ನ ಕಿಂಚಿದಪಿ ಕರೋತಿ ಕರ್ತೃಕರಣ-ಕರ್ಮಣಾಮೇಕತ್ವಾತ್ ॥ ೧೨ ॥

---

೧೦. ("ಅಥವಾ ಆತ್ಮನಿ" ಎಂದು ಮೇಲಣ ಶ್ಲೋಕದಲ್ಲಿ ಹೇಳಿದ ಪಕ್ಷಾಂತರದ ಯುಕ್ತಿ ಪ್ರಯೋಜನೋಪನ್ಯಾಸದ ಮೂಲಕ ಉಪಪಾದನೆಯು ಮುಂದಿನ ಗದಗಳಲ್ಲಿ ವರ್ಣಿತವಾಗಿದೆ.)

ಆತ್ಮನಿಗಿಂತ ವ್ಯತಿರಿಕ್ತವಾದ ಬೇರೊಂದು ವಸ್ತುವು ಸಿದ್ಧವಾಗಿದ್ದರೆ ಅದರ ವಿಷಯದಲ್ಲಿ ಇಚ್ಛೆಯು ಪ್ರವರ್ತಿಸಬಹುದು. ಯಾವಾಗ ತನ್ನ ಆತ್ಮನಿಗಿಂತ ವ್ಯತಿರಿಕ್ತವಾದ ಯಾವುದೊಂದು ವಸ್ತುವೂ ಎಂದಿಗೂ ಸಂಭವಿಸುವುದೇ ಇಲ್ಲವೋ, ಆಗ ಆತ್ಮನು ಯಾವುದನ್ನು ತಾನೇ ಅಪೇಕ್ಷಿಸಿ ಯಾವುದನ್ನು ಮನಸ್ಸಿನಲ್ಲಿ ಉದ್ದೇಶಿಸಿ, ಪ್ರವರ್ತಿಸಬೇಕು ? ಅಥವಾ ಪ್ರವರ್ತಿಸಿದ ಬಳಿಕಲಾದರೂ ಯಾವ ಫಲವನ್ನು ಹೊಂದಬೇಕಾಗಿರುವುದು ? (ಇಂತಹುದು ಯಾವುದೂ ಇಲ್ಲದ ಕಾರಣ ಪ್ರವೃತ್ತಿಯೇ ಇಲ್ಲದೆಹೋದಮೇಲೆ ಸೃಷ್ಟಿಯೆಂಬುದು ಅತ್ಯಂತಾಸಂಭವವೇ ಸರಿ.)

["ಯತ್ರಹಿ ದ್ವೈತಮಿವಭವತಿ ತದಿತರ ಇತರಂಪಶ್ಯತಿ ಶೃಣೋತಿ, ವಿಜಾನಾತಿ" ಇತ್ಯಾದಿ. "ಯತ್ರತ್ವಸ್ಯಸರ್ವಮಾತ್ಮೈವಾಭೂತ್ ತತ್‌ಕೇನಕಂಪಶ್ಯೇತ್ ಕೇನಕಂಶೃಣುಯಾತ್ ಕೇನಕಂವಿಜಾನೀಯಾತ್ ॥" "ವಿಜ್ಞಾತಾರಮರೇಕೇನ ವಿಜಾನೀಯಾತಾ," ಬೃಹದಾರಣ್ಯಕ ಮತ್ತು "ಆತ್ಮಾನಂಚೇತ್ ವಿಜಾನೀಯಾತ್ ಅಯಮಸ್ಮೀತಿ ಪೂರುಷಃ । ಕಿಮಿಚ್ಛನ್ ಕಸ್ಯಕಾಮಾಯಶರೀರ ಮನುಸಂಜ್ವರೇತ್ ॥ ಬೃಹ ೪–೪೭೧೨ ಇತ್ಯಾದಿ ಸಾವಿರಾರು ಕ್ರಿಯಾಕಾರಕ ಫಲಾದಿಗಳನ್ನೂ ನಿರಾಕರಿಸುವ ಶ್ರುತಿಗಳನ್ನು ನೆನಪಿನಲ್ಲಿಡಬೇಕು]

೧೧-೧೪. ಆದುದರಿಂದ,"ಇದು ಇಷ್ಟ-ಇದು ಅನಿಷ್ಟ"ಎಂಬ ಪ್ರಿಯಾಪ್ರಿಯಾದಿ ವಿಕಲ್ಪಗಳು ಆತ್ಮನನ್ನು ಸ್ಪರ್ಶಿಸುವುದಿಲ್ಲ. [ಅಶರೀರಂ ವಾವಸಂತಂ ನಪ್ರಿಯಾ

ನ ಕ್ವಚಿತ್ತಿಷ್ಠತ್ಯಾಧಾರಾಧೇಯಯೋರೇಕತ್ವಾತ್ ॥ ೧೩ ॥

ಸ ಚ ನಿರಿಚ್ಛತ್ಯಾತ್ಮನೋ ನೈಷ್ಕರ್ಮ್ಯಮಭಿಮತಮ್, ದ್ವಿತೀಯಾಯಾಃ ಕಲ್ಪನಾಯಾ ಅಭಾವಾತ್ ॥ ೧೪ ॥

ಪ್ರಿಯೇಸ್ಪೃಶತಃ] ಆದಕಾರಣ ಆಪ್ತ ಕಾಮನಾಗಿ ಸರ್ವಸಂಕಲ್ಪ ವರ್ಜಿತವಾದ ನಿಸ್ಪೃಹನಾಗಿರುವ ಸ್ಥಿತಿಯಲ್ಲಿ ಕ್ರಿಯಾ ಕರ್ತೃ ಕಾರಕ (ಕರಣ-ಫಲ) ಮುಂತಾದುವೆಲ್ಲವೂ ಭೇದಶೂನ್ಯವಾದ ಬ್ರಹ್ಮವೇ ಆಗಿರುವದರಿಂದ ಆತ್ಮನು ಯಾವುದೊಂದು ಕ್ರಿಯೆಯನ್ನೂ ಮಾಡುವವನಾಗುವುದಿಲ್ಲ. [ಕರ್ತೃವಾಗುವುದಿಲ್ಲ.] [ಬ್ರಹ್ಮಾರ್ಪಣಂ ಬ್ರಹ್ಮಹವಿಃ ಬ್ರಹ್ಮಾಗ್ನೌ ಬ್ರಹ್ಮಣಾನುಹುತಂ । ಬ್ರಹ್ಮೈವ ತೇನಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥ ಭಗವದ್ಗೀತಾ. ೪-೨೪. (ಅರ್ಪಣಂ) ಸೃಕ್‌ಸ್ರುವಾದಿಗಳು ಬ್ರಹ್ಮಜ್ಞಾನಿಗೆ ಬ್ರಹ್ಮವೇ ಆಗಿವೆ. ಮತ್ತೆ ಹವಿಸ್ಸು, ಅಗ್ನಿಯು, ಕರ್ತೃವು (ಯಜಮಾನನು.) ಹವನಕ್ರಿಯೆ, ಆ ಕರ್ಮದಿಂದ ಪಡೆಯುವ ಫಲ. ಇತ್ಯಾದಿಗಳೆಲ್ಲವೂ ಪರಮಾರ್ಥದರ್ಶಿಯಾದ ಜ್ಞಾನಿಗೆ ಬ್ರಹ್ಮವಾಗಿಯೇ ಇವೆ. ಕ್ರಿಯಾಕಾರಕಾದಿ ಭೇದ ಬುದ್ಧಿಯು "ಸರ್ವವೂ ಬ್ರಹ್ಮವೇ" ಎಂಬ ತತ್ತ್ವಜ್ಞಾನದಿಂದ ಧ್ವಂಸವಾಗಿಬಿಟ್ಟಿರುವುದು.]

ಇದರಂತೆಯೇ ಆಧಾರಾಧೇಯಗಳೂ ಒಂದೇ ಆಗಿಬಿಟ್ಟಿರುವುದರಿಂದ ಆತ್ಮನು ಬೇರೆ ಯಾವುದೊಂದು ಆಧಾರವನ್ನೂ ಆಶ್ರಯಿಸಿಕೊಂಡು ಇರುವನೆಂಬುದು ಸರ್ವಥಾ ಅಸಂಭವ.

["ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇಮಹಿಮ್ನಿ" ಛಾಂದೋಗ್ಯೋಪನಿಷತ್ ೭-೨೪-೧ ಇತ್ಯಾದಿ.ಆತ್ಮೈವಾಧಸ್ತಾತ್ ಆತ್ಮೋಪರಿಷ್ಟಾತ್,ಆತ್ಮಾಪಶ್ಚಾತ್, ಆತ್ಮಾಪುರಸ್ತಾತ್,ಆತ್ಮಾದಕ್ಷಿಣತಃ,ಆತ್ಮಾಉತ್ತರತಃ, ಆತ್ಮೈವೇದಂಸರ್ವಂ" ಇತ್ಯಂತ ಗ್ರಂಥದಿಂದ ಆತ್ಮನು ಅನಾಧಾರನು, ಸ್ವಮಹಿಮಪ್ರತಿಷ್ಠನು, ಸರ್ವವ್ಯಾಪಿಯು ಎಂದು ಉಪದೇಶಿಸಿ ಆಧಾರಾಧೇಯಗಳನ್ನು ನಿರಾಕರಿಸಿರುವುದು.]

ಆತ್ಮಾತಿರಿಕ್ತವಾದ ಬೇರೆ ವಸ್ತುವೇ ಅಸಿದ್ಧವಾಗಿರುವುದರಿಂದ ಆತ್ಮನು ಯಾವ ಪ್ರಯೋಜನವನ್ನು ಇಚ್ಛಿಸಿ ಸೃಷ್ಟಿಕಾರ್ಯದಲ್ಲಿ ಪ್ರವರ್ತಿಸುವನೆಂದು ಹೇಳುವುದಕ್ಕೆ ಬರುವುದು? ಆಪ್ತಕಾಮನಾದ ಆತ್ಮನಿಗೆ ಇಚ್ಛೆಯು ತಾನೇ ಯಾವುದಿರುವುದು? ನೈಷ್ಕ

ಪ॥ ನೇತರಾ ಜಾನಾಸಿ ರಾಮ ತ್ವಮಿಯಂ ಬ್ರಹ್ಮಸಂಸ್ಥಿತಿಃ । ಸರ್ವದ್ವಂದ್ವ-ವಿನಿರ್ಮುಕ್ತಃ ಕರ್ತಾ ಭವ ಗತಜ್ವರಃ ॥ ೧೫ ॥

ಅನ್ಯಚ್ಚ ರಾಘವ ಪುನಃ—

ಪುನಃ ಕೃತ್ವಾ ಕೃತ್ವಾ ಬಹುವಿಧಮಿದಂ ಕರ್ಮ ತರಸಾ
ತ್ವಯಾ ಪ್ರಾಪ್ಯಂ ಕಿಂ ತದ್ವದ ಯದುಚಿತಂ ಭೂತಕಕಣಾತ್ ।
ಅಕರ್ತೃತ್ವೇ ವಾಸ್ಥಾ ಭವತು ತವ ಚಾಪ್ಯಾಗಮುವತೋ
ಭವ ಸ್ವಸ್ಥಃ ಸ್ವಚ್ಛಃ ಸ್ತಿಮಿತ ಇವ ನಿರ್ವಾತಜಲಧಿಃ ॥ ೧೬ ॥

ರ್ಮ್ಯಸಿದ್ಧಿಯೆಂಬ ಪ್ರಯೋಜನವು ಉಂಟೆಂದು ಹೇಳುವುದೂ ಆತ್ಮನಲ್ಲಿ ಸಂಗತವಾಗುವುದಿಲ್ಲ. ಇಚ್ಛೆಯೇ ಸುತರಾಂ ಇಲ್ಲದಿರುವ ಆತ್ಮನಲ್ಲಿ ನೈಷ್ಕರ್ಮ್ಯವೆಂಬುದೂ ಅಭಿಮತವಲ್ಲ. ಆತ್ಮಾತಿರಿಕ್ತವಾದ ಎರಡನೆಯದಾದ ವಸ್ತುಕಲ್ಪನೆಯೇ ಅಸಂಭವವಾಗಿರುವಾಗ, ಕರ್ಮವೆಂಬುದು ಎಲ್ಲಿಯದು? ಕರ್ಮವೆಂಬುದು ಒಂದು ಇದ್ದರೆ ಆಗ ನೈಷ್ಕರ್ಮ್ಯವೂ ಸಿದ್ಧಿಸುವುದು. ಕರ್ಮವೇ ಇಲ್ಲದಿರುವಾಗ ನೈಷ್ಕರ್ಮ್ಯವೆಂಬುದಕ್ಕೆ ಪ್ರಸಕ್ತಿಯೇ ಇಲ್ಲವು. [ಹೀಗೆ ಸೃಷ್ಟಿಯೆಂಬುದೇ ಸುತರಾಂ ಅಸಂಭವವು ಎಂದು ಸ್ಥಿರಪಟ್ಟಿತು.]

೧೫. ರಾಮ, ಪೂರ್ವೋಕ್ತ ಪ್ರಕಾರಗಳಿಗಿಂತ ಬೇರೆಯಾದ ಸಫಲತ್ವಾದಿಕಲ್ಪನೆಯೊಂದೂ ಇಲ್ಲವೇ ಇಲ್ಲ. ಇದೇ ಪಾರಮಾರ್ಥಿಕವಾದ ಅದ್ವಿತೀಯ ಪರಬ್ರಹ್ಮಸ್ಥಿತಿಯು. ಇದರಲ್ಲಿ ಸಂಶಯವಿಲ್ಲ ಅಥವಾ ನೀನು ಬೇರೊಂದು ಕಲ್ಪನೆಯನ್ನು ತಿಳಿಯುವವನಾದರೆ ಆಗ ನೀನು ಸುಖ ದುಃಖ-ಇಷ್ಟಾನಿಷ್ಟ ಇತ್ಯಾದಿ ಸಕಲ ದ್ವಂದ್ವಬುದ್ಧಿಗಳಿಂದ ವಿನಿರ್ಮುಕ್ತನಾಗಿ ರಾಗದ್ವೇಷಾದಿ ಮನಸ್ತಾಪಗಳನ್ನು ತ್ಯಾಗಮಾಡಿ ದೇಶಕಾಲಾನುಸಾರವಾಗಿ ಯದೃಚ್ಛಾಪ್ರಾಪ್ತವಾದ ಕರ್ಮಗಳನ್ನು ಸ್ಥಿತಪ್ರಜ್ಞನಂತೆ ನಿರಭಿಮಾನದಿಂದ ಮಾಡಿಕೊಂಡಿರು. ನಾನು ಪ್ರತಿಬಂಧಪಡಿಸುವುದಿಲ್ಲ.

(ತಸ್ಮಾದ ಸಕ್ತಃ ಸತತಂಕಾರ್ಯಂ ಕರ್ಮಸಮಾಚರ । ಅಸಕ್ತೋಹ್ಯಾಚರನ್ ಕರ್ಮಪರಮಾಪ್ನೋತಿ ಪೂರುಷಃ ॥ ಭಗವದ್ಗೀತಾ ಅಧ್ಯಾಯ ೩-೧೯, ಮತ್ತೂ ಕೂಡ.

೧೬. ಅಯ್ಯ ರಾಘವ, "ಅಹಂಕರ್ತಾ"(ನಾನು ಕರ್ತೃವು)ಎಂಬ ಅತ್ಯಧಿಕವಾದ ಕರ್ತೃತ್ವಾಭಿಮಾನವನ್ನು ಇಟ್ಟುಕೊಂಡು, ನೀನು ಪುನಃ ಪುನಃ ಅಭಿಮತವಾದ ನಾನಾ ಕರ್ಮಗಳನ್ನು ಮಾಡುತ್ತ, ಯಾವ ಫಲವನ್ನು ಹೊಂದಬೇಕಾಗಿರುವುದು ?

ಗತ್ವಾ ಸುದೂರಮಪಿ ಯತ್ನವತಾ ಜನೇನ
ನಾಸಾದ್ಯತೇ ತದಿಹ ಯೇನ ಸುಪೂರ್ಣತೈತಿ ।
ಮತ್ವೇತಿ ಮಾ ವ್ರಜ ಪದಾರ್ಥಗಣಾ ಧಿಯಾ ತ್ವಂ
ನ ತ್ವಂ ತ್ವಮೇವ ಪರಮಾರ್ಥತಯಾ ಚಿದಾತ್ಮಾ ॥ ೧೭ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಉಪಶಮ ವರ್ಣನಂ" ನಾಮ ಸಪ್ತತ್ರಿಂಶಃ ಸರ್ಗಃ

ಈ ಕರ್ಮಾಚರಣೆಯಿಂದ ದೇಹೇಂದ್ರಿಯಾದಿಭೂತಗಳ ವೃದ್ಧಿಯಾಗುವುದೇ ಹೊರತು ಅದಕ್ಕಿಂತಲೂ ಬೇರೆಯಾಗಿ ನಿತ್ಯನಿರತಿಶಯಾನಂದಸ್ವರೂಪನಾದ ನಿನಗೆ ಉಚಿತ ವಾದ ಪ್ರಾಪ್ಯಫಲವು ಯಾವುದು ಇರುವುದು? ನೀನೇ ಯೋಚಿಸಿ ಹೇಳು. ನಿಜ ಸ್ಥಿತಿಯು ಹೀಗಿರುವ ಕಾರಣ–ಶಾಸ್ತ್ರಾಧ್ಯಯನಗುರೂಪದೇಶಾದಿಗಳಿಂದ ಆತ್ಮಜ್ಞಾನ ಸಂಪನ್ನನಾದ ನೀನು ಸರ್ವ ವಿಧವಾದ ಕರ್ತೃತ್ವಾಭಿಮಾನವನ್ನು ತ್ಯಜಿಸಿ ಸ್ವಸ್ವರೂ ಪೋಚಿತವಾದ ಆ ಕರ್ತೃತ್ವದಲ್ಲಿಯೇ ಆಸಕ್ತಿಯುಳ್ಳವನಾಗಿರು. ಬಳಿಕ ಸ್ವಸ್ಥ ನಾಗಿಯೂ ಸ್ವಚ್ಛನಾಗಿಯೂ ಗಾಳಿಯು ಬೀಸಿದ (ನಿರ್ವಾತ) ಸಮುದ್ರದಂತೆ ನಿಶ್ಚಲ ನಾಗಿಯೂ ಇರು.

೧೭. ಅಖಂಡವಾದ ಬ್ರಹ್ಮಾನಂದವು ಯಾವುದರಿಂದ ಸಿದ್ಧಿಸುವುದೋ ಅಂತಹ ಸಾಧನವು ಬಹು ವೇಗವಾಗಿ ಮಹಾಪ್ರಯತ್ನಗಳಿಂದ ಬಹುದೂರ ಹೋದರೂ ಕೂಡ (ಎಷ್ಟು ಕರ್ಮಗಳನ್ನು ಆಚರಿಸಿದರೂ ಕೂಡ) ಈ ಜಗತ್ತಿನಲ್ಲಿ ದೊರಕುವುದೇ ಇಲ್ಲ. ಆದ್ದರಿಂದ ನೀನು ಈ ವಿಚಾರವನ್ನು ದೃಢವಾಗಿ ಅವಧರಿಸಿ ಬಾಹ್ಯವಾದ (ಅನಾತ್ಮ)ವಸ್ತು ಸಮುದಾಯಗಳನ್ನು ಮನಸ್ಸಿನಲ್ಲಿಯೂ ಸ್ಮರಿಸ ದೆಯೇ ಇರು. ವಾಸ್ತವವಾಗಿ ನೀನು ಆತ್ಮಾತಿರಿಕ್ತನಾದ ದಶರಥ ಪುತ್ರನೆಂದೇ ತಿಳಿಯಬೇಡ. ಪರಮಾರ್ಥದಲ್ಲಿ ನೀನು ಸಚ್ಚಿದಾನಂದರೂಪನಾದ ಪರಬ್ರಹ್ಮವೇ, ಸಂಶಯವಿಲ್ಲ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ಉಪಶಮ ವರ್ಣನ" ಎಂಬ ಮೂವತ್ತೇಳನೆಯ ಸರ್ಗವು.

ಅಷ್ಟತ್ರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಏವಂ ಸ್ಥಿತೇ ತು ತಜ್ಞಾನಾಂ ಯದೇತತ್ಕರ್ತೃತ್ವಂ ದೃಶ್ಯತೇ ।
ಸುಖದುಃಖಾದಿಷು ಯೋಗಾದಿಷು ವಾ ತದಸನ್ನ ತು ಮೂರ್ಖಾಣಾಂ ॥ ೧ ॥

ಮೂವತ್ತೆಂಟನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಪೂರ್ವ ಸರ್ಗದಲ್ಲಿ ಉಕ್ತವಾಗಿರುವಂತೆ, ಆತ್ಮಸ್ವರೂಪವು ಕರ್ತೃತ್ವಾದಿ ಸಕಲ ಧರ್ಮಾತೀತವಾಗಿಯೂ ಸರ್ವಗತವಾಗಿಯೂ ಇರಲಿಕ್ಕಾಗಿ ತತ್ತ್ವಜ್ಞಾನಿಗಳಾದ ಜೀವನ್ಮುಕ್ತರಿಗೂ ಕೂಡ ಅಜ್ಞಾನಿಗಳಿಗೆ ಹೇಗೋ ಹಾಗೆ ಐಹಿಕಾಮುಷ್ಮಿಕ ಸುಖದುಃಖ ಭೋಗಫಲಪ್ರದಗಳಾದ ಲೌಕಿಕ ಮತ್ತು ವೈದಿಕಗಳಾದ ವಿಹಿತ ಮತ್ತು ನಿಷಿದ್ಧಿಗಳಾದ ಸಕಲ ಕರ್ಮಗಳಲ್ಲಿಯೂ ಮತ್ತು ಯೋಗಶಾಸ್ತ್ರದಲ್ಲಿ ಉಪದಿಷ್ಟವಾದ ಸಮಾಧ್ಯಭ್ಯಾಸಾದಿ ವ್ಯಾಪಾರಗಳಲ್ಲಿಯೂ ಕರ್ತೃತ್ವವು ಸರ್ವಥಾ ಅಸತ್ಯವಾದುದೇ. ಆದುದರಿಂದಲೇ ಕರ್ತೃತ್ವ ಮೂಲಕವಾದ ಭೋಕ್ತೃತ್ವವೂ ಅವರಿಗೆ ಎಂದಿಗೂ ಇಲ್ಲವೇ ಇಲ್ಲವು. ಏಕೆಂದರೆ ಅವರ ಕರ್ಮವು ವಸ್ತುತಃ ಅಕರ್ಮವೇ. (ಕರ್ಮವೇ ಅಲ್ಲ.) ಆತ್ಮಜ್ಞಾನರಹಿತರಾದ ಮೂರ್ಖರಿಗಾದರೋ ಹಾಗಲ್ಲ. ಕರ್ಮಕರ್ತೃತ್ವವೂ ಅದರ ಮೂಲಕ ಕರ್ಮಾನುಗುಣವಾಗಿ ಫಲಭೋಕ್ತೃತ್ವವೂ ಸುಖದುಃಖಾನುಭವಾದಿ ಸಕಲ ವ್ಯವಹಾರವೂ ಅಜ್ಞರಿಗೆ ಸತ್ಯವಾಗಿಯೇ ಪರಿಣಮಿಸುವುದು.

ತ್ಯಕ್ತ್ವಾಕರ್ಮಫಲಾಸಂಗಂ ನಿತ್ಯತೃಪ್ತೋನಿರಾಶ್ರಯಃ । ಕರ್ಮಣ್ಯಭಿಪ್ರವೃತ್ತೋಽಪಿನೈವಕಿಂಚಿತ್ ಕರೋತಿಸಃ ॥ ಗೀತಾ ೪-೨೦ ನಿಷ್ಕ್ರಿಯಾತ್ಮಜ್ಞಾನ ಸಂಪನ್ನನಾದ ಪ್ರಾಜ್ಞನು ಕರ್ಮಗಳಲ್ಲಿ ಅಭಿಮಾನವನ್ನೂ, ಕರ್ಮಫಲದಲ್ಲಿ ಆಸಕ್ತಿಯನ್ನೂ, ಬಿಟ್ಟು ನಿತ್ಯತೃಪ್ತನಾಗಿಯೂ, ನಿರಾಶ್ರಯನಾಗಿಯೂ, ಲೋಕಸಂಗ್ರಹಾದಿ ಯಾವುದೋ ಒಂದು ನಿಮಿತ್ತದಿಂದ ಪೂರ್ವದಂತೆ ಕರ್ಮಗಳಲ್ಲಿ ತೊಡಗಿದ್ದರೂ ಕೂಡ ವಸ್ತುತಃ

ಯತಃ ಕರ್ತೃತ್ವಂ ನಾಮ ವಿಮುಚ್ಯತೇ । ಯೋ ಹ್ಯಂತರಸ್ಥಾಯಾಮನೋವೃತ್ತೇರ್ನಿಶ್ಚಯ ಉಪಾದೇಯತಾಪ್ರತ್ಯಯೋ ವಾಸನಾಭಿಧಾನಸ್ತತ್ಕರ್ತೃತ್ವ ಶಬ್ದೇನೋಚ್ಯತೇ ॥ ೨ ॥

ಚೇಷ್ಟಾವಶಾತ್ತಾದೃಕ್ಫಲಭೋಕ್ತೃತ್ವಂ ವಾಸನಾನುರೂಪಂ ಸ್ಪಂದತೇ ಪುರುಷಃ ಸ್ಪಂದಾನುರೂಪಂ ಫಲಮನುಭವತಿ । ಫಲಭೋಕ್ತೃತ್ವಂ ನಾಮ ಕರ್ತೃತ್ವಾದಿತಿ ಸಿದ್ಧಾಂತಃ ॥ ೩ ॥

ತಥಾಚ—

ಕುರ್ವತೋಽಕುರ್ವತೋ ವಾಪಿ ಸ್ವರ್ಗೇಽಪಿ ನರಕೇಪಿ ವಾ ।
ಯಾದೃಗ್ವಾಸನಮೇತತ್ಸ್ಯಾನ್ಮನಸ್ತದನುಭೂಯತೇ ॥ ೪ ॥

ಅವನು ಯಾವ ಕರ್ಮವನ್ನೂ ಮಾಡುವುದೇ ಇಲ್ಲ. ಕರ್ಮ–ಅಕರ್ಮ–ವಿಕರ್ಮಗಳ ಸ್ವರೂಪವನ್ನು ಗೀತೆಯ ೪ನೇ ಅಧ್ಯಾಯದಿಂದ ತಿಳಿಯಬೇಕು. ಕರ್ಮಣ್ಯಕರ್ಮಯ-ಪಶ್ಯೇತ್ ಇತ್ಯಾದಿ ಶ್ಲೋಕಾರ್ಥವನ್ನು.

೨. ಏತಕ್ಕೆಂದರೆ, ಶಾಸ್ತ್ರದಲ್ಲಿ ಯಾವುದನ್ನು ಕರ್ತೃತ್ವವೆಂದು ವ್ಯವಹರಿಸುವರು ಎಂಬುದೀಗ ವಿಚಾರಾರ್ಹವಾದುದು. ಅಂತಃಸ್ಥಿತವಾದ ಚಿತ್ತವೃತ್ತಿಯ ನಿಶ್ಚಯವೇ ಕರ್ತೃತ್ವವೆಂಬ ಶಬ್ದದಿಂದ ವ್ಯವಹರಿಸಲ್ಪಟ್ಟಿರುವುದು. "ಇದು ಕಾರ್ಯ-ಇದು ಉಪಾದೇಯು (ಗ್ರಾಹ್ಯ)" ಎಂಬ ಪ್ರತ್ಯಯವೂ ಈ ಕರ್ತೃತ್ವವೇ ಇದಕ್ಕೆ "ವಾಸನಾ" ಎಂಬ ಹೆಸರೂ ಇದೆ.

೩. ಸಕಲ ಪ್ರಾಣಿವರ್ಗವೂ ತನ್ನ ವಾಸನಾನುಗುಣವಾಗಿ ತನಗೆ ಅಭಿಮತವಾದ ವಿವಿಧ ವ್ಯವಹಾರಗಳನ್ನು ನಡೆಸುವುದು. ತನ್ನ ವ್ಯವಹಾರಾನುಸಾರವಾಗಿ ಅದರ ಫಲವನ್ನು ಅನುಭವಿಸುವುದು. ಹೀಗೆ ತನ್ನ ಕರ್ಮವ್ಯವಹಾರಾನುಸಾರವಾಗಿ ಅದರ ಫಲವನ್ನು ಅನುಭವಿಸುವುದು. ಹೀಗೆ ತನ್ನ ಕರ್ಮವ್ಯವಹಾರವಶದಿಂದ ಅಂತಹ ಫಲಭೋಕ್ತೃತ್ವವು ಸಂಭವಿಸುವುದು. ಅಂತು ಈ ಕಾರಣದಿಂದ ಫಲಭೋಕ್ತೃತ್ವವೆಂಬುದು ಫಲಹೇತುವಾದ ಕರ್ಮಗಳ ಕರ್ತೃತ್ವದಿಂದಲೇ ಉಂಟಾಗುವುದು ಎಂಬ ಶಾಸ್ತ್ರಸಿದ್ಧಾಂತವು ನಿಷ್ಪನ್ನವಾಯಿತು. (ಸ್ಪಷ್ಟವಾಯಿತು.)

೪. ಪ್ರಾಚೀನರು ಈ ವಿಷಯವನ್ನು ಅನುಮೋದಿಸಿ ಹೇಳಿರುವುದೇನೆಂದರೆ–ಪುರುಷನು ದೇಹದಿಂದ ಕರ್ಮಗಳನ್ನು ಮಾಡುತ್ತಿದ್ದರೂ ಅಥವಾ ಮಾಡದೆ

ತಸ್ಮಾದಜ್ಞಾತತತ್ತ್ವಾನಾಂ ಪುಂಸಾಂ ಕುರ್ವತಾಮಕುರ್ವತಾಂ ಚ ಕರ್ತೃತಾ ನತು ಜ್ಞಾತತತ್ತ್ವಾನಾಮವಾಸನತ್ವಾತ್ ॥ ೫ ॥

ಜ್ಞಾತತತ್ತ್ವೋ ಹಿ ಶಿಥಿಲೀಭೂತವಾಸನಃ ಕುರ್ವನ್ನಪಿ ಫಲಂ ನಾನುಸಂದಧಾತಿ । ಅಥಚ ಸ್ಪಂದನಮಾತ್ರಂ ಕೇವಲಂ ಕರೋತ್ಯಸಕ್ತಬುದ್ಧಿಃ ಸಂಪ್ರಾಪ್ತಮಪಿ ಫಲಮಾತ್ಮೈವೇದಂ ಸರ್ವಮೇವ ಕರ್ಮಫಲಮನುಭವತ್ಯಕುರ್ವನ್ನಪಿ ಕರೋತಿ ಮಗ್ನಮನಾಃ ॥ ೬ ॥

ಇದ್ದರೂ ಸ್ವರ್ಗದಲ್ಲಿಯಾಗಲಿ ಅಥವಾ ನರಕದಲ್ಲಿಯಾಗಲೀ ಹೇಗಿದ್ದರೂ ಕೂಡ ಅವನ ಮನಸ್ಸು ಎಂತಹ ವಾಸನಾಮಯನಾಗಿರುವುದೋ ಅಂತಹ ಫಲವನ್ನೇ ಅನುಭವಿಸುವನು.

೫. ಈ ಕಾರಣದಿಂದ ಆತ್ಮೈಕತ್ವಜ್ಞಾನಶೂನ್ಯರಾದ ಅಜ್ಞರಿಗೆ ಮಾತ್ರವೇ ಅವರು ಕರ್ಮಗಳನ್ನು ಮಾಡುತ್ತಿರುವವರಾಗಲಿ ಅಥವಾ ಮಾಡದೆ ಇರುವವರಾಗಲಿ ಅವರಿಗೆ ಮಾತ್ರವೇ ಕರ್ತೃತ್ವವು ಸಂಭವಿಸುವುದು. ಆತ್ಮಜ್ಞಾನ ಸಂಪನ್ನರಾದ ಪ್ರಾಜ್ಞರಿಗಾದರೋ ಅವರು ಕರ್ಮಗಳನ್ನು ಮಾಡುತ್ತಿರುವವರಾದರೂ ವಾಸನಾ ಶೂನ್ಯರಾಗಿರುವ ಕಾರಣ ಕರ್ತೃತ್ವವು ಎಂದಿಗೂ ಸಂಭವಿಸುವುದೇ ಇಲ್ಲ.

೬. ಏಕೆಂದರೆ ತತ್ತ್ವಜ್ಞನು ವಾಸನೆಯನ್ನು ಸಂಪೂರ್ಣವಾಗಿ ನಾಶಪಡಿಸಿಕೊಂಡಿರುವನು. ಸ್ವತಃ ಯಾದೃಚ್ಛಿಕವಾಗಿ ಸಂಪ್ರಾಪ್ತವಾದ ಕರ್ಮಗಳನ್ನು ಮಾಡುತ್ತಿರುವವನಂತೆ ಕಂಡರೂ, ಫಲದಲ್ಲಿ ಲೇಶಮಾತ್ರವೂ ಆಸಕ್ತಿಯಿಲ್ಲದವನಾಗಿರುವನು. ಮತ್ತೂ ಕೂಡ ಸುಮ್ಮನೆ ಕರಚರಣಾದ್ಯವಯವಗಳ ಚಾಲನವನ್ನು ಮಾತ್ರ ಕೇವಲವಾಗಿ ಮಾಡುತ್ತಿರುವನು. ಹೀಗೆ ಕರ್ಮಫಲಾಭಿಸಂಧಿಯು ಸ್ವಲ್ಪವೂ ಇಲ್ಲದೆ ಯಾದೃಚ್ಛಿಕವಾಗಿ ಕರ್ಮಫಲವು ಸಂಪ್ರಾಪ್ತವಾದರೂ ಕೂಡ "ಈ ಸಮಸ್ತವೂ ಕೂಡ ಆತ್ಮವೇ"ಯೆಂದು ಭಾವಿಸಿಕೊಂಡು, ಆ ಕರ್ಮಫಲವನ್ನು ಅನುಭವಿಸುವನು. ಐಹಿಕಾಮುಷ್ಮಿಕ ವಿಷಯ ಸುಖಗಳಲ್ಲಿ ಮಗ್ನವಾದ (ಮುಳುಗಿದ) ಮನಸ್ಸುಳ್ಳ ಅಜ್ಞನಾದರೋ ನಾನು ಇಂತಹವನು, ಅಧಿಕಾರಿ, ಇದು ನನ್ನ ಕರ್ಮ, ಇದಕ್ಕೆ ಇದು ಫಲ, ಈ ಫಲವು ನನಗೆ ಬೇಕಾಗಿರುವುದು, ಈ ಕರ್ಮವನ್ನು ಮಾಡಿ ಅದರ ಫಲವನ್ನು ನಾನು ಅನುಭವಿಸುವೆನು. ಈ ಕರ್ಮವನ್ನು ಹೀಗೆ ಮಾಡಬೇಕು? ಇತ್ಯಾದಿ ವಿವಿಧ ಕ್ರಿಯಾಕಾರಕ ಕರ್ತೃರೂಪ ಭೇದಬುದ್ಧಿ

ಮನೋ ಯತ್ಕರೋತಿ ತತ್ಕೃತಂ ಭವತಿ ಯನ್ನ ಕರೋತಿ ತನ್ನ ಕೃತಂ ಭವತಿ ಅತೋ ಮನ ಏವ ಕರ್ತೃ ನ ದೇಹಃ　　　　॥ ೭ ॥

ಚಿತ್ತಾದೇವಾಯಂ ಸಂಸಾರ ಆಗತಶ್ಚಿತ್ತಮಯ ಏವ ಚಿತ್ತಮಾತ್ರಂ ಚಿತ್ತ ಏವ ಸ್ಥಿತ ಇತಿ ವಿಜ್ಞಾತಂ। ವಿಷಯಶ್ಚ ಸರ್ವಮುಪಾಶಂತಮಭೂದ್ವಾಸನೈವೇತಿ ಜ್ಞ ಏವಾಸ್ತೀತಿ　　　　॥ ೮ ॥

ಯಿಂದ ಕೂಡಿಕೊಂಡು ಅವುಗಳನ್ನೇ ಸರ್ವದಾ ಅಭಿಮಾನದಿಂದ ಚಿಂತಿಸುತ್ತಿರುವನು ಇಂತಹ ಅಜ್ಞನು ದೇಹದಿಂದ ಕರ್ಮ ಮಾಡದೆ ಸುಮ್ಮನೆ ಇರುವನಂತೆ ಕಂಡರೂ ಕೂಡ ನಿಜವಾಗಿಯೇ ಕರ್ಮ ಮಾಡುತ್ತಿರುವನು ಎಂಬುದಾಗಿಯೇ ತಿಳಿಯಬೇಕು.

[ತತ್ತ್ವಜ್ಞನ ವಿಚಾರವು ತ್ಯಕ್ತ್ವಾಕರ್ಮಫಲಾಸಂಗಂ ಇತ್ಯಾದಿ ಗೀತಾ ೪-೨೦ ಶ್ಲೋಕದಲ್ಲಿ ಉಕ್ತವಾಗಿದೆ. ಅಜ್ಞನ ವಿಚಾರವು ಕರ್ಮೇಂದ್ರಿಯಾಣಿ ಸಂಯಮ್ಯಯ ಆಸ್ತೇಮನಸಾಸ್ಮರ್ರ ಇಂದ್ರಿಯಾರ್ಥಾ ವಿಮೂಢಾತ್ಮಾ ಮಿಥ್ಯಾಚಾರಸ್ಸ ಉಚ್ಯತೇ. ಗೀತಾ ೩-೬ ಎಂಬಲ್ಲಿ ಹೇಳಿದೆ. ಇದರ ಅರ್ಥವು ಮೇಲೆ ವಿವೃತವಾಗಿದೆ.]

೭. ಮುಖ್ಯವಾಗಿ ಮನಸ್ಸು ಯಾವ ಕೆಲಸವನ್ನು ಮಾಡುವುದೋ ಅದೇ ನಿಜವಾಗಿ ಮಾಡಲ್ಪಟ್ಟಹಾಗಾಗುವುದು. ಮನಸ್ಸು ಯಾವುದನ್ನು ಮಾಡುವುದಿಲ್ಲವೋ ಅದು ಮಾಡಲ್ಪಡಲಿಲ್ಲವೆಂದೇ ತಿಳಿಯಬೇಕು. ಆದಕಾರಣ, ಎಲ್ಲಕ್ಕೂ ಮನಸ್ಸೇ ಕರ್ತೃ ದೇಹವಲ್ಲ. (ದೇಹವು ಎಂದಿಗೂ ಕರ್ತೃವಲ್ಲ.)

೮. ಹೀಗೆ, "ಈ ಸಂಸಾರವು (ಜಗತ್ತು) ಚಿತ್ತದಿಂದಲೇ ಉದಯಿಸಿ ಬಂದಿರುವುದು. ಚಿತ್ತಮಯವಾಗಿಯೇ ಇರುವುದು. ಇದು ಕೇವಲ ಚಿತ್ತಮಾತ್ರವೇ ಮತ್ತು ಇದು ಚಿತ್ತದಲ್ಲಿಯೇ ಇದ್ದುಕೊಂಡಿರುವುದು." ಎಂಬೀವಿಚಾರವು ಮೊದಲೇ ನಿರ್ಧಾರವಾಗಿ ಗೊತ್ತಾಗಿದೆ. ಸರ್ವ ವಿಷಯವೆಂಬುದೂ ಮತ್ತು ಮನೋವೃತ್ತಿ ಭೇದವೆಂಬುದೂ ಇವೆರಡೂ ಉಪಶಾಂತವಾಗಿ ವಾಸನಾ ಮಾತ್ರವೇ ಆಗಿಬಿಡುವುವು. ಆಗ ಆ ವಾಸನೋಪಹಿತನಾದ (ವಾಸನೆಯೆಂಬ ಉಪಾಧಿಯಿಂದ ಕೂಡಿದ) ಜೀವನು ಮಾತ್ರವೇ ಇರುವವನಾಗಿ ಕಾಣುವನು.

ಆತ್ಮವಿದಾಂ ಹಿ ತನ್ಮನಃ ಪರಮುಪಾಶಮಮಾಗತಂ ಮೃಗತೃಷ್ಣಾಜಲಮಿವ ವರ್ಷತಿ ಜಲದೇ ಹಿಮಕಣ ಇವ ಚಂಡಾತಪೇ ವಿಲೀನಂ ತುರ್ಯದಶಾಮುಪಾಗತಂ ಸ್ಥಿತಂ ॥ ೯ ॥

ನಾನಂದಂ ನ ನಿರಾನಂದಂ ನ ಚಲಂ ನಾಚಲಂ ಸ್ಥಿರಂ ।
ನ ಸನ್ನಾಸನ್ನ ಚೈತೇಷಾಂ ಮಧ್ಯಂ ಜ್ಞಾನಿಮನೋ ವಿದುಃ ॥ ೧೦ ॥

ನ ವಾಸನಾಮಯೇ ಸ್ಪಂದರಸೇ ಗಜ ಇವ ಪಲ್ವಲೇ ಮಜ್ಜತಿ ತಜ್ಜ್ಞೋ ಮೂರ್ಖಮನೋಭೋಗಭೂಮಿನೇವ ಪಶ್ಯತಿ ನ ಸತತ್ತ್ವಂ ॥ ೧೧ ॥

---

೯. ತತ್ವಜ್ಞರ ಆ ಮನಸ್ಸಾದರೋ ಮೇಘವು ಮಳೆಗರೆಯುತ್ತಿರುವ ಕಾಲದಲ್ಲಿನ ಮೃಗತೃಷ್ಣಿಕೆಯ ಜಲದಂತೆ ಬಹಳ ಹೆಚ್ಚಾದ ಶಾಂತಿಯನ್ನು ಪಡೆದುದಾಗಿಯೂ ಬಹು ತೀವ್ರವಾದ ಬಿಸಿಲು ಕಾಯುತ್ತಿರುವಾಗ ಹಿಮದ ಹನಿಯಂತೆ ಪೂರ್ತಿಯಾಗಿ ಅಡಗಿಹೋದುದಾಗಿಯೂ, ತುರೀಯಾವಸ್ಥೆಯನ್ನು ಹೊಂದಿದುದಾಗಿಯೂ ಆ ಭಾವದಿಂದಲೇ ಇದ್ದುಕೊಂಡಿರುವುದು. (ಇದೇ ಅಜ್ಞರಿಗೂ ಪ್ರಾಜ್ಞರಿಗೂ ಇರುವ ವಿಶೇಷವು.)

೧೦. ಇಂತಹ ತುರ್ಯ ದಶಾಪನ್ನರಾದ ಜ್ಞಾನಿಗಳ ಮನಸ್ಸು ವಿಷಯ ಸುಖಗಳಲ್ಲಿ ವಿಶ್ರಾಂತವಾಗಿರುವುದೂ ಇಲ್ಲ. ಸ್ವರೂಪಾನಂದಶೂನ್ಯವಾಗಿಯೂ ಇರುವುದಿಲ್ಲ. ಚಂಚಲವಾಗಿಯೂ ಇರುವುದಿಲ್ಲ. ಕಲ್ಲು ಮೊದಲಾದ ಜಡವಸ್ತುಗಳಂತೆ ಅಚಲವಾಗಿ (ಜಡವಾಗಿ) ಒಂದೇ ಕಡೆ ಸ್ಥಿರವಾಗಿರುವುದೂ ಇಲ್ಲ. ಸತ್ತೂ ಅಲ್ಲ. ಅಸತ್ತೂ ಅಲ್ಲ. ಮತ್ತು ಮೇಲೆ ಉದಹರಿಸಿದ ಆನಂದ ನಿರಾನಂದ ಚಲಾಚಲ ಸದಸತ್ತುಗಳ ಮಧ್ಯವಾಗಿಯೂ ಇರುವುದಿಲ್ಲ ಎಂದು ಪ್ರಾಚೀನರಾದ ಜ್ಞಾನಿಗಳು ಅಭಿಪ್ರಾಯಪಡುವರು.

೧೧. ಅಜ್ಞಪ್ರಾಜ್ಞರಿಗಿರುವ ಇನ್ನೂ ಒಂದು ವಿಶೇಷವೇನೆಂದರೆ, ಆನೆಯು ಮದಪರವಶತೆಯಿಂದ ಕೆಸರು ಹೆಚ್ಚಾಗಿರುವ ಒಂದು ಸಣ್ಣ ಹೊಂಡದೊಳಗೆ ಹೊಕ್ಕು ಮುಳುಗುವಂತೆ, ಪ್ರಾಜ್ಞನಾದವನೆಂದಿಗೂ ಕೂಡ ವಾಸನಾಮಯವಾದ ಅಭಿಮತವಾದ ಲೌಕಿಕ ವ್ಯವಹಾರದಲ್ಲಿ ಮುಳುಗುವುದಿಲ್ಲ. ಮೂರ್ಖನ ಮನ

ತಥಾಚಾಯಮತ್ರಾಪರೋ ದೃಷ್ಟಾಂತಃ । ಅಕುರ್ವನ್ನಪಿ ಶ್ವಭ್ರಪತನಂ ಶಯ್ಯಾಸನಗತೋಽಪಿ ಶ್ವಭ್ರಪಾತವಾಸನಾವಾಸಿತೇ ಚೇತಸಿ ಶ್ವಭ್ರಪತನದುಃಖಮನುಭವತಿ । ಅಪರಸ್ತು ಕುರ್ವನ್ನಪಿ ಶ್ವಭ್ರಪತನಂ ಪರಮಮುಪಶಮಮುಪಗತವತಿ ಮನಸಿ ಶಯ್ಯಾಸನಸುಖಮನುಭವತಿ । ಏವಮನಯೋಃ ಶಯ್ಯಾಸನಶ್ವಭ್ರಪಾತಯೋರೇಕಃ ಶ್ವಭ್ರಪತನಸ್ಯಾಕರ್ತಾಪಿ ಕರ್ತಾ ಸಂಪನ್ನೋ ದ್ವಿತೀಯಶ್ಚ ಶ್ವಭ್ರಪತನಸ್ಯ ಕರ್ತಾಪ್ಯಕರ್ತಾ ಸಂಪನ್ನಶ್ಚಿತ್ತವಶಾತ್ಸ್ಮಾದ್ಯಚ್ಚಿತ್ತಂ ತನ್ಮಯೋ ಭವತಿ ಪುರುಷ ಇತಿ ಸಿದ್ಧಾಂತಃ ॥ ೧೨ ॥

ಸ್ನಾದರೋ ಅನವರತವೂ ಭೋಗಭೂಮಿಯನ್ನೇ ಹುಡುಕುತ್ತಲೂ, ನೋಡುತ್ತಲೂ, ಒಳಹೊಕ್ಕು ಮುಳುಗುತ್ತಲೂ ಇರುವುದು. ಪರಮಾರ್ಥ ಆತ್ಮತತ್ವವನ್ನು ಎಂದಿಗೂ ಕಾಣಲಾರದು.

೧೨. ಮತ್ತು ಹಾಗೆಯೇನೇ, ಅಜ್ಞನ ಮನಸ್ಸು ದುರ್ವಾಸನಾಮಯವಾದ ದುಃಖದಲ್ಲಿ ಮುಳುಗುವುದು ಎಂಬೀ ವಿಷಯದಲ್ಲಿ ಬೇರೊಂದು ದೃಷ್ಟಾಂತವು ಇರುವುದು. ಭ್ರಾಂತವಾದ ಮನಸ್ಸುಳ್ಳ ಅವಿವೇಕಿಯು ಸ್ವಪ್ನದಲ್ಲಿ ತಾನು ಗುಂಡಿಗೆ (ಒಂದು ದೊಡ್ಡ ಹಳ್ಳಕ್ಕೆ) ಬೀಳದೆ ಇದ್ದರೂ ಕೂಡ ಹಾಸಿಗೆಯ ಮೇಲೆಯಾಗಲೀ ಅಥವಾ ಒಂದು ಆಸನದ ಮೇಲೆಯಾಗಲೀ ಕುಳಿತುಕೊಂಡಿದ್ದರೂ, ಅವನ ಮನಸ್ಸು ಗುಂಡಿಯಲ್ಲಿ ಬೀಳುವಿಕೆಯ ವಾಸನೆಯಿಂದ ಸಮಾಕ್ರಾಂತವಾಗಿರುವಾಗ ತಾನು ಹಳ್ಳದಲ್ಲಿ ಬಿದ್ದಂಥ ದುಃಖವನ್ನು ಅತ್ಯವಶ್ಯವಾಗಿ ಅನುಭವಿಸುವನು. ತತ್ತ್ವಜ್ಞನಾದರೋ (ಸರಿಯಾದ ಜ್ಞಾನವುಳ್ಳ) ತಾನು ಗುಂಡಿಯಲ್ಲಿ (ಹಳ್ಳದಲ್ಲಿ) ಬೀಳುತ್ತಿದ್ದರೂ ಅವನ ಮನಸ್ಸು ವಿಶೇಷವಾದ ಉಪಶಾಂತಿಯನ್ನು ಪಡೆದಿರಲಿಕ್ಕಾಗಿ, ಹಾಸಿಗೆಯ ಮೇಲೆಯೋ ಆಸನದಮೇಲೆಯೋ ಕುಳಿತುಕೊಂಡಿರುವವನ ಸುಖವನ್ನು ಹೊಂದುವನು. ಹೀಗೆ ಇವರಿಬ್ಬರಲ್ಲಿ (ಅಜ್ಞಪ್ರಾಜ್ಞ) ಒಬ್ಬನಾದ ಅಜ್ಞನು, ಶ್ವಭ್ರಪತನವನ್ನು ಮಾಡದಿರುವವನಾದರೂ ಅದರ ಕರ್ತೃವಾಗುವನು. ಮತ್ತೊಬ್ಬನಾದ ಪ್ರಾಜ್ಞನು, ಶ್ವಭ್ರಪತನವನ್ನು ಮಾಡುವವನಾಗಿದ್ದರೂ ಅದರ ಅಕರ್ತೃವಾಗಿಯೇ ಇರುವನು. ಶ್ವಭ್ರಪತನ ಮತ್ತು ಶಯ್ಯಾಸನಗಳಲ್ಲಿ ಕೂಡುವಿಕೆಗಳೆಂಬ ಈ ಎರಡಕ್ಕೂ ಅವರಿಬ್ಬರ ಚಿತ್ತವೇ ಕಾರಣವಾಗಿರುವುದು. ಈ ಕಾರಣದಿಂದ ಮನಸ್ಸು (ಯಾವ ವಾಸನಾಮಯವಾಗಿ) ಹೇಗಿರುವುದೋ, ಪುರುಷನು ಅಂತಹ ಮನೋಮಯನಾಗಿ ಹಾಗೆಯೇ ಆಗಿಬಿಡುವನು ಎಂಬುದು ಶಾಸ್ತ್ರಸಿದ್ಧಾಂತವು.

ತೇನ ತತ್ರ ಕರ್ತುರಕರ್ತುರ್ವಾ ನಿತ್ಯಮ ಸಂಸಕ್ತಂ ಭವತು ಚೇತೋ ನಹಿ ಕಿಂಚಿದಸ್ತ್ಯಾತ್ಮ ತತ್ವ ವ್ಯತಿರಿಕ್ತಂ ಯತ್ರ ಸಂಸಕ್ತಿರ್ಭಾವ್ಯತೇ। ಯತ್ಕಿಂಚಿದಿದಂ ಜಗದ್ಗತಂ ತತ್ಸರ್ವಂ ಶುದ್ಧಚಿತ್ತತ್ವಾದಾಭಾಸಮವೇಹಿ ॥ ೧೩ ॥

ಏವಂ ಚಾಸ್ಯ ಜ್ಞಾತಜ್ಞೇಯಸ್ಯ ಪುಂಸೋ ನಾಮಾತ್ಮಾ ಸುಖದುಃಖಾನಾಂ ನ ಗಮ್ಯ ಇತಿ ನಿಶ್ಚಯೇ ಜಾತೇ ನಾತ್ಮವ್ಯತಿರಿಕ್ತಾ ಆಧಾರಾಧೇಯದೃಷ್ಟಯೋ ವಿದ್ಯಂತ ಇತಿ ನಿಶ್ಚಯೇ ಜಾತೇ ಕರ್ತಾ ಭೋಕ್ತಾ ಸರ್ವಪದಾರ್ಥವ್ಯತಿರಿಕ್ತೋ ವಾಲಾಗ್ರಸಹಸ್ರಭಾಗೋಽಹಮಿತಿ ನಿಶ್ಚಯೇ ಜಾತೇ ಯತ್ಕಿಂಚಿದಿದಂ ತತ್ಸರ್ವಮಹಮೇವೇತಿ ವಾ ನಿಶ್ಚಯೇ ಜಾತೇ ಸರ್ವಸತ್ವಾವಭಾಸಕಃ ಸರ್ವಗಸ್ತಿಷ್ಠಾಮ್ಯೇವಾಮಿತಿ ನಿಶ್ಚಯೇ ಜಾತೇ ನಾಹಂ ಸುಖದುಃಖಾನಾಂ ಗಮ್ಯ ಇತಿ ವಿಗತ ಜ್ವರತಯಾ ಚಿತ್ತವೃತ್ತಿರ್ಲೀಲಯೈವ ತಿಷ್ಠತೇ ವ್ಯವಹಾರೇಷು ॥ ೧೪ ॥

---

೧೩. ಅಯ್ಯಾ ರಾಮ, ಸಿದ್ಧಾಂತವು ಈ ರೀತಿಯಾಗಿರುವುದರಿಂದ ನೀನು ಕರ್ಮಗಳನ್ನು ಮಾಡುತ್ತಿರುವವನಾಗಿದ್ದರೂ ಅಥವಾ ಮಾಡದವನಾಗಿದ್ದರೂ ನಿನ್ನ ಮನಸ್ಸುಮಾತ್ರ ಯಾವಾಗಲೂ ಕರ್ಮಸಂಬಂಧಶೂನ್ಯವಾಗಿ ಅನಾಸಕ್ತವಾಗಿರಲಿ. ಆತ್ಮತತ್ತ್ವಕ್ಕಿಂತ ವ್ಯತಿರಿಕ್ತವಾದ ಪದಾರ್ಥವು ಬೇರೊಂದು ಇದ್ದಿದ್ದ ಪಕ್ಷದಲ್ಲಿ ಅದರಲ್ಲಿ ನಿನ್ನ ಮನಸ್ಸಿಗೆ ಆಸಕ್ತಿಯುಂಟಾದರೂ ಉಂಟಾಗಬಹುದಾಗಿತ್ತು. ಆದರೆ ವಸ್ತುತಃ ಆತ್ಮತತ್ತ್ವವ್ಯತಿರಿಕ್ತವಾದ ಅಂತಹ ವಸ್ತುವು ಒಂದೂ ಇಲ್ಲವೇ ಇಲ್ಲ. ಈ ಜಗತ್ತಿನಲ್ಲಿರುವ ಯಾವದೊಂದು ವಸ್ತುವು ಕಾಣುವುದೋ ಅದದೆಲ್ಲವೂ ನಿತ್ಯಶುದ್ಧವಾದ ಚಿತ್‌ತತ್ತ್ವದ ಅಭಾಸವೆಂದೇ ತಿಳಿಯುವವನಾಗು.

೧೪. ಅಂತು, ಈ ಪ್ರಕಾರವಾಗಿ (ತಿಳಿಯಬೇಕಾದುದನ್ನು ತಿಳಿದಿರುವ) ಆತ್ಮತತ್ತ್ವಜ್ಞಾನಸಂಪನ್ನನಾದ ಪುರುಷನಿಗೆ, "ಆತ್ಮನು ಸುಖದುಃಖಗಳಿಗೆ ಗಮ್ಯನಾದವನು ಅಲ್ಲವೇ ಅಲ್ಲ." ಎಂಬ ದೃಢನಿಶ್ಚಯ ಜ್ಞಾನವುಂಟಾಗಲಾಗಿ, ಆತ್ಮವ್ಯತಿರಿಕ್ತಗಳಾದ ಆಧಾರಾಧೇಯ ಭಾವಗಳೆಂಬ ಭೇದವ್ಯವಹಾರ ದೃಷ್ಟಿಗಳೊಂದೂ ಇಲ್ಲವೆಂಬ ನಿಶ್ಚಯವುಂಟಾಗಲಾಗಿ, ಕರ್ತೃವೂ ಭೋಕ್ತೃವೂ, ಸರ್ವ ಪದಾರ್ಥ ವ್ಯತಿರಿಕ್ತನೂ ಕೂದಲ ತುದಿಯ ಸಾವಿರ ಭಾಗದಲ್ಲಿ ಒಂದರಷ್ಟು ಸೂಕ್ಷ್ಮತಮನೂ ನಾನೇ ಎಂಬ ನಿಶ್ಚಯವುಂಟಾಗಲಾಗಿ, ಈ ಜಗತ್ತಿನಲ್ಲಿ ಕಾಣಿಸುವ ಯಾವ ಯಾವ ವಸ್ತುಗಳುಂಟೋ ಅವೆಲ್ಲವೂ ನಾನೇ ಎಂದಾಗಲೀ ನಿಶ್ಚಯವುಂಟಾಗಿಬಿಡಲು, ಸಕಲ ವಸ್ತುಪ್ರಕಾಶಕನಾಗಿಯೂ, ಸರ್ವವ್ಯಾಪಿಯಾಗಿಯೂ, ನಾನೇ ಇರುವೆನು ಎಂಬ ನಿಶ್ಚಯವುಂಟಾಗಲಾಗಿ, ಆಗ "ನಾನು ಸುಖದುಃಖಗಳಿಗೆ ಗಮ್ಯ (ವಿಷಯ)ನಲ್ಲ

ತಜ್ಞಸ್ಯ ಸಂಕಟೇ ಚ ಮುದಿತೈವ ಕೇವಲಂ ಜ್ಯೋತ್ಸ್ನೇವ ಭುವನಭಾವ ಮಲಂಕರೋತಿ ಯೇನ ಚಿತ್ತಾದೃತೇ ತು ಜ್ಞಃ ಕುರ್ವನ್ನಪ್ಯಕರ್ತಾ ಸಂಪನ್ನೋ ಮನಸೋಽಲೇಪಕತ್ವಾನ್ನಾಸೌ ಪಾದಪಾಣ್ಯಾದಿವಿಕ್ಷೇಪಸ್ಯ ಯತ್ನಕೃತಸ್ಯಾಪಿ ಕರ್ಮಣಃ ಫಲಮನುಭವತಿ ॥ ೧೫ ॥

ಏವಂ ಮನಃ ಸರ್ವಕರ್ಮಣಾಂ ಸರ್ವೇಹಿತಾನಾಂ ಸರ್ವಭಾವಾನಾಂ ಸರ್ವ-ಲೋಕಾನಾಂ ಸರ್ವಗತೀನಾಂ ಬೀಜಂ ತಸ್ಮಿನ್ ಪರಿಹೃತೇ ಸರ್ವಕರ್ಮಾಣಿ ಪರಿಹೃತಾನಿ ಭವಂತಿ ಸರ್ವದುಃಖಾನಿ ಕ್ಷೀಯಂತೇ ಸರ್ವಕರ್ಮಾಣಿ ಲಯಮುಪಯಾಂತಿ ಮಾನಸೇನಾಪಿ ಕರ್ಮಣಾಂ ಯತ್ಕೃತೇನಾಪಿ ಜ್ಞೋನಾಕ್ರಮ್ಯತೇ ನ ವಿವಶೀಕ್ರಿಯತೇ ನ ರಂಜನಾಮುಪೈತ್ಯವತಿರಿಕ್ತಾತ್ ॥ ೧೬ ॥

ವೆಂಬ ಪ್ರತ್ಯಯವು ದೃಢವಾಗುವುದು. ತರುವಾಯ, ಅಜ್ಞಾನಿಯ ಚಿತ್ತವೃತ್ತಿಯು ಸರ್ವ ಸಂತಾಪರಹಿತವಾಗಿ ಸರ್ವ ವ್ಯವಹಾರಗಳಲ್ಲಿಯೂ ಲೀಲೆಯಿಂದಲೇ ಇರುವುದು.

೧೫. ತತ್ತ್ವಜ್ಞನ ಚಿತ್ತವೃತ್ತಿಯು ಸಂಕಟಪ್ರದವಾದ ವಿಪತ್ಕಾಲದಲ್ಲಿಯೂ ಕೂಡ, ಕೇವಲ ಆನಂದವನ್ನೇ ಅನುಭವಿಸುತ್ತ, ಬೆಳದಿಂಗಳು ಜಗತ್ತನ್ನು ಪ್ರಕಾಶಗೊಳಿಸುವಂತೆ, ಅವನ ಭಾವವನ್ನು ಅಲಂಕಾರಗೊಳಿಸುವುದು. ಏಕೆಂದರೆ ಜ್ಞಾನಿಯು ಚಿತ್ತವೇ ಇಲ್ಲದವನಾಗಿರುವಕಾರಣ ಕರ್ಮಗಳನ್ನು ಮಾಡುತ್ತಾ ಕರ್ತೃವಾಗಿದ್ದರೂ, ಅಕರ್ತೃವಾಗಿಯೇ ಇರುವನು. ಮತ್ತು ಅವನ ಮನಸ್ಸು ಯಾವ ಲೇಪವೂ ಇಲ್ಲದುದಾಗಿರುವ ಕಾರಣ, ತನ್ನ ಪ್ರಯತ್ನದಿಂದಲೇ ಮಾಡಲ್ಪಟ್ಟುದಾದರೂ, ಕೈಕಾಲು ಮುಂತಾದ ಅಂಗಗಳ ಚಲನಾತ್ಮಕವಾದ, ತನ್ನದೇ ಆದ ಕರ್ಮದ ಫಲವನ್ನುಕೂಡ ಇವನು ಅನುಭವಿಸದೆಯೇ ಇರುವನು.

೧೬. ಹೀಗೆ, ಮನಸ್ಸು ಸರ್ವ ಕರ್ಮಗಳಿಗೂ, ಸಕಲೇಷ್ಟಾರ್ಥಗಳಿಗೂ, ಸರ್ವ ಭಾವಗಳಿಗೂ, ಸರ್ವ ಲೋಕಗಳಿಗೂ, ಸರ್ವ ಗತಿಗಳಿಗೂ, ಇತ್ಯಾದಿ ಸಮಸ್ತಕ್ಕೂ ಬೀಜ (ಮೂಲಕಾರಣ)ವಾಗಿರುವುದು. ಇದೊಂದು ಪರಿಹರಿಸಲ್ಪಟ್ಟಿದ್ದೇ ಆದರೆ, ಆಗ ಸಕಲ ಕರ್ಮಗಳು ಪರಿಹರಿಸಲ್ಪಟ್ಟವುಗಳಾಗಿಬಿಡುವುವು. ಸಮಸ್ತ ದುಃಖಗಳೂ ಕ್ಷಯಿಸುವುವು. ಸಮಸ್ತ ಪುಣ್ಯಾಪಾಪಕರ್ಮಗಳೂ ಲಯಹೊಂದುವುವು. ಏಕೆಂದರೆ, ತನ್ನಿಂದಲೇ ಮಾಡಲ್ಪಟ್ಟದ್ದಾದರೂ ಮಾನಸಿಕವಾದ ಕರ್ಮದಿಂದಲೂ ಕೂಡ ಜ್ಞಾನಿಯು ಎಂದಿಗೂ ಆಕ್ರಮಿಸಲ್ಪಡುವುದಿಲ್ಲ. ಪರವಶನಾಗಿ ಮಾಡಲ್ಪಡು

ಯಥಾ ಬಾಲೋ ಮನಸಾ ನಗರಸ್ಯ ನಿರ್ಮಾಣಂ ನಿರ್ವ್ಯಗ್ರಂ ಕುರ್ವನ್ ನಗರ ನಿರ್ಮಾಣಂ ಮನಃಕೃತಮಕೃತಮಿವಲೀಲಯಾನುಭವತಿ। ಸೋಽಪಾದೇಯತಾ ಸುಖದುಃಖಮಕೃತ್ರಿಮಮಿತಿ ಪಶ್ಯತಿ ನಗರನಿರ್ಮಥನಂ ಚ ಮನಃಕೃತಂ ಕೃತಮಿತಿ ಪಶ್ಯತೀತಿ ದುಃಖಮಪಿ ಲೀಲಯಾನುಭವನ್ನಪಿ ನ ದುಃಖಮಿತಿ ಪಶ್ಯತಿ। ಏವಮಸೌ ಪರಮಾರ್ಥತಃ ಕುರ್ವನ್ನಪಿ ನ ಲಿಪ್ಯತ ಏವೇತಿ ॥ ೧೭ ॥

ವುದಿಲ್ಲ. ಪರಮಾರ್ಥತಃ ತನಗಿಂತ ವ್ಯತಿರಿಕ್ತವಾದ ವಸ್ತುವು ಯಾವುದೂ ಇಲ್ಲದ ಕಾರಣ, ಕರ್ಮದ ಗುಣದೋಷಗಳಿಂದ ರಾಗಾದಿಗಳನ್ನು ಹೊಂದಿ ಅದರಲ್ಲಿಯೇ ಆಸಕ್ತನಾಗುವುದಿಲ್ಲ.

೧೭. ಮಾಡಿದುದೂ ಮಾಡದಿರುವುದೇ ಆಗುವುದು ಎಂಬುದರ ದೃಷ್ಟಾಂತವು ಹೇಗೆಂದರೆ, ಒಬ್ಬ ಬಾಲನು ಮೊದಲು ತನ್ನ ಮನಸ್ಸಿನೊಳಗೆಯೇ ಒಂದು ನಗರವನ್ನು ನಿರ್ಮಿಸುವನು. ನಿರ್ಮಿತವಾದ ಆ ನಗರಕ್ಕೆ ತನ್ನ ವಿನೋದಾನುಸಾರವಾಗಿ ಅಲಂಕಾರವನ್ನೂ ಮಾಡುವನು. ತರುವಾಯ ತನ್ನ ಮನಸ್ಸಿನಲ್ಲಿಯೇ ಕಲ್ಪಿತವಾದ ನಗರ ನಿರ್ಮಾಣವನ್ನು (ಮನಃಕೃತವಲ್ಲವು) ಅಕೃತವಾಗಿ ಸತ್ಯವಾಗಿರುವಂತೆಯೇ ಭಾವಿಸಿಕೊಂಡು ವಿನೋದದಿಂದ ಅದನ್ನು ಸ್ವಲ್ಪಕಾಲ ಅನುಭವಿಸುವನು. ಆ ಸ್ಥಿತಿಯಲ್ಲಿ ತಾನು ಬೇರೆ ಯಾವುದನ್ನೂ ಗ್ರಹಿಸಲಿಲ್ಲವಾದಕಾರಣ, ತತ್ಕಾಲದ ಸುಖದುಃಖಗಳನ್ನೆಲ್ಲ ಅಕೃತ್ರಿಮವೆಂದೇ ಭಾವಿಸುವನು. ಬಳಿಕ ಇನ್ನೂ ಸ್ವಲ್ಪ ಕಾಲಾನಂತರ ಪೂರ್ವದಲ್ಲಿ ತಾನು ತನ್ನ ಮನದೊಳಗೆ ನಿರ್ಮಿಸಿಕೊಂಡಿದ್ದ ನಗರವು ಹಾಳಾಗಿಹೋದಂತೆಯೂ (ನಿವೃತ್ತ) ಮನಸ್ಸಿನಲ್ಲಿಯೇ ಕಾಣುವನು. ಆ ಬಗೆಯಾದ ನಗರ ನಿವೃತ್ತಿಯನ್ನು ವಾಸ್ತವವೆಂದೇ ತಿಳಿದುಕೊಂಡು ತಜ್ಜನ್ಯವಾದ ದುಃಖವನ್ನೂ ಲೀಲೆಯಿಂದ ಅನುಭವಿಸುವವನಾದರೂ "ಅದು ನಿಜವಾಗಿ ದುಃಖವಲ್ಲ"ವೆಂದು (ಅಥವಾ ಕೃತ್ರಿಮವಾದುದುದೆಂದು) ತಿಳಿಯಲಾರದವನಾಗಿರುವನು. ಇದು ಸರ್ವಾನುಭವ ಸಿದ್ಧವು. ಇದರಂತೆಯೇ ಆತ್ಮಜ್ಞನು ಕರ್ಮಗಳನ್ನು ವಾಸ್ತವವಾಗಿ ಮಾಡುತ್ತಿರುವವನಾದರೂ ಅವುಗಳ ಸಂಪರ್ಕವು (ಕರ್ತೃತ್ವವು) ಇಲ್ಲದವನಾಗಿಯೇ ಇರುವನು.

ಸರ್ವಭಾವೇಷು ಹೇಯೋಪಾದೇಯತಾಭ್ಯಾಂ ಜಗತಿ ಕಿಂ ಕಾರಣಂ ದುಃಖಸ್ಯ ನ ಚೋಪಾದೇಯೋ ಕಿಂಚಿದಪಿ ಸಂಭವತಿ ಯದವಿನಾಶಂ ವ್ಯತಿರಿಕ್ತಂ ಚಾತ್ಮನಸ್ತಸ್ಮಾದಯಮಾತ್ಮಾs ಕರ್ತಾsಭೋಕ್ತಾsತತ್ತ್ವತೋ ಯದೇತತ್ಕರ್ತೃತ್ವಂ ಸ್ವಧ್ಯಾರೋಪತ್ಯೇ || ೧೮ ||

---

೧೮. ಈ ಜಗತ್ತಿನಲ್ಲಿ ಇದು ತ್ಯಾಜ್ಯ (ಹೇಯ) ವೆಂದೂ ಅದು ಉಪಾದೇಯ (ಗ್ರಾಹ್ಯ) ವೆಂದು ವ್ಯವಹರಿಸಲ್ಪಡತಕ್ಕ ಸರ್ವ ವಸ್ತುಗಳಲ್ಲಿ ದುಃಖಕ್ಕೆ ಕಾರಣವು ಯಾವುದು? ಹೇಯವಾದುದು ದುಃಖಕಾರಣವಲ್ಲ. ಒಂದನ್ನು ಬಿಡಬೇಕಾದರೆ ಮೊದಲು ಅದನ್ನು ತೆಗೆದುಕೊಂಡಿರಬೇಕು. ತೆಗೆದುಕೊಂಡಿರುವುದನ್ನು ಬಿಡಬಹುದೇ ಹೊರತು, ತೆಗೆದುಕೊಳ್ಳದೆ ಇರುವುದನ್ನು ಬಿಡುವಿಕೆಯು ಹೇಗೂ ಸಂಭವಿಸುವುದಿಲ್ಲ. ಹೇಯವೆಂಬುದು ಎಂದಿಗೂ ಉಪಾದೇಯವಾಗಲಾರದು. ಅದು ಕಾರಣ ಹೇಯವು ದುಃಖಹೇತುವೆಂಬ ಪ್ರಸಕ್ತಿಗೂ ಅವಕಾಶವಿಲ್ಲ. ಅಂತೂ ಹೀಗೆ ಪರಿಶಿಷ್ಟವಾದ ಉಪಾದೇಯವೇ ದುಃಖಹೇತುವೆಂದು ಕೊನೆಗೆ ಹೇಳಬೇಕಾಗಿ ಬಂದಿತು. ಆ ಪಕ್ಷವೂ (ಹಾಗೆ ಹೇಳುವುದೂ ಕೂಡ) ಸುತರಾಂ ಅಸಂಭವವೇ ಸರಿ. ಹೇಗೆಂದರೆ ಇಂತಹ ದುಃಖಹೇತುವಾದ ಉಪಾದೇಯವು ನಶ್ವರವಾದುದೇ ಅಥವಾ ಅವಿನಾಶಿ (ಅನಶ್ವರವಾದುದೇ? ಯಾವುದು ನಶ್ವರವಾದುದೋ ಅದು ತನ್ನದೇ ರಕ್ಷಿಸಿಕೊಳ್ಳಲು ಸಮರ್ಥವಾಗಿರುವಾಗ ಅದು ಇನ್ನೊಂದಕ್ಕೆ ಹೇತುವಾಗುವುದೆಂದು ಹೇಳುವುದು ಹೇಗೂ ಉಪಪನ್ನವಾಗುವುದಿಲ್ಲವಾದ ಕಾರಣ ನಶ್ವರವಾದ ಉಪಾದೇಯವು ದುಃಖಹೇತುವೆಂಬ ವಾದವು ಸಮಂಜಸವಲ್ಲ. ಹೀಗೆಯೇ ಅನಶ್ವರವಾದ ಉಪಾದೇಯವು ದುಃಖಹೇತುವೆಂಬ ವಾದವೂ ಸರ್ವಥಾ ಅಸಮಂಜಸವೇ ಸರಿ. ಹೇಗೆಂದರೆ-"ಅತೋಽನ್ಯದಾರ್ತಂ" ಇತ್ಯಾದಿ ಶ್ರುತಿಗಳಿಂದ ಆತ್ಮವ್ಯಾತಿರಿಕ್ತವಾದುದೆಲ್ಲವೂ ನಶ್ವರವೆಂದು ಸಿದ್ಧಾಂತವಾಗಿರುವದರಿಂದ ಉಪಾದೇಯವಾದ ಜಗತ್ತಿನಲ್ಲಿ ಎಷ್ಟು ಹುಡುಕಿದರೂ ಅನಶ್ವರವಾದ ಯಾವುದೊಂದು ವಸ್ತುವೂ ಇಲ್ಲವೇ ಇಲ್ಲ. ಅಂತಹ ಅವಿನಾಶಿಯಾದ ವಸ್ತುವೊಂದು ಜಗತ್ತಿನಲ್ಲಿ ಉಪಾದೇಯವಾಗಿ ಇದ್ದಿದ್ದರೆ ಅದು ದುಃಖಹೇತುಭೂತವಾಗಿದ್ದಿತು. ಅವಿನಾಶಿಯಾದ ಆತ್ಮವಾದರೋ ಹೀಗೆ ಭೋಗ್ಯವಾದ ದುಃಖಕ್ಕೆ ಕಾರಣವು ಇಂತಹುದೆಂದು ನಿರೂಪಣಮಾಡುವುದೇ ಸಾಧ್ಯವಿಲ್ಲವಾದಕಾರಣದಿಂದಲೂ ಆತ್ಮವು ತತ್ತ್ವತಃ ಅಕರ್ತೃವು ಮತ್ತು ಅಭೋಕ್ತೃವು ಎಂಬುದು ಸಿದ್ಧಾಂತವಾಯಿತು. ಸರ್ವಾನುಭವಗೋಚರವಾದ ಆತ್ಮನ ಕರ್ತೃತ್ವವು ತಾತ್ತ್ವಿಕವಲ್ಲ (ವಾಸ್ತವವಲ್ಲ) ಮಿಥ್ಯೆಯಾಗಿಯೇ ಅಸಂಗನಾದ ಆತ್ಮನಲ್ಲಿ ಅಧ್ಯಾರೋಪಿತವಾಗಿರುವುದು (ಅಧ್ಯಸ್ತವಾಗಿರುವುದು).

ಆವಶ್ಯಕಂ ತತ್ಸಮ್ಯಗ್ದರ್ಶನಮೋಹಾನ್ನ ವಸ್ತುತ ಇತಿ ಯಥಾಭೂತವಸ್ತು ವಿಚಾರಣಾತ್ ಕರ್ತೃತ್ವಭೋಕ್ತೃತ್ವೇ ನ ಸ್ತಃ। ಇಂದ್ರಿಯೇಂದ್ರಿಯಾರ್ಥದ್ವೇಷಾ ಭಿಲಾಷಾದಿಕಾ ದೃಷ್ಟಯಸ್ತದ್ದೃಷ್ಟೀನಾಂ ದೃಶ್ಯತೇ ನಾತದೃಷ್ಟೀನಾಂ ॥ ೧೯ ॥

ಮೋಕ್ಷೋಽಸ್ತಿ ನ ಸಂಸಾರೇ ಸ್ವಸಂಸಕ್ತಮನಸಾಮಿಹಾಸಂಸಕ್ತಮನಸಾಂ ತ್ವೇತತ್ಸ ರ್ವಮೇವಾಸ್ತಿ ॥ ೨೦ ॥

---

೧೯. "ನಹಿ ದೇಹಭೃತಾಶಕ್ಯಂ ತ್ಯಕ್ತುಂ ಕರ್ಮಾಣ್ಯಶೇಷತಃ" ಎಂದು ಭಗವದ್ಗೀತೆಯಲ್ಲಿ ಉಪದಿಷ್ಟವಾದ ನ್ಯಾಯಾನುಗುಣವಾಗಿ ಅತ್ಯವಶ್ಯವಾಗಿ ಮಾಡಿಯೇತೀರಬೇಕಾದ ಕರ್ಮಗಳು ಉಂಟೆಂದು ಹೇಳುವುದೂ ಸಾಧುವಲ್ಲ. (ಬದುಕಿರುವವರೆಗೂ ಅನಿವಾರ್ಯವಾದ) ಈ ಆವಶ್ಯಕವೆಂಬುದು ಆತ್ಮೈಕತ್ವ ಜ್ಞಾನವು ದೃಢವಾಗಿ ನೆಲೆಸದೆ ಆ ವಿಷಯದಲ್ಲಿ ಭ್ರಾಂತಿಯುಂಟಾಗುವುದರಿಂದ ಮಾತ್ರವೇ ಸಂಭವಿಸುವುದು. ವಸ್ತುತಃ ಇಲ್ಲವೇ ಇಲ್ಲ. ಈ ಕಾರಣದಿಂದ ಯಥಾ ಸ್ಥಿತವಾದ ಆತ್ಮಸ್ವರೂಪ ವಿಚಾರಾಭ್ಯಾಸಾದಿಗಳ ಮೂಲಕ ಪ್ರಮಾಣಭೂತವಾದ ತತ್ತ್ವಜ್ಞಾನೋದಯದಿಂದ ಭ್ರಾಂತಿಜ್ಞಾನವು ಬಾಧಿತವಾದಾಗಲೇ ಕರ್ತೃತ್ವವೂ ಅದರ ಮೂಲಕವಾದ ಭೋಕ್ತೃತ್ವವೂ ಇರುವುದೇ ಇಲ್ಲ. ಮತ್ತು ಇಂದ್ರಿಯ ಗಳಿಂದ ಇಂದ್ರಿಯಾರ್ಥಗಳಲ್ಲಿರುವ ರಾಗದ್ವೇಷಾದಿಗಳಿಂದಲೂ ಅವುಗಳಿಗೆ ನಿಮಿತ್ತ ಭೂತಗಳಿಂದ ಪುಣ್ಯಪಾಪಾದೃಷ್ಟಗಳಿಂದಲೂ, ಪರವಶವಾಗಿರುವ ಬುದ್ಧಿಯುಳ್ಳ ಅಜ್ಞಾನಿಗಳಿಗೆ ಮಾತ್ರವೇ ಈ ಆವಶ್ಯಕಾದಿ ಜ್ಞಾನಗಳು ಉದಯಿಸುವುವೇ ಹೊರತು ಅಂತಹ ಕಲುಷಿತವಾದ ಜ್ಞಾನವಿಲ್ಲದಿರುವ ತತ್ತ್ವಜ್ಞರಿಗೆ ಉದಯಿಸುವುದೇ ಇಲ್ಲ.

೨೦. ಅಖಂಡೈಕರಸನಾದ ಪೂರ್ಣಾತ್ಮನಲ್ಲಿಯೇ ಸರ್ವದಾ ಆಸಕ್ತವಾಗಿರುವ ಮನಸ್ಸುಳ್ಳ ತತ್ತ್ವಜ್ಞಾನಿಗಳಿಗೆ ಈ ಸಂಸಾರದಲ್ಲಿ ಮೋಕ್ಷವೆಂಬ ಕಲ್ಪನೆಯೂ ಇರು ವುದಿಲ್ಲ. (ವಾಸ್ತವವಾಗಿ ಬಂಧವೆಂಬುದಿದ್ದರೆ ಆಗ ಮೋಕ್ಷವೆಂಬ ವ್ಯವಹಾರವೂ ಸಂಭವಿಸುವುದು. ಆತ್ಮನು ಸ್ವಭಾವತಃ ನಿತ್ಯಶುದ್ಧಬುದ್ಧಮುಕ್ತನು. ಅದುಕಾರಣ ಬಂಧವೂ ಇಲ್ಲ. ಅದೇ ಇಲ್ಲವಾದಾಗ ಮೋಕ್ಷವೆಂಬುದೂ ಇಲ್ಲ. ಭ್ರಾಂತಿಯಿಂದ ಬಂಧವು ಕಲ್ಪಿತವಾದಾಗ ಮೋಕ್ಷವೂ ಕಲ್ಪಿತವಾಗುವುದು) ಆತ್ಮನಲ್ಲಿ ಆಸಕ್ತವಾಗದ ಮನಸ್ಸುಳ್ಳ ಅಜ್ಞಜನಗಳಿಗಾದರೋ ಅಜ್ಞಾನವು ಇರುವ ಪರ್ಯಂತವೂ ಬಂಧ ಮೋಕ್ಷಾದಿ ಸಕಲ ವ್ಯವಹಾರವೂ ಇದ್ದೇಇರುವುದು.

ಯಥಾಸ್ಥಿತಂ ಜ್ಞಸ್ಯ ಕೇವಲಮಾತ್ಮತತ್ತ್ವಮೇವೊಲ್ಲಸತಿ ತದ್ದ್ವಿತ್ವೈಕತ್ವವಾದಿಸಿದ್ಧೇ ದ್ವಿತ್ವೈಕತ್ವೇ ಕರೋತಿ ಸತ್ತಾಸತ್ವೇ ಕರೋತಿ ಶಕ್ತಿಜಾಲಾದಭಿನ್ನಾಂ ಸರ್ವಶಕ್ತಿತಾಂ ಚ ದರ್ಶಯತಿ ತಸ್ಯ || ೨೧ ||

ನ ಬಂಧೋಽಸ್ತಿ ನ ಮೋಕ್ಷೋಽಸ್ತಿ ನಾಬಂಧೋಸ್ತಿ ಬಂಧನಂ ।
ಅಪ್ರಬೋಧಾದಿದಂ ದುಃಖಂ ಪ್ರಬೋಧಾತ್ ಪ್ರವಿಲೀಯತೇ || ೨೨ ||

---

೨೧. ತತ್ತ್ವಜ್ಞನಿಗೆ ಪರಮಾರ್ಥವೂ ಯಥಾಭೂತವೂ ಆದ ಅದ್ವಿತೀಯಾತ್ಮತತ್ತ್ವವೊಂದು ಮಾತ್ರವೇ ಸಂತತವೂ ಪ್ರಕಾಶಿಸುತ್ತಿರುವುದು. ಈ ಆತ್ಮತತ್ತ್ವವೇ ದ್ವಿತ್ವಏಕತ್ವಾದಿ ಭೇದಗಳನ್ನು ಕಲ್ಪಿಸಿಕೊಂಡು ವ್ಯವಹರಿಸುವ ದ್ವೈತವಾದಿಗಳ ಮತಗಳಲ್ಲಿ ಪ್ರಸಿದ್ಧವಾದ ದ್ವಿತ್ವ ಏಕತ್ವಾದಿಗಳನ್ನು ತತ್ತ್ವಜ್ಞನಿಗೆ ತಾತ್ಕಾಲಿಕವಾದ ಜೀವನ, ಚೋದ್ಯಪರಿಹಾರ ಮೊದಲಾದ ವ್ಯವಹಾರ ಸಿದ್ಧಿಗೋಸ್ಕರವಾಗಿ ತೋರಿಸುವುದು. ಹಾಗೆಯೇ ಸತ್ತಾಸತ್ತ್ವಗಳನ್ನೂ ತೋರಿಸುವುದು. ಮತ್ತು ನಾನಾ ಶಕ್ತಿ ಸಮುದಾಯಕ್ಕಿಂತ ಅಭಿನ್ನವಾದ ಸರ್ವಶಕ್ತತ್ವವನ್ನೂ ತೋರಿಸುವುದು.

[ಪರಮತಸಿದ್ಧವಾದ ದ್ವಿತ್ವಏಕತ್ವಾದಿಗಳನ್ನು ಅಭ್ಯುಪಗಮ (ಒಪ್ಪಿಕೊಂಡು) ಮಾಡಿಕೊಂಡು ಅದ್ವೈತಶಾಸ್ತ್ರದಲ್ಲಿ ವ್ಯವಹರಿಸುವುದೇ ಹೊರತು ಅವು ವಿವಕ್ಷಿತವಲ್ಲ.]

೨೨. ಬಂಧವೆಂಬುದೂ ಇಲ್ಲ ಮೋಕ್ಷವೆಂಬುದೂ ಇಲ್ಲ. ಬಂಧವಿಲ್ಲವೆಂಬುದೂ ಇಲ್ಲ. ಕಾಮಕರ್ಮಾದಿ ಬಂಧಹೇತುವೆಂಬುದೂ ಇಲ್ಲ. ಸ್ವಸ್ವರೂಪ ತತ್ತ್ವಜ್ಞಾನವಿಲ್ಲದಿರುವುದರಿಂದ (ಅಜ್ಞಾನದಿಂದ) ಈ ದುಃಖವು ಪ್ರಾದುರ್ಭವಿಸಿರುವಕಾರಣ ಜ್ಞಾನೋದಯದಿಂದ ಅಜ್ಞಾನದೊಡನೆ ಆದ್ವೈತದುಃಖವೂ ಲಯಹೊಂದುವುದು ಎಂಬ ಸಿದ್ಧಾಂತವು ಫಲಿತವಾಯಿತು.

ಸಂಕಲ್ಪಿತಾ ಜಗತಿ ಮೋಕ್ಷಮತಿರ್ಮುಧೈವ
ಸಂಕಲ್ಪಿತಾ ಜಗತಿ ಬಂಧಮತಿರ್ಮುಧೈವ ।
ಸಂತ್ಯಜ್ಯ ಸರ್ವಮನಹಂಕೃತಿರಾತ್ಮನಿಷ್ಠೋ
ಧೀರೋ ಧಿಯಾ ವ್ಯವಹರ್ರ ಭುವಿ ರಾಮ ತಿಷ್ಠ ॥ ೨೩ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಉಪಶಮ ವರ್ಣನಂ" ನಾಮ ಅಷ್ಟತ್ರಿಂಶಃ ಸರ್ಗಃ

---

೨೩. ಅಯ್ಯ ರಾಮ, ಈ ಜಗತ್ತಿನಲ್ಲಿ ಬಂಧಮೋಕ್ಷಗಳೆಂಬ ಎರಡು ಬಗೆಯ ವ್ಯವಹಾರ ಬುದ್ಧಿಗಳೂ ಅಜ್ಞಾನದಿಂದ ಅಸತ್ಯವಾಗಿಯೇ ಕಲ್ಪಿತವಾಗಿರುವುವು. ಆದುದರಿಂದ ಈ ಸಕಲ ಭೇದ ವ್ಯವಹಾರವನ್ನೂ ಸಂಪೂರ್ಣವಾಗಿ ಪರಿತ್ಯಾಗಮಾಡಿ ಅಹಂಕಾರ ರಹಿತನಾಗಿಯೂ, ಸದಾ ಆತ್ಮೈಕನಿಷ್ಠನಾಗಿಯೂ, ಸುಖದುಃಖಾದಿ ದ್ವಂದ್ವಗಳಿಂದ ವಿಕಾರಹೊಂದದ ಧೀರನಾಗಿಯೂ, ಸದಾ ತತ್ವಜ್ಞಾನದಿಂದ ಕೂಡಿ ನಿರ್ಲಿಪ್ತನಾಗಿ ಈ ಪ್ರಪಂಚದಲ್ಲಿ ವ್ಯವಹರಿಸುವವನಾಗಿರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಉಪಶಮ ವರ್ಣನ" ಎಂಬ ಮೂವತ್ತೆಂಟನೆಯ ಸರ್ಗವು.

ಏಕೋನ ಚತ್ವಾರಿಂಶಃ ಸರ್ಗಃ

ಶ್ರೀರಾಮ ಉವಾಚ:—

ಭಗವನ್ನೇವಂ ಸ್ಥಿತೇ ಪರೇ ಬ್ರಹ್ಮಣ್ಯೇವ ವಿದ್ಯಮಾನೇ ಕುತ ಏವಾಭಿತ್ತಿಚಿತ್ರ ರೂಪಾಯಾಃ ಸೃಷ್ಟೇರಾಗಮ ಇತಿ ಕಥಯ ಮಹಾತ್ಮನ್ ॥ ೧ ॥

ಶ್ರೀ ವಸಿಷ್ಠ ಉವಾಚ:—

ರಾಜಪುತ್ರ ಬ್ರಹ್ಮತತ್ತ್ವಮೇವೇದಮಾವರ್ತತೇ ಯಸ್ಮಾತ್ಸರ್ವಶಕ್ತಿತತ್ತಸ್ಮಾತ್ಸರ್ವಾಃ ಶಕ್ತಯೋ ಬ್ರಹ್ಮಣಿ ದೃಶ್ಯನ್ತೇ ॥ ೨ ॥

ಸತ್ವಮಸತ್ವಂ ದ್ವಿತ್ವಮೇಕತ್ವಮನೇಕತ್ವಮಾದ್ಯತ್ವಮನ್ತತ್ವಮಿತಿ ॥ ೩ ॥

ಮೂವತ್ತೊಂಭತ್ತನೆಯ ಸರ್ಗ

೧. ಶ್ರೀರಾಮನು ಹೇಳಿದನು—ಪೂಜ್ಯ ಗುರುಗಳೇ, ಇದುವರೆವಿಗೆ ಪೂರ್ವ ಸರ್ಗದಲ್ಲಿ ತಾವು ಉಪದೇಶಿಸಿದಂತೆ ಬಂಧಮೋಕ್ಷಾದಿ ಸಕಲ ವ್ಯವಹಾರಗಳೂ ಅಸಂಭವವಾಗಿರುತ್ತೆ. ಪರಬ್ರಹ್ಮವೊಂದು ಮಾತ್ರವೇ ಪರಮಾರ್ಥ ಸತ್ಯವಾಗಿರುವ ಪಕ್ಷದಲ್ಲಿ, ಗೋಡೆಯೇ ಇಲ್ಲದಿರುವಾಗ ಚಿತ್ರವೂ ನಿರಾಶ್ರಯವಾಗಿ ಇಲ್ಲದೆಯೇ ಹೋಗುವಂತೆ ಈ ಸೃಷ್ಟಿಯೂ ಆಶ್ರಯಶೂನ್ಯವಾಗಿ ಬಿಡಬೇಕಲ್ಲವೆ ? ಆದ್ದರಿಂದ ಸರ್ವರಿಗೂ ಗೋಚರವಾಗಿರುವ ಈ ಸೃಷ್ಟಿಯು ಯಾವುದರ ದೆಸೆಯಿಂದ ಬರುವುದು? ಮಹಾತ್ಮರೇ, ಈ ವಿಚಾರವನ್ನು ನಿಸ್ಸಂದೇಹವಾಗುವಂತೆ ದಯೆಮಾಡಿ ಉಪದೇಶಿಸಬೇಕು.

೨-೩. ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಜಪುತ್ರ, ಈ ಪರಬ್ರಹ ತತ್ತ್ವವು ಸರ್ವವಿಧವಾದ ಶಕ್ತಿಯುಳ್ಳದ್ದಾಗಿರುವ ಕಾರಣ ಅದೇ ತತ್ತ್ವವೇ ಈ ನಾನಾ ಜಗದಾಕಾರವಾಗಿಯೂ ವಿವರ್ತಿತವಾಗುವುದು. ಅದುಕಾರಣ, ಆ ಬ್ರಹ್ಮ ತತ್ತ್ವದಲ್ಲಿ ಸತ್ತ್ವ, ಅಸತ್ತ್ವ, ದಿತ್ವ, ಏಕತ್ವ, ಅನೇಕತ್ತ್ವ, ಆದ್ಯತ್ತ್ವ, ಅಂತತ್ವ ಇತ್ಯಾದಿ ನಾನಾ ವಿಧ ಸಕಲ ಶಕ್ತಿಗಳೂ ಇದೆಯೆಂದು ಕಾರ್ಯಲಿಂಗಗಳಿಂದ ಊಹಿಸಲ್ಪಡುತ್ತವೆ.

ತಚ್ಚ ನಾನ್ಯತ್ । ಯಥಾ ಜಲರಾಶೇರ್ಜಲಾಶಯ ಉಲ್ಲಾಸಪ್ರಫುಲ್ಲಾಸೇನ ನಾನಾಕಾರತಾಂ ದರ್ಶಯನ್ ಪ್ರಕಟ ತಾಂ ಗಚ್ಛತಿ ॥ ೪ ॥

ತಥಾ ಚಿದ್ಘನಶ್ಚಿತ್ತಂ ಚಿತ್ತ್ವಾಚ್ಚ ಸರ್ವಾಃ ಶಕ್ತೀಃ ಕರ್ಮಮಯೀರ್ವಾಸನಾಮಯೀರ್ಮನೋಮಯೀಶ್ಚಿನೋತಿ ದರ್ಶಯತಿ ಬಿಭರ್ತಿ ಜನಯತಿ ಕ್ಷಿಪಯತಿ ಚೇತಿ ॥ ೫ ॥

ಸರ್ವೇಷಾಮೇವ ಜೀವಾನಾಂ ಸರ್ವಾಸಾಮುಭಿತೋ ದೃಶಾಂ ।
ಸಮಗ್ರಾಣಾಂ ಪದಾರ್ಥಾನಾಮುತ್ಪತ್ತಿರ್ಬ್ರಹ್ಮಣೋಽನಿಶಂ ॥ ೬ ॥

ಲೋಕಾತ್ಪರಾದುಪಾಯಾಂತಿ ತಸ್ಮಿಂಶ್ಚಿತ್ತ್ವಾದ್ವಿಶಂತ್ಯಲಂ ।
ತನ್ಮಯಾ ಸತತಂ ಏವ ತರಂಗಾ ಇವ ಸಾರೇಗ ॥ ೭ ॥

೪-೫. ಹೀಗೆ ಬ್ರಹತತ್ತ್ವವು ನಾನಾಕಾರವಾಗಿ ತೋರುವಿಕೆಯೂ ಬೇರೆಯಾದುದಲ್ಲ. ಸಮುದ್ರದ ಜಲರಾಶಿಯು ಚಂದ್ರೋದಯ ನಿಮಿತ್ತವಾದ ವೃದ್ಧಿಯನ್ನು ಹೊಂದಿ, ತನ್ನ ತರಂಗ ವಿಲಾಸಗಳಿಂದ ನೃತ್ಯವನ್ನು ಮಾಡುತ್ತಾ ನೊರೆ, ಬುಡ್ಡೆ (ಫೇನ, ಬುದ್ಬುದ) ಮೊದಲಾದವುಗಳ ನಾನಾ ಆಕಾರಗಳನ್ನು ತೋರಿ, ಹೇಗೆ ಪ್ರಕಟವಾಗುವುದೋ ಹಾಗೆಯೇ ಚಿದ್ಘನನಾದ ಆತ್ಮನು ಚಿತ್ತೋಪಾಧಿಕವಾದ ಜೀವಭಾವವನ್ನು ಹೊಂದಿ ಆ ಚಿದಾಭಾಸರೂಪ ಜೀವನಿಷ್ಠವಾದ ಚೈತನ್ಯಶಕ್ತಿಯಿಂದ ಕರ್ಮಮಯವಾಗಿಯೂ, ವಾಸನಾಮಯವಾಗಿಯೂ, ಮನೋಮಯವಾಗಿಯೂ, ಇರುವ ಸಕಲವಿಧ ಶಕ್ತಿಗಳನ್ನೂ ಒಂದೊಂದನ್ನಾಗಿ ಸಂಗ್ರಹಿಸುವುದು. ಹಾಗೆ ಸಂಚಿತವಾದವುಗಳನ್ನು ಫಲಮುಖದಿಂದ ತೋರಿಸುವುದು. ತಾನು ಉಪಭೋಗಿಸುವಾಗ ಆಶಕ್ತಿಗಳನ್ನು ಧರಿಸುವುದು ಬೇಕಾದಾಗ ಅವುಗಳನ್ನು ಸೃಷ್ಟಿಮಾಡುತ್ತಲೂ ಹಾಗೆಯೇ ತಿರೋಭಾವದಿಂದ ನಾಶಗೊಳಿಸುತ್ತಲೂ ಇರುವುದು.

೬-೭. ಈ ಸಕಲ ಜೀವರುಗಳಿಗೂ, ಸಾರ್ವತ್ರಿಕವಾದ ಸಕಲ ವಿಧ ಜ್ಞಾನಗಳಿಗೂ ಸಕಲ ಪದಾರ್ಥಗಳಿಗೂ ಸರ್ವದಾ ಬ್ರಹ್ಮನ ದೆಸೆಯಿಂದಲೇ ಉತ್ಪತ್ತಿಯು. ಮತ್ತು ಇವುಗಳೆಲ್ಲವೂ ಪರಮಾತ್ಮನ ದೆಸೆಯಿಂದಲೇ ಉದಯಿಸುವುವು. ಚಿದ್ಭಾವದ ದೆಸೆಯಿಂದ ಆ ಪರಮಾತ್ಮನಲ್ಲಿಯೇ ಸಮಗ್ರವಾಗಿ ಲಯಹೊಂದುವುವು. ಸಮುದ್ರದಲ್ಲಿನ ತರಂಗಾದಿಗಳು ಹೇಗೆ ಜಲಮಯವೇ ಆಗಿದೆಯೋ ಹಾಗೆಯೇ ಇವೆಲ್ಲವೂ ಸಂತತವೂ ಪರಮಾತ್ಮಮಯವಾಗಿಯೇ ಇವೆ. (ಎಂದು ಪ್ರಾಚೀನರೂ ಹೇಳಿರುವರು.)

ಶ್ರೀರಾಮ ಉವಾಚ:--

ಭಗವಂಸ್ತವಾತಿಗಹನೇಯಂ ವಚನವ್ಯಕ್ತಿರ್ನ ಖಲ್ವಿದ್ಯ ವಾಕ್ಯಾರ್ಥಮವ ಗಚ್ಛಾಮಿ ॥ ೮ ॥

ಕ್ವ ಕಿಲಾತೀತಮನಃ ಷಷ್ಠೇಂದ್ರಿಯವೃತ್ತಿ ಬ್ರಹ್ಮತತ್ತ್ವಂ ಕ್ವ ಭಂಗುರೇಯಂ ತಜ್ಜಾ ಪದಾರ್ಥಶ್ರೀರಿತಿ ವಚನರಚನಾ । ಯದಿ ಚಾಯಮಾರಂಭೋ ಬ್ರಹ್ಮಣ ಆಪತಿತಸ್ತದನೇನ ತತ್ಸದೃಶೇನೈವ ಭವಿತವ್ಯಂ ॥ ೯ ॥

ಯೋ ಯಸ್ಮಾಜ್ಜಾಯತೇ ಸ ತತ್ಸದೃಶ ಏವ ಭವತಿ ॥ ೧೦ ॥

ಯಥಾ ದೀಪಾದ್ದೀಪಃ ಪುರುಷಾತ್ಪುರುಷಃ ಸಸ್ಯಾತ್ಸಸ್ಯಂ ॥ ೧೧ ॥

ಯತೋ ನಿರ್ವಿಕಾರಾದ್ಯದಾಗತಂ ನಿರ್ವಿಕಾರೇಣೈವಾನೇನ ಭವಿತವ್ಯಂ॥ ೧೨ ॥

ಅದ್ವೈತದ್ವ್ಯತಿರಿಕ್ತಂ ಚಿದಾತ್ಮನಸ್ತನ್ನಿಷ್ಕಲಂಕಸ್ಯ ಪರಮೇಶ್ವರಸ್ಯ ಯೇಯಂ ಕಲಂಕಾಪತ್ತಿರಿತ್ಯಾಕರ್ಣ್ಯ ಭಗವಾನ್ ಬ್ರಹ್ಮರ್ಷಿರುವಾಚ ॥ ೧೩ ॥

೮-೧೩. (ಹೀಗೆ ಶಕ್ತಿವಾದದ ಮೂಲಕ ಶ್ರೀ ವಸಿಷ್ಠರು ಶ್ರೀ ರಾಮನಿಗೆ ಸಮಾಧಾನ ಹೇಳಿದರೂ ಕೂಡ ಶ್ರೀ ರಾಮನು ಅದನ್ನು ಕೇಳಿ, ವಹ್ನಿಯಲ್ಲಿ ಶೈತ್ಯ ಶಕ್ತಿಯೂ,ಜಲದಲ್ಲಿ ಸುಡುವ ಶಕ್ತಿಯೂ,ಹೇಗೆ ವಿರುದ್ಧವೋ ಹಾಗೆ ಚಿತ್ತಿನಲ್ಲಿ ಜಾಡ್ಯ ಶಕ್ತಿಯೂ, ಅದೃಶ್ಯದಲ್ಲಿ ದೃಶ್ಯತ್ವ ಶಕ್ತಿಯೂ, ನಿತ್ಯದಲ್ಲಿ ಅನಿತ್ಯತ್ವಶಕ್ತಿಯೂ, (ಅದರ ಸ್ವಭಾವಕ್ಕೆ ವಿರುದ್ಧವಾಗಿರುವುದರಿಂದ ಅಸಂಭಾವಿತವೇ ಸರಿ ಎಂದು ಆಶಂಕೆಪಟ್ಟವ ನಾಗಿ ಪುನಃ ಗುರುಗಳನ್ನು ಕುರಿತು ಪ್ರಶ್ನೆ ಮಾಡಿದನು.)

ಪೂಜ್ಯರೇ, ತಮ್ಮ ಈ ವಾದದ ಚಾತುರ್ಯವು ಅತ್ಯಂತ ಗಹನವಾಗಿರುವುದು. ಈ ಉಪದೇಶ ವಾಕ್ಯದಲ್ಲಿ ವಿರೋಧವು ಸ್ಪಷ್ಟವಾಗಿ ಕಾಣುತ್ತಿರುವುದರಿಂದ ಹೇಗೂ ಅದರ ಅರ್ಥಜ್ಞಾನವು ನನಗೆ ಸುತರಾಂ ಉಂಟಾಗದೆಇರುವುದು. ಅಂತರಿಂದ್ರಿಯವಾದ ಮನಸ್ಸಿನ ವೃತ್ತಿಯನ್ನೂ ಕಣ್ಣು ಮೊದಲಾದ ಬಾಹ್ಯೇಂದ್ರಿಯಗಳ ವೃತ್ತಿಯನ್ನೂ ಅತಿಕ್ರಮಿಸಿರುವ ಆ ಪರಬ್ರಹ್ಮತತ್ತ್ವವು ಎಲ್ಲಿ ? ಒಂದು ಕ್ಷಣದೊಳಗಾಗಿ ನಶ್ವರವಾಗಿ ಬಿಡುವ ಈ ಪ್ರಾಪಂಚಿಕ ಪದಾರ್ಥ ಸಂಪತ್ತಿಯು ಎಲ್ಲವೂ ಅಂತಹ ಪರಬ್ರಹ್ಮತತ್ತ್ವ ದಿಂದಲೇ ಉದಯಿಸುವುದೆಂದು ಹೇಳುವ ವಾದದ ಕಲ್ಪನೆಯು ಎಲ್ಲಿ? ಅಹಾ ! ಇವೆರಡು ವಾದಗಳೂ ಪರಸ್ಪರ ಎಷ್ಟು ಅಸಂಬದ್ಧವಾಗಿವೆ !! ಲೋಕದಲ್ಲಿ ಒಂದು ದೀಪದಿಂದ ಮತ್ತೊಂದು ದೀಪವೂ, ಪುರುಷ (ಮನುಷ್ಯ ಜಾತಿ ಸಾಮಾನ್ಯ)ನಿಂದ

ಶ್ರೀವಸಿಷ್ಠ ಉವಾಚ—

ಬ್ರಹ್ಮೈವೇದಂ ಸ್ಥಿತಂ ನಾಮ ಮಲಮಸ್ತೀಹ ನಾನಘ ।
ತರಂಗೌಘಗಣೈರಂಭಃ ಸಂಧೌ ಸ್ಫುರತಿ ನೋ ರಜಃ ॥ ೧೪ ॥

ದ್ವಿತೀಯಾ ಕಲ್ಪನೈವೇಹ ನ ರಘೂದ್ವಹ ವಿದ್ಯತೇ ।
ಬ್ರಹ್ಮಮಾತ್ರಾದೃತೇ ವಹ್ನಾವೌಷ್ಣ್ಯಮಾತ್ರಾದೃತೇ ಯಥಾ ॥ ೧೫ ॥

ಪುರುಷನೂ, ಸಸ್ಯದಿಂದ ಸಸ್ಯವೂ, ಉದಯಿಸುವಂತೆ ಎಲ್ಲ ಕಾರ್ಯಗಳೂ ಸ್ವಸದೃಶಗಳಾದ ಕಾರಣಗಳಿಂದಲೇ ಉದಯಿಸುವುವು ಎಂಬುದು ಸಕಲರ ಅನುಭವ ಗೋಚರವಾಗಿ ನಿರ್ವಿವಾದವಾಗಿರುವುದು. ಆದಕಾರಣ, ಯಾವುದು ಯಾವುದರ ದೆಸೆಯಿಂದ ಜನಿಸುವುದೋ, ಆ ಕಾರ್ಯವು ಅದರ ಕಾರಣಕ್ಕೆ ಸದೃಶವಾಗಿಯೇ ಇರುವುದು ಎಂಬ ವ್ಯಾಪ್ತಿಯು ಲೋಕರೂಢವಾಗಿರುವುದು. ವಾಸ್ತವವಾದ ಸ್ಥಿತಿಯು ಹೀಗಿರುವಾಗ, ಕೇವಲ ಜಡವೂ ಅಸತ್ಯವೂ ಆದ ಈ ಪ್ರಪಂಚರೂಪಕಾರ್ಯವು ಚಿದ್ರೂಪನೂ ಸತ್ಯವೂ ಆದ ಬ್ರಹ್ಮನಿಂದಲೇ ಉದಯಿಸಿರುವುದು ಎಂದು ಹೇಳುವ ಪಕ್ಷದಲ್ಲಿ, ಆಗ ಕಾರ್ಯವಾದ ಜಗತ್ತೂ ಕಾರಣವಾದ ಬ್ರಹ್ಮನಿಗೆ ಸಮನಾಗಿಯೇ ಇರಬೇಕಾಗುವುದಲ್ಲಾ! ಇದು ಹೇಗೆ ಸಮಂಜಸವಾಗುವುದು? ಮತ್ತು ಯಾವ ಈ ಪ್ರಪಂಚವು ನಿರ್ವಿಕಾರನಾದ ಬ್ರಹ್ಮನ ದೆಸೆಯಿಂದ ಜನಿಸಿರುವುದೆಂದು, ತಾವು ಹೇಳುವ ಕಾರಣ, ಈ ಜಗತ್ತು ತನಗೆ ಕಾರಣವಾದ ಬ್ರಹ್ಮನಂತೆಯೇ ನಿರ್ವಿಕಾರವಾದುದಾಗಿಯೇ ಇರಬೇಕಾಗುವುದು. ಅಥವಾ (ಪಕ್ಷಾಂತರವನ್ನು ಆಶ್ರಯಿಸಿ) ಕಾರ್ಯವಾದ ಈ ಜಗತ್ತು, ಕಾರಣವಾದ ಚಿದಾತ್ಮನಿಂದ ವ್ಯತಿರಿಕ್ತವಾದುದು ಎಂದು ಹೇಳಿದ್ದೇ ಆದರೆ ಆಗಲೂ ನಿಷ್ಕಳಂಕನಾದ ಪರಮೇಶ್ವರನಿಗೆ (ಚಿದಾತ್ಮನಿಗೆ) ಜಗದ್ಭಾವ ಪ್ರಾಪ್ತಿರೂಪವಾದ ಒಂದು (ಇಲ್ಲದ) ಕಳಂಕವನ್ನು ಆರೋಪಣೆಮಾಡಿದಂತಾಗುವುದಲ್ಲವೆ! ಇದು ಹೇಗೆ ನ್ಯಾಯವು? (ಎಂಬುದು ಶ್ರೀರಾಮನ ಪ್ರಶ್ನಾಭಿಪ್ರಾಯ)

ಈ ರೀತಿಯಾದ ಶ್ರೀರಾಮನ ಆಕ್ಷೇಪವನ್ನು ಕೇಳಿ, ಬ್ರಹ್ಮರ್ಷಿಗಳಾದ ಪೂಜ್ಯ ವಸಿಷ್ಠರು ಹೇಳಿದರು.

೧೪–೧೫. ಅಯ್ಯಾ, ಅವಿದ್ಯಾದಿದೋಷರಹಿತನಾದ ರಾಮನೇ, ಸಮುದ್ರದಲ್ಲಿ ಜಲವೇ ಅಲೆಗಳು, ಫೇನಗಳು ಮೊದಲಾದವುಗಳ ಸಮುದಾಯಾತ್ಮಕವಾಗಿ ವಿವಿಧವಾಗಿ ಸ್ಫುರಿಸುವುದೇ ಹೊರತು, ಎಂದಿಗೂ ರಜಸ್ಸು ಸ್ಫುರಿಸುವುದಿಲ್ಲ. ಅಂತೆಯೇ, ಈ ದೃಶ್ಯ (ಜಗತ್ತು) ಎಲ್ಲವೂ ನಿತ್ಯಶುದ್ಧ ಬ್ರಹ್ಮವೇ ಆಗಿರುವುದೇ

ಶ್ರೀ ರಾಮ ಉವಾಚ:--

ನಿರ್ದುಃಖಂ ಬ್ರಹ್ಮ ನಿರ್ದ್ವಂದ್ವಂ ತಜ್ಜಂ ದುಃಖಮಯಂ ಜಗತ್ ।
ಅಸ್ಪಷ್ಟಾರ್ಥಮಿದಂ ಬ್ರಹ್ಮನ್ ವೇದ್ಮಿ ವಚನಂ ತವ ॥ ೧೬ ॥

ಹೊರತು, ಬ್ರಹ್ಮನೊಳಗೆ ಜಗತ್ತೆಂಬ ಮಲವು ಬೇರೆಯಾಗಿ ಎಂದಿಗೂ ಇಲ್ಲವೇ ಇಲ್ಲ. ಅಯ್ಯ ರಘೋತ್ತಮ, ಅಗ್ನಿಯಲ್ಲಿ ಉಷ್ಣತ್ವವೆಂಬುದನ್ನು ಒಂದನ್ನು ಮಾತ್ರ ಬಿಟ್ಟು ಬೇರೆ ಯಾವುದೂ ಇಲ್ಲದಿರುವಂತೆ, ಈ ಜಗತ್ತಿನಲ್ಲಿ ಬ್ರಹ್ಮವೊಂದು ಹೊರತು, ಬೇರೆ ಯಾದ ಎರಡನೆಯು ಯಾವುದೊಂದು ಕಲ್ಪನೆಯೂ ಪರಮಾರ್ಥತಃ ಇಲ್ಲವೇ ಇಲ್ಲವು.

[ಈ ತಾತ್ತ್ವಿಕ ದೃಷ್ಟಿಯನ್ನು ಚೆನ್ನಾಗಿ ಗ್ರಹಿಸದೆ, ವ್ಯಾವಹಾರಿಕವಾದ ಅಜ್ಞ ದೃಷ್ಟಿಯಿಂದ ನೀನು ಹೀಗೇಕೆ ಪ್ರಶ್ನೆ ಮಾಡುವೆ? ಎಂದರ್ಥ.]

ಆಗಲೂ ಇನ್ನೂ ಅಜ್ಞದೃಷ್ಟಿಯಿಂದಲೇ ಶ್ರೀ ರಾ ಮ ನು ಪುನಃ ಪ್ರಶ್ನೆ ಮಾಡಿದನು.

೧೬. ಸ್ವಾಮಿ, ಬ್ರಹ್ಮರ್ಷಿಗಳೇ, ನನಗೆ ಈಗಲೂ ಸಂಶಯವು ತೊಲಗಲಿಲ್ಲ. ಪರಬ್ರಹ್ಮವು ಸರ್ವ ದುಃಖಗಳಿಂದಲೂ ಅಸಂಸ್ಪೃಷ್ಟವೆಂದೂ ದ್ವಂದ್ವಾತೀತವೆಂದೂ ಆನಂದೈಕರಸವೆಂದೂ ತಾವೇ ಉಪದೇಶಮಾಡಿರುವಿರಿ. ಅಂತಹ ಬ್ರಹ್ಮದ ದೆಸೆ ಯಿಂದ ಜಗತ್ತು ಉದ್ಭವಿಸುವುದೆಂದೂ ಹೇಳುತ್ತಿರುವಿರಿ. ಈ ಜಗತ್ತಾದರೋ ದುಃಖಮಯವೆಂಬುದು ಸರ್ವರಿಗೂ ಅನುಭೂತವಾದ ವಿಷಯ. ಈ ಕಾರಣದಿಂದ ತಮ್ಮ ಉಪದೇಶವಾಕ್ಯದ ಅರ್ಥವು ನನಗೆ ಅಸ್ಪಷ್ಟವಾಗಿರುವುದು. ತಮ್ಮ ಈ ಮಾತೇ ನನಗೆ ಸ್ವಲ್ಪವೂ ಗೊತ್ತಾಗಿಲ್ಲ. (ಪುನಃ, ಅರ್ಥವು ಸ್ಪಷ್ಟವಾಗುವಂತೆ ಉಪದೇಶಿಸಿ, ನನ್ನ ಸಂಶಯವನ್ನು ಪರಿಹರಿಸಬೇಕು.)

[ಹೀಗೆ ಪೂರ್ವದಲ್ಲಿ ಶ್ರೀ ವಸಿಷ್ಠರಿಗೂ ಶ್ರೀ ರಾಮನಿಗೂ ನಡೆದ ಸಂಭಾಷ ಣೆಯ ರೀತಿಯನ್ನು, ಭಾರದ್ವಾಜನೆಂಬ ತನ್ನ ಶಿಷ್ಯನಿಗೆ ವಿವರಿಸುತ್ತಲಿದ್ದ) ಶ್ರೀ ವಾಲ್ಮೀಕಿ ಮುನಿಗಳು (ತಮ್ಮ ಶಿಷ್ಯರನ್ನು ಸಂಬೋಧಿಸಿ ಹೇಳಿದರು.)

ಶ್ರೀ ವಾಲ್ಮೀಕಿರುವಾಚ:—

ಇತ್ಯುಕ್ತೇ ತತ್ರ ರಾಮೇಣ ಚಿಂತಯಾಮಾಸ ಚೇತಸಾ ।
ವಸಿಷ್ಠೊ ಮುನಿಶಾರ್ದೂಲೋ ರಾಘವಸ್ಯೋಪದೇಶನೇ ॥ ೧೭ ॥

ಪರಂ ವಿಕಾಸಮಾಯಾತಾ ನಾಸ್ಯ ತಾವದಿಯಂ ಮತಿಃ ।
ಕಿಂಚಿನ್ನಿರ್ಮಲತಾಂ ಪ್ರಾಪ್ತಾ ಪ್ರೋಹ್ಯತೇ ಚೇಹ ವಸ್ತುನಿ ॥ ೧೮ ॥

ಯೋ ವ್ಯುತ್ಪನ್ನಮನಾಸ್ತಸ್ಯ ಜ್ಞಾತಜ್ಞೇಯಸ್ಯ ಧೀಮತಃ।
ಮೋಕ್ಷೋಪಾಯಗಿರಾಂ ಪಾರಂ ಪ್ರಯಾತಸ್ಯ ವಿವೇಕತಃ ॥ ೧೯ ॥

ನ ಕಶ್ಚಿತ್ ಕಸ್ಯಚಿದ್ದೋಷೋ ನಾಸ್ತಿ ವಿದ್ಯಾತ್ಮನಿ ಹ್ಯಲಂ !
ಯಾವನ್ನೋಕ್ತಂ ನ ವಿಶ್ರಾಂತಿಂ ತಾವದೇತ್ಯೇಷ ರಾಘವಃ ॥ ೨೦ ॥

---

೧೭. ಅಯ್ಯ ಭರದ್ವಾಜ, ಹೀಗೆ ಶ್ರೀರಾಮನು ಹೇಳುತ್ತಿರಲಿಕ್ಕಾಗಿ, ಋಷಿ ಶ್ರೇಷ್ಠರಾದ ಶ್ರೀ ವಸಿಷ್ಠರು ಶ್ರೀರಾಮನಿಗೆ ಸುಲಭವಾಗಿ ತತ್ತ್ವೋಪದೇಶ ಮಾಡುವ ಬೇರೊಂದು ವಿಧಾನವನ್ನು ತಮ್ಮ ಮನಸ್ಸಿನಲ್ಲಿ ಈ ರೀತಿ ಯೋಚಿಸಿದರು.

೧೮. ಈ ರಾಮನ ಬುದ್ಧಿಯು ತತ್ತ್ವಗ್ರಹಣ ಮಾಡಲು ತಕ್ಕಷ್ಟು ಹೆಚ್ಚಾದ ವಿಕಾಸವನ್ನು ಇನ್ನೂ ಪಡೆದಿಲ್ಲವು. ಅದು ಸ್ವಲ್ಪಮಾತ್ರ ನೈರ್ಮಲ್ಯವನ್ನೇನೋ ಹೊಂದಿರುವುದು. ಆದರೂ ಕೂಡ, ಈ ಪ್ರಾಪಂಚಿಕ ವಸ್ತುಗಳಲ್ಲಿಯೇ ಪ್ರವಹಿಸುತ್ತಿರುವುದು.

೧೯–೨೦. "ಈ ಜಗತ್ತು ಕೇವಲ ಜಡವು (ಅಚಿತ್)"ಎಂಬ ಅಜ್ಞಾನವನ್ನು ಹೋಗಲಾಡಿಸಿಕೊಂಡು, "ಅದು (ಜಗತ್ತು) ಚಿದೇಕರಸಾತ್ಮಕವೇ"ಎಂದು ಕಾಣಲು ಯಾವನ ಮನಸ್ಸು ಸಮರ್ಥವಾಗಿದೆಯೋ (ವ್ಯುತ್ಪನ್ನವಾದ ಮನಸ್ಸುಳ್ಳವನು) ಅಂತಹ ಜ್ಞಾನಿಯು ಜ್ಞಾತಜ್ಞೇಯನು (ತಿಳಿಯಬೇಕಾದ ಆತ್ಮೈಕತ್ವವನ್ನು ತಿಳಿದವನು) ಎನ್ನಿಸುವನು. ಅವನು ತನ್ನ ವಿವೇಕ ಬಲದಿಂದ ಮೋಕ್ಷಸಾಧನೋಪಾಯಗಳನ್ನು ಬೋಧಿಸುವ ತತ್ತ್ವಮಸ್ಯಾದಿ ಮಹಾವಾಕ್ಯಗಳ ಪಾರಂಗತನಾಗಿರುವನು. ಅಂತಹ ಜ್ಞಾನಿಯ ದೃಷ್ಟಿಯಿಂದ, ಯಾವದೊಂದು ವಸ್ತುವಿಗೂ ಯಾವುದೊಂದು ವಿರೋಧವೂ ಇಲ್ಲವು; ಏಕೆಂದರೆ, ಕೇವಲ ಜ್ಞಾನಮಾತ್ರಸ್ವರೂಪನಾದ ಪರಬ್ರಹ್ಮನಲ್ಲಿ ಅದಕ್ಕೆ ವಿರುದ್ಧ ರೂಪವಾದ ಜಗತ್ತು ಕಾಲತ್ರಯದಲ್ಲಿಯೂ ಕೂಡ (ಎಂದಿಗೂ ಕೂಡ) ಸುತರಾಂ ಇಲ್ಲವೇ ಇಲ್ಲ. ಎಂಬ ದೃಢವಾದ ಜ್ಞಾನವು ಅವನಿಗೆ

ಅರ್ಧವ್ಯುತ್ಪನ್ನಬುದ್ಧೇಸ್ತು ನೈತದ್ವ್ಯಕ್ತಂ ಹಿ ಶೋಭತೇ ।
ದೃಶ್ಯಾನಯಾ ಭೋಗದೃಶಾ ಭಾವಯನ್ನೇಷ ನಶ್ಯತಿ ॥ ೨೧ ॥

ಪರಾಂ ದೃಷ್ಟಿಂ ಪ್ರಯಾತಸ್ಯ ಭೋಗೇಚ್ಛಾ ನಾಭಿಜಾಯತೇ ।
ಸರ್ವಂ ಬ್ರಹ್ಮೇತಿ ಸಿದ್ಧಾಂತಃ ಕಾಲೇ ನಾಮಾಸ್ಯ ಯುಜ್ಯತೇ ॥ ೨೨ ॥

ಉಂಟಾಗಿರುವುದು. ಈ ವಿಷಯವನ್ನು ಈ ರಾಮನಿಗೆ ಸ್ಪಷ್ಟವಾಗಿ (ಮನಸ್ಸಿನಲ್ಲಿ ದೃಢವಾಗಿ ನಿಲ್ಲುವಂತೆ ಉಪದೇಶ ಮಾಡುವವರೆಗೂ ಈ ರಾಮನು ಮನಸ್ಸಿನಲ್ಲಿ ವಿಶ್ರಾಂತಿಯನ್ನೂ ಪಡೆಯುವ ಹಾಗಿಲ್ಲ.

(ಆದುದರಿಂದ ಇವನು ಅತ್ಯವಶ್ಯಕವಾಗಿ ಉಪದೇಶಿಸಲ್ಪಡಬೇಕಾದವನಾಗಿರುವನು.)

೨೧. ಅರ್ಧ (ಸ್ವಲ್ಪ ಮಾತ್ರ) ವಿವೇಕವನ್ನು ಹೊಂದಿದ ಮನಸ್ಸುಳ್ಳವನಿಗೆ ಪೂರ್ವೋಕ್ತವಾದ "ಸರ್ವಂ-ಖಲ್ವಿದಂ ಬ್ರಹ್ಮ" (ಇದೆಲ್ಲವೂ ಬ್ರಹ್ಮವೇ) ಎಂಬ ತತ್ತ್ವೋಪದೇಶವು ಶೋಭಿಸುವುದಿಲ್ಲ. (ಮನಸ್ಸಿನಲ್ಲಿ ದೃಢವಾಗಿ ನಿಲ್ಲುವುದಿಲ್ಲ.) ಏಕೆಂದರೆ ಈ ಅರ್ಧವ್ಯುತ್ಪನ್ನನು, ಸರ್ವದಾ ದೃಶ್ಯಗಳನ್ನೇ ತಂದೊದಗಿಸುವ ಪ್ರಾಪಂಚಿಕ ಭೋಗದೃಷ್ಟಿಯಿಂದ ಮನಸ್ಸಿನಲ್ಲಿ ದೃಶ್ಯಗಳನ್ನೇ ಭಾವನೆ ಮಾಡುತ್ತ (ತತ್ತ್ವಬೋಧದಿಂದ ಭ್ರಷ್ಟವಾಗಿ) ನಾಶಹೊಂದುವನು. (ಕೆಡುವನು.)

೨೨. ಪಾರಮಾರ್ಥಿಕವಾದ ಸದಸದ್ವಿವೇಕರೂಪವಾದ ಉತ್ತಮ ಜ್ಞಾನವನ್ನು ಪಡೆದಿರುವ ಸಾಧುವಿಗೆ ಕ್ಷಣಿಕಗಳಾದ ವಿಷಯ ಭೋಗಗಳಲ್ಲಿ ಇಚ್ಛೆಯು ಉದಯಿಸುವುದೇ ಇಲ್ಲ. ಅಂತಹ ವಿರಕ್ತನಿಗೆ ಆ ಸಮಯದಲ್ಲಿ ಇದೆಲ್ಲವೂ ಬ್ರಹ್ಮವೇ ಎಂಬ ಸುನಿಶ್ಚಿತವಾದ ಶಾಸ್ತ್ರ ತತ್ತ್ವೋಪದೇಶವು ಯುಕ್ತವಾಗುವುದು. (ಮನಸ್ಸಿನಲ್ಲಿ ದೃಢವಾಗಿ ನಿಲ್ಲುವುದು.)

ಸಾಧಕನ ಮನಸ್ಸು ಭೋಗೇಚ್ಛೆಯಿಂದ ಪರಾಂಙ್ಮುಖವಾಗಿ ವೈರಾಗ್ಯವನ್ನು ಹೊಂದುವವರೆಗೂ ತತ್ತ್ವೋಪದೇಶಕ್ಕೆ ಅರ್ಹವಾಗುವುದಿಲ್ಲ. ಆ ವೈರಾಗ್ಯವು ಈ ಜಗತ್ತು ನಶ್ವರವು (ಅಸತ್ತು) ಪರಬ್ರಹ್ಮವೊಂದೇ ಸತ್ ಎಂಬ ಜ್ಞಾನದಿಂದ (ಸದಸದ್ವಿವೇಕದಿಂದ) ಮಾತ್ರವೇ ಉಂಟಾಗಬೇಕಲ್ಲದೆ ಬೇರೆ ಮಾರ್ಗವಿಲ್ಲ. ಅದು ಕಾರಣ ಮೊದಲಲ್ಲಿ ವಿವೇಕ ವೈರಾಗ್ಯಗಳನ್ನು ಪಡೆಯಲು ಪ್ರಯತ್ನಿಸಬೇಕು.

ಆದೌ ಶಮದಮಪ್ರಾಯೈರ್ಗುಣೈಃ ಶಿಷ್ಯಂ ವಿಶೋಧಯೇತ್ ।
ಪಶ್ಚಾತ್ಸರ್ವಮಿದಂ ಬ್ರಹ್ಮ ಶುದ್ಧಸ್ತ್ವಮಿತಿ ಬೋಧಯೇತ್ ॥ ೨೩ ॥

ಅಜ್ಞಸ್ಯಾರ್ಧಪ್ರಬುದ್ಧಸ್ಯ ಸರ್ವಂ ಬ್ರಹ್ಮೇತಿ ಯೋ ವದೇತ್ ।
ಮಹಾನರಕಜಾಲೇಷು ಸ ತೇನ ವಿನಿಯೋಜಿತಃ ॥ ೨೪ ॥

---

೨೩. ಆದುದರಿಂದ, ಉಪದೇಶಕನು ಮೊಟ್ಟಮೊದಲು ಶಮದಮಾದಿ ಪ್ರಧಾನಗಳಾದ ವಿವೇಕ ವೈರಾಗ್ಯಾದಿ ಗುಣಗಳಿಂದ ಶಿಷ್ಯನನ್ನು ಚೆನ್ನಾಗಿ ಶೋಧನೆ ಮಾಡಬೇಕು. ಬಳಿಕ (ವಿವೇಕ ವೈರಾಗ್ಯಾದಿ ಸಾಧನ ಚತುಷ್ಟಯ ಸಂಪತ್ತಿಯುಂಟಾದನಂತರ) "ಈ ಸರ್ವವೂ ಬ್ರಹ್ಮವೇ"; "ನೀನು ಶುದ್ಧ ಚಿದ್ರೂಪನು"—ಎಂದು ತತ್ತ್ವವನ್ನು ಬೋಧಿಸಬೇಕು.

[ಇದರಿಂದ-"ಅಥಾತೋಬ್ರಹ್ಮಜಿಜ್ಞಾಸಾ'' ಎಂಬ ಶಾರೀರಕ ಮೀಮಾಂಸಾ ಶಾಸ್ತ್ರದ ಪ್ರಾರಂಭ ಸೂತ್ರದ "ಅಥ'' ಎಂಬ ಶಬ್ದದಿಂದ ಬೋಧಿತವಾದ "ನಿತ್ಯಾನಿತ್ಯ ವಸ್ತುವಿವೇಕಃ, ಇಹಾಮುತ್ರಾರ್ಥ ಫಲಭೋಗವಿರಾಗಃ, ಶಮದಮಾದಿ ಸಾಧನ ಸಂಪತ್, ಮುಮುಕ್ಷುತ್ವಂ" ಎಂಬ ಸಾಧನ ಚತುಷ್ಟಯ ಸಂಪನ್ನನೇ ಉಪದೇಶಾರ್ಹನಾದ ಅಧಿಕಾರಿಯು. ಗುರುವು ತನ್ನ ಶಿಷ್ಯನಿಗೆ ಈ ಬಗೆಯಾದ ಸಾಧನ ಚತುಷ್ಟಯ ಸಂಪತ್ತಿಯು ಇರುವುದೇ ಉಪದೇಶಾರ್ಹನಾಗಿರುವನೇ ಎಂಬುದನ್ನು ಮೊದಲು ಪರೀಕ್ಷಿಸಿ ಅನಂತರ ಉಪದೇಶಿಸಬೇಕು ಎಂಬ ವಿಷಯವು ಸೂಚಿತವಾಗಿರುವುದು. ಇದೇ ಅಭಿಪ್ರಾಯವನ್ನು ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರವರು ಅದೇ ಸೂತ್ರದ ಭಾಷ್ಯದಲ್ಲಿ 'ತೇಷು ಹಿ ಸತ್ಸು-ಪ್ರಾಗಪಿ ಧರ್ಮಜಿಜ್ಞಾಸಾಯಾಃ ಊರ್ಧ್ವಂಚ ಶಕ್ಯತೇ ಬ್ರಹ್ಮ ಜಿಜ್ಞಾಸಿತುಂ-ಜ್ಞಾತುಂಚ-ನವಿಪರ್ಯಯೇ ತಸ್ಮಾದಥ ಶಬ್ದೇನ ಯಥೋಕ್ತ ಸಾಧನ ಸಂಪತ್ತ್ಯಾನಂತರ್ಯಂ ಉಪದಿಶ್ಯತೇ'' ಎಂದು ಮುಕ್ತಕಂಠದಿಂದ ಹೇಳಿರುವರು.)

೨೪. ಯಾವ ಉಪದೇಶಕನಾದರೆ ಶಿಷ್ಯನ ಯೋಗ್ಯತೆಯನ್ನು ಅಂದರೆ ಪೂರ್ವೋಕ್ತ ಸಾಧನ ಸಂಪತ್ತಿಯನ್ನು ಪರೀಕ್ಷಿಸದೆ ಕೇವಲ ಅಜ್ಞನಿಗೂ ಅರ್ಧ ಪ್ರಬೋಧವನ್ನು ಪಡೆದವನಿಗೂ "ಇದೆಲ್ಲವೂ ಬ್ರಹ್ಮವೇ" ಎಂದು ಉಪದೇಶ ಮಾಡುವನೋ ಅಂತಹ ಗುರುವು ಆ ಶಿಷ್ಯನನ್ನು (ಉಭಯ ಮಾರ್ಗ (ಧರ್ಮ ಜ್ಞಾನ) ಗಳಿಂದ ಭ್ರಷ್ಟನನ್ನಾಗಿ ಮಾಡಿ) ಮಹಾ ರೌರವಾದಿ ನರಕ ಪರಂಪರೆಗಳಲ್ಲಿ ಕೆಡವಿಬಿಡುವನು.

ಪ್ರಬುದ್ಧಬುದ್ಧೇಃ ಪ್ರಕ್ಷೀಣಭೋಗೇಚ್ಛಸ್ಯ ನಿರಾಶಿಷಃ ।
ನಾಸ್ತ್ಯವಿದ್ಯಾಮಲಮಿತಿ ಯುಕ್ತಂ ವಕ್ತುಂ ಮಹಾತ್ಮನಃ ॥ ೨೫ ॥

ಅಪರೀಕ್ಷ್ಯ ಚ ಯಃ ಶಿಷ್ಯಂ ಪ್ರಶಾಸ್ಯತಿ ವಿಮೂಢಧೀಃ ।
ಸ ಏವ ನರಕಂ ಯಾತಿ ಯಾವದಾಭೂತಸಂಪ್ಲವಂ ॥ ೨೬ ॥

ಇತಿ ಸಂಚಿಂತ್ಯ ಭಗವಾನಜ್ಞಾನತಿಮಿರಾಪಹಃ ।
ತಮುವಾಚ ಮುನಿಶ್ರೇಷ್ಠೋ ವಸಿಷ್ಠೋ ಭೂಮಿಭಾಸ್ಕರಃ ॥ ೨೭ ॥

ಶ್ರೀ ವಸಿಷ್ಠ ಉವಾಚ:—

ಕಲಂಕಕಲನಾ ಬ್ರಹ್ಮಣ್ಯಸ್ತಿ ನಾಸ್ತೀತಿ ವಾನಘ ।
ಸಿದ್ಧಾಂತಕಾಲೇ ವಕ್ತವ್ಯಂ ಸ್ವಯಂ ಜ್ಞಾಸ್ಯಸಿ ರಾಘವ ॥ ೨೮ ॥

---

೨೫. ಪ್ರಬೋಧಗೊಂಡ ಮನಸ್ಸುಳ್ಳವನಾಗಿಯೂ ಸುತರಾಂ ವಿಷಯ ಭೋಗೇಚ್ಛಾ ರಹಿತನಾಗಿಯೂ, ನಿಷ್ಕಾಮನಾಗಿಯೂ ಇರುವ ವಿರಕ್ತನಾದ ಮಹಾನುಭಾವನಿಗೆ ಅವಿದ್ಯೆಯೆಂಬ ಮಲವು ಹೃದಯದಿಂದ ಸಂಪೂರ್ಣವಾಗಿ ತೊಲಗಿಬಿಟ್ಟಿರುವುದರಿಂದ "ಸರ್ವವೂ ಬ್ರಹ್ಮವೇ-ನೀನು ಚಿದ್ರೂಪನಾದ ಪರಬ್ರಹ್ಮವೇ" ಎಂಬೀ ಮೊದಲಾದ ಉಪದೇಶ ಮಾಡುವಿಕೆಯು ಸಾರ್ಥಕವಾಗಿ ಶೋಭಿಸುವುದು.

೨೬. ಅತ್ಯಂತ ಮೂಢಬುದ್ಧಿಯುಳ್ಳ ಗುರುವು ಶಿಷ್ಯನ ಯೋಗ್ಯತೆಯನ್ನು ಪರೀಕ್ಷಿಸದೆಯೇ ವೇದಾಂತ ಶಾಸ್ತ್ರಾನಧಿಕಾರಿಯಾದವನಿಗೆ ಆತ್ಮೈಕತ್ವವನ್ನು ಉಪದೇಶಮಾಡುವನೋ ಅವನೇ ಮಹಾ ಪ್ರಳಯಕಾಲ ಪರ್ಯಂತವೂ ನರಕಕ್ಕೆ ಹೋಗಿ ಬಿದ್ದು ದುಃಖಭಾಗಿಯಾಗುವನು.

೨೭. ಈ ಪ್ರಕಾರವಾಗಿ ಚೆನ್ನಾಗಿ ಮನಸ್ಸಿನಲ್ಲಿ ವಿಮರ್ಶೆ ಮಾಡಿ ಶಿಷ್ಯರ ಅಜ್ಞಾನವೆಂಬ ಅಂಧಕಾರವನ್ನು ಪರಿಹರಿಸಲು ಸಮರ್ಥನಾಗಿ ಭೂಮಿಯ ಮೇಲೆ ಸಂಚರಿಸುವ ಸೂರ್ಯನಂತಿರುವ ಮಹಾತ್ಮನಾದ ಶ್ರೀ ವಸಿಷ್ಠ ಮುನೀಂದ್ರನು ಶ್ರೀರಾಮನಿಗೆ ಮತ್ತೆ ಹೀಗೆ ಹೇಳಿದನು.

೨೮. ಶ್ರೀ ವಸಿಷ್ಠನು ಹೇಳಿದನು–ಅಯ್ಯ, ದೋಷರಹಿತನಾದ ರಾಮ, ಪರಬ್ರಹ್ಮನಲ್ಲಿ ಜಗದ್ರೂಪವಾದ ಕಳಂಕ ಕಲ್ಪನೆಯು ವಾಸ್ತವವಾಗಿ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಇನ್ನು ಮೇಲೆ ಕ್ರಮವಾಗಿ ನೀನೇ ನಿನ್ನ ಅನುಭವದಿಂದ ತಿಳಿಯುವೆ. ಒಂದು ವೇಳೆ, ನಿನಗೆ ತಿಳಿಯದೆ ಹೋದರೆ ಅದು ಸಿದ್ಧಾಂತ ಕಾಲದಲ್ಲಿ

ಬ್ರಹ್ಮ ಸರ್ವಶಕ್ತಿ ಸರ್ವವ್ಯಾಪಿ ಸರ್ವಗತಂ ಸರ್ವೋಽಹಮೇವೇತಿ ॥ ೨೯ ॥

ಯಥೇಂದ್ರಜಾಲಿನಃ ಪಶ್ಯಸಿ ಚಿತ್ರಾ ಮಾಯಯಾ ಕ್ರಿಯಾ ಜನಯಂತಃ ಸದಸತ್ತಾಂ ನಯಂತ್ಯಸಚ್ಚ ಸತ್ತಾಂ ನಯಂತಿ ತಥೈವಾತ್ಮಾ ಅಮಾಯಾಮಯೋಽಪಿ ಮಾಯಾಮಯ ಇವ ಪರಮ ಐಂದ್ರಜಾಲಿಕೋ ಘಟಂ ಪಟಂ ಕರೋತಿ ಪಟಂ ಚ ಘಟಂ ಕರೋತಿ ಉಪಲೇ ಲತಾಂ ಜನಯತಿ ಮೇರೌ ಕನಕತಟೇ ನಂದನವನಮಿವ ಲತಾಯಾಮುಪಲಮುತ್ಪಾದಯತಿ ಕಲ್ಪಪಾದಪೇಷು ರತ್ನಸ್ತಬಕಮಿವ ವ್ಯೋಮ್ನಿ ಕಾನನಮಧ್ಯಾರೋಪಯತಿ ॥ ೩೦ ॥

ನಿನಗೆ ಉಪದೇಶಿಸಲ್ಪಡುವುದು. (ಈಗ ಅಲ್ಲವು. ಆ ತತ್ತ್ವವನ್ನೂ ಈಗ ನಿನಗೆ ಉಪದೇಶ ಮಾಡಲು ತಕ್ಕ ಯೋಗ್ಯವಾದ ಕಾಲವಲ್ಲ.)

೨೯. ಪ್ರಕೃತ ಬ್ರಹ್ಮವು ಸರ್ವಶಕ್ತಿ ಸಮನ್ವಿತವೆಂದೂ ಆಕಾಶದಂತೆ ಸರ್ವವ್ಯಾಪಿಯೆಂದೂ ಸರ್ವತ್ರ ಸರ್ವದಾ ಸಮುಗತವಾಗಿರುವುದೆಂದೂ ಮತ್ತು ಸರ್ವವೂ ನಾನೇ ಎಂದೂ ತಿಳಿಯುವವನಾಗು.

೩೦. ಪರಬ್ರಹ್ಮನ ಈ ಬಗೆಯಾದ ಸರ್ವ ಶಕ್ತಿತ್ವವೂ ಪ್ರತ್ಯಗಾತ್ಮನ ಸರ್ವಾತ್ಮತ್ವವೂ ಕೇವಲ ಮಾಯೆಯಿಂದಲೇ ಹೊರತು ಬೇರೆಯಲ್ಲ. ಇದಕ್ಕೆ ದೃಷ್ಟಾಂತವೇನೆಂದರೆ ಮಾಯಾವಿಗಳಾಗಿ ಇಂದ್ರಜಾಲ ವಿದ್ಯೆಯನ್ನು ತಿಳಿದವರು ತಮ್ಮ ಮಾಯಾಬಲದಿಂದ ವಿಚಿತ್ರವಾದ ವ್ಯಾಪಾರಗಳನ್ನು ಸೃಷ್ಟಿಮಾಡುತ್ತಲೂ ಸತ್ತನ್ನು ಅಸತ್ತನ್ನಾಗಿಯೂ (ಇದ್ದುದನ್ನು ಇಲ್ಲದುದನ್ನಾಗಿಯೂ) ಅಸತ್ತನ್ನು ಸತ್ತನ್ನಾಗಿಯೂ (ಇಲ್ಲದುದನ್ನೂ ಇರುವುದನ್ನಾಗಿಯೂ) ಮಾಡಿ ತೋರಿಸಿ ಜನಗಳನ್ನು ಬೆರಗುಗೊಳಿಸುವರು. ಇದನ್ನು ನೀನು ಕಂಡಿರುವೆಯಲ್ಲವೆ! ಹೀಗೆಯೇ ಆತ್ಮನು ವಸ್ತುತಃ ಮಾಯಾಮಯನಲ್ಲದವನಾದರೂ ಮಾಯಾಮಯನಾದ ಮಹಾ ಐಂದ್ರಜಾಲಿಕನಂತೆ, ಒಂದು ನಿಮಿಷಮಾತ್ರದಲ್ಲಿ ನಾವು ನೋಡುತ್ತಿರುವಂತೆಯೇ, ಅದು ಹೇಗೋ ಘಟವನ್ನು ಪಟವನ್ನಾಗಿಯೂ ಪಟವನ್ನು ಘಟವನ್ನಾಗಿಯೂ (ಅಂತೂ ಇವೇ ಮೊದಲಾದ ಕೇವಲ ಅಸಂಭಾವ್ಯವಾದವುಗಳನ್ನು ಸಂಭಾವ್ಯವಾಗಿ) ಮಾಡಿ ತೋರಿಸುವನು. ಹೇಗೆಂದರೆ—ಮೇರುಪರ್ವತದಲ್ಲಿ ಸುವರ್ಣಮಯವಾದ ಪ್ರಸ್ಥಭೂಮಿಯಲ್ಲಿ ನಂದನವನವನ್ನು ಕಲ್ಪಿಸಿರುವಂತೆ ಕಲ್ಲಿನಲ್ಲಿ ಲತೆಗಳನ್ನು ಸೃಜಿಸುವನು. ಕಲ್ಪವೃಕ್ಷಗಳಲ್ಲಿ ರತ್ನಗಳ ಗೊಂಚಲುಗಳನ್ನು ಉಂಟುಮಾಡಿರುವಂತೆ, ಬಳ್ಳಿಯಲ್ಲಿ

ಗಂಧರ್ವ ಉದ್ಯಾನಮಿವ ತಸ್ಮಿನ್ ಜಗತಿ ಭವಿಷ್ಯತಿ ಗಗನೇ ಕಲ್ಪನಯಾ ನಗರತಾಂ ಜನಯತಿ ನಷ್ಟಚ್ಛಾಯಾಂ ಜನಮಿವ ವ್ಯೋಮಧರಾತಲಂ ನಯತೀತಿ || ೩೧ ||

ಗಂಧರ್ವನಗರರಾಜಗೃಹೇ ವಿಪುಲಾಂಗನಾ ಜನಮಿವ ಭೂತಲೇ ವ್ಯೋಮ ನಿವೇಶಯತಿ || ೩೨ ||

ರಕ್ತಕುಟ್ಟಿಮೇಷ್ವಾಕಾಶಪ್ರತಿಬಿಂಬಮಿವ ಕಿಂಚದಸ್ತಿ ಜಗತಿ ಭವಿಷ್ಯತಿ ವಾ ಬಭೂವ || ೩೩ ||

ಯದೀಶ್ವರೋ ವ್ಯಕ್ತರೂಪೋ ವಿಚಿತ್ರತಾಮುಪೇತ್ಯ ನಿದರ್ಶಯತಿ || ೩೪ ||

ಕಲ್ಲುಗಳನ್ನು ಉತ್ಪತ್ತಿಮಾಡಿ ತೋರಿಸುವನು. ಮತ್ತು ನಿರಾಧಾರವಾದ ಆಕಾಶದಲ್ಲಿ ದೊಡ್ಡದಾದ ಒಂದು ಕಾಡನ್ನು ಸೃಜಿಸಿ ಆರೋಪಮಾಡಿ ತೋರಿಸುವನು.

[ಸುವರ್ಣದ ಮೇಲೆ ವೃಕ್ಷಗಳು ಬೆಳೆಯುವುದು ಅಸಂಭವವಾದರೂ, ದೇವತಾ ಮಹಿಮೆಯಿಂದ ಸುವರ್ಣಮಯವಾದ ಮೇರುವಿನ ತಪ್ಪಲಿನೊಳಗೆ ನಂದನ, ಚೈತ್ರ ರಥ ಮೊದಲಾದ ಉದ್ಯಾನವನಗಳು ಹೇಗೆ ಬೆಳೆದುಕೊಂಡಿವೆಯೋ ಹಾಗೆಯೇ ಆತ್ಮನ ಮಾಯಾ ಬಲದಿಂದ ಲತೆಯಲ್ಲಿ ಕಲ್ಲುಗಳೂ, ಕಲ್ಲುಗಳಿಂದ ವೃಕ್ಷಗುಲ್ಮಾದಿ ಗಳೂ, ಅಂತರಿಕ್ಷದಲ್ಲಿ ಕಾಡು, ಗಂಧರ್ವನಗರ ಮೊದಲಾದವುಗಳೂ ಕೇವಲ ಅಸಂಭಾವಿತಗಳಾದರೂ ಸಂಭಾವ್ಯವೇ ಎಂದು ತಾತ್ಪರ್ಯ.]

೩೧. ಆ ಆಕಾಶದೊಳಗೆ ಒಂದು ಜಗತ್ತು ಇರುವಂತೆಯೂ, ಅದರಲ್ಲಿ ಒಂದು ಗಂಧರ್ವ ಉದ್ಯಾನವನವು ಇರುವಂತೆಯೂ ಆಗುವುದು. ತನ್ನ ಕಲ್ಪನೆಯಿಂದಲೇ, ಆಕಾಶದಲ್ಲಿ ಒಂದು ನಗರವನ್ನು ನಿರ್ಮಿಸುವನು. ಆಕಾಶದಲ್ಲಿರುವ ನೀಲವರ್ಣ ಮಯವಾದ ಕಾಂತಿಯನ್ನು ನಾಶಗೊಳಿಸಿ ಅದನ್ನು ಭೂಮಿಗೆ ತಂದುಬಿಡುವನು.

೩೨. ಗಂಧರ್ವನಗರದೊಳಗೆ ಅರಮನೆಯಲ್ಲಿರುವ ನಾರೀಮಣಿಗಳ ಸಮೂಹ ವನ್ನೆಲ್ಲ ಭೂಮಿಗೆ ತಂದುಬಿಟ್ಟು, ಆಕಾಶವನ್ನೇ ಭೂಮಿಯಮೇಲೆ ತಂದು ಬಿಟ್ಟವ ನಂತೆ ತೋರಿಸುವನು.

೩೩–೩೪. ಹೀಗೆ ಪರಮೇಶ್ವರನು ತನ್ನ ಮಾಯಾ ಶಕ್ತಿಯಿಂದಲೇ ನಾನಾ ರೂಪಗಳಿಂದ ಅಭಿವ್ಯಕ್ತನಾಗಿ ವಿಚಿತ್ರಗಳಾದ ಲಕ್ಷ್ಯೋಪಲಕ್ಷ ಭಾವಗಳನ್ನು ಹೊಂದಿ ತೋರಿಸುತ್ತಿರುವ ಭೂತಭವಿಷ್ಯದ್ವರ್ತಮಾನಕಾಲಿಕಗಳಾದ ಪ್ರಪಂಚದಲ್ಲಿನ ವಸ್ತು

ಸರ್ವಮೇವ ಸರ್ವಥಾ ಸರ್ವತ್ರ ಯಥಾ ಸಂಭವತ್ಯೇಕಮೇವೇಹ ವಸ್ತು
ವಿದ್ಯತ ಇತಿ ತಸ್ಮಾದ್ಧರ್ಷಾಮರ್ಷವಿಸ್ಮಯಾನಾಂ ಕ್ವ ನಾವಸರೋ ರಾಮ ॥ ೩೫ ॥

ಸಮತಯೈವ ಸತತಂ ಧೃತಿಮತಾ ಸ್ಥಾತವ್ಯಂ ॥ ೩೬ ॥

ಜಾತವೆಲ್ಲವೂ ಪದ್ಮರಾಗಮಣಿಮಯವಾದ ಅರಮನೆಗಳಲ್ಲಿ ರತ್ನಖಚಿತವಾದ ಕೆಂಪು ನೆಲದೊಳಗೆ ಪ್ರತಿಫಲಿಸುವ ಆಕಾಶದ ಪ್ರತಿಬಿಂಬದಂತೆ ಇರುವುದು.

[ಆಕಾಶವು ಸ್ವತಃ ಕೆಂಪಗಿಲ್ಲವಾದರೂ, ಅದು ಪ್ರತಿಬಿಂಬಿಸಿರುವ, ತನಗೆ ಅಧಿಷ್ಠಾನವಾದ ಪದ್ಮರಾಗಮಣಿಮಯವಾದ ಭೂಮಿಯ ಸಂಪರ್ಕದಿಂದ ಅದರ ಬಣ್ಣವನ್ನು ಪಡೆದು, ರಕ್ತವರ್ಣಮಯವಾಗಿ (ಕೆಂಪಾಗಿ) ಕಾಣಿಸುವಂತೆ, ತ್ರೈಕಾಲಿಕವಾಗಿ ತೋರುವ ಈ ಜಗತ್ತು ವಸ್ತುತಃ ಅಸತ್ತಾಗಿರುವುದಾದರೂ ಸ್ವಾಧಿಷ್ಠಾನವಾದ ಬ್ರಹ್ಮನ ಸತ್ತೆಯನ್ನು ಹೊಂದಿ ಸದ್ವಸ್ತುವಿನಂತೆ ತೋರುವುದೇ ಹೊರತು, ಅಧಿಷ್ಠಾನ ಬ್ರಹ್ಮಸತ್ತಾತಿರಿಕ್ತವಾದ ಸತ್ತೆಯು ಜಗತ್ತಿಗೆ ಸುತರಾಂ ಇಲ್ಲವೆಂದು ಭಾವ.]

("ಇಂದ್ರೋ ಮಾಯಾಭಿಃ ಪುರುರೂಪ ಈಯತೇ" "ಅಜಾಯಮಾನೋ ಬಹುಧಾ ವಿಜಾಯತೇ")

೩೫–೩೬. ಅಯ್ಯಾ ರಾಮ, ಹೀಗೆ ಸರ್ವವೂ ಕೂಡ ಸರ್ವ ಪ್ರಕಾರಗಳಿಂದಲೂ, ಸರ್ವದಾ, ಸರ್ವತ್ರ, ಮಾಯಾಶಕ್ತಿಯಿಂದ ಸಂಭವಿಸುತ್ತಿರುವುದು ಎಲ್ಲರ ಅನುಭವಗೋಚರವಾಗಿರುವ ಕಾರಣ, ಈ ಜಗತ್ತಿನಲ್ಲಿ ಅಸಂಭಾವ್ಯವಾದುದು ಯಾವುದೊಂದೂ ಇಲ್ಲವು. ಅದ್ವಿತೀಯವಾದ ನಿರುಪಾಧಿಕವಾದ ಆತ್ಮವೊಂದೇ ಪರಮಾರ್ಥಸತ್ಯಭೂತವಾಗಿ ಸರ್ವ ವಿಕಲ್ಪಾಶ್ರಯವಾಗಿರುವುದು. ಹೀಗಿರುವ ಕಾರಣ, ಹರ್ಷ, ಕೋಪ, ಆಶ್ಚರ್ಯ ಮೊದಲಾದವುಗಳಿಗೆ ಅವಕಾಶವೆಲ್ಲಿರುವುದು? ಆದುದರಿಂದ ವಿವೇಕಿಯಾದವನು ಸರ್ವದಾ ಹರ್ಷವಿಷಾದಾದಿ ವಿಕಾರಗಳಿಗೆ ಅವಕಾಶ ಕೊಡದೆ ಅವಿಕಾರಿಯಾದ ಸ್ಥಿರಮನಸ್ಸುಳ್ಳವನಾಗಿ ಸರ್ವತ್ರ ಸಮಬುದ್ಧಿಯಿಂದಲೇ (ಆತ್ಮಬುದ್ಧಿಯಿಂದಲೇ) ವರ್ತಿಸಬೇಕು.

ವಿಸ್ಮಯಃ ಸ್ಮಯಸಂಮೋಹಹರ್ಷಾಮರ್ಷವಿಕಾರಿತಾಂ ।
ಸಮತಾವಲಿತಸ್ತಜ್ಜ್ಞೋ ನ ಕದಾಚನ ಗಚ್ಛತಿ || ೩೭ ||

ಅಪರ್ಯವಸಾನೇ ದೇಶಕಾಲವತಿ ಚಿತ್ರಾ ಹಿ ಜಗತಿ ಯುಕ್ತಯೋ ದೃಶ್ಯಂತೇ || ೩೮ ||

ಏತಾಶ್ಚ ಯುಕ್ತೀರ್ನಾಮಾಸಾವಾತ್ಮಾ ಯತ್ನೇನ ರಚನಾಂ ಕರೋತಿ ನ ಚೋತ್ಪನ್ನಾಂ ತಿರಸ್ಕರೋತಿ ಸಾಗರ ಇವ ವೀಚೀಃ || ೩೯ ||

ಕಿಂ ತರ್ಹಿ ಕ್ಷೀರ ಇವ ಘೃತಂ ಘಟ ಇವ ಮೃದಿ ಪಟ ಇವ ತಂತುಷು ವಟ ಇವ ಧಾನಾಯಾಮಾತ್ಮನ್ಯೇವ ಸ್ಥಿತಾಃ ಶಕ್ತಯಃ ಪ್ರಕಟತಾಮಾಗತಾ ವ್ಯವಹ್ರಿಯಂತೇ ವಿರಚಿತಮೇವ ತರಂಗವತ್ || ೪೦ ||

---

೩೭. (ಆಗಲೇ ಹರ್ಷಾಮರ್ಷಾದಿ ಸಕಲ ವಿಕಾರಗಳಿಗೂ ಆತ್ಯಂತಿಕ ವಿನಾಶ ವುಂಟಾಗುವುದು ಎಂದು ಪ್ರಾಜ್ಞರಾದ ಪ್ರಾಚೀನರೂ ಸಮ್ಮತಿಸಿರುವರು.) ಸರ್ವತ್ರ ಸಮತಾಬುದ್ಧಿಯಿಂದ ಕೂಡಿರುವ ಆತ್ಮಜ್ಞನು ಆಶ್ಚರ್ಯ, ಗರ್ವ, ಭ್ರಾಂತಿ, ಸಂತೋಷ, ಕೋಪ, ವಿಷಾದ ಮೊದಲಾದವುಗಳಿಗೆ ಎಂದಿಗೂ ಒಳಗಾಗುವುದಿಲ್ಲ.

೩೮–೩೯. ಇಂತಹ ಸಮತ್ವ ಬುದ್ಧಿಯು ದೃಢಪಡದೆ ಇರಲಿಕ್ಕಾಗಿ, ಆಗ ಈ ಜಗತ್ತಿನಲ್ಲಿ ದೇಶಕಾಲಾದಿ ನಾನಾ ವೈಷಮ್ಯಗಳು ತಲೆದೋರುವುವು. ಅದರ ಮೂಲಕವಾಗಿ ಅನೇಕ ವಿಚಿತ್ರವಾದ ಯುಕ್ತಿಗಳು ಕಾಣಿಸಿಕೊಳ್ಳುವುವು. ಮತ್ತು ಈ ಯುಕ್ತಿಗಳೆಂಬುದನ್ನು ಈ ಆತ್ಮನು ಸ್ವಪ್ರಯತ್ನದಿಂದ ರಚನೆಯನ್ನಾಗಿ (ಫಲಾವಸ್ಥೆ) ಮಾಡುವನು. ಸಾಗರವು ತನ್ನಲ್ಲಿ ಉದ್ಭವಿಸಿದ ಅಲೆಗಳನ್ನು ತಿರಸ್ಕರಿಸದೆ ಇರುವಂತೆ, ಆತ್ಮನು ಕೂಡ ತನ್ನಲ್ಲಿಯೇ ಉದಯಿಸಿರುವ ಯುಕ್ತಿ ರಚನೆಯನ್ನು ತಿರಸ್ಕರಿಸುವುದಿಲ್ಲ.

(ಸಾಮಗ್ರೀ ಯುಕ್ತವಾದ ಅವಸ್ಥೆಯೇ ಯುಕ್ತಿ, ಫಲಾವಸ್ಥೆಯೇ ರಚನೆಯೆಂದು ತಾತ್ಪರ್ಯಪ್ರಕಾಶದಲ್ಲಿ ಹೇಳಿದೆ.]

೪೦, (ಮತ್ತೇನೆಂದರೆ), ಹಾಲಿನೊಳಗೆ ತುಪ್ಪವಿರುವಂತೆಯೂ, ಮೃತ್ತಿಕೆಯೊಳಗೆ ಘಟವಿರುವಂತೆಯೂ, ತಂತುಗಳಲ್ಲಿ ಪಟವಿರುವಂತೆಯೂ, ವಟಬೀಜದಲ್ಲಿ ಆಲದಮರವಿರುವಂತೆಯೂ, ಆತ್ಮನಲ್ಲಿಯೇ ಅವ್ಯಕ್ತವಾಗಿದ್ದುಕೊಂಡಿರುವ ನಾನಾ ವಿಧ ಶಕ್ತಿಗಳು ಈ ಆತ್ಮನಿಂದಲೇ ಪ್ರಕಟವಾಗಿ ವ್ಯವಹಾರಗೋಚರವಾಗುವುವು.

ನಾತ್ರ ಕಶ್ಚಿತ್ಕರ್ತಾ ನ ಭೋಕ್ತಾ ನ ವಿನಾಶಮೇತಿ || ೪೧ ||

ಕೇವಲಮಾತ್ಮತತ್ತ್ವೇ ಸಾಕ್ಷಿಣಿ ನಿರಾಮಯೇ ಸಮತಯಾತ್ಮನಿ ನಿತ್ಯಮ
ಸಂಕ್ಷುಬ್ಧೇ ತಿಷ್ಠತಿ ಸತ್ಯೇವಂ ನಂಪದ್ಯತೇ || ೪೨ ||

ಸತಿ ದೀಪ ಇವಾಲೋಕಃ ಸತ್ಯರ್ಕ ಇವ ವಾಸರಃ |
ಸತಿ ಪುಷ್ಪ ಇವಾಮೋದಃ ಸ್ವತಃ ಸಂಪದ್ಯತೇ ಜಗತ್ || ೪೩ ||

ಆಭಾಸಮಾತ್ರಮೇವೇದಂ ಪರಿದೃಶ್ಯತ ಏವ ಚ |
ಸ್ಪಂದಃ ಸಮೀರಣಸ್ಯೇವ ನ ಸನ್ನಾಸದವಸ್ಥಿತಂ || ೪೪ ||

ಮತ್ತು ಹೀಗಿರುವ ಈ ವ್ಯವಹಾರ ದೃಷ್ಟಿಯೂ ಕೇವಲ ಕಲ್ಪನಾಮಾತ್ರವೇ! ಪರಮಾರ್ಥದಲ್ಲಿಯಾದರೋ ಈ ಜಗತ್ತು ಸಮುದ್ರದಲ್ಲಿನ ತರಂಗದಂತೆ ಕಲ್ಪಿತವಲ್ಲದೆಯೇ (ಅವಿರಚಿತ) ಆಗಿರುವುದು.

೪೧-೪೨. ಈ ಲೋಕದಲ್ಲಿ ತತ್ತ್ವದೃಷ್ಟಿಯಿಂದ ಯಾವನೊಬ್ಬನೂ ಕರ್ತೃವೂ ಅಲ್ಲ. ಭೋಕ್ತೃವೂ ಅಲ್ಲ. ನಾಶ ಹೊಂದುವವನೂ ಇಲ್ಲವೇ ಇಲ್ಲ. ಸರ್ವೋಪದ್ರವರಹಿತವಾದ (ನಿರಾಮಯ) ಸರ್ವದಾ ಸಕಲ ಕ್ಷೋಭವಿವರ್ಜಿತವಾಗಿರುವ ಅದ್ವಿತೀಯವಾದ ಆತ್ಮತತ್ತ್ವವೇ ಸರ್ವ ಸಮತ್ವದಿಂದ ಸರ್ವ ಸಾಕ್ಷಿಯಾಗಿ (ನಿರ್ಲಿಪ್ತವಾಗಿ) ಇರಲಿಕ್ಕಾಗಿ, ಸದ್ರೂಪನಾದ ಆತ್ಮನಲ್ಲಿಯೇ ಹೀಗೆ ಈ ಜಗತ್ತು ನಿಷ್ಪನ್ನವಾಗುವುದು.

೪೩-೪೪. ದೀಪವಿರಲಿಕ್ಕಾಗಿ ಪ್ರಕಾಶವುಂಟಾಗುವಂತೆಯೂ, ಸೂರ್ಯನಿರಲಿಕ್ಕಾಗಿ ಹಗಲು (ಅಹಸ್ಸು) ಉಂಟಾಗುವಂತೆಯೂ, ಹೂವು ಇರಲಿಕ್ಕಾಗಿ ಸುಗಂಧವುಂಟಾಗುವಂತೆಯೂ, ಆತ್ಮನು ಸರ್ವ ಸಾಕ್ಷಿಯಾಗಿರಲಿಕ್ಕಾಗಿ, ಈ ಜಗತ್ತು ಸ್ವತ ಏವ ಆತ್ಮನಲ್ಲಿ ಸಂಪನ್ನವಾಗುವುದು. ಈ ಜಗತ್ತು ಹೀಗೆ ಕೇವಲ ಆಭಾಸಮಾತ್ರವೇ ಆಗಿರುವುದಾದರೂ (ಶುಕ್ತಿಕರಜತಾದಿಗಳಂತೆ) ಪರಿದೃಶ್ಯಮಾನವಾಗಿರುವುದು. ವಾಯುವಿನಲ್ಲಿರುವ ಚಲನ ಶಕ್ತಿಯಂತೆ, ಇದೂ ಸತ್ತೂ ಅಲ್ಲದೆ (ಸದಸದ್ವಿಲಕ್ಷಣವಾಗಿ-ಅನಿರ್ವಚನೀಯವಾಗಿ) ಇರುವುದು.

ನಿರ್ದೋಷಪದಮೇವ ಜಗದ್ದೃಷ್ಟೀನಾಂ ಪರಮಾರ್ಥತೋ ಭಗವಾನ್ ಸ್ಥಿತೋ ವಿನಷ್ಟಾಯಾಂ ಪುನಃ ಕರ್ತಾ ಕೃತಾನಾಂ ವಾ ನಾಶಯಿತಾ ಸ ಕೇವಲಂ ಕದಾಚಿತ್ಪ್ರಕಟಾಃ ಕದಾಚಿದಲ್ಪಪ್ರಕಟಾಃ ಕದಾಚಿದಪ್ರಕಟಾಸ್ತಾರಕಾ ಇವ ಕುಸುಮರಾಶಯಃ || ೪೫ ||

ನಶ್ಯತೀಹ ಹಿ ತದ್ವಸ್ತು ನಾತ್ಮಭೂತಂ ಯದಾತ್ಮನಃ ।
ಕಥಂ ನಶ್ಯತಿ ತದ್ವಸ್ತು ಸ್ವಾತ್ಮಭೂತಂ ಯದಾತ್ಮನಃ || ೪೬ ||

---

೪೫. ಆ ಪರಮಾತ್ಮನಾದರೋ ಪರಮಾರ್ಥದಲ್ಲಿ, ತನ್ನ ಸನ್ನಿಧಿಮಾತ್ರದಿಂದ ವಿಜೃಂಭಿತಗಳಾದ ಜಗದ್ದೃಷ್ಟಿಗಳ ದೋಷಾದಿಗಳಿಂದ ಸ್ವಲ್ಪವೂ ಲೋಪವನ್ನು ಪಡೆಯದವನಾಗಿಯೇ ಇದ್ದುಕೊಂಡು, ವಿನಷ್ಟವಾದವುಗಳನ್ನು ಪುನಃ ಸೃಷ್ಟಿಮಾಡುವವನೆಂದೂ, ಸೃಷ್ಟವಾದವುಗಳನ್ನು ಲಯಗೊಳಿಸುವವನೆಂದೂ, ನಿಯಾಮಕನೆಂದು ವ್ಯವಹರಿಸಲ್ಪಡುವನು. ಕೇವಲವಾದ ಆಕಾಶದಲ್ಲಿ ನಕ್ಷತ್ರಗಳೆಂಬ ಪುಷ್ಪರಾಶಿಗಳಂತೆ, ಕೇವಲನಾದ ಆ ಆತ್ಮನಲ್ಲಿ ಈ ದೃಶ್ಯ ಪ್ರಾಪಂಚಿಕ ವಸ್ತುಗಳು ಕೆಲವು ವೇಳೆ ಪ್ರಕಟಗಳಾಗಿಯೂ, ಮತ್ತೆ ಕೆಲವುಕಾಲ ಸ್ವಲ್ಪವೇ ಪ್ರಕಟಗಳಾಗಿಯೂ, ಇನ್ನೂ ಇತರ ವೇಳೆಗಳಲ್ಲಿ ಅಪ್ರಕಟಗಳಾಗಿಯೂ ಸ್ಫುರಿಸುತ್ತಿರುವುವು.

[ಪ್ರಾಣಾದಿಭಿರನಂತೈಶ್ಚ ಭಾವೈರೇತೈರ್ವಿಕಲ್ಪಿತಃ । ಮಾಯೈಷಾ ತಸ್ಯ ದೇವಸ್ಯ ಯಯಾ ಸಂಮೋಹಿತಃ ಸ್ವಯಂ ॥ ಮಾಂಡೂಕ್ಯಕಾರಿಕಾ ಶ್ರೀ ಗೌಡಪಾದೀಯ ವೈತಥ್ಯಪ್ರಕರಣ. ೧೯.]

೪೬. ಯಾವುದು ಆತ್ಮನಿಗೆ ಸ್ವಾತ್ಮಭೂತವಲ್ಲವೋ (ಅನಾತ್ಮಭೂತವೋ-ಸಂಬಂಧಿಸಿದುದಲ್ಲವೋ) ಅದು ಸರ್ವಥಾ ಈ ಜಗತ್ತಿನಲ್ಲಿ ನಾಶಹೊಂದತಕ್ಕದ್ದಾಗಿಯೇ ಇರುವುದು. ಮತ್ತೂ ಕೂಡ ಯಾವುದು ಸ್ವಾತ್ಮಭೂತವಾದುದೋ ಅಂತಹ ವಸ್ತುವು ನಾಶಹೊಂದುವ ಬಗೆ ಹೇಗೆ? ನಾಶಹೊಂದುವುದೇ ಇಲ್ಲ.

[ಅತೋಽನ್ಯದಾರ್ತಂ-ಪರಮಾತ್ಮನಿಗಿಂತ ಅನ್ಯವಾದುದೆಲ್ಲವೂ ನಶ್ವರವು. ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಂ-ಯಾವ ಆತ್ಮತತ್ತ್ವವು ಸರ್ವವನ್ನೂ ವ್ಯಾಪಿಸಿಕೊಂಡು ಇರುವುದೋ ಅದು ಸರ್ವಥಾ ಅವಿನಾಶಿಯು. ಗೀತಾ. ೨-೧೭. ಇತ್ಯಾದಿ ಪ್ರಮಾಣಗಳು.]

ಜಾಯತೇ ನೈವ ತದ್ವಸ್ತು ನಾತ್ಮಭೂತಂ ಯದಾತ್ಮನಃ ।
ಜಾಯತೇ ಚೈವ ತದ್ವಸ್ತು ಸ್ವಾತ್ಮಭೂತಂ ಯದಾತ್ಮನಃ ॥ ೪೭ ॥

ಕಥಂ ತಜ್ಜಾಯತೇ ತಸ್ಮಾತ್ ಸ್ವಾತ್ಮಭೂತಂ ಯದಾತ್ಮನಃ ॥ ೪೮ ॥

ತಸ್ಮಾತ್ ಸಮ್ಯಕ್ ಜ್ಞಾನವಶಾತ್ ಬ್ರಹ್ಮಣಃ ಸರ್ವಪದಾರ್ಥಾನಾಮಾಗಮಃ ॥ ೪೯ ॥

ಅವತೀರ್ಣಾನಾಂ ಚ ತೇಷಾಮವತರಣಸಮಕಾಲಮೇವಾವಿದ್ಯೋದೇತಿ ತತ್ತ್ವಜ್ಞಾನಂ ದೃಢತಾಮೇತಿ ತದನುಶತಸಹಸ್ರಸ್ಕಂಧೋ ವಿಚಿತ್ರಶುಭಾಶುಭಫಲಭರಫಲಿತೋ ಭೂರಿಶಾಖಃ ಸ್ಫಾರತಾಮೇತಿ ಸಂಸಾರದ್ರುಮಃ ॥ ೫೦ ॥

೪೭–೪೮. ಮತ್ತೂ ಯಾವ ವಸ್ತುವು ಆತ್ಮನಿಗೆ ಸ್ವಾತ್ಮಭೂತವಲ್ಲವೋ ಅದು ಎಂದಿಗೂ ಉತ್ಪತ್ತಿಯಾಗುವುದೇ ಇಲ್ಲ. ಯಾವುದು ಸ್ವಯಂ ಸದಾ ಸಿದ್ಧನಾಗಿರುವ ಆತ್ಮನಿಗೆ ಸ್ವಾತ್ಮಭೂತವಾದುದೋ ಅದು ಎಂದಿಗೂ ಉತ್ಪತ್ತಿಹೊಂದತಕ್ಕದು ಆಗುವುದೇ ಇಲ್ಲ. ಹೀಗಿರುವ ಕಾರಣ, ಆತ್ಮನಿಗೆ ಸಂಬಂಧಪಟ್ಟ ಸ್ವಾತ್ಮಭೂತವಾಗಿರುವ ಈ ಜಗತ್ತು ಆತ್ಮನ ದೆಸೆಯಿಂದಲೇ ಉತ್ಪನ್ನವಾಗುವ ಬಗೆ ಹೇಗೆ?

[ಹೇಗೆ ವಿಚಾರಮಾಡಿ ನೋಡಿದರೂ ಕೂಡ ಈ ಜಗತ್ತೆಂಬುದು ವಸ್ತುತಃ ಆತ್ಮನ ದೆಸೆಯಿಂದ ಉತ್ಪನ್ನವಾಗಿಯೂ ಇಲ್ಲ. ಸ್ಥಿತಿಯನ್ನು ಪಡೆದಿರುವುದೂ ಇಲ್ಲ. ಜಗತ್ಕಲ್ಪನೆಯೆಲ್ಲವೂ ಕೇವಲ ಮಾಯೆಯೇ. ಈ ಜಗತ್ತು ಅಸತ್ತಾದ ಕಾರಣ, ಜಗತ್ತಿನ ಅಭಾವರೂಪವಾದ ಅದರ ನಾಶವು ಸ್ವತಏವ ಸಿದ್ಧಿಸುವುದು. ಇದರ ಉತ್ಪತ್ತಿ ಸ್ಥಿತಿಗಳು ಬ್ರಹ್ಮಸತ್ತೆಯೇ ಹೊರತು ಬೇರೆಯಿಲ್ಲವು. ಎಂದು ಸುಸ್ಪಷ್ಟವಾಯಿತು.]

೪೯–೫೦. ಈ ನಾನಾ ಕಾರಣಗಳಿಂದ ಸಚ್ಚಿದಾನಂದೈಕಸ್ವರೂಪನಾದ ಬ್ರಹ್ಮನ ಪಾರಮಾರ್ಥಿಕ ಆತ್ಮೈಕತ್ವಸ್ವರೂಪವನ್ನು ಚೆನ್ನಾಗಿ ವಿಚಾರಮಾಡಿ ನೋಡಿದರೆ, ಆತ್ಮನಲ್ಲಿ ಭೇದವಿಲ್ಲದಿರುವ ಕಾರಣ, ಆತ್ಮಸತ್ತೆಯನ್ನು ಜಗತ್ತಿನಲ್ಲಿ ಅಧ್ಯಾಸಮಾಡುವುದರಿಂದಲೇ ವ್ಯಾವಹಾರಿಕಗಳಾದ ಸಕಲ ವಸ್ತುಗಳೂ ಅವತರಿಸುವುವು ಎಂದು ಗೊತ್ತಾಗುವುದು. ಈ ರೀತಿಯಾಗಿ ಅವತರಿಸಿದ ಆ ಸಕಲ (ಅನಾತ್ಮ) ವಸ್ತುಗಳಿಗೆ ಆವಿರ್ಭಾವವಾಗುತ್ತಿರುವ ಸಮಕಾಲದಲ್ಲಿಯೇ ಅವಿದ್ಯೆಯು (ಅಜ್ಞಾನವು) ಉದಯಿಸುವುದು. ಆ ಅಜ್ಞಾನವಾದರೋ ಕಾಲಾಂತರದಲ್ಲಿ ದೃಢವಾಗಿ ನೆಲೆಸುವುದು.

ಆಶಾಮಂಜರಿತಾಕೃತಿಂ ವಿಫಲಿತಂ ದುಃಖಾದಿಭಿರ್ದಾರುಣೈ-
ರ್ಭೋಗೈಃ ಪಲ್ಲವಿತಂ ಜರಾಕುಸುಮಿತಂ ತೃಷ್ಣಾಲತಾಭಾಸುರಂ ।
ಸಂಸಾರಾಭಿಧವೃಕ್ಷಮಾತ್ಮನಿಗಡಂ ಛಿತ್ವಾ ವಿವೇಕಾಸಿನಾ
ಮುಕ್ತಸ್ತ್ವಂ ವಿಹರೇಹ ವಾರಣಪತಿಃ ಸ್ತಂಭಾದಿವೋನ್ಮೋಚಿತಃ
॥ ೫೧ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕೀಯೇ ಸ್ಥಿತಿಪ್ರಕರಣೇ
"ಸರ್ವೈಕತ್ವಪ್ರತಿಪಾದನಂ" ನಾಮೈಕೋನಚತ್ವಾರಿಂಶಃ ಸರ್ಗಃ

ತರುವಾಯ ಈ ಸಂಸಾರವೆಂಬ ವೃಕ್ಷವು ಲಕ್ಷೋಪಲಕ್ಷ ಕವಲುಗಳುಳ್ಳದ್ದಾಗಿಯೂ ವಿಚಿತ್ರಗಳಾದ ಶುಭಾಶುಭಗಳೆಂಬ ನಾನಾ ಫಲಭರಗಳಿಂದ ಸಮೃದ್ಧವಾಗಿಯೂ ಅನೇಕ ಶಾಖೆ (ಕೊಂಬೆ)ಗಳುಳ್ಳದ್ದಾಗಿಯೂ ವಿಶೇಷವಾಗಿ ಹರಡಿಕೊಳ್ಳುವುದು. (ರೂಢಮೂಲವಾಗಿಬಿಡುವುದು.)

೫೧. ಅಯ್ಯಾ ರಾಮ, ಹೀಗೆ ವೃದ್ಧಿ ಹೊಂದಿ ಪ್ರಸರಿಸಿಕೊಂಡಿರುವ ಸಂಸಾರ ವೃಕ್ಷಕ್ಕೆ ಆಶೆಗಳೇ ಮಂಜರಿಗಳ (ಅನೇಕ ಸಣ್ಣ ಮೊಳಕೆಗಳ ಗುಂಪು) ಆಕಾರವಾಗಿ ದುಃಖ, ಶೋಕ, ಮೋಹ ಭಯಾದಿಗಳೇ ನಾನಾ ದುಷ್ಟಫಲಗಳಾಗಿಯೂ, ಅತ್ಯಂತ ಘೋರಗಳಾದ ಭೋಗಗಳೇ ಚಿಗುರುಗಳಾಗಿಯೂ, ಜರೆ (ಮುಪ್ಪು)ಯೇ ಹೂವಾಗಿಯೂ, ತೃಷ್ಣೆಯೆಂಬುದೇ ಅದಕ್ಕೆ ಸುತ್ತಿಕೊಂಡಿರುವ ಲತೆಯಾಗಿಯೂ ಭಾಸಿಸುತ್ತಿರುವುದು. ಇದು ಆತ್ಮನಿಗೆ ಬಂಧನ ಸ್ತಂಭಪ್ರಾಯವಾಗಿರುವುದು. ಇದನ್ನು ನೀನು ವಿವೇಕವೆಂಬ ಕತ್ತಿಯಿಂದ ಕತ್ತರಿಸಿ, (ನಿರ್ಮೂಲವಾಗಿ ನಾಶಮಾಡಿ) ಬಂಧನ ಸ್ತಂಭದಿಂದ ತಪ್ಪಿಸಿಕೊಂಡು ಅರಣ್ಯದಲ್ಲಿ ಸ್ವೇಚ್ಛೆಯಾಗಿ ವಿಹರಿಸುವ ಗಜರಾಜನಂತೆ, ಸಂಸಾರ ಬಂಧದಿಂದ ಮುಕ್ತನಾಗಿ ಆತ್ಮಾರಾಮನಾಗಿ (ನಿರಾಶಂಕನಾಗಿ) ಜಗತ್ತಿನಲ್ಲಿ ವಿಹರಿಸಿಕೊಂಡಿರುವವನಾಗು.

[ಭಗವದ್ಗೀತೆಯ ೧೫ನೆಯ ಅಧ್ಯಾಯದ ಆರಂಭದಲ್ಲಿಯೇ ಊರ್ಧ್ವಮೂಲಮಧಶ್ಯಾಖಂ ಇತ್ಯಾದಿ ಶ್ಲೋಕದ್ವಯದಿಂದ ಭಗವಂತನು ಸಂಸಾರವೃಕ್ಷವನ್ನು ವರ್ಣನೆಮಾಡಿ ಬಳಿಕ ನರೂಪಮಸ್ಯೇಹತಥೋಪಲಭ್ಯತೇ ನಾಂತೋನಚಾದಿರ್ನಚ ಸಂಪ್ರತಿಷ್ಠಾ । ಅಶ್ವತ್ಥಮೇನಂ ಸುವಿರೂಢಮೂಲಂ ಅಸಂಗಶಸ್ತ್ರೇಣದೃಢೇನಛಿತ್ವಾ ॥ ತತಃ ಪದಂ ತತ್ ಪರಿಮಾರ್ಗಿತವ್ಯಂ. ಎಂದು ಉಪದೇಶಿಸಿರುವನು.]

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಸರ್ವೈಕತ್ವಪ್ರತಿಪಾದನ" ಎಂಬ ಮೂವತ್ತೊಂಬತ್ತನೆಯ ಸರ್ಗವು.

ಚತ್ವಾರಿಂಶಃ ಸರ್ಗಃ

ಶ್ರೀ ರಾಮ ಉವಾಚ:—

ಉತ್ಪತ್ತಿಃ ಕಥಮೇತೇಷಾಂ ಜೀವಾನಾಂ ಬ್ರಹ್ಮಣಃ ಪದಾತ್ ।
ಕಿಯತೀ ಕೀದೃಶೀ ಚೇತಿ ವಿಸ್ತಾರೇಣ ವದ ಪ್ರಭೋ ॥ ೧ ॥

ಶ್ರೀ ವಸಿಷ್ಠ ಉವಾಚ:—

ಉತ್ಪದ್ಯಂತೇ ಯಥಾ ಚಿತ್ರಾ ಬ್ರಹ್ಮಣೋ ಭೂತಜಾತಯಃ ।
ಯಥಾ ನಾಶಂ ಪ್ರಯಾಂತ್ಯೇತಾ ಯಥಾ ಮುಕ್ತಾ ಭವಂತಿ ಹಿ ॥ ೨ ॥

ಯಥಾ ಚ ಪರಿವರ್ಧಂತೇ ತಿಷ್ಠಂತ್ಯಾಂತರ್ಹಿತಾ ಯಥಾ ।
ಸಂಕ್ಷೇಪೇಣ ಮಹಾಬಾಹೋ ಶೃಣು ವ್ಯಕ್ಷ್ಯಾಮಿ ತೇಽನಘ ॥ ೩ ॥

ನಲವತ್ತನೆಯ ಸರ್ಗ

೧. ಶ್ರೀ ರಾಮನು ಕೇಳಿದನು—ಬ್ರಹ್ಮನ ದೆಸೆಯಿಂದ ಈ ಜೀವರುಗಳ ಉತ್ಪತ್ತಿಯು ಹೇಗೆ ಆಗುವುದು? ಆ ಉತ್ಪತ್ತಿಯು ಎಷ್ಟುಬಗೆಯುಳ್ಳದ್ದಾಗಿರುವುದು? (ಯಾವ ಪರಿಮಾಣವುಳ್ಳದ್ದಾಗಿರುವುದು?) ಮತ್ತು ಎಂತಹುದಾಗಿದೆ? ಎಲೈ ಪ್ರಭುವೇ, ಈ ವಿಚಾರವನ್ನು ವಿಸ್ತಾರವಾಗಿ ಪುನಃ ಉಪದೇಶಿಸಬೇಕಾಗಿ ಪ್ರಾರ್ಥಿಸುವೆನು.

೨-೩. ಶ್ರಿ ವಸಿಷ್ಠನು ಹೇಳಿದನು—ಎಲೈ ಅನಘನಾದ ಮಹಾ ಬಾಹುವೇ, ಬ್ರಹ್ಮನ ದೆಸೆಯಿಂದ ಈ ವಿಚಿತ್ರಗಳಾದ ನಾನಾ ಭೂತ ಜಾತಿಗಳು ಹೇಗೆ ಹುಟ್ಟು ವುವೋ (ಉತ್ಪನ್ನವಾಗುವುವೋ) ಇವು ಹೇಗೆ ನಾಶ ಹೊಂದುವುವೊ, ಹೇಗೆ ಮುಕ್ತಿ ಯನ್ನು ಹೊಂದುವುವೋ, ಮತ್ತು ಕಾರಣದೊಳಗೆ ಅಂತರ್ಹಿತ (ಮರೆಯಾಗಿ) ಗಳಾಗಿ ಕಾಣದೆ ಇದ್ದುಕೊಂಡಿರುವುವೋ ಇದೆಲ್ಲವನ್ನೂ ನಾನು ಈಗ ನಿನಗೆ ಸಂಕ್ಷೇಪವಾಗಿ ಹೇಳುವೆನು ಕೇಳು.

ಬ್ರಾಹ್ಮೀ ಚಿಚ್ಛಕ್ತಿರಮಲಾ ಕಲ್ಪಯಂತೀ ಯದೃಚ್ಛಯಾ ।
ಸರ್ವಶಕ್ತಿಃ ಸ್ವಯಂ ಚೇತ್ಯಂ ಭವತ್ಯಾಕಲನಾತ್ಮಕಂ ॥ ೪ ॥

ಕಲನಾದ್ಘನತಾಮೇತ್ಯ ಯತ್ಕಿಂಚಿದಪಿ ಸಾ ಸ್ವಯಂ ।
ಸಂಕಲ್ಪಯತಿ ಪಶ್ಚಾತ್ತತ್ತತ್ತಾಮೇತಿ ಮನಃಪದಂ ॥ ೫ ॥

ಮನಃಸಂಕಲ್ಪ ಮಾತ್ರೇಣ ಗಂಧರ್ವಪುರವತ್ ಕ್ಷಣಾತ್ ।
ತನೋತೀದಮಸದ್ದೃಶ್ಯಂ ಬ್ರಾಹ್ಮೀಂ ಸ್ಥಿತಮಿವ ತ್ಯಜತ್ ॥ ೬ ॥

ಚಿತ್ಸ್ವರೂಪಂ ಪರಿಕಚಚ್ಛೂನ್ಯಮೇವಾವತಿಷ್ಠತೇ ।
ಯತ್ತದ್ದೃಶ್ಯಂ ಸ್ಥಿತಂ ತತ್ಸ್ಯಾದ್ದೃಶ್ಯಮಾಕಾಶಮೇವ ತತ್ ॥ ೭ ॥

---

೪. ಪರಬ್ರಹ್ಮನ ನಿರ್ಮಲವಾದ ಚಿಚ್ಛಕ್ತಿಯು ತನ್ನ ಕಲ್ಪನೆಗೆ ಬೀಜವಾದ ಪ್ರಾಕ್ತನವಾಸನೋದ್ಬೋಧವು ಅನಿಯತರೂಪವಾಗಿರುವ ಕಾರಣ ಯಾದೃಚ್ಛಿಕವಾಗಿ ಕಲ್ಪನೆಮಾಡುತ್ತಿರುವುದು. ಆ ಚಿಚ್ಛಕ್ತಿಯು ಸರ್ವಶಕ್ತಿಯುಕ್ತವಾಗಿರುವುದರಿಂದ ಭಾವಿದೇಹಾದ್ಯಾಕಾರ ರೂಪವಾಗಿ ಸ್ವಲ್ಪ ಸ್ಫುರಣೆಯನ್ನು ಹೊಂದಿ ತಾನೇ ಚೇತ್ಯ ರೂಪವಾಗುವುದು.

೫. ಈ ಬಗೆಯಾದ ಕಲ್ಪನೆಯ ದೆಸೆಯಿಂದ ಈ ಚಿಚ್ಛಕ್ತಿಯೇ ಅಹಂಕಾರ ರೂಪವಾಗಿ ಚೆನ್ನಾಗಿ ಸ್ಫುರಣೆಯನ್ನು ಹೊಂದಿ ಯಾವುದಾದರೂ ಒಂದನ್ನು ಸಂಕಲ್ಪಿಸಿದ್ದೇ ಆದರೆ ಆಗ ಬಳಿಕ ಅದು ತಾನು ಅದರದರ ಭಾವವನ್ನೇ ಹೊಂದಿ ಬಿಡುವುದು. ಅದೇ ಮನಶ್ಶಬ್ದ ವಾಚ್ಯವಾದ ಜೀವೋಪಾಧಿಯೆನ್ನಿಸುವುದು.

೬. ಆ ಮನಸ್ಸೇ ತನ್ನ ನೈಜವಾದ ದೃಗ್ರೂಪ ಬ್ರಹ್ಮಸ್ಥಿತಿಯನ್ನು ದೃಶ್ಯಾಹಂ ಕಾರಾದಿ ಕಲ್ಪನೆಯಿಂದ ಬಿಟ್ಟಂತೆ ಮರೆತು ಸ್ವಸಂಕಲ್ಪ ಮಾತ್ರದಿಂದಲೇ ಗಂಧರ್ವ ನಗರ ಸದೃಶವಾಗಿ ಅಸತ್ತಾದ ಈ ದೃಶ್ಯವನ್ನು ಕ್ಷಣದೊಳಗಾಗಿ ವಿಸ್ತರಿಸಿ ಬಿಡುವುದು.

೭. ಚಿತ್ಸ್ವರೂಪವಾದರೋ ಸರ್ವತಃ ಸ್ವಪ್ರಕಾಶವಾಗಿದ್ದರೂ ಕೂಡ ಪರಾಗ್ದೃಷ್ಟಿಯಿಂದ ಕಾಣಲ್ಪಟ್ಟದ್ದಾಗಿ ರಿಕ್ತಘಟದ (ಬರಿಯ ಕೊಡದ) ಒಳಗಡೆ ಯಂತೆ ಶೂನ್ಯವಾಗಿಯೇ ಇರುವುದು. ಆ ಅವಸ್ಥೆಯಲ್ಲಿರತಕ್ಕಂಥ ಇಂತಹ ಚಿದ್ರೂಪವೇ ದೃಶ್ಯವಾಗಿರುವ ಕಾರಣ ಆ ದೃಶ್ಯವೂ ಸರ್ವಜನದೃಶ್ಯವಾದ ಪ್ರಸಿದ್ಧವಾದ ಆಕಾಶವೆಂಬುದಾಗಿ ಹೇಳಲ್ಪಡುವುದು.

ಕೃತ್ವಾ ಪದ್ಮಜಸಂಕಲ್ಪಂ ರೂಪಂ ಪಶ್ಯತಿ ಪದ್ಮಜಂ ।
ತತೋ ಜಗತ್ಕಲ್ಪಯತಿ ಸ ಪ್ರಜಾಪತಿಪೂರ್ವಕಂ ॥ ೮ ॥

ಚತುರ್ದಶ ವಿಧಾನಂತ ಭೂತಜಾತ ಸಘುಂಘುಮಾ ।
ಸೃಷ್ಟಿರೇವಮಿಯಂ ರಾಮ ಚಿತ್ತನಿರ್ಮಿತಿಮಾಗತಾ ॥ ೯ ॥

ಚಿತ್ತಮಾತ್ರಮಯಿಾ ಶೂನ್ಯಾ ವ್ಯೋಮಮಾತ್ರ ಶರೀರಿಕಾ ।
ಸಂಕಲ್ಪಮಾತ್ರನಗರೀ ಭ್ರಾಂತಿಮಾತ್ರಾತ್ಮಿಕಾ ಸತೀ ॥ ೧೦ ॥

ಇಹ ಕಾಶ್ಚಿನ್ಮಹಾಮೋಹಾ ಭೂತಾನಾಂ ಜಾತಯಃ ಸ್ಥಿತಾಃ ।
ಕಾಶ್ಚಿದಭ್ಯುದಿತಜ್ಞಾನಾಃ ಕಾಶ್ಚಿನ್ಮಧ್ಯೇ ಸ್ಖಲಂತಿ ಹಿ ॥ ೧೧ ॥

---

೮. ಆ ಚಿದ್ರೂಪವೇ ಆ ಆಕಾಶದಲ್ಲಿ ಚತುರ್ಮುಖ ಬ್ರಹ್ಮದ ಮತ್ತು ಭುವನಗಳ ಆಕಾರವನ್ನು ಸಂಕಲ್ಪಿಸಿಕೊಂಡು ಬ್ರಹ್ಮರೂಪವನ್ನೂ ಕಾಣುವುದು. ಅನಂತರ ಆ ಚತುರ್ಮುಖನು ದಕ್ಷನೇ ಮೊದಲಾದ ಪ್ರಜಾಪತಿಗಳ ಪೂರ್ವಕವಾಗಿ ಈ ಜಗತ್ತನ್ನು ಕಲ್ಪಿಸುವನು.

೯. ಅಯ್ಯ ರಾಮ, ಈ ರೀತಿಯಾಗಿ ಹದಿನಾಲ್ಕು ವಿಧವಾದ ಅನಂತವಾದ ಭೂತಸಂಘಗಳಿಂದ ಪರಿಪೂರ್ಣವಾದ ಈ ಜಗತ್ಸೃಷ್ಟಿಯು ಚಿತ್ತದ ದೆಸೆಯಿಂದಲೇ ನಿರ್ಮಿತವಾಗಿರುವುದು.

೧೦. ಈ ಜಗತ್ಸೃಷ್ಟಿಯು ಕೇವಲ ಚಿತ್ತ ಮಾತ್ರಮಯವಾಗಿಯೂ ಸ್ವಭಾವತಃ ಶೂನ್ಯವಾಗಿಯೂ ಆಕಾಶ ಮಾತ್ರ ಶರೀರವಾಗಿಯೂ ಸಂಕಲ್ಪ ಮಾತ್ರದಿಂದ ಕಲ್ಪಿತವಾದ ನಗರೀಸದೃಶವಾಗಿಯೂ ಭ್ರಾಂತಿಮಾತ್ರಾತ್ಮಕವಾಗಿಯೂ ಇರುವುದು.

೧೧. ಇಂತಹ ಈ ಜಗತ್ಸೃಷ್ಟಿಯಲ್ಲಿ ಕೆಲವು ಭೂತಜಾತಿಗಳು ಅತ್ಯಂತ ಘನವಾದ ಮಹಾಮೋಹದಿಂದ ಭರಿತಗಳಾಗಿ ಇರುವುವು. ಇನ್ನೂ ಕೆಲವು (ಸನಕಾದಿಗಳಂತಹವರು) ದೃಢವಾದ ಅಧ್ಯಾತ್ಮಜ್ಞಾನ ಸಂಪನ್ನಗಳಾಗಿ ಇರುವುವು. ಮತ್ತೆ ಕೆಲವಾದರೋ ಮೋಕ್ಷಾರ್ಥವಾಗಿ ಸಂತತವೂ ಪ್ರಯತ್ನಪಡುತ್ತಾ ಇದ್ದರೂ ಕೂಡ ವೈರಾಗ್ಯವು ದೃಢವಾಗಿಲ್ಲದ ಕಾರಣ ಪುನಃ ಪುನಃ ವಿಘ್ನಗಳಿಂದ ಭಂಗವಡೆದು ಆಂತರಾಳಿಕ ದಶೆಯಲ್ಲಿ ಇದ್ದುಕೊಂಡಿರುವುವು.

ಭುವಿ ಸಂಬಂಧಮಾನಾನಾಂ ಯಾಂತ್ಯೇನಾಮುಪದೇಶ್ಯತಾಂ ।
ಸರ್ವಾಸಾಂ ಭೂತಜಾತೀನಾಂ ಯಾ ಏತಾ ನರಜಾತಯಃ ॥ ೧೨ ॥

ಬಹ್ವಾಧಯೋ ದುಃಖಮಯಾ ಮೋಹದ್ವೇಷಭಯಾತುರಾಃ ।
ತಾಸಾಂ ಸಮ್ಯಕ್ಪ್ರವಕ್ಷ್ಯಾಮಿ ತಾವದ್ರಾಜಸಸಾತ್ವಿಕೀಃ ॥ ೧೩ ॥

ಯತ್ತದಪ್ಯವ್ಯೃತಂ ಬ್ರಹ್ಮ ಸರ್ವವ್ಯಾಪಿ ನಿರಾಮಯಂ ।
ಚಿದಾಭಾಸಮನಂತಾಖ್ಯ ಮನಾದಿ ವಿಗತಭ್ರಮಂ ॥ ೧೪ ॥

---

೧೨. ಹೀಗೆ ಈ ಭೂಲೋಕದಲ್ಲಿ ಒಟ್ಟಿಗೆ ಸಂಬಂಧಿಸಿಕೊಂಡಿರುವ ಈ ಸಮಸ್ತ ಭೂತ ಜಾತಿಗಳೊಳಗೆ ಯಾವ ಈ ಮನುಷ್ಯ ಜಾತಿಗಳುಂಟೋ ಅವುಗಳು ಈ ಉಪದೇಶಕ್ಕೆ ಅರ್ಹವಾದವುಗಳು.

(ಏತಾಃ ಭರತಖಂಡಸ್ಥಾಃ ಎಂದು ತಾತ್ಪರ್ಯ ಪ್ರಕಾಶಕಾರರು ಅರ್ಥಮಾಡಿ ಭರತಖಂಡದಲ್ಲಿರುವ ಭಾರತೀಯರು ಮಾತ್ರವೇ ವೇದಾಂತಶಾಸ್ತ್ರೋಪದೇಶಕ್ಕೆ ಅರ್ಹರಾದ ಅಧಿಕಾರಿಗಳೆಂದು ಅಭಿಪ್ರಾಯಪಟ್ಟಿದ್ದಾರೆ.)

೧೩. ಈ ನರಜಾತಿಗಳು ಅನೇಕ ಆಧಿ [ಮಾನಸಿಕ ವ್ಯಥೆ]ಗಳಿಂದ ನರಳುತ್ತಲೂ ದುಃಖಮಯಗಳಾಗಿಯೂ ಮೋಹದ್ವೇಷ ಭಯಾದಿಗಳಿಂದ ಪೀಡಿತಗಳಾಗಿಯೂ ಇರುವುವು. (ಅದುಕಾರಣ ಮನುಷ್ಯಜಾತಿಗಳಿಗೆ ವೈರಾಗ್ಯವು ಸುಲಭವಾಗಿ ಸಂಭವಿಸುವುದೆಂದು ಭಾವವು) ಇಂತಹ ನರಜಾತಿಗಳೊಳಗೆ ಕೇವಲ ತಾಮಸ ಪ್ರಕೃತಿಗಳಾಗಿರತಕ್ಕವುಗಳಿಗೆ ಉಪದೇಶದಿಂದ ಯಾವ ಪ್ರಯೋಜನವೂ ಇಲ್ಲದ ಕಾರಣ ಉಪದೇಶ ಯೋಗ್ಯಗಳಾದ ರಾಜಸ ಸಾತ್ವಿಕ ಪ್ರಕೃತಿಗಳಾದ ಜಾತಿಗಳನ್ನು ಮುಂದೆ ೪೨ನೆಯ ಸರ್ಗದಲ್ಲಿ ಜೀವಾವತರಣ ಕ್ರಮವರ್ಣನಾವಸರದಲ್ಲಿ ವಿಸ್ತಾರವಾಗಿ ಹೇಳುವೆನು.)

೧೪. ಅವ್ಯೃತಸ್ವರೂಪವೂ (ಮರಣಧರ್ಮರಹಿತವೂ) ಸರ್ವವ್ಯಾಪಿಯೂ ನಿರುಪದ್ರವವೂ ಅನಂತವೆಂದು ಕರೆಯಲ್ಪಡುವುದೂ ಅನಾದಿಯೂ ಸಕಲಭ್ರಮ ಶೂನ್ಯವೂ ಆಗಿರುವ ಪರಬ್ರಹ್ಮವು (ಚಿದಾಭಾಸ) ಜೀವರೂಪವಾಗಿ ಹೇಗೆ ಆಗುವುದೋ ಅದನ್ನೂ ಆ ಸಂದರ್ಭದಲ್ಲಿಯೇ ಹೇಳುವೆನು.

ನಿಸ್ಪಂದವಪುಷಸ್ತಸ್ಯ ಸ್ಪಂದಃ ಸತ್ತೈಕದೇಶತಃ ।
ಘನತಾಮೇತಿ ಸೌಮ್ಯೇಽಬ್ಧಾ ಚಲತಾ ಚಲತಾಮಿವ ॥ ೧೫ ॥

ಶ್ರೀರಾಮ ಉವಾಚ:—

ಅನಂತಸ್ಯಾತ್ಮತತ್ತ್ವಸ್ಯ ಏಕದೇಶಃ ಕ ಉಚ್ಯತೇ ।
ಕಥಂ ವಿಕಾರಿತಾ ವಾ ಸ್ಯಾತ್ಕಥಂ ವಾ ದ್ವಯವಿಕ್ರಮಃ ॥ ೧೬ ॥

ಶ್ರೀ ವಸಿಷ್ಠ ಉವಾಚ:—

ತೇನ ಜಾತಂ ತತೋ ಜಾತಮಿತೀಯಂ ರಚನಾ ಗಿರಾಂ ।
ಶಾಸ್ತ್ರಸಂವ್ಯವಹಾರಾರ್ಥಂ ನ ರಾಮ ಪರಮಾರ್ಥತಃ ॥ ೧೭ ॥

---

೧೫. ಪ್ರಶಾಂತವಾಗಿ ಚಲಿಸದೆ ಇರುವ ಸಮುದ್ರದಲ್ಲಿ ಚಲಿಸುತ್ತಿರುವ ಅಲೆಗಳ ಚಾಂಚಲ್ಯದಂತೆ ನಿಶ್ಚಲಾಕಾರನಾದ ಪರಮಾತ್ಮನ ಸತ್ತೈಕ ದೇಶದ ದೆಸೆಯಿಂದ ಜೀವರೂಪವಾಗಿ ಸ್ಪಂದವು ಹೇಗೆ ಘನವಾಗುವುದೋ ಅದನ್ನೂ ಅಲ್ಲಿಯೇ ವಿವರಿಸುವೆನು.

೧೬. ಶ್ರೀರಾಮನು ಹೇಳಿದನು. ಸ್ವಾಮಿಾ ಅನಂತವಾಗಿಯೂ ಅಖಂಡ ಪರಿಪೂರ್ಣವಾಗಿಯೂ ಇರುವ ಆತ್ಮತತ್ತ್ವದ ಏಕದೇಶವೆಂದು ಯಾವುದು ಹೇಳಲ್ಪಡುವುದು ? ಇಂತಹ ಆತ್ಮತತ್ತ್ವದಲ್ಲಿ ವಿಕಾರಗಳು ಹೇಗೆ ತಾನೆ ಸಂಭವಿಸುವುವು ? ಭೇದಜ್ಞಾನವು ಹೇಗೆ ತಾನೇ ಅವಕಾಶವನ್ನು ಪಡೆಯುವುದು. ಎಲ್ಲವೂ ಅಸಂಭವವಾಗಿ ತಮ್ಮ ವಾದವು ಪರಸ್ಪರ ವಿರುದ್ಧವಾಗಿ ತೋರುವುದಲ್ಲ ಇದನ್ನು ದಯಮಾಡಿ ವಿವರಿಸಿ ಹೇಳಬೇಕು.

(ಪೂರ್ವ ಶ್ಲೋಕದಲ್ಲಿ (೧೫ರಲ್ಲಿ) ಸ್ಪಂದಃ ಸತ್ತೈಕ ದೇಶತಃ ಎಂಬ ಶ್ರೀ ವಸಿಷ್ಠರ ಮಾತನ್ನು ಕೇಳಿ-ಶಂಕಿತನಾಗಿಯೇ ಶ್ರೀರಾಮನು ಈ ರೀತಿ ಪ್ರಶ್ನೆ ಮಾಡಿದುದು.)

೧೭. ಶ್ರೀ ವಸಿಷ್ಠನು ಹೇಳಿದನು—ಅಯ್ಯಾ ರಾಮ, "ಇದು ಆ ನಿಮಿತ್ತದಿಂದ ಹುಟ್ಟಿತು. ಅದು ಈ ಕಾರಣದ ದೆಸೆಯಿಂದ ಹುಟ್ಟಿತು". ಇತ್ಯಾದಿ ಈ ಕಲ್ಪನೆಯೆಲ್ಲವೂ ತಾತ್ತ್ವಿಕವಲ್ಲ. ಈ ಪ್ರಪಂಚಕ್ಕೆ ಪರಬ್ರಹ್ಮವೇ ಕರ್ತೃವೆಂದೂ ಇದು ಆತ್ಮನಲ್ಲಿ ಏಕದೇಶ ಮಾತ್ರವೆಂದೂ ಹೇಳುವ ಈ ಶಬ್ದಗಳ ರಚನೆಯೆಲ್ಲವೂ ಶಾಸ್ತ್ರ

ವಿಕಾರಿತಾವಯವಿತಾ ದಿಕ್ಸತ್ತಾದೇಶತಾದಯಃ ।
ಕ್ರಮಾ ನ ಸಂಭವಂತೀಶೇ ದೃಶ್ಯಮಾನೋದಯಾ ಅಪಿ ॥ ೧೮ ॥

ತಂ ವಿನಾ ಕಲ್ಪನೈವಾನ್ಯಾ ನಾಸ್ತಿ ನಾಪಿ ಭವಿಷ್ಯತಿ ।
ಕುತಸ್ತ್ಯಾ ಕ್ರಮಶಬ್ದಾರ್ಥಾವುಕ್ತಯೋ ವ್ಯವಹಾರಜಾಃ ॥ ೧೯ ॥

ಯಾ ಯೇಹ ಕಲನಾ ಯೋಽರ್ಥೋ ಯಃ ಶಬ್ದೋ ಯೋ ಗಿರಾಂ ಗಣಃ ।
ತಜ್ಜತ್ವಾತ್ತನ್ಮಯತ್ವಾಚ್ಚ ತತ್ತತ್ಪದಮಿವೇಷ್ಯತೇ ॥ ೨೦ ॥

ವ್ಯವಹಾರಾರ್ಥವಾಗಿ ಕಲ್ಪಿತವಾಗಿರುವುದೇ ಹೊರತು ಪಾರಮಾರ್ಥಿಕವಾಗಿ ಯಾವುದೊಂದೂ ಭೇದ ದೃಷ್ಟಿಯಾಗಲೀ ಕಲ್ಪನೆಯಾಗಲೀ ಇಲ್ಲವೇ ಇಲ್ಲ.

(ಮೃಲ್ಲೋಹ ವಿಸ್ಫುಲಿಂಗಾದ್ಯೈಃ ಸೃಷ್ಟಿರ್ಯಾ ಚೋದಿತಾಽನ್ಯಥಾ।ಉಪಾಯಃ ಸೋಽವತಾರಾಯ ನಾಸ್ತಿಭೇದಃ ಕಥಂಚನ॥ ಮಾಂಡೂಕ್ಯಾಕಾರಿಕಾ ಅದ್ವೈತ ಪ್ರಕರಣ ೧೫.)

೧೮. ವಿಕಾರಿತ್ವ (ವಿಕಾರಗಳಿಗೆ ಒಳಗಾಗಿರುವಿಕೆ), ಅವಯವಿತ್ವ (ಅವಯವಗಳನ್ನೂ ಪಡೆದಿರುವಿಕೆ), ದಿಕ್ಕಾಲಾದಿಗಳ ಪರಿಚ್ಛೇದ-ಸತ್ತೆ-ಏಕದೇಶತ್ವ ಮುಂತಾದ ರಚನಾ ಕ್ರಮಗಳೆಲ್ಲವೂ ಆ ಪರಮಾತ್ಮನಲ್ಲಿ ಉತ್ಪತ್ತಿ ಹೊಂದಿರುವಂತೆ ಪ್ರತ್ಯಕ್ಷವಾಗಿ ಕಾಣಿಸುತ್ತಿದ್ದರೂ ವಸ್ತುತಃ ಇದು ಯಾವುದೊಂದೂ ಪರಮೇಶ್ವರನಲ್ಲಿ (ಆತ್ಮನಲ್ಲಿ) ಇಲ್ಲವೇ ಇಲ್ಲ. (ಸಂಭವಿಸುವುದಿಲ್ಲ.)

೧೯. ಈ ಆತ್ಮನನ್ನು ಬಿಟ್ಟು ಜಗತ್ತುಗಳಿಗೆ ಬೇರೆ ಯಾವುದಾದರೊಂದು ಮೂಲವನ್ನು ಕಲ್ಪಿಸೋಣವೆಂದರೆ ಅಂತಹ ಬೇರೆ ಕಲ್ಪನೆಗೂ ಕೂಡ ಚಿತ್ಪ್ರಕಾಶವೇ ಅತ್ಯವಶ್ಯವಾಗಿ ಬೇಕಾಗಿರುವುದರಿಂದ ಅದೂ ಯುಕ್ತವಾಗುವುದಿಲ್ಲ.) ಹೀಗೆ ಆತ್ಮನನ್ನೂ ಬಿಟ್ಟು ಯಾವುದೊಂದು ಕಲ್ಪನೆಯೂ ಇಲ್ಲವೇ ಇಲ್ಲ. ಮುಂದೆ [ಇನ್ನು ಮೇಲೆ ಇರುವುದೂ ಇಲ್ಲ. ಹೀಗಿರುವಾಗ ಕಾರಣ ಕಾರ್ಯ ಭಾವಗಳೂ ಕ್ರಮ ಶಬ್ದಾರ್ಥಗಳೂ ವ್ಯಾವಹಾರಿಕವಾದ ವಾಕ್ಯಗಳೂ ಇತ್ಯಾದಿಗಳೆಲ್ಲವೂ ಪರಮಾತ್ಮನಲ್ಲಿ ಎಲ್ಲಿಂದ ಬರುವುವು ? ಎಲ್ಲಿಯವು?

೨೦. ಈ ಲೋಕದಲ್ಲಿ ಯಾವ ಯಾವ ಕಲ್ಪನೆಯಿರುವುದೋ ಯಾವ ಅರ್ಥವಿರುವುದೋ ಯಾವ ಹೆಸರುಗಳಿವೆಯೋ ಯಾವ ಯಾವ ವಾಕ್ಯ ವೃಂದಗಳಗಳಿರು

ತಜ್ಜಃ ಸ ಏವ ಭವತಿ ವಹ್ನೇರ್ವಹ್ನಿರಿವೋತ್ಥಿತಃ ।
ಜನ್ಯೋಽಯಂ ಜನಕಶ್ಚಾಯಮಿತ್ಯುಕ್ತಾ ಭೇದಕಲ್ಪನಾ ॥ ೨೧ ॥

ಅಯಮಸ್ಮಾತ್ಸಮುತ್ಪನ್ನ ಇತೀಯಂ ಯಾ ಜಗತ್ಸ್ಥಿತಿಃ ।
ಆಧಿಕ್ಯಂ ತತ್ಕ್ರಿಯಾಶಕ್ತೌ ಜನ್ಯಂ ಜನಕಮೇವ ವಾ ॥ ೨೨ ॥

ಇದಮನ್ಯದಿದಂ ಚಾನ್ಯದಿತಿ ಶಬ್ದಾರ್ಥವಿಕ್ಲವಃ ।
ಉಕ್ತಾವೇವ ನ ದೇವೇಽಸ್ತಿ ಪ್ರಮಿತೌ ಭಿನ್ನತಾ ಯತಃ ॥ ೨೩ ॥

ವುವೋ ಅವೆಲ್ಲವೂ ಆ ಪರಮಾತ್ಮನಿಂದಲೇ ಹುಟ್ಟಿದವುಗಳಾಗಿ ತನ್ಮಯವಾಗಿಯೂ ಇರುವುದರಿಂದ ಸದ್ವಸ್ತುವಿನಂತೆ ಕಾಣಲ್ಪಡುತ್ತಿರುವುವು.

೨೧. ಒಂದು ಅಗ್ನಿಯಿಂದ ಉದ್ಭವಿಸಿದ ಮತ್ತೊಂದು ಅಗ್ನಿಯೂ ಅಗ್ನಿಯೇ ಆಗಿರುವಂತೆ ಆತ್ಮನಿಂದ ಹುಟ್ಟಿದುದೂ ಆತ್ಮವೇ ಆಗಿರುವುದು. ಹೀಗೆ ಸತ್ತಾ ಭೇದವು ಇಲ್ಲದಿರುವುದರಿಂದ ಭೇದ ಜ್ಞಾನವೂ ತತ್ತ್ವ ದೃಷ್ಟಿಯಿಂದ ಮಿಥ್ಯೆಯೇ ಎಂದು ತಿಳಿಯಬೇಕು. ಆದರೆ ವ್ಯವಹಾರದಲ್ಲಿ ಮಾತ್ರವೇ ಇದು ಜನ್ಯವೆಂದೂ [ಉತ್ಪತ್ತಿಯಾಗತಕ್ಕುದು] ಅದು ಜನಕವೆಂದೂ [ಉತ್ಪತ್ತಿಗೆ ಕಾರಣ] ಭೇದ ಕಲ್ಪನೆಯು ಕಾಣುತ್ತಿರುವುದು.

೨೨. ಒಂದು ದೀಪದಿಂದ ಮತ್ತೊಂದು ದೀಪವು ಉದಯಿಸಿತು ಎಂಬೀ ಮೊದಲಾದ ಲೋಕರೂಢವಾದ ವ್ಯವಹಾರದಂತೆ ಇದು ಈ ಕಾರಣದ ದೆಸೆಯಿಂದ ಉದಯಿಸಿತು, ಎಂಬ ವ್ಯವಹಾರವುಂಟಾಗುವುದಕ್ಕೆ ಒಂದು ವಸ್ತುವು ಮಾಯೆಯಿಂದ ಎರಡು ಬಗೆಯಾಗಿ ಸ್ವರೂಪ ನಿರ್ಮಾಣ ಕ್ರಿಯಾಶಕ್ತಿಯಲ್ಲಿ ಆಧಿಕ್ಯವನ್ನೂ [ಅತಿಶಯವನ್ನೂ] ಪಡೆಯುವುದೇ ಕಾರಣವಲ್ಲದೆ ಬೇರೆಯಿಲ್ಲ. ಆ ಆಧಿಕ್ಯವೇ ಇದು ಜನ್ಯವೆಂದೂ ಅದು ಜನಕವೆಂದೂ ಎರಡು ಬಗೆಯಾಗಿ ಭಾಸಿಸುವುದು.

೨೩. ಇದು ಬೇರೆ ಮತ್ತು ಅದು ಬೇರೆ ಎಂಬೀ ಮೊದಲಾಗಿ ನಾನಾ ನಾಮರೂಪಗಳಿಂದ ವ್ಯವಹಾರಮಾಡುವ ಆಯಾಸವು ವಾಂಗ್ಮಾತ್ರದಲ್ಲಿಯೇ ಇರುವುದಲ್ಲದೆ ಪರಮಾತ್ಮನಲ್ಲಿ ಎಂದಿಗೂ ಇಲ್ಲವು. ಏಕೆಂದರೆ ದೇಶ ಕಾಲಾದಿಗಳಿಂದ ಪರಿಚ್ಛೇದವುಂಟಾಗುವುದಾದರೆ ಆಗ ಅಲ್ಲಿ ಭೇದವು ತಲೆಹಾಕುವುದು ಪರಮಾತ್ಮನಾದರೋ ಅಪರಿಚ್ಛಿನ್ನನು. ಅಖಂಡ ಪರಿಪೂರ್ಣ ಚಿದೇಕರಸನು. ಅದು ಕಾರಣ ಪರಮಾತ್ಮನಲ್ಲಿ ಭೇದವು ಸಂಭವಿಸುವುದಿಲ್ಲ.

ತಜ್ಞಯೈವ ಮನಃಶಕ್ತ್ಯಾ ಸ್ವತಃ ಸಂಜ್ಞಾ ಪ್ರವರ್ತತೇ ।
ದೃಢಭಾವನಯಾ ತಸ್ಮಾದಿಷ್ಟೋಽರ್ಥಃ ಪ್ರತಿಪದ್ಯತೇ ॥ ೨೪ ॥

ಅಗ್ನೇಃ ಶಿಖಾಯಾ ಏಕಸ್ಯಾ ದ್ವಿತೀಯಾ ಜನಕೇತಿ ಯಾ ।
ಉಕ್ತಿರ್ವೈಚಿತ್ರ್ಯಮೇವೈತನ್ನೋಕ್ತ್ಯರ್ಥೇಽತ್ರಾಸ್ತಿ ಸತ್ಯತಾ ॥ ೨೫ ॥

ನ ಜನ್ಯಜನಕಾದ್ಯಾಸ್ತಾಃ ಸಂಭವಂತ್ಯುಕ್ತಯಃ ಪರೇ ।
ಏಕಮೇವ ಹ್ಯನಂತತ್ವಾತ್ಕಿಂ ಕಥಂ ಜನಯಿಷ್ಯತಿ ॥ ೨೬ ॥

ಉಕ್ತಿರೇವ ಸ್ವಭಾವೋಽಯಮುಕ್ತೇರುಕ್ತಿರನಂತರಂ ।
ಪ್ರತಿಯೋಗಿವ್ಯವಚ್ಛೇದಸಂಖ್ಯಾದ್ಯರ್ಥೇ ನ ಯುಜ್ಯತೇ ॥ ೨೭ ॥

["ವಾಚಾರಂಭಣಂ ವಿಕಾರೋ ನಾಮಧೇಯಂ-ಮೃತ್ತಿಕೇತ್ಯೇವ ಸತ್ಯಂ" ಛಾಂದೋಗ್ಯ. ೬ನೆಯ ಪ್ರಪಾಠಕ ಪ್ರಥಮ ಖಂಡ-೪.]

೨೪. ಹೀಗೆ ಆತ್ಮನಲ್ಲಿರುವ ಕ್ರಿಯಾಶಕ್ತಿಯಿಂದ ಜನ್ಯವಾದ ಮನಶ್ಶಕ್ತಿಯಿಂದಲೇ ಸ್ವತಏವ ಘಟಪಟಾದಿ ನಾಮವಿಭಾಗವೂ ಕೂಡ ಪ್ರವರ್ತಿಸುವುದು. ಅನಂತರ ಸಂಸ್ಕಾರವನ್ನೂ ದೃಢಪಡಿಸಿಕೊಂಡ ಅದೇ ಮನಶ್ಶಕ್ತಿಯಿಂದಲೇ ಈ ನಾಮ ವಿಭಾಗಪೂರ್ವಕವಾಗಿ ಇಷ್ಟವಾದ ಅರ್ಥವು [ಅಂದರೆ ಅಭಿಮತವಾದ ವ್ಯವಹಾರವು] ನಿಷ್ಪನ್ನವಾಗುವುದು.

೨೫. ಒಂದು ಅಗ್ನಿ ಜ್ವಾಲೆಗೆ ಮತ್ತೊಂದು ಅಗ್ನಿ ಜ್ವಾಲೆಯು ಜನಕವಾದುದು ಎಂದು ಹೇಳುವುದು ವ್ಯವಹಾರದಲ್ಲಿ ಮಾತಿಗ ಚಾತುರ್ಯವೇ ಹೊರತು ವಸ್ತುತಃ ಈ ಮಾತಿನ ಅರ್ಥದಲ್ಲಿ ಸ್ವಲ್ಪವೂ ಸತ್ಯತೆಯು ಇಲ್ಲ.

೨೬. ಜನ್ಯ ಜನಕ ಮುಂತಾದ ಈ ವ್ಯವಹಾರಗಳು ಯಾವುವೂ ಪರಮಾತ್ಮನಲ್ಲಿ ಸಂಭವಿಸುವುದಿಲ್ಲ. ಅದ್ವಿತೀಯವಾದ ಆ ಪರಬ್ರಹ್ಮ ಚೈತನ್ಯವು ತತ್ತ್ವತಃ ಅನಂತವಾಗಿರುವ ಕಾರಣ ಯಾವುದನ್ನೂ ಹೇಗೆ ಸೃಷ್ಟಿಮಾಡುವುದು ?

೨೭. ಆದರೆ, ಒಂದು ಮಾತು ಹೊರಟ ತರುವಾಯ ಮತ್ತೊಂದು ಮಾತು ಹೊರಡಲೇಬೇಕು. ಇದು ಮಾತಿನ ಸ್ವಭಾವವಾಗಿಯೇ ಇರುವುದು. ಹೀಗೆ ವ್ಯವಹಾರಸಿದ್ಧಿಗಾಗಿ ಪ್ರತಿಯೋಗಿ, ವ್ಯವಚ್ಛೇದ, ಸಂಖ್ಯೆ ಮೊದಲಾದವು ಇರುವುವೇ

ಊರ್ಮಿಜಾಲಮಿವಾಂಭೋಧೌ ಪರೇ ಯಃ ಪರಿದೃಶ್ಯತೇ ।
ಶಬ್ದೋಽರ್ಥಕಲನಾಕಾರಸ್ತದ್ಬ್ರಹ್ಮೈವ ವಿದುರ್ಬುಧಾಃ ॥ ೨೮ ॥

ಬ್ರಹ್ಮ ಚಿದ್ಬ್ರಹ್ಮ ಚ ಮನೋ ಬ್ರಹ್ಮ ವಿಜ್ಞಾನವಸ್ತು ಚ ।
ಬ್ರಹ್ಮಾರ್ಥೋ ಬ್ರಹ್ಮ ಶಬ್ದಶ್ಚ ಬ್ರಹ್ಮ ಚಿದ್ಬ್ರಹ್ಮ ಧಾತವಃ ॥ ೨೯ ॥

ಬ್ರಹ್ಮ ಸರ್ವಮಿದಂ ವಿಶ್ವಂ ವಿಶ್ವಾತೀತಂ ಚ ತತ್ಪದಂ ।
ವಸ್ತುತಸ್ತು ಜಗನ್ನಾಸ್ತಿ ಸರ್ವಂ ಬ್ರಹ್ಮೈವ ಕೇವಲಂ ॥ ೩೦ ॥

ಹೊರತು ಅವು ಯಾವುವೂ ಅರ್ಥದಲ್ಲಿ ವಸ್ತುತಃ ಯುಕ್ತವಾಗಿ [ಉಪಪನ್ನವಾಗಿ] ಇಲ್ಲ.

(ಪ್ರತಿಯೋಗೀ-ಸ್ವಾಶ್ರಯತಾದಾತ್ಮ್ಯ ವಿರೋಧೀ ಒಂದು ಘಟವನ್ನು ತೆಗೆದುಕೊಂಡರೆ ಅದರ ಆಶ್ರಯವಾದ ಮೃತ್ಕಪಾಲಾದಿಗಳು ತಾದಾತ್ಮ್ಯಕ್ಕೆ ಅತ್ಯಂತ ವಿರುದ್ಧವಾದ ಪಟಾದಿಯು ಘಟ ಪ್ರತಿಯೋಗಿ ವ್ಯವಚ್ಛೇದ-ಭೇದ. ಸಂಖ್ಯಾ ಎರಡು-ಮೂರು ಇತ್ಯಾದಿಗಳು.)

೨೮. ಸಮುದ್ರದ ಜಲದಲ್ಲಿ ಕಾಣಿಸುವ ತರಂಗಮಾಲೆ ಮುಂತಾದುವು ವಸ್ತುತಃ ಹೇಗೆ ಜಲವೇ ಆಗಿರುವುದೋ ಹಾಗೆಯೇ ಪರಮಾತ್ಮನಲ್ಲಿ ಯಾವ ಅರ್ಥಕಲ್ಪನಾರೂಪವಾದ ಜಗತ್ತು ಮೊದಲಾದ ಶಬ್ದವು ಕಾಣಿಸುವುದೋ ಅದನ್ನು ಬ್ರಹ್ಮವೆ ಎಂದು ಜ್ಞಾನಿಗಳು ತಿಳಿದಿರುವರು.

೨೯. ಪ್ರತ್ಯಗಾತ್ಮನು ಬ್ರಹ್ಮವೇ, ಬ್ರಹ್ಮವೇ ಮನಸ್ಸು; ಬುದ್ಧಿ ವೃತ್ತಿ ಭೇದಗಳೂ ಬ್ರಹ್ಮವೇ; ಅರ್ಥವೂ ಬ್ರಹ್ಮವೇ; ಶಬ್ದವೂ ಬ್ರಹ್ಮವೇ; ಸಾಕ್ಷಿಯಾದ ಈಶ್ವರನೂ ಬ್ರಹ್ಮವೇ; ಮತ್ತು ಧಾತುಗಳೂ [ಭೂತಾದಿಗಳೂ] ಬ್ರಹ್ಮವೇ.

೩೦. ಈ ಸಮಸ್ತ ವಿಶ್ವವೂ ಬ್ರಹ್ಮವೇ; ವಿಶ್ವಾತೀತವಾದ ಆ ಪರಮ ಪದವೂ ಬ್ರಹ್ಮವೇ: ವಸ್ತುತಃ ಜಗತ್ತೆಂಬುದೂ ಎಂದಿಗೂ ಇಲ್ಲವೇ ಇಲ್ಲ. ಸರ್ವವೂ ಕೇವಲವಾದ ಬ್ರಹ್ಮವೇಯೇ:

ಅಯಮನ್ಯೋಽಯಮನ್ಯೋಽಯಂ ಭಾಗ ಇತ್ಯಂಬರಾತ್ಮನಿ ।
ಮಿಥ್ಯಾಜ್ಞಾನವಿಕಲ್ಪೋಕ್ತಿರ್ವಾಚಿ ಸತ್ಯಾರ್ಥತಾತ್ರ ಕಾ ॥ ೩೧ ॥

ವಹ್ನೇಃ ಶಿಖೇವ ಜಾತೇಯಂ ಶಿಖೇತಿ ಮನಸೋಽಭಿಧಾ ।
ಚಾಪಲೋತ್ಥವಿಕಲ್ಪಶ್ರೀರ್ವಸ್ತುತಃ ಸ್ಯಾನ್ನ ಸಿದ್ಧ್ಯತಿ ॥ ೩೨ ॥

ಅಸತ್ಯೈವ ವಿಕಲ್ಪೋಕ್ತಿಃ ಸತ್ಯಭಾವೋ ವಿಕಲ್ಪತೇ ।
ತಮೋಪಹತದೃಷ್ಟಿತ್ವಾದ್ದ್ವಿಚಂದ್ರಜ್ಞಾನಮೋಹವತ್ ॥ ೩೩ ॥

ಸರ್ವಸ್ಮಾತ್ ಸರ್ವಗಾತ್ತಸ್ಮಾದನಂತಾದ್ಬ್ರಹ್ಮಣಃ ಪದಾತ್ ।
ನಾನ್ಯತ್ಕಿಂಚಿತ್ಸಂಭವತಿ ತದುತ್ಥಂ ಯತ್ತದೇವ ತತ್ ॥ ೩೪ ॥

---

೩೧. ಆಕಾಶದಂತೆ ಸರ್ವಗತನಾದ ಆತ್ಮನಲ್ಲಿ ಇದು ಬೇರೆ-ಅವನು ಬೇರೆ. ಇದು ಮತ್ತೊಂದು ಬೇರೆ ಭಾಗ. ಇದೇ ಮೊದಲಾಗಿ ವ್ಯವಹರಿಸುವುದೆಲ್ಲವೂ ಮಿಥ್ಯಾ ಜ್ಞಾನದಿಂದ ವಿಜೃಂಭಿತವಾದ ವಿಕಲ್ಪದ ಮಾತೇ ಸರಿ. ಈ ಮಾತಿನಲ್ಲಿ ಪರಮಾರ್ಥಕವಾದ ಸತ್ಯಾರ್ಥವು ಯಾವುದಿರುವುದು. (ಯಾವುದೂ ಇಲ್ಲ.) ಭ್ರಾಂತಿ ಮೂಲಕವಾದ ಉನ್ಮತ್ತ ಪ್ರಲಾಪ ಸದೃಶವೆಂದು ತಾತ್ಪರ್ಯ.

೩೨. "ಈ ಅಗ್ನಿ ಜ್ವಾಲೆಯು ಆ ಅಗ್ನಿ ಜ್ವಾಲೆಯಂತೆಯೇ ಹುಟ್ಟಿರುವುದು" ಎಂಬ ಭೇದ ಕಲ್ಪನೆಯು ಮನಸ್ಸಿನದೇ ಹೊರತು ವಾಸ್ತವವಾದುದಲ್ಲ. ಇದರಂತೆಯೇ ಮನಶ್ಚಾಂಚಲ್ಯದಿಂದ ಉದ್ಭವಿಸಿದ ನಾನಾ ವಿಕಲ್ಪ ಜಾಲಗಳೆಲ್ಲವೂ ನಿತ್ಯಸಿದ್ಧನಾದ ಕೂಟಸ್ಥ ಪರಮಾತ್ಮನಲ್ಲಿ ವಸ್ತುತಃ ಸಿದ್ಧಿಸುವುದೇ ಇಲ್ಲ. [ಸಂಭವಿಸುವುದಿಲ್ಲ.]

೩೩. ಈ ವಿಕಲ್ಪ ವಚನಗಳೆಲ್ಲವೂ ಅಸತ್ಯವೇ ಸರಿ ಸಂದೇಹವಿಲ್ಲ. ಕತ್ತಲೆಯಿಂದ ಕುಂಠಿತವಾದ ನೇತ್ರ ಪಾಟವವುಳ್ಳ ಮನುಷ್ಯನಿಗೆ ವಸ್ತುತಃ ಗಗನದಲ್ಲಿ ಒಬ್ಬನೇ ಚಂದ್ರನಿದ್ದರೂ ನೇತ್ರದೋಷದಿಂದ ಎರಡು ಚಂದ್ರ ಮಂಡಲಗಳಿರುವಂತೆ ದೋಷಮಯವಾದ ಭ್ರಾಂತಿ ಜ್ಞಾನದಿಂದ ಹೇಗೆ ಕಾಣಿಸುವುದೋ ಹಾಗೆಯೇ ಪರಮಾರ್ಥ ಸತ್ಯವಾಗಿ ಅದ್ವಿತೀಯನಾಗಿರುವ ಆತ್ಮನು ಭ್ರಾಂತಿಯಿಂದ ನಾನಾರೂಪವಾಗಿ ವಿಕಲ್ಪಿಸಲ್ಪಡುವನು. [ವಿವಿಧ ವಿಕಲ್ಪಗಳಿಗೆ ಗುರಿಯಾಗುವನು.]

೩೪. ವಾಸ್ತವಾಂಶವು ಹೀಗಿರುವುದರಿಂದ ಸರ್ವ ಸ್ವರೂಪವೂ ಸರ್ವವೂ—ಸರ್ವಗತವೂ-ಅನಂತವೂ ಆಗಿರುವ ಆ ಪರಬ್ರಹ್ಮಸಿಗಿಂತಲೂ ಬೇರೆಯಾದ ಯಾವು

ಬ್ರಹ್ಮತತ್ತ್ವಂ ವಿನಾ ನೇಹ ಕಿಂಚಿದೇವೋಪಪದ್ಯತೇ ।
ಸರ್ವಂ ಚ ಖಲ್ವಿದಂ ಬ್ರಹ್ಮೇತ್ಯೇಷೈವ ಪರಮಾರ್ಥತಾ ॥ ೩೫ ॥

ಏವಂ ಪ್ರಾಯಶ್ಚ ಹೇ ಪ್ರಾಜ್ಞ ಸಿದ್ಧಾಂತಸ್ತೇ ಭವಿಷ್ಯತಿ ।
ತತ್ರೈವೋದಾಹರಿಷ್ಯಾಮಃ ಸಿದ್ಧಾಂತಾರ್ಥೋಕ್ತಿಪಂಜರಂ ॥ ೩೬ ॥

ಇಹಾವಿದ್ಯಾದಿಕಾಃ ಕೇಚಿದ್ವಿದ್ಯಂತೇ ನೇತರಕ್ರಮಾಃ ।
ಜ್ಞಾಸ್ಯಸ್ಯಲಮಶೇಷಾರ್ಥಂಸ್ತತ್ತದಜ್ಞಾನಸಂಕ್ಷಯೇ ॥ ೩೭ ॥

ದೊಂದು ವಸ್ತುವೂ ಎಂದಿಗೂ ಸಂಭವಿಸುವುದೇ ಇಲ್ಲ. ಆ ಬ್ರಹ್ಮನ ದೆಸೆಯಿಂದ ಉತ್ಪನ್ನವಾಗುವುದೆಂದು ಯಾವುದೋ ಹೇಳಲ್ಪಡುವುದೋ ಅದು ಆ ಬ್ರಹ್ಮವೇ ಆಗಿರುವುದು.

೩೫. ಬ್ರಹ್ಮತತ್ತ್ವವೊಂದನ್ನು ಬಿಟ್ಟರೆ ಮತ್ತೆ ಯಾವುದೊಂದೂ ಕೂಡ ಈ ಜಗತ್ತಿನಲ್ಲಿ ಉಪಪನ್ನವಾಗುವುದಿಲ್ಲ. "ಸರ್ವಂ ಖಲ್ವಿದಂ ಬ್ರಹ್ಮ" (ಇದೆಲ್ಲವೂ ನಿಜ ವಾಗಿಯೂ ಬ್ರಹ್ಮವೇ] ಎಂಬೀಶ್ರುತಿಯೇ ಪರಮಾರ್ಥವು. ನೇಹ ನಾನಾ ಅಸ್ತಿ ಕಿಂಚನ; ಆತ್ಮೈವೇದನಂ ಸರ್ವ; ಬ್ರಹ್ಮೈ ವೇದಮಮೃತಂ ಪುರಸ್ತಾತ್ ಇತ್ಯಾದಿ ಸಾವಿರಾರು ಶ್ರುತಿಗಳನ್ನೂ ಉದಹರಿಸಿದಂತೆ ಭಾವಿಸಬೇಕು.]

೩೬. ಅಯ್ಯ ಪ್ರಾಜ್ಞನೇ, ಮತ್ತು ನಿನಗೆ ಮುಂದೆ ಈ ರೀತಿಯಾದ ಸಿದ್ಧಾಂತವು ನಿನ್ನ ಬುದ್ಧಿಯಲ್ಲಿ ಸ್ಥಿರವಾಗಿ ನಿಲ್ಲುವುದು. ಈ ಸಿದ್ಧಾಂತಾರ್ಥದ ವಚನ ಜಾಲವನ್ನೆಲ್ಲ ನಿರ್ವಾಣ ಪ್ರಕರಣದಲ್ಲಿ ಆಗಲೇ ನಾನು ನಿನಗೆ ಸ್ಪಷ್ಟವಾಗಿ ಉದಾಹರಿಸುವೆನು. [ವಿವರಿಸುವೆನು]

೩೭. ಅವಿದ್ಯೆಯೇ ಮೊದಲಾದ ಬೇರೆ [ಇತರ] ಯಾವ ಕಲ್ಪನೆಗಳೂ ಈ ಪರಮಾರ್ಥ ದೆಶೆಯಲ್ಲಿ ಇಲ್ಲವು. ಈ ಸಮಸ್ತ ತತ್ತ್ವಾರ್ಥಗಳನ್ನೂ-ಆಯಾ ಸಕಲ ಸಂಶಯ ಭೇದಗಳೊಡನೆ ಅಜ್ಞಾನವು ತೊಲಗಿಪ ಹಾಗೆಲ್ಲ ನೀನು ಮುಂದೆ ಸಂಪೂರ್ಣ ವಾಗಿ ತಿಳಿಯುವೆ.

ಅವಸ್ತುಸಂಕ್ಷಯೇ ವಸ್ತು ಯಥಾವಸ್ತು ಪ್ರಸೀದತಿ ।
ಯಥಾ ಚ ದೃಶ್ಯತೇ ದೃಶ್ಯಂ ಜಗನ್ನೈಶತಮಃ ಕ್ಷಯೇ ॥ ೩೮ ॥

ಯದಿದಮಖಿಲಮಾತತಂ ಕುದೃಷ್ಟ್ಯೈ
ತದುಪಶಮೇ ತವ ರಾಮ ನಿರ್ಮಲಾಭೇ ।
ಅವಿತಥಪದನಿರ್ಮಲೇ ಭವಿಷ್ಯ-
ತ್ಯವಿತಥಮೇವ ನ ಸಂಶಯೋಽತ್ರ ಕಶ್ಚಿತ್ ॥ ೩೯ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಬ್ರಹ್ಮೈವೇದಂ ಸರ್ವಂ ಜಗದಿತಿಪ್ರತಿಪಾದನಂ" ನಾಮ ಚತ್ವಾರಿಂಶಃ ಸರ್ಗಃ

---

೩೮. ರಾತ್ರಿಯ ಕತ್ತಲೆಯು ಕ್ಷೀಣವಾಗುತ್ತಾ ಹೋದ ಹಾಗೆಲ್ಲ ದೃಶ್ಯವಾದ ಈ ಜಗತ್ತೂ ಜನಗಳ ಕಣ್ಣಿಗೆ ಹೇಗೆ ಚೆನ್ನಾಗಿ ಪ್ರಕಾಶಿಸುವುದೋ [ಕಾಣಿಸುವುದೋ] ಹಾಗೆಯೇ ಅಸತ್ಯವಾದ ವಸ್ತುವಿನ ಜ್ಞಾನವು ಕ್ಷಯಹೊಂದುತ್ತಾ ಹೋದ ಹಾಗೆಲ್ಲ ಸತ್ಯ ವಸ್ತುವು ಯಥಾವಸ್ಥಿತವಾಗಿ [ಇದ್ದದ್ದೂ ಇದ್ದ ಹಾಗೆ] ಸ್ಪಷ್ಟವಾಗಿ ಕಾಣುವುದು.

೩೯. ಅಯ್ಯ ರಾಮ, ಅಜ್ಞಾನ ದೋಷದಿಂದ ದೂಷಿತವಾದ ದೃಷ್ಟಿಯಿಂದ ಯಾವ ಈ ಸಮಸ್ತ ಜಗತ್ತು ಸರ್ವತ್ರ ವಿಸ್ತಾರವಾಗಿ ವ್ಯಾಪಿಸಿಕೊಂಡಿರುವಂತೆ ಕಾಣುತ್ತಿರುವುದೋ ಅಂತಹ ಈ ಸಮಸ್ತ ಜಗತ್ತೂ ತನಗೆ ಮೂಲವಾದ ಅಜ್ಞಾನ ಸಹಿತವಾಗಿ ಆತ್ಮೈಕತ್ವಜ್ಞಾನದಿಂದ ನಾಶಹೊಂದಲಾಗಿ ಬಳಿಕ, ನಿನಗೆ ನಿರ್ಮಲವಾದ ರತ್ನಗಳ ಕನ್ನಡಿಯಂತೆ ಪ್ರಕಾಶಮಾನವಾದ ಪರಮಾರ್ಥ ಸತ್ಯವಾದ ನಿತ್ಯ ಶುದ್ಧವಾದ ಪರಮಪದದಲ್ಲಿ ಯಥಾರ್ಥವಾದ ತತ್ತ್ವಜ್ಞಾನವೇ ಉದಯಿಸುವುದಲ್ಲದೆ ಸ್ವಲ್ಪವೂ ಸಂಶಯವುಂಟಾಗುವುದಿಲ್ಲ. ಇದು ಸತ್ಯವೆಂದು ದೃಢವಾಗಿ ನಂಬುವನಾಗು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಬ್ರಹ್ಮೈವೇದಂ ಸರ್ವಂ ಜಗದಿತಿಪ್ರತಿಪಾದನ" ಎಂಬ
ನಾಲ್ವತ್ತನೆಯ ಸರ್ಗವು.

ಏಕಚತ್ವಾರಿಂಶಃ ಸರ್ಗಃ

ಶ್ರೀ ರಾಮ ಉವಾಚ:—

ಕ್ಷೀರೋದಕುಕ್ಷಿತುಲ್ಯಾಭಿಃ ಶೀತಲಾಮಲದೀಪ್ತಿಭಿಃ ।
ತವೋಕ್ತಿಭಿರ್ವಿಚಿತ್ರಾಭಿಃ ಗಂಭೀರಾಭಿರಿವಾಭಿತಃ ॥ ೧ ॥

ಕ್ಷಣಮಾಂದ್ಯಮಿವಾಪ್ನೋತಿ ಕ್ಷಣಂ ಯಾಮಿ ಪ್ರಕಾಶತಾಂ ।
ಶಾಂತಾತಪಲವಃ ಪ್ರಾವಟ್ ಲೋಲಾಭ್ರ ಇವ ವಾಸರಃ ॥ ೨ ॥

ಅನಂತಸ್ಯಾಪ್ರಮೇಯಸ್ಯ ಸರ್ವಸ್ಯೈಕಸ್ಯ ಭಾಸ್ವತಃ ।
ಅನಸ್ತಮಿತಸಾರಸ್ಯ ಕಲನಾ ಕಥಮಾಗತಾ ॥ ೩ ॥

ನಲವತ್ತೊಂದನೆಯ ಸರ್ಗ

೧–೨. ಶ್ರೀರಾಮನು ಹೇಳಿದನು. ಗುರುವರ್ಯರೇ, ತಮ್ಮ ವಾಕ್ಯಗಳು ಕ್ಷೀರಾರ್ಣವದ ಗರ್ಭದಿಂದ (ಮಧ್ಯದಿಂದ) ಉದ್ಭವಿಸಿದ ಚಂದ್ರನಂತೆ ಮನಸ್ಸಿಗೆ ಆಹ್ಲಾದಕರಗಳಾಗಿಯೂ ಶೀತಲವೂ ನಿರ್ಮಲವೂ ಆದ ಪ್ರಕಾಶವುಳ್ಳವುಗಳಾಗಿಯೂ ವಿಚಿತ್ರವಾಗಿಯೂ ಅತ್ಯಂತ ಗಂಭೀರವಾದ ಅರ್ಥ ಪ್ರತಿಪಾದಕಗಳಾಗಿಯೂ ಇವೆ. ಇಂತಹ ತಮ್ಮ ವಾಗ್ವಿಲಾಸಗಳಿಂದ ಸ್ವಲ್ಪವಾದರೂ ಬಿಸಿಲುಕಾಯದೆ ಶಾಂತವಾಗಿರುವ, ಮತ್ತು ಚಂಚಲವಾದ ಮೇಘಗಳಿಂದ ಕವಿದಿರುವ ವರ್ಷಾಕಾಲದ ದಿನದಂತೆ ನಾನು ಸ್ವಲ್ಪ ಹೊತ್ತು ಸರ್ವತಃ ವ್ಯಾಮೋಹವೆಂಬ ತಮಸ್ಸಿನಿಂದ ವ್ಯಾಪ್ತವಾಗಿ ಡಂಗುಬಡಿದಂತಾಗುವೆನು. ಮತ್ತೊಂದು ಕ್ಷಣದೊಳಗೆ ಜ್ಞಾನವೆಂಬ ಪ್ರಕಾಶವನ್ನು ಪಡೆದು ಕಂಗೊಳಿಸುವೆನು.

೩. ಅನಂತವೂ ಅಪ್ರಮೇಯವೂ (ಸರ್ವಪ್ರಮಾಣಗಳಿಗೂ ಅಗೋಚರನೂ) ಪರಿಪೂರ್ಣ ಸ್ವರೂಪವೂ ಸರ್ವಾತ್ಮಕವೂ (ಅದ್ವಿತೀಯವೂ) ಸರ್ವದಾ ಸ್ವಯಂ ಪ್ರಕಾಶವೂ ಆಗಿರುವ ಎಂದಿಗೂ ತನ್ನ ಪಾರಮಾರ್ಥಿಕ ಸಚ್ಚಿದಾನಂದ ರೂಪವನ್ನು

ಶ್ರೀ ವಸಿಷ್ಠ ಉವಾಚ:—

ಯಥಾಭೂತಾರ್ಥವಾಕ್ಯಾರ್ಥಾಃ ಸರ್ವಾ ಏವ ಮಮೋಕ್ತಯಃ ।
ನಾಸಮರ್ಥಾ ವಿರೂಪಾರ್ಥಾಃ ಪೂರ್ವಾಪರವಿರೋಧದಾಃ ॥ ೪ ॥

ಬಿಡದಿರುವ ಈ ಆತ್ಮನಿಗೆ ಪರಿಚ್ಛಿನ್ನ ರೂಪವಾದ ಕಲ್ಪನೆಯೆಂಬ ವಿಕಾರವು ಹೇಗೆ ಸಂಭವಿಸೀತು ? (ವಸ್ತುಸ್ವಭಾವದಿಂದಲೂ ಕಲ್ಪನೆಯಿಂದಲೂ ಅದು ಹೇಗೂ ಕೂಡ ಅದ್ವಿತೀಯ ಪರಿಪೂರ್ಣ ಸ್ವರೂಪನೂ ಸ್ವಯಂಪ್ರಕಾಶನೂ ಅವಿಕಾರಿಯೂ ಆದ ಆತ್ಮನಲ್ಲಿ ಈ ವಿಕಾರವು ಕಲ್ಪನೆಗಳಿಗೆ ಲೇಶಮಾತ್ರವಾದರೂ ಸಂಭವವೂ ಅವಕಾಶವೂ ಇಲ್ಲವು ಎಂದು ತಾತ್ಪರ್ಯ. ಹೀಗಿದ್ದಾಗ್ಯೂ "ಮನಸ್ಸೇ ಮೊದಲಾದ ಸಕಲದ್ವೈತ ಕಲ್ಪನೆಗಳಿಗೂ ಆತ್ಮಕಲನೆಯೇ ಮೂಲ"ವೆಂದು ಶ್ರೀ ವಸಿಷ್ಠನು ಹೇಳಿದ ಮಾತಿನಲ್ಲಿ ತತ್ತ್ವವನ್ನು ಗ್ರಹಿಸದೆ ಶ್ರೀ ರಾಮನು ಸರ್ವಾನರ್ಥಮೂಲವಾದ ಆತ್ಮಕಲನೆಗೆ ನಿಮಿತ್ತವೇ ಅಸಂಭವವಾಗಿರುವುದೆಂದೂ ಅದುಕಾರಣ ಅವರ ಮಾತಿನಲ್ಲಿ ಪೂರ್ವಾಪರ ವಿರೋಧವನ್ನು ಆಶಂಕಿಸಿ ಪ್ರಶ್ನೆ ಮಾಡಿರುವನು.)

೪. ಶ್ರೀ ವಸಿಷ್ಠನು ಹೇಳಿದನು. ರಾಮ, ನನ್ನ ಮಾತುಗಳೆಲ್ಲವೂ ಕೂಡ ಯಥಾಸ್ಥಿತವಾದ ಆತ್ಮತತ್ತ್ವವನ್ನು ಬೋಧಿಸುವ ಶಾಸ್ತ್ರವಾಕ್ಯಾರ್ಥವನ್ನೇ ಬೋಧಿಸ ತಕ್ಕವುಗಳಾಗಿವೆಯೆಂದು ತಿಳಿ. ನನ್ನ ಮಾತುಗಳಲ್ಲಿ ಅಸಾಮರ್ಥ್ಯವಾಗಲೀ, ಅರ್ಥವೈರೂಪ್ಯವಾಗಲಿ, ಪೂರ್ವಾಪರ ವಿರೋಧವಾಗಲೀ ಲೇಶಮಾತ್ರವೂ ಇಲ್ಲ. (ನಿನ್ನ ಈ ವ್ಯಾಮೋಹವು ನನ್ನ ವಾಕ್ಯದೋಷದಿಂದ ಉಂಟಾಗಿಲ್ಲ. ಆದರೆ ನನ್ನ ಮಾತುಗಳ ತಾತ್ಪರ್ಯವನ್ನು ಸರಿಯಾಗಿ ಗ್ರಹಿಸದೆ ಇರುವ ಕಾರಣ ನಿನಗೆ ಈ ವ್ಯಾಮೋಹವುಂಟಾಗಿರುವುದು.)

(ಉಕ್ತಿಗಳ ಅಸಾಮರ್ಥ್ಯವೆಂದರೆ ಪದಗಳ ಆಕಾಂಕ್ಷಾ ಯೋಗ್ಯತಾ ಸತ್ತಿರಾಹಿತ್ಯವು. ಪದಗಳ ಸಂಬಂಧಾರ್ಥಃ–ಸಮರ್ಥಃ, ಸಂಗತಾರ್ಥಃ–ಸಮರ್ಥಃ, ಸಂಸೃಷ್ಟಾರ್ಥಃ-ಸಮರ್ಥಃ ಎಂಬೀ ಮೂರು ವಿಧವಾದ ಸಮರ್ಥಶಬ್ದವ್ಯುತ್ಪತ್ತಿಯಿಂದ

ಜ್ಞಾನದೃಷ್ಟೌ ಪ್ರಸನ್ನಾಯಾಂ ಪ್ರಬೋಧೇ ವಿತತೋದಯೇ ।
ಯಥಾವತ್ ಜ್ಞಾಸ್ಯಸಿ ಸ್ವಸ್ಥೋ ಮದ್ವಾಗ್ದೃಷ್ಟಿಬಲಾಬಲಂ ॥ ೫ ॥

ವ್ಯಪೇಕ್ಷಾಲಕ್ಷಣ ಏಕಾರ್ಥೀ ಭಾವಲಕ್ಷಣಗಳೆಂಬ ಎರಡು ವಿಧವಾದ ಸಾಮರ್ಥ್ಯವು ಪದಗಳಿಗೆ ಉಂಟು. ಸ್ವಾರ್ಥಪರ್ಯವಸಾಯಿಗಳಿಂದ ಪದಗಳ (ಆಕಾಂಕ್ಷಾದಿ ವಶದಿಂದ) ಪರಸ್ಪರ ಅನ್ವಯಕ್ಕೆ ವ್ಯಪೇಕ್ಷಾ ಲಕ್ಷಣ ಸಾಮರ್ಥ್ಯವೆಂದು ಹೆಸರು. ಪ್ರಕ್ರಿಯಾದಶೆಯಲ್ಲಿ ಪ್ರತ್ಯೇಕ ಅರ್ಥವತ್ತಾಗಿ ಪೃಥಕ್ ಗೃಹೀತವಾದ ಎಲ್ಲ ಪದಗಳ ಸಮುದಾಯ ಶಕ್ತಿಯಿಂದ ವಿಶಿಷ್ಟವಾದ ಒಂದೇ ಒಂದು ಅರ್ಥವನ್ನು ಪ್ರತಿಪಾದಿಸುವ ರೀತಿಗೆ ಏಕಾರ್ಥೀಭಾವಲಕ್ಷಣವೆಂಬ ಸಾಮರ್ಥ್ಯವೆಂದು ಹೆಸರು. ಈ ವಿಷಯವನ್ನು ಶಬ್ದೇಂದು ಶೇಖರ, ಮಂಜೂಷಾದಿ ವ್ಯಾಕರಣ ಗ್ರಂಥಗಳಿಂದ ಇನ್ನೂ ವಿಶದವಾಗಿ ತಿಳಿಯಬಹುದು. ಇಲ್ಲಿ ವಿಸ್ತರಭಯದಿಂದ ಸಂಗ್ರಹಿಸಿರುತ್ತೆ. ಇಂತಹ ಸಾಮರ್ಥ್ಯವಿಲ್ಲದಿರುವಿಕೆಯೇ ಅಸಾಮರ್ಥ್ಯವು. ಇದು ಒಂದು ವಾಕ್ಯದೋಷ. ಇದರಿಂದ ವಾಕ್ಯದಲ್ಲಿರುವ ಪದಗಳಿಗೆ ಪರಸ್ಪರ ಆಕಾಂಕ್ಷಾದಿಗಳು ಇಲ್ಲದೆ ಹೋಗಿ ಅವುಗಳ ಸಂಬಂಧ ಜ್ಞಾನವೇಉಂಟಾಗದೇ ನಿಷ್ಕೃಷ್ಟವಾದ ಜ್ಞಾನಬೋಧೆಯಾಗುವುದಿಲ್ಲ. ಇಂತಹ ಅಸಾಮರ್ಥ್ಯ ದೋಷವು ಶ್ರೀ ವಸಿಷ್ಠನ ಮಾತುಗಳಲ್ಲಿ ಇಲ್ಲವೆಂದು ಶ್ಲೋಕದಲ್ಲಿ ಹೇಳಿರುವುದು.

ಅರ್ಥವೈರೂಪ್ಯವೆಂದರೆ ಅವಾಂತರ ವಾಕ್ಯಗಳ ಅರ್ಥವು ಮಹಾವಾಕ್ಯಾರ್ಥದಲ್ಲಿ ಪರ್ಯವಸಾನವಾಗದೆ ಹೋಗುವುದು. ಇದೂ ಒಂದು ಉಕ್ತಿದೋಷ.

ವಿರೋಧವೆಂದರೆ ಉಪಕ್ರಮೋಪಸಂಹಾರಗಳಿಗೆ ಪರಸ್ಪರ ವ್ಯಾಘಾತ ಪೂರ್ವಾಪರ ವಿರೋಧ ಈ ಮೂರು ವಿಧವಾದ ಉಕ್ತಿದೋಷಗಳೂ ಇಲ್ಲದೆ ಶ್ರೀ ವಸಿಷ್ಠನ ಮಾತುಗಳು ಸುಸ್ಪಷ್ಟವಾಗಿ ಯಥಾಸ್ಥಿತವಾದ ಅರ್ಥವನ್ನು ನಿಸ್ಸಂದೇಹವಾಗಿ ಬೋಧಿಸತಕ್ಕವುಗಳು ಎಂದು ತಾತ್ಪರ್ಯ.)

೫. ರಾಮ, ನಿನಗೆ ವೇದಾಂತಶಾಸ್ತ್ರೀಯವಾದ ಆತ್ಮೈಕತ್ವರೂಪ ತತ್ತ್ವಜ್ಞಾನ ದೃಷ್ಟಿಯು ಸಂದೇಹಾದಿಗಳಿಲ್ಲದೆ ನಿರ್ಮಲವಾಗಿ ಪ್ರಬೋಧವು ಚೆನ್ನಾಗಿ ಉದಯಿಸಿ ನಿರಂತರವೂ ಸ್ಥಿರವಾಗಿ ನಿಂತುಬಿಟ್ಟರೆ ಆಗ ನೀನು ನನ್ನ ಮಾತುಗಳ ಮತ್ತು ಅವುಗಳಿಂದ ಬೋಧೆಯಾಗುವ ತತ್ತ್ವದೃಷ್ಟಿಯ ಬಲಾಬಲವನ್ನು (ಅಂದರೆ ಇತರರು ಹೇಳುವ ಮಾತುಗಳು ಮತ್ತು ಅವರ ತತ್ತ್ವದೃಷ್ಟಿ ಇವುಗಳಿಗಿಂತ ನನ್ನ ಮಾತುಗಳೂ ತತ್ತ್ವದೃಷ್ಟಿಯೂ ಎಷ್ಟು ಹೆಚ್ಚು ಪ್ರಬಲವಾದುವು ಎಂಬುದನ್ನು) ಸ್ವಸ್ಥನಾಗಿದ್ದು ಕೊಂಡು ಯಥಾವತ್ತಾಗಿ ತಿಳಿಯುವೆ.

ಉಪದೇಶ್ಯೋಪದೇಶಾರ್ಥಂ ಶಾಸ್ತ್ರಾರ್ಥಪ್ರತಿಪತ್ತಯೇ ।
ಶಬ್ದಾರ್ಥವಾಕ್ಯರಚನಾಭ್ರಮೋ ಮಾತನ್ಮಯೋ ಭವ ॥ ೬ ॥

ಯದಾ ಪುರಾ ಜ್ಞಾಸ್ಯಸಿ ತತ್ಸತ್ಯಮತ್ಯಂತನಿರ್ಮಲಂ ।
ವಾಚ್ಯವಾಚಕಶಬ್ದಾರ್ಥಾಭೇದಂ ತ್ಯಕ್ಷ್ಯಸಿ ಸ್ವೈ ತದಾ ॥ ೭ ॥

---

೬. ಶಿಷ್ಯನಿಗೆ ಉಪದೇಶಿಸಬೇಕಾಗಿರುವ ಆತ್ಮೈಕತ್ವರೂಪ ತತ್ತ್ವವನ್ನು ಉಪದೇಶಿಸುವುದಕ್ಕೋಸ್ಕರವೂ ಲೋಕದಲ್ಲಿ ಶಾಸ್ತ್ರಾರ್ಥ ಜ್ಞಾನಪ್ರಸಾರಕ್ಕಾಗಿಯೂ "ಸೃಷ್ಟಿ, ಜಗತ್ತು-ಆತ್ಮ-ಅನಾತ್ಮ ಇತ್ಯಾದಿ ನಾನಾ ಶಬ್ದಗಳ ಅರ್ಥಗಳ ಮತ್ತು ವಾಕ್ಯಗಳ ರಚನಾತ್ಮಕವಾದ ಭ್ರಾಂತಿಯು ಶ್ರುತಿಶಾಸ್ತ್ರಗಳಲ್ಲಿ ಕಲ್ಪಿತವಾಗಿರುವುದೇ ಹೊರತು ಇದೇ ಪರಮಾರ್ಥವಲ್ಲ. ನೀನು ಈ ಭ್ರಮೆಯನ್ನೇ ಸತ್ಯವೆಂದು ನಂಬಿ ಭ್ರಾಂತನಾಗಬೇಡ (ಭ್ರಾಂತಿಮಯನಾಗಬೇಡ.)

("ಇದಂ ಸರ್ವಂ ಅಸೃಜತ" ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ ಇತ್ಯಾದಿ ಶ್ರುತಿಗಳಿಂದ ಸೃಷ್ಟಿಯು ಪ್ರತಿಪಾದಿತವಾಗಿದೆ. "ನೇಹನಾನಾಸ್ತಿಕಿಂಚನ" "ಏಕಮೇವಾದ್ವಿತೀಯಂ ಬ್ರಹ್ಮ" ತತ್ ತ್ವಮಸಿ ಇತ್ಯಾದಿ ಶ್ರುತಿಗಳು ಜಗನ್ಮಿಥ್ಯಾತ್ವ ವನ್ನೂ ಆತ್ಮೈಕತ್ವವನ್ನೂ ಬೋಧಿಸುವುವು. ಈ ಶ್ರುತಿಗಳು "ನನ್ನ ತಾಯಿಯು ವಂಧ್ಯೆಯು" ಎಂಬೀ ಮುಂತಾದ ಲೌಕಿಕ ವಾಕ್ಯಗಳಂತೆ ಅಸಂಬದ್ಧವೂ ಸ್ವೋಕ್ತಿ ವ್ಯಾಘಾತವೂ ಪರಸ್ಪರ ವಿರುದ್ಧವೂ ಆಗಿವೆಯೆಂದು ಶಂಕಿಸಬಾರದು. ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮನಿಗಿಂತ ಅನನ್ಯವಾದುದು. ಬ್ರಹ್ಮವೊಂದೇ ಸತ್ಯವು. ಕಾರ್ಯ ವಾದ ಜಗತ್ತು ವಿಕಾರಿಯು ಮತ್ತು ಮಿಥ್ಯೆಯು ಎಂಬ ಪರಮಸಿದ್ಧಾಂತವನ್ನು ಐದಂ ಪರ್ಯೇಣ ಬೋಧಿಸುವುದಕ್ಕಾಗಿ ಶಾಸ್ತ್ರದಲ್ಲಿ ಈ ಸೃಷ್ಟಿವಾದವು ಕಲ್ಪಿತವಾಗಿರುವುದೇ ಹೊರತು ಸೃಷ್ಟಿಯನ್ನು ಪ್ರತಿಪಾದಿಸುವುದರಲ್ಲಿ ತಾತ್ಪರ್ಯವಿಲ್ಲ. ಅದು ಕಾರಣ ಯಾವ ವಿರೋಧವೂ ಇಲ್ಲ. ಇದನ್ನೇ ಶ್ರೀ ವಸಿಷ್ಠನು ಎಷ್ಟೋ ಸಲ ಹೇಳಿರುವನು. ಆದರೂ ಮನಸ್ಸಿನಲ್ಲಿ ವ್ಯಾಮೋಹವು ಬಲವಾಗಿ ಬೇರೂರಿದ ಕಾರಣ, ಈ ಸಂಶಯವು ಪದೇ ಪದೇ ಉದಯಿಸುವುದು. ಅದರ ಪರಿಹಾರಕ್ಕಾಗಿ ಸಮಾಧಾನವನ್ನೂ ಹೇಳ ಬೇಕಾಗಿದೆ. ನಾವೂ ಇಂತಹ ವಿವರಣೆಯನ್ನೂ ಹಿಂದೆ ಅನೇಕ ಕಡೆ ಬರೆದಿದ್ದೇವೆ. (ಸಿದ್ಧಾಂತವು ಸ್ಥಿರವಾಗುವುದಕ್ಕೆ) ವಾಚಕರು ಬೇಸರಪಡಬಾರದು.)

೭. ನೀನು ಹೀಗಿಯೇ ಸಂತತವೂ ವೇದಾಂತಶಾಸ್ತ್ರ ಶ್ರವಣಾದಿಗಳ ಮೂಲಕ ವಾಕ್ಯಾರ್ಥಾ ಪರೋಕ್ಷಜ್ಞಾನೋದಯ ಪರ್ಯಂತವೂ ಅಧ್ಯಾತ್ಮ ವಿಚಾರಪರವಾಗಿದ್ದು

ಭೇದಕೃದ್ವಾಕ್ಯಪಂಚೋಽಯಮುಪದೇಶೇಷು ಕಲ್ಪಿತಃ ।
ಉಪದೇಶ್ಯೋಪದೇಶಾರ್ಥಂ ಶಾಸ್ತ್ರಾರ್ಥಪ್ರತಿಪತ್ತಯೇ ॥ ೮ ॥

ಶಬ್ದಾರ್ಥವಾಕ್ಯಪಂಚೋಽಯಮುಪದೇಶೇಷು ಕಲ್ಪಿತಃ ।
ಸದಾಜ್ಞೇಷು ನ ತಜ್ಞೇಷು ವಿದ್ಯತೇ ಪಾರಮಾರ್ಥಿಕಃ ॥ ೯ ॥

ಕೊಂಡು ಬಳಿಕ ಯಾವಾಗ ಅತ್ಯಂತ ನಿಷ್ಕಳಂಕವಾದ ಪರಮಾರ್ಥ ಸತ್ಯವಾದ ಆ ಪರಬ್ರಹ್ಮವನ್ನು ತಿಳಿದು ಪರಿನಿಷ್ಠಿತನಾಗುವೆಯೋ ಆಗ ವಾಚ್ಯವಾಚಕ ಶಬ್ದಾರ್ಥದಲ್ಲಿ ಭೇದವನ್ನೂ ಸರ್ವಥಾ ಬಿಟ್ಟುಬಿಡುವೆ.

(ವಾಚ್ಯ-ಒಂದು ಶಬ್ದದಿಂದ ಹೇಳಲ್ಪಡುವ-ವಸ್ತು ಅಥವಾ ಅರ್ಥ. ವಾಚಕ-ವಸ್ತು ಅಥವಾ ಅರ್ಥವನ್ನು ಹೇಳುವ ಶಬ್ದ.)

೮. ಹೀಗೆ ಭೇದಜ್ಞಾನವನ್ನುಂಟುಮಾಡುವ ಈ ಶಬ್ದ ಪ್ರಪಂಚವೆಲ್ಲವೂ ಉಪದೇಶಕ್ಕೆ ಅರ್ಹರಾದ ಅಜ್ಞಾನಿಗಳ ವಿಷಯದಲ್ಲಿ ಉಪದೇಶಿಸಬೇಕಾಗಿರುವ ತತ್ತ್ವವನ್ನು ಬೋಧಿಸುವುದಕ್ಕಾಗಿಯೂ ಶಾಸ್ತ್ರಾರ್ಥ ಪ್ರತಿಪತ್ತಿಗೋಸ್ಕರವಾಗಿಯೂ ಮಾತ್ರವೇ ಕಲ್ಪಿತವಾಗಿರುವುದು.

೯. ಈ ಶಬ್ದಾರ್ಥ ವಾಕ್ಯ ಪ್ರಪಂಚವೆಲ್ಲವೂ ಸಂತತವೂ ತತ್ತ್ವಜ್ಞರಲ್ಲದ ಸಾಮಾನ್ಯಾಧಿಕಾರಿಗಳ ವಿಷಯದಲ್ಲಿ ಉಪದೇಶಾರ್ಥವಾಗಿ ಕಲ್ಪಿಸಲ್ಪಟ್ಟಿರುವುದು. ತತ್ತ್ವಜ್ಞರಾದವರಲ್ಲಿ ಅದು ಪಾರಮಾರ್ಥಿಕವಾಗಿ ಎಂದಿಗೂ ಇಲ್ಲವೇ ಇಲ್ಲ.

(ಉಪದೇಶಾದಯಂ ವಾದೋ ಜ್ಞಾತೇದ್ವೈತಂ ನವಿದ್ಯತೇ ॥ ಮಿಥ್ಯಾಭೂತ ವಾದ ಭೇದವನ್ನು ಅಭ್ಯುಪಗಮಮಾಡಿ (ಒಪ್ಪಿಕೊಂಡು) ಆ ಭೇದವು ವಾಸ್ತವವೇ ಅಲ್ಲವೇ ? ಎಂಬುದಾಗಿ ವಿಚಾರಮಾಡಬೇಕು. ವಿಚಾರದಶೆಯಲ್ಲಿ ಸಕಲ ಭೇದ ವ್ಯವಹಾರವೂ ಕಲ್ಪಿತವಾಗಿ ಇದೆಯೇ ಹೊರತು, ತತ್ತ್ವಜ್ಞಾನವುಂಟಾಗಿ ಬಿಟ್ಟರೆ ಸಕಲದ್ವೈತವೂ ಅಜ್ಞಾನದಿಂದ ಬಂಧಿತವಾಗಿ (ನಿವೃತ್ತಿಯಾಗಿ) ಬಿಡುವುದು. ಇದೇ ಅಭಿಪ್ರಾಯದಿಂದಲೇ ಶ್ರೀ ವಿದ್ಯಾರಣ್ಯರು ಪಂಚದಶಿಯಲ್ಲಿ ಚೋದ್ಯಂವಾ ಪರಿಹಾರೋವಾಕ್ರಿಯತಾಂ । ದ್ವೈತ ಭಾಷಯಾ । ಅದ್ವೈತ ಭಾಷಯಾ ಚೋದ್ಯಂವಾಪಿ ನಾಸ್ತಿತದುತ್ತರಂ ಎಂದು ಹೇಳಿರುವನು. ಗುರುಶಿಷ್ಯಾದಿ ಭೇದವೇ ಇಲ್ಲದೆಹೋದರೆ ಶಾಸ್ತ್ರದ ಅವಶ್ಯಕತೆಯೆಲ್ಲಿಯದು ?

ಕಲನಾಮಲಮೋಹಾದಿ ಕಿಂಚಿನ್ನಾತ್ಮನಿ ವಿದ್ಯತೇ ।
ನೀರಾಗಂ ಬ್ರಹ್ಮ ಪರಮಂ ತದೇವೇದಂ ಜಗತ್ಸ್ಥಿತಂ ॥ ೧೦ ॥

ಏತದ್ವಿಚಿತ್ರರೂಪಾಭಿರ್ಯುಕ್ತಿಭಿರ್ಬಹುಶಃ ಪುನಃ ।
ವಿಸ್ತರೇಣೈವ ವಕ್ತವ್ಯಂ ಸಿದ್ಧಾಂತಾವಸರೇಽನಘ ॥ ೧೧ ॥

ವಾಕ್ಯಪಂಚಂ ವಿನಾ ಶ್ವೇತದಜ್ಞಾನಮತುಲಂ ತಮಃ ।
ಭೇತ್ತುಮನ್ಯೋನ್ಯಮುದಿತಂ ಯತ್ನಂ ಕರ್ತುಂ ನ ಶಕ್ಯತೇ ॥ ೧೨ ॥

---

೧೦. ಪೂರ್ವೋಕ್ತ ಪ್ರಕಾರವಾದ ಕಲನೆಯೂ (ಅಂದರೆ ಚಿತ್ತು ಚೇತ್ಯೋನ್ಮುಖವಾಗುವಿಕೆ) ಅದರ ನಿಮಿತ್ತಗಳಾದ ಎರಡು ವಿಧ ಮಲಗಳೂ (ಪೂರ್ವ ಸಂಸ್ಕಾರ ಮತ್ತು ಕರ್ಮ) ಮತ್ತು ಮೋಹವೂ (ಅವಿದ್ಯೆ) ಈ ಮೊದಲಾದುದೊಂದೂ ಆತ್ಮನಲ್ಲಿ ಎಂದಿಗೂ ಇಲ್ಲ. ಏಕೆಂದರೆ ಆ ಪರಬ್ರಹ್ಮವು ನೀರಾಗ (ರಾಗದ್ವೇಷಾದಿ ರಹಿತ)ವಾದುದು. (ನಿಸ್ಸಂಗ ಅಥವಾ ನಿರಭಿಮಾನವಾದುದು) ಆ ಪರಬ್ರಹ್ಮವೇ ಈ ಜಗದ್ರೂಪವಾಗಿರುವುದು.

೧೧. ಎಲೈ ಅನಘನಾದ ರಾಮ, ಈ ವಿಷಯವನ್ನು ಮುಂದೆ ಸಿದ್ಧಾಂತ ಕಾಲದಲ್ಲಿ ನಿರ್ವಾಣ ಪ್ರಕರಣದಲ್ಲಿ ಅಸಂಭಾವನೆಯನ್ನು ನಿರ್ಮೂಲಮಾಡಿದ ತರುವಾಯ ನಾನಾ ವಿಚಿತ್ರರೂಪಗಳಾದ ಯುಕ್ತಿಗಳನ್ನು ಪ್ರದರ್ಶಿಸಿ ಪುನಃ ಪುನಃ ಅನೇಕ ಸಲ ಬಹು ವಿಸ್ತಾರವಾಗಿಯೇ ಹೇಳಬೇಕಾಗಿರುವುದು.

೧೨. ಭ್ರಾಂತಿರೂಪವಾದ ಅಜ್ಞಾನವೂ (ತಪ್ಪು ತಿಳುವಳಿಕೆ) ಅತುಲವಾದ ತಮಸ್ಸೂ (ಅಸದೃಶವಾದ ಕತ್ತಲೆ ಅಂದರೆ ಜಗತ್ತಿಗೆ ಮೂಲವಾದ ಮಾಯೆಯು) ಇವೆರಡೂ ಪರಸ್ಪರ ಸಹಾಯದಿಂದ ಸಾವಿರಾರು ಭ್ರಾಂತಿಗಳೆಂಬ ಶಾಖೋಪಶಾಖೆಗಳನ್ನು ಬೆಳೆಯಿಸಿಕೊಂಡು ಸ್ಥಿರವಾಗಿ ಬಿಡುವುದು. ಇದನ್ನು ಭೇದಿಸುವುದಕ್ಕೂ ಅದರ ಸಾಧನಗಳಲ್ಲಿ ಪ್ರಯತ್ನವನ್ನು ಮಾಡುವುದಕ್ಕೂ ಕೂಡ ಈ ವಾಕ್ಯಪಂಚವನ್ನು ಬಿಟ್ಟುಬಿಟ್ಟರೆ ಇನ್ಯಾವದರಿಂದಲೂ ಶಕ್ಯವಿಲ್ಲ. ಅದುಕಾರಣ, ಈ ವಾಕ್ಯಪಂಚವು ಅತ್ಯವಶ್ಯಕವು.

ಅವಿದ್ಯಯೈವೋತ್ತಮಯಾ ಸ್ವಾತ್ಮನಾಶೋದ್ಯಮೇಚ್ಛಯಾ ।
ವಿದ್ಯಾ ಸಾ ಪ್ರಾರ್ಥ್ಯತೇ ರಾಮ ಸರ್ವದೋಷಾಪಹಾರಿಣೀ ॥ ೧೩ ॥

ಶಾಮ್ಯತಿ ಹ್ಯಸ್ತ್ರಮಸ್ತ್ರೇಣ ಮಲೇನ ಕ್ಷಾಲ್ಯತೇ ಮಲಃ ।
ಶಮಂ ವಿಷಂ ವಿಷೇಣ್ಯೈತಿ ರಿಪುಣಾ ಹನ್ಯತೇ ರಿಪುಃ । ॥ ೧೪ ॥

ಈದೃಶೀ ರಾಮ ಮಾಯೇಯಂ ಯಾ ಸ್ವನಾಶೇನ ಹರ್ಷದಾ ।
ನ ಲಕ್ಷ್ಯತೇ ಸ್ವಭಾವೋಽಸ್ಯಾಃ ಪ್ರೇಕ್ಷ್ಯಮಾಣೈವ ನಶ್ಯತಿ ॥ ೧೫ ॥

---

೧೩. ಉತ್ತಮ ಚರಿತಳೂ ಸಾಧ್ವೀಮಣಿಯೂ ಆದ ಒಬ್ಬ ಪತಿವ್ರತೆಯು ತನ್ನ ಪತಿಯು ಮೃತನಾದಾಗ ಅವನೊಡನೆ ಸಹಗಮನ ಮಾಡಲು ಇಚ್ಛಿಸಿ ತನ್ನ ದೇಹದ ನಾಶವನ್ನು ತಾನಾಗಿಯೇ ಬಯಸುವಳಲ್ಲವೆ! ಅದರಂತೆಯೇ ನಾನಾ ಪೂರ್ವಜನ್ಮಾಂತರಗಳಲ್ಲಿ ಸಂಚಿತವಾದ ಸುಕೃತಗಳಿಂದ ಸುಸಂಸ್ಕೃತ (ವಿಶುದ್ಧ)ವಾದ ಅಂತಃಕರಣಾಕಾರವಾಗಿ ಪರಿಣಮಿಸಿದ ಉತ್ತಮವಾದ ಅವಿದ್ಯೆಯು ತನ್ನ ನಾಶಕ್ಕಾಗಿ ತಾನೇ ಪ್ರಯತ್ನಿಸುವ ಇಚ್ಛೆಯಿಂದಲೇ ಸಕಲದೋಷ ಪರಿಹಾರಕವಾದ (ಆತ್ಮ ತತ್ತ್ವ ಜ್ಞಾನರೂಪ) ವಿದ್ಯೆಯನ್ನು ತಾನಾಗಿ ಪ್ರಾರ್ಥಿಸುವುದು.

[ಉಪದೇಶ ವಾಕ್ಯಗಳೂ ಅವುಗಳಿಂದ ಹುಟ್ಟುವ ವಿದ್ಯೆಯೂ ಕೇವಲ ಅವಿದ್ಯಾ ಕಾರ್ಯಗಳೇ ಆಗಿದ್ದರೂ ಅವಿದ್ಯಾ ವಿರೋಧಿಗಳಾಗಿ ಅವಿದ್ಯೆಯನ್ನು ಧ್ವಂಸಮಾಡಿಬಿಡುವುವು. ಮತ್ತು ಅವಿದ್ಯೆಯು ತನ್ನ ಕಾರ್ಯವಾದ ಉಪದೇಶ ವಾಕ್ಯಗಳಿಂದ ತನಗೆ ಪರಮ ವೈರಿಯಾದ ವಿದ್ಯೆಯನ್ನು ಪ್ರಾರ್ಥಿಸುವುದು. ಇವೆರಡೂ ಉಪಪನ್ನವೇ ಎಂದು ಈ ಶ್ಲೋಕದಿಂದ ಹೇಳಿದುದಾಯಿತು.]

೧೪. ಪ್ರಪಂಚದಲ್ಲಿ ವಿಚಾರಮಾಡಿನೋಡಿದರೆ ಒಂದು ಅಸ್ತ್ರವು ಮತ್ತೊಂದು ವಿರೋಧಿಯಾದ ಅಸ್ತ್ರದಿಂದ ಶಾಂತವಾಗುವುದು. (ಉದಾಹರಣೆ-ಆಗ್ನೇಯಾಸ್ತ್ರಕ್ಕೆ ವಾರುಣಾಸ್ತ್ರ ಬಲಾಹಕಾಸ್ತ್ರಕ್ಕೆ ವಾಯುವ್ಯಾಸ್ತ್ರ ಇತ್ಯಾದಿ.)ಒಂದು ಮಲ (ಕೊಳೆ)ವು ಇನ್ನೊಂದು ಮಲದಿಂದಲೇ ತೊಳೆಯಲ್ಪಡುವುದು. (ವಸ್ತ್ರದ ಮಾಲಿನ್ಯವು ಚೌಳು ಉಪ್ಪು ಎಂಬ ಮಲದಿಂದ ಕಳೆಯಲ್ಪಡುವುದು.) ಒಂದು ವಿಷವು ಮತ್ತೊಂದು ವಿಷದಿಂದ ನಿವೃತ್ತಿಯಾಗುವುದು. (ಶರೀರದಲ್ಲಿರುವ ರೋಗಮೂಲವಾದ ವಿಷವು ಔಷಧದಲ್ಲಿರುವ ರಸಾದಿ ವಿಷದಿಂದಲೇ ಪರಿಹಾರವಾಗುವುದು.) ಒಬ್ಬ ಶತ್ರುವು ಬೇರೊಬ್ಬ ಶತ್ರುವಿನಿಂದ ಕೊಲ್ಲಲ್ಪಡುವನು.

೧೫. ಅಯ್ಯಾ ರಾಮ, ಈ ಮಾಯೆಯೇ ಇಂತಹ ಸ್ವಭಾವವುಳ್ಳದ್ದು.

ವಿವೇಕಮಾಚ್ಛಾದಯತಿ ಜಗಂತಿ ಜನಯತ್ಯಲಂ ।
ನಚ ವಿಜ್ಞಾಯತೇ ಕೈಷಾ ಪಶ್ಯಾಶ್ಚರ್ಯಮಿದಂ ಜಗತ್ ॥ ೧೬ ॥

ಅಪ್ರೇಕ್ಷ್ಯಮಾಣಾ ಸ್ಫುರತಿ ಪ್ರೇಕ್ಷಿತಾ ತು ವಿನಶ್ಯತಿ ।
ಮಾಯೇಯಮಪರಿಜ್ಞಾಯಮಾನರೂಪೈವ ವಲ್ಗತಿ ॥ ೧೭ ॥

ಅಹೋ ನು ಖಲು ಚಿತ್ರೇಯಂ ಮಾಯಾ ಸಂಸಾರಬಂಧನೀ ।
ಅಸತ್ಯೇನಾತಿಸತ್ಯೇವ ಸ್ವಜ್ಞಾನಂ ವಿಹಿತಂ ತಯಾ ॥ ೧೮ ॥

ಇದು ತನ್ನ ನಾಶದಿಂದಲೇ ಇತರರಿಗೆ ಹರ್ಷಪ್ರದವಾದುದು. (ಈ ಮಾಯೆಯು ನಾಶವಾಗುವುದರ ಮೂಲಕವೇ ನಿತ್ಯನಿರತಿಶಯಾನಂದ ರೂಪ ಮೋಕ್ಷವು ಲಭಿಸುವುದು.) ಇದು ಅನಿರ್ವಚನೀಯವಾಗಿರುವ ಕಾರಣ ಇದರ ಸ್ವಭಾವವೇ ಸರಿಯಾಗಿ ನಿಯತವಾಗಿ ಗೊತ್ತಾಗುವುದಿಲ್ಲ. ಇದರ ಸ್ವರೂಪವನ್ನೂ ವಿವೇಕದಿಂದ ಪರೀಕ್ಷಿಸಿ ತತ್ತ್ವಜ್ಞಾನದಿಂದ ನೋಡಲ್ಪಡುತ್ತಿದ್ದ ಹಾಗೆಯೇ ಇದು ನಾಶವನ್ನು ಹೊಂದುವುದು.

೧೬. ಈ ಮಾಯೆಯು ವಿವೇಕವನ್ನೂ ಮುಚ್ಚಿಮರೆಸಿಬಿಡುವುದು. ಬೇಕಾದ ಹಾಗೆ ನಾನಾ ಜಗತ್ತುಗಳನ್ನು ಸೃಷ್ಟಿಮಾಡುವುದು. ಇದು ಯಾವುದು ಎಂಬು ವುದು ಕೂಡ ಗೊತ್ತೇ ಆಗುವುದಿಲ್ಲ. ರಾಮ, ಇಂತಹ ಆಶ್ಚರ್ಯಮಯವಾದ ಈ ಜಗತ್ತನ್ನು ನೋಡುವವನಾಗು.

೧೭. ಚೆನ್ನಾಗಿ ವಿಚಾರಮಾಡಿ ಪರೀಕ್ಷಿಸಿ ನೋಡದಿರುವಾಗ (ಅವಿಚಾರದಶೆ ಯಲ್ಲಿ) ಇದು ವಿಶೇಷವಾಗಿ ಸ್ಫುರಿಸಿ ವೃದ್ಧಿಹೊಂದುವುದು. ಸರಿಯಾಗಿ ವಿವೇಕ ವಿಮರ್ಶಾತ್ಮಕ ವಿಚಾರ ದೃಷ್ಟಿಯಿಂದ ನೋಡಿದಾಗಲಾದರೋ ಥಟ್ಟನೆ ನಿರಾಶ ಹೊಂದುವುದು. ಇದರ ಸ್ವರೂಪವು ಇಂತಹುದೆಂದು ಯಾರಿಗೂ ತಿಳಿಯದಂತೆಯೇ ಇದ್ದುಕೊಂಡು ಈ ಮಾಯೆಯು ನಾನಾ ಬಗೆಯ ವಿಲಾಸಗಳಿಂದ ಸ್ವೇಚ್ಛೆಯಾಗಿ ಕ್ರೀಡಿಸುತ್ತಿರುವುದು.

೧೮. ಸಂಸಾರಬಂಧವನ್ನು ಉಂಟುಮಾಡುವ ಈ ಮಾಯೆಯು ಅಹಹ! ಎಂತಹ ವಿಚಿತ್ರವಾದುದು!! ಇದು ಕೆಲವು ವೇಳೆ (ಅಜ್ಞದೃಷ್ಟಿಯಲ್ಲಿ) ಅತ್ಯಂತ ಸತ್ಯ ವಾಗಿರುವಂತೆಯೂ ಮತ್ತೆ ಕೆಲವು ಕಾಲದಲ್ಲಿ (ಪ್ರಾಜ್ಞದೃಷ್ಟಿಯಲ್ಲಿ) ಅಸತ್ಯವಾಗಿರು ವಂತೆಯೂ ಹೀಗೆ ಒಂದೊಂದು ಕಾಲದಲ್ಲಿ ಕೆಲಕೆಲವು ಜನರಿಗೆ ಒಂದೊಂದು ಬಗೆ ಯಲ್ಲಿ ನಾನಾರೂಪವಾಗಿ ಕಾಣುತ್ತ ತನ್ನ ವಿಷಯದಲ್ಲಿ ಭ್ರಾಂತಿಯನ್ನುಂಟುಮಾ ಡುತ್ತಾ ಸರ್ವಾನರ್ಥ ಮೂಲವಾಗಿರುವುದು.

ಅತ್ಯಭಿನ್ನಪದೇ ತಸ್ಮಿಂಸ್ತನ್ವಾನಾ ಭೇದಮಾತತಂ ।
ಸಂಸಾರಮಾಯಾ ಯೇನಾಸೌ ಪುರುಷೋತ್ತಮಃ ॥ ೧೯ ॥

ನಾಸ್ತ್ಯೇಷಾ ಪರಮಾರ್ಥೇ ನ ತ್ವೇವಂ ಭಾವನಯೋದ್ಧಯಾ ।
ಜ್ಞೋ ಭೂತ್ವಾ ಜ್ಞೇಯಸಂಪ್ರಾಪ್ತೋ ಜ್ಞಾಸ್ಯಸ್ಯಸ್ಯಾಸ್ತ್ವಮಾಶಯಂ ॥ ೨೦ ॥

(ಶ್ಲೋಕದಲ್ಲಿನ ಸ್ವಜ್ಞಾನಂ ವಿಹಿತಂ ಎನ್ನುವುದಕ್ಕೆ ಸು-ಅಜ್ಞಾನಂ ಎಂದರ್ಥ ಮಾಡಿದೆ. ಸ್ವ-ತನ್ನ ಜ್ಞಾನಂ-ಜ್ಞಾನವು ಎಂದು ಅಭಿಪ್ರಾಯಪಟ್ಟರೆ ತನ್ನ ವಿಷಯ ದಲ್ಲಿ ನಾನಾ ಬಗೆಯಾದ ಜ್ಞಾನವನ್ನು (ಸತ್ಯ ಮತ್ತು ಅಸತ್ಯ) ಹುಟ್ಟಿಸುವುದು ಎಂದರ್ಥ). (ಹೀಗೆ ಈ ಮಾಯೆಯು ಅಸಂಭಾವಿತಗಳಾದ ಅನಂತ ಕಾರ್ಯ ಗಳನ್ನು ನೋಡಿದರೂ ಕೂಡ ವಿರೋಧವು ಸಂಭವಿಸುವುದಿಲ್ಲ.) ಎಂದು ತಾತ್ಪರ್ಯ.

೧೯. ಯಾವ ಕಾರಣದಿಂದ ಅಕ್ಷರವೆಂಬ ಹೆಸರುಳ್ಳ ಈ ಸಂಸಾರ ಮಾಯೆಯು ಸ್ವಲ್ಪಮಾತ್ರವೂ ಭೇದವಿಲ್ಲದ ಪರಮಪದವಾದ ಪರಮಾತ್ಮನಲ್ಲಿ ಸರ್ವತಃ ವಿಸ್ತೃತ ವಾದ ಭೇದವನ್ನು ಉಂಟುಮಾಡುತ್ತಿರುವುದೋ ಆ ಕಾರಣದಿಂದ ಈ ಪರಮಾತ್ಮನು ಪುರುಷೋತ್ತಮನೆನ್ನಿಸುವನು. (ನಿರ್ಗುಣನಾಗಿಯೂ ನಿರ್ಲೇಪನಾಗಿಯೂ ನಿಸ್ಸಂಗ ನಾಗಿಯೂ ನಿರವಯವನಾಗಿಯೂ ಇರುವ ಪರಮಾತ್ಮನು ಮಾಯಾ ಸಾನ್ನಿಧ್ಯದಿಂದ ಕ್ಷರ ಅಕ್ಷರ ರೂಪಗಳನ್ನು ಪಡೆದು ಕ್ಷರಾತೀತನಾಗಿಯೂ ಅಕ್ಷರಕ್ಕಿಂತ ಉತ್ತಮ ನಾಗಿಯೂ ಇರುವ ಕಾರಣ ಪುರುಷೋತ್ತಮ ಪದವಾಚ್ಯನಾಗುವನು.)

[ದ್ವಾವಿಮೌ ಪುರುಷಾಲೋಕೇ ಕ್ಷರಶ್ಚಾಕ್ಷರ ಏವಚ । ಕ್ಷರಸ್ಸರ್ವಾಣಿ ಭೂತಾ ನಾಕೂಟಸ್ಥಃ ಅಕ್ಷರ ಉಚ್ಯತೇ ॥ ಗೀತಾ ೧೫-೧೬. ಸಮಸ್ತವಿಕಾರಜಾತವೂ ಕ್ಷರವು. ಅಕ್ಷರವಾದರೋ ಅನೇಕ ಮಾಯಾ ವಂಚನಾದಿ ಪ್ರಕಾರದಿಂದ ಇರುವ ಕೂಟಸ್ಥವು (ಮಾಯಾಶಕ್ತಿಯು.) ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಯೋಲೋಕತ್ರಯ ಮಾವಿಶ್ಯಬಿ ಭರ್ತ್ಯವ್ಯಯ ಈಶ್ವರಃ ॥ ಗೀತಾ ೧೫-೧೭. ಯಸ್ಮಾತ್ ಕ್ಷರಮತೀತೋಽಹಂ ಅಕ್ಷರಾದಪಿಚೋತ್ತಮಃ । ಅತೋಽಸ್ಮಿವೇದೇ ಲೋಕೇ ಚ ಪ್ರಥಿತಃ ಪುರುಷೋತ್ತಮಃ ॥ ಗೀತಾ ೧೫-೧೮. ಅರ್ಥವು ಸುಲಭವಾಗಿದೆ.)

೨೦. ಪರಮಾರ್ಥ ದೃಷ್ಟಿಯಲ್ಲಿ ವಸ್ತುವೃತ್ತಿಯಿಂದ ಈ ಮಾಯೆಯೆಂಬುವೇ ಎಂದಿಗೂ ಇಲ್ಲವು. ಎಂಬೀ ಭಾವನೆಯನ್ನು ಗುರುಶಾಸ್ತ್ರೋಪದೇಶ ತರ್ಕಸ್ವಾನು

ಯಾವತ್ತು ನ ಪ್ರಬುದ್ಧಸ್ತ್ವಂ ತಾವನ್ಮದ್ವಚಸ್ಯೈವ ತೇ ।
ನಿಶ್ಚಯೋ ಭವತೂದ್ಭಾವೋ ನಾಸ್ತ್ಯವಿದ್ಯೇತಿ ನಿಶ್ಚಲಃ ॥ ೨೧ ॥

ಯದಿದಂ ದೃಶ್ಯತಾಂ ಯಾತಂ ಮಾನಸಂ ಮನನಂ ಮಹತ್ ।
ಅಸನ್ಮಾತ್ರಮಿದಂ ಯಸ್ಮಾನ್ಮನೋಮಾತ್ರವಿಜೃಂಭಿತಂ ।
ಸತ್ತದ್ಬ್ರಹ್ಮೇತಿ ಯಸ್ಯಾಂತರ್ನಿಶ್ಚಯಃ ಸೋಽಪಿ ಮೋಕ್ಷಭಾಕ್ ॥ ೨೨ ॥

ಭವಾಭ್ಯಾಸಾದಿಗಳಿಂದ (ಉದ್ದೀಪನಗೊಳಿಸಿ) ಬಲಪಡಿಸಿಕೊಂಡು ನೀನು ತತ್ತ್ವಜ್ಞನಾಗುವೆ ಬಳಿಕ, (ವಿಸ್ಮೃತವಾಗಿ ತನ್ನ ಕೊರಳಲ್ಲಿಯೇ ಇರುವ ಆಭರಣವನ್ನು ಪುನಃ ಸಂಪಾದಿಸಿದಂತೆ) ವಾಸ್ತವವಾದ ಸ್ವಾತ್ಮಸ್ವರೂಪಜ್ಞಾನವನ್ನು ಪಡೆದವನಾಗಿ ಆಗ ಈ ನನ್ನ ಉಪದೇಶವಾಕ್ಯಗಳ ಆಶಯವನ್ನು ನಿಸ್ಸಂದೇಹವಾಗಿ ತಿಳಿಯುವೆ.

೨೧. ಎಲ್ಲಿಯವರೆವಿಗೆ ನೀನು ಪ್ರಬುದ್ಧನಾಗುವುದಿಲ್ಲವೋ ಅಲ್ಲಿಯವರೆವಿಗೂ ನಿನಗೆ ನನ್ನ ಮಾತಿನಲ್ಲಿ ಸಂಪೂರ್ಣವಾದ ನಂಬಿಕೆಯಿಂದಲೇ (ಆಪ್ತವಾಕ್ಯವೆಂಬ ಶ್ರದ್ಧೆಯಿಂದಲೇ) "ಅವಿದ್ಯೆಯು ಇಲ್ಲವೇ ಇಲ್ಲ"ವೆಂದು ನಿಶ್ಚಲವಾದ ನಿಶ್ಚಯವು ಪ್ರಬಲವಾಗಿ ನಿಲ್ಲಲಿ.

೨೨. (ಈ ನಿಶ್ಚಯವು ನಿಶ್ಚಲವಾಗಿ ಇಲ್ಲುವುದಕ್ಕೆ ಉಪಾಯವೇನೆಂದರೆ) ಅತೀತವೂ (ಹಿಂದೆ ಕಳೆದುಹೋದುದೂ) ಅನಾಗತವೂ (ಮುಂದೆ ಬರತಕ್ಕವುಗಳೂ) ಆದ ಅನೇಕಾರ್ಥಗಳನ್ನು ಮನಸ್ಸಿನಲ್ಲಿ ಅನುಸಂಧಾನ ಮಾಡುವುದಕ್ಕೆ ಮನನವೆಂದು ಹೆಸರು. ಇದು ಮಾನಸವು. (ಅಂದರೆ ಮನೋವೃತ್ತಿರೂಪವು.) ಇದು ದೃಶ್ಯಭಾವವನ್ನು ಹೊಂದಿದುದು. (ಅಂದರೆ ಸಾಕ್ಷಿಪ್ರತ್ಯಯ ವೇದ್ಯವು.) ಸರ್ವವ್ಯವಹಾರಗಳಿಗೂ ಇದು ಬೀಜವಾಗಿರುವುದರಿಂದ ಮಹತ್ ಆದುದು. ಇಂತಹ ಈ ಮನನವೆಲ್ಲವೂ ಕೇವಲ ಮನೋಮಾತ್ರದಿಂದಲೇ ವಿಜೃಂಭಿತವಾಗಿರುವ ಕಾರಣ ಅತ್ಯಂತಾ ಸತ್ಯವಾದುದೇ ಎಂದೂ ಆ ಪರಬ್ರಹ್ಮವೊಂದೇ ಪರಮಾರ್ಥ ಸದ್ವಸ್ತುವೆಂದೂ ಯಾವನಿಗೆ ಅಂತರಂಗದಲ್ಲಿ ನಿಶ್ಚಯವು ನಿಶ್ಚಲವಾಗಿ ಉಂಟಾಗುವುದೋ ಅವನು ಮೋಕ್ಷಭಾಗಿಯಾಗುವನು. ಮನನವು ನಿರಾಸವಾದ ಕೂಡಲೆ ಮನಸ್ಸು ತಾನಾಗಿಯೇ ನಿರಿಂಧನಾಗ್ನಿಯಂತೆ ಶಾಂತವಾಗುವುದು. ಆಗ ಸದ್ರೂಪವಾದ ಬ್ರಹ್ಮವು ಮಾತ್ರವೇ ಪರಿಶಿಷ್ಟವಾಗುವುದು. ಆ ಪರಬ್ರಹ್ಮದಲ್ಲಿ ಪೂರ್ವೋಕ್ತ ನಿಶ್ಚಯವು ನಿಶ್ಚಲವಾಗುವುದರಿಂದ ಪರಮಪುರುಷಾರ್ಥಲಾಭವು ಸಿದ್ಧಿಸುವುದು ಎಂದು ಅಭಿಪ್ರಾಯ.

ಚಲಾಚಲಾಕೃತಿರ್ಯಾ ಯಾ ದೃಷ್ಟಿರಾಬದ್ಧಭಾವನಾ ।
ಸಾ ಸಮಗ್ರಜಗದ್ಭೂತಖಗಬಂಧನವಾಗುರಾ ॥ ೨೩ ॥

ಯಃ ಸ್ವಪ್ನಭೂಮಿವದ್ಭ್ರಾಂತಮಸತ್ಸದ್ವೈಕನಿಶ್ಚಯಃ ।
ಜಗತ್ಪಶ್ಯತ್ಯಸಕ್ತಾತ್ಮಾ ನ ಸ ದುಃಖೇ ನಿಮಜ್ಜತಿ ॥ ೨೪ ॥

ಯಸ್ಯೈತಾ ಸ್ವಸ್ವರೂಪಾಸು ಭಾವನಾ ಸ್ವಾತ್ಮಭಾವನಾ ।
ಅಸ್ವರೂಪಸ್ಯ ತಸ್ಯಾಪಿ ಸಾ ಹ್ಯವಿದ್ಯೈವ ವಿದ್ಯತೇ ॥ ೨೫ ॥

ವಿಕಾರಿತಾದಯೋ ದೋಷಾ ನ ಕೇಚನ ಮಹಾತ್ಮನಿ ।
ಪರಮಾತ್ಮನಿ ವಿದ್ಯಂತೇ ಪಯಸೀವೇಹ ಪಾಂಸವಃ ॥ ೨೬ ॥

---

೨೩. ಕೆಲವು ವೇಳೆ ಚಂಚಲವಾಗಿಯೂ ಕೆಲವುವೇಳೆ ಸ್ಥಿರವಾಗಿಯೂ ಇರುವ ಆಕಾರವುಳ್ಳ ಅಂದರೆ ನಿಶ್ಚಲವಾದ ನಿಶ್ಚಯವಿಲ್ಲದಿರುವ ಬಾಹ್ಯಾರ್ಥಗಳಲ್ಲಿ ದೃಢವಾಗಿಡಲ್ಪಟ್ಟ ಭಾವನೆಯುಳ್ಳ ಯಾವ ಯಾವ ಬಾಹ್ಯಾರ್ಥಮನನ ದೃಷ್ಟಿಗಳಿವೆಯೋ ಅವೆಲ್ಲವೂ ಸಕಲ ಜಗತ್ತುಗಳಲ್ಲಿ ಇರುವ ಪ್ರಾಣಿಗಳೆಂಬ ಪಕ್ಷಿಗಳನ್ನು ಬಂಧಿಸಲು ಯೋಗ್ಯವಾದ ಬಲೆಗಳಾಗಿರುವುವು.

೨೪. ಅಸತ್ ಎಂದೂ (ಅನಾಗತ ಮತ್ತು ಅತೀತ-ಮುಂದೆ ಬರುವುದು ಮತ್ತು ಹಿಂದೆ ಕಳೆದುಹೋದುದು) ಸತ್ ಎಂದೂ (ವರ್ತಮಾನ) ದ್ವಿರೂಪವಾಗಿರುವ ಈ ಮನನ ವಿಷಯದಲ್ಲಿ ಇದು (ಸತ್-ಏವ) ಸತ್ಯವಾದುದೇ ಎಂದಾಗಲೀ ಅಥವಾ (ಅಸತ್-ಏವ) ಅಸತ್ತೇ ಎಂದಾಗಲಿ ಏಕರೂಪವಾದ ದೃಢನಿಶ್ಚಯವುಳ್ಳ ಯಾವ ಅಧಿಕಾರಿಯು ಈ ಜಗತ್ತನ್ನು ಸ್ವಪ್ನಭೂಮಿಯಂತೆ ಕೇವಲ ಭ್ರಾಂತಿಮಾತ್ರವೆಂಬುದಾಗಿಯೇ ಅನಾಸಕ್ತನಾಗಿ ಕಾಣುವನೋ ಅವನು ಎಂದಿಗೂ ಈ ಸಾಂಸಾರಿಕ ದುಃಖದಲ್ಲಿ ಮುಳುಗದೆ ಸದಾ ಸುಖವಾಗಿರುವನು.

೨೫. ಸ್ವಭಾವತಃ ಮಿಥ್ಯಾಭೂತಗಳಾದ (ಅಸತ್ಯ) ಈ ದೇಹೇಂದ್ರಿಯಾದಿ ದ್ವೈತಭಾವನೆಗಳಲ್ಲಿ ಯಾವ ಅಧಿಕಾರಿಗೆ ಆತ್ಮಭಾವನೆಯು(ನಾನು ಎಂಬ ಬುದ್ಧಿಯು) ಉಂಟಾಗುವುದೋ ಅಂತಹ ಸ್ವರೂಪಜ್ಞಾನಶೂನ್ಯನಾದ ಅವಿವೇಕಿಗೆ ಎಂದೆಂದಿಗೂ ಸಕಲಾನರ್ಥಕಾರಿಯಾದ ಅವಿದ್ಯೆಯು ಸ್ಥಿರವಾಗಿಯೇ ಇದ್ದುಬಿಡುವುದು. [ಅವನು ಅವಿದ್ಯಾಮಯವಾದ ಸಾಂಸಾರಿಕ ದುಃಖಗಳಲ್ಲಿ ಮಗ್ನವಾಗುವನು ಎಂದರ್ಥ.]

೨೬. ಸ್ವತಃ ನಿರ್ಮಲವಾದ ಜಲದಲ್ಲಿ ಧೂಳು ಮುಂತಾದ ಕಶ್ಮಲಗಳು ಇಲ್ಲ

ಭಾವನಾಶಬ್ದಶಬ್ದಾರ್ಥರಂಜನೇಯಂ ಜಗದ್ಗತಾ ।
ವ್ಯವಹಾರಾರ್ಥಮುತ್ಪನ್ನಾ ವ್ಯತಿರಿಕ್ತಾ ಚ ಸಾತ್ಮನಃ ॥ ೨೭ ॥

ಅನೇನ ವ್ಯವಹಾರೇಣ ವಿನೈತಾಃ ಶಾಸ್ತ್ರದೃಷ್ಟಯಃ ।
ಸಂಸ್ಥಿತಿಂ ನಾಧಿಗಚ್ಛಂತಿ ಪಟಾ ಇವ ವಿತಂತವಃ ॥ ೨೮ ॥

ಉಹ್ಯಮಾನೋ ಹ್ಯವಿದ್ಯಾಯಾಮಾತ್ಮಾ ನೇಹೋಪಲಕ್ಷ್ಯತೇ ।
ಆತ್ಮಜ್ಞಾನಾದೃತೆ ತಚ್ಚ ಶಾಸ್ತ್ರಾರ್ಥಾತ್ಸಮವಾಪ್ಯತೇ ॥ ೨೯ ॥

ದಂತೆ ಮಹಾತ್ಮನಾದ ಪರಮಾತ್ಮನಲ್ಲಿ ಜನನಾದಿಷಡ್ಭಾವ ವಿಚಾರಗಳು ಮುಂತಾದ ಯಾವ ದೋಷಗಳೂ ಸರ್ವಥಾ ಇಲ್ಲವು.

೨೭. ಕೆಂಪು ದಾಸವಾಣದ ಹೂವು[ಜಪಾಕುಸುಮ]ಮುಂತಾದ ಕೆಂಪುವಸ್ತುಗಳ ಸನ್ನಿಧಾನಮಾತ್ರದಿಂದ ಆ ಕಾಲದಲ್ಲಿ ಮಾತ್ರವೇ ಸ್ವಚ್ಛವಾದ ಸ್ಫಟಿಕ ಶಿಲೆಯೊಳಗೆ ಕೆಂಪು ಛಾಯೆಯು ಸಂಸಕ್ತವಾಗಿರುವಂತೆ ಶಬ್ದಗಳಲ್ಲಿಯೂ [ನಾಮಗಳಲ್ಲಿ] ಶಬ್ದಾರ್ಥಗಳಲ್ಲಿಯೂ [ರೂಪಗಳಲ್ಲಿ] ರಂಜನೆಯು [ತಾತ್ಕಾಲಿಕವಾದ ಅನುಷಂಗವು] ಯಾವುದೋ ಅದೇ ಜಗದ್ಗತವಾದ ಭಾವನೆಯು. ಇದು ಕೇವಲ ಶಾಸ್ತ್ರೀಯ ವ್ಯವಹಾರ ಸಿದ್ಧಿಗೋಸ್ಕರ ಉತ್ಪನ್ನವಾಗಿರುವುದು. ಇದು ಆತ್ಮವ್ಯತಿರಿಕ್ತವಾದುದಲ್ಲವು.

೨೮. ಈ ವ್ಯವಹಾರವನ್ನು ಇಟ್ಟುಕೊಳ್ಳದೆ ಹೋದರೆ ತಂತುಗಳಿಲ್ಲದ ವಸ್ತ್ರಗಳಂತೆ ಈ ಶಾಸ್ತ್ರೋಪದೇಶಾದಿ ದೃಷ್ಟಿಗಳು ಯಾವುವೂ ಸ್ಥಿರವಾಗಿ ಸ್ಥಿತಿಯನ್ನು ಪಡೆಯುವುದಿಲ್ಲ.

೨೯. ಅವಿದ್ಯೆಯೆಂಬ ನದೀ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವ ಆತ್ಮವು ಆತ್ಮ ತತ್ತ್ವಜ್ಞಾನವಿಲ್ಲದಿದ್ದರೆ ಎಂದೆಂದಿಗೂ ಅನುಭವಗೋಚರನಾಗುವುದೇ ಇಲ್ಲ. ಆತ್ಮಜ್ಞಾನವಾದರೋ ಶಾಸ್ತ್ರಾರ್ಥವಿಚಾರಾಭ್ಯಾಸದಿಂದ ಲಭ್ಯವಾಗಿರುವುದು. [ಈ ಕಾರಣದಿಂದಲೂ ಶಾಸ್ತ್ರೋಪದೇಶ ಸಿದ್ಧನಾಗಿ ಈ ವ್ಯವಹಾರಗಳೆಲ್ಲವೂ ಅತ್ಯಾವಶ್ಯಕ.]

ಅವಿದ್ಯಾಸರಿತಃ ಪಾರಮಾತ್ಮಲಾಭಾದೃತೇ ಕಿಲ ।
ರಾಮ ನಾಸಾದ್ಯತೇ ತದ್ಧಿ ಪದಮಕ್ಷಯಮುಚ್ಯತೇ ॥ ೩೦ ॥

ಯತಃ ಕುತಶ್ಚಿಜ್ಜಾತೇಯಮವಿದ್ಯಾ ಮಲದಾಯಿನೀ ।
ನೂನಂ ಸ್ಥಿತಿಮುಪಾಯಾತಾ ಸಮಾಸಾದ್ಯ ಪದಂ ಸ್ಥಿತಾ ॥ ೩೧ ॥

ಕುತೋ ಜಾತೇಯಮಿತಿ ತೇ ರಾಮ ಮಾಸ್ತು ವಿಚಾರಣಾ ।
ಇಮಾಂ ಕಥಮಹಂ ಹನ್ಮೀತ್ಯೇಷಾ ತೇಽಸ್ತು ವಿಚಾರಣಾ ॥ ೩೨ ॥

ಅಸ್ತಂ ಗತಾಯಾಂ ಕ್ಷೀಣಾಯಾಮಸ್ಯಾಂ ಜ್ಞಾಸ್ಯಸಿ ರಾಘವ ।
ಯತ ಏಷಾ ಯಥಾ ಚೈಷಾ ಯಥಾ ನಷ್ಟೇತ್ಯಖಂಡಿತಂ ॥ ೩೩ ॥

---

೩೦. ರಾಮ, ಆತ್ಮಜ್ಞಾನಲಾಭವಾಗದಿದ್ದರೆ ಅವಿದ್ಯೆಯೆಂಬ ನದಿಯು ಆಚೆಯ ದಡವನ್ನು [ಪಾರವನ್ನು] ಹೋಗಿ ಸೇರಲು ಶಕ್ಯವಲ್ಲವು. ಈ ಆತ್ಮಜ್ಞಾನವೇ ಅನಶ್ವರ [ಅಕ್ಷಯವಾದ] ಪರಮಪದವೆಂದು ಶಾಸ್ತ್ರಜ್ಞರಿಂದ ಹೇಳಲ್ಪಡುತ್ತಲಿರುವುದು.

೩೧. ಕೇವಲ ಭ್ರಾಂತಿಮೋಹಾದಿ, ನಾನಾಮಲಪ್ರದವಾದ ಈ ಅವಿದ್ಯೆಯು ಹೇಗೆ ಎಲ್ಲಿಂದ ಉದ್ಭವಿಸಿತೆಂದು ಗೊತ್ತುಮಾಡುವುದೇ ಅಶಕ್ಯವು. ಆದರೆ ಇದು ಹೇಗೋ ಯಾವುದೋ ಒಂದು ಕಾರಣದಿಂದ ಉದ್ಭವಿಸಿ ಪರಮಪದವಾದ ಪರಮಾತ್ಮನಲ್ಲಿ ಸೇರಿಕೊಂಡು [ಆಶ್ರಯಿಸಿಕೊಂಡು] ನಿಜವಾಗಿಯೂ ಸ್ಥಿರವಾಗಿ ನೆಲೆಗೊಂಡು ಇರುವುದು.

೩೨. ಅಯ್ಯ ರಾಮ, ಅದುಕಾರಣ, ಈಗ ನೀನು "ಈ ಅವಿದ್ಯೆಯು ಎಲ್ಲಿಂದ ಹೇಗೆ ಬಂದಿತು" ಎಂದು ವ್ಯರ್ಥವಾಗಿ ವಿಚಾರಮಾಡುವುದನ್ನು ಬಿಟ್ಟು "ಈ ಅನರ್ಥಮಯಿಯಾದ ಅವಿದ್ಯೆಯನ್ನು ನಾನು ಹೇಗೆ ಸಂಹರಿಸಲಿ? (ಇದರ ಸಂಹಾರೋಪಾಯವಾವುದು'' ಎಂದು ಸರ್ವದಾ ಚೆನ್ನಾಗಿ ವಿಚಾರಮಾಡುವವನಾಗು.

೩೩. ಅಯ್ಯ ರಾಘವ, ನಿನ್ನ ಶಾಸ್ತ್ರಾರ್ಥ ವಿಚಾರಾಭ್ಯಾಸವಶದಿಂದ ಈ ಅವಿದ್ಯೆಯು ಕ್ರಮವಾಗಿ ಕ್ಷಯಿಸುತ್ತಾ ಬಂದು ಕೊನೆಗೆ ಸಂಪೂರ್ಣವಾಗಿ ಅಸ್ತಂಗತವಾದ ಬಳಿಕ ಇದು ಯಾವ ಕಾರಣದಿಂದ ಉದಯಿಸಿತ್ತು? ಹೇಗೆ ಬಂದು ಇದ್ದುಕೊಂಡಿತ್ತು? ಇದು ಹೇಗೆ ಯಾವುದರಿಂದ ನಷ್ಟವಾಯಿತು? ಇತ್ಯಾದಿ ವಿಚಾರಗಳನ್ನೆಲ್ಲ ನೀನೇ ಸಂಪೂರ್ಣವಾಗಿ ತಿಳಿದುಕೊಳ್ಳುವೆ.

ವಸ್ತುತಃ ಕಿಲ ನಾಸ್ತ್ಯೇಷಾ ವಿಭಾತ್ಯೇಷಾ ನ ವೀಕ್ಷಿತಾ ।
ಅಸತೋ ಭ್ರಾಂತತಾಂ ಸತ್ಯರೂಪಾಂ ಜಾನಾತು ಕಃ ಕುತಃ　　|| ೩೪ ||

ಜಾತೇಯಂ ಪ್ರೌಢಿಮಾಪನ್ನಾ ದೋಷಾಯೈವಾತತಾಕೃತಿಃ ।
ಬಲಾತ್ಪ್ರಣಾಶಯ ತ್ವೇನಾಂ ಪರಿಜ್ಞಾಸ್ಯಸಿ ವೈ ತತಃ　　|| ೩೫ ||

ಅಪಿ ಶೂರಾ ಅತಿಪ್ರಾಜ್ಞಾಸ್ತೇ ನ ಸಂತಿ ಜಗತ್ತ್ರಯೇ ।
ಅವಿದ್ಯಯಾ ಯೇ ಪುರುಷಾ ನ ನಾಮ ವಿವಶೀಕೃತಾಃ　　|| ೩೬ ||

---

೩೪. ವಾಸ್ತವವಾದ ಸ್ಥಿತಿಯಲ್ಲಿಯಾದರೋ ಈ ಮಾಯೆಯೆಂಬುದು ಇಲ್ಲವೇ ಇಲ್ಲ. ಅವಿಚಾರ ದೆಸೆಯಲ್ಲಿ ಈಕ್ಷಿಸಲ್ಪಡದಿರುವಾಗ ಮಾತ್ರವೇ ಇದು ಸ್ಫುರಿಸುತ್ತಿರುವುದು. (ವಿಚಾರ ಮಾಡಿ ಇದರ ಯೋಗ್ಯತೆಯನ್ನು (ಸ್ವರೂಪವನ್ನೂ ಸ್ವಭಾವವನ್ನೂ ಕಂಡುಹಿಡಿದಾಗಲೇ ಇದು ಇಲ್ಲವೇ ಇಲ್ಲವೆಂದು ದೃಢವಾಗಿ ಗೊತ್ತಾಗುವುದು.) ಅಸದ್ವಸ್ತುವಿನ ಭ್ರಾಂತಿ ಕಲ್ಪಿತವಾದ ರೂಪವನ್ನು ಯಾವನು ಯಾವ ಕಾರಣದಿಂದ ಹೇಗೆ ತಾನೇ ಸತ್ಯರೂಪವನ್ನಾಗಿ ತಿಳಿಯಬಹುದು ? [ಯಾ, ಮಾ, ಸಾ, ಮಾಯಾ ನವಿದ್ಯತೆ ಇತಿ ಅವಿದ್ಯಾ-ಯಾವುದು ಇಲ್ಲವೇ ಇಲ್ಲವೋ ಅದು ಮಾಯೆ ಅವಿದ್ಯೆ.]

೩೫. ಈ ಅವಿದ್ಯೆಯು ಉದಯವನ್ನು ಹೊಂದಿ ಪ್ರೌಢದಶೆಯನ್ನೂ ಪಡೆದು ಬಹು ವಿಸ್ತಾರವಾಗಿ ಸರ್ವತ್ರ ಹರಡಿಬಿಟ್ಟ ಬಳಿಕ, ಇದು ಕೇವಲ ದೋಷಗಳಿಗೇ ಕಾರಣವಾಗುವುದು. ಬಲಾತ್ಕಾರವಾಗಿ ವಿಶೇಷ ಪ್ರಯತ್ನಗಳಿಂದ ನೀನು ಈ ಮಾಯೆಯನ್ನೂ ಸಂಪೂರ್ಣವಾಗಿ ನಾಶಗೊಳಿಸಿದರೆ ಆಗ ಇದರ ಸ್ವರೂಪವನ್ನೂ ಚೆನ್ನಾಗಿಯೇ ತಿಳಿದುಕೊಳ್ಳುವೆ.

೩೬. ರಣಧೀರರಾದ ಎಂತಹ ಮಹಾ ಶೂರರೇ ಆಗಿದ್ದರೂ ಸಕಲ ಶಾಸ್ತ್ರ ಪ್ರವೀಣರಾದ ಎಂತಹ ವಿದ್ವಾಂಸರೇ ಆಗಿದ್ದರೂ ಈ ಅವಿದ್ಯೆಗೆ ಒಳಗಾಗಿ ಮೋಹ ಪರವಶರಾಗದೇ ಇರತಕ್ಕಂತಹ ಪುರುಷ ಧೌರೇಯರು ಈ ಮೂರು ಲೋಕಗಳಲ್ಲಿ ಎಷ್ಟು ಹುಡುಕಿದರೂ ಇಲ್ಲವೇ ಇಲ್ಲವೆಂದು ತಿಳಿ.

ತದಸ್ಯಾ ರೋಗಶೀಲಾಯಾಃ ಯತ್ನಂ ಕುರು ವಿನಾಶನೇ ।
ಯಥೈಷಾ ಜನ್ಮದುಃಖೇಷು ನ ಭೂಯಸ್ತ್ವಾಂ ನಿಯೋಕ್ಷ್ಯತಿ ॥ ೩೭ ॥

ಸರ್ವಾಪದಾಮೇಕಸಖೀಮಜ್ಞಾನತರುಮಂಜರೀಂ ।
ಅನರ್ಥ ಸಾರ್ಥಜನನೀಮವಿದ್ಯಾಮಲಮುದ್ಧರ ॥ ೩೮ ॥

ಭಯವಿಷಾದದುರಾಧಿವಿಪತ್ಪ್ರದಾಂ
ಹೃದಯಮೋಹಮಹಾಪಟಲಾಂಕುರಾಂ ।
ಭೃಶಮಪಾಸ್ಯ ಕುದೃಷ್ಟಿಮಿಮಾಂ ಬಲಾ-
ದ್ಭವ ಭವಾರ್ಣವಪಾರಮುಪಾಗತಃ ॥ ೩೯ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಅವಿದ್ಯಾಕಥನಂ" ನಾಮ ಏಕಚತ್ವಾರಿಂಶಃ ಸರ್ಗಃ

---

೩೭. ಅದುಕಾರಣ ಅಯ್ಯ ರಾಮ, ಮಾನಸಿಕವೂ ಶಾರೀರಕವೂ ಆದ ನಾನಾ ರೋಗಗಳನ್ನು ಕೊಡತಕ್ಕ ಸ್ವಭಾವವುಳ್ಳ ಈ ಅವಿದ್ಯೆಯು (ಮಾಯೆಯು) ಪುನಃ ನಿನ್ನನ್ನು ಜನನಮರಣ ಪ್ರವಾಹರೂಪವಾದ ಸಾಂಸಾರಿಕ ದುಃಖ ಪರಂಪರೆಯಲ್ಲಿ ಕೆಡವದೆ ಇರುವಂತೆ ಇದನ್ನು ಸಂಪೂರ್ಣವಾಗಿ ನಾಶಗೊಳಿಸುವುದಕ್ಕೆ ಸಾಕಷ್ಟು ಪ್ರಯತ್ನವನ್ನು ಜಾಗರೂಕನಾಗಿ ಈಗಲೇ ಮಾಡುವವನಾಗು.

೩೮. ರಾಮ ಸಕಲ ಆಪತ್ತುಗಳಿಗೂ ಪ್ರಧಾನ ಸಖಿಯಾಗಿಯೂ ಅಜ್ಞಾನ (ಭ್ರಾಂತಿ) ವೆಂಬ ಒಂದು ಮಹಾ ವೃಕ್ಷವನ್ನೂ ಆಶ್ರಯಿಸಿರುವ ಲತಾ ಮಂಜರಿಯಾಗಿಯೂ ಸಕಲಾನರ್ಥ ಸಮುದಾಯಗಳಿಗೆ ಜನನಿಯಾಗಿಯೂ ಇರುವ ಈ ಅವಿದ್ಯೆಯನ್ನೂ ನೀನು ಸಂಪೂರ್ಣವಾಗಿ ಕಿತ್ತುಹಾಕಿ ಬಹು ದೂರಕ್ಕೆ ಎಸೆದುಬಿಡುವವನಾಗು.

೩೯. ರಾಮ, ಭಯ ವಿಷಾದ (ವ್ಯಸನ) ದುಷ್ಟವಾದ ಮನೋವ್ಯಥೆಗಳು ಇವೇ ಮುಂತಾದ ವಿಪತ್ತುಗಳನ್ನು ಕೊಡತಕ್ಕುದಾಗಿಯೂ, ಸಕಲ ಪ್ರಾಣಿಗಳ ಹೃದಯ

ದಲ್ಲಿರುವ ಮಹಾ ಮೋಹ ಸಮುದಾಯಕ್ಕೆ ಅಂಕುರ (ಮೊಳಕೆ) ಪ್ರಾಯವಾಗಿಯೂ ಇರುವ ಈ ಅವಿದ್ಯೆಯೆಂಬ ನಿನ್ನ ಕುತ್ಸಿತವಾದ ದೃಷ್ಟಿಯನ್ನೂ ಬಲಾತ್ಕಾರವಾಗಿ ಬಹು ಪ್ರಯತ್ನದಿಂದ ಸಂಪೂರ್ಣವಾಗಿ ತೊಲಗಿಸಿಕೊಟ್ಟು ನೀನು ಸಂಸಾರವೆಂಬ ಸಾಗರದ ಪಾರಂಗತನಾಗಿ ಸ್ವಸ್ಥನಾಗಿರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ಅವಿದ್ಯಾಕಥನ" ಎಂಬ ನಾಲ್ವತ್ತೊಂದನೆಯ ಸರ್ಗವು.

ದ್ವಿಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಕುಪಿತಸ್ಯಾಸತೋಽಪ್ಯಸ್ಯ ಪ್ರೇಕ್ಷಾಮಾತ್ರವಿನಾಶಿನಃ ।
ಅವಿದ್ಯಾವಿತತವ್ಯಾಧೇರೌಷಧಂ ಶೃಣು ರಾಘವ ॥ ೧ ॥

ಯಾಂ ತಾಂ ಕಥಯಿತುಂ ಜಾತಿಂ ರಾಮ ರಾಜಸಸಾತ್ವಿಕೀಂ ।
ಮನೋವೀರ್ಯವಿಚಾರಾರ್ಥಂ ಪ್ರಸ್ತುತೋಽಸ್ಮೀಹ ತಾಂ ಶೃಣು ॥ ೨ ॥

ಯತ್ತದಪ್ಯಮೃತಂ ಬ್ರಹ್ಮ ಸರ್ವವ್ಯಾಪಿ ನಿರಾಮಯಂ ।
ಚಿದಾಭಾಸಮನಂತಾಖ್ಯಮನಾದಿ ವಿಗತಭ್ರಮಂ ॥ ೩ ॥

ನಲವತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಘವ, (ಪೂರ್ವ ಸರ್ಗದಲ್ಲಿ ನಾನು ಇದುವರೆವಿಗೂ ವರ್ಣಿಸಿದ) ಈ ಅವಿದ್ಯೆಯೆಂಬ ಮಹಾ ವ್ಯಾಧಿಯು ವಸ್ತುತಃ ಅಸತ್ ಆದುದೇನೋ ಸರಿಯೇ. (ಆತ್ಮೈಕತ್ವ ರೂಪ ತತ್ತ್ವಜ್ಞಾನದಿಂದ) ನೋಡಿದ ಮಾತ್ರದಿಂದಲೇ ನಾಶಹೊಂದುತಕ್ಕದೇನೋ ಹೌದು. ಆದರೂ ಇದು ಕೋಪಗೊಂಡು ಕೆರಳಿದಾಗ ಅದರ ನಿವಾರಣೆಗೆ ಮಾಡಬೇಕಾಗಿರುವ ಪರಮ ದಿವ್ಯೌಷಧವನ್ನೂ ನಿನಗೆ ಈಗ ಹೇಳುವೆನು ಕೇಳು.

೨. ಅಯ್ಯಾ ರಾಮ, (ಹಿಂದೆ ೪೦ನೆಯ ಸರ್ಗದ ೧೩ನೆಯ ಶ್ಲೋಕದಲ್ಲಿ) "ತಾಸಾಂಸಮ್ಯಕ್ ಪ್ರವಕ್ಷ್ಯಾಮಿ ತಾವದ್ರಾಜಸಸಾತ್ವಿಕೀಃ" ಎಂದು ಪ್ರತಿಜ್ಞೆ ಮಾಡಿ ಮನಸ್ಸಿನ ವೀರ್ಯವನ್ನು ವಿಚಾರಮಾಡುವುದಕ್ಕೋಸ್ಕರ ಯಾವ ರಾಜಸ ಸಾತ್ವಿಕರೂಪವಾದ ಜಾತಿಯನ್ನು ಹೇಳುವುದಕ್ಕೆ ಪ್ರವರ್ತಿಸಿದ್ದೇನೋ ಅದನ್ನೇ ಇಲ್ಲಿ ಈಗ ವಿವರಿಸುವೆನು ಕೇಳು.

೩. ಅಮೃತ ಸ್ವರೂಪವೂ (ಮರಣಧರ್ಮ ಶೂನ್ಯವೂ) ಸರ್ವ ವ್ಯಾಪ್ತಿಯೂ ನಿರಾತಂಕವೂ ಅನಂತವೆಂದು ಕರೆಯಲ್ಪಡತಕ್ಕುದೂ ಅನಾದಿಯೂ ಸಕಲ ವಿಧ

ಚಿತ್ಸ್ಪಂದವಪುಷಸ್ತಸ್ಯ ಸ್ಪಂದಸ್ತಸ್ಮಾಚ್ಚಿದೇವ ಹಿ ।
ಪ್ರದೇಶಾದ್ಘನತಾಮೇತಿ ಸೌಮ್ಯೋಽಬ್ಧಿಶ್ಚಲನಾದಿವ ॥ ೪ ॥

ಅಂತರಬ್ಧೇರ್ಜಲಂ ಯದ್ವತ್ಸ್ಪಂದಾಸ್ಪಂದವದೀಹತೇ ।
ಸರ್ವಶಕ್ತಿಸ್ತಥೈಕತ್ರ ಗಚ್ಛತಿ ಸ್ಪಂದಶಕ್ತಿತಾಂ ॥ ೫ ॥

ಆತ್ಮನ್ಯೇವಾತ್ಮನಾ ವ್ಯೋಮ್ನಿ ಯಥಾ ರಸತಿ ಮಾರುತಃ ।
ತಥೇಹಾತ್ಮಾತ್ಮಶಕ್ತ್ಯೈವ ಸ್ವಾತ್ಮನ್ಯೇವೇತಿ ಲೋಲತಾಂ ॥ ೬ ॥

ಭ್ರಮರಹಿತವೂ ಆಗಿರುವ ಪರಬ್ರಹ್ಮವು ಜೀವರೂಪವಾಗಿ (ಚಿದಾಭಾಸ) ಹೇಗೆ ಆಗುವುದೋ ಅದನ್ನೂ ಹೇಳುವೆನು ಕೇಳು.

೪. ಕೇವಲ ಚಿದ್ರೂಪನಾದ ಆ ಪರಮಾತ್ಮನಿಗೆ ಸ್ವಲ್ಪ ಚಲನೆಯುಂಟಾಗುವುದು. ಅಂತಹ ಸ್ಪಂದರೂಪವಾದ ಚಿತ್ತಿನ ಸ್ಪಂದವು (ಚಿದಾಭಾಸವು) ಚಿತ್ತೇ ಆಗಿರುವುದು. ಅದು ಕಾರಣ ಆ ಚಿತ್ತೇ ಸಮುದ್ರವು ಸೌಮ್ಯವಾಗಿರುವುದಾದರೂ ಚಲನೆಯಿಂದ ತರಂಗಾದಿರೂಪವಾಗಿ ಘನವಾಗುವಂತೆ ಔಪಾಧಿಕೈಕ ದೇಶದಿಂದ ಘನವಾಗುವುದು. (ಸಾಂದ್ರ-ನಿಬಿಡವಾಗುವುದು.)

೫. ಸಮುದ್ರದ ಒಳಗಡೆಯಲ್ಲಿರುವ ಜಲವು ಹೇಗೆ ಸ್ಪಂದ (ಚಲನ) ರೂಪವಾಗಿಯೂ ಅಸ್ಪಂದ ರೂಪವಾಗಿಯೂ ಇರುವುದೋ ಹಾಗೆಯೇ ಸರ್ವಶಕ್ತಿಯಾದ ಆತ್ಮ ಚೈತನ್ಯವು ಏಕದೇಶದಲ್ಲಿ ಸ್ಪಂದಶಕ್ತಿಯನ್ನೂ ಪಡೆಯುವನು.

[ಮನಸ್ಸಿನ ವಿಚಿತ್ರ ಶಕ್ತಿಗಳು ಸತ್ವರಜಸ್ತಮೋಗುಣಗಳ ಉಪಚಯಾಪಚಯಗಳ ಬೆರಕೆಯು (ಮಿಶ್ರಣ) ತಾರತಮ್ಯದಿಂದ ಉಂಟಾಗತಕ್ಕುವುಗಳು. ಆ ಉಪಚಯಾಪಚಯಗಳು ರಾಜಸಕ್ರಿಯಾಶಕ್ತಿ ಮೂಲಕವು. ಆದುದರಿಂದ ಮೊದಲನೆಯದಾಗಿ ಕ್ರಿಯಾಶಕ್ತಿಯ ಉತ್ಪತ್ತಿಯನ್ನೂ ಇಲ್ಲಿ ಹೇಳಿದೆ.]

೬. ವಾಯುವು ತನಗೆ ತಾನೇ [ತನ್ನಿಂದ ತನ್ನಲ್ಲಿಯೇ] ಹೇಗೆ ಆಕಾಶದಲ್ಲಿ ಪ್ರಸರಿಸುವುದೋ ಹಾಗೆ ಆತ್ಮನು ಆತ್ಮ ಶಕ್ತಿಯಿಂದಲೇ ತಾನೇ ತನ್ನಲ್ಲಿಯೇ ಚಲನೆಯನ್ನು ಹೊಂದುವನು.

[ಹೀಗೆ ಆತ್ಮನು ಸ್ವತಃ ಕೂಟಸ್ಥನಾಗಿದ್ದರೂ ಕೂಡ ಆಧ್ಯಾಸಿಕವಾದ [ಅಧ್ಯಾಸಮೂಲವಾದ] ಚಲನವು ಉಂಟಾಗುವುದರಲ್ಲಿ ವಿರೋಧವಿಲ್ಲವು.]

ಸ್ವಶಿಖಾಸ್ಪಂದಶಕ್ತ್ಯೈವ ದೀಪಃ ಸೌಮ್ಯೋ ಯಥೋನ್ನತಂ ।
ಏತಿ ತದ್ವಿದಸಾವಾತ್ಮಾ ತತ್ಸ್ವೇ ವಪುಷಿ ವಲ್ಗತಿ ॥ ೭ ॥

ಜಲಾಂತರೇಽಂಬುಧಿರ್ಯದ್ವಲ್ಲಸದ್ವಾರೀವ ಚಂಚಲಃ ।
ಸರ್ವಶಕ್ತಿರ್ವಪುಷ್ಯೇವ ತಥಾ ಸ್ಪಂದವಿಲಾಸವಾನ್ ॥ ೮ ॥

ಯಥೋಲ್ಲಸತಿ ಭಾಚ್ಚಕ್ರೈಃ ಕಚನ್ಕನಕಸಾಗರಃ ।
ತಥಾತ್ಮನಿ ಪರಿಸ್ಪಂದೈಃ ಸ್ಫುರತ್ಯಕ್ಷೈಶ್ಚಿದರ್ಣವಃ ॥ ೯ ॥

---

೭. ಗಾಳಿಯ ಹೊಡೆತಕ್ಕೆ [ವಾಯ್ವಾದಿಗಳ ವಿಕ್ಷೇಪಕ್ಕೆ] ಸಿಕ್ಕಿಬೀಳದೆ ನಿಶ್ಚಲವಾಗಿರುವ ದೀಪವು ತನ್ನ ಜ್ವಾಲೆಯು ಚಲನ ಶಕ್ತಿಯಿಂದಲೇ ಹೇಗೆ ಊರ್ಧ್ವದೇಶಕ್ಕೆ (ಮೇಲುಗಡೆಗೆ) ಹೋಗುವುದೋ ಹಾಗೆ ಆತ್ಮನು ಆತ್ಮ ಶಕ್ತಿಯಿಂದಲೇ ತನ್ನೊಳಗೆಯೇ ಪ್ರಕಾಶಿಸುವನು.

[ಹೀಗೆ ಸ್ಪಂದ ಶಕ್ತಿಗೂ ಅಸ್ಪಂದ ಪ್ರಕಾಶ ಶಕ್ತಿಗೂ ಏಕತ್ರಸನ್ನಿವೇಶವು ಅವಿರುದ್ಧವಾದುದು ಎಂದು ಭಾವ.]

೮. ನೀರಿನೊಳಗಡೆ ಶರತ್ಕಾಲದ ಬಿಸಿಲು ಮುಂತಾದುವುಗಳ ಸಂಪರ್ಕದ ದೆಸೆಯಿಂದ ಯಾವುದೋ ಒಂದು ಭಾಗದಲ್ಲಿ ಮಾತ್ರ ನೀರು ಹೊಳೆಯುತ್ತಿರಲು ಅದಷ್ಟು ಭಾಗದಲ್ಲಿ ಮಾತ್ರವೇ ಸಮುದ್ರವು ಚಂಚಲವಾಗಿರುವಂತೆ ಹೇಗೆ ತೋರುವುದೋ ಹಾಗೆ ಸರ್ವಶಕ್ತಿಯಾದ ಆತ್ಮನು ತನ್ನ ದೇಹದಲ್ಲಿಯೇ ಏಕದೇಶದಲ್ಲಿತಾನೇ ಸ್ಪಂದ ಶಕ್ತಿಯಿಂದ ಕೂಡಿದವನಾಗಿ ವಿಲಾಸಗೊಳ್ಳುವನು. [ಅದು ಕಾರಣ, ಏಕದೇಶದಲ್ಲಿ ಮಾತ್ರವೇ ಸ್ಪಂದವುಂಟಾಗುವುದೆಂಬುದೂ ಉಪಪನ್ನವೇ ಎಂದು ತಿಳಿಯಬೇಕು.]

೯. (ಪರಮಾರ್ಥತಃ ಬೇರೆ ರೀತಿಯಾಗಿಯೇ ಇರತಕ್ಕ ಪರಬ್ರಹ್ಮವು ಕಲ್ಪಿತವಾದ ರೂಪಾಂತರದಿಂದ ಸ್ಫುರಿಸುವುದು ಎಂಬ ವಿಷಯದಲ್ಲಿಯೂ ಇದೇ ದೃಷ್ಟಾಂತವು. ಹೇಗೆಂದರೆ) ಶರತ್ಕಾಲದ ಬಿಸಿಲುಗಳ ಸಮೂಹಗಳಿಂದ ಥಳಥಳಿಸುತ್ತಿರುವ ಸಮುದ್ರವು ದ್ರವೀಭೂತವಾದ (ಕರಗಿ ನೀರಾಗಿರುವ) ಭಂಗಾರ (ಸುವರ್ಣ) ದಂತೆ ಹೇಗೆ ಸ್ಫುರಿಸುವುದೋ ಹಾಗೆಯೇ ಈ ಚೈತನ್ಯ ಸಮುದ್ರವು ತನ್ನೊಳಗೆಯೇ ಇಂದ್ರಿಯ ಪ್ರಕಾಶಗಳೆಂಬ ಪರಿಸ್ಪಂದ (ವಿಶೇಷವಾದ ಚಲನೆ) ಗಳಿಂದ ಪ್ರಕಾಶಿಸುವುದು. [ಸ್ಫುರಿಸುವುದು]

ಲಕ್ಷ್ಯತೇ ಮೌಕ್ತಿಕಸ್ಪಂದೋ ಯಥಾ ವ್ಯೋಮ್ನಿ ದೃಶೋಽದೃಶಿ ।
ತಥಾ ಭಾತಿ ಲಸದ್ರೂಪಾ ಚಿಚ್ಛಕ್ತಿಶ್ಚಿನ್ಮಹಾಂಬರೇ ॥ ೧೦ ॥

ಕಿಂಚಿತ್ ಕ್ಷುಭಿತರೂಪಾ ಸಾ ಚಿಚ್ಛಕ್ತಿಶ್ಚಿನ್ಮಹಾರ್ಣವೇ ।
ತನ್ಮಯಿಾ ಚಿತ್ಸ್ಫುರತ್ಯಚ್ಛಾ ತತ್ರೈವೋರ್ಮಿರಿವಾರ್ಣವೇ ॥ ೧೧ ॥

ಆತ್ಮನೋಽವ್ಯತಿರಿಕ್ತೈವ ವ್ಯತಿರಿಕ್ತೇವ ತಿಷ್ಠತಿ ।
ಆಲೋಕಶ್ರೀರಿವಾಲೋಕಕೋಟರೇ ಯತ್ತತಾಂ ಗತಾ ॥ ೧೨ ॥

ಕ್ಷಣಂ ಸ್ಫುರತಿ ಸಾ ದೇವೀ ಸರ್ವಶಕ್ತಿತಯಾ ತಯಾ ।
ಚೇತತಿ ಸ್ವಾಂ ಸ್ವಯಂ ಶಕ್ತಿಂ ಕಲೇಂದೋಃ ಶೀತತಾಮಿವ ॥ ೧೩ ॥

---

೧೦. ಅತೀಂದ್ರಿಯವಾದ (ಇಂದ್ರಿಯಗಳಿಗೆ ಅಗೋಚರವಾದ) ಆಕಾಶದೊಳಗೆ ಭ್ರಾಂತಿಯಿಂದ ಮುತ್ತಿನ ಸರದ ಸ್ಪಂದವಿರುವಂತೆ ಹೇಗೆ ಕಣ್ಣಿಗೆ ಕಾಣುವುದೋ ಹಾಗೆ ವಸ್ತುತಃ ಇಂದ್ರಿಯಾಗೋಚರವಾದ ಚಿತ್ ಎಂಬ ಮಹಾಕಾಶದೊಳಗೆ ಚಿಚ್ಛಕ್ತಿಯು ಪ್ರಕಾಶಮಾನವಾದ ರೂಪವುಳ್ಳದ್ದಾಗಿ ಸ್ಫುರಿಸುವುದು. [ಇದು ಅತೀಂದ್ರಿಯವಾದ ವಸ್ತುವು. ಇಂದ್ರಿಯಗೋಚರವಾಗುವ ವಿಷಯದಲ್ಲಿ ದೃಷ್ಟಾಂತವು.]

೧೧. ಮತ್ತು, ಸಮುದ್ರದಲ್ಲಿ ಅಲೆಯು ಸ್ಫುರಿಸುವಂತೆ ಆ ಚಿಚ್ಛಕ್ತಿಯು ಚಿತ್ತೆಂಬ ಮಹಾ ಸಮುದ್ರದಲ್ಲಿ ಸ್ವಲ್ಪ ಮಾತ್ರ ಕ್ಷೋಭೆಗೊಂಡ ರೂಪವುಳ್ಳದ್ದಾಗಿ (ಚಲನೆ ಹೊಂದಿ) ಚಿಚ್ಛಕ್ತಿಮಯಿಯಾಗಿಯೂ ಚಲನೆ ಹೊಂದದೆ ಇರುವಾಗ ಅಲ್ಲಿಯೇ ಸ್ವಚ್ಛವಾದ [ನಿರ್ಮಲವಾದ] ಚಿತ್ ಆಗಿಯೂ ಸ್ಫುರಿಸುವುದು.

೧೨. ಸೂಚೀಪಾಶಾದಿಗಳಿಂದ ಕಲ್ಪಿತವಾದ ಬೆಳಕಿನ [ಪ್ರಕಾಶದ] ರಂಧ್ರದಲ್ಲಿ ಉಪಾಧಿಪರವಶವಾದ ಸ್ವಲ್ಪವಾದ ಪ್ರಕಾಶವು ತೇಜೋರಾಶಿಗಿಂತ ಹೇಗೆ ವ್ಯತಿರಿಕ್ತವಾದುದಲ್ಲವೋ ಹಾಗೆ ಆ ಚಿಚ್ಛಕ್ತಿಯು ಆತ್ಮನಿಗಿಂತ ಅವ್ಯತಿರಿಕ್ತವೇ [ಅನನ್ಯ] ಆಗಿದ್ದರೂ [ಉಪಾಧಿವಶದಿಂದ ಅನ್ಯವಾದುದರಂತೆ [ವ್ಯತಿರಿಕ್ತವಾದುದರಂತೆ] ಕಾಣಿಸಿಕೊಳ್ಳುತ್ತಿರುವುದು.

೧೩. ಆ, ಚಿತ್ ಉ [ಚಿತ್ತು] ತನ್ನ ಸರ್ವಶಕ್ತಿತ್ವದಿಂದ ಒಂದು ಕ್ಷಣ ಕಾಲ ಸ್ಫುರಿಸುವುದು. ಚಂದ್ರನ ಕಳೆಯು ಶೈತ್ಯವನ್ನು [ತಂಪನ್ನು] ಪ್ರಕಾಶಪಡಿಸುವಂತೆ ಆ ಸರ್ವ ಶಕ್ತಿತ್ವದಿಂದ ತಾನೇ ತನ್ನ ಶಕ್ತಿಯನ್ನು ಪ್ರಕಾಶಗೊಳಿಸುವುದು.

ಉದಿತೈಷಾ ಪ್ರಕಾಶಾಖ್ಯಾ ಚಿಚ್ಛಕ್ತಿಃ ಪರಮಾತ್ಮನಃ ।
ದೇಶಕಾಲಕ್ರಿಯಾಶಕ್ತೀರ್ವಯಸ್ಯಾಃ ಸಂಪ್ರಕರ್ಷತಿ ॥ ೧೪ ॥

ಸ್ವಸ್ವಭಾವಂ ವಿದಿತ್ವೈವಮನಾದ್ಯಂತಪದೇ ಸ್ಥಿತಾ ।
ರೂಪಂ ಪರಿಮಿತೀವಾಸೌ ಭಾವಯತ್ಯ ವಿಭಾವಿತಾ ॥ ೧೫ ॥

ಯದೈವಂ ಭಾವಿತಂ ರೂಪಂ ತಯಾ ಪರಮಸತ್ತಯಾ ।
ತದೈವೈನಾಮನುಗತಾ ನಾಮಸಂಖ್ಯಾದಿಕಾ ದೃಶಃ ॥ ೧೬ ॥

[ಹೀಗೆ ಈ ಚಿಚ್ಛಕ್ತಿಗೆ ಕಾಲಕೃತವಾದ ಪರಿಚ್ಛೇದವೂ ಶಕ್ತಿ ಮತ್ತು ಶಕ್ತಿಮತ್ ಮುಂತಾದ ಭೇದವೂ ಉಪಪನ್ನವಾಗುವುದು.

೧೪. ಹೀಗೆ ಪರಮಾತ್ಮತ ದೆಸೆಯಿಂದ ಉದಯಿಸಿ ಪ್ರಕಾಶವೆಂಬ ಹೆಸರನ್ನು ಹೊಂದಿದ ಈ ಚಿಚ್ಛಕ್ತಿಯು ತನಗೆ ಸಖಿಯರಾದ [ಸಹಾಯಕ ದೇಶ ಕಾಲ ಕ್ರಿಯಾ ಶಕ್ತಿಗಳನ್ನೂ ಆಕರ್ಷಿಸಿಕೊಳ್ಳುವುದು.

೧೫. ಆ ಚಿಚ್ಛಕ್ತಿಯು ತನ್ನ ಸ್ವಭಾವವನ್ನು ತಾತ್ತ್ವಿಕವಾಗಿ ತಿಳಿದುಕೊಂಡು ಆದ್ಯಂತರಹಿತನಾದ ಪರಮಾತ್ಮನೆಂಬ ಪರಮಪದದಲ್ಲಿ ನೆಲೆಸುವುದು. ಅದು ವಾಸ್ತವವಾದ ತನ್ನ ಸ್ವಭಾವವನ್ನು ಸರಿಯಾಗಿ ಭಾವನೆಮಾಡಿಕೊಳ್ಳದೆ ಹೀಗೆ ಕಲ್ಪಿತವಾದ ರೂಪವನ್ನೇ ಭ್ರಾಂತಿಯಿಂದ ತನ್ನ ಸ್ವಭಾವವೆಂದು ತಿಳಿದುಕೊಂಡು ತಾನು ಪರಿಚ್ಛಿನ್ನವಾಗಿರುವುದೆಂದು ತನ್ನನ್ನು ದೃಢವಾಗಿ ಭಾವಿಸಿಕೊಳ್ಳುವುದು.

೧೬. ಪರಮಸತ್ತಾರೂಪವಾದ ಚಿಚ್ಛಕ್ತಿಯು ಯಾವಾಗ ಈ ಪ್ರಕಾರವಾಗಿ ತನ್ನ ರೂಪವನ್ನು ಪರಿಚ್ಛಿನ್ನವಾದದ್ದನ್ನಾಗಿ ಭಾವಿಸಿಕೊಳ್ಳುವುದೋ ಆಗಲೇ ಇದನ್ನು ನಾಮ, ರೂಪ, ಸಂಖ್ಯೆ ಇಷ್ಟ, ಅನಿಷ್ಟ ಮುಂತಾದ ಸಕಲ ಜಗತ್ಕಲ್ಪನೆಗಳು ಬೆನ್ನಟ್ಟಿಕೊಂಡು ಬರುವುವು.

[ಪ್ರಾಣನ್ನೇವ ಪ್ರಾಣೋನಾಮಭವತಿ, ವದನ್‌ವಾಕ್, ಪಶ್ಯನ್ ಚಕ್ಷುಃ, ಮನ್ವಾನೋಮನಃ ಶೃಣ್ವನ್ ಶ್ರೋತ್ರಂ. ಇತ್ಯಾದಿ ಶ್ರುತಿಯೂ ಈ ಅರ್ಥದಲ್ಲಿ ಪ್ರಮಾಣವು.)

ಚಿದೇವೈತದವಸ್ತ್ವೇವ ವ್ಯತಿರಿಕ್ತಾ ತಥಾತ್ಮನಃ ।
ಅನಂತಾ ತದ್ಗತೈವಾಶು ಲಹರೀವ ಮಹಾರ್ಣವಾತ್ ॥ ೧೭ ॥

ಯಥಾ ಕಟಕಕೇಯೂರೈರ್ಭೇದೋ ಹೇಮ್ನೋ ವಿಲಕ್ಷಣಃ ।
ತಥಾತ್ಮನಶ್ಚಿತೋ ರೂಪಂ ಭಾವಯಂತ್ಯಾಃ ಸ್ವಮಾಂಶಿಕಂ ॥ ೧೮ ॥

ಯಥಾ ದೀಪೇನ ದೀಪಾನಾಂ ಜಾತಾನಾಮಾತ್ಮನಾಂ ತಥಾ ।
ದೇಶಕಾಲಕಲಾ ಮಾತ್ರಭೇದಃ ಸ್ವಾಭಾವಿಕಶ್ಚಿತೇಃ । ॥ ೧೯ ॥

---

೧೭. ಅಂತೂ ಒಟ್ಟಿನಲ್ಲಿ, ಸದ್ರೂಪನಾದ ಆತ್ಮನಿಗಿಂತ ವ್ಯತಿರಿಕ್ತವಾದ ಕಲ್ಪನೆಯೆಲ್ಲವೂ ವಸ್ತುತಃ ಅಸತ್ಯವೇ ಆಗಿರುವ ಕಾರಣ ಚಿತ್ತಿನಲ್ಲಿ ಕಲ್ಪಿತವಾದ ಸಕಲವೂ ಚಿನ್ಮಾತ್ರವೇ [ಚಿನ್ಮಾತ್ರತ್ವವೇ-ಪರಮಾರ್ಥ ರೂಪವು] ಎಂದು ಫಲಿತವಾಯಿತು. ದೊಡ್ಡ ಸಮುದ್ರದಲ್ಲಿ ಕಲ್ಪಿತವಾದ ತರಂಗಮಾಲೆಯಂತೆ ಆತ್ಮನಲ್ಲಿ ಅನಂತವಾಗಿರುವ ಕಲ್ಪನೆಯೆಲ್ಲವೂ ಆತ್ಮನಲ್ಲಿ ಇದ್ದುಕೊಂಡೇ ಅನನ್ಯವಾಗಿರುವುದು.

೧೮. ಕಟಕ ಕೇಯೂರ ಮುಂತಾದ ಆಭರಣಗಳೊಡನೆ ಹೇಗೆ ಸುವರ್ಣಕ್ಕೆ ಭೇದವು ಅತ್ಯಂತ ವಿಲಕ್ಷಣವಾಗಿರುವುದೋ ಹಾಗೆ ತನ್ನ ಅಂಶ ಕಲ್ಪನಾಧೀನವಾದ ಸಕಲ ಜಗದ್ರೂಪವನ್ನು ಭಾವಿಸುತ್ತಿರುವ ಚಿತ್ತಿನೊಡನೆ ಆತ್ಮನಿಗೆ ಭೇದವು ವಿಲಕ್ಷಣವಾಗಿರುವುದು.

೧೯.ಒಂದು ದೀಪದಿಂದ ಹುಟ್ಟಿದ ಇತರ ದೀಪಗಳಿಗೆ ದೇಶಕಾಲ ಕಾಲಾಮಾತ್ರ ಪ್ರಯುಕ್ತವಾದ ಭೇದವು ಇರುವುದೇ ಹೊರತು ದೀಪಾಗ್ನಿ ಸ್ವರೂಪದಲ್ಲಿ ಭೇದವಿಲ್ಲದಿರುವಂತೆ ಚಿತ್ತಿಗೂ ದೇಶ ಕಾಲ ಅವಯವಾಗಿ ಉಪಾಧಿ ಸ್ವಭಾವದಿಂದ ಬಂದಿರುವ ಆತ್ಮ ಭೇದವು ಮಾತ್ರ ಇರುವುದೇ ಹೊರತು ಪಾರಮಾರ್ಥಿಕವಾದ ಸ್ವರೂಪದಲ್ಲಿ ಭೇದವಿಲ್ಲವೇ ಇಲ್ಲ.

[ಬತ್ತಿ ಮೊದಲಾದ ಉಪಾಧಿ ದೇಶದಿಂದ ದೇಶವು ಅದರ ಕಾಲದಿಂದ ಕಾಲ· ಅದರ ಅವಯುವಗಳಿಂದ ಕಲೆಗಳು. ಹೀಗೆ ಇವುಗಳಿಂದ ಮಾತ್ರವೇ ದೀಪಗಳಲ್ಲಿ ಭೇದವು ತೋರುವುದು. ಹಾಗೆ ನಾನಾ ಉಪಾದಿ ವಶದಿಂದ ಆತ್ಮ ಭೇದವು ಕಲ್ಪಿತವಾಗಿ ತೋರುವುದು.]

ದೇಶಕಾಲ ಪರಿಸ್ಪಂದ ಶಕ್ತಿಸಂದೀಪಿತಾಥ ಚಿತ್ ।
ಸಂಕಲ್ಪಮನುಧಾವಂತೀ ಪ್ರಯಾತಿ ಕಲನಾಪದಂ ॥ ೨೦ ॥

ವಿಕಲ್ಪಕಲಿತಾಕಾರಂ ದೇಶಕಾಲಕ್ರಿಯಾಸ್ಪದಂ ।
ಚಿತೋರೂಪಂ ಮಹಾಬಾಹೋ ಕ್ಷೇತ್ರಜ್ಞ ಇತಿ ಕಥ್ಯತೇ ॥ ೨೧ ॥

ಕ್ಷೇತ್ರಂ ಶರೀರಮಿತ್ಯಾಹುಸ್ತದಸೌ ವೇತ್ತ್ಯಖಂಡಿತಂ ।
ಸಬಾಹ್ಯಾಭ್ಯಂತರಂ ತೇನ ಕ್ಷೇತ್ರಜ್ಞ ಇತಿ ಕಥ್ಯತೇ ॥ ೨೨ ॥

---

೨೦. ತರುವಾಯ ದೇಶ, ಕಾಲ, ಸ್ಪಂದ ಶಕ್ತಿಗಳಿಂದ ಉದ್ದೀಪಿತವಾದ ಚಿತ್ತು ಸಂಕಲ್ಪವನ್ನೂ ಅನುಸರಿಸಿ ಓಡುತ್ತಾ ಕಲ್ಪನಾರೂಪವನ್ನೂ [ಕಲ್ಪನೆಗಳಿಗೆ ಆಸ್ಪದವಾದ] ಹೊಂದುವುದು.

೨೧. ಎಲೈ ಮಹಾ ಬಾಹುವೇ, ಹೀಗೆ ನಾನಾ ವಿಕಲ್ಪಗಳಿಂದ ಕಲ್ಪಿತವಾದ ಆಕಾರವುಳ್ಳದ್ದಾಗಿಯೂ ದೇಶ ಕಾಲಕ್ರಿಯಾದಿ ಭೇದಗಳಿಗೆ ಆಸ್ಪದವಾಗಿಯೂ ಇರುವ ಚಿತ್ತಿನ ರೂಪವೇ ಕ್ಷೇತ್ರಜ್ಞನೆಂದು ಶಾಸ್ತ್ರಗಳಲ್ಲಿ ಹೇಳಲ್ಪಡುವುದು. [ಚಿತ್ತಿನ ಕ್ಷೇತ್ರಜ್ಞತ್ವವು. ಕ್ಷೇತ್ರೋಪಾಧಿ ಕಲ್ಪನಾಧೀನವಾದುದು ಎಂದರ್ಥ.]

೨೨. ಕ್ಷೇತ್ರವೆಂದರೆ ಶರೀರವೆಂದರ್ಥ. [ಶರೀರವನ್ನೇ ಕ್ಷೇತ್ರವೆಂದು ಶಾಸ್ತ್ರಗಳಲ್ಲಿ ವ್ಯವಹರಿಸುವರು.] ಈ ಕ್ಷೇತ್ರವನ್ನು ಅಂತರಿಂದ್ರಿಯ ಬಹಿರಿಂದ್ರಿಯಗಳ ಸಮೇತವಾದಿ ಚಿತ್ತು ಸಮಗ್ರವಾಗಿ (ಸಂಪೂರ್ಣವಾಗಿ) ತಿಳಿದುಕೊಳ್ಳುವುದು. ಆದು ಕಾರಣ ಕ್ಷೇತ್ರಜ್ಞನೆಂಬ ಹೆಸರು ಅದಕ್ಕೆ ಬಂದಿರುವುದು.

("ಇದಂ ಶರೀರಂ ಕೌಂತೇಯ ಕ್ಷೇತ್ರಮಿತ್ಯಭಿಧೀಯತೇ ಏತದ್ಯೋವೇತ್ತಿ ತಂಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ" ಭಗವದ್ಗೀತಾ ೧೩-೧. ಇದರ ಭಾಷ್ಯದಲ್ಲಿ ಕ್ಷೇತ್ರಂ-ಕ್ಷತತ್ರಾಣಾತ್, ಕ್ಷಯಾತ್, ಕ್ಷರಣಾತ್, ಕ್ಷೇತ್ರವಚ್ಚ-ಅಸ್ಮಿ ಕರ್ಮಫಲ ನಿಷ್ಪತ್ತೇಃ (ಹಾನಿಗಳು ಸಂಭವಿಸದಂತೆ ರಕ್ಷಿಸುವುದರಿಂದಲೂ, ದಿನೇ ದಿನೇ ಕ್ಷಯಿಸಿ ಹೋಗುವುದರಿಂದಲೂ, ಪತನವಾಗುವುದರಿಂದಲೂ, ಹೊಲ ಗದ್ದೆ ಮುಂತಾದ ಕ್ಷೇತ್ರಗಳಲ್ಲಿ ಕೃಷ್ಯಾದಿ ಕರ್ಮಗಳ ಫಲವು ನಿಷ್ಪನ್ನವಾಗುವಂತೆ ಇದರಲ್ಲಿಯೇ ಕರ್ಮ ಫಲವು ನಿಷ್ಪನ್ನವಾಗುವುದರಿಂದಲೂ, ಈ ಶರೀರಕ್ಕೆ ಕ್ಷೇತ್ರವೆಂಬ ಹೆಸರುಬಂದಿರುವುದು ಎಂದು ವ್ಯಾಖ್ಯಾನ ಮಾಡಿದೆ.]

ವಾಸನಾಂ ಕಲಯನ್ಸೋಽಪಿ ಯಾತ್ಯಹಂಕಾರತಾಂ ಪುನಃ ।
ಅಹಂಕಾರೋಽಪಿ ನಿರ್ಣೀತಾ ಕಲಂಕೀ ಬುದ್ಧಿರುಚ್ಯತೇ ॥ ೨೩ ॥

ಬುದ್ಧಿಃ ಸಂಕಲ್ಪಕಲಿತಾ ಪ್ರಯಾತಿ ಮನಸಃ ಪದಂ ।
ಮನೋ ಘನವಿಕಲ್ಪಂ ತು ಗಚ್ಛತೀಂದ್ರಿಯತಾಂ ಶನೈಃ ॥ ೨೪ ॥

ಪಾಣಿಪಾದಮಯಂ ದೇಹಮಿಂದ್ರಿಯಾಣಿ ವಿದುರ್ಬುಧಾಃ ।
ದೇಹೇಽಸೌ ಜ್ಞಾಯತೇ ಲೋಕೇ ಸೂಯತೇಽಪಿ ಚ ಜೀವತಿ ॥ ೨೫ ॥

ಏವಂ ಜೀವೋ ಹಿ ಸಂಕಲ್ಪವಾಸನಾರಜ್ಜುವೇಷ್ಟಿತಃ ।
ದುಃಖಜಾಲಪರೀತಾತ್ಮಾ ಕ್ರಮಾದಾಯಾತಿ ಚಿತ್ತತಾಂ ॥ ೨೬ ॥

---

೨೩. ಆ ಕ್ಷೇತ್ರಜ್ಞನೂ ಕೂಡ ಅನಂತರ ವಾಸನೆಯನ್ನು ಸ್ವೀಕರಿಸಿ ಪುನಃ ಅಹಂಕಾರವೆಂಬ ಹೆಸರನ್ನು ಪಡೆಯುವನು. ಆ ಅಹಂಕಾರವೂ ಕೂಡ ನಾನಾ ವಿಧವಾದ ಅಧ್ಯವಸಾಯ (ನಿಶ್ಚಯ) ಗಳಿಂದ ಯುಕ್ತವಾಗಿ, ಅದು ಕಾರಣ ಇನ್ನೂ ಇತರ ಕಲ್ಪನೆಗಳಿಂದ ಕಳಂಕಿತವಾಗಿ ಬುದ್ಧಿಯೆನ್ನಿಸುವುದು.

೨೪. ಮತ್ತೆಯೂ ಬುದ್ಧಿಯು ಸಂಕಲ್ಪಯುಕ್ತವಾಗಿ ಮನಸ್ ಎಂಬ ಶಬ್ದದಿಂದ ವ್ಯವಹರಿಸಲ್ಪಡುವುದು. ಆ ಮನಸ್ಸೂ ಕೂಡ ಅತ್ಯಂತ ಘನವಾದ ವಿಕಲ್ಪಗಳನ್ನೊಳಗೊಂಡದ್ದಾಗಿ ಕ್ರಮೇಣ "ಇಂದ್ರಿಯ"ಗಳ ಭಾವವನ್ನೂ ಹೊಂದುವುದು. (ಇಂದ್ರಿಯ ಶಬ್ದ ವಾಚ್ಯವಾಗುವುದು.)

೨೫. ಈ ಇಂದ್ರಿಯಗಳೇ ಕೈ ಕಾಲು (ಕರಚರಣ) ಇತ್ಯಾದಿ ನಾನಾ ಅವಯವಮಯವಾದ ದೇಹದ ಭಾವವನ್ನೂ ಹೊಂದುವುವು ಎಂದು ಜ್ಞಾನಿಗಳು ತಿಳಿದಿರುವರು. ಈ ದೇಹವೆಂಬುದು ಲೋಕದಲ್ಲಿ ಸರ್ವರಿಗೂ ಪ್ರತ್ಯಕ್ಷವಾಗಿ ಜ್ಞಾತವಾಗುವುದು. ಜನನವನ್ನೂ ಹೊಂದುವುದು. ಸ್ಥಿತಿಯನ್ನೂ ಪಡೆದು ಜೀವಿಸುವುದು.

೨೬. ಈ ಪ್ರಕಾರವಾಗಿ, ಜೀವನು ವಿವಿಧ ಸಂಕಲ್ಪ ವಾಸನೆಗಳೆಂಬ ಹಗ್ಗಗಳಿಂದ ಬಲವಾಗಿ ಬಂಧಿಸಲ್ಪಟ್ಟವನಾಗಿ ದುಃಖ ಪರಂಪರೆಯಿಂದ ಸಮಾಕ್ರಾಂತನಾಗಿ ಕ್ರಮವಾಗಿ ಬಾಹ್ಯಾರ್ಥಗಳನ್ನು ತಿಳಿಯಲು ಸಮರ್ಥವಾದ ಚಿತ್ತವೆಂಬ ಬೇರೊಂದು ಅವಸ್ಥೆಯನ್ನೂ ಪಡೆಯುವನು.

ಕ್ರಮೇಣ ಪಾಕವಶತಃ ಫಲಮೇತಿ ಯಥಾನ್ಯತಾಂ ।
ಅವಸ್ಥಯೈವ ನಾಕೃತ್ಯಾ ಜೀವೋ ಮಲವಶಾತ್ತಥಾ ॥ ೨೭ ॥

ಜೀವೋಽಹಂಕಾರತಾಂ ಪ್ರಾಪ್ತಸ್ತ್ವಹಂಕಾರಶ್ಚ ಬುದ್ಧಿತಾಂ ।
ಸಂಕಲ್ಪಜಾಲಕಲಿತಾಂ ಮನಸ್ತಾಂ ಬುದ್ಧಿರಾಗತಾ ॥ ೨೮ ॥

---

೨೭. ಮಾವು, ಬಾಳೆ ಮುಂತಾದ ಫಲವು ಕಾಲಕ್ರಮವಾಗಿ ಪರಿಪಕ್ವಾವಸ್ಥೆಯನ್ನು ಹೊಂದಿದಾಗ ಅದು ರೂಪರಸಪರಿಣಾಮಾದಿಗುಣಗಳ ಬದಲಾವಣೆಯಿಂದ (ಪೂರ್ವಪೂರ್ವಾವಸ್ಥೆಗಳನ್ನು ಬಿಟ್ಟು ಅವಸ್ಥಾಂತರಗಳನ್ನು ಹೊಂದಿ) ವೈಲಕ್ಷಣ್ಯವನ್ನು ಪಡೆಯುವುದೇ ಹೊರತು ಮಾವು, ಬಾಳೆ ಮುಂತಾದ ನಿಯತವಾದ ತನ್ನ ಜಾತಿಯಿಂದ (ಆಕೃತಿ) ಎಂದಿಗೂ ಭೇದವನ್ನು ಹೊಂದುವುದಿಲ್ಲ. ಇದು ಲೋಕದಲ್ಲಿ ಸರ್ವಾನುಭವಸಿದ್ಧವು. ಇದರಂತೆಯೇ ಕ್ಷೇತ್ರಜ್ಞನೆನ್ನಿಸುವ ಆತ್ಮನೂ [ಜೀವನು] ಅವಿದ್ಯಾಮಲಪರಿಣಾಮವಶದಿಂದ ಕಲ್ಪಿತವಾದ ತನ್ನ ಅವಸ್ಥಾಭೇದದಿಂದ ಮಾತ್ರ ವೈಲಕ್ಷಣ್ಯವನ್ನು ಪಡೆದವನಾಗಿ ಸರ್ವ ವ್ಯವಹಾರಾಸ್ಪದನಾಗುವನೇ ಪಾರಮಾರ್ಥಿಕವೂ ಅಪರಿಣಾಮಿಯೂ ಆದ ತನ್ನ ಚಿತ್ಸ್ವಭಾವದಿಂದ ಎಂದಿಗೂ ವೈಲಕ್ಷಣ್ಯವನ್ನು ಹೊಂದುವುದೇ ಇಲ್ಲ. (ಏಕೆಂದರೆ ಅವನು ಕೂಟಸ್ಥನೂ ಅವಿಕಾರಿಯೂ ಆಗಿರುವನು.)

(ಮಾವು ಕ್ರಮವಾಗಿ ಕಾಯಿ, ಹೀಚು, ದೋರೆಗಾಯಿ, ಹಣ್ಣು ಇತ್ಯಾದಿ ಕ್ರಮದಿಂದ ದೇಶಕಾಲಾನುಗುಣವಾಗಿ ರೂಪಾಂತರವನ್ನು ರಸಾಂತರಗಳನ್ನು ಹೊಂದಿ ನಾನಾಕಾರಗಳಾಗಿ ಪರಿಣಾಮವನ್ನು ಹೊರದಿ ವಿಭಿನ್ನವಾಗಿ ಕಾಣುವುದೇ ಹೊರತು ತನ್ನ ಜಾತಿಸ್ವಭಾವಗಳನ್ನು ಎಂದಿಗೂ ಬಿಡುವುದಿಲ್ಲ. ಕಾಯಿ ಆಗಿರುವಾಗಲೂ, ದೋರೆಗಾಯಿ ಆಗಿರುವಾಗಲೂ ಕಳಿತ ಹಣ್ಣಾದಾಗಲೂ ಮಾವು. ಮಾವಾಗಿರುವುದೇ ಹೊರತು ಎಂದಿಗೂ ಬಾಳೆಯಾಗುವುದಿಲ್ಲ. ಅಂತೆಯೇ ಬಾಳೆಯೂ ಮಾವಾಗುವುದಿಲ್ಲ. ಆ ಹಣ್ಣಿನ ಪೂರ್ವದ ಬಣ್ಣ-ಗಾತ್ರ, ರಸ (ರುಚಿ) ಮುಂತಾದವು ಉತ್ತರೋತ್ತರಕಾಲಾಂತರಗಳಲ್ಲಿ ಬದಲಾಯಿಸುವುವು. ಇಷ್ಟು ಮಾತ್ರದಿಂದ ವೈಲಕ್ಷಣ್ಯವು ತೋರುವುದು. ಇದೇ ನ್ಯಾಯವು ಆತ್ಮನಲ್ಲಿಯೂ ಅನ್ವಯಿಸುವುದು.)

೨೮. ಹೀಗೆ ಜೀವನು ಅಹಂಕಾರತ್ವವನ್ನು ಪಡೆಯುವನು. ಅಹಂಕಾರವೂ ಕೂಡ ಬುದ್ಧಿಯ ಭಾವವನ್ನು ಹೊಂದುವುದು ಮತ್ತು ಆ ಬುದ್ಧಿಯೂ ಸಂಕಲ್ಪಜಾಲ ಕಲ್ಪಿತವಾದ ಮನಸ್ಸಿನ ಅವಸ್ಥೆಯನ್ನೂ ಪಡೆಯುವುದು.

ಮನೋ ಹಿ ಸಂಕಲ್ಪಮಯಂ ಸಂಸ್ಥಾಗ್ರಹಣ ತತ್ಪರಂ ।
ಪ್ರತಿಯೋಗಿ ವ್ಯವಚ್ಛಿನ್ನ ಪ್ರಾಪ್ತಿ ಸತ್ಯೈರ ಪೀಹಿತೈಃ ॥ ೨೯ ॥

ಇಚ್ಛಾದ್ಯಾಃ ಶಕ್ತಯಶ್ಚೇತೋ ಗಾವೋ ವೃಷಮಿವೋನ್ಮದಂ ।
ಅನುಧಾವಂತಿ ದೋಷಾಯ ಸರಿತಃ ಸಾಗರಂ ಯಥಾ ॥ ೩೦ ॥

ಇತಿ ಶಕ್ತಿಮಯಂ ಚೇತೋ ಘನಾಹಂಕಾರತಾಂ ಗತಂ ।
ಕೋಶಕಾರಕ್ರಿಮಿರಿವ ಸ್ವೇಚ್ಛಯಾ ಯಾತಿ ಬಂಧನಂ ॥ ೩೧ ॥

---

೨೯. ನಿಜವಾಗಿಯೂ ಈ ಮನಸ್ಸು ಕೇವಲ ಸಂಕಲ್ಪಮಯವಾದುದು. ಮತ್ತು ಪತ್ನೀಪುತ್ರಮಿತ್ರಾದಿಗಳ ಶರೀರಾಕಾರವನ್ನು ಗ್ರಹಿಸುವುದರಲ್ಲಿ (ಅಂದರೆ ಶರೀರಾಕಾರವೃತ್ತಿಯ ಮೂಲಕ ಸಂಸ್ಕಾರ ರೂಪದಿಂದ ಧರಿಸುವುದರಲ್ಲಿ) ತತ್ಪರವಾಗಿರುವುದು. ಈ ಮನಸ್ಸಿನ ಇಷ್ಟಾರ್ಥಗಳು [ಮನೋರಥಗಳು] ಕೆಲವು ವೇಳೆ ಸಫಲಗಳಾಗಿಯೂ ಇನ್ನೂ ಕೆಲವು ವೇಳೆ ವಿಫಲಗಳಾಗಿಯೂ ಇರುವ ಕಾರಣ ಅವುಗಳ ಅರ್ಥಗ್ರಹವು (ವ್ಯಾಪ್ತಿಯು) ಪ್ರತಿಬಂಧಕಗಳಾದ ವಸ್ತ್ವಂತರಗಳಿಂದ ವ್ಯಾವೃತ್ತವಾಗಿ (ಪರಾಙ್ಮುಖವಾಗಿ) ಇರುವುದು.

(ಸಂಸ್ಥಾ-ಸ್ತ್ರೀಪುತ್ರಾದಿಶರೀರಾಕಾರಃ ಎಂದು ತಾ.ಪ್ರ.) (ಪರಿಚ್ಛಿನ್ನವಾದ ತುಚ್ಛವಿಷಯಾಸಕ್ತವಾಗುವುದು ಎಂದರ್ಥ.)

೩೦. ಆಗ, ಮದೋನ್ಮತ್ತವಾದ ಗೂಳಿಯನ್ನು ಹಸುಗಳೂ ಸಮುದ್ರವನ್ನು ನದಿಗಳೂ ಹಿಂಬಾಲಿಸುವಂತೆ ಇಚ್ಛೆಯೇ ಮೊದಲಾದ ಶಕ್ತಿಗಳು ಮನಸ್ಸನ್ನು ಅನುಸರಿಸಿ ಓಡುವುವು. ಇದರಿಂದ ರಾಗದ್ವೇಷಾದಿ ದೋಷಗಳು ಮಾತ್ರವೇ ಉದ್ಭವಿಸುವುವು.

೩೧. ಈ ಪ್ರಕಾರ ರಾಗದ್ವೇಷಾದಿಗಳಿಗೆ ಹೇತುವಾದ ಇಚ್ಛಾದಿಶಕ್ತಿಮಯವಾದ ಮನಸ್ಸು ನಾನಾ ಶಾಖಾರೂಪವಾಗಿ ಘನವಾದ (ಸಾಂದ್ರ-ನಿಬಿಡ) ಅಹಂಕಾರಭಾವವನ್ನು ಪಡೆದದ್ದಾಗಿ ಕೋಶಕಾರಕೃಮಿಯಂತೆ (ರೇಷ್ಮೆಯ ಹುಳು) ತನ್ನ ಇಚ್ಛೆಯಿಂದಲೇ ತಾನಾಗಿಯೇ ಬಂಧನಕ್ಕೆ ಒಳಗಾಗುವುದು.

ಸ್ವಸಂಕಲ್ಪಾನುಸಂಧಾನಾತ್ಪಾಶೈರಿವ ನಯನ್ವಪುಃ ।
ಕಷ್ಟಮಸ್ಮಿ ಸ್ವಯಂ ಬಂಧಮೇತ್ಯಾತ್ಮಾ ಪರಿತಪ್ಯತೇ ॥ ೩೨ ॥

ಬದ್ಧಮಸ್ಮೀತಿ ಕಲಯದ್ವಿದ್ಯಾತತ್ತ್ವಂ ಜಹಚ್ಛನೈಃ ।
ಅವಿದ್ಯಾಂ ಜನಯತ್ಯಂತರ್ಜಗಜ್ಜಂಗಲ ರಾಕ್ಷಸೀಂ ॥ ೩೩ ॥

ಸ್ವಸಕಲ್ಪಿತ ತನ್ಮಾತ್ರ ಜ್ವಾಲಾಭ್ಯಂತರವರ್ತಿ ಚ ।
ಪರಾಂ ವಿವಶತಾಮೇತಿ ಶೃಂಖಲಾಬದ್ಧ ಸಿಂಹವತ್ ॥ ೩೪ ॥

ವಿಚಿತ್ರಕಾರ್ಯಕರ್ತೃತ್ವ ಮಾಹರದ್ವಾಸನಾ ವಶಾತ್ ।
ಸ್ವೇಚ್ಛಾಮಾತ್ರಾನುರಚಿತಾ ದಶಾಚ್ಛಾನುಪತತ್ತಥಾ ॥ ೩೫ ॥

---

೩೨. ಹೀಗೆ, ಮನಸ್ಸು ತನ್ನ ಸಂಕಲ್ಪದ ಅನುಸಂಧಾನದ ದೆಸೆಯಿಂದಲೇ ತನ್ನ ದೇಹವನ್ನು ತಾನಾಗಿಯೇ ಹಗ್ಗಗಳಿಂದ ಬಂಧಿಸಿಕೊಂಡದ್ದಾಗಿ ಬಲೆಯಲ್ಲಿ ಸಿಕ್ಕಿ ಬಿದ್ದ ಮೀನುಗಳಂತೆ ಬಹುಕಷ್ಟಕ್ಕೆ ಒಯ್ಯುವುದು. ಬಳಿಕ ಈ ಸ್ಥಿತಿಯಲ್ಲಿ ವಿಶೇಷ ವಾಗಿ ಪರಿತಾಪಪಡುವುದು.

೩೩. ಹೀಗೆ ಬದ್ಧವಾದ ಮನಸ್ಸು ಬಳಿಕ, ಆಗಿನ ತನ್ನ ಬದ್ಧಸ್ಥಿತಿಯೇ ಪರ ಮಾರ್ಥಸತ್ಯವೆಂದು ಭ್ರಾಂತಿಯಿಂದ ಕಂಡುಕೊಂಡು ಮೆಲ್ಲಮೆಲ್ಲನೆ ತನ್ನ ಸ್ವಾಭಾವಿ ಕವಾದ ಪಾರಮಾರ್ಥಿಕ ಸಚ್ಚಿದಾನಂದ ಸ್ವರೂಪವನ್ನು ಕ್ರಮೇಣ (ಮರೆತು) ಬಿಟ್ಟು ಜಗತ್ತೆಂಬ ಮಹಾರಣ್ಯದಲ್ಲಿ ಭಯಂಕರ ರಾಕ್ಷಸಿಯಂತಿರುವ ಜನನಮರಣಾದಿ ಭ್ರಾಂತಿಪರಂಪರೆಯನ್ನು (ಅವಿದ್ಯೆಯನ್ನು) ತನ್ನೊಳಗೆ ಹುಟ್ಟಿಸುವುದು.

೩೪. ಈ ಮನಸ್ಸು ಸಂಕಲ್ಪವೆಂಬ ಪಾಶದಿಂದ ಬದ್ಧವಾಗಿ, ಅತ್ತಿತ್ತ ಕದಲು ವುದಕ್ಕೂ ಸಾಮರ್ಥ್ಯವಿಲ್ಲದೆ, ತನ್ನ ಸಂಕಲ್ಪದಿಂದಲೇ ಕಲ್ಪಿತವಾದ ಶಬ್ದಾದಿ ವಿಷಯ ಗಳೆಂಬ ಸೌದೆಗಳು ಹತ್ತಿಕೊಂಡು ಉರಿಯುತ್ತಿರಲು, ರಾಗದ್ವೇಷಾದಿಗಳೆಂಬ ಆದರ ಜ್ವಾಲೆಗಳ ಮಧ್ಯದಲ್ಲಿ ಸಿಕ್ಕಿಕೊಂಡು, ಕಾಡುಗಿಚ್ಚು ಆವರಿಸಿಕೊಂಡಿರುವ ಮಹಾ ರಣ್ಯದ ಮಧ್ಯದಲ್ಲಿ ಸಂಕೋಲೆಗಳಿಂದ ಕಟ್ಟಲ್ಪಟ್ಟಿರುವ ಸಿಂಹದಂತೆ ಅತ್ಯಂತ ಪರವಶ ವಾಗಿ ದುಃಖಪಡುವುದು.

೩೫. ಮತ್ತು ಈ ಮನಸ್ಸು ಬಹುಪ್ರಯತ್ನಗಳಿಂದ ಕಷ್ಟಪಟ್ಟು ವಿಹಿತಗಳೂ ನಿಷಿದ್ಧಗಳೂ ಆದ ನಾನಾವಿಧ ಕರ್ಮಗಳ ಕರ್ತೃತ್ವವನ್ನು ಸಂಪಾದಿಸಿಕೊಳ್ಳುವುದು ಮತ್ತು ತನ್ನ ಇಚ್ಛಾಮಾತ್ರದಿಂದ ಕಲ್ಪಿತವಾಗಿರುವ ನಾನಾ ಯೋನಿಗಳೂ ನರಕಾದಿ

ಕ್ವಚಿನ್ಮನಃ ಕ್ವಚಿದ್ಬುದ್ಧಿಃ ಕ್ವಚಿಜ್ಞಾನಂ ಕ್ವಚಿತ್ಕ್ರಿಯಾಃ ।
ಕ್ವಚಿದೇತದಹಂಕಾರಃ ಕ್ವಚಿತ್ಪುರ್ಯಷ್ಟಕಂ ಸ್ಮೃತಂ ॥ ೩೬ ॥

ಕ್ವಚಿತ್ಪ್ರಕೃತಿರಿತ್ಯುಕ್ತಂ ಕ್ವಚಿನ್ಮಾಯೇತಿ ಕಲ್ಪಿತಂ ।
ಕ್ವಚಿನ್ಮಲಮಿತಿ ಪ್ರೋಕ್ತಂ ಕ್ವಚಿತ್ಕರ್ಮೇತಿ ಸಂಸ್ಥಿತಂ ॥ ೩೭ ॥

ಕ್ವಚಿದ್ಬಂಧಮಿತಿ ಖ್ಯಾತಂ ಕ್ವಚಿಚ್ಚಿತ್ತಮಿತಿ ಸ್ಫುಟಂ ।
ಪ್ರೋಕ್ತಂ ಕ್ವಚಿದವಿದ್ಯೇತಿ ಕಚಿದಿಚ್ಛೇತಿ ಸಂಸ್ಥಿತಂ ॥ ೩೮ ॥

ತದೇತದಾಬದ್ಧಮಿಹ ಚಿತ್ತಂ ರಾಘವ ದುಃಖಿತಂ ।
ತೃಷ್ಣಾಶೋಕಸಮಾವಿಷ್ಟಂ ರಾಗಾಯತನಮಾತತಂ ॥ ೩೯ ॥

ಜರಾಮರಣ ಮೋಹಾಂತರ್ಭವ ಭಾವನಯಾಹತಂ ।
ಈಹಿತಾ ನಿಹಿತೈರ್ಗ್ರಸ್ತಮವಿದ್ಯಾರಾಗರಂಜಿತಂ ॥ ೪೦ ॥

ಗಳೂ ಮುಂತಾದ ದುರ್ದಶೆಗಳನ್ನೂ (ಮುಂದೆ ಹೇಳುವಂತಹ) ಮನನಾದಿ ದೆಶೆಗಳನ್ನೂ ಅನುಭವಿಸಿ ಪರವಶವಾಗುವುದು.

೩೬-೩೮. ಆ ಅವಸ್ಥೆಗಳು ಯಾವುವೆಂದರೆ—ಅದು ಕೆಲವೆಡೆಗಳಲ್ಲಿ ಮನಸ್ಸೆನ್ನಿಸಿಕೊಳ್ಳುವುದು. ಕೆಲವು ಕಡೆ ಬುದ್ಧಿಯೆನ್ನಿಸುವುದು. ಬೇರೆ ಕಡೆ ಜ್ಞಾನವೆಂದೂ ಇತರ ಕಡೆಗಳಲ್ಲಿ ಕ್ರಿಯೆಗಳೆಂದೂ ಕೆಲವು ಕಡೆ ಅಹಂಕಾರವೆಂದೂ ಮತ್ತೂ ಕೆಲವೆಡೆ ಪುರ್ಯಷ್ಟಕವೆಂದೂ ಕೆಲವೆಡೆ ಪ್ರಕೃತಿಯೆಂದೂ ಕೆಲವು ಕಡೆ ಮಾಯೆಯೆಂದೂ ಕೆಲವು ಕಡೆ ಮಲವೆಂದೂ, ಕರ್ಮವೆಂದೂ, ಬಂಧವೆಂದೂ, ಚಿತ್ತವೆಂದೂ ಕೆಲವು ಕಡೆ ಅವಿದ್ಯೆಯೆಂದೂ, ಇಚ್ಛೆಯೆಂದೂ ಹೀಗೆ ನಾನಾ ರೂಪನಾಮ ಭೇದಗಳಿಂದ ಈ ಮನಸ್ಸು ವ್ಯವಹೃತವಾಗಿರುವುದು.

೩೯. ರಾಘವ, ಈ ರೀತಿಯಾಗಿ ಸರ್ವತಃ ಬದ್ಧವಾಗಿ ಅತಿ ವಿಶಾಲವಾದ ಈ ಚಿತ್ತವು ಅತ್ಯಂತ ದುಃಖಮಯವಾಗಿಯೂ ತೃಷ್ಣಾ ಶೋಕಗಳಿಂದ ಸಮಾಕ್ರಾಂತವಾಗಿಯೂ ರಾಗದ್ವೇಷಾದಿಗಳಿಗೆ ಮುಖ್ಯವಾದ ನಿವಾಸಸ್ಥಾನವಾಗಿಯೂ ಇರುವುದು.

೪೦. ಈ ಚಿತ್ತವು ಜರಾಮರಣಮೋಹಗಳ ಪ್ರವಾಹದೊಳಗೆ ಸಿಲುಕಿಕೊಂಡು ನಾನಾ ಸಂಸಾರಗಳನ್ನು ಭಾವನೆಮಾಡುತ್ತಾ ಸರ್ವನಾಶವನ್ನು ಹೊಂದುವುದು. ಕೆಲವು ಕಾಲ ಕಾಮನೆಯಿಂದಲೂ ಮತ್ತೆ ಬೇರೆ ಕಾಲದಲ್ಲಿ ಅಕಾಮನೆ (ವೈರಾಗ್ಯ)

ಇಚ್ಛಾಸಂಕ್ಷುಭಿತಾಕಾರಂ ಕರ್ಮವೃಕ್ಷವನಾಂಕುರಂ ।
ಸುವಿಸ್ಮೃತೋತ್ಪತ್ತಿ ಪದಂ ಕಲ್ಪಿತಾನರ್ಥ ಕಲ್ಪಿತಂ ॥ ೪೧ ॥

ಕೋಶಕಾರವದಾಬದ್ಧಂ ಶೋಕಾಕಾರಪದಂ ಗತಂ ।
ತನ್ಮಾತ್ರವೃಂದಾವಯವ ಮನಂತನರಕಾತಪಂ ॥ ೪೨ ॥

ಸ್ವದೃಶ್ಯಮಪಿ ಶೈಲೇಂದ್ರಸಮಭಾರಭಯಾವಹಂ ।
ಜರಾಮರಣಶಾಖಾಢ್ಯಂ ಸಂಸಾರವಿಷದುದ್ರುಮಂ ॥ ೪೩ ॥

ಇಮಂ ಸಂಸಾರಮಖಿಲಮಾಶಾಪಾಶವಿಧಾಯಕಂ ।
ದಧದಂತಃ ಫಲೈರ್ಹೀನಂ ವಟಧಾನಾ ವಟಂ ಯಥಾ ॥ ೪೪ ॥

ಯಿಂದಲೂ ಗ್ರಸ್ತವಾಗಿರುವುದು. ಆ ವಿದ್ಯಕ ದೋಷಗಳಿಂದ ಸದಾ ಲೇಪವನ್ನು (ಸಂಪರ್ಕವನ್ನು) ಪಡೆದಿರುವುದು.

೪೧. ಇದರ ಇಚ್ಛಾನುಗುಣವಾಗಿ ಇದರ ಆಕಾರವೂ ಚಲಿಸುತ್ತಿರುವುದು. ಕರ್ಮಗಳೆಂಬ ಮರಗಳ ತೋಪಿಗೆ ಇದು ಮೊಳಕೆಯಾಗಿರುವುದು. ತನ್ನ ಉತ್ಪತ್ತಿಗೆ ಕಾರಣವಾದ ಪರಬ್ರಹ್ಮಪದವನ್ನೂ ಇದು ಸಂಪೂರ್ಣವಾಗಿ ಮರೆತುಬಿಡುವಷ್ಟು ಕೃತಘ್ನವೆನ್ನಿಸಿರುವುದು. ಮಿಥ್ಯಾಭೂತವಾದ ಅನರ್ಥಕ್ಕಾಗಿಯೇ ಭ್ರಾಂತಿಯಿಂದ ಕಲ್ಪಿತವಾದುದು.

೪೨. ರೇಷ್ಮೆಯ ಹುಳದಂತೆ ಇದು ತನಗೆ ತಾನೇ ಸುತ್ತಲೂ ಬಂಧವನ್ನುಂಟುಮಾಡಿಕೊಳ್ಳುವುದು. ಶೋಕರೂಪವಾದ ಪದವನ್ನು ಪಡೆಯುವುದು. ಶಬ್ದಾದಿಗಳ ಸಮುದಾಯ ಮಾತ್ರವೇ ದೇಹವುಳ್ಳದ್ದಾಗಿರುವುದು. ಕೊನೆಯಲ್ಲಿ ಅನಂತವಾದ ನರಕಗಳಲ್ಲಿ ಸರ್ವತ್ರ ತಾಪಜನಕವಾಗುವುದು.

೪೩. ಇದು ಆತ್ಮನಿಗೆ ದೃಶ್ಯವಾಗಿದ್ದರೂ ಕೂಡ (ಅನಾತ್ಮವೆಂದು ತಿಳಿಯಲ್ಪಡುವುದಕ್ಕೆ ಯೋಗ್ಯವಾಗಿದ್ದರೂ) ಸರಿಯಾದ ವಿವೇಕವಿಲ್ಲದುದರಿಂದ ಇದನ್ನು ಕಿತ್ತೊಗೆಯಲು ಅಸಾಧ್ಯವಾಗಿರುವುದು. ಅದುಕಾರಣ ಕುಲಪರ್ವತ (ಶೈಲೇಂದ್ರ) ಕ್ಕೆ ಸಮಾನವಾದ ಭಾರದಿಂದ ಭಯಪ್ರದವಾಗಿರುವುದು. ಜರಾಮರಣಾದಿಗಳೆಂಬ ಶಾಖೋಪಶಾಖೆಗಳಿಂದ ಬಹುದೂರ ಹರಡಿಕೊಂಡು ಇದು ಸಂಸಾರವೆಂಬ ಅರಣ್ಯದೊಳಗೆ ವಿಷಮಯವಾದ ದುಷ್ಟವೃಕ್ಷದಂತೆ ಕಾಣುವುದು.

೪೪. ಒಂದು ಆಲದ (ಸೂಕ್ಷ್ಮವಾದ) ಬೀಜವು ಭಾವಿ ಮಹಾವಟವೃಕ್ಷವನ್ನು

ಚಿಂತಾನಲ ಶಿಖಾದಗ್ಧಂ ಕೋಪಾಜಗರಚರ್ವಿತಂ ।
ಕಾಮಾಬ್ಧಿಕಲ್ಲೋಲಹತಂ ವಿಸ್ಮೃತಾತ್ಮ ಪಿತಾಮಹಂ ॥ ೬೫ ॥

ಮೃಗಂ ಯೂಥಾದಿವ ಭ್ರಷ್ಟಂ ಶೋಕೋಪಹತಚೇತನಂ ।
ಪತಂಗಕಮಿವ ಜ್ವಾಲಾದಗ್ಧಂ ವಿಷಯಪಾವಕೇ ॥ ೬೬ ॥

ಛಿನ್ನಮೂಲಮಿವಾಂಭೋಜಂ ಪರಮಾಂ ಮ್ಲಾನಿಮಾಗತಂ ।
ಭಿನ್ನಾಂಗಮಾತ್ಮನಃ ಸ್ಥಾನಾದ್ವಿಶೇಷಾಸಂಗದುಃಸ್ಥಿತಂ ॥ ೬೭ ॥

(ಆಲದ ಮರ) ತನ್ನೊಳಗೆ ಅಡಗಿಸಿಕೊಂಡಿರುವಂತೆ ಸಾವಿರಾರು ಆಶಾಪಾಶಗಳನ್ನುಂಟುಮಾಡುವ ಉತ್ತಮವಾದ (ಭೋಗಾರ್ಹವಾದ) ಫಲಗಳಿಂದ ರಹಿತ (ಹೀನ.) ವಾದ ಈ ಸಮಸ್ತ ಸಂಸಾರವನ್ನೂ ಇದು ತನ್ನೊಳಗೆ ಧರಿಸಿಕೊಂಡಿದೆ.

೬೫. ಚಿಂತೆಗಳೆಂಬ ಅಗ್ನಿಜ್ವಾಲೆಗಳು ಇದನ್ನು ನಿರಂತರವೂ ಸುಡುತ್ತಿರುವುವು) ಕೋಪವೆಂಬ ಹೆಬ್ಬಾವು ಅಗಿದು ನುಂಗುತ್ತಿರುವುದು. ಕಾಮಗಳೆಂಬ ಸಮುದ್ರದ ದೊಡ್ಡ ಅಲೆಗಳು ಅಪ್ಪಳಿಸುತ್ತಿರುವುವು. ತನಗೆ ಕೂಟಸ್ಥನಾದ (ಮೂಲಕಾರಣ) ಬ್ರಹ್ಮನನ್ನು (ಪರಮಾತ್ಮನನ್ನು) (ಮೂಲಪುರುಷನಾದ ಅಜ್ಜನನ್ನು) ಇದು ಮರೆತು ಬಿಡುವುದು. (ಪಿತಾಮಹ-ತಂದೆಯ ತಂದೆ, ಅಜ್ಜ ಮತ್ತು ಬ್ರಹ್ಮ.)

(ತನ್ನ ವಂಶದ ಮೂಲಪುರುಷನನ್ನೇ ಮರೆಯುವವನು ಮಹಾಕೃತಘ್ನನಾದ ಪಾಪಿಯು.)

೬೬. ತನ್ನ ಗುಂಪಿನಿಂದ ತಪ್ಪಿಸಿಕೊಂಡು ಒಂಟಿಯಾದ ಒಂದು ಮೃಗದಂತೆ ಇದು ಶೋಕಗಳ ಕೋಟಲೆ (ಉಪಟಳ)ಗೆ ಸಿಕ್ಕಿಕೊಂಡು ಮಂಕಾಗಿರುವುದು. ಕಾಡು ಗಿಚ್ಚಿನ ಉರಿಯಿಂದ ಸುಟ್ಟುಹೋದ ಹಕ್ಕಿಯ ಮರಿಯಂತೆ (ಅಥವಾ ದೀಪದ ಜ್ವಾಲೆಯಿಂದ ದಗ್ಧವಾದ ಸಣ್ಣ ದೀಪದ ಹುಳದಂತೆ) ಈ ಮನಸ್ಸು, ವಿಷಯಗಳೆಂಬ ಬೆಂಕಿಯ ಭೋಗಲಾಲಸೆಗಳೆಂಬ ಜ್ವಾಲೆಗಳಿಂದ ದಗ್ಧವಾಗಿ ತಾಪಗೊಂಡಿರುವುದು.

೬೭. ಬೇರು ಕತ್ತರಿಸಿದ ಕಮಲ (ಬಳ್ಳಿ) ದಂತೆ ಬಹಳ ಹೆಚ್ಚಾಗಿ ಬಲು ಬೇಗ ಇದು ಕಳೆಗುಂದುವುದು. (ಉತ್ಸಾಹಶೂನ್ಯವಾಗುವುದು ಎಂದರ್ಥ.) ತನಗೆ ನಿವಾಸಸ್ಥಾನವಾದ ದೇಹ ಭೇದದ ದೆಸೆಯಿಂದ (ಅಂದರೆ ಒಂದು ದೇಹವನ್ನು ಮೃತ್ಯುವು ಅಪಹರಿಸಲು ಮತ್ತೊಂದು ದೇಹವನ್ನು ಸೇರುವಾಗ ಆಯುದೇಹಾಭಿ

ವಿಷಯಾದಿಷು ಮಧ್ಯಸ್ಥಂ ಚಿತ್ರರೂಪೇಷು ಶತ್ರುಷು ।
ದಶಾಸ್ವೇತಾಸ್ವನಂತಾಸು ಲುಠಿತಂ ಸಂಕಟಾನ್ವಿತಿ ॥ ೪೮ ॥

ದುಃಖೇ ನಿಪತಿತಂ ಘೋರೇ ವಿಹಂಗಃ ಸಾಗರೇ ಯಥಾ ।
ಸ್ವಬಂಧಾಸ್ಥಂ ಜಗಜ್ಜಾಲೇ ಶೂನ್ಯೇ ಗಂಧರ್ವಪತ್ತನೇ ॥ ೪೯ ॥

ಉಹ್ಯಮಾನಮನಾಸ್ಥಾಬ್ಧೌ ಮನೋ ವಿಷಯವಿದ್ರುತಂ ।
ಉದ್ಧರಾಮರಸಂಕಾಶ ಮಾತಂಗಮಿವ ಕರ್ದಮಾತ್ ॥ ೫೦ ॥

ಮಾನವು ವಿಚ್ಛೇದವಾಗುವ ಕಾರಣ) ಇದರ ದೇಹವು (ಅವಯವಗಳು) ಕತ್ತರಿಸಲ್ಪಡುವುದು. ಅದುಕಾರಣವೇ ಆಯಾ ದೇಹ ವಿಶೇಷಗಳಲ್ಲಿಯೇ ಇದು ವಿಶೇಷವಾದ ಆಸಕ್ತಿಯನ್ನು ಇಡುವುದರ ಮೂಲಕ ಅತ್ಯಂತ ದುರ್ದಶೆಗೆ (ದುಃಸ್ಥಿತಿಗೆ) ಈಡಾಗುವುದು.

೪೮. ನಾನಾ ವೈಚಿತ್ರಗಳಿಂದ ತನ್ನನ್ನು ಕೊಲ್ಲುವುದಕ್ಕೇ ಉದ್ಯತರಾಗಿರುವ ವಿಷಯ ಇಂದ್ರಿಯ ದೇಹಾದಿಗಳೆಂಬ ಶತ್ರುಗಳಲ್ಲಿ ಈ ಮನಸ್ಸು ಸಂಪೂರ್ಣವಾದ ವಿಶ್ವಾಸವನ್ನು (ನಂಬುಕೆ) ಇಟ್ಟುಕೊಂಡು ಅವರ ಮಧ್ಯದಲ್ಲಿಯೇ ಇದ್ದುಕೊಂಡಿದೆ. ಈ ಪ್ರಕಾರಗಳಿಂದ ಅತಿ ಸಂಕಟಕರವಾದ ಅನಂತವಾದ ಈ ದುರ್ದಶೆಗಳಲ್ಲಿ ಇದು ಬಿದ್ದು ಹೊರಳಾಡುತ್ತಿರುವುದು.

೪೯. ದೊಡ್ಡ ಸಾಗರದೊಳಗೆ ಪಕ್ಷಿಯಂತೆ ಇದು ಘೋರವಾದ ದುಃಖಸಾಗರದಲ್ಲಿ ಬಿದ್ದಿರುವುದು. ಗಂಧರ್ವನಗರ ಸದೃಶನಾಗಿ ಅತ್ಯಂತ ಶೂನ್ಯವಾದ ಈ ಜಗತ್ತೆಂಬ ಬಲೆಯೊಳಗೆ ತನ್ನ ಬಂಧನ ಹೇತುವಾದ ಅಭಿಮಾನದಲ್ಲಿಯೂ ತತ್ಸಾಧನವಾದ ದೇಹಾದಿಗಳಲ್ಲಿಯೂ ಇದು ಸ್ನೇಹಾತಿಶಯವುಳ್ಳದ್ದಾಗಿರುವುದು.

೫೦. ದೇವಸದೃಶನಾದ ರಾಮನೇ, ಈ ಮನಸ್ಸು ತತ್ತ್ವಜ್ಞಾನದ ವಿಷಯದಲ್ಲಿಯೂ ಅದರ ಸಾಧನೋಪಾಯಗಳಾದ ಶಾಸ್ತ್ರವಿಚಾರಾಭ್ಯಾಸಾದಿಗಳಲ್ಲಿಯೂ ಅನಾದರವುಳ್ಳದ್ದಾಗಿ ಈ ಅನಾದರವೆಂಬ ಅಪಾರವಾದ ಸಮುದ್ರದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವುದು. ವಿಷಯಗಳು [ಶಬ್ದಾದಿಗಳು] ಸಿಕ್ಕಿಕೊಂಡಿರುವ ಈ ಮನಸ್ಸನ್ನು ಕೆಸರಿನಿಂದ ಆನೆಯನ್ನು ಮೇಲಕ್ಕೆತ್ತುವಂತೆ ಬಹು ಪ್ರಯಾಸದಿಂದ ಅನಾದರವೆಂಬ ಸಮುದ್ರ ದೆಸೆಯಿಂದ ಉದ್ಧರಿಸಲು ತಕ್ಕ ಪ್ರಯತ್ನಮಾಡುವವನಾಗು.

(ಜನರು ಫಲಾಪೇಕ್ಷೆಯಿಂದ ಮಾಡಿದ ಪುಣ್ಯಕರ್ಮಗಳ ಫಲವನ್ನು ನಿಯತ

ಬಲೀವರ್ದವದಾಮಗ್ನಂ ಮನೋ ಮದನಪಲ್ವಲೇ ।
ಆಲೂನ ಶೀರ್ಣಾವಯವಂ ಬಲಾದ್ರಾಮ ಸಮುದ್ಧರ ॥ ೫೧ ॥

ಶುಭಾಶುಭಪ್ರಸರಪರಾಹತಾಕೃತೌ
ಜ್ವಲಜ್ಜರಾಮರಣವಿಷಾದಮೂರ್ಛಿತೇ ।
ಪಥೀಹ ಯಸ್ಯ ಮನಸಿ ಭೋ ನ ಜಾಯತೇ
ನರಾಕೃತಿರ್ಜಗತಿ ಸ ರಾಮ ರಾಕ್ಷಸಃ ॥ ೫೨ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಜೀವಾವತರಣಂ" ನಾಮ ದ್ವಿಚತ್ವಾರಿಂಶಃ ಸರ್ಗಃ

ಕಾಲದವರೆಗೆ ಅನುಭವಿಸಿ ಬಿಟ್ಟಬಳಿಕ ಕ್ಷೀಣಪುಣ್ಯರಾಗಿ ಸ್ವರ್ಗಲೋಕದಿಂದ ಭ್ರಷ್ಟರಾಗುವರು. "ಕ್ಷೀಣೇಪುಣ್ಯೇ ಮರ್ತ್ಯಲೋಕಂವಿಶಂತಿ")

೫೧. ಸ್ವಲ್ಪವೇ ನೀರುಳ್ಳ ಕೆಸರಿನ ಹೊಂಡದ ಮಧ್ಯದಲ್ಲಿ ಸಿಕ್ಕುಹಾಕಿ ಕೊಂಡಿರುವ ಒಂದು ಎತ್ತಿನ ಅವಯವಗಳು ತುಂಡಾಗಿ ಕತ್ತರಿಸಿಹೋಗಿಯೂ ಜರ್ಜರಿತವಾಗಿಯೂ ಇರುವಂತೆ ಈ ಮನಸ್ಸು ಮನ್ಮಥವಿಕಾರಗಳೆಂಬ ಕೆಸರು ಗುಂಡಿಯಲ್ಲಿ ಮುಳುಗಿ [ಸಿಕ್ಕಿಕೊಂಡು] [ಚಿರಕಾಲ ಸ್ವರ್ಗಸುಖಾದಿ ವಿಷಯೋಪ ಭೋಗದಿಂದ ಪುಣ್ಯವು ಕ್ಷೀಣವಾಗಲಾಗಿ ಪರಲೋಕಗಮನ ಸಾಧನವನ್ನೆಲ್ಲ ಕಳೆದುಕೊಂಡಿರುವಕಾರಣ] ಅದರ ಪಾದಾದ್ಯವಯುವಗಳು ತುಂಡಾಗಿರುವಂತೆಯೂ ಜರ್ಜರಿತವಾದಂತೆಯೂ ಆಗಿವೆ. ಅಯ್ಯ ರಾಮ, ಹೀಗೆ ದಿಕ್ಕುಕೆಟ್ಟು ಒದ್ದಾಡುತ್ತಿರುವ ಈ ಮನಸ್ಸನ್ನು ಕೆಸರು ಹೊಂಡದ ಮಧ್ಯದಿಂದ ಎತ್ತನ್ನು ಮೇಲಕ್ಕೆತ್ತುವಂತೆ ಮನ್ಮಥ ವಿಕಾರಗಳ ಮಧ್ಯದಿಂದ ಬಲಾತ್ಕಾರವಾಗಿ ಹೊರಕ್ಕೆ ತೆಗೆಯುವವನಾಗು.

[ಹೀಗೆ ಆತ್ಮನಿಗೆ ದೇಹಾದಿಗಳಲ್ಲಿ ಭ್ರಾಂತಿಯಿಂದ ತಾದಾತ್ಮ್ಯ ಸಂಸರ್ಗಾಧ್ಯಾಸವೆಂಬ ಅಹಂಕಾರಾದಿ ಬಂಧನವು ಕ್ರಮೇಣ ಪ್ರಾಪ್ತವಾಗುವುದು. ಇದು ಭ್ರಾಂತಿ ಕಲ್ಪಿತವು. (ಮಾಯಿಕವು) ವಾಸ್ತವವಲ್ಲ. ಪರಮಾರ್ಥತಃ ಬಂಧನವೆಂಬುದೇ ಇಲ್ಲ. ಈ ಮಾಯಕವಾದ ಅನರ್ಥನಿವಾರಣೆಗೆ ಆತ್ಮ ತತ್ತ್ವಸ್ವರೂಪ ಜ್ಞಾನವು ಒಂದೇ ಉಪಾಯ. ತತ್ತ್ವಜ್ಞಾನದಿಂದ ಅಜ್ಞಾನವು ಕಳೆದುಹೋದರೆ ಸಾಕು. ಅದೇ ಪರಮಪುರುಷಾರ್ಥ ಎಂದು ತಾತ್ಪರ್ಯ.]

೫೨. ಅಯ್ಯಾ ರಾಮ, ಈ ಮನಸ್ಸಿನ ನಿರ್ಮಲವಾದ ಆಕಾರವು ಶುಭಾಶುಭ ಕರ್ಮಗಳ ಪ್ರಸರಣೆಯಿಂದ ಮಲಿನವಾಗುವುದು. ಜರಾಮರಣವಿಷಾರಾದಿಗಳು

ಪ್ರಜ್ವಲಿಸುತ್ತ, ಇದನ್ನು ಆಕ್ರಮಿಸಿಕೊಂಡು ಮೂರ್ಛೆಗೊಳಿಸುವುವು. ಇಂತಹ ತನ್ನ ಮನಸ್ಸನ್ನು ಉದ್ಧರಿಸಿ ಸುರಕ್ಷಿತವಾಗಿಟ್ಟುಕೊಳ್ಳುವ ವಿಷಯದಲ್ಲಿ ಯಾವನಿಗೆ ಚಿಂತೆಯುಂಟಾಗುವುದಿಲ್ಲವೋ (ಅಥವಾ ಇಂತಹ ತನ್ನ ಮನಸ್ಸನ್ನು ನೋಡಿಯೂ ಯಾವನಿಗೆ ಹೃದಯದಲ್ಲಿ ಪಶ್ಚಾತ್ತಾಪವೂ (ವ್ಯಥೆಯು) ಉಂಟಾಗುವುದಿಲ್ಲವೋ) ಅವನು ಈ ಲೋಕದಲ್ಲಿ ನಿಜವಾಗಿಯೂ ಮನುಷ್ಯಾಕಾರನಾದ ರಾಕ್ಷಸನೇ; ಇದರಲ್ಲಿ ಸಂದೇಹವಿಲ್ಲ.

(ನಿತ್ಯನೈಮಿತ್ತಿಕ ಕರ್ಮಗಳಿಗೆ ಫಲವಿಲ್ಲದ ಕಾರಣ ಶುಭಕರ್ಮಗಳೆಂದರೆ ಕಾಮ್ಯವಿಹಿತ ಸುಕೃತಗಳು ಅಶುಭಕರ್ಮಗಳೆಂದರೆ ನಿಷಿದ್ಧಕರ್ಮಗಳು ಇವುಗಳಿಂದ ಮನಸ್ಸು ಮಲಿನವಾಗುವುದು ಸಹಜ.)

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ಜೀವಾವತರಣ" ಎಂಬ ನಾಲ್ವತ್ತೆರಡನೆಯ ಸರ್ಗವು.

ತ್ರಿಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಏವಂ ಜೀವಾಶ್ರಿತೋ ಭಾವಾ ಭವಭಾವನಯೋಹಿತಾಃ ।
ಬ್ರಹ್ಮಣಃ ಕಲ್ಪಿತಾಕಾರಾಲ್ಲಕ್ಷಶೋಽಪ್ಯಥ ಕೋಟಿಶಃ ॥ ೧ ॥

ಅಸಂಖ್ಯಾತಾಃ ಪುರಾ ಜಾತಾ ಜಾಯಂತೇ ಚಾಪಿ ವಾದ್ಯ ಭೋಃ ।
ಉತ್ಪತಿಷ್ಯಂತಿ ಚೈವಾಂಬುಕಣೌಘಾ ಇವ ನಿರ್ಝರಾತ್ ॥ ೨ ॥

ಸ್ವವಾಸನಾದಶಾವೇಶಾದಾಶಾವಿವಶತಾಂ ಗತಾಃ ।
ದಶಾಸ್ವಿತಿವಿಚಿತ್ರಾಸು ಸ್ವಯಂ ನಿಗಡಿತಾಶಯಾಃ ॥ ೩ ॥

ನಲವತ್ತಮೂರನೆಯ ಸರ್ಗ

೧-೨. ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಮ, ಪೂರ್ವ ಸರ್ಗೋಕ್ತ ಪ್ರಕಾರವಾಗಿ ಚಿತ್ತಿನ ಔಪಾಧಿಕ ವಿವಿಧ ವಿಭಾವರೂಪಗಳಾದ ಜೀವರುಗಳು ಸಂಸಾರ ವಾಸನೆಯಿಂದ ಜನನಮರಣ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವರು. ಗಿರಿ ನದೀ ಪ್ರವಾಹದ ದೆಸೆಯಿಂದ ಜಲಬಿಂದು ಸಮುದಾಯಗಳು ಕೋಟಿ ಕೋಟಿಗಳಾಗಿ ಹುಟ್ಟುವಂತೆ ಪೂರ್ವ ವಾಸನಾನುಗುಣವಾಗಿ ಕಲ್ಪಿತವಾದ ಆಕಾರವುಳ್ಳ ಪರಬ್ರಹ್ಮದ ದೆಸೆಯಿಂದ ಲಕ್ಷೋಪಲಕ್ಷಗಳಾಗಿಯೂ ಕೋಟ್ಯನುಕೋಟಿಗಳಾಗಿಯೂ ಅಸಂಖ್ಯಾತವಾಗಿ ಪೂರ್ವಕಾಲದಲ್ಲಿಯೇ ಜನಿಸಿರುವುವು. ಈಗಲೂ ಹುಟ್ಟುತ್ತಿರುವುವು ಮತ್ತು ಇನ್ನು ಮುಂದೆಯೂ ಹುಟ್ಟುತಕ್ಕವುಗಳಾಗಿಯೂ ಇರುವುವು.

೩. ಈ ಜೀವರುಗಳು, ತಮ್ಮ ತಮ್ಮ ವಾಸನಾನುಗುಣವಾಗಿ ನಾನಾ ಅವಸ್ಥೆಗಳ ಅವೇಶವನ್ನೂ ಹೊಂದಿ ಆಶೆಗಳಿಗೆ ಆಧೀನವಾಗಿ ಅತಿ ವಿಚಿತ್ರಗಳಾದ ನಾನಾ ಅವಸ್ಥೆಗಳಲ್ಲಿ ಬಂಧಿಸಲ್ಪಟ್ಟ ಮನಸ್ಸುಳ್ಳವರಾಗಿರುವರು.

ಅನಾರತಂ ಪ್ರತಿದಿಶಂ ದೇಶೇದೇಶೇ ಜಲೇ ಸ್ಥಲೇ ।
ಜಾಯಂತೇ ವಾ ಮ್ರಿಯಂತೇ ವಾ ಬುದ್ಬುದಾ ಇವ ವಾರಿಣಿ ॥ ೪ ॥

ಕೇಚಿತ್ಪ್ರಥಮಜನ್ಮಾನಃ ಕೇಚಿಜ್ಜನ್ಮಶತಾಧಿಕಾಃ ।
ಕೇಚಿದ್ವಾ ಜನ್ಮಸಂಖ್ಯಾಕಾ ಕೇಚಿದ್ವಿತ್ರಿಭವಾಂತರಾಃ ॥ ೫ ॥

ಭವಿಷ್ಯಜ್ಜಾತಯಃ ಕೇಚಿದ್ಭೂತಭವೋದ್ಭವಾಃ ।
ವರ್ತಮಾನಭವಾಃ ಕೇಚಿತ್ ಕೇಚಿತ್ತ್ವಭವತಾಂ ಗತಾಃ ॥ ೬ ॥

ಕೇಚಿತ್ಕಲ್ಪಸಹಸ್ರಾಣಿ ಜಾಯಮಾನಾಃ ಪುನಃ ಪುನಃ ।
ಏಕಾಮೇವಾಸ್ಥಿತಾ ಯೋನಿಂ ಕೇಚಿದ್ಯೋನ್ಯಂತರಂ ಶ್ರಿತಾಃ ॥ ೭ ॥

---

೪. ನೀರಿನಲ್ಲಿ ಬುದ್ಬುದಗಳು (ಬುಡ್ಡೆ-ಗುಳ್ಳೆ) ಉದ್ಭವಿಸುತ್ತಲೂ ಕಣ್ಮರೆಯಾಗುತ್ತಲೂ ಇರುವಂತೆ ಪ್ರತಿಯೊಂದು ದಿಕ್ಕಿನಲ್ಲಿಯೂ, ಪ್ರತಿಯೊಂದು ದೇಶದಲ್ಲಿಯೂ, ಜಲದಲ್ಲಿಯೂ, ನೆಲದಲ್ಲಿಯೂ ಸಂತತವೂ ವಿಚ್ಛಿತ್ತಿಯೇ ಇಲ್ಲದೆ ಹುಟ್ಟುತ್ತಲೂ ಸಾಯುತ್ತಲೂ ಇರುವರು.

೫. ಕೆಲವು ಜೀವಗಳು ಈ ಕಲ್ಪದಲ್ಲಿ ಇದೇ ಮೊದಲನೆಯದಾದ ಒಂದೇ ಜನ್ಮವನ್ನೂ ಪಡೆದವುಗಳಾಗಿರುವುವು. ಕೆಲವು ನೂರಾರು ಜನ್ಮಗಳಿಗಿಂತ ಹೆಚ್ಚಾಗಿ ಜನ್ಮಗಳನ್ನು ಪಡೆದವುಗಳಾಗಿವೆ. ಕೆಲವು ಅಸಂಖ್ಯಾತವಾದ ಜನ್ಮಗಳನ್ನು ಎತ್ತಿರುವುವು. ಕೆಲವು ಎರಡು ಅಥವಾ ಮೂರು ಜನ್ಮಾಂತರಗಳನ್ನೂ ಪಡೆದವುಗಳಾಗಿವೆ.

೬. ಕೆಲವು ಜೀವಗಳು ಮುಂದಿನ ಕಲ್ಪಗಳಲ್ಲಿ ಜನ್ಮಗಳನ್ನು ಪಡೆಯುತಕ್ಕವುಗಳು. ಕೆಲವು ಜೀವಗಳ ಸಂಸಾರ ಜನ್ಮಗಳು ಕಳೆದುಹೋಗಿ (ಅತೀತವಾಗಿ) ಈಗ ಜೀವನ್ಮುಕ್ತರಾಗಿರುವುವು. ಕೆಲವು ಈಗ ಈ ಕಲ್ಪದಲ್ಲಿ ಜನ್ಮವೆತ್ತುತ್ತಿರುವುವು. ಮತ್ತೆ ಕೆಲವಾದರೋ ಜನ್ಮವೇ ಇಲ್ಲದವುಗಳಾಗಿವೆ. (ಅಂದರೆ ನಿತ್ಯಮುಕ್ತರಾಗಿಯೇ ಇವೆ.

೭. ಕೆಲವು ಜೀವಗಳು ಸಾವಿರಾರು ಕಲ್ಪಗಳು ಪುನಃ ಪುನಃ ಜನ್ಮವನ್ನೂ ಎತ್ತುತ್ತಿದ್ದರೂ ಒಂದೇ ಬಗೆಯಾದ ದೇಹ ಜಾತಿಯನ್ನೂ ಪಡೆಯುತ್ತಿರುವುವು. ಮತ್ತೆ ಕೆಲವಾದರೋ ಪ್ರತಿಯೊಂದು ಸಲವೂ ಒಂದೊಂದು ಕಲ್ಪದಲ್ಲಿಯೂ ಬೇರೆ ಬೇರೆ ದೇಹ ಜಾತಿಯನ್ನೂ ಆಶ್ರಯಿಸಿರುವುವು.

ಕೇಚಿನ್ಮಹಾದುಃಖಸಹಾಃ ಕೇಚಿದಲ್ಪೋದಯಾಃ ಸ್ಥಿತಾಃ ।
ಕೇಚಿದತ್ಯಂತಮುದಿತಾಃ ಕೇಚಿದರ್ಕಾದಿವೋದಿತಾಃ ॥ ೮ ॥

ಕೇಚಿತ್ಕಿನ್ನರಗಂಧರ್ವ ವಿದ್ಯಾಧರಮಹೋರಗಾಃ ।
ಕೇಚಿದರ್ಕೇಂದ್ರವರುಣಾಸ್ತ್ರ್ಯಕ್ಷಾಧೋಕ್ಷಜಪದ್ಮಜಾಃ ॥ ೯ ॥

ಕೇಚಿತ್ಕೂಶ್ಮಾಂಡವೇತಾಲಯಕ್ಷರಕ್ಷಃ ಪಿಶಾಚಿಕಾಃ ।
ಕೇಚಿದ್ಬ್ರಾಹ್ಮಣಭೂಪಾಲಾ ವೈಶ್ಯಶೂದ್ರಗಣಾಃ ಸ್ಥಿತಾಃ ॥ ೧೦ ॥

ಕೇಚಿಚ್ಛ್ವಪಚಚಾಂಡಾಲಕಿರಾತಾವೇಷಪುಷ್ಕಸಾಃ ।
ಕೇಚಿತ್ತೃಣೌಷಧೀ ಕೇಚಿತ್ಫಲಮೂಲಪತಂಗಕಾಃ ॥ ೧೧ ॥

---

೮. ಕೆಲವು ಜೀವಗಳು ಕಿರ್ಯಗ್ಯೋನಿಗಳಲ್ಲಿ ಜನಿಸಿ ಸದಾ ನರಕದಲ್ಲಿ ಬಿದ್ದು ಮಹಾ ಯಾತನೆಗಳನ್ನು ಅನುಭವಿಸುವವು. ಕೆಲವು ಮನುಷ್ಯಾದಿ ಮಧ್ಯಮ ಯೋನಿಯಲ್ಲಿ ಜನಿಸಿ ಅಲ್ಲಿ ಸುಖಾನುಭವವನ್ನೂ ಮಾಡತಕ್ಕವುಗಳಾಗಿವೆ. ಕೆಲವು ಜೀವಗಳು ಉತ್ತಮವಾದ ದೇವಯೋನಿಯನ್ನು ಹೊಂದಿ ಅತ್ಯಂತ ಅಧಿಕ ಸುಖವನ್ನೂ ಅನುಭವಿಸುತ್ತಿರುವುವು. ಇನ್ನೂ ಕೆಲವಾದರೋ ಸೂರ್ಯನ ದೆಸೆಯಿಂದ ಉದಯಹೊಂದಿದವುಗಳಂತೆ ಸತ್ಯಲೋಕದಲ್ಲಿದ್ದುಕೊಂಡು ಸುಖಿಸುವುವು.

೯. ಕೆಲವು ಜೀವಗಳು ಕಿನ್ನರ, ಗಂಧರ್ವ, ವಿದ್ಯಾಧರ, ಮಹಾಸರ್ಪ ಇತ್ಯಾದಿಗಳ ರೂಪವನ್ನೂ ಹೊಂದುವುವು. ಮತ್ತೆ ಕೆಲವು ಸೂರ್ಯ. ಇಂದ್ರ, ವರುಣ, ತ್ರಿಣಯನ (ಈಶ್ವರ) ವಿಷ್ಣು, ಬ್ರಹ್ಮ ಇತ್ಯಾದಿ ದೇವಾಧೀಶ್ವರರ ಸಾರೂಪ್ಯವನ್ನೂ ಪಡೆಯುವುವು.

೧೦. ಕೆಲವು ಜೀವಗಳು ಕೂಶ್ಮಾಂಡ, ಬೇತಾಳ, ಯಕ್ಷ, ರಾಕ್ಷಸ, ಪಿಶಾಚಾದಿಗಳ ರೂಪವನ್ನೂ ಧರಿಸುವುವು. ಮತ್ತೆ ಕೆಲವು ಜೀವಗಳು, ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ಉತ್ತಮ ಯೋನಿಗಳಲ್ಲಿ ಅವರವರ ಕರ್ಮವಾಸನಾನುಗುಣವಾಗಿ ಜನಿಸುವುವು.

೧೧. ಕೆಲವು ಜೀವಗಳು ಶ್ವಪಚ, ಚಾಂಡಾಲ, ಕಿರಾತ, ಪುಲ್ಕಿಸ ಮುಂತಾದ ನೀಚ ಜಾತಿಗಳಲ್ಲಿ ಜನಿಸುವುವು.. ಮತ್ತೆ ಕೆಲವು ತೃಣ (ಹುಲ್ಲು) ಗಳಾಗಿಯೂ ಔಷಧಿಗಳಾಗಿಯೂ ಜನಿಸುವುವು. ಬೇರೆ ಕೆಲವು ಫಲ, ಮೂಲ, (ಮೂಲಂಗಿ ಗೆಣಸು ಮುಂತಾದುವು) ಪಕ್ಷಿಗಳಾಗಿ ಹುಟ್ಟುವವು.

ಕೇಚಿಚ್ಚಿತ್ರಲತಾಗುಲ್ಮತೃಣೋಪಲದೃಶೋಽಭಿತಃ ।
ಕೇಚಿತ್ಕದಂಬಜಂಬೀರಶಾಲತಾಲತಮಾಲಕಾಃ ॥ ೧೨ ॥

ಕೇಚಿದ್ವಿಭವಸಂಸಾರಮಂತ್ರಿಸಾಮಂತಭೂಮಿಪಾಃ ।
ಕೇಚಿಚ್ಚೀರಾಂಬರಾಚ್ಛನ್ನಾ ಮುನಿಮೌನಮುಪಸ್ಥಿತಾಃ ॥ ೧೩ ॥

ಕೇಚಿದ್ಭುಜಂಗಗೋನಾಸಕೃಮಿಕೀಟಪಿಪಿಲಿಕಾಃ ।
ಕೇಚಿನ್ಮೃಗೇಂದ್ರಮಹಿಷಮೃಗಾಜಚಮರೈಣಕಾಃ ॥ ೧೪ ॥

---

೧೨. ಕೆಲವು ಜೀವಗಳು ವಿಚಿತ್ರಗಳಾದ ನಾನಾಲತೆಗಳಾಗಿಯೂ, ಗುಲ್ಮ (ಪೊದೆ) ಗಳಾಗಿಯೂ, ಸಸ್ಯಗಳಾಗಿಯೂ, ಪರ್ವತಗಳಾಗಿಯೂ, ಸುತ್ತಲೂ ಕಾಣಿಸಿ ಕೊಳ್ಳುವುವು. ಕೆಲವು ಜೀವಗಳು ಕದಂಬ, ಜಂಬೀರ (ನಿಂಬೆ) ಸಾಲ, (ಸಜ್ಜೆಮರ) ತಾಲ (ತಾಳೆ) ತಮಾಲ [ಹೊಂಗೆ] ಇತ್ಯಾದಿ ವೃಕ್ಷರೂಪವಾಗಿಯೂ ಗೋಚರಿಸುವುವು.

[ಉಪಲಂ ಪಶ್ಯಂತಿ ಸ್ವದೇಹತಯಾ ಇತಿ ಕಲ್ಲುಗಳನ್ನು ತಮ್ಮ ದೇಹವಾಗಿ ನೋಡತಕ್ಕವುಗಳು. ಉಪಲದೃಶಃ-ಪರ್ವತಾಃ ಎಂದು ತಾ. ಪ್ರ.]

೧೩. ಕೆಲವು ಜೀವಗಳು ವಿಶೇಷವಾದ ವೈಭವದಿಂದ ಸಂಚರಿಸುವ ಮಂತ್ರೀಶ್ವರರಾಗಿಯೂ, ಸಾಮಂತ ರಾಜರಾಗಿಯೂ, ಚಕ್ರವರ್ತಿಗಳಾಗಿಯೂ, ಜನಿಸುವುವು. ಇನ್ನೂ ಕೆಲವು ಜೀವಗಳು ನಾರುಮಡಿಗಳನ್ನುಟ್ಟುಕೊಂಡು, ಮುನಿಗಳಾಗಿದ್ದು ಕೊಂಡು ಮೌನವ್ರತವನ್ನು ಧರಿಸಿರುವುವು.

[ವಿಭವೈಃ, ಸಂಸರಂತಿ, ಭ್ರಮಂತಿ ಇತಿ ವಿಭವ ಸಂಸರಾಃ ಎಂದರ್ಥ ಮಾಡಿದೆ. ತಾ. ಪ್ರ.]

೧೪. ಕೆಲವು ಜೀವಗಳು ಭುಜಂಗ, ಗೋನಾಸ, ಕೃಮಿ, ಕೀಟ, ಪಿಪೀಲಿಕಾ ಜನ್ಮಗಳನ್ನು ಪಡೆಯುವುವು. ಕೆಲವು ಜೀವಗಳು ಸಿಂಹ, ಮಹಿಷ [ಕೋಣ], ಮೃಗ [ಜಿಂಕೆ], ಅಜ [ಹೋತ], ಚಮರಮೃಗ ಮತ್ತು ಕೃಷ್ಣಸಾರ [ಏಣಕ] ವೆಂಬ ಹುಲ್ಲೆಗಳಾಗಿ ಉದ್ಭವಿಸುವುವು.

[ಭುಜಂಗ–ಹಾವು, ಗೋನಾಸ-ಅಜಗರ, ಹೆಬ್ಬಾವು, ಕೃಮಿ-ಹುಳ, ಕೀಟ-ಚೇಳು ಮುಂತಾದುವು. ಪಿಪೀಲಿಕಾ-ಇರುವೆ.]

ಕೇಚಿತ್ಸಾರಸಚಕ್ರಾಹ್ವಾ ಬಲಾಕಾ ಬಕಕೋಕಿಲಾಃ ।
ಕೇಚಿತ್ಕಮಲಕಲ್ಹಾರಕುಮುದೋತ್ಪಲತಾಂ ಗತಾಃ ॥ ೧೫ ॥

ಕೇಚಿತ್ಕಲಭಮಾತಂಗವರಾಹವೃಷಗರ್ದಭಾಃ ।
ಕೇಚಿದ್ದ್ವಿರೇಫಮಶಕಾಃ ಪುತ್ತಿಕಾದಂಶವಂಶಜಾಃ ॥ ೧೬ ॥

ಕೇಚಿದಾಪದ್ಬಲಾಕ್ರಾಂತಾಃ ಕೇಚಿತ್ಸಂಪದಮಾಗತಾಃ ।
ಕೇಚಿತ್ ಸ್ಥಿತಾಃ ಸ್ವರ್ಗಪುರೇ ಕೇಚಿನ್ನರಕಮಾಸ್ಥಿತಾಃ ॥ ೧೭ ॥

ಋಕ್ಷಚಕ್ರಗತಾಃ ಕೇಚಿದ್ವೃಕ್ಷರಂಧ್ರಗತಾಃ ಪರೇ ।
ವಾತಭೂತಾಃ ಸ್ಥಿತಾಃ ಕೇಚಿತ್ ಕೇಚಿದ್ವ್ಯೋಮಪದೇ ಸ್ಥಿತಾಃ ॥ ೧೮ ॥

---

೧೫. ಕೆಲವು ಜೀವಗಳು ಸಾರಸ [ನೀರುಹಕ್ಕಿ] ಚಕ್ರವಾಕ, ಬಲಾಕಾ [ಒಂದು ಬಗೆಯ ಹಂಸ, ಬಕ, ಕೋಗಿಲೆ ಮುಂತಾದ ಹಕ್ಕಿಗಳ ಯೋನಿಗಳಲ್ಲಿ ಉದಯಿಸುವುವು. ಇನ್ನು ಕೆಲವು ಜೀವಗಳು ಕಮಲ, ಕಲ್ಹಾರ, ಕುಮುದ [ಬಿಳಿದಾವರೆ] ಉತ್ಪಲ [ನೀಲವರ್ಣದ ತಾವರೆ] ಇತ್ಯಾದಿ ಪುಷ್ಪಗಳ ರೂಪದಲ್ಲಿ ಉದ್ಭವಿಸುವುವು.

೧೬. ಕೆಲವು ಜೀವಗಳು ಆನೆಮರಿಗಳಾಗಿಯೂ, ಮದಿಸಿದ ಆನೆಗಳಾಗಿಯೂ, ವರಾಹ [ಹಂದಿ], ವೃಷ [ಎತ್ತು], ಗರ್ದಭ [ಕತ್ತೆ] ಗಳ ರೂಪವಾಗಿಯೂ ಜನಿಸುವುವು. ಬೇರೆ ಕೆಲವು ಜೀವಗಳು ದುಂಬಿಗಳು, ಸೊಳ್ಳೆಗಳು, ಗೆದ್ದಲು, ಕಾಡುನೊಣ, ಇತ್ಯಾದಿಗಳ ವಂಶದಲ್ಲಿ ಜನ್ಮವೆತ್ತುವುವು.

[ಪುತ್ತಿಕಾ–ಗೆದ್ದಲು, ದಂಶಃ–ಕಾಡುನೊಣ, ಮಶಕಃ–ಸೊಳ್ಳೆ.]

೧೭. ಕೆಲವು ಜೀವಗಳು ಅತಿ ಪ್ರಬಲವಾದ ವಿಪತ್ತುಗಳಿಗೆ ಒಳಗಾಗುವುವು. ಕೆಲವು ಜೀವಗಳು ವಿಶೇಷವಾದ ಸಂಪತ್ತನ್ನು ಅನುಭವಿಸುವುವು. ಕೆಲವು ಸ್ವರ್ಗಲೋಕಕ್ಕೆ ಹತ್ತುವುವು. ಇನ್ನು ಕೆಲವು ಜೀವಗಳಾದರೋ ರೌರವಾದಿ ನರಕಗಳಲ್ಲಿ ಬೀಳುವುವು.

೧೮. ಕೆಲವು ಜೀವಗಳು ನಕ್ಷತ್ರ ಮಂಡಲದಲ್ಲಿದ್ದುಕೊಂಡು ಹೊಳೆಯುತ್ತಿರುವುವು. ಇನ್ನು ಕೆಲವಾದರೋ ವೃಕ್ಷಗಳ ರಂಧ್ರಗಳನ್ನು (ಪೊಟ್ಟರೆ) ಸೇರಿ ವಾಸಿಸುವುವು. ಕೆಲವು ಜೀವಗಳು ವಾಯುರೂಪಗಳಾಗಿರುವವು. ಕೆಲವು ಜೀವಗಳು ಗಗನ ಮಂಡಲದಲ್ಲಿ ನಿಂತಿರುವವು.

ಸೂರ್ಯಾಂಶುಷು ಸ್ಥಿತಾಃ ಕೇಚಿತ್ಕೇಚಿದಿಂದ್ವಂಶುಷು ಸ್ಥಿತಾಃ ।
ಕೇಚಿತ್ತೃಣಲತಾಗುಲ್ಮ ರಸಸ್ವಾದುಷ್ವವಸ್ಥಿತಾಃ ॥ ೧೯ ॥

ಜೀವನ್ಮುಕ್ತಾ ಭ್ರಮಂತೀಹ ಕೇಚಿತ್ಕಲ್ಯಾಣಭಾಜನಾಃ ।
ಚಿರಮುಕ್ತಾಃ ಸ್ಥಿತಾಃ ಕೇಚಿನ್ನೂನಂ ಪರಿಣತಾಃ ಪರೇ ॥ ೨೦ ॥

ಕೇಚಿಚ್ಚಿರೇಣ ಕಾಲೇನ ಭವಿಷ್ಯನ್ಮುಕ್ತಯಃ ಶಿವಾಃ ।
ಕೇಚಿದ್ದ್ವಿಷಂತಿ ಚಿದ್ಭಾವಾಃ ಕೇವಲೀ ಭಾವಮಾತ್ಮನಃ ॥ ೨೧ ॥

(ಋಕ್ಷ ಚಕ್ರಂ-ನಕ್ಷತ್ರಮಂಡಲ. ಆವಹ, ಪ್ರವಹ, ಸಂವಹ, ಉದ್ವಹ, ವಿವಹ, ಪರಿವಹ, ಪರಾವಹ ಎಂಬಿವು ಏಳು ವಾಯುಗತಿಗಳು.)

೧೯. ಕೆಲವು ಜೀವಗಳು ಸೂರ್ಯನ ಕಿರಣಗಳಲ್ಲಿರುವವು. ಮತ್ತೆ ಕೆಲವು ಚಂದ್ರಕಿರಣಗಳಲ್ಲಿವೆ. ಕೆಲವು ಜೀವಗಳು ತೃಣಲತಾ ಗುಲ್ಮಗಳ (ಹುಲ್ಲು, ಲತೆ, ಪೊದೆ) ರಸವು ರುಚಿಕರವಾಗಿ (ಸ್ವಾದು) ಉಳ್ಳ ಪಶ್ವಾದಿಯೋಗ್ಯವಾದ ವಿಷಯ ಲಾಂಪಟ್ಯದಲ್ಲಿ ಇರುವುವು.

(ಸೂರ್ಯನ ಕಿರಣಗಳಲ್ಲಿ ರಸಗ್ರಹಣಾದ್ಯಧಿಕಾರದಲ್ಲಿ, ಚಂದ್ರಕಿರಣಗಳಲ್ಲಿ ಓಷಧಿಗಳನ್ನು ತಂಪುಗೊಳಿಸುವ ಅಧಿಕಾರದಲ್ಲಿ ಎಂದು ತಾ. ಪ್ರ.)

೨೦. ಶುಭ ಕರ್ಮಯುಕ್ತಗಳಾದ ಕೆಲವು ಜೀವಗಳು ಜೀವನ್ಮುಕ್ತ ಸ್ಥಿತಿಯಲ್ಲಿದ್ದುಕೊಂಡು ಈ ಲೋಕದಲ್ಲಿ ಸಂಚರಿಸುವವು. ಕೆಲವು ಜೀವರುಗಳು ಚಿರಮುಕ್ತರಾಗಿ (ಬಹುಕಾಲದ ಹಿಂದೆಯೇ ಮುಕ್ತರಾಗಿ) ಪರಮಾತ್ಮನಲ್ಲಿ ಅದ್ವಿತೀಯಾತ್ಮಭಾವದಿಂದ ನಿಜವಾಗಿಯೂ ಐಕ್ಯವನ್ನು ಹೊಂದಿ ಸ್ವಸ್ಥರಾಗಿರುವರು.

೨೧. ಶುಭಕರ್ಮಯುಕ್ತಗಳಾದ (ಪುಣ್ಯಾತ್ಮಗಳಾದ) ಕೆಲವು ಜೀವಗಳು ಇನ್ನುಮುಂದೆ ಬಹುಕಾಲಾನಂತರ ಮುಕ್ತಿಯನ್ನು ಹೊಂದತಕ್ಕವುಗಳಾಗಿರುವುವು. ಕೆಲವು ಜೀವಗಳು ಭೋಗಲಂಪಟಗಳಾಗಿದ್ದುಕೊಂಡು ತಮ್ಮ ಕೈವಲ್ಯವನ್ನು ದ್ವೇಷಿಸುವುವು. (ತಮಗೆ ಮೋಕ್ಷವಾಗಬೇಕೆಂಬುದರಲ್ಲಿ ಆದರವನ್ನು ತೋರುವುದಕ್ಕೆ ಬದಲಾಗಿ ದ್ವೇಷವನ್ನು ತೋರುವವು.)

[ಚಿದ್ಭಾವಾಃ-ಜೀವಾಃ.]

ಕೇಚಿದ್ವಿಶಾಲಾಃ ಕಕುಭಃ ಕೇಚಿನ್ನದ್ಯೋ ಮಹಾರಯಾಃ ।
ಕೇಚಿತ್‌ಸ್ತ್ರಿಯಃ ಕಾಂತದೃಶಃ ಕೇಚಿತ್‌ಷಂಡನಪುಂಸಕಾಃ ॥ ೨೨ ॥

ಕೇಚಿತ್ಪ್ರಬುದ್ಧಮತಯಃ ಕೇಚಿಜ್ಜಡತರಾಶಯಾಃ ।
ಕೇಚಿತ್ ಜ್ಞಾನೋಪದೇಷ್ಟಾರಃ ಕೇಚಿದಾತ್ತ ಸಮಾಧಯಃ ॥ ೨೩ ॥

ಜೀವಾಃ ಸ್ವವಾಸನಾವೇಶವಿವಿಶಾಶಯತಾಂ ಗತಾಃ ।
ಏತಾಸ್ತ್ವೇತಾಸ್ವವಸ್ಥಾಸು ಸಂಸ್ಥಿತಾ ಬದ್ಧಭಾವನಾಃ ॥ ೨೪ ॥

ವಿಹರಂತಿ ಜಗತ್ಕೇಚಿತ್ ನಿಪತಂತ್ಯುತ್ಪತಂತಿ ಚ ।
ಕಂದುಕಾ ಇವ ಹಸ್ತೇನ ಮೃತ್ಯುನಾಽವಿರತಂ ಹತಾಃ ॥ ೨೫ ॥

---

೨೨. ಕೆಲವು ಜೀವಗಳು ವಿಶಾಲವಾದ ದಿಕ್ಕುಗಳ ಅಧಿದೇವತೆಗಳಾಗಿಯೂ, ಕೆಲವು ಬಹುವೇಗದಿಂದ ಪ್ರವಹಿಸುವ ನದಿಗಳ ಅಭಿಮಾನಿ ದೇವತೆಗಳಾಗಿಯೂ ಇರುವುವು. ಇನ್ನೂ ಕೆಲವು ಜೀವಗಳು ಸುಂದರವಾದ ನಯನಗಳುಳ್ಳ ಲಲನಾ ಮಣಿಗಳಾಗಿಯೂ, ಮತ್ತೆ ಕೆಲವು ಜೀವಗಳು ಷಂಡರಾಗಿಯೂ (ಪುಂಸ್ತ್ವ ರಹಿತ ರಾಗಿಯೂ), ನಪುಂಸಕರಾಗಿಯೂ ಇರುವರು.

೨೩. ಕೆಲವು ಜೀವಗಳು ಪ್ರಬುದ್ಧಮತಿಗಳಾಗಿಯೂ, (ವಿಶೇಷಜ್ಞಾನ ಸಂಪನ್ನ ವಾದ ತೀಕ್ಷ್ಣ ಬುದ್ಧಿಯುಳ್ಳವರು) ಕೆಲವು ಜೀವಗಳು ಅತಿ ಜಡಮನಸ್ಸುಳ್ಳವರಾ ಗಿಯೂ, ಕೆಲವರು ಜ್ಞಾನೋಪದೇಶಕರಾಗಿಯೂ ಕೆಲವು ಜೀವಗಳು ಸಮಾಧಿನಿಷ್ಠ ರಾಗಿಯೂ ಇರುವರು (ವುವು.)

೨೪. ಹೀಗೆ ಈ ಜೀವಗಳು ತಮ್ಮ ತಮ್ಮ ವಾಸನೆಗಳ ಆವೇಶಕ್ಕೆ ಅಧೀನವಾದ ಚಿತ್ತವೃತ್ತಿಯುಳ್ಳವುಗಳಾಗಿ ಆಯಾ ಅವಸ್ಥೆಗಳಲ್ಲಿ ತಮ್ಮ ಭಾವನೆಗಳನ್ನು ಸ್ಥಿರಪಡಿಸಿ ಕೊಂಡು ಇರುವುವು.

೨೫. ಬೇರೆ ಕೆಲವು ಜೀವಗಳು ಕೈಯಿಂದ ಕೆಳಕ್ಕೆ ಹೊಡೆಯಲ್ಪಡುತ್ತಿರುವ ರಬ್ಬರಿನ ಚೆಂಡಿನಂತೆ ಮೃತ್ಯುವಿನಿಂದ ನಿರಂತರವೂ ಹೊಡೆಯಲ್ಪಟ್ಟವುಗಳಾಗಿ ಭೂ ಲೋಕದಲ್ಲಿ ವಿಹರಿಸುವರು. ನರಕದಲ್ಲಿ ಬೀಳುವರು. ಮತ್ತೆಯೂ ಸ್ವರ್ಗಕ್ಕೆ ಹಾರುವರು.

ಆಶಾಪಾಶಶತಾಬದ್ಧಾ ವಾಸನಾಭಾವದಾರಿಣಃ ।
ಕಾಯಾತ್ಕಾಯಮುಪಾಯಂತಿ ವೃಕ್ಷಾದ್ವೃಕ್ಷಮಿವಾಂಡಜಾಃ ॥ ೨೬ ॥

ಅನಂತಾನಂತ ಸಂಕಲ್ಪಕಲ್ಪನೋತ್ಪಾದಮಾಯಯಾ ।
ಇಂದ್ರಜಾಲಂ ವಿತನ್ವಾನಾ ಜಗನ್ಮಯಮಿದಂ ಮಹತ್ ॥ ೨೭ ॥

ತಾವದ್ಭ್ರಮಂತಿ ಸಂಸಾರೇ ವಾರಿಣ್ಯಾವರ್ತರಾಶಯಃ ।
ಯಾವನ್ಮೂಢಾ ನ ಪಶ್ಯಂತಿ ಸ್ವಮಾತ್ಮಾನಮನಿಂದಿತಂ ॥ ೨೮ ॥

ದೃಷ್ಟ್ವಾತ್ಮಾನಮಸತ್ಯಕ್ತ್ವಾ ಸತ್ಯಮಾಸಾದ್ಯ ಸಂವಿದಂ ।
ಕಾಲೇನ ಪದಮಾಗತ್ಯ ಜಾಯಂತೇ ನೇಹ ತೇ ಪುನಃ ॥ ೨೯ ॥

ಭುಕ್ತ್ವಾ ಜನ್ಮಸಹಸ್ರಾಣಿ ಭೂಯಃ ಸಂಸಾರಸಂಕಟೇ ।
ಪತಂತಿ ಕೇಚಿದಬುಧಾಃ ಸಂಪ್ರಾಪ್ಯಾಪಿ ವಿವೇಕಿತಾಂ ॥ ೩೦ ॥

---

೨೬. ಹೀಗೆ ಈ ಜೀವಗಳು ನೂರಾರು ಬಗೆಗಳಾದ ಆಶೆಗಳೆಂಬ ಪಾಶಗಳಿಂದ ಚೆನ್ನಾಗಿ ಬಂಧಿಸಲ್ಪಟ್ಟವುಗಳಾಗಿ ತಮ್ಮ ವಾಸನಾನುಗುಣವಾದ ದೇಹಾದಿಗಳನ್ನು ಧರಿಸುತ್ತಲೂ, ಹಕ್ಕಿಗಳು ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರುವಂತೆ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗಿ ಸೇರಿಕೊಳ್ಳುವುವು.

೨೭–೨೮. ಅನಂತವಾದ ವಿಷಯಗಳಲ್ಲಿ ಅನಂತವಾದ ಸಂಕಲ್ಪ ಕಲ್ಪನೆಯ ಉತ್ಪತ್ತಿಗೆ ಹೇತುಭೂತವಾದ ಅವಿದ್ಯೆಯಿಂದ ಜಗನ್ಮಯವಾದ ಈ ಸಂಸಾರವನ್ನು ದೊಡ್ಡ ಇಂದ್ರಜಾಲವನ್ನಾಗಿ ಮಾಡುತ್ತಿರುವ ಮೂಢಾತ್ಮರು ಎಲ್ಲಿಯವರೆವಿಗೆ ಶ್ಲಾಘ್ಯವಾದ (ಸರ್ವೋತ್ತಮವಾದ) ತಮ್ಮ ಆತ್ಮಸ್ವರೂಪದ ತತ್ತ್ವವನ್ನು ಅಪರೋಕ್ಷಾನುಭವದಿಂದ ಕಾಣದೆ ಇರುವರೋ ಅದುವರೆವಿಗೂ, ನೀರಿನಲ್ಲಿ ಸುಳಿಗಳ ಸಮೂಹಗಳು ಸರ್ವದಾ ಸುತ್ತುತ್ತಿರುವಂತೆ, ಸಂಸಾರ ಸಾಗರದಲ್ಲಿ ಸುತ್ತುತ್ತಲೇ ಇರುವರು.

೨೯. ಸ್ವಾತ್ಮ ಸ್ವರೂಪವನ್ನು (ತಾತ್ವಿಕವಾಗಿ-ಯಥಾಸ್ಥಿತವಾಗಿ) ತಿಳಿದಮೇಲೆ ಯಾವರೋ ಮಿಥ್ಯಾಭೂತವಾದ ಜಗದ್ಭ್ರಾಂತಿಯನ್ನು ಪರಿತ್ಯಜಿಸಿ, ಪರಮಾರ್ಥತಃ ಸತ್ಯವಾದ ಆತ್ಮೈಕತ್ವ ಜ್ಞಾನವನ್ನು ಪಡೆದು, ಕೆಲವು ಕಾಲ ಕಳೆದ ಬಳಿಕ ಅಕ್ಷಯವಾದ ಪರಮಪದವನ್ನು ಸೇರಿ, ಪುನಃ ಆ ಜೀವರು ಈ ಜಗತ್ತಿನಲ್ಲಿ (ಸಂಸಾರದಲ್ಲಿ) ಎಂದಿಗೂ ಜನ್ಮವನ್ನು ಎತ್ತುವುದೇ ಇಲ್ಲ.

೩೦. ಅಜ್ಞಾನಿಗಳಾದ ಕೆಲವು ಜೀವಿಗಳು ವಿವೇಕಶಾಲಿಗಳಾಗಿದ್ದರೂ ಕೂಡ

ಕೇಚಿಚ್ಛಕ್ತತ್ವಮುಪ್ಯುಚ್ಚೈಃ ಪ್ರಾಪ್ಯ ತುಚ್ಛತಯಾ ಧಿಯಾ ।
ಪುನಸ್ತಿರ್ಯಕ್ತ್ವ ಮಾಯಾಂತಿ ತಿರ್ಯಕ್ತ್ವಾತ್ಪುನ್ನರಕಾದಪಿ ॥ ೩೧ ॥

ಕೇಚಿನ್ಮಹಾಧಿಯಃ ಸಂತ ಉತ್ಪದ್ಯ ಬ್ರಹ್ಮಣಃ ಪದಾತ್ ।
ತದೈವ ಜನ್ಮನೈಕೇನ ತತ್ರೈವಾಶು ವಿಶಂತ್ಯಲಂ ॥ ೩೨ ॥

ಬ್ರಹ್ಮಾಂಡೇಷ್ವಿ ತರೇಷ್ವನ್ಯೇ ತೇಷ್ವನ್ಯೇ ಜೀವರಾಶಯಃ ।
ಪ್ರಯಾಂತಿ ಪದ್ಮೋದ್ಭವತಾಮನ್ಯೇ ಚ ಹರತಾಮಪಿ ॥ ೩೩ ॥

ಅನ್ಯೇ ಪ್ರಯಾಂತಿ ತಿರ್ಯಕ್ತ್ವಮನ್ಯೇ ಚ ಸುರತಾಮಪಿ ।
ಅನ್ಯೇಪಿ ನಾಗತಾಂ ರಾಮ ಯಥೈವೇಹ ತಥೈವ ಹಿ ॥ ೩೪ ॥

ಅದನ್ನು ಸರಿಯಾದ ಸನ್ಮಾರ್ಗದಲ್ಲಿ ಪ್ರವೃತ್ತಿಗೊಳಿಸದೆ ಇರುವ ಕಾರಣ ಅನೇಕ ಜನ್ಮ ಸಹಸ್ರಗಳನ್ನೂ ಅನುಭವಿಸಿಯೂ ಕೂಡ ಪುನಃ ಈ ಸಂಸಾರ ಸಂಕಟದಲ್ಲಿ ಬಂದುಬೀಳುವುವು.

೩೧. ಮತ್ತೆ ಕೆಲವು ಜೀವಗಳು ಉತ್ತಮ ಜನ್ಮಗಳನ್ನೂ ಪಡೆದು ಅಧಿಕವಾಗಿ ಸಾಮರ್ಥ್ಯವನ್ನೂ ಪಡೆದಿದ್ದರೂ ಕೂಡ ಅತಿ ತುಚ್ಛವಾದ ವಿಷಯಾಸಕ್ತಿಯಿಂದ ಸ್ವಬುದ್ಧಿ ಪೂರ್ವಕವಾಗಿಯೇ ಪುನಃ ತಿರ್ಯಗ್ಜನ್ಮವನ್ನು ಹೊಂದಿ ಅಲ್ಲಿಂದ ನಾನಾ ನರಕ ದುಃಖಗಳನ್ನೂ ಅನುಭವಿಸುವುವು.

೩೨. ಕೆಲವು ಜೀವಗಳು (ಸನಕಾದಿಗಳು) ಮಹಾ ಜ್ಞಾನಿಗಳಾಗಿಯೂ ಸಾಧುಗಳಾಗಿಯೂ ಇದ್ದು ಬ್ರಹ್ಮನ ದೆಸೆಯಿಂದ ಉತ್ಪತ್ತಿಯನ್ನೂ ಪಡೆದು ಅದೇ ಕಲ್ಪದಲ್ಲಿಯೇ ಒಂದೇ ಒಂದು ಜನ್ಮದಲ್ಲಿ ಮೋಕ್ಷವೆಂಬ ಪರಬ್ರಹ್ಮ ಪದದಲ್ಲಿಯೇ ಕೂಡಲೇ ಚೆನ್ನಾಗಿ ಐಕ್ಯವನ್ನು ಹೊಂದಿಬಿಡುವುವು.

೩೩. ಬೇರೆ ಕೆಲವು ಜೀವಗಳು ಇತರ ಬ್ರಹ್ಮಾಂಡಗಳಲ್ಲಿ ಜನಿಸಿಯೂ ಇತರ ಕೆಲವು ಜೀವಗಳು ತಾವಿರುವ ಅದೇ ಬ್ರಹ್ಮಾಂಡಗಳಲ್ಲಿ ಜನಿಸಿಯೂ ಕೆಲವು ಚತುರ್ಮುಖ ಬ್ರಹ್ಮನ ಪದವಿಯನ್ನೂ ಅಥವಾ ಬೇರೆ ಕೆಲವು ಜೀವಗಳು ಪರಮೇಶ್ವರತ್ವವನ್ನೂ ಪಡೆಯುವವು.

೩೪. ಅಯ್ಯ ರಾಮ, ಕೆಲವು ಜೀವಗಳು ಈ ಬ್ರಹ್ಮಾಂಡದಲ್ಲಿರುವಂತೆಯೇ ಇತರ ಬ್ರಹ್ಮಾಂಡಗಳಲ್ಲಿಯೂ ತಿರ್ಯಗ್ಯೋನಿಯಲ್ಲಿ ಜನಿಸುವವು. ಕೆಲವು ಜೀವ

ಯಥೇದಂ ಹಿ ಜಗತ್ಸ್ಫಾರಂ ತಥಾನ್ಯಾನಿ ಜಗಂತ್ಯಪಿ ॥
ವಿದ್ಯಂತೇ ಸಮತೀತಾನಿ ಭವಿಷ್ಯಂತಿ ಚ ಭೂರಿಶಃ ॥ ೩೫ ॥

ಅನ್ಯೇನಾನ್ಯೇನ ಚಿತ್ರೇಣ ಕ್ರಮೇಣಾನ್ಯೇನ ಹೇತುನಾ ।
ವಿಚಿತ್ರಾಃ ಸೃಷ್ಟಯಸ್ತೇಷಾಮಾಪತಂತಿ ಪತಂತಿ ಚ ॥ ೩೬ ॥

ಕಶ್ಚಿದ್ಗಂಧರ್ವತಾಂ ಯಾತಿ ಕಶ್ಚಿದ್ಗಚ್ಛತಿ ಯಕ್ಷತಾಂ ।
ಕಶ್ಚಿತ್ಪ್ರಯಾತಿ ಸುರತಾಂ ಕಶ್ಚಿದಾಯಾತಿ ದೈತ್ಯತಾಂ ॥ ೩೭ ॥

ಯೇನೈವ ವ್ಯವಹಾರೇಣ ಬ್ರಹ್ಮಾಂಡೇಽಸ್ಮಿನ್ ಜನಾಃ ಸ್ಥಿತಾ ।
ತೇನೈವಾನ್ಯೇಷು ತಿಷ್ಠಂತಿ ಸನ್ನಿವೇಶವಿಲಕ್ಷಣಾಃ ॥ ೩೮ ॥

ಗಳು ದೇವಯೋನಿಗಳಲ್ಲಿ ಅವತಾರಮಾಡುವುವು. ಕೆಲವು ಜೀವಗಳಾದರೋ ನಾಗ ಜನ್ಮವನ್ನೂ ಪಡೆಯುವುವು.

[ನಾಗ-ಸರ್ಪಗಳು ಅಥವಾ ಆನೆಗಳು].

೩೫. ಈ ಬ್ರಹ್ಮಾಂಡದಂತೆಯೇ, ಬೇರೆ ಇತರ ಬ್ರಹ್ಮಾಂಡಗಳೂ ಅತ್ಯಂತ ವಿಸ್ತೃತವಾಗಿರುವವು. ಇದರಂತೆಯೇ ಅನೇಕ ಜಗತ್ತುಗಳು (ಬ್ರಹ್ಮಾಂಡಗಳು) ಕಳೆದುಹೋಗಿವೆ. ಇನ್ನು ಮುಂದೆಯೂ ಈ ಜಗತ್ತುಗಳು ಅಸಂಖ್ಯಾಕವಾಗಿ ಉದ್ಭವಿಸಿ ನೆಲೆಯಾಗಿ ಇರುವುವು.

೩೬. ಆ ಬ್ರಹ್ಮಾಂಡಗಳಿಗೆ ಕೂಡ ಬೇರೆ ಬೇರೆಯಾದ ನಾನಾ ವಿಧ ವಿಚಿತ್ರ ಕ್ರಮಗಳಿಂದಲೂ ಬೇರೆ ಬೇರೆ ಕಾರಣದಿಂದಲೂ ವಿಚಿತ್ರಗಳಾದ ಸೃಷ್ಟಿಗಳುಂಟಾಗುತ್ತಲೂ ಹಾಗೆಯೇ ಪುನಃ ಲಯವಾಗುತ್ತಲೂ ಇರುವುವು.

೩೭. ಒಬ್ಬ ಜೀವನು ಗಂಧರ್ವ ಜನ್ಮವನ್ನೂ ಪಡೆಯುವನು. ಇನ್ನೊಬ್ಬನು ಯಕ್ಷನಾಗುವನು. ಮತ್ತೊಬ್ಬ ಜೀವನು ದೇವತಾರೂಪದಿಂದ ಅವತರಿಸುವನು. ಮತ್ತೊಬ್ಬನು ದೈತ್ಯ ಯೋನಿಯಲ್ಲಿ ಹುಟ್ಟುವನು.

೩೮. ಈ ಬ್ರಹ್ಮಾಂಡದಲ್ಲಿ ಜನರು ಯಾವ ಯಾವ ವ್ಯವಹಾರವನ್ನೂ ನಡೆಯಿಸುತ್ತಾ ಇರುವರೋ ಅದೇ ಬಗೆಯ ವ್ಯವಹಾರವನ್ನೇ ಇತರ ಬ್ರಹ್ಮಾಂಡಗಳ

ಸ್ವಸ್ವಭಾವವಶಾವೇಶಾದನ್ಯೋನ್ಯಪರಿಘಟ್ಟನೈಃ ।
ಸೃಷ್ಟಯಃ ಪರಿವರ್ತಂತೇ ತರಂಗಿಣ್ಯಾ ಇವೋರ್ಮಯಃ ॥ ೩೯ ॥

ಆವಿರ್ಭಾವತಿರೋಭಾವೈರುನ್ಮಜ್ಜನ ನಿಮಜ್ಜನೈಃ ।
ಸೃಷ್ಟಯಃ ಪರಿವರ್ತಂತೇ ತರಂಗಿಣ್ಯಾ ಇವೋರ್ಮಯಃ ॥ ೪೦ ॥

ನಿರ್ಯಾಂತ್ಯವಿರತಂ ತಸ್ಮಾತ್ಪರಸ್ಮಾಜ್ಜೀವರಾಶಯಃ ।
ಅನಿರ್ದೇಶ್ಯಾಃ ಸ್ವಸಂವೇದ್ಯಾಸ್ತತ್ರೈವಾಶು ಸ್ಫುರಂತಿ ಚ ॥ ೪೧ ॥

ಲ್ಲಿಯೂ ನಡೆಯಿಸುತ್ತಿರುವರು. ಆದರೆ, ಸನ್ನಿವೇಶದಲ್ಲಿ ಮಾತ್ರ ಸ್ವಲ್ಪ ಹೆಚ್ಚು ಕಡಿಮೆ ವೈಲಕ್ಷಣ್ಯವು ಇರುವುದು.

೩೯. ಸಾತ್ತ್ವಿಕರಾಜಸ ತಾಮಸಾದಿ ತಮ್ಮ ತಮ್ಮ ಸ್ವಭಾವವಶವಾದ ಆವೇಶದಿಂದ ಆಯಾ ಸ್ವಭಾವಾನುಕೂಲವಾದ ವ್ಯವಹಾರಗಳಲ್ಲಿ ಅಭಿನಿವೇಶವನ್ನೂ ಹೊಂದಿ ಪ್ರವರ್ತಿಸಿದ ಜೀವರುಗಳಿಗೆ ಒಂದೇ ವಿಷಯದಲ್ಲಿ ಪರಸ್ಪರ ಸ್ಪರ್ಧೆಯಿಂದ ಅನ್ಯೋನ್ಯ ಸಂಘಟನೆಗಳು (ಪರಸ್ಪರ ಸಮಾಗಮ ಮತ್ತು ಹೊಡೆದಾಟಗಳು) ಉಂಟಾಗಿ ಅವುಗಳ ಮೂಲಕ ಸ್ನೇಹ ವಿರೋಧಿಗಳೂ ಅವುಗಳಿಂದ ನಾನಾ ವಿಧ ಸೃಷ್ಟಿಗಳೂ ನದಿಯಲ್ಲಿ ತರಂಗಗಳಂತೆ ಪರಿವರ್ತಿತವಾಗಿವೆ. (ಚಕ್ರದಂತೆ ಸುತ್ತುತ್ತಾ ಇವೆ.)

೪೦. ಮತ್ತು ನದೀತರಂಗಗಳಂತೆಯೇ, ನಾನಾ ಬ್ರಹ್ಮಾಂಡ ಸೃಷ್ಟಿಗಳು ಆವಿರ್ಭಾವ ತಿರೋಭಾವ (ಉದಯಾಸ್ತಮಯ) ಗಳಿಂದಲೂ ಮಜ್ಜನೋನ್ಮಜ್ಜನಗಳಿಂದಲೂ (ಮುಳುಗಿಹೋಗುವಿಕೆ ಮತ್ತು ಮೇಲೆ ತೇಲಾಡುವಿಕೆ) ಸುತ್ತುತ್ತಿರುವುವು.

[ರಜೋಗುಣವು ಆವಿರ್ಭವಿಸಿದಾಗ ಸೃಷ್ಟಿಯ ಉನ್ಮಜ್ಜನವೂ, ತಮೋಗುಣದ ಆವಿರ್ಭಾವದಿಂದ ಸೃಷ್ಟಿಯ ನಿಮಜ್ಜನವೂ ಮಧ್ಯದಲ್ಲಿ ಸತ್ತ್ವಾವಿರ್ಭಾವದಿಂದ ಪಾಲನೆಯೂ ನಡೆಯುವುದೆಂದರ್ಥ.]

೪೧. ಆ ಪರಮಾತ್ಮನ ದೆಸೆಯಿಂದ ಅನವರತವೂ, ಗುಣಾಧೀನಗಳಾದ ಅಂತಃಕರಣಾದಿವೃಷ್ಟಿಯಿಂದ ಅವುಗಳೇ ಉಪಾಧಿಯಾಗುಳ್ಳ ಜೀವರಾಶಿಗಳು ಹೊರಕ್ಕೆ ಬರುತ್ತಲೇ (ಉದಯಿಸುತ್ತಲೇ) ಇರುವವು. ಇವುಗಳು ಅನಿರ್ದೇಶ್ಯ (ಅನಿರ್ವಚ

ದಿಪಾದಿವಾಲೋಕದೃಶಃ ಸೂರ್ಯಾದಿವ ಮರೀಚಯಃ ।
ಕಣಾಸ್ತಪ್ತಾಯಸ ಇವ ಸ್ಫುಲಿಂಗಾ ಇವ ಪಾವಕಾತ್ ॥ ೪೨ ॥

ಕಾಲಾದಿವರ್ತವಶ್ಚಿತ್ರಾ ಆಮೋದಾಃ ಕುಸುಮಾದಿವ ।
ಶೀತಲಾ ಇವ ವರ್ಷಾಣಾಂಪೂರಾದಬ್ಧೇರಿವೋರ್ಮಯಃ ॥ ೪೩ ॥

ಉತ್ಪತ್ಯೋತ್ಪತ್ಯ ಕಾಲೇನ ಭುಕ್ತ್ವಾ ದೇಹಪರಂಪರಾಂ ।
ಸ್ವತ ಏವ ಪದೇ ಯಾಂತಿ ನಿಲಯಂ ಜೀವರಾಶಯಃ ॥ ೪೪ ॥

ನೀಯ-ಇದು ಹೀಗೆ ಇದೆಯೆಂದು ಹೇಳುವುದಕ್ಕೆ ಅಶಕ್ಯ) ಗಳಾಗಿಯೂ ತಮ್ಮಿಂದ ಮಾತ್ರವೇ ತಿಳಿಯಲ್ಪಡತಕ್ಕವುಗಳಾಗಿಯೂ (ಆತ್ಮೈಕ ವೇದ್ಯ) ಆ ಪರಮಾತ್ಮನಲ್ಲಿಯೇ ಥಟ್ಟನೆ ಸ್ಫುರಿಸಿ ಸ್ಫುಟವಾಗಿ ವ್ಯವಹರಿಸುವವು.

೪೨-೪೪. ದೀಪದ ದೆಸೆಯಿಂದ ಪ್ರಕಾಶಗಳೂ, ಸೂರ್ಯನ ದೆಸೆಯಿಂದ ಕಿರಣಗಳೂ ಬೆಂಕಿಯಲ್ಲಿ ಕಾಯ್ದು (ಕೆಂಪಗೆ) ಕಬ್ಬಿಣದ ದೆಸೆಯಿಂದ ಅದರ ಚೂರುಗಳೂ ಅಗ್ನಿಯ ದೆಸೆಯಿಂದ ಕಿಡಿಗಳೂ, ಕಾಲದ ದೆಸೆಯಿಂದ ವಿಚಿತ್ರಗಳಾದ ಷಡೃತುಗಳೂ ಪುಷ್ಪದ ದೆಸೆಯಿಂದ ಸುಗಂಧವೂ ಮಳೆಯ ನೀರಿನ ಪ್ರವಾಹದ ದೆಸೆಯಿಂದ ತುಷಾರಗಳೂ ಸಮುದ್ರದ ದೆಸೆಯಿಂದ ತರಂಗಗಳೂ ಉದಯಿಸುವಂತೆ ಅನೇಕಾನೇಕ ಜೀವಕೋಟಿ ಸಮುದಾಯಗಳು ಆಯಾ ಕಾಲಾನುಗುಣವಾಗಿ ಉದಯಿಸಿ ನಾನಾವಿಧ ವಿಚಿತ್ರ ಶರೀರ ಪರಂಪರೆಗಳನ್ನೂ ಅನುಭವಿಸಿ ಸ್ವತಏವ ತಮಗೆ ಮೂಲವಾದ ಪರಬ್ರಹ್ಮ ಪದದಲ್ಲಿ ಲಯವನ್ನೂ ಹೊಂದುವುವು.

[ಮೃತ್ತಿನಿಂದಲೇ ಉದ್ಭವಿಸಿ, ಮೃದಾತ್ಮಕವಾಗಿಯೇ ಇದ್ದುಕೊಂಡಿದ್ದರೂ ಮಧ್ಯೇ ಸ್ವಲ್ಪ ಕಾಲ ನಾನಾ ವಿಧ ನಾಮ ರೂಪಗಳನ್ನು ಹೊಂದಿ ವ್ಯವಹಾರಯೋಗ್ಯವಾಗಿರುತ್ತಾ ಕೊನೆಗೆ ಉಪಾದಾನ ಕಾರಣವಾದ ಮೃತ್ತಿನೊಳಗೆಯೇ ಘಟಾದಿ ಮೃಣ್ಮಯಗಳು ಲೀನವಾಗಿ ಐಕ್ಯವಾಗುವಂತೆ ಎಂಬುದು ಇಲ್ಲಿ ದೃಷ್ಟಾಂತ.]

ಅವಿರತವಿುಯಮಾತತಾ ತಥೋಚ್ಚೈ
ರ್ಭವತಿ ವಿನಶ್ಯತಿ ವರ್ಧತೇ ಮುಧೈವ ।
ತ್ರಿಭುವನರಚನಾದಿ ಮೋಹಮಾಯಾ
ಪರಮಪದೇ ಲಹರೀವ ವಾರಿರಾಶೌ ॥ ೪೫ ॥

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಜೀವನಿಚಯಸ್ಥಾನೋಪದೇಶೋ" ನಾಮ ತ್ರಿಚತ್ವಾರಿಂಶಃ ಸರ್ಗಃ

---

೪೫. ಅಯ್ಯ ರಾಮಚಂದ್ರ, ಈ ಪ್ರಕಾರವಾಗಿ ಈ ಜಗತ್ತ್ರಯ ಕಲ್ಪನಾದಿ ಭ್ರಾಂತಿರೂಪವಾದ ಈ ಮಹಾ ಮಾಯೆಯು (ಅವಿದ್ಯೆಯು) ಸಮುದ್ರದೊಳಗೆ ಅಲೆಗಳ ಪರಂಪರೆಯಂತೆ ಪರಮಾತ್ಮನಲ್ಲಿಯೇ ಸಂತತವೂ ಬಹು ವಿಸ್ತಾರವಾಗಿ ವ್ಯಾಪಿಸಿಕೊಂಡಿರುವುದು. ಹಾಗೆಯೇ ಪರಮಾತ್ಮನಲ್ಲಿಯೇ ಬಹು ಉನ್ನತ ಸ್ಥಿತಿಗೆ ಏರಿ ವ್ಯರ್ಥವಾಗಿಯೇ ವೃದ್ಧಿಹೊಂದುವುದು. ಕೊನೆಗೆ ಅಲ್ಲಿಯೇ ಲಯವನ್ನೂ ಹೊಂದಿಬಿಡುವುದು. (ಕಾರಣಾನನ್ಯವಾಗುವುದು.) ಇಷ್ಟಾದರೂ ಇವೆಲ್ಲವೂ ಕೇವಲ ಭ್ರಾಂತಿಮಯವೇ ! ಒಂದಾದರೂ ಲೇಶವಾದರೂ ತಾತ್ತ್ವಿಕವಲ್ಲ ಎಂದು ದೃಢವಾಗಿ ತಿಳಿ. ನೀನು ಇದರಿಂದ ಬೆರಗಾಗಬೇಡ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ಜೀವನಿಚಯಸ್ಥಾನೋಪದೇಶ" ಎಂಬ ನಾಲ್ವತ್ತಮೂರನೆಯ ಸರ್ಗವು.

ಚತುಶ್ಚತ್ವಾರಿಂಶಃ ಸರ್ಗಃ

ಶ್ರೀ ರಾಮ ಉವಾಚ:—

ಕ್ರಮೇಣಾನೇನ ಯೇನಾಪ್ತಾ ಜೀವೇನ ಸ್ಥಿತಿರಾತ್ಮನಃ ।
ಸ ಕಥಂ ಭಗವನ್ ದೇಹಂ ಸಮಾಧತ್ತೇಽಸ್ಥಿಪಂಜರಂ ॥ ೧ ॥

ನಲವತ್ತನಾಲ್ಕನೆಯ ಸರ್ಗ

೧. ಶ್ರೀರಾಮನು ಕೇಳಿದನು—ಎಲೈ ಭಗವಂತನೇ, ಪೂಜ್ಯನೇ, (ಪೂರ್ವ ಸರ್ಗದ ೪೪ನೆಯ ಶ್ಲೋಕದಲ್ಲಿ ತಾವು ಈಗಲೇ ಉಪದೇಶಿಸಿದ) ಕ್ರಮದಿಂದ ಯಾವ ಜೀವನು ಸ್ವತಏವ (ಮಹಾಪ್ರಳಯದಲ್ಲಿ) ಸ್ವಸ್ವರೂಪಾವಸ್ಥಿತಿರೂಪವಾದ ಪರಮ ಪದ ಪ್ರಾಪ್ತಿಯನ್ನು (ಮೋಕ್ಷ) ಪಡೆಯುವನೋ, ಅವನು ಪುನಃ, ಅಸ್ಥಿಪಂಜರ (ಎಲುಬುಗಳ ಗೂಡು)ಮಯವಾದ ಈ ಶರೀರ ಪರಂಪರೆಯನ್ನು ಹೇಗೆ ಸ್ವೀಕರಿಸುವನು ?

[ನ ಸ ಪುನರಾವರ್ತತೇ ಎಂಬೀ ಮುಂತಾದ ಶ್ರುತಿಗಳು,"ಪರಬ್ರಹ್ಮಭಾವಾಪನ್ನ ರಾದ ಮುಕ್ತರು ಪುನಃ ಈ ಸಂಸಾರಕ್ಕೆ ಬರುವುದೂ ಇಲ್ಲ. ಜನನಮರಣಪ್ರವಾಹಕ್ಕೆ ಸಿಕ್ಕುವುದೂ ಇಲ್ಲ." ಎಂದು ಉದ್ಘೋಷಿಸುತ್ತಲಿವೆ. ಹೀಗಲ್ಲದೆ, ಒಂದು ವೇಳೆ ಮುಕ್ತರೂ ಕೂಡ ಪುನಃ ಸಂಸಾರಕ್ಕೆ ಹಿಂದಿರುಗುವ ಸಂಭವವೂ ಉಂಟೆಂದು ಹೇಳು ವುದಾದರೆ ಆಗ ಮೋಕ್ಷವೆಂಬುದು ಸ್ವರ್ಗಾದಿಗಳಂತೆ, ಅನಿಯತಫಲವಾಗಿ ಅದು ನಿತ್ಯವೂ ಸ್ವಾಭಾವಿಕವೂ ಅಕ್ಷಯವೂ ಪರಮಾರ್ಥವೂ ಆದುದು ಎಂಬ ನಂಬುಗೆಯೇ ಇಲ್ಲವಾಗಿ, ಸರ್ವತ್ರ ಅನಿರ್ಮೋಕ್ಷವೂ ಶಾಸ್ತ್ರಾನರ್ಥಕ್ಯವೂ ಪ್ರಸಕ್ತವಾಗುವುದು. ಇದರಿಂದ ಒಂದು ಸಲ ಮುಕ್ತನಾದವನು ಪುನಃ ಸಂಸಾರಕ್ಕೆ ಹಿಂದಿರುಗುವುದಿಲ್ಲ ಎಂದು ಒಪ್ಪಲೇಬೇಕಾಗುವುದು. ಆದಕಾರಣ ಈ ನನ್ನ ಸಂಶಯವು ಉದಯಿಸಿರು ವುದು. ಇದನ್ನು ದಯಮಾಡಿ ಪರಿಹರಿಸಬೇಕು.]

ಶ್ರೀ ವಸಿಷ್ಠ ಉವಾಚ:—

ಪೂರ್ವಮೇವ ಮಯಾ ಪ್ರೋಕ್ತಂ ರಾಮ ಕಿಂ ನಾವಬುಧ್ಯಸೇ ।
ಪೂರ್ವಾಪರವಿಚಾರಾರ್ಹಾ ಶೇಮುಷೀ ಕ್ವ ಗತಾ ತವ ॥ ೧ ॥

ಯದಿದಂ ಹಿ ಶರೀರಾದಿ ಜಗತ್ಸ್ಥಾವರಜಂಗಮಂ ।
ಆಭಾಸಮಾತ್ರಮೇವೈತದಸತ್ಸ್ವಪ್ನವಿಮೋತ್ಥಿತಂ ॥ ೩ ॥

ದೀರ್ಘಸ್ವಪ್ನೋ ಹ್ಯಯಂ ರಾಮ ಮಿಥ್ಯೈವಾನಘ ದೃಶ್ಯತೇ ।
ದ್ವಿಚಂದ್ರವಿಭ್ರಮಾಕಾರಂ ಭ್ರಮಾಂತಭ್ರಾಂತಶೈಲವತ್ ॥ ೪ ॥

---

೨. ಶ್ರೀ ವಸಿಷ್ಠನು ಹೇಳಿದನು. ಅಯ್ಯಾ ರಾಮ, ಈ ವಿಷಯವನ್ನು ನಾನು ನಿನಗೆ ಪೂರ್ವದಲ್ಲಿಯೇ ವಿವರಿಸಿ ಹೇಳಿರುವೆನು. ಅದನ್ನು ನೀನು ಏಕೆ ತಿಳಿಯಲಾರದವನಾದೆ? ಪೂರ್ವಾಪರವಿಚಾರಗಳನ್ನು ಚೆನ್ನಾಗಿ ವಿಚಾರಮಾಡಲು ಯೋಗ್ಯವಾಗಿದ್ದ ನಿನ್ನ ಪೂರ್ವದ ವಿವೇಕ ಪೂರ್ಣವಾದ ಬುದ್ಧಿಯು ಈಗ ಎಲ್ಲಿಗೆ ಹೋಯಿತು ?]

೩. ದೇಹೇಂದ್ರಿಯಗಳೇಮೊದಲಾದ ಚರಾಚರಾತ್ಮಕವಾದ (ಜಂಗಮ ಸ್ಥಾವರ ಅಥವಾ ಅಚೇತನ) ಈ ಜಗತ್ ಎಂಬುದು ಯಾವುದುಂಟೋ ಇದೆಲ್ಲವೂ ಕೇವಲ ಅಭಾಸಮಾತ್ರವಾದುದೇ! (ತಾನು ವಸ್ತುತಃ ಇಲ್ಲದಿದ್ದರೂ (ಅಸತ್) ಭ್ರಾಂತಿಯಿಂದ ಆ ಕಾಲದಲ್ಲಿ ಮಾತ್ರ ತನ್ನ ಅಧಿಷ್ಠಾನದಲ್ಲಿಯೇ ಶುಕ್ತಿಯಲ್ಲಿ ರಜತದಂತೆ ಪ್ರಾತಿಭಾಸಿಕವಾಗಿ ಇರುವ ಹಾಗೆ (ಸತ್) ಕಾಣಿಸಿಕೊಳ್ಳುವುದು.) ಸ್ವಾಪ್ನಪ್ರಪಂಚದಂತೆ ಅಸದ್ರೂಪವಾಗಿಯೇ ಉದಯಿಸಿರುವುದು.

[ಆಭಾಸಮಾತ್ರಂ–ವಿವರ್ತಮಾತ್ರಾತ್ಮಕ ಎಂದು ತಾತ್ಪರ್ಯಪ್ರಕಾಶ]

೪. ಎಲೈ ಅನಘನಾದ ರಾಮನೇ, ಈ ಜಗತ್ಸಂಸಾರವೆಂಬುದು ಅನೇಕ ಕಲ್ಪಕೋಟಿ ಪರಿಮಿತವಾದ ಬಹುದೀರ್ಘಕಾಲವಿರುವ ಸ್ವಪ್ನವೇ ಸರಿ. ಸಂದೇಹವಿಲ್ಲ. ಇದು ಮಿಥ್ಯೆಯಾಗಿಯೇ ಕಾಣುತ್ತಿರುವುದು. ಜನರ ಕಣ್ಣುಗಳಲ್ಲಿರುವ ತಿಮಿರಾದಿ ದೋಷಗಳಿಂದ ಗಗನದಲ್ಲಿ ಎರಡು ಚಂದ್ರಮಂಡಲಗಳಿರುವಂತೆ ಉದಯಿಸುವ ಭ್ರಾಂತಿರೂಪವಾಗಿಯೂ ಹುಡುಗರು ಗರಗರನೆ ಬಲು ರಭಸದಿಂದ ಸುತ್ತಿ ನಿಂತ ಕೂಡಲೇ ಅವರ ಸುತ್ತಲಿರುವ ಸ್ಥಾವರಗಳಾದ ಮನೆ, ಮರ, ಗುಡ್ಡ ಮುಂತಾದವು

ಪ್ರಶಾಂತಾಜ್ಞಾನನಿದ್ರಸ್ತು ನೂನಂ ಗಲಿತಭಾವನಃ ।
ಪ್ರಬುದ್ಧಚೇತಾಃ ಸಂಸಾರಸ್ವಪ್ನಂ ಪಶ್ಯನ್ನ ಪಶ್ಯತಿ ॥ ೫ ॥

ಸ್ವಭಾವಕಲ್ಪಿತೋ ರಾಮ ಜೀವಾನಾಂ ಸರ್ವದೈವ ಹಿ ।
ಆಮೋಕ್ಷಪದಸಂಪ್ರಾಪ್ತಿ ಸಂಸಾರೋಽಸ್ತ್ಯಾತ್ಮನೋಂತರೇ ॥ ೬ ॥

ಗಳೂ ಸುತ್ತುತ್ತಿರುವಂತೆಯೇ ಅವರ ಕಣ್ಣಿಗೆ ತೋರುವ ಭ್ರಮೆಯುಂತೆಯೂ ಈ ಜಗತ್ತು ಮಿಥ್ಯಾಭೂತವಾಗಿಯೇ ಇದೆಯೆಂದು ನೀನು ತಿಳಿಯುವವನಾಗು.

೫. ಯಾವನಿಗಾದರೆ, ಅಜ್ಞಾನವೆಂಬ ನಿದ್ರೆಯು ಚೆನ್ನಾಗಿ ನಾಶ ಹೊಂದಿರುವದೋ, ಮಿಥ್ಯಾಭೂತಭ್ರಾಂತಿಭಾವನೆಗಳೆಲ್ಲವೂ ತೊಲಗಿಹೋಗಿರುವುವೋ ಅಂತಹ ಪ್ರಬುದ್ಧಮನಸ್ಕನಾದ ತತ್ತ್ವಜ್ಞನು ಸಂಸಾರವೆಂಬ ಈ ಸ್ವಪ್ನವನ್ನು ನೋಡುತ್ತಿರುವವನಾದರೂ (ಅದರಲ್ಲಿ ಮಿಥ್ಯಾತ್ವಬುದ್ಧಿಯನ್ನಿಟ್ಟಿರುವ ಕಾರಣ) ವಸ್ತುತಃ ನೋಡುವುದೇ ಇಲ್ಲ.

[ಇರುವ ವಸ್ತುವನ್ನು ನೋಡಬಹುದೇ ಹೊರತು ಪ್ರಾಜ್ಞನು ಇಲ್ಲದುದನ್ನು ನೋಡುವುದಾದರೂ ಹೇಗೆ?]

೬. ಅಯ್ಯ ರಾಮ, ಸಮಸ್ತ ಜೀವರಿಗೂ ಸ್ವಭಾವ ಕಲ್ಪಿತನಾದ ಸಂಸಾರವು ಮೋಕ್ಷ ಪ್ರಾಪ್ತಿಯಾಗುವವರೆಗೂ ತನ್ನೊಳಗೆಯೇ ಸರ್ವದಾ ಸೂಕ್ಷ್ಮ ರೂಪದಿಂದ ಇದ್ದೇಇರುವುದು.

[ಹೀಗೆ-ಬೀಜಭೂತವಾದ ಅಜ್ಞಾನಾತ್ಮನಲ್ಲಿ ಭಾವಿ ಸಂಸಾರವು ಮೋಕ್ಷ ಪರ್ಯಂತವೂ ಸೂಕ್ಷ್ಮ ರೂಪದಿಂದ ಇರುವ ಕಾರಣದಿಂದಲೂ ಮುಕ್ತರಾಗದವರಿಗೆ ಪುನರ್ಜನ್ಮವು ಉಪಪನ್ನವು.)

ಜೀವಸ್ಯ ತರಲಃ ಕಾಯಃ ಆವರ್ತಃ ಪಯಸೋ ಯಥಾ ।
ಯಥಾ ಬೀಜೇಂಕುರಃ ಸ್ಫಾರಃ ಪಲ್ಲವಃ ಸ್ವಾಂಕುರೇ ಯಥಾ ॥ ೭ ॥

ಪಲ್ಲವೇ ಚ ಯಥಾ ಪುಷ್ಪಂ ಪುಷ್ಪಕೋಶೇ ಫಲಂ ಯಥಾ ।
ಯತಃ ಸ ಕಲ್ಪನಾರೂಪೋ ದೇಹೋಽಸ್ತಿ ಮನಸೋಂತರೇ ॥ ೮ ॥

ಬಹುರೂಪತಯಾ ರಾಮ ಯತೋಽಸ್ತ್ಯೇಕತಮಃ ಸ್ಫುಟಃ ।
ಸ ಏವ ಪ್ರತಿಭಾಸೋಽಸ್ಯ ಮನಸಃ ಕಿಲ ಜಾಯತೇ ।
ಸ ಏವಾಶು ಭವತ್ಯೇತನ್ಮೃತ್ಪಿಂಡೋ ಘಟಕೋಽಪಮಃ ॥ ೯ ॥

ಆದಿಸರ್ಗೇ ಪುರಾ ಕಾಯಃ ಪ್ರತಿಭಾಸೋಽಸ್ಯ ಚೋತ್ತಮಃ ।
ಯಸ್ಮಾದೇಷ ವಿಭುರ್ಬ್ರಹ್ಮಾ ಪದ್ಮಕೋಶಗೃಹಸ್ಥಿತಃ ॥ ೧೦ ॥

ತತ್ಸಂಕಲ್ಪಕ್ರಮೇಣೈವ ತತಃ ಸ್ಥಿತಿಮುಪಾಗತಾ ।
ಇಯಂ ಸೃಷ್ಟಿರಪರ್ಯಂತಾ ಮಾಯೇವ ಘನಮಾಯಯಾ ॥ ೧೧ ॥

೭-೯. ರಾಮ, ನೀರಿನೊಳಗೆ ಸುಳಿ (ಚಕ್ರಾಕಾರವಾಗಿ ಸುತ್ತುವಿಕೆ) ಯಿರುವಂತೆಯೂ ಬೀಜದೊಳಗೆ ವಿಶಾಲವಾದ (ದೊಡ್ಡ) ಅಂಕುರವಿರುವಂತೆಯೂ ಅಂಕುರದೊಳಗೆ ಚಿಗುರೆಲೆ (ಪಲ್ಲವು) ಇರುವಂತೆಯೂ ಪಲ್ಲವದೊಳಗೆ ಪುಷ್ಪವಿರುವಂತೆಯೂ ಹೂವಿನ ಕೋಶದೊಳಗೆ ಫಲವಿರುವಂತೆಯೂ ಜೀವನೊಳಗೆ ಚಂಚಲವಾದ ದೇಹವಿದ್ದೇಇರುವುದು. ಏತಕ್ಕೆಂದರೆ ಮನಸ್ಸಿನ ಮಧ್ಯದಲ್ಲಿ ಕಲ್ಪನಾರೂಪವಾದ ಈ ದೇಹವು ಇದ್ದೇಇರುವುದು. ಮನಸ್ಸಾದರೋ ಬಹು ವಿಧ ರೂಪಗಳನ್ನೊಳಗೊಂಡಿರುವುದೆಂದು ಪ್ರಸಿದ್ಧಿಯಿರುವ ಕಾರಣ ಈ ದೇಹ ರೂಪವೂ ಕೂಡ ವಾಸನಾತ್ಮಕವಾಗಿ ಅಲ್ಲಿ ಇರುವುದರಲ್ಲಿ ಸಂದೇಹವಿಲ್ಲ. ಹೀಗೆ ವಾಸನಾತ್ಮಕ ಅನೇಕ ದೇಹಗಳು ಇದ್ದಾಗ್ಯೂ ಕೂಡ ಅವುಗಳೊಳಗೆ ಯಾವ ಒಂದು ದೇಹವು ಪರಿಪಕ್ವವಾದ ಕರ್ಮವಶದಿಂದ ಅಭಿವ್ಯಕ್ತವಾಗುವುದೋ ಅದೇ ಒಂದು ದೇಹದ ಆ ಪ್ರತಿಭಾಸವೇ ಪ್ರಾಯಕವಾಗಿ ಈ ಮನಸ್ಸಿಗೆ ತಕ್ಕ ಕಾಲಕ್ಕೆ ಸರಿಯಾಗಿ ಉಂಟಾಗುವುದೇ ಹೊರತು ಎಲ್ಲ ದೇಹಗಳ ಪ್ರತಿಭಾಸವೂ ಉಂಟಾಗುವುದಿಲ್ಲ. ಒಂದು ಮಣ್ಣಿನ ಮುದ್ದೆಯೂ (ಏಕಕಾಲದಲ್ಲಿ ಘಟವಾಗುವಂತೆ ಮನಸ್ಸು ಕೂಡಲೇ ಆ ದೇಹವೇ ಆಗಿಬಿಡುವುದು.

೧೦-೧೧. ಅದರೊಳಗೂ ಪೂರ್ವಕಾಲದಲ್ಲಿ ಆದ್ಯಸೃಷ್ಟಿಯಲ್ಲಿ ಉತ್ತಮಕರ್ಮ ಪರಿಪಾಕದಿಂದ ಈ ಮನಸ್ಸಿಗೆ ಉತ್ತಮವಾದ ಪ್ರತಿಭಾಸವುಂಟಾದರೆ, ಉತ್ತಮವಾದ

ಶ್ರೀ ರಾಮ ಉವಾಚ:—

ಜೀವೋ ಮನಃಪದಂ ಪ್ರಾಪ್ಯ ವೈರಿಂಚಂ ಪದಮಾಗತಃ।
ಯಥಾ ಬ್ರಹ್ಮಂಸ್ತಥಾ ಸರ್ವಂ ವಿಸ್ತರೇಣ ವದಾಶು ಮೇ ॥ ೧೨ ॥

ಶ್ರೀ ವಸಿಷ್ಠ ಉವಾಚ:—

ಬ್ರಾಹ್ಮೇ ಶೃಣು ಮಹಾಬಾಹೋ ಶರೀರಗ್ರಹಣೇ ಕ್ರಮಂ ।
ನಿದರ್ಶನೇನ ತೇನೈವ ಜಾಗತೀಂ ಜ್ಞಾಸ್ಯಸಿ ಸ್ಥಿತಿಂ ॥ ೧೩ ॥

ದಿಕ್ಕಾಲಾದ್ಯನವಚ್ಛಿನ್ನಮಾತ್ಮತತ್ತ್ವಂ ಸ್ವಶಕ್ತಿತಃ ।
ಲೀಲಯಾವೈ ಯದಾದತ್ತೇ ದಿಕ್ಕಾಲಕಲಿತಂ ವಪುಃ ॥ ೧೪ ॥

ತದೈವ ಜೀವಪರ್ಯಾಯಂ ವಾಸನಾವೇಶತತ್ಪರಂ ।
ಮನಃ ಸಂಪದ್ಯತೇ ಲೋಲಂ ಕಲನಾಕಲನೋನ್ಮುಖಂ ॥ ೧೫ ॥

ದೇಹವೇ ಸಂಭವಿಸುವುದು. ಹೀಗೆಯೇ ಉತ್ತಮವಾದ ಪ್ರತಿಭಾಸ ವಶದಿಂದಲೇ ವಿಭುವಾದ ಚತುರ್ಮುಖ ಬ್ರಹ್ಮನು ಶ್ರೀ ನಾರಾಯಣನ ನಾಭಿ ಕಮಲದ ಕೋಶ (ಮೊಗ್ಗು) ಎಂಬ ಶ್ರೇಷ್ಠವಾದ ಮನೆಯೊಳಗೆ ಜನಿಸಿರುವನು. ಅನಂತರ, ಆ ಚತುರ್ಮುಖನ ಸಂಕಲ್ಪಕ್ರಮದಿಂದಲೇ ಅತಿಸಾಂದ್ರವಾದ ಮಹಾ ಮಾಯೆಯಿಂದ ಮಾಯೆಯು ಸ್ಥಿರವಾಗಿ ನೆಲೆಸುವಂತೆ ಅಪಾರವಾದ ಈ ಸೃಷ್ಟಿಯು ನೆಲೆಯಾದ ಸ್ಥಿತಿಯನ್ನು ಪಡೆದಿರುವುದು.

೧೨. ಶ್ರೀರಾಮನು ಕೇಳಿದನು:—ಎಲೈ ಬ್ರಹ್ಮಜ್ಞರೇ, ತಾವು ಈಗ ಅಪ್ಪಣೆ ಕೊಡಿಸಿದಂತೆ ಜೀವನು ಪ್ರಥಮತಃ ಮನೋರೂಪವನ್ನು ಹೊಂದಿ ಅನಂತರ ಚತು ರ್ಮುಖ ಬ್ರಹ್ಮನ ಪದವನ್ನು (ರೂಪ) ಹೇಗೆ ಯಾವ ಕ್ರಮದಿಂದ ಹೊಂದುವನೋ ಹಾಗೆ ಆ ಕ್ರಮವನ್ನು ಎಲ್ಲವನ್ನೂ ವಿಸ್ತಾರವಾಗಿ ಕೂಡಲೆ ದಯೆಮಾಡಿ ಉಪದೇಶಿಸ ಬೇಕು.

೧೩. ಶ್ರೀ ವಸಿಷ್ಠನು ಹೇಳಿದನು—ಅಯ್ಯ ಮಹಾಬಾಹುವೇ, ಬ್ರಹ್ಮನು ಶರೀರಗ್ರಹಣಮಾಡುವ ಕ್ರಮವನ್ನು ಈಗ ಹೇಳುವೆನು; ಕೇಳು. ಈ ನಿದರ್ಶನ ದಿಂದಲೇನೇ ಜಗತ್ತಿನ ಸ್ಥಿತಿಯನ್ನು ತಿಳಿಯುವೆ.

೧೪-೧೫. ದಿಕ್ಕು ಕಾಲ (ವಸ್ತು) ಮೊದಲಾದವುಗಳಿಂದ ಅಪರಿಚ್ಛಿನ್ನವಾದ (ಪರಿಮಿತಿಗೆ ಒಳಗಾದ ಅಥವಾ ಮೊಟಕಾಗದ) ಆತ್ಮತತ್ತ್ವವು ತನ್ನ ಅಧೀನದಲ್ಲಿರುವ

ಕಲಯಂತೀ ಮನಃಶಕ್ತಿರಾದೌ ಭಾವಯತಿ ಕ್ಷಣಾತ್ ।
ಆಕಾಶಭಾವನಾಮಚ್ಛಾಂ ಶಬ್ದಬೀಜರಸೋನ್ಮುಖೀಂ ॥ ೧೬ ॥

ತತಸ್ತಾಂ ಘನತಾಂ ಯಾತಂ ಘನಸ್ಪಂದಕ್ರಮಾನ್ಮನಃ ।
ಭಾವಯತ್ಯನಿಲಸ್ಪಂದಂ ಸ್ಪರ್ಶಬೀಜರಸೋನ್ಮುಖಂ ॥ ೧೭ ॥

ಮಾಯಾಶಕ್ತಿಯ ದೆಸೆಯಿಂದ ಕೇವಲ ಲೀಲೆಯಿಂದಲೇ ಯಾವಾಗ ತಾನಾಗಿಯೇ (ಸ್ವೇಚ್ಛೆಯಿಂದಲೇ) ದಿಕ್ಕಾಲಾದಿಗಳಿಂದ ಪರಿಚ್ಛಿನ್ನವಾದ ಶರೀರವನ್ನು ಸ್ವೀಕರಿಸುವುದೋ ಆಗಲೇ ಜೀವನೆಂಬ ಮತ್ತೊಂದು ಹೆಸರನ್ನು ಪಡೆದಿರುವ ವಾಸನಾವೇಶಪರವಾದ ಅತಿ ಚಂಚಲವಾದ ನಾನಾವಿಧಗಳಿಂದ ಕಲ್ಪನೆಗಳನ್ನು ಕಲ್ಪಿಸುವುದರಲ್ಲಿ ಉನ್ಮುಖವಾದ ಮನಸ್ ಆಗಿಬಿಡುವುದು.

೧೬. ಹೀಗೆ ಕಲ್ಪನೋನ್ಮುಖವಾದ ಮನಶ್ಶಕ್ತಿಯು ಶಬ್ದತನ್ಮಾತ್ರದಲ್ಲಿಯೂ ಶ್ರೋತ್ರೇಂದ್ರಿಯದಲ್ಲಿಯೂ ಉನ್ಮುಖವಾದ ಅತಿ ಸ್ವಚ್ಛವಾದ ಆಕಾಶಭಾವನೆಯನ್ನು ಪ್ರಥಮತಃ ಒಂದು ಕ್ಷಣಕಾಲದಲ್ಲಿ ಸ್ವೀಕರಿಸುವುದು.

[ಪೂರ್ವಸರ್ಗದಲ್ಲಿ ಆಕಾಶಾದಿಕ್ರಮದಿಂದ ಆವಿರ್ಭವಿಸಿದ ಹಿರಣ್ಯಗರ್ಭನ ಅಹಂಭಾವವನ್ನು ಗ್ರಹಿಸುವ ಉಪಾಸನದಿಂದ ಸಂಸ್ಕಾರವನ್ನು ಪಡೆದ ಮನಸ್ಸು ಹಾಗೆಯೇ ಅವ್ಯಾಕೃತದಲ್ಲಿ ಲೀನವಾದದ್ದಾಗಿ ಮನಶ್ಶಕ್ತಿಯೆನ್ನಿಸಿಕೊಳ್ಳುವುದು. ಅದು ಅದೇ ಕ್ರಮದಿಂದಲೇ ತನ್ನ ಆವಿರ್ಭಾವವನ್ನು ಕಲ್ಪಿಸಿಕೊಳ್ಳುವುದು.

[ಶಬ್ದಾನಾಂ ಬೀಜಂ-ಶಬ್ದತನ್ಮಾತ್ರ. ರಸಃ-ಶ್ರೋತ್ರೇಂದ್ರಿಯ ಎಂದು ತಾತ್ಪರ್ಯ ಪ್ರಕಾಶ.]

ಶಬ್ದಬೀಜರಸೋನ್ಮುಖೀ–ಆಕಾಶದ ಗುಣವಾದ ಶಬ್ದದಲ್ಲಿ ಬೀಜರೂಪವಾಗಿ ಅಡಗಿ ಕುಳಿತಿರುವ ವಿಷಯ ಭೋಗೇಚ್ಛೆಯು ಬಹಿರ್ಮುಖವಾಗುವಿಕೆ. ರಸ–ವಿಷಯ ಭೋಗೆಚ್ಛೆ ರಸೋಽಪ್ಯಸ್ಯಪರಂದೃಷ್ಟ್ವಾನಿವರ್ತತೇ ಗೀತಾ.

೧೭. ಆನಂತರ ಅಂತಹ ಆಕಾಶಭಾವನೆಯನ್ನು ಹೊಂದಿ ಘನತೆಯನ್ನು (ಗುರುತ್ವವನ್ನು) ಪಡೆದ ಆ ಮನಸ್ಸು ಕ್ರಮೇಣ ವಿಶೇಷವಾದ ಸ್ಪಂದ (ಚಲನ) ಶಕ್ತಿಯಿಂದ ವಾಯುರೂಪವಾಗಿ ಸ್ಪರ್ಶತನ್ಮಾತ್ರದಲ್ಲಿಯೂ ತ್ವಗಿಂದ್ರಿಯ (ಚರ್ಮ) ದಲ್ಲಿಯೂ ಅಭಿಮುಖವಾದ ಸ್ವಲ್ಪ ಚಲನವನ್ನು ಭಾವಿಸಿಕೊಳ್ಳುವುದು.

(ಸ್ಪರ್ಶಬೀಜಂ-ಸ್ಪರ್ಶತನ್ಮಾತ್ರ. ರಸಃ-ತ್ವಗಿಂದ್ರಿಯ ತಾ.ಪ್ರ.)

ತಾಭ್ಯಾಮಾಕಾಶವಾತಾಭ್ಯಾಮದೃಷ್ಟಾಭ್ಯಾಂ ಮನೋದೃಶಾ ।
ಶಬ್ದಸ್ಪರ್ಶಸ್ವರೂಪಾಭ್ಯಾಂ ಸಂಘಾತಾಜ್ಜನ್ಯತೇಽನಲಃ ॥ ೧೮ ॥

ಮನಸ್ತದ್ಘನತಾಂ ಪ್ರಾಪ್ಯ ತತೋ ಭಾವಯತಿ ಕ್ಷಣಾತ್ ।
ಪ್ರಕಾಶ್ಯಮಮಲಾಲೋಕ ಮಾಲೋಕಸ್ತೇನ ವರ್ಧತೇ ॥ ೧೯ ॥

ಮನಸ್ತಾವದ್ಗುಣಗತಂ ರಸತನ್ಮಾತ್ರವೇದನಂ ।
ಕ್ಷಣಾರ್ಧೇನ ತ್ವಪಾಂ ಶೈತ್ಯಂ ಜಲಸಂವಿತ್ತತೋ ಭವೇತ್ ॥ ೨೦ ॥

ತತಸ್ತಾದೃಗ್ಗುಣಗತಂ ಮನೋ ಭಾವಯತಿ ಕ್ಷಣಾತ್ ।
ಸ್ವರೂಪಂ ಗಂಧವತ್ಸ್ಥೂಲಂ ಯೇನೋದೇಷ್ಯತಿ ಮೇದಿನೀ ॥ ೨೧ ॥

---

೧೮. ಪಂಚೀಕರಣ ಮಾಡಲ್ಪಡದ (ಅಪಂಚೀಕೃತವಾದ) ಕಾರಣ. ಅತ್ಯಂತ ಸೂಕ್ಷ್ಮವಾಗಿ ಶಬ್ದಸ್ಪರ್ಶರೂಪಗಳಾಗಿರುವ ಆಕಾಶವಾಯುಗಳೆರಡೂ ಮನಸ್ಸಿನಿಂದ ಅವಚ್ಛಿನ್ನನಾದ ಚೈತನ್ಯಾತ್ಮಕನಾದ ಜೀವನಿಂದ ಕಾಣಲ್ಪಡದವುಗಳಾಗಿಯೇ ಒಂದು ಸಂಘಾತವಾಗಿ ಅದರ ದೆಸೆಯಿಂದ ತೇಜಸ್ಸು ಜನಿಸುವುದು.

೧೯. ತರುವಾಯ ಮನಸ್ಸು ಈ ಭಾವನೆಯಿಂದ ಘನವಾಗಿ (ಘನತೆಯನ್ನು ಹೊಂದಿ) ಒಂದು ಕ್ಷಣದೊಳಗಾಗಿ ನಿರ್ಮಲವಾದ ಪ್ರಕಾಶವುಳ್ಳ ತೇಜಸ್ಸನ್ನು ಭಾವನೆಮಾಡುವುದು. ಇದರಿಂದ ಪ್ರಕಾಶವು (ತೇಜಸ್ಸು) ವೃದ್ಧಿಹೊಂದುವುದು.

೨೦. ಬಳಿಕ, ಈ ಆಕಾಶವಾಯು ತೇಜಸ್ಸುಗಳಿಂದ ಉಪಚಯವನ್ನು ಹೊಂದಿದ ಮನಸ್ಸು ರಸತನ್ಮಾತ್ರವನ್ನು ಭಾವಿಸುವುದು. ಅನಂತರ ಕ್ಷಣಾರ್ಧದಲ್ಲಿ ನೀರಿನಲ್ಲಿ ಶೈತ್ಯವನ್ನು ಹೊಂದಿ ಜಲವೆಂಬ ಪ್ರತೀತಿಗೆ ಯೋಗ್ಯವಾಗುವುದು.

೨೧. ಅನಂತರವೂ ಹಿಂದೆ ಹೇಳಿದ ಈ ಆಕಾಶ, ವಾಯು, ತೇಜಸ್ಸು, ಜಲಗಳಿಂದ ವೃದ್ಧಿಪಡೆದ ಮನಸ್ಸು ಸ್ಥೂಲವಾದ ಗಂಧ ಸ್ವರೂಪವನ್ನು ಭಾವಿಸುವುದು. ಅದರಿಂದ ಪೃಥ್ವಿಯು (ಭೂಮಿ) ಉದಯಿಸುವುದು.

೨೨. ತರುವಾಯ ಈ ರೀತಿಯಾಗಿ ಭೂತತನ್ಮಾತ್ರಗಳಿಂದ ಸಮಾಕ್ರಾಂತವಾದ ಮನಸ್ಸು ಸೂಕ್ಷ್ಮಾವಸ್ಥೆಯನ್ನು ಬಿಟ್ಟು ಆಕಾಶದಲ್ಲಿ ಬೆಂಕಿಯ ಕಿಡಿಯಂತೆ (ಅಗ್ನಿಕಣ) ಸ್ಫುರಿಸಿದ ಲಿಂಗದೇಹವನ್ನು ನೋಡುವುದು.

ಅಥೇತ್ಥಂ ಭೂತತನ್ಮಾತ್ರವೇಷ್ಟಿತಂ ತನುತಾಂ ಜಹತ್ ।
ವಪುರ್ವಹ್ನಿಕಣಾಕಾರಂ ಸ್ಫುರಿತಂ ವ್ಯೋಮ್ನಿ ಪಶ್ಯತಿ । ॥ ೨೨ ॥

ಅಹಂಕಾರಕಲಾಯುಕ್ತಂ ಬುದ್ಧಿಬೀಜಸಮನ್ವಿತಂ ।
ತತ್ಪುರ್ಯಷ್ಟಕಮಿತ್ಯುಕ್ತಂ ಭೂತಹೃತ್ಪದ್ಮಷಟ್ಪದಂ ॥ ೨೩ ॥

೨೩.. ಆ ಲಿಂಗಶರೀರವೇ ಅಹಂಕಾರವಾಸನಾಯುಕ್ತವಾಗಿಯೂ ಬುದ್ಧಿಬೀಜ ಸಮನ್ವಿತವಾಗಿಯೂ ಸಕಲ ಭೂತಗಳ ಹೃದಯಗಳೆಂಬ ಕಮಲಗಳಿಗೆ ಭ್ರಮರ ರೂಪವಾಗಿಯೂ ಇದ್ದುಕೊಂಡು "ಪುರ್ಯಷ್ಟಕ"ವೆಂದು ಹೇಳಲ್ಪಡುವುದು.

("ಕರ್ಮಜ್ಞಾನೇಂದ್ರಿಯಗಣೌ ಭೂತಪ್ರಾಣಮನೋಗಣಾಃ । ಅವಿದ್ಯಾಕಾಮಕರ್ಮಾಣಿ ಲಿಂಗಂ ಪುರ್ಯಷ್ಟಕಂ ವಿದುಃ॥ ಐದು ಕರ್ಮೇಂದ್ರಿಯಗಳ ಸಮುದಾಯ ಐದು ಜ್ಞಾನೇಂದ್ರಿಯಗಳ ಗುಂಪು. ಐದು ಭೂತಗಳು, ಐದು ಪ್ರಾಣವಾಯುಗಳು, ಮನೋಬುದ್ಧ್ಯಹಂಕಾರ ಚಿತ್ತಗಳೆಂಬ ನಾಲ್ಕುವಿಧ ಅಂತರಂಗ. ಅವಿದ್ಯೆ, ಕಾಮ, ಕರ್ಮ ಇವುಗಳೆಂಟೂ ಸೇರಿ ಒಟ್ಟಿಗೆ ಲಿಂಗದೇಹ ಅಥವಾ ಪುರ್ಯಷ್ಟಕವೆಂದು ವಾಸಿಷ್ಠವ್ಯಾಖ್ಯೆಯಲ್ಲಿ ಪರಿಗಣಿತವಾಗಿದೆ. ಹಿಂದೆ ಇದೇ ಸ್ಥಿತಿಪ್ರಕರಣ ೩೬ನೆಯ ಸರ್ಗ ೬ನೆ ಶ್ಲೋಕದಲ್ಲಿ ಕೊಟ್ಟಿರುವ ವಿವರಣೆಯು ಮಹಾಭಾರತದಲ್ಲಿ ಹೇಳಿರುವುದಕ್ಕೆ ಅನುಸಾರವಾದುದು.

(೧) ವಾಕ್, ಪಾಣಿ, ಪಾದ, ಪಾಯು, ಗುಹ್ಯೇಂದ್ರಿಯಗಳು ಕರ್ಮೇಂದ್ರಿಯಗಳು.

(೨) ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು. ಜ್ಞಾನೇಂದ್ರಿಯಗಳು.

(೩) ಆಕಾಶ, ವಾಯು, ತೇಜಸ್ಸು, ಜಲ, ಪೃಥವೀ—ಭೂತ ಪಂಚಕಗಳು.

(೪) ಪ್ರಾಣ. ಅಪಾನ, ವ್ಯಾನ, ಉದಾನ, ಸಮಾನಗಳು—ವಾಯುಗಳು.)

ತಸ್ಮಿಂಸ್ತು ತೀವ್ರಸಂವೇಗಾತ್ ಭಾವಯದ್ಭಾಸ್ವರಂ ವಪುಃ ।
ಸ್ಥೂಲತಾಮೇತಿ ಪಾಕೇನ ಮನೋ ಬಿಲ್ವಫಲಂ ಯಥಾ ॥ ೨೪ ॥

ಮೂಷಾಸ್ಥದ್ರುತಹೇಮಾಭಂ ಸ್ಫುರಿತಂ ವಿಮಲಾಂಬರೇ ।
ಸನ್ನಿವೇಶಮುಪಾದತ್ತೇ ತತ್ತೇಜಃ ಸ್ವಸ್ವಭಾವತಃ ॥ ೨೫ ॥

ತಸ್ಮಿನ್ ಸ್ವಸನ್ನಿವೇಶೇ ಚ ತೇಜಃಪುಂಜಮಯೋ ಪುನಃ ।
ಭಜತೇ ಭಾವನಾಂ ಸ್ಫಾರಾಂ ನಿಶ್ಚಿತಾಮಾತತಾಂಬರಾಂ ॥ ೨೬ ॥

---

೨೪. ಈ ವಿಧವಾದ ಲಿಂಗಶರೀರದಲ್ಲಿಯೇ ತೀವ್ರವಾದ (ಉತ್ಕಟವಾದ) ಅಭಿಮಾನದಿಂದ ಪ್ರಕಾಶಮಾನವಾದ ಸ್ಥೂಲಶರೀರವನ್ನು ಭಾವನೆಮಾಡುತ್ತಾ ಮನಸ್ಸು ಮೊದಮೊದಲು ಸಣ್ಣದಾಗಿರುವ ಬಿಲ್ವದ ಕಾಯಿಯು ಕಾಲಕ್ರಮದಲ್ಲಿ ಪರಿಪಕ್ವವಾಗುತ್ತಾ ಬಂದಹಾಗೆಲ್ಲಾ ಬಲಿತು ದಪ್ಪ (ಸ್ಥೂಲ) ವಾಗುವಂತೆ ತಾನೂ ಬರುಬರುತ್ತಾ ಪರಿಪಕ್ವವಾಗಿ ಸ್ಥೂಲರೂಪವನ್ನು ಪಡೆಯುವುದು.

೨೫. ತೇಜೋರೂಪವಾದ ಆ ಲಿಂಗಶರೀರವು ಮೂಷೆಯೊಳಗೆ ಎರಕಹೊಯ್ದಿರುವ ಕರಗಿಸಿದ ಸುವರ್ಣದ ದ್ರವದಂತೆ ಪ್ರಕಾಶಮಾನವಾಗಿ (ಬಹಿಃ ಸ್ಥೂಲವಾಗಿ ಪ್ರಕಾಶಿಸುತ್ತಲೂ ಅಂತಃಸೂಕ್ಷ್ಮವಾಗಿ ಪ್ರಕಾಶಿಸುತ್ತಲೂ) ಸ್ಥೂಲದೇಹದಿಂದ ಸಮಾಯುಕ್ತವಾದುದಾಗಿ ನಿರ್ಮಲವಾದ ಆಕಾಶದಲ್ಲಿ ಹೊಳೆಯುತ್ತಿರುವ ಸನ್ನಿವೇಶವನ್ನು ತನ್ನ ಸ್ವಭಾವದಿಂದಲೇ ಸ್ವೀಕರಿಸುವುದು.

(ಮೂಷಾ-ಪ್ರತಿಮೆಗಳನ್ನು ಎರಕಹೊಯ್ಯುವುದಕ್ಕಾಗಿ ಪ್ರತಿಮೆಗಳ ಆಕಾರವಾಗಿ ಒಳಗೆ ಟೊಳ್ಳಾಗಿ ಮಾಡಿಕೊಂಡಿರುವ ಕಲಸಿದ ಮಣ್ಣಿನ ರೂಪ. ಅದರೊಳಗೆ ಚೆನ್ನಾಗಿ ಕರಗಿಸಿದ ಲೋಹಗಳ ದ್ರವವನ್ನು ಸುರಿದು ಅದು ಪ್ರತಿಮಾಕಾರವಾಗಿ ಘನವಾಗಿ ಬಿಟ್ಟಬಳಿಕ, ಮೇಲುಗಡೆಯಿರುವ ಮಣ್ಣಿನ ರೂಪವನ್ನು ಒಡೆದುಬಿಟ್ಟರೆ ಒಳಗೆ ಪ್ರತಿಮೆಯ ಲೋಹಮಯ ಆಕಾರವು ಕಾಣುವುದು.)

೨೬. ಕೇವಲ ತೇಜೋರಾಶಿಮಯವಾದ ಆ ತನ್ನ ಸನ್ನಿವೇಶದಲ್ಲಿಯೇ ಲಿಂಗಶರೀರವು ಪುನಃ ಆಕಾಶವನ್ನೆಲ್ಲ ವ್ಯಾಪಿಸಿಕೊಳ್ಳುವಂತಹ (ಬಹಳವಾದ) ವಿಶೇಷ ದೃಢಭಾವನೆಯನ್ನು ಮಾಡುವುದು.

(ಶ್ಲೋಕದಲ್ಲಿ ಪುನಃ ಎಂಬುದಕ್ಕೆ ಬದಲಾಗಿ ಮನಃ ಎಂಬ ಪಾಠಾಂತರವೂ ಇರುವುದು. ಆ ಪಾಠಾಂತರವು ವ್ಯಾಖ್ಯಾನಕಾರರಿಗೆ ಅಭಿಮತವಾಗಿದೆ.)

ಊರ್ಧ್ವಗಂ ಶಿರಃ ಪೀಠಮಯಿಮಧಃ ಪಾದಮಯಿಂ ತಥಾ ।
ಪಾರ್ಶ್ವಯೋರ್ಹಸ್ತಸಂಸ್ಥಾನಾಂ ಮಧ್ಯೇ ಜೋದರಧರ್ಮಿಣೀಂ ॥ ೨೭ ॥

ಪ್ರಕಟಾವಯವೋ ಬಾಲೋ ಜ್ವಾಲಾಮಾಲಾಮಲಾಕೃತಿಃ ।
ಮನೋರಥವಶೋಪಾತ್ತವಪುಸ್ತಿಷ್ಠತ್ಯಸಾವಥ ॥ ೨೮ ॥

ಏವಂ ಸ್ವವಾಸನಾವೇಶಾತ್ ಕಲಿತಾಂಗೋ ಮನೋ ಮುನಿಃ ।
ನಯತ್ಯುಪಚಯಂ ದೇಹಂ ಸ್ವಸ್ವಭಾವಮೃತುರ್ಯಥಾ ॥ ೨೯ ॥

ಕಾಲೇನ ಸ್ಫುಟತಾಮೇತಿ ಭವತ್ಯಮಲವಿಗ್ರಹಃ।
ಬುದ್ಧಿಸತ್ವಬಲೋತ್ಸಾಹವಿಜ್ಞಾನೈಶ್ವರ್ಯಸಂಸ್ಥಿತಃ ॥ ೩೦ ॥

---

೨೭. ಆ ನಿಶ್ಚಿತವಾದ ಭಾವನೆಯಾದರೋ ಮೇಲುಭಾಗದಲ್ಲಿ ಶಿರಸ್ (ತಲೆ) ಎಂಬ ಪೀಠಮಯವಾಗಿಯೂ ಕೆಳಗಡೆಯಲ್ಲಿ ಪಾದಮಯವಾಗಿಯೂ ಉಭಯ ಪಾರ್ಶ್ವಗಳಲ್ಲಿಯೂ ಹಸ್ತಗಳುಳ್ಳದ್ದಾಗಿಯೂ ಮಧ್ಯದಲ್ಲಿ ಉದರ [ಹೊಟ್ಟೆ] ಧರ್ಮವುಳ್ಳದಾಗಿಯೂ ಇರುವುದು.

೨೮. ಅನಂತರ, ಈ ರೀತಿಯಾಗಿ ಪ್ರಕಟವಾದ ಎಲ್ಲ ಅವಯವಗಳನ್ನೂ ಪಡೆದ ಆ ಬ್ರಹ್ಮನು ಜ್ವಾಲಾಮಾಲೆಗಳಂತೆ ನಿರ್ಮಲವಾದ ಆಕಾರವುಳ್ಳವನಾದರೂ ತನ್ನ ಮನೋರಥವಶದಿಂದಲೇ ಅದಕ್ಕೆ ಅನುಸಾರವಾದ ದೇಹವನ್ನು ಸ್ವೀಕರಿಸಿ, ಬಾಲನಾಗಿ ಇರುವನು.

೨೯. ಹೀಗೆ ತನ್ನ ವಾಸನೆಯ ಆವೇಶ [ಆಕ್ರಮಣ] ದಿಂದ ಸಕಲಾವಯವಗಳನ್ನು ಕಲ್ಪಿಸಿಕೊಂಡಿರುವ ಮನಸ್ ಎಂಬ ಮುನಿಯು [ಮನನಾತ್ ಮುನಿರುಚ್ಯತೇ-ಮನನಶೀಲ] ವಸಂತಾದಿ ಋತುಗಳು ತಮ್ಮ ತಮ್ಮ ಸ್ವಭಾವಧರ್ಮಗಳನ್ನು ಆಯಾ ಕಾಲಗಳಲ್ಲಿ ವೃದ್ಧಿಪಡಿಸಿಕೊಳ್ಳುವಂತೆ ತನ್ನ ಸ್ವಭಾವವಾದ ಆ ಸ್ಥೂಲಶರೀರವನ್ನು ಕ್ರಮೇಣ ವೃದ್ಧಿಗೊಳಿಸುವುದು.

೩೦. ಬಾಲರೂಪನಾದ ಆ ಬ್ರಹ್ಮನು ಕಾಲಕಳೆಯುತ್ತಾ ವಯಸ್ಸು ಹೆಚ್ಚಿದ ಹಾಗೆಲ್ಲಾ ಅಂಗೋಪಾಂಗಗಳ ಸೌಷ್ಠವವನ್ನು ಪಡೆಯುವನು. ಅವನ ಶರೀರವು ನಿರ್ಮಲವಾಗಿ ಪ್ರಕಾಶಿಸುವುದು. ಬಳಿಕ, ಬುದ್ಧಿ-ಸತ್ತ್ವ-ಬಲ-ಉತ್ಸಾಹ-ವಿಜ್ಞಾನ-ಐಶ್ವರ್ಯಗಳಿಂದ ಯುಕ್ತನಾಗುವನು.

ಸ ಏವ ಭಗವಾನ್ ಬ್ರಹ್ಮಾ ಸರ್ವಲೋಕಪಿತಾಮಹಃ ।
ಪ್ರವತ್ಕನಕಸಂಕಾಶಃ ಪರಮಾಕಾಶಸಂಭವಃ ॥ ೩೧ ॥

ಯಥಾಸೌ ಪರಮಾಕಾಶೇ ತಿಷ್ಠತ್ಯಪರರೂಪವಾನ್ ।
ಜನಯತ್ಯಾತ್ಮನೋ ಮೋಹಮಾತ್ಮಸ್ಥಂ ಚಿತ್ತಲೀಲಯಾ ॥ ೩೨ ॥

ಕದಾಚಿತ್ಕೇವಲಂ ವ್ಯೋಮ ಪರಮಂ ಪಾರವರ್ಜಿತಂ ।
ಅನಾದಿಮಧ್ಯಪರ್ಯಂತಂ ಕದಾಚಿದಮಲಂ ಪಯಃ ॥ ೩೩ ॥

[ಜ್ಞಾನಮಪ್ರತಿಮಂ ಯಸ್ಯ ವೈರಾಗ್ಯಂ ಚ ಜಗತ್ಪತೇಃ । ಐಶ್ವರ್ಯಂ ಚೈವ ಧರ್ಮಶ್ಚ ಸಹಸಿದ್ಧಂ ಚತುಷ್ಟಯಂ-ಎಂಬಂತೆ ಬುದ್ಧ್ಯಾದಿಸಹಜ ವಿಶೇಷಣಗಳನ್ನು ಹೊಂದಿದವನು.]

೩೧. ಹೀಗೆ ಅತ್ಯುತ್ತಮ ಚಿದಾಕಾಶ ಸಂಭೂತನಾಗಿ ಕರಗಿಸಿದ ಸುವರ್ಣರಸ ದಂತೆ ಥಳಥಳಿಸುವ ಆ ಭಗವಂತನೇ ಸರ್ವಲೋಕಪಿತಾಮಹನಾದ ಚತುರ್ಮುಖ ಬ್ರಹ್ಮನೆನ್ನಿಸಿಕೊಂಡಿರುವನು.

[ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ । ವೈರಾಗ್ಯಸ್ಯಾಥಮೋಕ್ಷಸ್ಯ ಷಣ್ಣಾಂ ಭಗ ಇತೀರಿತಃ॥ಸಮಗ್ರ ಐಶ್ವರ್ಯ,ಧರ್ಮ, ಯಶಸ್ಸು,ಸಂಪತ್ತು, ವೈರಾಗ್ಯ, ಮೋಕ್ಷ ಈ ಆರೂ ಭಗವೆನ್ನಿಸುವುವು. ಇವುಗಳುಳ್ಳವನು ಭಗವಾನ್.]

೩೨. ಬೇರೆ ಇನ್ನಾವ ರೂಪವೂ (ರೂಪಾಂತರ) ಇಲ್ಲದವನಾದ ಆ ಚತುರ್ಮುಖನು ಅತ್ಯುತ್ತಮ ಚಿದಾಕಾಶರೂಪ ಬ್ರಹ್ಮನಲ್ಲಿ ಎಂತಹ ಸ್ವಸತ್ತೆಯಿಂದ ಇರುವನೋ ಅಂತಹ ವ್ಯವಹಾರ ಸಮರ್ಥವಾದ ಸತ್ತಾರೂಪದಿಂದಲೇ ತನ್ನೊಳಗಿರುವ ತನ್ನ ಅಜ್ಞಾನವನ್ನೇ ಚಿತ್ತಲೀಲೆಯಿಂದ (ಅಂದರೆ ಮುಂದೆ ಹೇಳುವ ಪಂಚೀಕೃತವಾದ ಆಕಾಶಾದಿ ರೂಪದಿಂದ) ಸೃಜಿಸುವನು.

೩೩. ಒಂದು ಸಮಯದಲ್ಲಿ, ಅಪಾರವೂ ಆದಿಮಧ್ಯಾಂತರಹಿತವೂ ಆದ, ಕೇವಲ ಪರಮಾಕಾಶವನ್ನೂ,ಇನ್ನೊಂದು ಸಮಯದಲ್ಲಿ ನಿರ್ಮಲವಾದ ಜಲವನ್ನೂ ಸೃಜಿಸುವನು.

(ಪಾರ-ಪರಾವಧಿಯು. ಆದಿಃ-ಪೂರ್ವಾವಧಿಯು. ಪರ್ಯಂತೌ-ಎರಡು ಪಕ್ಕ

ಕದಾಚಿತ್ ಕಲ್ಪಕಾಲಾಗ್ನಿಜ್ವಾಲಾಭಾಸ್ವರಮಂಡಕಂ ।
ಕದಾಚಿತ್ಕಾನನಂ ಕಾರ್ಷ್ಣ್ಯಂ ಕಾಲಂ ಕಮಲಕುಡ್ಮಲಂ ॥ ೩೪ ॥

ಅನ್ಯಾನ್ಯನ್ಯಾನ್ಯನೇಕಾನಿ ಪ್ರತಿಜನ್ಮಾವಧಿಃ ಪ್ರಭುಃ ।
ಕಲ್ಪಯರ್ನ್ ಪಾಲಯತ್ಯೇಷ ನಾನಾರೂಪಾಣಿ ಹೇಲಯಾ ॥ ೩೫ ॥

ತತ್ರೇದಂ ಪ್ರಥಮುತ್ಪೆನ ಯದೈವ ಬ್ರಹ್ಮಣಃ ಪದಾತ್ ।
ಅವತೀರ್ಣಸ್ತದಾಜ್ಞಾನಾತ್ತಥೈವ ಸುಖಮುಸ್ಮೃತ್ಯಂ ॥ ೩೬ ॥

ಗಳ ಅವಧಿಗಳು. ಇವು ಯಾವುವೂ ಇಲ್ಲದುದರಿಂದಲೇ ಮಹಾಕಾಶಕ್ಕೆ ಮಧ್ಯಮಾವಧಿಯೂ ಇಲ್ಲವು. ಸೃಷ್ಟಿ ಕ್ರಮದಲ್ಲಿ ಅಕಾಶವು ಮೊದಲನೆಯದಾದುದರಿಂದ ಈ ಶ್ಲೋಕದಲ್ಲಿ ಅದಕ್ಕೆ ಪರಮಂ ಎಂಬ ವಿಶೇಷಣ ಕೊಟ್ಟಿದೆ.)

೩೪–೩೫. ಮತ್ತೊಂದು ಸಮಯದಲ್ಲಿ ಪ್ರಳಯ ಕಾಲದ ಅಗ್ನಿ ಜ್ವಾಲೆಗಳಂತೆ ಪ್ರಕಾಶಮಾನವಾದ ಬ್ರಹ್ಮಾಂಡವನ್ನೂ ಮಗದೊಂದು ಸಮಯದಲ್ಲಿ (ಪೃಥಿವಿಯ ಸೃಷ್ಟಿಯ ನಂತರ ಭೂತ ಸೃಷ್ಟಿಗಿಂತ ಮೊದಲು) ಕೃಷ್ಣವರ್ಣದ (ಕಪ್ಪು) ಅರಣ್ಯಗಳ ಶ್ರೇಣಿಯನ್ನೂ (ವೃಕ್ಷಗಳಿಂದ ವ್ಯಾಪ್ತವಾದ ಸಮಸ್ತ ಭೂಮಿಯನ್ನೂ) ಮತ್ತೊಂದು ಕಾಲದಲ್ಲಿ (ಪಾದ್ಮಕಲ್ಪದಲ್ಲಿ) ಕಪ್ಪಾದ ವಿಷ್ಣುವಿನ ನಾಭಿಯಿಂದ ಉದ್ಭವಿಸಿದ ಪದ್ಮಕೋಶವನ್ನೂ ಸೃಜಿಸುವನು. ಹೀಗೆ ಸರ್ವಶಕ್ತನಾದ ಪ್ರಭುವು ಆಯಾ ಪ್ರತಿಯೊಂದು ಜನ್ಮವೇ ಅವಧಿಯಾಗುಳ್ಳವನಾಗಿ ಬೇರೆ ಬೇರೆ ವಿಧಗಳಾದ ಅನೇಕಾನೇಕ ರೂಪಗಳನ್ನು ಕಲ್ಪಿಸುತ್ತ ತಾನೇ ಅವುಗಳನ್ನೆಲ್ಲ ಲೀಲೆಯಿಂದ (ವಿಷ್ಣ್ವಾದಿರೂಪದಿಂದ) ಪಾಲನೆ ಮಾಡುತ್ತಿರುವನು.

೩೬. ಯಾವಾಗ ಅದೇ ಮೊಟ್ಟಮೊದಲನೆಯದಾಗಿ ಪರಬ್ರಹ್ಮನ ಪರಮಪದದ ದೆಸೆಯಿಂದ ಅವತರಿಸಿದನೋ ಆಗಿನಿಂದ ಮೊದಲುಗೊಂಡು ಹಾಗೆಯೇ ಅಜ್ಞಾನವಶದಿಂದ ಬ್ರಹ್ಮಾಂಡ ಗರ್ಭದೊಳಗೆ ಸುಷುಪ್ತಿಕಾಲಿಕ ಸುಖೋಪಲಕ್ಷಿತವಾದ ಅಸ್ಮರಣರೂಪ ಸುಷುಪ್ತಿಯೂ ಉಂಟಾಯಿತು.

[ಅಸ್ಮೃತಂ-ಅಸ್ಮರಣಂ–ಮೊದಲಿನ ತನ್ನ ವಾಸ್ತವವಾದ ರೂಪವನ್ನೂ ದೇಹವ್ಯವಹಾರಾದಿಗಳಿನ್ನೂ ಮರೆತುಬಿಡುವಿಕೆ ಎಂದು ತಾತ್ಪರ್ಯ ಪ್ರಕಾಶ.]

ಗರ್ಭನಿದ್ರಾವ್ಯಪಗಮೇ ವಪುಃ ಪಶ್ಯತಿ ಭಾಸ್ವರಂ ।
ಪ್ರಾಣಾಪಾನಪ್ರವಾಹಾಢ್ಯಂ ದ್ರವ್ಯೈರಿವ ವಿನಿರ್ಮಿತಂ ॥ ೩೭ ॥

ರೋಮಕೋಟಿಭಿರಾಕೀರ್ಣಂ ದ್ವಾತ್ರಿಂಶದ್ದಶನಾನ್ವಿತಂ ।
ತ್ರಿಸ್ಥೂಣಂ ಪಂಚದೈವತ್ಯಮಧಶ್ಚರಣಲಾಂಛಿತಂ ॥ ೩೮ ॥

ಪಂಚಭಾಗಂ ನವದ್ವಾರಂ ತ್ವಗ್ಲೇಪಮಸೃಣಾಂಗಕಂ ।
ಯುಕ್ತಮಂಗುಲಿವಿಂಶತ್ಯಾ ನಖವಿಂಶತಿಲಾಂಛಿತಂ ॥ ೩೯ ॥

ದ್ವಿಬಾಹುಂ ದ್ವಿಸ್ತನಂ ದ್ವ್ಯಕ್ಷಂ ಬಹ್ವಕ್ಷಿಭುಜಮೇವ ಚ ॥ ೪೦ ॥

ನೀಡಂ ಚಿತ್ತವಿಹಂಗಸ್ಯ ನೀಡಂ ಮನ್ಮಥಭೋಗಿನಃ ।
ತೃಷ್ಣಾಪಿಶಾಚ್ಯಾ ನಿಲಯಂ ಜೀವಕೇಸರಿಕಂದರಂ ।
ಅಭಿಮಾನಗಜಾಲಂ ಮಾನಸಾಂಭೋಜಶೋಭಿತಂ ॥ ೪೧ ॥

---

೩೭. ಗರ್ಭವಾಸವೆಂಬ ನಿದ್ರೆಯು ಕಳೆದುಹೋದ ತರುವಾಯ ಪ್ರಾಣಾಪಾನಾದಿ ಪಂಚ ವಿಧ ವಾಯುಗಳ ಪ್ರವಾಹಗಳಿಂದ ಪೂರ್ಣವಾಗಿಯೂ (ದ್ರವ್ಯಗಳಿಂದ) ಪಂಚ ಭೂತಗಳ ಸ್ವಚ್ಛವಾದ ಭಾಗಗಳಿಂದ ನಿರ್ಮಿತವಾದುದರಂತೆಯೂ ಇರುವ ಅತ್ಯಂತ ತೇಜೋಮಯವಾದ ಶರೀರವನ್ನು ನೋಡುವನು.

೩೮-೪೧. ಆ ಶರೀರವು ಅನೇಕ ರೋಮ ಕೋಟಿಗಳಿಂದ ವ್ಯಾಪ್ತವಾಗಿಯೂ ಮೂವತ್ತೆರಡು ಹಲ್ಲುಗಳಿಂದ ಕೂಡಿದ್ದಾಗಿಯೂ ಎರಡು ತೊಡೆಗಳ ಮತ್ತು ಬೆನ್ನಿನ ಮೂರು ಮೂಳೆಗಳೆಂಬ ಮೂರು ಸ್ತಂಭಗಳನ್ನು ಧರಿಸಿದುದಾಗಿಯೂ ಪ್ರಾಣಾಪಾನಾದಿ ಪಂಚ ವಾಯುಗಳಿಂದ ಪಂಚ ದೇವತೆಗಳನ್ನುಳ್ಳದ್ದಾಗಿಯೂ ಕೆಳಗಡೆಯಲ್ಲಿ ಪಾದಗಳಿಂದ ಯುಕ್ತವಾಗಯೂ ಕೈಗಳು, ಪಾದಗಳು, ತಲೆ, ವಕ್ಷಸ್ಥಲ, ಕುಕ್ಷಿ (ಹೊಟ್ಟೆ) ಎಂಬ ಐದು ಭಾಗಗಳನ್ನೊಳಗೊಂಡದ್ದಾಗಿಯೂ ಒಂಭತ್ತು ದ್ವಾರಗಳುಳ್ಳದ್ದಾಗಿಯೂ ಇರುವುದು. ಚರ್ಮವು ಚೆನ್ನಾಗಿ ಮುಚ್ಚಿಕೊಂಡಿರುವ ಕಾರಣ ಇದರ ಅಂಗೋಪಾಂಗಗಳೆಲ್ಲವೂ ಚೆನ್ನಾಗಿ ಥಳಥಳಿಸುತ್ತಿರುವುವು. ಈ ಶರೀರಕ್ಕೆ ಇಪ್ಪತ್ತು ಬೆರಳುಗಳೂ ಇಪ್ಪತ್ತು ಉಗುರುಗಳೂ ಇವೆ. ಇದಕ್ಕೆ ಎರಡು ತೋಳುಗಳೂ ಎರಡು ಸ್ತನಗಳೂ ಎರಡು ಕಣ್ಣುಗಳೂ ಇರುವುವು. ಆದರೆ ಅವನ ಇಚ್ಛೆಗೆ ಅನುಸಾರವಾಗಿ ಒಂದೊಂದು ವೇಳೆ ಅನೇಕ ಬಾಹುಗಳೂ ಅನೇಕ ಕಣ್ಣುಗಳೂ ಇರುವುದೂ ಉಂಟು. ಇಂತಹ ಈ ಶರೀರವು ಚಿತ್ತವೆಂಬ ಹಕ್ಕಿಗೆ ಗೂಡಾಗಿಯೂ ಮನ್ಮಥನೆಂಬ ಘಟ ಸರ್ಪಕ್ಕೆ ಹುತ್ತವಾಗಿಯೂ ತೃಷ್ಣೆಯೆಂಬ ಪಿಶಾಚಿಗೆ ವಾಸಸ್ಥಾನವಾದ

ಅಥಾಲೋಚ್ಯ ವಪುರ್ಬ್ರಹ್ಮಾ ಕಾಂತಮಾತ್ಮೀಯಮುತ್ತಮಂ ।
ಚಿಂತಯಾಮಾಸ ಭಗವಾಂಸ್ತ್ರಿಕಾಲಾಮಲದರ್ಶಿನಃ ॥ ೪೨ ॥

ಅಸ್ಮಿನ್ನಾಕಾಶಕುಹರೇ ತತೇ ಮಧುಪಲಾಂಛಿತೇ ।
ಅದೃಷ್ಟಪಾರಪರ್ಯಂತೇ ಪ್ರಥಮಂ ಕಿಮಭೂದಿತಿ ॥ ೪೩ ॥

ಇತಿ ಚಿಂತಿತವಾನ್ ಬ್ರಹ್ಮಾ ಸದ್ಯೋ ಜಾತೋಽಮಲಾತ್ಮದೃಕ್ ।
ಅಪಶ್ಯತ್ ಸರ್ಗವೃಂದಾನಿ ಸಮತೀತಾನ್ಯನೇಕಶಃ ॥ ೪೪ ॥

ಅಥ ಸಸ್ಮಾರ ಸಕಲಾನ್ ಸರ್ವಾನ್ ಧರ್ಮಗಣಾನ್ ಕ್ರಮಾತ್ ।
ವಸಂತಃ ಕುಸುಮಾನೀವ ವೇದಾನಾದಾಯ ಸಂಸ್ಥಿತಾನ್ ॥ ೪೫ ॥

ಮನೆಯಾಗಿಯೂ ಜೀವನೆಂಬ ಸಿಂಹಕ್ಕೆ ಗುಹೆಯಾಗಿಯೂ ಅಭಿಮಾನವೆಂಬ ಆನೆಯನ್ನು ಕಟ್ಟಿಹಾಕುವ ಸ್ತಂಭವಾಗಿಯೂ ಮನಸ್ಸೆಂಬ ಪದ್ಮಗಳಿಂದ ಶೋಭಿತವಾಗಿಯೂ ಇರುವುದು.

೪೨-೪೩. ಇಂತಹ ದೇಹವು ಸೃಷ್ಟಿಯಾದ ತರುವಾಯ ಭೂತ ಭವಿಷ್ಯದ್ವರ್ತಮಾನಗಳೆಂಬ ಕಾಲತ್ರಯದಲ್ಲಿಯೂ ಅಪ್ರತಿಹತವಾದ ದಿವ್ಯ ಜ್ಞಾನವುಳ್ಳ ಭಗವಂತನಾದ ಚತುರ್ಮುಖ ಬ್ರಹ್ಮನು ಅತ್ಯಂತ ಸುಂದರವಾದ ತನ್ನ ಉತ್ತಮವಾದ ದೇಹವನ್ನೂ ನೋಡಿ–"ಚತುರ್ದಿಕ್ಕುಗಳಲ್ಲಿಯೂ ಅವಧಿಯೇ ಇಲ್ಲದಂತಹ (ಅನವಧಿಕವಾದ) ಸರ್ವತ್ರ ವ್ಯಾಪಿಸಿಕೊಂಡಿರುವ ನೀಲವರ್ಣಮಯವಾಗಿರುವಂತೆ ಕಾಣುವ ಈ ಆಕಾಶವೆಂಬ ಕುಹರದಲ್ಲಿ ನನ್ನ ಉತ್ಪತ್ತಿಯಾಗುವುದಕ್ಕಿಂತಲೂ ಮುಂಚೆ (ಪೂರ್ವದಲ್ಲಿ ಏನು ಇದ್ದಿತು"? ಎಂದು ಯೋಚಿಸಲಾರಂಭಿಸಿದನು.

೪೪. ಹೀಗೆ ಯೋಚಿಸಿದ ಆ ಚತುರ್ಮುಖನು, ಆ ಕ್ಷಣದಲ್ಲಿಯೇ ನಿರ್ಮಲವಾದ (ಅತೀತಾನಾಗತ (ಭೂತ ಭವಿಷ್ಯತ್) ಗಳನ್ನು ತಿಳಿಯಲು ಸಮರ್ಥವಾದ ಆತ್ಮಜ್ಞಾನ ಸಂಪನ್ನನಾಗಿ ಹಿಂದೆ ಅಸಂಖ್ಯಾಕವಾಗಿ ಅನೇಕ ಸೃಷ್ಟಿ ಸಮುದಾಯಗಳು ಕಳೆದುಹೋಗಿರುವುದನ್ನೂ ತನ್ನ ದಿವ್ಯ ದೃಷ್ಟಿಯಿಂದ ತಿಳಿದುಕೊಂಡನು.

೪೫. ಅದರ ಕಾರಣವನ್ನು ಚಿಂತಿಸಿದ ಬಳಿಕ, ವಸಂತ ಋತುವು ಪುಷ್ಪಗಳನ್ನು ಹೇಗೋಹಾಗೆ ಸಾಂಗೋಪಾಂಗಗಳಾದ ಪ್ರಶಸ್ತಿಗಳಾದ ಸಕಲ ವೇದಗಳನ್ನೂ ತೆಗೆದುಕೊಂಡು ಕ್ರಮೇಣ ಅವುಗಳಲ್ಲಿ ಉಪದಿಷ್ಟವಾದ ಸಕಲ ಧರ್ಮಾಧರ್ಮಗಳನ್ನೂ ಸ್ಮರಿಸಿದವನಾದನು.

ಲೀಲಯಾ ಕಲ್ಪಯಾಮಾಸ ಚಿತ್ರಸಂಕಲ್ಪಜಾಃ ಪ್ರಜಾಃ ।
ನಾನಾಚಾರಸಮಾಚಾರಂ ಗಂಧರ್ವನಗರೇ ಯಥಾ ॥ ೪೬ ॥

ತಾಸಾಂ ಸ್ವರ್ಗಾಪವರ್ಗಾರ್ಥಂ ಧರ್ಮಕರ್ಮಾಸಿದ್ಧಯೇ ।
ಅನಂತಾನಿ ವಿಚಿತ್ರಾಣಿ ಶಾಸ್ತ್ರಾಣಿ ಸಮಕಲ್ಪಯತ್ ॥ ೪೭ ॥

ದೃಷ್ಟಿರೇವಮಿಯಂ ರಾಮ ಸರ್ಗೇಽಸ್ಮಿನ್ ಸ್ಥಿತಿಮಾಗತಾ ।
ವಿರಿಂಚಿರೂಪಾನ್ಮನಸಃ ಪುಷ್ಪಲಕ್ಷ್ಮೀರ್ಮಧೋರಿವ ॥ ೪೮ ॥

---

೪೬. ಅದಾದ ತರುವಾಯ ತನ್ನ ವಿಚಿತ್ರಗಳಾದ ನಾನಾ ಸಂಕಲ್ಪಗಳಿಂದ ಉದಯಿಸಿದ ಅಸಂಖ್ಯಾಕ ಪ್ರಜೆಗಳನ್ನೂ ಅವರವರ ಸ್ವಭಾವಾದಿಗಳಿಗೆ ತಕ್ಕಂತೆ ನಾನಾ ಆಚಾರ ವ್ಯವಹಾರಗಳನ್ನೂ ವೇದೋಕ್ತ ಕ್ರಮದಿಂದ ಲೀಲಾಜಾಲವಾಗಿಯೇ ಸೃಷ್ಟಿ ಮಾಡಿದನು. ಇವುಗಳೆಲ್ಲ ಗಂಧರ್ವ ನಗರದಲ್ಲಿರುವಂತೆಯೇ ಇರುವುವು.

೪೭. ಆ ಪ್ರಜೆಗಳಿಗೆ ಸ್ವರ್ಗ ಮೋಕ್ಷಗಳ ಪ್ರಾಪ್ತಿಗೋಸ್ಕರವು ಧರ್ಮ ಅರ್ಥ, ಕಾಮಗಳೆಂಬ ತ್ರಿವರ್ಗವು ಸಿದ್ಧಿಸುವುದಕ್ಕೋಸ್ಕರವೂ ಅನಂತಗಳೂ ವಿಚಿತ್ರಗಳೂ ಆದ ನಾನಾ ಶಾಸ್ತ್ರಗಳನ್ನೂ ಕಲ್ಪಿಸಿದನು.

೪೮. ಅಯ್ಯ ರಾಮಭದ್ರ, ಚೈತ್ರಮಾಸದ ದೆಸೆಯಿಂದ ಪುಷ್ಪ ಸಮೃದ್ಧಿಯುಂಟಾಗುವಂತೆ ಈ ಸೃಷ್ಟಿಯಲ್ಲಿ ವಿರಾಜಿ (ಚತುರ್ಮುಖ) ರೂಪವಾದ ಮನಸ್ಸಿನ ದೆಸೆಯಿಂದ ಈ ರೀತಿಯಾಗಿ ಈ ಸೃಷ್ಟಿ ದೃಷ್ಟಿಯು (ಜ್ಞಾನ) ಉದಯಿಸಿ ನೆಲೆಯನ್ನು (ಸ್ಥಿತಿ) ಪಡೆದಿರುವುದು.

ವಿವಿಧವಿರಚನೈಃ ಕ್ರಿಯಾವಿಲಾಸೈಃ
ಕಮಲಜರೂಪಧರೇಣ ಚೇತಸೈವ ।
ರಘುಸುತ ಪರಿಕಲ್ಪನೇನ ನೀತಾ
ಸ್ಥಿತಿಮತುಲಾಂ ಜಗತೀಹ ಸರ್ಗಲಕ್ಷ್ಮೀಃ ॥ ೪೯ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
"ಸಂಸಾರಾವತಾರಣಪ್ರತಿಪಾದನೋಪದೇಶೋ" ನಾಮ ಚತುಶ್ಚತ್ವಾರಿಂಶಃ ಸರ್ಗಃ

---

೪೯. ಅಯ್ಯ (ರಘುಕುಲ ಪ್ರಸೂತನಾದ) ರಾಘವ, ಚತುರ್ಮುಖ ಬ್ರಹ್ಮನ ರೂಪವನ್ನು ಧರಿಸಿದ ಈ ಚಿತ್ತವೇ ತನ್ನ ನಾನಾ ವಿಧ ರಚನೆಗಳುಳ್ಳ ಕಾರ್ಯ ವಿಲಾಸಗಳಿಂದ ಈ ಕಲ್ಪದಲ್ಲಿ ಈ ಸೃಷ್ಟಿ ಸಮೃದ್ಧಿಯನ್ನೂ ಪರಿಚಯವಾಗಿ ಕಲ್ಪಿಸಿ ಈ ಜಗತ್ತಿನಲ್ಲಿ ದೃಢವಾಗಿ ಅಸದೃಶವಾದ (ಸತ್ಯ ತುಚ್ಛ ವಿಲಕ್ಷಣವಾದ) ಸ್ಥಿತಿಯನ್ನೂ ಹೊಂದಿಸಿ ಇರುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಸಂಸಾರಾವತರಣಪ್ರತಿಪಾದನೋಪದೇಶ" ಎಂಬ
ನಾಲ್ವತ್ತನಾಲ್ಕನೆಯ ಸರ್ಗವು

ಪಂಚಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಜಗತ್ಸಂಪನ್ನಮೇವೇದಂ ಸಂಪನ್ನಂ ಕಿಂಚಿದೇವ ನ ।
ಶೂನ್ಯಮೇವ ಚ ಭಾಮಾತ್ರಂ ಮನೋವಿಲಸಿತಂ ಸ್ಥಿತಂ ॥ ೧ ॥

ನ ದೇಶಕಾಲಾವೇತೇನ ಬ್ರಹ್ಮಾಂಡೇನಾವೃತೌ ಸ್ಥಿತೌ ।
ಮನಾಗಪಿ ಮಹಾರೂಪವತಾಪ್ಯಾಕಾಶರೂಪಿಣಾ ॥ ೨ ॥

ಏತತ್ಸಂಕಲ್ಪಮಾತ್ರಾತ್ಮ ಸ್ವಪ್ನದೃಷ್ಟಪುರೋಪಮಂ ।
ಯತ್ರೈವ ತತ್ರ ತಚ್ಛೂನ್ಯಂ ಕೇವಲಂ ವ್ಯೋಮ ಸಂಸ್ಥಿತಂ ॥ ೩ ॥

ನಲವತ್ತೈದನೆಯ ಸರ್ಗ

೧. ಶ್ರೀವಸಿಷ್ಠನು ಹೇಳಿದನು—ಅಯ್ಯ ರಾಮಚಂದ್ರ, ಈ ಜಗತ್ತು ಇದುವರೆಗೂ ವಿವರಿಸಿದಂತೆ ಪರಿನಿಷ್ಠಿತವಾದುದೇ ಆಗಿರುವಂತೆ ಕಂಡರೂ, ವಸ್ತುತಃ ಯಾವದೊಂದೂ ಕೂಡ ಸಂಪನ್ನವಾಗಿ ಇಲ್ಲವೇ ಇಲ್ಲ. ಏಕೆಂದರೆ ಮನೋವಿಲಾಸಾತ್ಮಕವಾದ ಈ ಜಗತ್ತೆಲ್ಲವೂ ಪ್ರತಿಭಾಸ ಮಾತ್ರ ಶರೀರವಾಗಿ (ಶುಕ್ತಿರಜತ, ರಜ್ಜು ಸರ್ಪಾದಿಗಳಂತೆ) ತದ್ವ್ಯತಿರಿಕ್ತವಾಗಿ ಕೇವಲ ಶೂನ್ಯವಾದುದಾಗಿಯೇ ಇರುವುದು.

೨. ಮಹತ್ತಮವಾದ ಆಕಾರವುಳ್ಳದ್ದರಂತೆ ಪ್ರತಿಭಾಸಮಾನವಾಗಿದ್ದರೂ ಕೂಡ ವಸ್ತುತಃ ಆಕಾಶದಂತೆ ಶೂನ್ಯವಾದ ರೂಪವುಳ್ಳ ಈ ಬ್ರಹ್ಮಾಂಡವು ದೇಶಕಾಲಗಳನ್ನೂ ಸ್ವಲ್ಪವೂ ಕೂಡ ಆವರಿಸಿಕೊಂಡಿಲ್ಲವು.

೩. ಈ ಬ್ರಹ್ಮಾಂಡವು ಕೇವಲ ಸಂಕಲ್ಪ ಮಾತ್ರ ಸ್ವರೂಪವಾದುದು. ಕನಸಿನಲ್ಲಿ ಕಂಡ ನಗರದಂತೆ ಭಾಸಿಸುವುದು. ಇಂತಹ ಸದಸದ್ವಿಲಕ್ಷಣವಾದ ಬ್ರಹ್ಮಾಂಡವು ಯಾವ ದೇಶದಲ್ಲಿ ಯಾವ ಕಾಲದಲ್ಲಿ ತನ್ನ ಯಾವ ಅಧಿಷ್ಠಾನದಲ್ಲಿ ಭಾಸಿಸುವುದೋ

ಅಭಿತ್ತಿರಾಗರಚನಮಪಿ ದೃಷ್ಟಮಸನ್ಮಯಂ ।
ಅಕೃತಂ ಕೃತಮೇವೈತದ್ವ್ಯೋಮ್ನಿ ಚಿತ್ರಂ ವಿಚಿತ್ರಕಂ ॥ ೪ ॥

ಮನಸಾ ಕಲ್ಪಿತಂ ಸರ್ವಂ ದೇಹಾದಿಭುವನತ್ರಯಂ ।
ಸಂಸ್ಮೃತೌ ಕಾರಣಂ ಚೈತಚ್ಚಕ್ಷುರಾಲೋಕನೇ ಯಥಾ ॥ ೫ ॥

ಆಭಾಸಮಾತ್ರಂ ಹಿ ಜಗದ್ಘಟಾವಟಪಟಭ್ರಮೈಃ ।
ಆವರ್ತತೇ ನ ಸದ್ರೂಪಾತ್ ಪೃಥಕ್ಕುಡ್ಯಾದಯಃ ಸ್ಥಿತಾಃ ॥ ೬ ॥

ಅಂತಹ ಅಧಿಷ್ಠಾನಭೂತವಾದ ಪರಬ್ರಹ್ಮವು ಅದೇ ದೇಶ ಕಾಲಗಳಲ್ಲಿಯೂ ಕೂಡ ಜಗಚ್ಛೂನ್ಯವಾಗಿ ಆಕಾಶದಂತೆ ಕೇವಲವಾಗಿ ಇರುವುದು.

(ಸಕಲ ವಿಕಾರಗಳಿಗೂ ಅಧಿಷ್ಠಾನವಾದ ಚಿತ್ತಿನಲ್ಲಿ ಈ ಜಗತ್ತು ಭ್ರಾಂತಿಯ ಮೂಲಕ [ಮಿಥ್ಯೆಯಾಗಿ] ಭಾಸಿಸುತ್ತಿರುವಾಗಲೂ ಕೂಡ ಅಧಿಷ್ಠಾನ ಚಿತ್ತು ಸ್ವಸ್ವ ರೂಪವನ್ನು ಬಿಡದೆ ಜಗಚ್ಛೂನ್ಯವಾಗಿಯೇ ಅದ್ವಿತೀಯವಾಗಿಯೇ ನಿರ್ವಿಕಾರಿಯಾಗಿಯೇ ಇದ್ದುಕೊಂಡಿರುವುದು. ಪ್ರತಿಭಾಸಕಾಲದಲ್ಲಿಯೂ ವಾಸ್ತವವಾಗಿ ಜಗತ್ತು ಇಲ್ಲವೆಂದೇ ತಾತ್ಪರ್ಯ.]

೪. ಜಗತ್ತೆಂಬ ಚಿತ್ರವು ಅತಿ ವಿಚಿತ್ರವಾದುದು. (ಆಶ್ಚರ್ಯಕರವಾದುದು) ಇದು ಗೋಡೆಯೂ ಬಣ್ಣಗಳೂ ಇಲ್ಲದೆಯೇ ರಚಿತವಾಗಿರುವುದು. ಇದು ಕಣ್ಣಿಗೆ ಗೋಚರವಾಗುತ್ತಿದ್ದರೂ ವಸ್ತುತಃ ಅತ್ಯಂತ ಅಸದ್ರೂಪವಾದುದು. ಇದು ಯಾರಿಂದಲೂ ಮಾಡಲ್ಪಡದಿದ್ದರೂ, ಮಾಡಲ್ಪಟ್ಟಿರುವಂತೆಯೇ ತೋರುವುದು. ಇಂತಹ ಜಗಚ್ಚಿತ್ರವು ಪರಮ ಚಿದಾಕಾಶದಲ್ಲಿ ಕಲ್ಪಿತವಾಗಿದೆ.

೫. ದೇಹಾದಿಗಳೆಲ್ಲವೂ ಜಗತ್ರಯವೂ ಮನಸ್ಸಿನಿಂದಲೇ ಕಲ್ಪಿತವಾದುದು. ನೋಟಕ್ಕೆ (ದರ್ಶನಕ್ಕೆ) ಕಣ್ಣು ಹೇಗೆ ಕಾರಣವಾಗಿರುವುದೋ ಹಾಗೆ ಈ ಮನಸ್ಸು ಈ ಜಗತ್ತಿನ ಸ್ಮರಣೆಗೆ ಮಾತ್ರ ಕಾರಣವಾಗಿರುವುದು. ಆದಕಾರಣ ಮನಸ್ಸಿನಿಂದ ಕಲ್ಪಿತವಾದ ಜಗತ್ತು ಕೇವಲ ಸ್ಮೃತಿ ಸದೃಶವಾದುದೇ ಹೊರತು, ತನ್ನ ಕಾಲದಲ್ಲಿಯೂ ಅರ್ಥರೂಪವಾದ ಸದ್ವಸ್ತುವಲ್ಲ ಎಂದು ಸ್ಪಷ್ಟವಾಯಿತು.

೬. ನಿಜವಾಗಿಯೂ ಈ ಜಗತ್ ಎಂಬುದು ಆಭಾಸಮಾತ್ರವೇ ಸರಿ, ಇದು ಘಟ, ಅವಟ (ಗರ್ತ-ಹಳ್ಳ) ಪಟ ಇತ್ಯಾದ್ಯನೇಕ ಭ್ರಾಂತಿಗಳಿಂದ ಸದಾ ಸುತ್ತು

ಮನಸ್ಯೇದಂ ಶರೀರಂ ಹಿ ವಾಸನಾರ್ಥಂ ಪ್ರಕಲ್ಪಿತಂ ।
ಕೃಮಿಕೋಶಪ್ರಕಾರೇಣ ಸ್ವಾತ್ಮಕೋಶ ಇವ ಸ್ವಯಂ ॥ ೭ ॥

ನ ತದಸ್ತಿ ಚ ಯನ್ನಾಮ ಚೇತಃಸಂಕಲ್ಪಮಂಬರಂ ।
ನ ಕರೋತಿ ನ ಚಾಪ್ನೋತಿ ದುರ್ಗಮಪ್ಯಾತಿದುಷ್ಕರಂ ॥ ೮ ॥

ಸರ್ವಶಕ್ತಿಧರೇ ದೇವೇ ಕಾ ನಾಮ ನನು ಶಕ್ತಯಃ ।
ನ ಸಂಭವಂತ್ಯಾಶ್ರಿಯಂತೇ ಯಾಭಿರಂತರ್ಮನೋಗುಹಾಃ ॥ ೯ ॥

ತ್ತಲೇ ಇರುವುದು. ಕುಡ್ಯ (ಗೋಡೆ) ಮುಂತಾದ ಜಗತ್ತುಗಳನ್ನು ಸದ್ರೂಪವಾದ ಚಿತ್ತಿಗಿಂತಲೂ ಪ್ರತ್ಯೇಕವಾಗಿ ತೋರಿಸುವುದಕ್ಕೆ ಅಶಕ್ಯವಾಗಿರುವ ಕಾರಣ, ಅವು ಸದ್ರೂಪಕ್ಕಿಂತ ಪೃಥಕ್ಕಾಗಿ ಎಂದಿಗೂ ಇಲ್ಲವೇ ಇಲ್ಲ.

೭. ಈ ಮನಸ್ಸು ತನ್ನ ಆತ್ಮನಿಗೆ ತಾನೇ ಕೋಶದಂತೆ ಹೇಗೆ ಕಲ್ಪಿತವಾಗಿರುವುದೋ ಹಾಗೆಯೇ (ಈ ಮನಸ್ಸು) ಇದು ತನ್ನ ಸ್ಥಿತಿಗೋಸ್ಕರವಾಗಿ, ರೇಷ್ಮೆಯ ಹುಳು ತನಗೆ ತಾನೇ ಕೋಶವನ್ನು ಕಲ್ಪಿಸಿಕೊಳ್ಳುವ ಪ್ರಕಾರದಿಂದ, ಈ ಶರೀರವನ್ನು ತಾನೇ ಕಲ್ಪಿಸಿಕೊಂಡಿರುವುದು.

೮. ಅತ್ಯಂತ ದುರ್ಲಭವಾದುದರಿಂದಲೂ, ಅತಿ ದುಷ್ಕರವಾಗಿದ್ದರೂ (ಆಕಾಶದಂತೆ) ಅರ್ಥಶೂನ್ಯವಾಗಿರುವ ಸಂಕಲ್ಪರೂಪವಾದ ಯಾವ ಕಾರ್ಯವು ಈ ಮನಸ್ಸಿನಿಂದ ಮಾಡಲ್ಪಡುವುದಿಲ್ಲವೋ ಮತ್ತು ಹೊಂದಲ್ಪಡುವುದಿಲ್ಲವೋ ಅಂತಹುದೊಂದು ಇಲ್ಲವೇ ಇಲ್ಲ.

(ಚಿತ್ತದಿಂದ ಮಾಡಲ್ಪಡದಿರುವ ಸಂಕಲ್ಪವು ಒಂದೂ ಇಲ್ಲ. ಅದು ಅತ್ಯಂತ ದುರ್ಲಭವಾದ ಫಲಕ್ಕಾಗಿ ಅತಿ ದುಷ್ಕರವಾದ ಕರ್ಮಗಳನ್ನು ಮಾಡುವ ಸಂಕಲ್ಪ ಮಾಡುವುದಕ್ಕೂ ಹಿಂದೆಗೆಯುವುದಿಲ್ಲ.)

೯. ಯಾವ ಶಕ್ತಿಗಳಿಂದ ಮನಸ್ಸೆಂಬ ಗುಹೆಗಳು ಒಳಗೆ ಆಶ್ರಯಿಸಲ್ಪಡುವುದಿಲ್ಲವೋ ಅಂತಹ ಶಕ್ತಿಗಳು ಯಾವುವು ತಾನೇ ಸರ್ವಶಕ್ತಿಗಳನ್ನು ಉಂಟು ಮಾಡುವವನಾದ ಜಗದೀಶ್ವರನಲ್ಲಿ (ಪರಮಾತ್ಮನಲ್ಲಿ) ಸಂಭವಿಸುವುವು ? (ಅಂದರೆ ಯಾವುವೂ ಇಲ್ಲ.)

ಸತ್ತಾಸತ್ತೇ ಪದಾರ್ಥಾನಾಂ ಸರ್ವೇಷಾಂ ಸರ್ವದೈವ ಹಿ ।
ಮಹಾಬಾಹೋ ಸಂಭವತಃ ಸರ್ವಶಕ್ತೌ ವಿಭೌ ಸತಿ ॥ ೧೦ ॥

ಪಶ್ಯ ಭಾವನಯಾ ಪ್ರಾಪ್ತಂ ಮನಸೈವಾತ್ಮಜಂ ವಪುಃ ।
ತಸ್ಮಾತ್ತತ್ಕಲನಾಂ ರಾಮ ಸರ್ವಶಕ್ತಿಯುತಾಂ ವಿದುಃ ॥ ೧೧ ॥

ಸ್ವಸಂಕಲ್ಪಕೃತಾಃ ಸರ್ವೇ ದೇವಾಸುರನರಾದಯಃ ।
ಸ್ವಸಂಕಲ್ಪೋಪಶಮನೇ ಶಾಮ್ಯಂತ್ಯಸ್ನೇಹದೀಪವತ್ ॥ ೧೨ ॥

---

೧೦. ಎಲೈ ಮಹಾಬಾಹುವೇ, ಸರ್ವವ್ಯಾಪಿಯಾದ ಪರಮಾತ್ಮನು ಸಕಲ ಶಕ್ತಿಸಂಪನ್ನನಾಗಿ ಇರುತಿರಲಿಕ್ಕಾಗಿ ಸಕಲ ಪದಾರ್ಥಗಳಿಗೂ ಸತ್ತೆಯೂ ಅಸತ್ತೆಯೂ (ಸದ್ಭಾವವೂ =ಇರುವಿಕೆಯೂ, ಅಸದ್ಭಾವವೂ =ಇಲ್ಲದಿರುವಿಕೆಯೂ) ಸರ್ವದಾ ಸಂಭವಿಸುತ್ತಲೇ ಇರುವುವು.

(ಜಗತ್ತು ಸರ್ವದಾ ಅಸತ್ತಾಗಿಯೂ ಬ್ರಹ್ಮವು ಸರ್ವದಾ ಸತ್ತಾಗಿಯೂ ಇರುವ ಕಾರಣ ಇವೆರಡಕ್ಕೂ ಪರಸ್ಪರ ಸಂಸರ್ಗವು ಎಂದೆಂದಿಗೂ ಸುತರಾಂ ಇಲ್ಲದಿರುವಾಗ ಜಗತ್ತಿನಲ್ಲಿ ಕಾದಾಚಿತ್ಕವಾದ ಸತ್ತೆಯೂ ಅಸತ್ತೆಯೂ ಹೇಗೆ ಸಂಭವಿಸುವುವು ಎಂಬ ಆಶಂಕೆಗೆ ಇಲ್ಲಿ ಅವಕಾಶವೇ ಇಲ್ಲ. ಜಗತ್ತಿನ ಸತ್ತಾಸತ್ತೆಗಳು ಕಾದಾಚಿತ್ಕ (ಯಾವುದೋ ಒಂದು ಕಾಲದಲ್ಲಿ ಇರತಕ್ಕವು) ಅಲ್ಲ. ಆದರೆ ಸಾರ್ವಕಾಲಿಕವಾದವು ಎಂದು ತಿಳಿಯಬೇಕು. ಚಿಜ್ಜಡಗಳ ಅನ್ಯೋನ್ಯಾಭಿಭವದಿಂದ ಪರ್ಯಾಯವಾಗಿ ಅಚಿಂತ್ಯವಾದ ಆವೇಶಕಲ್ಪನೆಯೇ ಮಾಯಾಶಕ್ತಿಕೃತವೆಂದು ಭಾವ.)

೧೧. ರಾಮ, ಮನಸ್ಸೇ ತನ್ನ ಭಾವನೆಯಿಂದ ತನ್ನಲ್ಲಿಯೇ ಉದಯಿಸಿರುವ ನಾನಾವಿಧ ದೇಹಗಳನ್ನು ಪಡೆದಿರುವುದು. ಇದನ್ನು (ಜಗದೀಶ್ವರನ ಸರ್ವಶಕ್ತಿಯನ್ನು) ನಿನ್ನ ಮನಸ್ಸಿನಲ್ಲಿಯೇ ಪ್ರತ್ಯಕ್ಷವಾಗಿ ನೋಡು. ಈ ಕಾರಣದ ದೆಸೆಯಿಂದ ಈ ಮನಸ್ಸಿನ ಕಲ್ಪನೆಯನ್ನು ಪ್ರಾಜ್ಞರು ಸರ್ವಶಕ್ತಿಯುಕ್ತವಾದುದನ್ನಾಗಿ ತಿಳಿದಿರುವರು. (ಹೀಗೆ ಜಗತ್ತಿನಲ್ಲಿ ವಿಚಿತ್ರ ಪದಾರ್ಥಶಕ್ತಿಗಳೂ ಕೂಡ ಸರ್ವಶಕ್ತಿಯುತವಾದ ಮನಸ್ಸಿನ ಕಲ್ಪನೆಯಿಂದಲೇ ಉಂಟಾಗುವುದು ಎಂದು ತಿಳಿಯಬೇಕು.)

೧೨. ದೇವ ರಾಕ್ಷಸಮನುಷ್ಯಾದಿಗಳೆಲ್ಲರೂ ಮನಸ್ಸಂಕಲ್ಪದಿಂದಲೇ ನಿರ್ಮಿತರಾಗಿರುವರು. (ಕಲ್ಪಿತರಾಗಿರುವರು.) ಅಂತಹ ಸಂಕಲ್ಪವು ಶಾಂತಿ ಹೊಂದಿಬಿಟ್ಟರೆ

ಆಕಾಶಸದೃಶಂ ಸರ್ವಂ ಕಲನಾಮಾತ್ರಜೃಂಭಿತಂ ।
ಜಗತ್ಪಶ್ಯ ಮಹಾಬುದ್ಧೇ ಸುದೀರ್ಘಂ ಸ್ವಪ್ನಮುತ್ಥಿತಂ ॥ ೧೩ ॥

ನಜಾಯತೇ ನಮ್ರಿಯತೇ ಇಹ ಕಿಂಚಿಕ್ಕದಾಚನ ।
ಪರಮಾರ್ಥೇನ ಸುಮತೇ ಮಿಥ್ಯಾ ಸರ್ವಂ ತು ವಿದ್ಯತೇ ॥ ೧೪ ॥

ಕೂಡಲೆ ಎಣ್ಣೆಮುಗಿದು ಹೋದ ದೀಪದಂತೆ ಆ ದೇವಾದಿಗಳೆಲ್ಲರೂ ತಾವಾಗಿಯೇ ಶಾಂತಿಯನ್ನು ಹೊಂದಿಬಿಡುವರು.

೧೩. ಎಲೈ ಮಹಾಬುದ್ಧಿಶಾಲಿಯೇ, ಈ ಸಕಲ ಜಗತ್ತೂ ಆಕಾಶಸದೃಶವೆಂದೂ ಕೇವಲ ಸಂಕಲ್ಪವೊಂದರಿಂದ ಮಾತ್ರವೇ ವಿಜೃಂಭಿಸುತ್ತಿರುವುದೆಂದೂ ಇದೊಂದು ದೀರ್ಘಕಾಲವಿರುವ ಸ್ವಪ್ನದಿಂದ ಎದ್ದು ತೋರುವ ಭ್ರಾಂತಿಯೆಂದೂ ಕಾಣುವವನಾಗು. (ಸಂಕಲ್ಪಮೂಲಃ ಕಾಮೋ ವೈ ಯಜ್ಞಾಃ ಸಂಕಲ್ಪ ಸಂಭವಾಃ ॥ ಮನುಸ್ಮೃತಿ ೨-೨.)

೧೪. ಎಲೈ ಸುಮತಿಯಾದ ರಾಮ, ಈ ಜಗತ್ತಿನಲ್ಲಿ ಯಾವುದೂ ಎಂದಿಗೂ ಪಾರಮಾರ್ಥಿಕವಾಗಿ ಹುಟ್ಟುವುದೂ ಇಲ್ಲ. ಸಾಯುವುದೂ ಇಲ್ಲ. ವ್ಯವಹಾರ ದಶೆಯಲ್ಲಿ ಯಾವುದೋ ಸರ್ವವೂ ಮಿಥ್ಯಾಭೂತವಾಗಿಯೇ ಇದ್ದುಕೊಂಡಿರುವುದು.

(ಸ್ವಪ್ನಜಾಗರಿತಸ್ಥಾನೇ ಹ್ಯೇಕಮಾಹುರ್ಮನೀಷಿಣಃ । ಭೇದಾನಾಂಹಿ ಸಮತ್ವೇನ ಪ್ರಸಿದ್ಧೇನೈವ ಹೇತುನಾ ॥ ಮಾಂಡೂಕ್ಯ ಶ್ರೀ ಗೌಡಪಾದೀಯಕಾರಿಕಾ ವೈತಥ್ಯ ಪ್ರಕರಣ ೫.)

ಸ್ವಪ್ನವೃತ್ತಾವಪಿತ್ವಂತಃ ಚೇತಸಾಕಲ್ಪಿತಂತ್ವಸತ್ । ಬಹಿಶ್ಚೇತೋಗೃಹೀತಂ ಸದ್ದೃಷ್ಟಂ ವೈತಥ್ಯಮೇತಯೋಃ ॥ ವೈತರ್ಥ್ಯ. ಕಲ್ಪಯತ್ಯಾತ್ಮನಾತ್ಮಾನ ಮಾತ್ಮಾ ದೇವಃ ಸ್ವಮಾಯಯಾ । ಸಏವ ಬುಧ್ಯತೇ ಭೇದಾನ್ ಇತಿ ವೇದಾಂತನಿಶ್ಚಯಃ ॥ ವೈತಥ್ಯ ೧೨. ಚಿತ್ತಕಾಲಾಹಿ ಯೇಂತಸ್ತು ದ್ವಯಕಾಲಾಶ್ಚಯೇ ಬಹಿಃ । ಕಲ್ಪಿತಾ ಏವತೇ ಸರ್ವೇ ವಿಶೇಷೋನಾನ್ಯಹೇತುಕಃ ॥ ವೈತಥ್ಯ ೧೪. ಸ್ವಪ್ನಮಾಯೇ ಯಥಾದೃಷ್ಟೇ ಗಂಧರ್ವನಗರಂಯಥಾ । ತಥಾವಿಶ್ವಮಿದಂ ದೃಷ್ಟಂ ವೇದಾಂತೇಷು ವಿಚಕ್ಷಣೈಃ ॥ ವೈತಥ್ಯ ೩೧.

ನ ವೃದ್ಧಿಮೇತಿ ನೋ ಹ್ರಾಸಂ ಯನ್ನ ಕಿಂಚಿಶ್ಚದಾಚನ ।
ಕಿಂವಾತನು ಭವೇತ್ತತ್ರ ಕಸ್ಯ ಕಾ ನಾಮ ಖಂಡನಾ ॥ ೧೫ ॥
ಭೂಮಭೂತಂ ಸ್ವಕಾಯೋತ್ಥಮಪಶ್ಯನ್ನಿಪುದಿಂ ದೃಶಂ ।
ರಾಘವಾಽಮಹತಾ ಸ್ವಾಂತಃ ಕಿಮಜ್ಞ ಇವ ಮುಹ್ಯಸಿ ॥ ೧೬ ॥

ನನಿರೋಧೋನಚೋತ್ಪತ್ತಿಃ ನಬದ್ಧೋನಚ ಸಾಧಕಃ । ನಮುಮುಕ್ಷುಃ ನವೈಮುಕ್ತಃ ಇತ್ಯೇಷಾ ಪರಮಾರ್ಥತಾ ॥ ವೈತಥ್ಯ ೩೨.

["ಸ್ವಪ್ನ ಜಾಗ್ರತ್ಕಲ್ಪನೆಗಳೆರಡೂ ಸಮಾನವಾದವುಗಳು. ಇವು ಮನಸ್ಸಂಕಲ್ಪ ಕಲ್ಪಿತಗಳು. ಆತ್ಮನು ತನ್ನ ಮಾಯೆಯಿಂದ ಕಲ್ಪಿಸುವನು. ಈ ದೃಶ್ಯ ಜಗತ್ತು ಸ್ವಪ್ನ, ಮಾಯಾ, ಗಂಧರ್ವ ನಗರಾದಿಗಳಂತೆ ಭ್ರಾಂತಿಮೂಲಕವಾಗಿ ಕಾಣುವುದು. ವಸ್ತುತಃ ಉತ್ಪತ್ತಿಯಾಗಲೂ ಇಲ್ಲ. ನಾಶಹೊಂದುವುದೂ ಇಲ್ಲ. ಜಗತ್ತಿನಂತೆಯೇ ಬಂಧ ಮೋಕ್ಷಾದಿ ಸಕಲ ವ್ಯವಹಾರಗಳೊಂದೂ ಇಲ್ಲವು. ಇದು ಪರಮಾರ್ಥ" ಎಂದು ವಿವರವಾಗಿ ಹೇಳಿದೆ. ನೋಡಿ ತಿಳಿಯಿರಿ.]

೧೫. ಇಂತಹ ಸಕಲ ವಿಕಾರಾತ್ಮಕವಾದ ಜಗತ್ತಿಗೂ ಆಧಾರವಾಗಿರುವ ಯಾವ ಪರಬ್ರಹ್ಮವು ಎಂದಿಗೂ ವೃದ್ಧಿಯನ್ನಾಗಲಿ ಕ್ಷಯವನ್ನಾಗಲೀ ಹೊಂದುವುದಿಲ್ಲವೋ ಮತ್ತು ಯಾವುದೊಂದೂ ಆಗಿಲ್ಲವೋ ಅಂತಹ ಪರಬ್ರಹ್ಮನಲ್ಲಿ ಯಾವುದು ತಾನೇ ಸೂಕ್ಷ್ಮವಾಗಬಹುದು ? ಯಾವುದಕ್ಕೆ ಏನು ಖಂಡನೆಯು ತಾನೇ ಸಂಭವಿಸುವುದು?

(ಅಖಂಡವಾದ ಪರಬ್ರಹ್ಮನಿಗೆ ಖಂಡನವುಂಟಾದ ಹೊರತು ಪರಿಚ್ಛೇದದ (ವಿಭಾಗ) ಪ್ರಸಕ್ತಿಯೂ ಇಲ್ಲ. ಖಂಡನವಾದರೋ ಸುತರಾಂ ಅಸಂಭವವು. ಹೀಗಿರುವಾಗ ಅಲ್ಪತೆಯು (ಸೂಕ್ಷ್ಮತ್ವವು) ಹೇಗೇ ತಾನೇ ಸಂಭವಿಸುವುದು ?)

೧೬. ರಾಘವ, ನಿನ್ನ ಶರೀರದಿಂದ ಉತ್ಥಿತವಾದ ಅಪರಿಚ್ಛಿನ್ನ (ಭೂಮ)ವಾದ ಆತ್ಮತತ್ತ್ವವನ್ನು ತತ್ತ್ವದೃಷ್ಟಿಯಿಂದ ಪ್ರತ್ಯೇಕಿಸಿ ಬಹು ನೈಪುಣ್ಯದಿಂದ ಕಾಣುವುದನ್ನು ಬಿಟ್ಟು ಪರಿಚ್ಛಿನ್ನವಾದ (ತುಚ್ಛವಾದ) ಅಜ್ಞಾನದಿಂದ ಕೇವಲ ಅಜ್ಞನಂತೆ ನಿನ್ನೊಳಗೆ ನೀನು ಹೀಗೇತಕ್ಕಾಗಿ ಮೋಹಗೊಳ್ಳುವೆ ?

(ಬಹೂನಾಂ ಭಾವಃ= ಭೂಮಾ= ಸರ್ವಾತ್ಮತ್ವ, ಅಪರಿಚ್ಛಿನ್ನತ್ವ.)

ಮೃಗತೃಷ್ಣಾಯಥಾ ತಾಪಾನ್ಮನಸೋಽನಿಶ್ಚಯಾತ್ತಥಾ ।
ಅಸಂತ ಇವ ದೃಶ್ಯಂತೇ ಸರ್ವೇ ಬ್ರಹ್ಮಾದಯೋಽಪ್ಯಮೀ ॥ ೧೭ ॥

ದ್ವಿಚಂದ್ರವಿಭ್ರಮಪ್ರಖ್ಯಾ ಮನೋರಥವದುತ್ಥಿತಾಃ ।
ಮಿಥ್ಯಾಜ್ಞಾನಘನಾಃ ಸರ್ವೇ ಜಗತ್ಯಾಕಾರರಾಶಯಃ ॥ ೧೮ ॥

ಯಥಾ ನೌಯಾಯಿನೋ ಮಿಥ್ಯಾ ಸ್ಥಾಣುಸ್ಪಂದಮತಿಸ್ತಥಾ ।
ಅಸತ್ಯೈವೋತ್ಥಿತಾ ನಿತ್ಯಮಾಕಾರಾಣಾಂ ಪರಂಪರಾ ॥ ೧೯ ॥

---

೧೭. ಮರುಭೂಮಿಯಲ್ಲಿ ಸೂರ್ಯಕಿರಣಗಳ ವಿಶೇಷ ತಾಪದಿಂದ ಮೃಗತೃಷ್ಣಿಕೆ (ಮರೀಚಿಕೆ)ಯು ಹೇಗೆ ಭ್ರಾಂತಿಯಿಂದ ಉದಯಿಸುವುದೋ ಹಾಗೆ ಈ ಚತುರ್ಮುಖನೇ ಮೊದಲಾದ ಸಕಲ ಜೀವರುಗಳೂ ಕೂಡ ವಸ್ತುತಃ ಅಸತ್ಯಭೂತರೇ ಆಗಿದ್ದರೂ ಮನಸ್ಸಂಕಲ್ಪದಿಂದ ಸತ್ಯವಾಗಿರುವಂತೆ ಕಾಣುತ್ತಿರುವರು.

(ವಿತಥೈಃ ಸದೃಶಾಸ್ಸಂತಃ ಅವಿತಥಾ ಇವಲಕ್ಷಿತಾಃ ॥ ವೈತಥ್ಯ ೪. ಮತ್ತು ಅನಿಶ್ಚಿತಾ ಯಥಾರಜ್ಜುಃ ಅಂಧಕಾರೇ ವಿಕಲ್ಪಿತಾ । ಸರ್ಪಧಾರಾದಿಭಿಃ ಭಾವೈಃ ತದ್ವದಾತ್ಮಾ ವಿಕಲ್ಪಿತಃ ॥ ವೈತಥ್ಯ ೧೭. ನೋಡಿ.)

೧೮. ಈ ಜಗತ್ತಿನಲ್ಲಿರುವ ದೃಶ್ಯಾಕಾರ ಸಮೂಹಗಳೆಲ್ಲವೂ ಕಣ್ಣಿನ ತಿಮಿರಾದಿ ದೋಷದಿಂದ ಆಕಾಶದಲ್ಲಿ ಉಂಟಾಗುವ ಚಂದ್ರದ್ವಯ ಭ್ರಾಂತಿ ಸದೃಶಗಳಾಗಿ, ಮನೋರಥಗಳಂತೆ ಮಿಥ್ಯಾಭೂತಗಳಾಗಿಯೇ ದುರ್ಭೇದ್ಯವಾದ ಅಜ್ಞಾನ ಮೂಲಕವಾಗಿ ಉದಯಿಸುವುವು.

೧೯. ಹಡಗಿನಲ್ಲಿ ಕುಳಿತುಕೊಂಡು ಪ್ರಯಾಣ ಮಾಡುತ್ತಿರುವವನಿಗೆ ಹಡಗು ಬಲುವೇಗವಾಗಿ ಸಂಚಲಿಸುತ್ತಿರುವಾಗ ಎರಡು ದಡಗಳ ಮೇಲೆ ಬೆಳೆದಿರುವ ಅಚಲಗಳಾದ ವೃಕ್ಷಶೈಲ ಮುಂತಾದುವುಗಳು ವಸ್ತುತಃ ಚಲನೆಯಿಲ್ಲದವುಗಳಾಗಿದ್ದರೂ ಭ್ರಾಂತಿಯಿಂದ ಓಡುತ್ತಿರುವಂತೆಯೇ ಹೇಗೆ ಮಿಥ್ಯೆಯಾಗಿಯೇ ಜ್ಞಾನವು ಉಂಟಾಗುವುದೋ ಹಾಗೆ ಈ ದೃಶ್ಯಾಕಾರಗಳ ಪರಂಪರೆಯು ಸರ್ವದಾ ಅಸತ್ಯವಾಗಿಯೇ ಉದಯಿಸಿರುವುದು.

(ಈ ದೃಷ್ಟಾಂತವನ್ನು ಶ್ರೀ ಶಂಕರ ಭಗವತ್ಪಾದಾಚಾರ್ಯರವರು ಕರ್ಮಣ್ಯ ಕರ್ಮ ಇತ್ಯಾದಿ (ಗೀತಾ ೪–೧೮) ಶ್ಲೋಕದ ಭಾಷ್ಯದಲ್ಲಿ ಸುಸ್ಪಷ್ಟವಾಗಿ ವಿವರಿಸಿರುವರು.)

ಇಂದ್ರಜಾಲಮಿದಂ ವಿದ್ಧಿ ಮಾಯಾರಚಿತಪಂಜರಂ ।
ಮನೋಮನನನಿರ್ಮಾಣಂ ನಸನ್ನಾಸದಿವ ಸ್ಥಿತಂ ॥ ೨೦ ॥

ಬ್ರಹ್ಮೈವೇದಂ ಜಗತ್ಸರ್ವಮನ್ಯತಾಯಾಸ್ತತಃ ಕುತಃ ।
ಪ್ರಸಂಗಃ ಕೀದೃಶಃ ಕೋಽಸೌ ಕ್ವವಾ ಸಾ ಪರಿತಿಷ್ಠತಿ ॥ ೨೧ ॥

ಅಯಂ ಗಿರಿರಯಂ ಸ್ಥಾಣುರಿತ್ಯಾಡಂಬರವಿಭ್ರಮಃ ।
ಮನಸೋ ಭಾವನಾದಾರ್ಢ್ಯಾದರ್ಸ ಸನ್ನಿವ ಲಕ್ಷ್ಯತೇ ॥ ೨೨ ॥

ಪ್ರಪಂಚಪತನಾರಂಭಂ ಪ್ರಮತ್ತಸ್ಯ ಇದಂ ಜಗತ್ ।
ಸಕಾಮತೃಷ್ಣಾಮನನಂ ತ್ಯಕ್ತ್ವಾಽನ್ಯದ್ರಾಮ ಭಾವಯ ॥ ೨೩ ॥

---

೨೦. ರಾಮ, ಇಂತಹ ಮನಸ್ಸಿನ ಮನನದಿಂದ (ಸಂಕಲ್ಪದಿಂದ) ಉದಯಿಸುವ ಸಕಲ ಜಗದ್ದೃಶ್ಯ ನಿರ್ಮಾಣವನ್ನು ಬರಿಯ ಇಂದ್ರಜಾಲವೆಂದು ತಿಳಿ. ಇದಕ್ಕೆ ಮಾಯೆಯಿಂದ ಪಂಜರವು ರಚಿತವಾಗಿರುವುದು. ಇದು ಪರಮಾರ್ಥ ದೃಷ್ಟಿಯಿಂದ ಅಸತ್ಯವೇ ಆಗಿದ್ದರೂ ಸತ್ಯವಾದುದರಂತೆ ತೋರುತ್ತಿರುವುದು.

೨೧. ವಾಸ್ತವವಾಗಿ ಈ ಸಕಲ ಜಗತ್ತೂ ಬ್ರಹ್ಮವೇ ಆಗಿರುವುದು. ಸಂದೇಹವಿಲ್ಲ. ಹೀಗಿರುವಾಗ ಈ ಬ್ರಹ್ಮದಲ್ಲಿ ಭೇದಕ್ಕೆ ಪ್ರಸಕ್ತಿಯು ಎಲ್ಲಿರುವುದು ? ಯಾವ ಕಾರಣದಿಂದ ಉಂಟಾಗುವುದು ? ಅದು ಯಾವ ರೀತಿಯಾಗಿ ಬರುವುದು ? ಅಥವಾ ಆ ಭೇದವು ಯಾವುದರಲ್ಲಿ ಆಶ್ರಯವನ್ನು ಪಡೆದಿರುವುದು ?

(ನ ಆತ್ಮಭೇದೇನ ನಾನಾ ಇದಂ ನಸ್ವೇನಾಪಿ ಕಥಂಚನ । ನಪೃಥಕ್‌ನ ಅಪೃಥಕ್ ಕಿಂಚಿತ್ ಇತಿ ತತ್ತ್ವವಿದೋವಿದುಃ ॥ ವೈತಥ್ಯ ೩೪.)

೨೨. ಇದು ಪರ್ವತ ಅದು ಮರ ಇತ್ಯಾದಿ ರೂಪವಾಗಿರುವ ಜಗತ್ತಿನ ಆಡಂಬರ ಭ್ರಾಂತಿಯು ಸರ್ವವೂ ವಸ್ತುತಃ ಅಸತ್ ಆಗಿದ್ದರೂ ಮನಸ್ಸಿನ ಭಾವನೆಯು ದೃಢವಾಗಿ ಬಿಟ್ಟಿರುವ ಕಾರಣ ಸತ್ಯವಾಗಿರುವಂತೆ ಗೋಚರಿಸುವುದು.

೨೩. ರಾಮ, ವಿಚಾರ ವಿಹೀನನಾದ ನರಪಶುವಿಗೆ ಈ ಜಗತ್ತು ಸ್ವರ್ಗ, ನರಕ, ಲೋಕಗಳಲ್ಲಿಯೂ ತಿರ್ಯಕ್ (ಮೂಕಜಂತುಗಳು) ಮುಂತಾದ ಯೋನಿಗಳಲ್ಲಿಯೂ ನಾನಾ ಜನ್ಮ ಪರಂಪರೆಗಳನ್ನು ಉಂಟುಮಾಡುವ ಕಾರ್ಯಾರಂಭ ವುಳ್ಳದ್ದಾಗಿರುವುದು. ಅದು ಕಾರಣ ನೀನು ಕಾಮ, ತೃಷ್ಣಾ, ಮನನಗಳೊಡನೆ

ಯಥಾ ಸ್ವಪ್ನೇ ಮಹಾರಂಭೋ ಭ್ರಾಂತಿರೇವ ನ ವಸ್ತುತಃ ।
ದೀರ್ಘಸ್ವಪ್ನಂ ತಥೈವೇದಂ ವಿದ್ಧಿ ಚಿತ್ತೋಪಪಾದಿತಂ ॥ ೨೪ ॥

ದೃಶ್ಯಮಾನಮಹಾಭೋಗಂ ಗೃಹ್ಯಮಾಣಮವಸ್ತುಕಂ ।
ಕೋಶಮಾಶಾಭುಜಂಗಾನಾಂ ಸಂಸಾರಾಡಂಬರಂ ತ್ಯಜ ॥ ೨೫ ॥

ಅಸದೇತದಿತಿ ಜ್ಞಾತ್ವಾ ಮಾತ್ರಭಾವಂ ನಿವೇಶಯ ।
ಅನುಧಾವತಿ ನ ಪ್ರಾಜ್ಞೋ ವಿಜ್ಞಾಯ ಮೃಗತೃಷ್ಣಿಕಾಂ ॥ ೨೬ ॥

ಈ ಜಗತ್ತನ್ನು ಪರಿತ್ಯಾಗಮಾಡಿ ನಿಷ್ಪ್ರಪಂಚವಾದ ಸ್ವಾತ್ಮತತ್ತ್ವಸ್ವರೂಪವನ್ನು ನಿರಂತರವೂ ಭಾವಿಸುವವನಾಗು.

೨೪. ಅತ್ಯದ್ಭುತಗಳಾದ ಮಹಾಕಾರ್ಯಾರಂಭಗಳುಳ್ಳ ಸ್ವಪ್ನವು ತತ್ಕಾಲದಲ್ಲಿ ಮಾತ್ರ ನಿಜವಾಗಿ ತೋರಿದರೂ ಅದು, ಅನಂತರ ಜಾಗ್ರತ್ತಿನಲ್ಲಿ ಹೇಗೆ ಕೇವಲ ಭ್ರಾಂತಿಯೇ ಆಗಿರುವುದೋ ಮತ್ತು ವಸ್ತುತಃ ಇಲ್ಲವೇ ಇಲ್ಲವೋ ಹಾಗೆ ಈ ಜಗತ್ತೂ ಮನಸ್ಸಿನಿಂದ ಉಪಪನ್ನವಾದ ದೀರ್ಘಸ್ವಪ್ನವೆಂದು (ಸ್ವಲ್ಪ ಹೆಚ್ಚುಕಾಲ ಕಾಣುವ ಕನಸು) ತಿಳಿಯುವವನಾಗು.

(ಅಂತಃಸ್ಥಾನಾತ್ತು ಭೇದಾನಾಂ ತಸ್ಮಾತ್ ಜಾಗರಿತೇ ಸ್ಮೃತಂ । ಯಥಾತತ್ರ ತಥಾಸ್ವಪ್ನೇ ಸಂವೃತತ್ವೇನ ಭಿದ್ಯತೇ ॥ ನೈತಥ್ಯ ೪. ಸ್ವಪ್ನದೃಶ್ಯ ಭಾವಗಳು ಹೇಗೋ ಹಾಗೆ ಜಾಗ್ರದ್ದೃಶ್ಯ ಭಾವಗಳೂ ದೃಶ್ಯವಾಗಿರುವ ಕಾರಣದಿಂದ ಸ್ವಪ್ನದಂತೆಯೇ ಕೇವಲ ಅಸತ್ಯ (ಮಿಥ್ಯಾ) ಭೂತವಾದವುಗಳೇ!)

೨೫. ಈ ಸಂಸಾರಾಡಂಬರವು ಆಶೆಗಳೆಂಬ ಸರ್ಪಗಳಿಗೆ ನಿಧಿ (ಹುತ್ತ) ಯಾಗಿರುವುದು. ಇದರೊಳಗೆ ಬಹು ದೊಡ್ಡದಾದ ಭೋಗವು (ಭೋಗವೆಂದರೆ ಸರ್ಪಶರೀರ ಮತ್ತು ಪ್ರಾಪಂಚಿಕ ಸುಖ) ಕಾಣುತ್ತಾ ಇರುವುದು. ನಾವು ಇದನ್ನು ಗ್ರಹಿಸಲು ಪ್ರಯತ್ನಿಸಿದರೆ ಆಗ ಅದು ಸುತರಾಂ ಶೂನ್ಯವಾಗಿ ಬಿಡುವುದು. (ಅತ್ಯಂತಾ ಸತ್ ಆಗುವುದು.) ಇಂತಹ ಸಂಸಾರಾಡಂಬರದಲ್ಲಿ ನೀನು ಆಸಕ್ತನಾಗದೆ ಬಿಟ್ಟುಬಿಡು.

೨೬. ಇದು "ಅತ್ಯಂತಾಸತ್ ಆದುದೇ" ಎಂದು ದೃಢವಾಗಿ ತಿಳಿದು, ನೀನು ಇದರಲ್ಲಿ ನಿನ್ನ ಭಾವವನ್ನು (ರಾಗವನ್ನು) ಇಡದವನಾಗು. "ಇದು ಮರು

ಸ್ವಸಂಕಲ್ಪಾತ್ ಸ್ವರೂಪಾಢ್ಯಾಂ ಮನೋರಥಮಯೀಂ ಶ್ರಿಯಂ ।
ಯೋನುಗಚ್ಛತಿ ಮೂಢಾತ್ಮಾ ದುಃಖಸ್ಯೈವ ಸ ಭಾಜನಂ ॥ ೨೭ ॥

ವಸ್ತ್ವನ್ಯಸತಿ ಲೋಕೋಽಯಂ ಯಾತು ಕಾಮಮವಸ್ತುನಿ ।
ಯಸ್ತು ವಸ್ತು ಪರಿತ್ಯಜ್ಯ ಯಾತ್ಯವಸ್ತು ಸ ನಶ್ಯತಿ ॥ ೨೮ ॥

ಮನೋವ್ಯಾಮೋಹ ಏವೇದಂ ರಜ್ಜ್ವಾಮಹಿಭಯಂ ಯಥಾ ।
ಭಾವನಾಮಾತ್ರವೈಚಿತ್ರ್ಯಾಚ್ಚಿರಮಾವರ್ತತೇ ಜಗತ್ ॥ ೨೯ ॥

ಮರೀಚಿಕೆಯು'' ಎಂಬ ದೃಢಪ್ರತ್ಯಯವು ಉಂಟಾದ ಮೇಲೆ ಪ್ರಾಜ್ಞನಾದವನು ಯಾವನೂ ಜಲಭ್ರಾಂತಿಯಿಂದ ಬಿಸಿಲುಗುದುರೆಯನ್ನು ಅನುಸರಿಸಿ ಓಡುವುದಿಲ್ಲವಷ್ಟೇ.

೨೭. ಯಾವ ಮೂಢಾತ್ಮನು ತನ್ನ ಸಂಕಲ್ಪದಿಂದಲೇ ವಿಶೇಷವಾಗಿ ನಾನಾ ವಿಚಿತ್ರ ರೂಪಗಳನ್ನು ಪಡೆದು ಮೆರೆಯುತ್ತಿರುವ ತನ್ನ ಮನೋರಥಗಳಿಂದ ಪ್ರಚುರವಾಗಿರುವ ಪ್ರಾಪಂಚಿಕ ಸಂಪತ್ತನ್ನು ನಂಬಿಕೊಂಡು ಹಿಂಬಾಲಿಸುವನೋ ಅವನು ಎಂದೆಂದಿಗೂ ಕೇವಲ ದುಃಖಕ್ಕೆ ಮಾತ್ರವೇ ಭಾಗಿಯಾಗುವನು. (ಪಾತ್ರನಾಗುವನು= ಗುರಿಯಾಗುವನು.)

೨೮. ಪರಮಾರ್ಥವೂ ತ್ರಿಕಾಲಾಬಾಧಿತವೂ ಆದ ಸದ್ವಸ್ತುವು ಇಲ್ಲದೆಯೇ ಹೋಗಿದ್ದರೆ ಆಗ ಜಗತ್ತಿನಲ್ಲಿ ಜನರು ಅವಸ್ತುವಿನಲ್ಲಿ (ಅಪರಮಾರ್ಥವಾಕ ಅಸತ್ ವಸ್ತು) ತಮಗೆ ಬೇಕಾದ ಹಾಗೆ ಹೋಗಿ ಬೀಳಬಹುದಾಗಿತ್ತು. (ಆದರೆ ವಸ್ತುಸ್ಥಿತಿಯು ಹಾಗಿಲ್ಲ) ಯಾವನಾದರೇ [ಪರಮಾರ್ಥ] ವಸ್ತುವಿದ್ದರೂ ಕೂಡ ಅದನ್ನು ಪರಿತ್ಯಾಗಮಾಡಿ ಅವಸ್ತುವನ್ನು ಹುಡುಕಿಕೊಂಡು ಹೋಗುವನೋ ಅವನು ಪರಮಪುರುಷಾರ್ಥದಿಂದ ಭ್ರಷ್ಟನಾಗಿ ಸರ್ವನಾಶವನ್ನು ಹೊಂದುವನು. ಸಂದೇಹವಿಲ್ಲ.

೨೯. ಮಂದಾಂಧಕಾರದಲ್ಲಿ ಬಿದ್ದಿರುವ ರಜ್ಜು [ಹಗ್ಗ]ವನ್ನು ನೋಡಿ ಒಬ್ಬ ಭ್ರಾಂತನು ತನ್ನ ಮಾನಸಿಕ ವಿಕಾರದಿಂದಲೇ ಅದನ್ನು ಹಾವು ಎಂದು ತಿಳಿದು ಭಯಪಡುವಂತೆ ಈ ಜಗತ್ತೆಲ್ಲವೂ ಕೇವಲ ಮನಸ್ಸಿನ ವ್ಯಾಮೋಹವೇಯೆ [ಬೇರೆ

ಅಸದಭ್ಯುದಿತೈರ್ಭಾವೈರ್ಜಲಾಂತಶ್ಚಂದ್ರಚಂಚಲೈಃ ।
ವಂಚ್ಯತೇ ಬಾಲಏವೇವ ನತತ್ತ್ವಜ್ಞೋ ಭವಾದೃಶಃ ॥ ೩೦ ॥

ಯ ಇಮಂ ಗುಣಸಂಘಾತಂ ಭಾವಯರ್ನ ಸುಖಮಿಾಹತೇ ।
ಪ್ರಮಾರ್ಷ್ಟಿ ಸ ಜಡೋ ಜಾಡ್ಯಂ ವಹ್ನಿಭಾವನಯಾ ಸ್ವಯಾ ॥ ೩೧ ॥

ಅಸದೇವೇದಮಾಭೋಗಿ ದೃಶ್ಯತೇ ಜಲಪಂಜರಂ ।
ಮನೋಮನನನಿರ್ಮಾಣಹೃದಯೇ ನಗರಂ ಯಥಾ ॥ ೩೨ ॥

ಯಾವುದೂ ಅಲ್ಲ) ಜನಗಳ ಮನೋವೃತ್ತಿಗಳಿಗೆ ಅನುಗುಣವಾಗಿ ಅವರ ಭಾವನೆಗಳಲ್ಲಿ ಮಾತ್ರವೇ ನಾನಾ ವೈಚಿತ್ರ್ಯಗಳಿರುವುದರಿಂದ ಅದಕ್ಕೆ ತಕ್ಕಂತೆಯೇ ಈ ಜಗತ್ತು ಚಕ್ರಾಕಾರವಾಗಿ ಸುತ್ತುತ್ತಿರುವುದು.

೩೦. ನೀರಿನೊಳಗೆ ಕಾಣಿಸುವ (ಪ್ರತಿಬಿಂಬಿಸಿರುವ) ಚಂದ್ರನಂತೆ ಅತಿ ಚಂಚಲವಾಗಿ ಅಸತ್ತಾಗಿಯೇ ಈ ಭಾವಗಳೆಲ್ಲ ಉದಯಿಸಿರುವುವು. ಇಂತಹ ಅಸ್ಥಿರವಾದ ಭಾವಗಳಿಂದ ಕೇವಲ ಬಾಲಕನಂತಹ ಅಜ್ಞಾನಿಯು (ಅಪ್ರಬುದ್ಧನು) ವಂಚಿಸಲ್ಪಡುವನೇ ಹೊರತು ಅಯ್ಯ ರಾಮ, ನಿನ್ನಂತಹ ತತ್ತ್ವಜ್ಞಾನಿಯು ಎಂದಿಗೂ ವಂಚಿತನಾಗುವುದಿಲ್ಲ.

೩೧. ಯಾವ ನರಾಧಮನು ಶಬ್ದಸ್ಪರ್ಶರೂಪರಸ ಗಂಧಗಳೆಂಬ ಗುಣಗಳ ಸಮುದಾಯಾತ್ಮಕಗಳಿಂದ ಈ ದೇಹೇಂದ್ರಿಯಾದಿಗಳಲ್ಲಿ "ಅಹಂ" (ನಾನು) ಮತ್ತು "ಮಮ" (ನನ್ನದು) ಎಂಬ ಅಭಿಮಾನವನ್ನು ಇಟ್ಟುಕೊಂಡು ಇದರಿಂದ ಸುಖವನ್ನು ಬಯಸುವನೋ ಆ ಜಡಾತ್ಮನು ತನ್ನ ಮನೋರಥದಲ್ಲಿಯೇ ಕಲ್ಪಿತವಾದ ಅಗ್ನಿಯಿಂದ (ಮನಸ್ಸಿನಲ್ಲಿ ಭಾವನೆಮಾಡಿಕೊಂಡ ಅಗ್ನಿಯಿಂದ) ಶೈತ್ಯವನ್ನು (ಚಳಿಯನ್ನು) ನಿವಾರಣೆಮಾಡಿಕೊಳ್ಳಲು ಯತ್ನಿಸತಕ್ಕವನೇ ಸರಿ.

೩೨. ಅತ್ಯಂತ ಜಡವಸ್ತುಗಳ ಸಮೂಹಭೂತವಾದ ಈ ದೇಹಾದಿ ಪ್ರಪಂಚವು ಮನಸ್ಸಿನ ಮನನ ಮಾತ್ರದಿಂದಲೇ ನಿರ್ಮಿತವಾದ ನಗರವು ಹೃದಯದಲ್ಲಿ ಗೋಚರವಾಗುವಂತೆ ಅತಿ ವಿಸ್ತಾರವಾಗಿ ಸರ್ವತ್ರ ಗೋಚರಿಸುತ್ತಿದ್ದರೂ ಕೂಡ ಕೇವಲ ಅಸತ್ ಎಂದೇ ದೃಢವಾಗಿ ತಿಳಿಯುವವನಾಗು.

ಇದಂ ಚಿತ್ತೇಚ್ಛಯೋದೇತಿ ಲೀಯತೇ ತದನಿಚ್ಛಯಾ ।
ಮಿಥ್ಯೈವಂ ದೃಶ್ಯತೇ ಸ್ಫೀತಂ ಗಂಧರ್ವನಗರಂ ಯಥಾ　　॥ ೩೩ ॥

ರಾಮ ನಷ್ಟೇ ಜಗತ್ಯಸ್ಮಿನ್ನ ಕಿಂಚಿದಪಿ ನಶ್ಯತಿ ।
ಯುಕ್ತೋಽಪಿ ಚ ಜಗತ್ಯಸ್ಮಿನ್ನ ಕಿಂಚಿದಪಿ ನಶ್ಯತಿ　　॥ ೩೪ ॥

ಮನಃಪ್ರಕಲ್ಪಿತೇ ಭಗ್ನೇ ಹೃದಿ ವಿಸ್ತೀರ್ಣಪತ್ತನೇ ।
ವೃದ್ಧಿಂ ಚೋಪಗತೇ ಬ್ರೂಹಿ ಕಿಂ ವೃದ್ಧಂ ಕಸ್ಯ ಕಿಂ ಕ್ಷತಂ　　॥ ೩೫ ॥

ಕ್ರೀಡಾರ್ಥೇನ ಯಥೋದೇತಿ ಬಾಲಾನಾಂ ಹೃದಿ ವರ್ತನಂ ।
ಮನಸಾ ತದ್ವದೇವೇದಮುದೇತ್ಯವಿರತಂ ಜಗತ್　　॥ ೩೬ ॥

---

೩೩. ಚಿತ್ತದಲ್ಲಿ (ಮನಸ್ಸಿನಲ್ಲಿ) ಇಚ್ಛೆಯು ಉದ್ಭವಿಸಿದರೆ ಆಗ ಈ ಜಗತ್ತೂ ಉದಯಿಸುವುದು: ಜಗದ್ವಿಷಯಕವಾದ ಇಚ್ಛೆಯೇ ಇಲ್ಲದಿರಲು ಜಗತ್ತೂ ಲಯ ಹೊಂದುವುದು. ಹೀಗೆ, ಎಲೈ ರಾಮಭದ್ರ, ಜಗತ್ತು ಗಂಧರ್ವನಗರದಂತೆ ಮಿಥ್ಯೆಯಾಗಿಯೇ ಬಹು ವಿಸ್ತಾರವಾಗಿ ಗೋಚರಿಸುತ್ತಿರುವುದು.

೩೪. ಅಯ್ಯ ರಾಮ, ಇಂತಹ ಅಸದಾತ್ಮಕವಾದ ಈ ಜಗತ್ತು ನಾಶ ಹೊಂದಲಾಗಿ ಅದರಿಂದ ಯಾವುದೊಂದು ಹಾನಿಯೂ ಇಲ್ಲ. ಮತ್ತು ಇದು ಸಮೃದ್ಧವಾಗಿದ್ದ ಮಾತ್ರದಿಂದಲೂ ನಮಗೆ ಯಾವುದೊಂದು ಬಗೆಯ ಸಮೃದ್ಧಿಯೂ ಉಂಟಾಗುವುದಿಲ್ಲ.

(ಯುಕ್ತ= ಸಮೃದ್ಧ ಎಂದು ತಾ. ಪ್ರ.)

೩೫. ಮನಸ್ಸಿನಿಂದಲೇ ಕಲ್ಪಿತವಾಗಿ ಹೃದಯದೊಳಗೆಯೇ ಬಹು ವಿಸ್ತೀರ್ಣವಾಗಿರುವ ನಗರವು ಹಾಳಾಗಬಿಟ್ಟರೂ ಅಥವಾ ಅದು ವಿಶೇಷ ಅಭಿವೃದ್ಧಿ ಹೊಂದಿದರೂ ಅದರಿಂದ ಯಾವನಿಗೆ ಏನು ನಷ್ಟವಾಯಿತು ಅಥವಾ ಯಾವ ಅಭಿವೃದ್ಧಿಯಾಯಿತು ? ನೀನೇ ಹೇಳು.

೩೬. ಮಕ್ಕಳು ಬೊಂಬೆಗಳಿಂದ ಆಟವಾಡುವ ಕಾಲದಲ್ಲಿ ತಮ್ಮ ವಿನೋದಕ್ಕಾಗಿ ಮನಸ್ಸಿನಲ್ಲಿಯೇ ಹೇಗೆ ಪುತ್ರ, ಪೌತ್ರ ಪತ್ನಿ, ಪತಿ, ಗೃಹಾದಿ ವ್ಯವಹಾರಾಭಾಸಕಲ್ಪನೆಯು ಮಿಥ್ಯೆಯಾಗಿಯೇ ಉದಯಿಸಿದ್ದು ಆಟದ ಕೊನೆಯಲ್ಲಿ ಅದೆಲ್ಲವೂ ನಷ್ಟಹೊಂದಿದರೂ ಕೂಡ ಅವರು ಅದರಿಂದ ಶೋಕಕ್ಕೆ ಗುರಿಯಾಗುವು

ನ ಕಿಂಚಿತ್ಕಸ್ಯಚಿನ್ನಷ್ಟಮಿಂದ್ರಜಾಲಜಲೇ ಯಥಾ ।
ಭ್ರಷ್ಟೇ ನಷ್ಟೇ ತಥೈವಾಸ್ಮಿನ್ ಸಂಸಾರೇ ವಿತಥೋತ್ಥಿತೇ ॥ ೩೭ ॥

ಯದಸತ್ತದಸತ್ತಾಸ್ಯಚ್ಚೇನ್ನ ಕಿಂ ಕಸ್ಯ ಕಿಲ ಕ್ಷತಂ ।
ತತೋ ಹರ್ಷವಿಷಾದಾನಾಂ ಸಂಸಾರೇ ನಾಮ ನಾಸ್ಪದಂ ॥ ೩೮ ॥

ದಿಲ್ಲವೋ ಹಾಗೆಯೇ ಈ ಜಗತ್ತು ಸಂತತವೂ ಮನಸ್ಸಿನಿಂದಲೇ ಕಲ್ಪಿತವಾಗಿ ಉದಯಿಸುತ್ತಲೂ ಲಯಹೊಂದುತ್ತಲೂ ಇರುವ ಕಾರಣ ಅದರ ಉದಯಾಸ್ತಗಳು ಹರ್ಷವಿಷಾದಗಳಿಗೆ ಕಾರಣವಲ್ಲವು.

೩೭. ಒಬ್ಬ ಇಂದ್ರಜಾಲನು ತನ್ನ ಮಾಯೆಯಿಂದ ಜಲವನ್ನು ಕಲ್ಪಿಸಿ ತೋರಿದರೆ ಆ ಜಲವು ಪಾನಯೋಗ್ಯವಾಗಿ ಬಾಯಾರಿಕೆಯನ್ನು ಕಳೆಯಲು ಹೇಗೆ ಅರ್ಥಕ್ರಿಯಾಕಾರಿಯಾಗುವುದಿಲ್ಲವೋ ಮತ್ತು ಅದು ಪುನಃ ನಷ್ಟವಾಗುವುದರಿಂದ ಯಾರಿಗೂ ಏನೂ ಸ್ವಲ್ಪವೂ ನಷ್ಟವಾಗುವುದಿಲ್ಲವೋ ಹಾಗೆಯೇ ಅಸತ್ಯವಾಗಿ (ಮಿಥ್ಯೆಯಾಗಿ) ಉದಯಿಸಿ ಗೋಚರಿಸುವ ಈ ಸಂಸಾರವು ನಷ್ಟವಾದರೂ ಯಾರಿಗೂ ಯಾವುದೂ ಸ್ವಲ್ಪವೂ ನಷ್ಟವಾಗುವುದಿಲ್ಲವೆಂದು ತಿಳಿಯಬೇಕು.

[ಯಥಾಸ್ವಪ್ನೇ ದ್ವಯಾಭಾಸಂ ಸ್ಪಂದತೇ ಮಾಯಯಾ ಮನಃ । ತಥಾ ಜಾಗ್ರತ್ ದ್ವಯಾಭಾಸಂ ಸ್ಪಂದತೇ ಮಾಯಯಾ ಮನಃ ॥ ಮಾಂಡೂಕ್ಯಕಾರಿಕಾ ಅದ್ವೈತ ೨೯. ಮನೋದೃಶ್ಯಮಿದಂದ್ವೈತಂ ಯತ್ ಕಿಂಚಿತ್ ಸಚರಾಚರಂ । ಮನಸೋಹ್ಯಮನೀಭಾವೇ ದ್ವೈತಂ ನೈವೋಪಲಭ್ಯತೇ ॥ ಅದ್ವೈತ ೩೧.]

೩೮. ಯಾವುದು ಎಂದಿಗೂ ಅಸತ್ ಆದುದೋ ಅದು ಈಗ (ವ್ಯವಹಾರ ದಲ್ಲಿಯೂ) ಅಸತ್ತಾಗಿಯೇ ಇರುವುದಾದರೆ ಅದರಿಂದ ಯಾರಿಗೆ ಯಾವುದು ನಷ್ಟವಾಯಿತು? (ಯಾವುದೂ ನಷ್ಟವಾಗುವುದಿಲ್ಲ.) ಈ ಕಾರಣದಿಂದ ಈ ಸಂಸಾರದಲ್ಲಿ ಹರ್ಷವಿಷಾದಗಳಿಗೆ ಆಸ್ಪದವಾದುದು ಯಾವುದು ತಾನೇ ಇರುವುದು? (ಯಾವುದೂ ಇಲ್ಲ.)

[ಶ್ಲೋಕದ ಮೊದಲನೆ ಅರ್ಧದಲ್ಲಿರುವ "ನ" ಎಂಬ ಅವ್ಯಯಕ್ಕೆ "ಏವ" ಅವಧಾರಣಾರ್ಥವನ್ನು ಹೇಳಿದೆ.]

ಅಸದೇವ ಯದತ್ಯಂತಂ ತಸ್ಮಾತ್ಕಿಂ ನಾಮ ನಶ್ಯತಿ ।
ನಾಶಾಭಾವೇ ಹಿ ದುಃಖಸ್ಯ ಕಃ ಪ್ರಸಂಗೋ ಮಹಾಮತೇ || ೩೯ ||

ಸದೇವ ವಾ ಯದತ್ಯಂತಂ ಸತ್ಯ ಕಿಂ ನಾಮ ನಶ್ಯತಿ ।
ನಾಶಾಭಾವೇ ಹಿ ದುಃಖಸ್ಯ ಕಃ ಪ್ರಸಂಗೋ ಮಹಾಮತೇ || ೩೯ ||

ಸದೇವ ವಾ ಯದತ್ಯಂತಂ ಸತ್ಯ ಕಿಂ ನಾಮ ನಶ್ಯತಿ ।
ಬ್ರಹ್ಮೈವೇದಂ ಜಗತ್ಸರ್ವಂ ಸುಖದುಃಖೇ ಕಿಮುತ್ಥಿತೇ || ೪೦ ||

ಅಸದ್ವಾಪಿ ಯದತ್ಯಂತಂ ವೃದ್ಧಿಃ ಸ್ಯಾತ್ತಸ್ಯ ಕೀದೃಶೀ ।
ವೃದ್ಧೇರಭಾವೇ ಹರ್ಷಸ್ಯ ಕಃ ಪ್ರಸಂಗೋ ಮಹಾಮತೇ || ೪೧ ||

---

೩೯. ಎಲೈ ಮಹಾಪ್ರಾಜ್ಞನೇ, ಯಾವುದು ಸರ್ವಥಾ (ವಂಧ್ಯಾಪುತ್ರಾದಿಗಳಂತೆ) ಅತ್ಯಂತ ಅಸತ್ ವಸ್ತುವೇ ಆದುದೋ ಅದರ ದೆಸೆಯಿಂದ ಏನು ತಾನೇ ನಾಶ ಹೊಂದುವುದು ? ಹೀಗೆ ನಾಶವೇ ಇಲ್ಲದೆ ಹೋದ ಬಳಿಕ, ದುಃಖಕ್ಕೆ ಪ್ರಸಕ್ತಿ ಯಾವುದಿರುವುದು ?

[ಅಸತ್ ಆದುದು ಎಂದಿಗೂ ಅಸತ್ತೇ! ಅದಕ್ಕೆ ಉತ್ಪತ್ತಿ ವಿನಾಶಗಳು ಒಂದೂ ಸಂಭವಿಸುವುದಿಲ್ಲ. ಅದು ಕಾರಣ ಹರ್ಷವಿಷಾದಾದಿಗಳಿಗೆ ಪ್ರಸಕ್ತಿಯೂ ಇಲ್ಲ.]

೪೦. ಅಥವಾ [ಪ್ರಕಾರಾಂತರದಿಂದ ವಿಚಾರ ಮಾಡಿದರೂ ಕೂಡ] ಯಾವುದು ವಸ್ತುತಃ ಸರ್ವದಾ ಆತ್ಯಂತಿಕ ಸತ್ತೇ ಆಗಿರುವುದೋ ಅದಕ್ಕೆ ಏನು ತಾನೇ ನಾಶವಾಗುವುದು ? ಈ ಸಕಲವಾದ ಜಗತ್ತೆಲ್ಲವೂ ಪರಮಾರ್ಥ ಸದ್ರೂಪ ಬ್ರಹ್ಮವೇ ಆಗಿರುವಾಗ ಸುಖದುಃಖಗಳುದಯಿಸುವುದಕ್ಕೆ ಕಾರಣವು ಯಾವುದಿರುವುದು ?

[ನಭವತ್ಯಮೃತಂ ಮರ್ತ್ಯಂ ನಮರ್ತ್ಯಮಮೃತಂತಥಾ ! ಪ್ರಕೃತೇರನ್ಯಥಾಭಾವೋನ ಕಥಂಚಿತ್ ಭವಿಷ್ಯತಿ || ಮಾಂಡೂಕ್ಯ ಅಲಾತಶಾಂತಿ ೭.]

[ಸ್ವತೋವಾ ಪರತೋವಾಪಿ ನಕಿಂಚಿತ್ ವಸ್ತುಜಾಯತೇ । ಸತ್, ಅಸತ್, ಸದಸತ್, ವಾಪಿ ನಕಿಂಚಿತ್ ವಸ್ತು ಜಾಯತೇ || ಅಲಾತ ಶಾಂತಿ ೨೨.)

೪೧. ಮತ್ತು ಯಾವುದು ಅತ್ಯಂತ ಅಸತ್ತೇ ಆದುದೋ ಅದಕ್ಕೆ ಎಂತಹ

ಸರ್ವತ್ರಾಸತ್ಯಭೂತೇಽಸ್ಮಿನ್ ಪ್ರಪಂಚೈಕಾಂತಕಾರಿಣೆ ।
ಸಂಸಾರೇ ಕಿಮುಪಾದೇಯಂ ಪ್ರಾಜ್ಞೋ ಯದಭಿವಾಂಛತು ॥ ೪೨ ॥

ಸರ್ವತ್ರ ಸತ್ಯಭೂತೇಽಸ್ಮಿನ್ ಬ್ರಹ್ಮತತ್ತ್ವಮಯೇಽಪಿ ಚ ।
ಕಿಂ ಸ್ಯಾತ್ತ್ರಿಭುವನೇ ಹೇಯಂ ಪ್ರಾಜ್ಞಾಃ ಪರಿಹರಂತು ಯತ್ ॥ ೪೩ ॥

ಅಸತ್ಸದ್ವಾ ಜಗದ್ಯಸ್ಯ ತೇನಾಸೌ ಸುಖದುಃಖಯೋಃ ।
ಅಗಮ್ಯ ಏವ ಮೂರ್ಖಸ್ತು ತದ್ವಿನಾಶೇನ ದುಃಖಿತಃ ॥ ೪೪ ॥

ವೃದ್ಧಿಯು ಸಂಭವಿಸಬಹುದು ? ವೃದ್ಧಿಯೇ ಇಲ್ಲದಿರಲು ಹರ್ಷಕ್ಕೆ ಪ್ರಸಕ್ತಿಯು ಎಲ್ಲಿಯದು ? (ಇಲ್ಲವೇ ಇಲ್ಲ.)

೪೨. ಸರ್ವದಾ ಸರ್ವತ್ರ ಕೇವಲ ಅಸತ್ಯಭೂತವಾಗಿಯೂ ಅತ್ಯಂತ ವಿಸ್ತಾರವಾಗಿ ಹರಡಿಕೊಂಡಿರುವುದಾಗಿಯೂ ಇರುವ ಈ ಸಂಸಾರದಲ್ಲಿ ತತ್ತ್ವಜ್ಞಾನಾದವನು ಯಾವುದನ್ನು ಪ್ರಿಯತಮವೆಂದು ಭಾವಿಸಿ ಅಪೇಕ್ಷಿಸಬಹುದೋ ಅಂತಹ ಉಪಾದೇಯವು [ಗ್ರಾಹ್ಯವು] ಯಾವುದು ಇರುವುದು ? ಯಾವುದು ಇಲ್ಲವಷ್ಟೆ ? (ಇಷ್ಟಪ್ರಾಪ್ತಿಯಾಗುವುದಾದರೆ ಆಗ ಸಂತೋಷವಾಗುವುದು. ಈ ಮಾಯಾಮಯವಾದ ಸಂಸಾರದಲ್ಲಿ ಅಂತಹ ಇಷ್ಟವೆಂಬುದೇ ಇಲ್ಲವೆಂದು ಭಾವ.)

೪೩. ಮತ್ತು "ಸರ್ವವೂ ಬ್ರಹ್ಮವೇ" ಎಂಬ ದೃಷ್ಟಿಯಿಂದ ಸರ್ವತ್ರ ಸತ್ಯಭೂತವಾಗಿರುವ ಮತ್ತು ಬ್ರಹ್ಮತತ್ತ್ವಮಯವಾದ ಈ ಮೂರು ಲೋಕಗಳಲ್ಲಿ ಎಲ್ಲಿಯೂ ಕೂಡ ಪ್ರಾಜ್ಞರಾದವರು ಪರಿತ್ಯಾಗಮಾಡಬೇಕಾಗಿರುವ ಹೇಯವಾದ (ಪರಿಹರಣೀಯ) ವಸ್ತುವು ತಾನೇ ಯಾವುದು ಇರುವುದು? ಯಾವುದೊಂದೂ ಇಲ್ಲ. [ಹೀಗೆ ಹೇಯವೂ ಇಲ್ಲದ ಕಾರಣ ವಿಷಾದಕ್ಕೂ ಪ್ರಸಕ್ತಿಯಿಲ್ಲ.]

೪೪. ಈ ಕಾರಣದಿಂದ ಯಾವ ಉತ್ತಮಾಧಿಕಾರಿಯು ಈ ಜಗತ್ತನ್ನು ಮಾಯಾಮಯವೆಂದು ತಿಳಿದು ಅಸತ್ ಎಂದಾಗಲೀ ಅಥವಾ ಕೇವಲ ಅದ್ವಿತೀಯ ಬ್ರಹ್ಮವೇ ಎಂದು ತಿಳಿದು ಸತ್ ಎಂದಾಗಲೀ ಪೂರ್ವೋಕ್ತಕ್ರಮದಿಂದ ವಿಚಾರ ಮಾಡಿ ದೃಢನಿಶ್ಚಯ ಜ್ಞಾನವನ್ನು ಸಂಪಾದಿಸಿಕೊಳ್ಳುವನೋ ಅಂತಹ ತತ್ತ್ವಜ್ಞನು ಎಂದಿಗೂ ಸುಖದುಃಖಗಳಿಗೆ ಪರವಶನಾಗುವುದೇ ಇಲ್ಲ. ಇಂತಹ ವಿಚಾರ ಜ್ಞಾನವಿಲ್ಲದ ಮೂರ್ಖನಾದರೋ ಉಭಯ ಪಕ್ಷಗಳಲ್ಲಿಯೂ ವಿನಾಶಾನರ್ಹವಾದ [ಅಂದರೆ] ಅಸತ್ತಾಗಿರುವುದಾದರೆ ಅದಕ್ಕೆ ನಾಶವೇ ಸಂಭವಿಸುವುದಿಲ್ಲ. ಅಥವಾ

ಆದಾವಂತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ ।
ಯೋಽಭಿವಾಂಛತ್ಯಸದ್ರಾಮ ತಸ್ಯಾಸತ್ತೈವ ದೃಶ್ಯತೇ || ೪೫ ||

ಆದಾವಂತೇ ಚ ಯತ್ಸತ್ಯಂ ವರ್ತಮಾನೇ ಸದೇವ ತತ್ ।
ಯಸ್ಯ ಸರ್ವಂ ಸದೇವ ಸ್ಯಾಸ್ತಸ್ಯ ಸತ್ತೈವ ದೃಶ್ಯತೇ || ೪೬ ||

ಸತ್ ಆಗಿರುವುದಾದರೆ ಅದಕ್ಕೂ ಎಂದಿಗೂ ನಾಶವುಂಟಾಗುವುದಿಲ್ಲ. ನಾಸತೋ ವಿದ್ಯತೇಭಾವಃ ನಾಭಾವೋ ವಿದ್ಯತೇ ಸತಃ ಎಂಬ ಗೀತಾನ್ಯಾಯಾನುಸಾರವಾಗಿ] ಪುತ್ರಮಿತ್ರಾದಿಗಳ ಸ್ವಭ್ರಾಂತಿ ಕಲ್ಪಿತವಾದ ವಿನಾಶದಿಂದ ಸರ್ವದಾ ದುಃಖ ಭಾಜನನಾಗುವನು.

೪೫. ರಾಮ, ಆದಿಯಲ್ಲಿಯೂ ಮತ್ತು ಅಂತದಲ್ಲಿಯೂ ಕೂಡ ಯಾವುದು ವಸ್ತುತಃ ಇಲ್ಲವೋ ಅದು ವರ್ತಮಾನ ಕಾಲದಲ್ಲಿಯೂ ಕೂಡ ಹಾಗೆಯೇ ಸರಿ [ಇಲ್ಲವೇ ಇಲ್ಲವು ಅಸತ್ ಆದುದೇ ಎಂದರ್ಥ.] ಆದರೆ ಯಾವನು ಅಸತ್ ಆದುದನ್ನು ಅಪೇಕ್ಷಿಸುವನೋ ಅವನಿಗೆ ಅಸತ್ತೆಯೇ [ಅಸದ್ಭಾವವು] ಉಂಟಾಗುವುದು.

["ಅಸ್ನ ಏವಸಭವತಿ ಅಸತ್ ಬ್ರಹ್ಮೇತಿವೇದಚೇತ್" ಎಂದು ತೈತ್ತಿರೀಯೋಪನಿಷತ್ತಿನ ಆನಂದವಲ್ಲಿಯಲ್ಲಿ ಹೇಳಿರುವಂತೆ ಬ್ರಹ್ಮವನ್ನು ಅಸತ್ ಎಂದು ತಿಳಿದರೆ ಹಾಗೆ ತಿಳಿದವನು ಅಸತ್ತೇ ಆಗುವನು ಎಂದು ಭಾವ.]

(ಅಸದ್ವಾ ಇದಮಗ್ರ ಆಸೀತ್ ನೈವೇಹಕಿಂಚನಾಗ್ರ ಆಸಿತ್ ಇತ್ಯಾದಿ ಸಾವಿರಾರು ಶ್ರುತಿಗಳು ಸಕಲ ಪ್ರಪಂಚಗಳಿಗೂ ಆದ್ಯಂತಗಳಲ್ಲಿ ಅಸತ್ತ್ವವನ್ನು ಬೋಧಿಸುತ್ತಲಿವೆ. ಅದು ಕಾರಣವೇ ಈ ಜಾಗ್ರದ್ದೃಶ್ಯಗಳು ಮೃಗತೃಷ್ಣಿಕಾದಿಗಳಂತೆ ಮಧ್ಯಕಾಲದಲ್ಲಿಯೂ ಇಲ್ಲವೆಂದೇ ಲೋಕದಲ್ಲಿ ನಿಶ್ಚಿತವಾಗಿರುವುದು. ಶ್ರೀಮತ್ ಗೌಡಪಾದಾಚಾರ್ಯರವರು ಮಾಂಡೂಕ್ಯಕಾರಿಕೆಯ ವೈತಥ್ಯ ಪ್ರಕರಣದಲ್ಲಿಯೂ ಇದೇ ಅಂಶವನ್ನೇ ಬೋಧಿಸಿರುವರು.)

೪೬. ಯಾವುದು ಆದಿಯಲ್ಲಿಯೂ ಅಂತದಲ್ಲಿಯೂ ಸತ್ಯವಾಗಿರುವುದೋ ಅದು ವರ್ತಮಾನ ದೆಸೆಯಲ್ಲಿಯೂ ಸತ್ತಾಗಿಯೇ ಇರುವುದು. ಯಾವನಿಗೆ ಸರ್ವವೂ (ಸತ್ಏ) ಸತ್ತೇ ಆಗಿರುವುದೋ ಅವನು ಸರ್ವದಾ ಸತ್ತಾಗಿಯೇ ಇರುವನು.

ಅಸತ್ಯಭೂತಂ ತೋಯಾಂತಶ್ಚಂದ್ರವ್ಯೋಮತಲಾದಿಕಂ ।
ಬಾಲಾ ಏವಾಭಿವಾಂಛಂತಿ ಮನೋಮೋಹಾಯ ನೋತ್ತಮಾಃ ॥ ೪೭ ॥

ಬಾಲೋ ಹಿ ವಿತತಾಕಾರೈರ್ವಸ್ತುರಿಕ್ತೈಃ ಪ್ರಯೋಜನೈಃ ।
ಸಂತೋಷಮೇತ್ಯನಂತಾಯ ದುಃಖಾಯ ನ ಸುಖಾಯ ತು ॥ ೪೮ ॥

ತಸ್ಮಾನ್ಮಾ ತ್ವಂ ಭವೋ ಬಾಲೋ ರಾಮ ರಾಜೀವಲೋಚನ !
ಅವಿನಾಶಮಿಹಾಲೋಕ್ಯ ನಿತ್ಯಮಾಶ್ರಯ ಸುಸ್ಥಿರಂ ॥ ೪೯ ॥

[ಅಸ್ತಿಬ್ರಹ್ಮೇತಿಚೇತ್ ವೇದ ಸಂತಮೇನಂತತೋವಿದುಃ ತೈತ್ತಿರೀಯ ಆನಂದವಲ್ಲಿ ೬. [ಸದೇವಸೋಮ್ಯ ಇದಮಗ್ರ ಆಸೀತ್ ಇತ್ಯಾದಿ ಶ್ರುತಿಗಳು ಪ್ರಮಾಣ.]

೪೭. ನೀರಿನೊಳಗೆ ಕಾಣುವಂತಹ ಚಂದ್ರಬಿಂಬ ಮತ್ತು ಗಗನತಲ ಮೊದಲಾದವುಗಳಂತೆ ಕೇವಲ ಮನೋಮೋಹ ಹೇತುವಾಗಿರುವ ಅಸತ್ಯಭೂತವಾದ ಈ ಜಗತ್ತನ್ನು ಅಪ್ರಬುದ್ಧರಾದ ಅವಿವೇಕಿಗಳು ಮಾತ್ರವೇ (ಬಾಲರು) ಅಪೇಕ್ಷಿಸುವರಲ್ಲದೆ, ತತ್ತ್ವಜ್ಞರಾದ ಉತ್ತಮರು ಎಂದಿಗೂ ಇದನ್ನು ಬಯಸುವುದಿಲ್ಲ.

[ದೇಶಕಾಲಾದಿಗಳ ಮಿತಿಗೆ ಒಳಪಟ್ಟ (ಪರಿಚ್ಛಿನ್ನವಾದ) ಸತ್ತೆಯನ್ನು ಕಲ್ಪಿಸುವುದು ಅಂಧಪರಂಪರೆಯೂ ಸಕಲ ಶ್ರುತಿಗಳಿಗೂ ಯುಕ್ತಿಗಳಿಗೂ ವಿರುದ್ಧವು ಅದು ಸಕಲಾನರ್ಥಕಾರಿಯೂ ಎಂದರ್ಥ.]

೪೮. ಅರ್ಥಶೂನ್ಯಗಳಾಗಿದ್ದರೂ ವಿಸ್ತರಿಸಿಕೊಂಡಿರುವ ಆಕಾರಗಳುಳ್ಳ ಸುಖಾಭಾಸಗಳಿಂದ (ಬಾಲಸದೃಶನಾದ) ಅಜ್ಞನು ಮಾತ್ರವೇ ಸಂತೋಷಪಡುವನು. ಇದು ಅಜ್ಞನಿಗೆ ಅನಂತವಾದ ದುಃಖಪರಂಪರೆಗೆ ಹೇತುವಾಗುವುದೇ ಹೊರತು ಎಂದಿಗೂ ಸುಖಕ್ಕೆ ಕಾರಣವಾಗುವುದೇ ಇಲ್ಲ.

[ಪ್ರಯೋಜನೈಃ= ಸುಖಾಭಾಸಗಳಿಂದ.]

೪೯. ಅದು ಕಾರಣ, ಅಯ್ಯ ಕಮಲನೇತ್ರನಾದ ರಾಮನೇ, ನೀನು ಈ ವಿಷಯದಲ್ಲಿ ಎಂದಿಗೂ ಬಾಲಕನಂತೆ ಅವಿವೇಕಿಯಾಗಿ ವರ್ತಿಸಬೇಡ. ಈಗ ಅವಿನಾಶಿಯಾದುದು ಯಾವುದು ಎಂಬುದನ್ನು ಚೆನ್ನಾಗಿ ವಿಚಾರ ವಿಮರ್ಶೆಗಳಿಂದ

ಅಸದಿದಮಖಿಲಂ ಮಯಾ ಸಮೇತಂ
　　ತ್ವಿತಿ ವಿಗಣಯ್ಯ ವಿಷಾದಿತಾಸ್ತು ಮಾ ತೇ ।
ಸದಿಹ ಹಿ ಸಕಲಂ ಮಯಾ ಸಮೇತಂ
　　ತ್ವಿತಿ ಚ ವಿಲೋಕ್ಯ ವಿಷಾದಿತಾಸ್ತು ಮಾತೇ　　॥ ೫೦ ॥

ಶ್ರೀ ವಾಲ್ಮೀಕಿರುವಾಚ--

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
　　ಸಾಯಂತನಾಯ ವಿಧಯೇಽಸ್ತಮಿನೋ ಜಗಾಮ ।
ಸ್ನಾನಂ ಸಭಾಕೃತನಮಸ್ಕರಣಾ ಜಗಾಮ
　　ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ　　॥ ೫೧ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
ಯಥಾಭೂತಾರ್ಥಯೋಗೋಪದೇಶೋ ನಾಮ ಪಂಚಚತ್ವಾರಿಂಶಃ ಸರ್ಗಃ

ಕಂಡುಹಿಡಿದು ನಿತ್ಯವೂ ಸ್ಥಿರವೂ ಆದ ಆ ಪರಮಾರ್ಥ ಪರಬ್ರಹ್ಮವೊಂದನ್ನೇ ಸದಾ ಆಶ್ರಯಿಸುವವನಾಗು.

೫೦. ಮಾಯಾಮೂಢರಿಂದ ಆತ್ಮರೂಪವಾಗಿ ಕಲ್ಪಿತನಾದ ಅಹಂಕಾರದಿಂದೊಡಗೂಡಿದ ಈ ಸಕಲ ಜಗತ್ತೂ ಅಸತ್ ಆದುದೇ ಎಂದು (ಶ್ರುತಿಪ್ರಾಮಾಣ್ಯ ಗುರೂಪದೇಶ ಯುಕ್ತಿ ಸ್ವಾನುಭವಗಳಿಂದ) ದೃಢವಾದ ನಿಶ್ಚಯ ಜ್ಞಾನವನ್ನು ಪಡೆದು ಪುತ್ರಮಿತ್ರಧನಾದಿಗಳ ನಾಶಕಾಲದಲ್ಲಿ ನಿನಗೆ ಶೋಕವೂ ರಾಗವೂ ಉಂಟಾಗದಿರಲಿ. (ಹೀಗೆ ಪ್ರಪಂಚವು ಅಸತ್ ಎಂಬ ವಾದವು ಶೋಕರಾಗಾದಿಗಳನ್ನು ನಿರಸನ (ಪರಿಹಾರ) ಮಾಡುವುದರ ಮೂಲಕ ಆತ್ಮೈಕತ್ವ ದರ್ಶನಕ್ಕೆ ಸಹಾಯಕವಾಗಿ ಉಪಯುಕ್ತವಾಗುವುದು ಎಂದು ಭಾವ.) ಮತ್ತು ವಿವೇಕದಿಂದ ಶೋಧಿಸಲ್ಪಟ್ಟ ಚಿನ್ಮಾತ್ರೈಕರಸನಾದ ಪ್ರತ್ಯಗಾತ್ಮನಿಂದ ಸಹಿತವಾದ ಈ ಸಕಲವೂ ಸತ್ತೇ (ಸತ್ಯವೇ) ಎಂದು ನಿಶ್ಚಯಿಸಿಕೊಂಡು ಸ್ವಾತ್ಮನಿಷ್ಠನಾದ ನಿನಗೆ ಪುನಃ ಸಾಂಸಾರಿಕ ಜನನ ಮರಣಾದಿ ವಿಷಾದವು ಎಂದಿಗೂ ಪ್ರಾಪ್ತವಾಗದಿರಲಿ. (ಎಂದು ಶ್ರೀ ವಸಿಷ್ಠನ ಶ್ರೀರಾಮನಿಗೆ ಉಪದೇಶ ಮಾಡಿದನು.)

೫೧. ಶ್ರೀ ವಾಲ್ಮೀಕಿ ಋಷಿಯು (ಭರದ್ವಾಜನಿಗೆ) ಹೇಳಿದನು. "ಭರದ್ವಾಜ, ಹೀಗೆ ಶ್ರೀ ವಸಿಷ್ಠ ಮುನೀಂದ್ರರು ಹೇಳುತ್ತಿರುವಾಗ ಹಗಲು ಕಳೆದುಹೋಯಿತು.

ಬಳಿಕ, ಸಾಯಂಕಾಲಿಕಗಳಾದ ಕರ್ಮಗಳು ನೆರವೇರುವುದಕ್ಕಾಗಿ ಸೂರ್ಯನು ಅಸ್ತಂಗತನಾಡನು. ಅಲ್ಲಿ ನೆರೆದಿದ್ದ ಸಭೆಯೆಲ್ಲವೂ ಶ್ರೀ ವಸಿಷ್ಠರಿಗೆ ಪ್ರಣಾಮಮಾಡಿ ಕರ್ಮಾನುಷ್ಠಾನಕ್ಕಾಗಿ ಹೊರಟುಹೋಯಿತು. ರಾತ್ರಿಯು ಮುಗಿದು ಹೋದ ಮೇಲೆ ಸೂರ್ಯ ಕಿರಣಗಳ ಸಂಗಡಲೇ ಪುನಃ ಶ್ರೀ ವಸಿಷ್ಠರ ಸನ್ನಿಧಿಗೆ ತತ್ತ್ವ ಶ್ರವಣಕ್ಕಾಗಿ ಬಂದು ಸೇರಿತು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಯಥಾಭೂತಾರ್ಥಯೋಗೋಪದೇಶ" ಎಂಬ
ನಾಲ್ವತ್ತೈದನೆಯ ಸರ್ಗವು

ಷಟ್‌ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:--

ರಮ್ಯೇ ಧನೇಷು ದಾರಾದೌ ಶೋಕಸ್ಯಾವಸರೋ ಹಿ ಕಃ ।
ಇಂದ್ರಜಾಲೇಕ್ಷಣಾದೃಷ್ಟೇ ನಷ್ಟೇ ಕಾ ಪರಿದೇವನಾ ॥ ೧ ॥

ಗಂಧರ್ವನಗರಸ್ಯಾರ್ಥೇ ದೂಷಿತೇ ಭೂಷಿತೇ ತಥಾ ।
ಅವಿದ್ಯಾಂಶೇ ಸುತಾದೌ ವಾ ಕಃ ಕ್ರಮಃ ಸುಖದುಃಖಯೋಃ ॥ ೨ ॥

ನಲವತ್ತಾರನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು. ಅಯ್ಯ ರಾಮಚಂದ್ರ, ಆಪಾತ ರಮಣೀಯಗಳಾದ ಧನಧಾನ್ಯ ಮುಂತಾದವುಗಳಾಗಲಿ ಅಥವಾ ಪತ್ನೀಪುತ್ರಾದಿಗಳಾಗಲೀ ನಷ್ಟವಾದರೆ ಶೋಕಕ್ಕೆ ಅವಕಾಶವೆಲ್ಲಿಯದು ? ಇಂದ್ರಜಾಲಿಕನ ಮಾಯಾದೃಷ್ಟಿಗೆ ಗೋಚರಿಸಿದ (ಮಾಯಾ ವಿಜೃಂಭಿತವಾದ) ವಸ್ತುವು ನಷ್ಟವಾದ ಮಾತ್ರದಿಂದಲೇ ಅದನ್ನು ಕುರಿತು ಅಳುವುದೇತಕ್ಕೆ ?

(ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ । ಅವ್ಯಕ್ತನಿಧನಾನ್ಯೇವ ತತ್ರ ಕಾ ಪರಿದೇವನಾ ಗೀತಾ॥ ಅಧ್ಯಾಯ ೨-೨೮. ಅವ್ಯಕ್ತಂ= ಅದರ್ಶನಂ ಉತ್ಪತ್ತಿಗಿಂತಲೂ ಮುಂಚೆಯೂ ಮರಣಾನಂತರವೂ ಪುತ್ರಮಿತ್ರಾದಿಗಳು ಅದರ್ಶನವನ್ನು ಹೊಂದುವುವು. ಉತ್ಪನ್ನ್ಯನಂತರ ಮರಣಕ್ಕಿಂತ ಮುಂಚೆ ಮಧ್ಯದಲ್ಲಿ ದೃಶ್ಯ (ವ್ಯಕ್ತ)ವಾಗಿರುವುವು. ಇವುಗಳ ವಿಚಾರದಲ್ಲಿ ಅಳುವುದೇನು ? ಮತ್ತು ಅದರ್ಶನಾದಾಪತಿತಃ ಪುನಶ್ಚಾದರ್ಶನಂಗತಃ ಮಹಾಭಾರತ.

೨. ಗಂಧರ್ವನಗರದಲ್ಲಿರುವ ವಸ್ತುವೂ ಮತ್ತು ಹಾಗೆಯೇ ಅವಿದ್ಯೆಯ (ಮಾಯೆಯ) ಒಂದು ಅಂಶವಾದ ಸುತಾದಿಗಳೂ ದೋಷಗಳಿಂದ ದೂಷಿತವಾಗಿದ್ದರೂ ಅಥವಾ ಗುಣಗಳಿಂದ ಭೂಷಿತವಾಗಿದ್ದರೂ ಅವರ ವಿಷಯದಲ್ಲಿ ನಮ್ಮ ಸುಖದುಃಖಗಳಿಗೆ ಪ್ರಸರವು ಯಾವುದು ಇದೆ ?

ರವ್ಯೇ ಧನೇಽಥ ದಾರಾದೌ ಹರ್ಷಸ್ಯಾವಸರೋ ಹಿ ಕಃ|
ವೃದ್ಧಾಯಾಂ ಮೃಗತೃಷ್ಣಾಯಾಂ ಕಿಮಾನಂದೋ ಜಲಾರ್ಥಿನಾಂ || ३ ||

ಧನದಾರೇಷು ವೃದ್ಧೇಷು ದುಃಖಂ ಯುಕ್ತಂ ನ ತುಷ್ಟಯಃ |
ವೃದ್ಧಾಯಾಂ ಮೋಹಮಾಯಾಯಾಂ ಕಃ ಸಮಾಶ್ವಾಸವಾನಿಹ || ४ ||

ಯೈರೇವ ಜಾಯತೇ ರಾಗೋ ಮೂರ್ಖಸ್ಯಾಧಿಕತಾಗತೈಃ |
ತೈರೇವ ಭೋಗೈಃ ಪ್ರಾಜ್ಞಸ್ಯ ವಿರಾಗ ಉಪಜಾಯತೇ || ೫ ||

---

೩. ಮರುಮರೀಚಿಕೆಯು ಅಭಿವೃದ್ಧಿ ಹೊಂದಿದರೂ ಕೂಡ ಅದರಿಂದ ಜಲಾರ್ಥಿಗಳಿಗೆ ಸ್ವಲ್ಪವಾದರೂ ಆನಂದವುಂಟಾಗುವುದೇನು ? ಇದರಂತೆಯೇ ಆಪಾತರಮಣೀಯಗಳಾದ ಧನಧಾನ್ಯ ಗೃಹಕ್ಷೇತ್ರಾದಿಗಳೂ ಪತ್ನೀಪುತ್ರಾದಿಗಳೂ ವೃದ್ಧಿಹೊಂದಿದರೂ ಹರ್ಷಕ್ಕೆ ಅವಕಾಶವೆಲ್ಲಿರುವುದು ?

೪. ಧನ, ಧಾನ್ಯ, ಪತ್ನೀ ಮುಂತಾದವುಗಳು ಅಭಿವೃದ್ಧಿ ಹೊಂದಿದ ಹಾಗೆಲ್ಲ ಹೆಚ್ಚು ಹೆಚ್ಚಾಗಿ ದುಃಖಪಡಬೇಕಾದುದು ಯುಕ್ತವಾಗಿ ಕಾಣುವುದು. ಹರ್ಷಿಸುವುದು ಎಂದಿಗೂ ಯುಕ್ತವಲ್ಲ. ಆದರೂ ಮೋಹಪ್ರದಾಯಕವಾದ ಮಾಯೆಯು ಅಭಿವೃದ್ಧಿ ಹೊಂದಲಾಗಿ ಇದರಲ್ಲಿ ಪ್ರಶಾಂತಚಿತ್ತನಾಗಿ ಸಮಾಧಾನದಿಂದಿರುವವನು ಯಾವನು ಇರುವನು ?

[ಧನದಾರಾದಿಗಳು ವೃದ್ಧಿಹೊಂದಿದಂತೆಲ್ಲ ಸಂಸಾರವೆಂಬ ರೋಗವೂ ವೃದ್ಧಿ ಹೊಂದುವದೆಂಬ ಭಾವನೆಯಿಂದ ನ್ಯಾಯವಾಗಿ ಎಲ್ಲರೂ ದುಃಖಪಡಬೇಕಾದುದೇ ಯುಕ್ತ.]

೫. ಯಾವ ಭೋಗಗಳು ಅಭಿವೃದ್ಧಿಗೆ ಬಂದಹಾಗೆಲ್ಲ ಮೂರ್ಖನಿಗೆ ಅವುಗಳಲ್ಲಿ ರಾಗವು [ಪ್ರೀತಿಯು] ಉದಯಿಸಿ ದಿನದಿನಕ್ಕೂ ಹೆಚ್ಚುತ್ತ ಬರುವುದೋ ಅದೇ ಭೋಗಗಳಿಂದಲೇ ಪ್ರಾಜ್ಞನಿಗೆ ವೈರಾಗ್ಯವು ಉದ್ಭವಿಸುವುದು.

[ಯೇ ಹಿ ಸಂಸ್ಪರ್ಶಜಾ ಭೋಗಾಃ ದುಃಖಯೋನಯ ಏವತೇ | ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ|| ಗೀತಾ ೫-೨೧.]

ನಷ್ಟೇ ಧನೇಽಥ ದಾರಾದೌ ಹರ್ಷಸ್ಯಾವಸರೋ ಹಿ ಕಃ ।
ಪಾರಾವಲೋಕಿನಸ್ತ್ವೇತೈರ್ವಿರಾಗಂ ಯಾಂತಿ ಸಾಧವಃ ॥ ೬ ॥

ಅತೋ ರಾಘವ ತತ್ತ್ವಜ್ಞೋ ವ್ಯವಹಾರೇಷು ಸಂಸೃತೇಃ ।
ನಷ್ಟಂ ನಷ್ಟಮುಪೇಕ್ಷಸ್ವ ಪ್ರಾಪ್ತಂ ಪ್ರಾಪ್ತಮುಪಾಹರ ॥ ೭ ॥

ಅನಾಗತಾನಾಂ ಭೋಗಾನಾಮವಾಂಛನಮಕೃತ್ರಿಮಂ ।
ಆಗತಾನಾಂ ಚ ಸಂಭೋಗ ಇತಿ ಪಂಡಿತಲಕ್ಷಣಂ ॥ ೮ ॥

---

೬. ಅಥವಾ ನಶ್ವರಸ್ವಭಾವಗಳಾಗಿ ಕ್ಷಣಭಂಗುರಗಳಾದ ಧನ ಪತ್ನೀ ಪುತ್ರಾದಿಗಳ ವಿಷಯದಲ್ಲಿ ಮನುಷ್ಯನು ಸಂತೋಷಪಡುವುದಕ್ಕೆ ಅವಕಾಶವಾವುದಿರುವುದು? ಈ ಧನದಾರಾದಿಗಳೆಲ್ಲವೂ ನಶ್ವರವೆಂದೂ ನರಕಹೇತುವೆಂದೂ ಉತ್ತರತ್ರ ಕಟುಫಲಪ್ರದಗಳೆಂದೂ ಚೆನ್ನಾಗಿ ಮನಗಂಡಿರುವ ಸಾಧುಗಳಾದರೋ ಇವುಗಳಿಂದ ವಿರಕ್ತಿಯನ್ನು ಪಡೆಯುವರು.

[ನಷ್ಟೇ= ನಶ್ವರಸ್ವಭಾವವುಳ್ಳ; ಪಾರಾವಲೋಕಿನಃ= ನಶ್ವರತ್ವ, ನರಕಹೇತುತ್ವ ಇವೇ ಮೊದಲಾದ ಉದರ್ಕಕಟುಕತ್ವವನ್ನು ಕಂಡಿರುವರು ಎಂದು ತಾತ್ಪರ್ಯ ಪ್ರಕಾಶ ಟೀಕೆಯಲ್ಲಿ ಹೇಳಿದೆ.]

೭. ಈ ಕಾರಣದಿಂದ ಅಯ್ಯ ರಾಘವ, ಸಂಸಾರದ ತತ್ತ್ವವನ್ನು ಚೆನ್ನಾಗಿ ಅರಿತಿರುವ ನೀನು ಪ್ರಪಂಚವ್ಯವಹಾರಗಳಲ್ಲಿ ಯಾವ ಯಾವುದು ನಷ್ಟವಾಗುವುದೋ ಅದದನ್ನು ಉಪೇಕ್ಷಿಸುವವನಾಗು. ಯಾದೃಚ್ಛಿಕವಾಗಿ ಯಾವ ಯಾವುದು ಪ್ರಾಪ್ತವಾಗುವುದೋ ಅದದನ್ನು ನಿರ್ಲಿಪ್ತನಾಗಿಯೂ ಅಭಿಮಾನರಹಿತನಾಗಿಯೂ ಅನುಭವಿಸುತ್ತಿರುವವನಾಗು.

೮. ಅಪ್ರಾಪ್ತವಾದ ಭೋಗಗಳಿಗಾಗಿ ಮರುಗದೆ ಮನಃಪೂರ್ವಕವಾಗಿ [ಅಕೃತ್ರಿಮವಾಗಿ= ಅಂದರೆ ಗೀತೆಯಲ್ಲಿ ಉಪದಿಷ್ಟವಾಗಿರುವಂತೆ ಕರ್ಮೇಂದ್ರಿಯಗಳನ್ನು ಸಂಯಮನಮಾಡಿ ಮನಸ್ಸಿನಲ್ಲಿ ಇಂದ್ರಿಯಾರ್ಥಗಳ ಸ್ಮರಣೆಮಾಡುತ್ತಿರುವ ಮಿಥ್ಯಾಚಾರನಾಗದೆ] ಅಪೇಕ್ಷಿಸದೆ ಇರುವಿಕೆಯೂ ತಾನಾಗಿಯೇ ಪ್ರಾಪ್ತವಾದ ಭೋಗಗಳನ್ನು ಅನಾಸಕ್ತನಾಗಿ ಅನುಭವಿಸುವಿಕೆಯೂ ಇವೆರಡೂ ಆತ್ಮತತ್ತ್ವಜ್ಞನಾದ ಪಂಡಿತನ ಲಕ್ಷಣವೆನ್ನಿಸುವುವು.

ಸಂಸಾರಸಂಭ್ರಮೇ ಹ್ಯಸ್ಮಿಂ ಶ್ಛನ್ನಾತ್ಮನ್ಯಾತತಾಯಿನಿ ।
ತಥಾ ವಿಹರ ಸಂಬುದ್ಧೋ ಯಥಾ ನಾಯಾಸಿ ಮೂಢತಾಂ ॥ ೯ ॥

ಸಂಸಾರಾಡಂಬರಸ್ಯಾಸ್ಯ ಪ್ರಪಂಚರಹಿತೇ ಕ್ರಮೇ ।
ಸಮ್ಯಕ್ ಜ್ಞಾ ನಾನುಪಶ್ಯಂತಿ ಯೇ ಹತಾಸ್ತೇ ಕುಬುದ್ಧಯಃ ॥ ೧೦ ॥

---

೯. ಕಾಮವೆಂಬ ಆತತಾಯಿಯು [ಶತ್ರುವು] ಪುರುಷರನ್ನು ಸಂಸಾರದಲ್ಲಿ ಚಕ್ರಾಕಾರವಾಗಿ ಸುತ್ತಿಸುತ್ತಿರುವನು. ತಾನು ಪುರುಷರನ್ನು ಕೊಲ್ಲುವ ಇಚ್ಛೆಯಿಂದ ಮರೆಯಾಗಿದ್ದುಕೊಂಡು ಸಮಯವನ್ನು ನಿರೀಕ್ಷಿಸಿಕೊಂಡಿರುವನು. ಇಂತಹ ಕಾಮವೆಂಬ ಶತ್ರುವಿನ ವಿಷಯದಲ್ಲಿ ನೀನು ಬಹಳ ಜಾಗರೂಕನಾಗಿದ್ದುಕೊಂಡು ಮೌಢ್ಯ [ಮೂಢತನ]ಕ್ಕೆ ಒಳಗಾಗದ ರೀತಿಯಲ್ಲಿ ತತ್ತ್ವಜ್ಞಾನಾಭ್ಯಾಸದಲ್ಲಿ ಪ್ರಮತ್ತನಾಗದ ಹಾಗೆ ವಿಹರಿಸಿಕೊಂಡಿರು.

[ಉದ್ಯತಾಸಿಂ ವಿಷಾಗ್ನಿಂಚ ಶಾಪೋದ್ಯತಕರಂತಥಾ । ಆಥರ್ವಣೇನ ಹಂತಾರಂ ಪಿಶುನಂ ರಾಜಸದ್ಮಸು । ಭಾರ್ಯಾತಿಕ್ರಮಿಣಂ ಚೈವ ವಿದ್ಯಾತ್ ಸಪ್ತಾತತಾಯಿನಃ । ಮಹಾಭಾರತ. ಕೊಲ್ಲಲು ಕತ್ತಿಯನ್ನು ಹಿಡಿದೆತ್ತಿರುವವನು, ವಿಷಹಾಕುವವನು. ಬೆಂಕಿಯಿಂದ ಸುಡುವವನು, ಶಾಪಕೊಡಲು ಕೈಯೆತ್ತಿರುವವನು, ಮಾಟ ಮುಂತಾದ ಅಭಿಚಾರಕರ್ಮಗಳಿಂದ ಸಾಯಿಸುವವನು, ಅರಮನೆಗಳಲ್ಲಿ ಸೇರಿಕೊಂಡು ಚಾಡಿ ಹೇಳುವವನೂ ತನ್ನ ಭಾರ್ಯೆಯಲ್ಲಿ ಅತಿಕ್ರಮ ಪ್ರವೇಶ ಮಾಡಿದವನು, ಹೀಗೆ ಆತತಾಯಿಗಳು ಏಳುವಿಧ. ಮತ್ತು ಅಗ್ನಿದೋಗರದ ಶ್ಚೈವ ಶಸ್ತ್ರೋನ್ಮತ್ತೋಧನಾಪಹಃ ಕ್ಷೇತ್ರದಾರಹರಶ್ಚೈತಾನ್ ಷಟ್ ವಿದ್ಯಾದಾತತಾಯಿನಃ ॥ ಎಂದು ಶುಕ್ರ ನೀತಿಯಲ್ಲಿ ಹೇಳಿದೆ.]

೧೦. ಯಾವ ಜನಗಳು ನಿಷ್ಪ್ರಪಂಚವಾದ [ಪ್ರಪಂಚಶೂನ್ಯ] ಅದ್ವಿತೀಯಾತ್ಮರೂಪ ಪರಮಪದದಲ್ಲಿ ಚೆನ್ನಾಗಿ ತಿಳಿವಳಿಕೆ (ಜ್ಞಾನ)ವುಳ್ಳವರಾದರೂ ಕೂಡ ಪ್ರಮಾದವಶದಿಂದ ಒಂದು ವೇಳೆ ಈ ಸಂಸಾರಾಡಂಬರದ ವಂಚನೆಯನ್ನು ಕಾಣದೆ ಹೋಗುವರೋ ಅಂತಹಕುಬುದ್ಧಿಗಳು (ದುಷ್ಟಬುದ್ಧಿಗಳು)ತಮ್ಮ ಪ್ರಮಾದದಿಂದಲೇ ಸರ್ವಥಾ ಹಾಳಾದರೆಂದೇ ತಿಳಿಯಬೇಕು.

ಯಯಾ ಕಯಾಚಿದ್ಯುಕ್ತ್ಯೈವ ದೃಶ್ಯಾದ್ಯಸ್ಯ ಗತಾ ರತಿಃ ।
ಪರಿಮಜ್ಜತಿ ತಸ್ಯಾಸ್ಥಾ ನ ಕ್ವಚಿದ್ವಿಮಲಾ ಮತಿಃ ॥ ೧೧ ॥

ಯಸ್ಯಾಸದಿದಮಿತ್ಯಾಸ್ಥಾ ನಿವೃತ್ತಾ ಸರ್ವವಸ್ತುಷು ।
ಕ್ರೋಡೀಕರೋತಿ ಸರ್ವಜ್ಞಂ ನಾವಿದ್ಯಾ ತಮವಾಸ್ತವೀ ॥ ೧೨ ॥

ಅಹಂ ಜಗಚ್ಚೈಕಮಿದಂ ಸರ್ವಮೇವೇತಿ ಯಸ್ಯ ಧೀಃ ।
ಆಸ್ಥಾನಾಸ್ಥೇ ಪರಿತ್ಯಜ್ಯ ಸಂಸ್ಥಿತಾ ಸ ನ ಮಜ್ಜತಿ ॥ ೧೩ ॥

---

೧೧. ಯಾವುದಾದರೊಂದು ಉಪಾಯದಿಂದ ಯಾವ ಮನುಜನಿಗೆ ದೃಶ್ಯವಾದ ಈ ಸಂಸಾರದಲ್ಲಿ ರಾಗವು (ಆಸಕ್ತಿಯು ಅಭಿಮಾನವು) ನಿವೃತ್ತವಾಗಿರುವುದೋ (ಕಳೆದುಹೋಗಿರುವುದೋ) ಅಂತಹ ಉತ್ತಮ ಮನುಜನ ಪಾಪರಹಿತವಾದ ಬುದ್ಧಿಯು ಪರಮಾರ್ಥವಾದ ಆತ್ಮತತ್ತ್ವದಲ್ಲಿ ಅಭಿನಿವೇಶವುಳ್ಳದ್ದಾಗಿ ಮೋಹ ಸಾಗರದಲ್ಲಿ ಎಂದಿಗೂ ಮುಣುಗುವುದಿಲ್ಲ.

[ವಿಷಯಗಳು ಚಿತ್ತವನ್ನು ಮೋಹಗೊಳಿಸಿ ವಶಪಡಿಸಿಕೊಳ್ಳುವುದು ಎಂದಾಗಲೀ, ಇವುಗಳಿಂದ ದ್ವೈತವಾಸನೆಯು ಬಲಗೊಂಡು ನೆಲೆಸುವುದೆಂದಾಗಲೀ, ಇವುಗಳು ಸ್ವಾತ್ಮಸ್ವರೂಪಜ್ಞಾನದಿಂದ ತಪ್ಪಿಸುವುವೆಂದಾಗಲೀ. ನರಕಾದ್ಯನರ್ಥಗಳಿಗೆ ಹೇತುಗಳೆಂದಾಗಲೀ, ಇವು ಕೇವಲ ಮಿಥ್ಯೆಯೆಂದಾಗಲೀ ಇತ್ಯಾದಿ ನಾನಾ ಯುಕ್ತಿಗಳಿಂದ ಯೋಚಿಸಿದಾಗಲೇ ವಿಷಯಗಳು ದುಷ್ಟಗಳೆಂಬ ಅರಿವು ಉಂಟಾಗಿ ಅವುಗಳ ಮೇಲೆ ರಾಗವು ತಪ್ಪುವುದು. ವೈರಾಗ್ಯವು ಉದಯಿಸುವುದು]

೧೨. ಈ ಸಕಲ ದೃಶ್ಯವೂ (ಪ್ರಪಂಚ) ಅಸತ್ಯವಾದುದೇ ಎಂಬ ನಿಶ್ಚಯದಿಂದ ಯಾವನಿಗೆ ಈ ಪ್ರಾಪಂಚಿಕ ಸಕಲ ಪದಾರ್ಥಗಳಲ್ಲಿಯೂ ಆಸಕ್ತಿಯು ಸುತರಾಂ ಇಲ್ಲದಂತೆ ನಿವೃತ್ತವಾಗಿದೆಯೋ ಅಂತಹ ಸರ್ವಜ್ಞನನ್ನು ಅವಾಸ್ತವವಾದ (ವಸ್ತುತಃ ಶೂನ್ಯವಾದ ಶಶವಿಷಾಣಾದಿಗಳಂತೆ ಅತ್ಯಂತ ಅಸತ್ ಆದ) ಅವಿದ್ಯೆಯು ಎಂದಿಗೂ ಸ್ವಾಧೀನಪಡಿಸಿಕೊಳ್ಳಲಾರದು.

೧೩. ಯಾವನ ಬುದ್ಧಿಯು ಆಸ್ಥೆಯನ್ನೂ ಅನಾವಸ್ಥೆಯನ್ನೂ ಪರಿತ್ಯಾಗ ಮಾಡಿ ಈ ಸಕಲ ಜಗತ್ತೂ ನಾನೂ ಒಂದೇ; ಭೇದವೇ ಇಲ್ಲವು ಎಂದು ಸ್ಥಿರವಾಗಿ ನೆಲೆಸಿರುವುದೋ ಅವನು ಎಂದಿಗೂ ಮೋಹಸಾಗರದಲ್ಲಿ ಬಿದ್ದು ಮುಣುಗುವುದಿಲ್ಲ.

ಶುದ್ಧಂ ಸದಸತೋರ್ಮಧ್ಯಂ ಪದಂ ಬುದ್ಧ್ವಾಽವಲಂಬ್ಯ ಚ ।
ಸಬಾಹ್ಯಾಭ್ಯಂತರಂ ದೃಶ್ಯಂ ಮಾ ಗೃಹಾಣ ವಿಮುಂಚ ಮಾ ॥ ೧೪ ॥

ಅತ್ಯಂತ ವಿರತಃ ಸ್ವಸ್ಥಃ ಸರ್ವವಾಸವಿವರ್ಜಿತಃ ।
ವ್ಯೋಮವತ್ತಿಷ್ಠ ನೀರಾಗೋ ರಾಮ ಕಾರ್ಯಪರೋಽಪಿ ಸನ್ ॥ ೧೫ ॥

ಯಸ್ಯ ನೇಚ್ಛಾ ನ ವಾನಿಚ್ಛಾ ಜ್ಞಸ್ಯ ಕರ್ಮಣಿ ತಿಷ್ಠತಃ ।
ನ ತಸ್ಯ ಲಿಪ್ಯತೇ ಪ್ರಜ್ಞಾ ಪದ್ಮಪತ್ರಮಿವಾಂಬುಭಿಃ ॥ ೧೬ ॥

ದರ್ಶನ ಸ್ಪರ್ಶನಾದೀನಿ ಮಾ ಕರೋತು ಕರೋತು ಚ ।
ತವೇಂದ್ರಿಯಮನೋ ಗೌಣಂ ತ್ವಮನಿಚ್ಛೋ ಭವಾತ್ಮವಾನ್ ॥ ೧೭ ॥

---

೧೪. ಅಯ್ಯ ರಾಮಭದ್ರ, ಸತ್ ಅಸತ್‌ಗಳ ಮಧ್ಯಗತವಾಗಿಯೂ ಅಂದರೆ ವ್ಯಕ್ತ, ಅವ್ಯಕ್ತಗಳಲ್ಲಿ ಅನುಗತವಾಗಿಯೂ ಶುದ್ಧವಾಗಿಯೂ (ಸತ್ತಾಮಾತ್ರ ವಾಗಿಯೂ) ಪ್ರತ್ಯಗಾತ್ಮಸ್ವರೂಪವಾಗಿಯೂ ಇರುವ ಆ ಪರಮಪದವನ್ನೇ ನಿನ್ನ ವಿವೇಕಪೂರ್ಣವಾದ ಬುದ್ಧಿಯಿಂದ ಆಶ್ರಯಿಸಿಕೊಂಡು ಬಾಹ್ಯ ಮತ್ತು ಅಭ್ಯಂತರ ಗಳಿಂದ ಸಹಿತವಾದ ಈ ದೃಶ್ಯವನ್ನು ನೀನು ಗ್ರಹಿಸಲೂ ಬೇಡ; ಬಿಡಲೂ ಬೇಡ; ಕೇವಲ ಔದಾಸೀನ್ಯದಿಂದ ವರ್ತಿಸುತ್ತಿರು.

೧೫. ರಾಮ, ನೀನು ಆಯಾಕಾಲಾನುಗುಣವಾಗಿ ಸಂಪ್ರಾಪ್ತವಾದ ಕರ್ಮಗಳಲ್ಲಿ ನಿರತನಾಗಿದ್ದರೂ ಕೂಡ ಅವುಗಳಲ್ಲಿ ಅತ್ಯಂತ ಆಸಕ್ತಿರಹಿತನಾಗಿಯೂ ಸ್ವಸ್ವರೂಪ ಜ್ಞಾನದಿಂದ ಚ್ಯುತನಾಗದೆ ಪ್ರಶಾಂತನಾಗಿಯೂ ಸಕಲ ವಿಧ ಆಶ್ರಯಗಳಿಂದ ವರ್ಜಿತನಾಗಿಯೂ ವಿರಕ್ತನಾಗಿಯೂ ಆಕಾಶದಂತೆ ನಿರ್ಲಿಪ್ತನಾಗಿರು.

೧೬. ಯಾವ ತತ್ತ್ವಜ್ಞನು ಕರ್ಮಗಳಲ್ಲಿ ನಿರತನಾಗಿದ್ದರೂ ಕೂಡ ಅವನಿಗೆ ಕರ್ಮ ಮತ್ತು ಅದರ ಫಲಗಳಲ್ಲಿ ಇಚ್ಛೆಯಾಗಲೀ ಅನಿಚ್ಛೆಯಾಗಲೀ (ರಾಗ ದ್ವೇಷಗಳು) ಇರುವುದಿಲ್ಲವೋ ಅಂತಹ ಜ್ಞಾನಿಯ ಬುದ್ಧಿಯು ತಾವರೆ ಎಲೆಯು ನೀರಿನ ಮಧ್ಯದಲ್ಲಿಯೇ ಇರುವುದಾದರೂ ನೀರಿನಿಂದ ಲಿಪ್ತವಾಗದಿರುವಂತೆ ಕರ್ಮ ಬಂಧದಿಂದ ಸ್ವಲ್ಪವೂ ಲೇಪವನ್ನು ಹೊಂದದೆಯೇ ಇರುವುದು.

೧೭. ರಾಮ, ಅಸ್ವತಂತ್ರವಾಗಿ ಗೌಣ (ಅಮುಖ್ಯ)ವಾಗಿರುವ ನಿನ್ನ ಮನಸ್ಸು ಸಕಲೇಂದ್ರಿಯಗಳಿಂದ ಒಡಗೂಡಿ ದರ್ಶನ, ಸ್ಪರ್ಶನ (ನೋಡುವಿಕೆ, ಮುಟ್ಟುವಿಕೆ) ಮುಂತಾದ ವ್ಯಾಪಾರಗಳನ್ನು ಮಾಡಲಿ ಅಥವಾ ಬಿಡಲಿ, (ಮಾಡದಿರಲಿ)

ಮಮೇದಮಿತ್ಯಸದ್ಭೂತಮಿಂದ್ರಿಯಾರ್ಥೇ ಭವನ್ಮನಃ ।
ಮಾ ನಿಮಜ್ಜತ್ವಮಗ್ನಃ ಸನ್ಮಾತರೋತು ಕರೋತು ವಾ ॥ ೧೮ ॥

ಯದಾ ತೇ ನೇಂದ್ರಿಯಾರ್ಥಶ್ರೀಃ ಸ್ವದತೇ ಹೃದಿ ರಾಘವ ।
ತದಾ ವಿಜ್ಞಾತವಿಜ್ಞಾನಃ ಸಮುತ್ತೀರ್ಣಭವಾರ್ಣವಃ ॥ ೧೯ ॥

ಆಸ್ವಾದಿತೇಂದ್ರಿಯಾರ್ಥಸ್ಯ ಸತನೋರತನೋರಪಿ ।
ಅನಿಚ್ಛತೋಽಪಿ ಸಂಪನ್ನಾ ಮುಕ್ತಿರರ್ಥವಶಾತ್ತವ ॥ ೨೦ ॥

ಅದೊಂದನ್ನೂ ಗಮನಿಸದೆ ನೀನು ಮಾತ್ರ ಸರ್ವದಾ ಜಿತೇಂದ್ರಿಯನಾಗಿ ಸ್ವಾತ್ಮ ನಿಷ್ಠನಾಗಿದ್ದುಕೊಂಡು ಸರ್ವದಾ ನಿಸ್ಸ್ಪೃಹನಾಗಿರು.

(ಮನಸ್ಸು ಸ್ವಾತಂತ್ರ್ಯದಿಂದ ವರ್ತಿಸುವುದನ್ನು ಬಿಟ್ಟು ಬಾಧಿತಗಳಾದ ಅರ್ಥಗಳನ್ನು ಅನುಸರಿಸಿ ವ್ಯವಹರಿಸುವ ಮಾತ್ರದಿಂದಲೇ ಇಲ್ಲಿ ಅಮುಖ್ಯ (ಗೌಣ)ವೆಂದು ಹೇಳಿದೆ.)

೧೮. ನಿನ್ನ ಮನಸ್ಸು ಅಸತ್ಯಭೂತವಾಗಿ "ಇದು ನನ್ನದು" ಎಂಬ ಅಭಿಮಾನದಿಂದ ಪೂರಿತವಾಗಿ ಇಂದ್ರಿಯಾರ್ಥಗಳಲ್ಲಿ (ಶಬ್ದಾದಿ ವಿಷಯಗಳಲ್ಲಿ) ಸ್ವಲ್ಪವೂ ಆಸ್ಥೆಯಿಲ್ಲದೆ ಇರಲಿ (ಮುಳುಗದೆ ಇರಲಿ.) ಹೀಗೆ ಮಗ್ನವಾಗದೆ ಪ್ರಾಪಂಚಿಕ ಸಕಲ ವ್ಯವಹಾರಗಳನ್ನೂ ನಡೆಯಿಸುತ್ತಲಾದರೂ ಇರಲಿ ಅಥವಾ ಬಿಟ್ಟುಬಿಟ್ಟಾದರೂ ಇರಲಿ. ಹೇಗಿದ್ದರೂ ಯಾವ ಹಾನಿಯೂ ಇಲ್ಲವು.

೧೯. ರಾಘವ, ಯಾವಾಗ ನಿನ್ನ ಮನಸ್ಸಿಗೆ ಇಂದ್ರಿಯಾರ್ಥಗಳ ಸಂಪತ್ತು ಸ್ವತಏವ ರುಚಿಸದೆ ಹೋಗುವುದೋ ಆಗಲೇ ನೀನು ಆತ್ಮೈಕತ್ವಜ್ಞಾನ ಸಂಪನ್ನನಾಗಿ ಸಂಸಾರಸಾಗರವನ್ನು ದಾಟಿದವನು ಆಗಿಬಿಡುವೆ.

೨೦. ಐಹಲೌಕಿಕಗಳೂ ಪಾರಲೌಕಿಕಗಳೂ ಆದ ಸಕಲ ಇಂದ್ರಿಯಾರ್ಥಗಳೂ (ವಿಷಯಗಳೂ) ಸ್ವಲ್ಪ ಮಾತ್ರವೂ ನಿನಗೆ ರುಚಿಸದೆ ಹೋಗಿಬಿಡಲಾಗಿ [ಇಹಲೋಕದ ಮತ್ತು ಪರಲೋಕದ ಅರ್ಥಫಲಗಳ ಭೋಗದಲ್ಲಿ ವೈರಾಗ್ಯ ವುಂಟಾಗಲಾಗಿ] ನಿನಗೆ ನೀನಾಗಿ ಅಪೇಕ್ಷಿಸದೆ ಹೋದರೂ ನೀನು ಈ ದೇಹವನ್ನು ಧರಿಸಿಕೊಂಡು ಜೀವಿಸಿರುವಾಗಲೂ ಮತ್ತು ದೇಹಪಾತಾನಂತರವೂ ಮುಕ್ತಿಯು ಅನಾಯಾಸವಾಗಿ ಸ್ವತಃ ಸಿದ್ಧವೇ ಆಗಿರುವುದು.

ಉಚ್ಚೈಃಪಪದಾಯ ಪರಯಾ ಪ್ರಜ್ಞಯಾ ವಾಸನಾಗಣಾತ್ ।
ಪುಷ್ಪಾದ್ಗಂಧಮಿವೋದಾರಚೇತೋ ರಾಮ ಪೃಥಕ್ಕುರು ॥ ೨೧ ॥

ಸಂಸಾರಾಂಬುನಿಧಾವಸ್ಮಿನ್ವಾಸನಾಂಬುಪರಿಪ್ಲುತೇ ।
ಯೇ ಪ್ರಜ್ಞಾ ನಾವಮಾರೂಢಾಸ್ತೇ ತೀರ್ಣಾ ಬ್ರುಡಿತಾಃ ಪರೇ ॥ ೨೨ ॥

(ಇಲ್ಲಿ ನೀನು ಜೀವಿಸಿರುವಾಗಲೂ ಜೀವನ್ಮುಕ್ತ [ಮುಕ್ತ]ನೇ ಆಗಿದ್ದು ಕೊಂಡು ಸ್ವಾತ್ಮಾರಾಮನಾಗಿರುತ್ತಾ ಈ ದೇಹಪಾತಾನಂತರವೂ ಪುನರಾವೃತ್ತಿ ರಹಿತನಾಗಿ ಪೂರ್ವದಂತೆ ಸದಾ ಮುಕ್ತನಾಗಿಯೇ ಇರುವೆ ಎಂದರ್ಥ. ಆದರೆ ಮೂಲ ಶ್ಲೋಕದಲ್ಲಿ "ಸತನೋರತನೋರಪಿ" ಎಂದು ಹೇಳಿರುವುದಕ್ಕೆ ಕೆಲವರು ಸದೇಹ ಮುಕ್ತಿ ವಿದೇಹ ಮುಕ್ತಿ ಎಂದು ಮುಕ್ತಿಯಲ್ಲಿ ತರತಮ ಭಾವವನ್ನೂ ದ್ವೈವಿಧ್ಯವನ್ನೂ ಕಲ್ಪಿಸಿ ಹೇಳುವರು. ಇದು ಅಶಾಸ್ತ್ರೀಯವು. ಅಪಸಿದ್ಧಾಂತವು. ಮುಕ್ತಿಯಲ್ಲಿ ವೈಷಮ್ಯವಿಲ್ಲ. ಬಂಧವು ಅವಿದ್ಯಾಕಲ್ಪಿತ, ಮುಕ್ತಿಯು ಸ್ವಾಭಾವಿಕ ಬಂಧ ಹೇತುವಾದ ಅಜ್ಞಾನವು ತತ್ತ್ವಜ್ಞಾನದಿಂದ ಬಾಧಿತವಾದೊಡನೆ ಮುಕ್ತಿಯು ಸ್ವತಃ ಸಿದ್ಧವಾಗಿಬಿಡುವುದು. ಮುಕ್ತಿಯು ದೇಹಪಾತವನ್ನು ನಿರೀಕ್ಷಿಸುವುದಿಲ್ಲ. ಆಗಲೇ ಜೀವನ್ಮುಕ್ತನಾಗಿದ್ದುಕೊಂಡು ಸ್ವಾತ್ಮಾರಾಮನಾಗಿರುವನು. ಪ್ರಾರಬ್ಧ ಕರ್ಮವು ಕ್ಷಯಿಸಿದ ಮೇಲೆ ಆ ದೇಹವೂ ಬಿದ್ದುಹೋಗುವುದು. ಆದರೆ ಅಜ್ಞನು ಪುನಃ ದೇಹಾಂತರವನ್ನು ಪಡೆದು ಪುನಃ ಸಂಸಾರಕ್ಕೆ ಹಿಂದಿರುಗುವಂತೆ ಮುಕ್ತನು ಪುನಃ ದೇಹಾಂತರವನ್ನು ಪಡೆಯುವುದಿಲ್ಲ. ಎಂದಿಷ್ಟು ಮಾತ್ರ ಹೇಳುವುದರಲ್ಲಿಯೇ ತಾತ್ಪರ್ಯವೆಂದು ಗ್ರಹಿಸಬೇಕು.)

೨೧. ಅಯ್ಯ ರಾಮ, ನೀನು ಸರ್ವೋತ್ತಮವಾದ ಪ್ರಜ್ಞೆಯನ್ನು ಆಶ್ರಯಿಸಿ ಅದರ ಬಲದಿಂದ ಹೂವಿನ ದೆಸೆಯಿಂದ ಪರಿಮಳವನ್ನು ಹೇಗೋ ಹಾಗೆ ವಿವೇಕ ವೈರಾಗ್ಯಗಳಿಂದ ಉತ್ಕೃಷ್ಟವಾದ ನಿನ್ನ ಮನಸ್ಸನ್ನು ವಿಷಯ ವಾಸನೆಗಳ ಸಮುದಾಯದ ದೆಸೆಯಿಂದ ಬೇರೆ ಪ್ರತ್ಯೇಕಪಡಿಸುವವನಾಗು. ಹೀಗೆ ಮಾಡುವು ದರಿಂದ ನಿನಗೆ ಪರಮಪದವು ಬಹು ಸುಲಭವಾಗಿ ಬಿಡುವುದು.

೨೨. ನಾನಾ ವಿಷಯವಾಸನೆಗಳೆಂಬ ಜಲೌಘಗಳಿಂದ ಪರಿಪೂರ್ಣವಾಗಿ ಅಪಾರವಾಗಿರುವ ಈ ಸಂಸಾರ ಸಾಗರದಲ್ಲಿ ಯಾವ ಧೀರರು ಪ್ರಜ್ಞೆಯೆಂಬ ದೃಢವಾದ ನಾವೆಯನ್ನು ಹತ್ತಿ ಕುಳಿತು ಸಂಚರಿಸುವರೋ ಅವರು ಮಾತ್ರ ಈ ಸಂಸಾರಸಾಗರವನ್ನು ದಾಟಿ ಸುರಕ್ಷಿತರಾಗಿರುವರು. ಪ್ರಜ್ಞಾನಾವೆಯನ್ನು

ಕ್ಷುರಧಾರಾಪ್ರಮಿತಯಾ ಧಿಯಾ ಪರಮಧೀರಯಾ ।
ಪ್ರವಿಚಾರ್ಯಾತ್ಮನಸ್ತತ್ತ್ವಂ ತತಃ ಸ್ವಪದಮಾವಿಶ ॥ ೪೩ ॥

ಯಥಾ ತತ್ತ್ವವಿದಃ ಪ್ರಾಜ್ಞಾ ಜ್ಞಾನಬೃಂಹಿತಚೇತಸಃ ।
ವಿಹರಂತಿ ತಥಾ ರಾಮ ವಿಹರ್ತವ್ಯಂ ನ ಮೂಢವತ್ ॥ ೪೪ ॥

ಜೀವನ್ಮುಕ್ತಾ ಮಹಾತ್ಮಾನೋ ನಿತ್ಯತೃಪ್ತಾ ಮಹಾಧಿಯಃ ।
ಆಚಾರೈರನುಗಂತವ್ಯಾ ನ ಭೋಗಕೃಪಣಾಃ ಶಠಾಃ ॥ ೪೫ ॥

ನ ತ್ಯಜಂತಿ ನ ವಾಂಛಂತಿ ವ್ಯವಹಾರಂ ಜಗದ್ಗತಂ ।
ಸರ್ವಮೇವಾನುವರ್ತಂತೇ ಪಾರಾವಾರವಿದೋ ಜನಾಃ ॥ ೪೬ ॥

ಸಂಪಾದಿಸದೆ ಇರುವ ಇತರರು [ಅವಿವೇಕಿಗಳು] ಸಂಸಾರಸಾಗರದಲ್ಲಿಯೇ ಮಗ್ನರಾಗಿ ನಾಶಹೊಂದುವರು.

೪೩. ಅದುಕಾರಣ ವಿವೇಕ ವೈರಾಗ್ಯಾದಿಗಳೆಂಬ ಸಾಣೆಕಲ್ಲಿನ ಸಹಾಯದಿಂದ ಕತ್ತಿಯು ಅಲಗಿನಂತೆ ಅತಿ ತೀಕ್ಷ್ಣವಾಗಿ [ಹರಿತವಾಗಿ] ಮಾಡಲ್ಪಟ್ಟ ಶೀತೋಷ್ಣ, ಸುಖದುಃಖಾದಿ ದ್ವಂದ್ವಗಳನ್ನು ಸಹಿಸುವುದರಲ್ಲಿ ಧೈರ್ಯವನ್ನು ಪಡೆದಿರುವ ನಿನ್ನ ಬುದ್ಧಿಯಿಂದ ಆತ್ಮತತ್ತ್ವವನ್ನು ಚೆನ್ನಾಗಿ ವಿಚಾರಮಾಡಿ ದೃಢನಿಶ್ಚಯ ಜ್ಞಾನವನ್ನು ಹೊಂದಿ ಅದರಿಂದ ಪರಮಪದವನ್ನು ಪ್ರವೇಶಿಸುವವನಾಗು.

೪೪. ರಾಮ, ಆತ್ಮತತ್ತ್ವಜ್ಞಾನದಿಂದ ಪೂರ್ಣವಾಗಿ ಉದಾರವಾದ ಚಿತ್ತವುಳ್ಳವರೂ ತತ್ತ್ವಜ್ಞಾನಸಂಪನ್ನರೂ ಆದ ಪ್ರಾಜ್ಞರು ಯಾವ ಬಗೆಯಲ್ಲಿ ಪ್ರಾಪಂಚಿಕ ವ್ಯವಹಾರಗಳಲ್ಲಿ ವಿಹರಿಸಿಕೊಂಡಿರುವರೋ ಆ ಬಗೆಯಲ್ಲಿಯೇ ನೀನೂ ವಿಹರಿಸಿಕೊಂಡಿರಬೇಕೇ ಹೊರತು ಕೇವಲ ಪ್ರಾಕೃತ ಜನರಂತೆ (ಮೂಢ) ವರ್ತಿಸಕೂಡದು.

೪೫. ಜೀವನ್ಮುಕ್ತರಾಗಿಯೂ ನಿತ್ಯತೃಪ್ತರಾಗಿಯೂ ಮಹಾಮತಿಗಳಾಗಿಯೂ ಇರುವ ಮಹಾತ್ಮರ ಆಚರಣೆಯನ್ನು ಸರ್ವದಾ ನೀನು ಅನುಸರಿಸಬೇಕೇ ಹೊರತು ಭೋಗಾಭಿಲಾಷೆಯಿಂದ ಕೇವಲ ಕೃಪಣರಾಗಿ ತಮ್ಮನ್ನೂ ಇತರರನ್ನೂ ವಂಚಿಸತಕ್ಕ (ಶಠ) ದುರಾತ್ಮರ ಆಚರಣೆಯನ್ನು ಸರ್ವಥಾ ಎಂದಿಗೂ ಅನುಸರಿಸಲೇ ಕೂಡದು.

೪೬. ಬ್ರಹ್ಮತತ್ತ್ವವನ್ನೂ ಅಂತೆಯೇ ಜಗತ್ತಿನ ತತ್ತ್ವವನ್ನೂ ನಿಷ್ಕರ್ಷೆಯಾಗಿ

ಪ್ರಭಾವಸ್ಯಾಭಿಮಾನಸ್ಯ ಗುಣಾನಾಂ ಯಶಸಃ ಶ್ರಿಯಃ ।
ನ ಕ್ವಚಿತ್ಕೃಪಣಾ ಲೋಕೇ ಮಹಾಂತಸ್ತತ್ತ್ವದರ್ಶಿನಃ ॥ ೨೭ ॥

ಸುಶೂನ್ಯೇಽಪಿ ನ ಖಿದ್ಯಂತೇ ದೇವೋದ್ಯಾನೇ ನಸಂಗಿನಃ ।
ನಿಯತಿಂ ಚ ನ ಮುಂಚಂತಿ ಮಹಾಂತೋ ಭಾಸ್ಕರಾ ಇವ ॥ ೨೮ ॥

ವಿಗತೇಚ್ಛಾ ಯಥಾಪ್ರಾಪ್ತವ್ಯವಹಾರಾನುವರ್ತಿನಃ !
ವಿಚರಂತಿ ಸಮುನ್ನದ್ಧಾಃ ಸ್ವಸ್ಥಾ ದೇಹರಥೇ ಸ್ಥಿತಾ ॥ ೨೯ ॥

ತಿಳಿದಿರತಕ್ಕ ಜ್ಞಾನಿಗಳು ಪ್ರಾಪಂಚಿಕವಾದ ಸಕಲ ವ್ಯವಹಾರವನ್ನೂ, ಅವವು ಬಂದ ಹಾಗೆ, ಅನುಸರಿಸಿಕೊಂಡು ಬರುತ್ತಿರುವರೇ ಹೊರತು ಅದನ್ನು ಬಿಡುವುದೂ ಇಲ್ಲ. ಅಪೇಕ್ಷಿಸುವುದೂ ಇಲ್ಲ.

(ಪಾರಂ =ಬ್ರಹ್ಮತತ್ತ್ವ ಅಪಾರಂ= ಜಗತ್‌ತತ್ತ್ವ.)

೨೭. ಪ್ರಪಂಚದಲ್ಲಿ ತತ್ತ್ವವೇತ್ತೃಗಳಾದ ಮಹಾತ್ಮರು ಪ್ರಭಾವದ, (ವಿದ್ಯೆ, ತಪಸ್ಸು, ಪರಾಕ್ರಮ ಇತ್ಯಾದಿಗಳ ಉತ್ಕರ್ಷದ) ಅಭಿಮಾನದ, (ಚಿತ್ತ ಸಮುನ್ನತಿ) ಸಾಮರ್ಥ್ಯಕುಲಶೀಲಾದಿ ಗುಣಗಳ, ಕೀರ್ತಿಯ ಮತ್ತು ಸಂಪತ್ತುಗಳ ಇತ್ಯಾದಿ ಯಾವುದೊಂದರ ವಿಷಯದಲ್ಲಿಯೂ ಎಂದಿಗೂ ದೈನ್ಯವುಳ್ಳವರಾಗಿರುವುದಿಲ್ಲ.

(ಏಕೆಂದರೆ ಇವುಗಳೆಲ್ಲವೂ ಕೇವಲ ಮಿಥ್ಯೆಯೆಂದೂ ಪುರುಷಾರ್ಥ ವಿರೋಧಿಗಳೆಂದೂ ಅವರು ಮನಗಂಡಿರುವರು.)

೨೮. ಮಹಾತ್ಮರು ಸೂರ್ಯ ಸದೃಶರಾಗಿ ಸರ್ವನಾಶದಲ್ಲಿಯೂ ಕೂಡ ಖೇದ ಪಡುವುದಿಲ್ಲ. ಸರ್ವ ಕಾಮಸಮೃದ್ಧವಾದ ನಂದನಾದಿ ದೇವಲೋಕದ ಉಪವನಗಳಲ್ಲಿಯೂ ಆಸಕ್ತರಾಗಿರುವುದಿಲ್ಲ.. ತಮಗೆ ಉಚಿತವಾದ ಶಾಸ್ತ್ರಮರ್ಯಾದೆಯನ್ನೂ ಮೀರಿ ನಡೆಯುವುದಿಲ್ಲ.

(ಸೂರ್ಯನ ಪರವಾಗಿ ಸುಶೂನ್ಯೇ= ಆಕಾಶದಲ್ಲಿ ಖೇದಪಡುವುದಿಲ್ಲ. ನಿಯತಿಂ= ತನ್ನ ಮಾರ್ಗದ ಮರ್ಯಾದೆಯನ್ನು ಅತಿಕ್ರಮಿಸುವುದಿಲ್ಲ ಎಂದರ್ಥವಾಗುವುದು.)

೨೯. ವಿಜ್ಞಾನಾದಿ ಸಾಧನ ಸಂಪನ್ನರಾದ ಮಹಾತ್ಮರು ತಮ್ಮ ದೇಹಗಳೆಂಬ ರಥಗಳಲ್ಲಿ ಹತ್ತಿ ಕುಳಿತುಕೊಂಡು ಸಕಲ ಆಶೆಗಳಿಂದಲೂ ವಿನಿರ್ಮುಕ್ತರಾಗಿ

ತ್ವಮಪಿ ಪ್ರಾಪ್ತವಾನ್ ರಾಮ ವಿವೇಕಮಿಮಮಾತತಂ ।
ಪ್ರಜ್ಞಾಬಲೇನ ಚಾನೇನ ಜ್ಞಾನೇ ಸ್ವಸ್ಥೋಽಸಿ ಸುಂದರ ॥ ೩೦ ॥

ಸ್ಪಷ್ಟಾಂ ದೃಷ್ಟಿಮವಷ್ಟಭ್ಯ ನಿರ್ಮಾನೋ ಗತಮತ್ಸರಃ ।
ವಿಹರಾಸ್ಮಿನ್ ಭುವಃ ಪೀಠೇ ಪರಾಂ ಸಿದ್ಧಿಮವಾಪ್ಸ್ಯಸಿ ॥ ೩೧ ॥

ಸ್ವಸ್ಥಃ ಸರ್ವೇಹಿತತ್ಯಾಗೀ ದೂರಾಲೋಕನವಾಂಛನಃ ।
ಪರಾಂ ಶೀತಲತಾಮಂತರಾದಾಯ ವಿಹರಾನಘ ॥ ೩೨ ॥

ತಾವಾಗಿಯೇ ಸಂಪ್ರಾಪ್ತವಾದ ಅವಶ್ಯ ಕರ್ತವ್ಯಗಳಾಗಿರುವ ವ್ಯವಹಾರಗಳನ್ನು ನಡೆಯಿಸುತ್ತ ಸ್ವಸ್ಥರಾಗಿ ವಿಹಾರ ಮಾಡಿಕೊಂಡಿರುವರು.

(ಕಠೋಪನಿಷತ್ತಿನ ತೃತೀಯವಲ್ಲಿಯಲ್ಲಿ "ಆತ್ಮಾನಂರಥಿನಂವಿದ್ಧಿ ಶರೀರಂ ರಥಮೇವತು । ಬುದ್ಧಿಂತು ಸಾರಥಿಂವಿದ್ಧಿ ಮನಃಪ್ರಗ್ರಹಮೇವಚ ! ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರಾನ್ । "ಇತ್ಯಾದಿ ಗ್ರಂಥದಿಂದ ರಥರೂಪಕ ಕಲ್ಪನೆಯನ್ನು ಮಾಡಿ ವಿಜ್ಞಾನ ಸಾರಥಿರ್ಯಸ್ತು ಮನಃ ಪ್ರಗ್ರಹವಾನ್ ನರಃ । ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂಪದಂ" ॥ ಎಂದು ಉಕ್ತವಾಗಿದೆ.)

೩೦. ಅಯ್ಯ ರಾಮ, ನೀನೂ ಕೂಡ ಈ ಅಪಾರವಾದ ವಿವೇಕವನ್ನು ಪಡೆದವನಾಗಿರುವೆ. ಮತ್ತು ಎಲೈ ಸುಂದರನೇ, ನೀನು ನಿನ್ನ ಈ ಪ್ರಜ್ಞಾಬಲದಿಂದ ತತ್ತ್ವಜ್ಞಾನದಲ್ಲಿ ಸ್ಥಿತಿಯನ್ನು ಪಡೆದು ಸ್ವಸ್ಥನಾಗಿಯೂ ಇರುವೆ.

೩೧. ಹೀಗಿರುವುದರಿಂದ, ಅಯ್ಯ ರಾಮ, ನೀನು ಯುಕ್ತ್ಯನುಭವಸಿದ್ಧವಾಗಿ ಸುಸ್ಪಷ್ಟವಾದ (ಸಂದೇಹಾದಿಗಳಿಲ್ಲದ= ಸುನಿಶ್ಚಿತವಾದ) ಪರಮಾರ್ಥ ದೃಷ್ಟಿಯನ್ನು ಅವಲಂಬಿಸಿ ಅಭಿಮಾನರಹಿತನಾಗಿಯೂ ಮಾತ್ಸರ್ಯಾದಿ ದೋಷಗಳನ್ನು ಬಿಟ್ಟವನಾಗಿಯೂ ಈ ಲೋಕದಲ್ಲಿ (ಭೂತಲ) ನಿರಾತಂಕನಾಗಿ ಸ್ವೇಚ್ಛೆಯಿಂದ ವಿಹರಿಸು. ನೀನು ಹೀಗೆ ಇದ್ದರೆ ಸರ್ವೋತ್ತಮವಾದ ಸಿದ್ಧಿಯನ್ನು (ನಿಶ್ಶ್ರೇಯಸವನ್ನು) ಪಡೆಯುವೆ (ಇದರಲ್ಲಿ ಸಂದೇಹಪಡಬೇಡ.)

೩೨. ಎಲೈ ಅನಘನಾದ ರಾಮ, ನೀನು ಸ್ವಸ್ಥನಾಗಿಯೂ ಎಲ್ಲ ಕಾಮ (ಆಶೆ)ಗಳನ್ನೂ ಪರಿತ್ಯಾಗಮಾಡಿದವನಾಗಿಯೂ ವಿಷಯ ಕೌತುಕದರ್ಶನೇಚ್ಛೆ ವಿಷಯಾನುಭವನೇಚ್ಛೆ ಮುಂತಾದುವುಗಳನ್ನು ದೂರದಲ್ಲಿ ಪರಿಹರಿಸಿಕೊಂಡವ

ಶ್ರೀ ವಾಲ್ಮೀಕಿರುವಾಚ--

ಇತ್ಥಂ ಗಿರಾ ವಿಮಲಯಾ ವಿಮಲಾಶಯಸ್ಯ
ರಾಮೋ ಮುನೇಃ ಸಪದಿ ಮೃಷ್ಟ ಇವಾವಭಾಸೇ ।
ಜ್ಞಾನಾಮೃತೇನ ಮಧುರೇಣ ವಿರಾಜಿತಾಂತಃ
ಪೂರ್ಣಃ ಶಶಾಂಕಇವ ಶೀತಲತಾಂ ಜಗಾಮ ॥ ೩೩ ॥

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಜೀವನ್ಮುಕ್ತಸ್ಥಿತಗುಣವರ್ಣನಂ" ನಾಮ ಷಟ್ಚತ್ವಾರಿಂಶಃ ಸರ್ಗಃ

ನಾಗಿಯೂ ಮನಸ್ಸಿನೊಳಗೆ ಅತ್ಯುತ್ತಮವಾದ (ಪರಮ) ಶಾಂತಿಯನ್ನು ಹೊಂದಿ ಈ ಪ್ರಪಂಚದಲ್ಲಿ ವಿಹರಿಸಿಕೊಂಡಿರು. (ಎಂದು ಶ್ರೀ ವಸಿಷ್ಠರು ರಾಮನಿಗೆ ಉಪದೇಶ ಮಾಡಿದರು.)

೩೩. ಶ್ರೀ ವಾಲ್ಮೀಕಿ ಋಷಿಗಳು (ಭರದ್ವಾಜನೆಂಬ ಶಿಷ್ಯನಿಗೆ) ಹೇಳಿದನು. ಎಲೈ ಭರದ್ವಾಜನೇ, ನಿರ್ಮಲಾಂತಃಕರಣರಾದ ಶ್ರೀ ವಸಿಷ್ಠ ಮುನೀಂದ್ರರ ಪೂರ್ವೋಕ್ತ ರೀತಿಯಾದ ವಿಮಲವಾದ (ದೋಷರಹಿತವಾದ= ಪ್ರಶಸ್ತವಾದ) ಉಪದೇಶ ವಚನದಿಂದ ಶ್ರೀರಾಮಚಂದ್ರನು ತತ್ಕ್ಷಣವೇ ಕೊಳೆಯನ್ನು ತೊಡೆದು ಹಾಕಿ ಚೆನ್ನಾಗಿ ಒರೆಸಲ್ಪಟ್ಟ ಕನ್ನಡಿಯಂತೆ ನಿರ್ಮಲಚಿತ್ತನಾಗಿ ವಿರಾಜಿಸಿದನು. ಮತ್ತು ಅತ್ಯಂತ ಮಧುರವಾದ ಜ್ಞಾನಾಮೃತದಿಂದ ವಿರಾಜಮಾನವಾದ ಅಂತಃಕರಣವುಳ್ಳವನಾಗಿ ಪೂರ್ಣ ಚಂದ್ರನಂತೆ ಸರ್ವಲೋಕಾಹ್ಲಾದಕವಾದ ಪರಮ ಶಾಂತಿಯನ್ನು ಪಡೆದವನಾದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಜೀವನ್ಮುಕ್ತಸ್ಥಿತಗುಣವರ್ಣನ" ಎಂಬ
ನಾಲ್ವತ್ತಾರನೆಯ ಸರ್ಗವು

ಸಪ್ತಚತ್ವಾರಿಂಶಃ ಸರ್ಗಃ

ಶ್ರೀರಾಮ ಉವಾಚ:--

ಭಗವನ್ ಸರ್ವಧರ್ಮಜ್ಞ ಸರ್ವವೇದಾಂಗಪಾರಗ ।
ಆಶ್ವಸ್ತ ಇವ ತಿಷ್ಠಾಮಿ ಶುದ್ಧಾಭಿರ್ಭವದುಕ್ತಿಭಿಃ ॥ ೧ ॥

ಉದಾರಾಣಿ ವಿವಿಕ್ತಾನಿ ಪೇಶಲಾನ್ಯುದಿತಾನಿ ಚ ।
ಶ್ರೋತುಂ ತೃಪ್ತಿಂ ನ ಗಚ್ಛಾಮಿ ವಚಾಂಸಿ ವದತಸ್ತವ ॥ ೨ ॥

ನಲವತ್ತೇಳನೆಯ ಸರ್ಗ

೧. (ತನ್ನ ಗುರುಗಳಾದ ಶ್ರೀ ವಸಿಷ್ಠರಿಗೆ) ಶ್ರೀರಾಮನು ಹೇಳಿದನು. ಸ್ವಾಮಿ, ಸಕಲ ಧರ್ಮಗಳ ಮರ್ಮವನ್ನು ಬಲ್ಲ ಸಕಲ ವೇದಗಳ ಮತ್ತು ವೇದಾಂಗಗಳ ಪಾರಂಗತರಾದ ಪೂಜ್ಯತಮರಾದ ಮಹಾತ್ಮರೇ (ಭಗವನ್,) ಅತಿ ನಿರ್ಮಲಗಳಾದ ತಮ್ಮ ಉಪದೇಶ ವಚನಗಳಿಂದ ಈಗ ನಾನು ತಲೆಯ ಮೇಲಿದ್ದ ಭಾರವನ್ನು ಕೆಳಕ್ಕೆ ಇಳಿಸಿ ಮಾರ್ಗಾಯಾಸವನ್ನೂ ಕ್ಷುದ್ಬಾಧೆಯನ್ನೂ ಪರಿಹರಿಸಿ ಕೊಂಡ ಪ್ರಯಾಣಿಕನಂತೆ (ಆಶ್ವಸ್ತ) ಪ್ರಮೋದಭರಿತನಾದೆನು.

೨. ತಮ್ಮ ಶ್ಲಾಘ್ಯವಾದ ಹಿತವಚನಗಳು ಉದಾರಗಳಾಗಿವೆ. (ಉತ್ತಮವಾದ ವಿಶೇಷಾರ್ಥಪ್ರದಗಳು) ವಿವಿಕ್ತಗಳಾಗಿವೆ. (ವರ್ಣ, ಪದ, ವಾಕ್ಯ, ಪ್ರಕರಣ ಭೇದಗಳಿಂದ (ಒಂದಕ್ಕೊಂದು ಬೆರೆತು ಭ್ರಾಂತಿಯುಂಟಾಗದಂತೆ,) ಅತ್ಯಂತ ಸ್ಪಷ್ಟವಾಗಿವೆ. ಪೇಶಲಗಳಾಗಿವೆ (ವಿಚಿತ್ರ ಕಥೆಗಳಿಂದಲೂ ಯುಕ್ತಿಗಳಿಂದಲೂ, ಸಂದರ್ಭಗಳಿಂದಲೂ ಹೃದಯಂಗಮವಾಗಿವೆ.) ಮತ್ತು ಉದಿತಗಳಾಗಿವೆ.

(ಸೂರ್ಯ ಚಂದ್ರಾದಿಗಳ ಉದಯದಂತೆ ಅಜ್ಞಾನಾಂಧಕಾರವನ್ನು ಪರಿಹರಿಸ ತಕ್ಕವುಗಳಾಗಿಯೂ ಆತ್ಮತತ್ತ್ವವೆಂಬ ಬೆಳಕನ್ನು ಪ್ರಸರಿಸತಕ್ಕವುಗಳಾಗಿಯೂ ಹೃದಯಗಳೆಂಬ ಪದ್ಮಗಳನ್ನು ವಿಕಾಸಗೊಳಿಸತಕ್ಕವುಗಳಾಗಿಯೂ ಇವೆ.) ತಮ್ಮ

ಜಾತ್ಯಾ ರಾಜಸಸಾತ್ವಿಕ್ಯಾಃ ಕಥನಾವಸರಾಂತರೇ ।
ಉತ್ಪತ್ತಿರ್ಭಗವತಾ ಪ್ರೋಕ್ತಾ ಶಾಸ್ತ್ರೈಃ ಕಮಲಜನ್ಮನಃ ॥ ೩ ॥

ಶ್ರೀ ವಸಿಷ್ಠ ಉವಾಚ:—

ಬಹೂನಿ ಬ್ರಹ್ಮಲಕ್ಷಾಣಿ ಶಂಕರೇಂದ್ರಶತಾನಿ ಚ ।
ನಾರಾಯಣಸಹಸ್ರಾಣಿ ಸಮತೀತಾನಿ ರಾಘವ ॥ ೪ ॥

ಅನ್ಯೇಷು ಚ ವಿಚಿತ್ರೇಷು ಬ್ರಹ್ಮಾಂಡೇಷು ಚ ಭೂರಿಶಃ ।
ನಾನಾಚಾರವಿಹಾರಾಣಿ ವಿಹರಂತಿ ಸಹಸ್ರಶಃ ॥ ೫ ॥

ವದನಾರವಿಂದದಿಂದ ಹೊರಟ ವಚನಾಮೃತಗಳನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯೇ ಉಂಟಾಗದಿರುವುದು.)

೩. ಅದುಕಾರಣ ತಾವು ಪೂರ್ವದಲ್ಲಿ (ಹಿಂದೆ) ರಾಜಸಸಾತ್ವಿಕೀ ಎಂಬ ಜೀವ ಜಾತಿಯನ್ನು ಕುರಿತು ಉಪದೇಶ ಮಾಡುತ್ತಿರುವಾಗ ಆ ಸಂದರ್ಭದಲ್ಲಿ ನಾನಾವಿಧ ಶ್ರುತಿ ಪುರಾಣೇತಿಹಾಸಾದಿ ಪ್ರಮಾಣಗಳಿಂದ ಚತುರ್ಮುಖ ಬ್ರಹ್ಮನ ಉತ್ಪತ್ತಿಯನ್ನು ಪ್ರಸ್ತಾಪಿಸಿದಿರಲ್ಲವೆ! (ಈಗ ಅದನ್ನು ವಿಸ್ತರಿಸಿ ಹೇಳಬೇಕೆಂದು ತಮ್ಮನ್ನು ಬೇಡಿಕೊಳ್ಳುವೆನು ಎಂದು ಶ್ರೀರಾಘನು ಗುರುಗಳಲ್ಲಿ ವಿಜ್ಞಾಪಿಸಿಕೊಂಡನು.)

೪. ಶ್ರೀ ವಸಿಷ್ಠನು ಹೇಳಿದನು:—ಅಯ್ಯ ರಾಘವ, ಅನೇಕ ಲಕ್ಷಸಂಖ್ಯಾಕ ಚತುರ್ಮುಖ ಬ್ರಹ್ಮರುಗಳೂ ಅನೇಕ ಅನಂತಸಂಖ್ಯಾಕಶಂಕರರೂ ಇಂದ್ರರೂ ಅನೇಕ ಸಾವಿರ ನಾರಾಯಣರುಗಳೂ ಹಿಂದೆ ಕಳೆದುಹೋಗಿರುವರು.

(ಲಕ್ಷ, ಶತ, ಸಹಸ್ರ ಇತ್ಯಾದಿಗಳು ಅನಂತಸಂಖ್ಯಾಬೋಧಕಗಳು.)

೫. ಈ ಬ್ರಹ್ಮಾಂಡದಲ್ಲಿರುವಂತೆಯೇ ಅತಿವಿಚಿತ್ರಗಳಾದ ಇತರ ಬ್ರಹ್ಮಾಂಡ ಗಳಲ್ಲಿಯೂ ಕೂಡ ಈ ಬ್ರಹ್ಮರುದ್ರ ವಿಷ್ಣ್ವಾದಿಗಳು ಸಾವಿರಾರು ಗಟ್ಟಳೆಯಾಗಿ ನಾನಾವಿಧ ಆಚಾರ ವಿಹಾರಗಳುಳ್ಳವರಾಗಿ ಸುರಾಸುರಾದಿ ಅನೇಕ ಪ್ರಕಾರ ಶರೀರಗಳಿಂದ ವಿವರಿಸಿಕೊಂಡಿರುವರು.

ತುಲ್ಯಕಾಲಮನಂತೇಷು ಕಾಲಾಂತರಭವೇಷು ಚ ।
ಜಗತ್ಸು ಪ್ರೋದ್ಭವಿಷ್ಯಂತಿ ಬಹೂನ್ಯನ್ಯಾನಿ ಭೂರಿಶಃ ॥ ೬ ॥

ತೇಷಾಮಬ್ಜೋದ್ಭವಾದೀನಾಂ ಬ್ರಹ್ಮಾಂಡೇಷು ದಿವೌಕಸಾಂ ।
ಉತ್ಪತ್ತಯೋ ಮಹಾಬಾಹೋ ವಿಚಿತ್ರಾಭ್ಯುತ್ಥಿತಾ ಇವ ॥ ೭ ॥

ಕದಾಚಿತ್ ಸೃಷ್ಟಯಃ ಶಾರ್ವ್ಯಃ ಕದಾಚಿತ್ಪದ್ಮಜೋದ್ಭವಾಃ ।
ಕದಾಚಿದಪಿ ವೈಷ್ಣವ್ಯಃ ಕದಾಚಿನ್ಮುನಿನಿರ್ಮಿತಾಃ ॥ ೮ ॥

ಕದಾಚಿತ್ಪದ್ಮಜೋ ಬ್ರಹ್ಮಾ ಕದಾಚಿತ್ ಸಲಿಲೋದ್ಭವಃ ।
ಅಂಡೋದ್ಭವಃ ಕದಾಚಿತ್ತು ಕದಾಚಿತ್ ಜಾಯತೇಽಂಬರಾತ್ ॥ ೯ ॥

---

೬. ಇದೂ ಅಲ್ಲದೆ ಇನ್ನು ಮುಂದೆಯೂ ಏಕ (ಸಮ) ಕಾಲದಲ್ಲಿ ಅನಂತಗಳಾದ ಬ್ರಹ್ಮಾಂಡಗಳು ಉತ್ಪನ್ನವಾಗುವುವು. ಕಾಲಾಂತರಗಳಲ್ಲಿ ಉತ್ಪನ್ನವಾಗುವ ಆ ಜಗತ್ತುಗಳಲ್ಲಿಯೂ ವಿಶೇಷವಾಗಿ ಬೇರೆ ಬೇರೆ ಬ್ರಹ್ಮಾದಿಗಳು ಅನಂತವಾಗಿ (ಅನೇಕ ಸಂಖ್ಯಾಕ) ಉದ್ಭವಿಸುವರು.

೭. ಅಯ್ಯ ಮಹಾಬಾಹುವೇ, ಆ ಬ್ರಹ್ಮಾಂಡಗಳಲ್ಲಿ ಆ ಬ್ರಹ್ಮಾದಿ ದೇವತೆಗಳ ಉತ್ಪತ್ತಿಗಳು ಇಂದ್ರಜಾಲದಲ್ಲಿ (ಮಾಯೆಯಿಂದ) ಉದಯಿಸಿದವುಗಳಂತೆ ತೋರುತ್ತಿರುವುವು.

೮. ಈ ಸೃಷ್ಟಿಗಳು ಒಂದು ಕಾಲದಲ್ಲಿ ರುದ್ರಪೂರ್ವಕಗಳಾಗಿಯೂ ಮತ್ತೊಂದು ಸಮಯದಲ್ಲಿ ಬ್ರಹ್ಮ (ಹಿರಣ್ಯಗರ್ಭ= ಚತುರ್ಮುಖ) ಪೂರ್ವಕಗಳಾಗಿಯೂ ಇನ್ನೊಂದು ವೇಳೆ ವಿಷ್ಣುಪೂರ್ವಕಗಳಾಗಿಯೂ ಸಂಭವಿಸುವುವು. ಮತ್ತು ಮಗದೊಂದು ಕಾಲದಲ್ಲಿ ಋಷಿಮೂಲಕವಾಗಿ ಅನೇಕ ಅವಾಂತರ ಸೃಷ್ಟಿಗಳೂ ಆಗುವುವು.

[ತಪಸಾ ತೋಷಯಿತ್ವೇಶಂ ಬ್ರಹ್ಮವಿಷ್ಣು ಮಹೇಶ್ವರಾಃ । ಪರಸ್ಪರಸ್ಮಾತ್ ಜಾಯಂತೇ, ಪರಸ್ಪರ ಜಯೈಷಿಣಃ ಎಂದು ಪುರಾಣವಚನ]

೯. ಇದರಂತೆಯೇ ಚತುರ್ಮುಖ ಬ್ರಹ್ಮನು ಒಂದು ಸಮಯದಲ್ಲಿ ವಿಷ್ಣುವಿನ ನಾಭಿಕಮಲದಿಂದ ಜನಿಸುವನೆಂದೂ ಒಂದು ಕಾಲದಲ್ಲಿ ನೀರಿನಲ್ಲಿ ಉದ್ಭವಿಸುವನೆಂದೂ ಇನ್ನೊಂದು ಸಮಯದಲ್ಲಿ ಅಂಡದೊಳಗಿನಿಂದ ಉದಯಿಸುವನೆಂದೂ

ಕಸ್ಮಿಂಶ್ಚಿದಂತೇ ತ್ರ್ಯಕ್ಷೋಽರ್ಕಃ ಕಸ್ಮಿಂಶ್ಚಿದಪಿ ವಾಸವಃ ।
ಕಸ್ಮಿಂಶ್ಚಿತ್ ಪುಂಡರೀಕಾಕ್ಷಃ ಕಸ್ಮಿಂಶ್ಚಿತ್ತ್ರ್ಯಕ್ಷ ಏವಹಿ ॥ ೧೦ ॥

ಕಸ್ಯಾಂಚಿದ್ಭೂರಭೂತ್ಸೃಷ್ಟೌ ನೀರಂಧ್ರತರುಸಂಕಟಾ ।
ಕಸ್ಯಾಂಚಿನ್ನರನೀರಂಧ್ರಾ ಕಸ್ಯಾಂಶ್ಚಿದ್ಭೂಧರಾವೃತಾ ॥ ೧೧ ॥

ಭೂರಭೂನ್ಮೃನ್ಮಯೀ ಕಾಚಿತ್ಕಾಚಿದಾಸೀದ್ದೃಷನ್ಮಯೀ ।
ಆಸೀದ್ಧೇಮಮಯೀ ಕಾಚಿತ್ಕಾಚಿತ್ತಾಮ್ರಮಯೀ ತಥಾ ॥ ೧೨ ॥

ಒಂದು ಸಮಯದಲ್ಲಿ ಆಕಾಶದಿಂದ ಉತ್ಪನ್ನನಾಗುವನೆಂದೂ ಹೀಗೆ ನಾನಾವಿಧಗಳಾಗಿ ಅನೇಕ ಪುರಾಣಗಳು ಹೇಳುತ್ತಿರುವುವು. (ಹೀಗೆ ಬ್ರಹ್ಮನ ಉತ್ಪತ್ತಿಸ್ಥಾನಗಳೂ ಅನಿಯತವಾದವುಗಳಾಗಿವೆ.)

೧೦. (ಹೀಗೆಯೇ ಸೂರ್ಯಾದಿ ಪದಾಧಿಕಾರಿಗಳ ವಿಷಯದಲ್ಲಿಯೂ ಒಂದು ವಿಧವಾದ ನಿಯಮವೇ ಕಾಣುವುದಿಲ್ಲ. ಹೇಗೆಂದರೆ) ಒಂದು ಬ್ರಹ್ಮಾಂಡದೊಳಗೆ ತ್ರಿನೇತ್ರನಾದ ಈಶ್ವರನು ಸೂರ್ಯನ ಪದವಿಯಲ್ಲಿರುವನು. ಮತ್ತೊಂದು ಬ್ರಹ್ಮಾಂಡದಲ್ಲಿ ಇಂದ್ರನು ಅದೇ ಸೂರ್ಯನ ಪದವಿಯಲ್ಲಿರುವನು. ಇನ್ನೊಂದರಲ್ಲಿ ಕಮಲನೇತ್ರನಾದ ವಿಷ್ಣುವು ಆ ಪದವಿಯಲ್ಲಿರುವನು. ಮತ್ತೊಂದು ಬ್ರಹ್ಮಾಂಡದಲ್ಲಿ ಯಾದರೋ ಮುಕ್ಕಣ್ಣನಾದ ಶಿವನೇ ಸರ್ವದೇವತಾಧಿಕಾರಗಳಲ್ಲಿಯೂ ಇರುವನು.

(ಬೇರೆ ಬೇರೆ ಬ್ರಹ್ಮಾಂಡಗಳಲ್ಲಿಯೂ ಆ ಶಿವನಿಗೇಯೆ ಇತರ ದೇವತೆಗಳ ಭಾವಗಳೂ ಕಲ್ಪಿತವಾಗಿರುವುವು. ಬೇರೆ ಯಾರಿಗೂ ಇಲ್ಲ ಎಂಬರ್ಥವು "ಹಿ" ಎಂಬ ಅವ್ಯಯದಿಂದ ಸೂಚಿತವಾಗಿದೆ.)

೧೧. ಒಂದು ಸೃಷ್ಟಿಯಲ್ಲಿ ಮೊಟ್ಟಮೊದಲು ಈ ಭೂಮಿಯು ಬಹಳ ದಟ್ಟವಾಗಿ ಬೆಳೆದ ವೃಕ್ಷಗಳಿಂದ ನಿಬಿಡವಾಗಿದ್ದಿತು. ಮತ್ತೊಂದು ಸೃಷ್ಟಿಯಲ್ಲಿ ಮನುಷ್ಯರಿಂದ ನಿಬಿಡವಾಯಿತು. ಇನ್ನೊಂದು ಸೃಷ್ಟಿಯಲ್ಲಿ ಭೂಮಿಯು ಅನೇಕ ಪರ್ವತಗಳಿಂದ ಸಮಾಕ್ರಾಂತವಾಯಿತು.

(ಪ್ರಥಮತಃ ಎಂಬುದನ್ನು ಎಲ್ಲ ವಾಕ್ಯಗಳಲ್ಲಿಯೂ ಸೇರಿಸಿಕೊಂಡು ಅರ್ಥ ಹೇಳಬೇಕು.)

೧೨. ಇದರಂತೆಯೇ ಒಂದು ಕಡೆ ಭೂಮಿಯು ಮೃಣ್ಮಯವಾಗಿಯೂ

ಇಷ್ವೈವ ಕಾನಿ ಚಿತ್ರಾಣಿ ಜಗಂತ್ಯನ್ಯಾನ್ಯಥಾನ್ಯಥಾ ।
ಅನ್ಯಾನ್ಯೇಕೈಕಲೋಕಾನಿ ನಿರ್ಲೋಕಾಂಸ್ಯಪಿ ಕಾನಿಚಿತ್ ॥ ೧೩ ॥

ಅನಂತಾನಿ ಜಗಂತ್ಯಸ್ಮಿನ್ ಬ್ರಹ್ಮತತ್ತ್ವಮಹಾಂಬರೇ ।
ಅಂಭೋಧಿವೀಚಿಜಲವನ್ನಿಮಜ್ಜಂತ್ಯುದ್ಭವಂತಿ ಚ ॥ ೧೪ ॥

ಯಥಾ ತರಂಗಾ ಜಲಧೌ ಮೃಗತೃಷ್ಣಾ ಮತೌ ಯಥಾ ।
ಕುಸುಮಾನಿ ಯಥಾ ಚೂತೇ ತಥಾ ವಿಶ್ವಶ್ರಿಯಃ ಪರೇ ॥ ೧೫ ॥

(ಬರಿಯಮಣ್ಣು) ಒಂದು ಕಡೆ ಶಿಲಾ (ಕಲ್ಲು)ಮಯವಾಗಿಯೂ ಮತ್ತೊಂದು ಕಡೆ ಸುವರ್ಣ (ಚಿನ್ನ)ಮಯವಾಗಿಯೂ ಇನ್ನೊಂದು ಕಡೆ ತಾಮ್ರಮಯವಾಗಿಯೂ ಆಯಿತು.

[ಅನ್ನಮಯಃ ಯಜ್ಞಃ ಇತ್ಯಾದಿ ವಾಕ್ಯಗಳಲ್ಲಿ ಹೇಗೋ ಹಾಗೆ ಇಲ್ಲಿ ಸರ್ವತ್ರ ಪ್ರಾಚುರ್ಯಾರ್ಥದಲ್ಲಿ ಮಯಟ್ ಬಂದಿದೆ.]

೧೩. ಈ ಬ್ರಹ್ಮಾಂಡವೊಂದರಲ್ಲಿಯೇ ಎಷ್ಟು ಆಶ್ಚರ್ಯಗಳಿರುವುವು!! ಹೀಗೆ ಇತರ ಬ್ರಹ್ಮಾಂಡಗಳೂ ಕೂಡ ಇತರ ಪ್ರಕಾರಗಳಿಂದ ಬಹು ಆಶ್ಚರ್ಯ ಪೂರ್ಣಗಳಾಗಿರುವುವು!! ಒಂದೊಂದು ಬೇರೆ ಬೇರೆ ವಿಧವಾಗಿರುವುದು. ಬೇರೆ [ಇತರ] ಕೆಲವು ಬ್ರಹ್ಮಾಂಡಗಳಲ್ಲಿ ಸೂರ್ಯಾದಿಗಳಂತೆ ಪ್ರಕಾಶಾತ್ಮಕವಾದ ಆ ಲೋಕವು ಒಂದೊಂದೇ ಇರುವುದು. ಇನ್ನೂ ಕೆಲವು ಬ್ರಹ್ಮಾಂಡಗಳು ನಿಷ್ಪ್ರಕಾಶ ಗಳಾಗಿ ಕೇವಲ ತಮಸ್ಸಿನಿಂದ ಆವೃತವಾಗಿರುವುವು.

೧೪. ಈ ಬ್ರಹ್ಮತತ್ತ್ವವೆಂಬ ಮಹಾಕಾಶದಲ್ಲಿ ಅಸಂಖ್ಯಾಕವಾದ ಅನೇಕಾನೇಕ ಬ್ರಹ್ಮಾಂಡಗಳು ಸಮುದ್ರ ನೀರಿನಲ್ಲಿ ಅಲೆಗಳಂತೆ ಸದಾ ಉದ್ಭವಿಸುತ್ತಲೂ ಲಯ ಹೊಂದುತ್ತಲೂ ಇರುವುವು.

೧೫. ಸಮುದ್ರದಲ್ಲಿ ಅಲೆಗಳೂ ಮರಳುಗಾಡಿನಲ್ಲಿ ಮರೀಚಿಕೆ [ಬಿಸಿಲ್ಗುದುರೆ] ಗಳೂ, ಮಾವಿನ ಗಿಡದಲ್ಲಿ ಹೂಗಳೂ ಹೇಗೆ ಇದ್ದುಕೊಂಡಿವೆಯೋ ಹಾಗೆ ಪರಮಾತ್ಮನಲ್ಲಿ ಈ ಬ್ರಹ್ಮಾಂಡ ಶ್ರೇಣಿಗಳು ಅಸಂಖ್ಯಾಕವಾಗಿ ತುಂಬಿಕೊಂಡಿವೆ.

ಭಾನೋರ್ಗಣಯಿತುಂ ಶಕ್ಯಾ ರಶ್ಮಿಷು ತ್ರಸರೇಣವಃ ।
ಆಲೋಲವಪುಷೋ ಬ್ರಹ್ಮ ತತ್ತ್ವೇನ ಜಗತಾಂ ಗಣಾಃ ॥ ೧೬ ॥

ಯಥಾ ಮಶಕಜಾಲಾನಿ ವರ್ಷಾದಿಷ್ವಾಕುಲಾನಿ ತು ।
ಉತ್ಪತ್ಯೋತ್ಪತ್ಯ ನಶ್ಯಂತಿ ತಥೇಮಾ ಲೋಕಸೃಷ್ಟಯಃ ॥ ೧೭ ॥

ನಚ ವಿಜ್ಞಾಯತೇ ಕಸ್ಮಾತ್ಕಾಲಾತ್ಪ್ರಭೃತಿ ಚಾಗತಾಃ ।
ನಿತ್ಯಾಗಮಾಪಾಯಪರಾ ಏತಾಃ ಸರ್ಗಪರಂಪರಾಃ ॥ ೧೮ ॥

ಭೂತ್ವಾ ಭೂತ್ವಾ ಪ್ರಲೀಯಂತೇ ಸಸುರಾಸುರಮಾನವಾಃ
ಸರಿತ್ತರಂಗಭಂಗ್ಯೈವ ಸಮಸ್ತಾ ಭೂತಜಾತಯಃ ॥ ೧೯ ॥

---

೧೬. ಸೂರ್ಯಕಿರಣಗಳಲ್ಲಿ ಕಾಣುವ ಅತಿ ಸೂಕ್ಷ್ಮವಾದ ರೇಣು [ರಜಃಕಣ] ಗಳನ್ನಾದರೂ ಎಣಿಸುವುದು ಶಕ್ಯವಾಗುವುದು. (ಎಣಿಸಬಹುದು.) ಆದರೆ, ಬ್ರಹ್ಮತತ್ತ್ವದಲ್ಲಿ ಅತಿ ಚಂಚಲಗಳಾಗಿರುವ ಬ್ರಹ್ಮಾಂಡಗಳ ಸಮೂಹಗಳನ್ನು ಎಣಿಕೆಮಾಡುವುದು ಮಾತ್ರ ಎಂದಿಗೂ ಸಾಧ್ಯವಲ್ಲ.

೧೭. ಮಶಕ (ಸೊಳ್ಳೆ)ಗಳ ಗುಂಪುಗಳು ಮಳೆ ಮೊದಲಾದವುಗಳಿಂದ ಪೀಡಿತಗಳಾಗಿ ಹೇಗೆ ಪುನಃ ಪುನಃ ಹುಟ್ಟಿ ಹುಟ್ಟಿ ಸಾಯುವುವೋ ಹಾಗೆಯೇ ಈ ಪ್ರಪಂಚ ಸೃಷ್ಟಿಗಳೂ ಪದೇ ಪದೇ ಹುಟ್ಟುತ್ತಲೂ ಸಾಯುತ್ತಲೂ ಇರುವುವು.

೧೮. ನಿತ್ಯವಾಗಿಯೇ (ಸರ್ವಕಾಲಗಳಲ್ಲಿಯೂ ಕೂಡ) ಅತ್ಯವಶ್ಯವಾಗಿ ಆವಿರ್ಭಾವ ತಿರೋಭಾವಗಳಿಗೆ (ಸೃಷ್ಟಿಲಯಗಳಿಗೆ) ಒಳಗಾಗಿರುವ ಈ ನಾನಾ ಬ್ರಹ್ಮಾಂಡಗಳ ಸೃಷ್ಟಿ ಪರಂಪರೆಗಳು ಯಾವ ಕಾಲದಿಂದ ಪ್ರಾರಂಭವಾಗಿ ಬಂದಿರುವವೋ ಅದು ಗೊತ್ತೇಆಗುವುದಿಲ್ಲ.

೧೯. ಹೀಗೆ, ಈ ಕಾರಣದಿಂದ ಇವು ಅನಾದಿಗಳಾಗಿಯೇ ತರಂಗಗಳಂತೆ ಸಂತತವೂ ಸ್ಫುರಿಸುತ್ತಾ ಇರುವುವು. ಒಂದು ಅಲೆಯ ಹಿಂದೆ ಬೇರೊಂದು ಅಲೆಯೂ ಅದರ ಹಿಂದೆ ಇನ್ನೊಂದೂ ಇರುವಂತೆ ಒಂದು ಸೃಷ್ಟಿಗಿಂತ ಮುಂಚೆ ಮತ್ತೊಂದು ಸೃಷ್ಟಿಯೂ ಅದಕ್ಕಿಂತ ಮುಂಚೆ ಇನ್ನೊಂದು ಸೃಷ್ಟಿಯೂ ಹೀಗೆ ಅನೇಕಾನೇಕ ಸೃಷ್ಟಿಗಳು ಅನಾದಿಗಳಾಗಿ ಇದ್ದುಕೊಂಡಿವೆ.

ಅನಾದಿಮತ್ಯೋऽವಿರತಂ ಪ್ರಸ್ಫುರಂತಿ ತರಂಗವತ್ ।
ಪೂರ್ವಾತ್ಪೂರ್ವಂ ಕಿಲಾಭೂವಂಸ್ತತಃ ಪೂರ್ವತರಂ ಯಥಾ ॥ ೨೦ ॥

ಯಥೇದಮಂಡಂ ವೈರಿಂಚಂ ತಥಾ ಬ್ರಹ್ಮಾಂಡಪಂಕ್ತಯಃ ।
ಯಾಃ ಸಹಸ್ರಾಃ ಪರಿಕ್ಷೀಣಾ ನಾಡಿಕಾ ವತ್ಸರೇಷ್ವಿವ ॥ ೨೧ ॥

ಅನ್ಯಾಃ ಸಂಪ್ರತಿ ವಿದ್ಯಂತೇ ವರ್ತಮಾನಶರೀರಕಾಃ ।
ಪ್ರಾಂತೇ ಬ್ರಹ್ಮಪುರಸ್ಯಾಸ್ಯ ವಿತತೇ ಬ್ರಹ್ಮಣಃ ಪದೇ ॥ ೨೨ ॥

ಬ್ರಹ್ಮಣ್ಯನ್ಯಾ ಭವಿಷ್ಯಂತಿ ಬ್ರಾಹ್ಮ್ಯೋ ಬ್ರಹ್ಮಪುರಶ್ರಿಯಃ ।
ಪುನಸ್ತಾಶ್ಚ ವಿನಂಕ್ಷ್ಯಂತಿ ಭೂತ್ವಾ ಭೂತ್ವಾ ಯಥಾ ಗಿರಃ ॥ ೨೩ ॥

---

೨೦. ದೇವ, ರಾಕ್ಷಸ, ಮಾನುಷಾದಿ ಪ್ರಾಣಿವರ್ಗಗಳಿಂದ ಒಡಗೂಡಿದ ಸಮಸ್ತ ಭೂತಜಾತಿಗಳೂ ನದಿಯ ಅಲೆಗಳ ರೀತಿಯಲ್ಲಿಯೇ ಪುನಃ ಪುನಃ ಉದಯಿಸಿ ಉದಯಿಸಿ ಲಯಹೊಂದುತ್ತಿರುವುವು.

೨೧. ಈಗ ನಮಗೆ ಗೋಚರವಾಗುತ್ತಿರುವ ಈ ಬ್ರಹ್ಮಾಂಡವು ಹೇಗೋ ಹಾಗೆ ಅನೇಕಾನೇಕ ಸಾವಿರಾರು ಬ್ರಹ್ಮಾಂಡ ಪರಂಪರೆಗಳು ಸಂವತ್ಸರಗಳು ಕಳೆಯುತ್ತಿರಲಾಗಿ ಅನೇಕ ಅಪರಿಮಿತ ಕೋಟ್ಯನುಕೋಟಿ ಘಳಿಗೆಗಳೂ ಕಳೆದು ಹೋಗುವಂತೆ ಅನಂತವಾಗಿ ನಾಶಪಡೆದು ಕಳೆದುಹೋಗಿರುವುವು.

೨೨. (ಹಿಂದೆ ಲೀಲೋಪಾಖ್ಯಾನದಲ್ಲಿ ನಾನು ಹೇಳಿದ ರೀತಿಯಿಂದ ಸಕಲ ಬ್ರಹ್ಮಾಂಡಗಳೂ ಹೃದಯಾಕಾಶದೊಳಗೆಯೇ ಕಲ್ಪಿತವಾಗುವ ಕಾರಣ) ಬ್ರಹ್ಮಜ್ಞಾನ ಪ್ರಾಪ್ತಿಗೆ ಮುಖ್ಯಸ್ಥಾನವಾಗಿರುವದರಿಂದ ಬ್ರಹ್ಮಪುರವೆನ್ನಿಸಿಕೊಂಡಿರುವ ಈ ಶರೀರದ ಪ್ರಾಂತದಲ್ಲಿ ಅಂದರೆ ಹೃದಯ ಪುಂಡರೀಕದಲ್ಲಿರುವ ಅತಿ ವಿಸ್ತೀರ್ಣವಾದ ಬ್ರಹ್ಮಪದ(ವಸ್ತು-ತತ್ತ್ವ) ದೊಳಗೆಯೇ ಬೇರೆ ಕೆಲವು ಬ್ರಹ್ಮಾಂಡ ಪಙ್ಕ್ತಿಗಳು ಈಗಲೂ ಕೂಡ ಚಕ್ರಾಕಾರವಾಗಿ ಸುತ್ತುತ್ತಲಿರುವ ಆಕಾರ (ದೇಹ)ಗಳುಳ್ಳವುಗಳಾಗಿ ಇರುವುವು.

(ಅಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾಹಿತೇ ಎಂಬ ಶ್ರುತಿಯು ಪ್ರಮಾಣವು.)

೨೩. ಜನಗಳು ಮಾತನಾಡಿದಾಗಲೆಲ್ಲ ಧ್ವನಿಭೇದಗಳು ಆಕಾಶದಲ್ಲಿ ಹುಟ್ಟಿ

ಬ್ರಹ್ಮಣ್ಯನ್ಯಾ ಭವಿಷ್ಯಂತ್ಯಃ ಸ್ಥಿತಾಃ ಸರ್ಗಪರಂಪರಾಃ ।
ಘಟಾ ಇವ ಮೃದೋ ರಾಶಾವಂಕುರೇ ಪಲ್ಲವಾ ಇವ ॥ ೨೪ ॥

ಯಾವದ್ಬ್ರಹ್ಮ ಚಿದಾಕಾಶೇ ತಥಾ ತ್ರಿಭುವನಶ್ರಿಯಃ ।
ಸ್ಫಾರಾಕಾರವಿಕಾರಾಢ್ಯಾಃ ಪ್ರೇಕ್ಷ್ಯಮಾಣಾ ನ ಕಿಂಚನ ॥ ೨೫ ॥

ಉನ್ಮಜ್ಜಂತ್ಯೋ ನಿಮಜ್ಜಂತ್ಯೋ ನ ಸತ್ಯಾ ನಾಪ್ಯಸತ್ಕ್ರಿಯಃ ।
ಜಡಾರಂಭಾ ವಿತನ್ವಂತ್ಯಸ್ತಾ ಏವ ಖಲತಾ ಇವ ॥ ೨೬ ॥

ಹುಟ್ಟಿ ಲಯಹೊಂದುತ್ತಿರುವಂತೆ ಬ್ರಹ್ಮಪುರವೆನ್ನಿಸಿಕೊಂಡಿರುವ ಹೃದಯಾಕಾಶಕ್ಕೆ ಶೋಭಾವಹಗಳಾದ ಬ್ರಹ್ಮನಿರ್ಮಿತಗಳಾದ ಮತ್ತೆ ಬೇರೆ ಕೆಲವು ಬ್ರಹ್ಮಾಂಡ ಪಙ್ಕ್ತಿಗಳು ಬ್ರಹ್ಮನಲ್ಲಿಯೇ ಇನ್ನು ಮುಂದೆಯೂ ಅನೇಕವಾಗಿ ಉದ್ಭವಿಸುವುವು. ಮತ್ತು ಪುನಃ ಅವು ಅಲ್ಲಿಯೇ ಲಯವನ್ನೂ ಹೊಂದುವುವು.

೨೪. ಮತ್ತೂ ಕೆಲವು ಬೇರೆ ಸೃಷ್ಟಿ ಪರಂಪರೆಗಳು ಮಣ್ಣಿನ ರಾಶಿಯೊಳಗೆ ಘಟಶರಾವಾದಿಗಳಂತೆಯೂ ಅಂಕುರ (ಮೊಳಕೆ) ದೊಳಗೆ ಪಲ್ಲವ (ಚಿಗುರೆಲೆ) ಗಳಂತೆಯೂ ಮುಂದೆ ಯಾವಾಗಲೋ ಆವಿರ್ಭವಿಸತಕ್ಕವುಗಳಾಗಿ ಬ್ರಹ್ಮನಲ್ಲಿಯೇ ಇದ್ದುಕೊಂಡಿವೆ.

೨೫. ಅತಿ ವಿಸ್ತಾರವಾಗಿ ನಾನಾ ಆಕಾರವಿಕಾರಗಳಿಂದ ಅಭಿವೃದ್ಧವಾಗಿ ಸ್ಫುರಿಸುತ್ತಿರುವ ಈ ಮೂರು ಲೋಕಗಳ ಸಮೃದ್ಧಿಗಳು (ಸೃಷ್ಟಿಸಮುದಾಯ ಗಳೆಲ್ಲವೂ) ಬ್ರಹ್ಮಜ್ಞಾನದಿಂದ (ವಿಚಾರಪೂರ್ವಕವಾಗಿ) ನೋಡಲ್ಪಟ್ಟಾಗ ಇದು ಯಾವುದೊಂದೂ ಇಲ್ಲವಾಗಿ ಜ್ಞಾನಬಾಧಿತಗಳಾಗುವವರೆಗೂ ಈ ಸೃಷ್ಟಿ ಪರಂಪರೆಗಳು ಚಿದಾಕಾಶದಲ್ಲಿ ತೋರುತ್ತಲೇ ಇರುವುವು. ಇವು ತತ್ತ್ವಜ್ಞಾನ ಬಾಧಿತಗಳಾಗಿ ಮಿಥ್ಯೆಯೆಂದು ಗೊತ್ತಾದ ಕೂಡಲೇ ಸಕಲ ಕಲ್ಪನೆಗಳಿಗೂ ಅಧಿಷ್ಠಾನವಾದ ಬ್ರಹ್ಮವೊಂದೇ ಪರಮಾರ್ಥ ಸತ್ಯವಾಗಿರುವುದು.

೨೬. ಮತ್ತು, ಈ ಸೃಷ್ಟಿ ಪರಂಪರೆಗಳು ಪುನಃ ಪುನಃ ತೇಲುತ್ತಲೂ ಮುಳುಗುತ್ತಲೂ ಇರುವುವು. (ಒಂದೊಂದು ಸಲ ಎದ್ದು ಕಾಣುವುವು. ತತ್‌ಕ್ಷಣವೇ ಅದೃಶ್ಯವಾಗಿ ಬಿಡುವುವು.) ಇವು ಸತ್ಯವೂ ಅಲ್ಲ. ಅಸತ್ಯವೂ ಅಲ್ಲ. (ಅಂದರೆ ಸದಸದ್ಭಿನ್ನಗಳಾದ ಅನಿರ್ವಚನೀಯಗಳು ಎಂದರ್ಥ) ಇವು ಮಿಥ್ಯೆಯಾಗಿಯೇ ಅಜ್ಞಾನದಿಂದ ಬ್ರಹ್ಮನಲ್ಲಿ ಮೂರ್ಖರಿಂದ ಅಧ್ಯಸ್ತವಾಗಿರುವುವು. ಇವುಗಳೇ

ತರಂಗಸಮಧರ್ಮಿಣ್ಯೋ ದೃಷ್ಟನಷ್ಟಶರೀರಕಾಃ ।
ಸರ್ವಾಸಾಂ ಸೃಷ್ಟಿರಾಶೀನಾಂ ಚಿತ್ರಾಕಾರವಿಚೇಷ್ಟಿತಾಃ ॥ ೨೭ ॥

ಚಿತ್ರಾಕಾರವಿಕಾರಾಶ್ಚ ಚಿತ್ರರೂಪಾ ಹಿ ಸೃಷ್ಟಯಃ ।
ವ್ಯತಿರಿಕ್ತಾ ನ ಸರ್ವೇಷಾಂ ಸಮಸ್ತಾಃ ಸೃಷ್ಟಿದೃಷ್ಟಯಃ
ತತ್ತ್ವಜ್ಞ ವಿಷಯೇ ರಾಮ ಸಲಿಲಾದಿವ ವೃಷ್ಟಯಃ । ॥ ೨೮ ॥

ಆಯಾಂತಿ ಸೃಷ್ಟಯೋ ದೇವಾಜ್ಜಲದಾದಿವ ವೃಷ್ಟಯಃ ॥ ೨೯ ॥

ಆಕಾಶಲತೆಗಳಂತೆ ಭ್ರಾಂತಿಮೂಲಕವಾಗಿ ಮಿಥ್ಯಾಭೂತವಾಗಿಯೇ ಸರ್ವತ್ರ ವ್ಯಾಪಿಸಿಕೊಂಡಿರುವಂತೆ ತೋರುವುವು.

೨೭. ಹೀಗೆ ಸಮಸ್ತ ಅವಾಂತರ ಸೃಷ್ಟಿ ಪರಂಪರೆಗಳ ಸಮಷ್ಟಿಭೂತಗಳಾಗಿರುವ ಬ್ರಹ್ಮಾಂಡಗಳ ಸೃಷ್ಟಿಗಳು ವಿಚಿತ್ರಾಕಾರಗಳಾದ ಸಕಲ ಪ್ರಾಣಿ ವ್ಯವಹಾರಗಳುಳ್ಳವುಗಳಾಗಿ (ಜಲತರಂಗಗಳಂತೆ) ಸ್ವಲ್ಪ ಮೇಲಕ್ಕೆದ್ದು ಕಾಣಿಸಿಕೊಳ್ಳುತ್ತಲೂ ಆಗಲೇ ಅಲ್ಲಿಯೇ ನಾಶಹೊಂದುತ್ತಲೂ ಇರುವುವು.

೨೮-೨೯. ಅಯ್ಯ ರಾಮ, ಹೀಗೆ ಸೃಷ್ಟಿಗಳು ಅತಿ ವಿಚಿತ್ರವಾದರೂಪವುಳ್ಳವುಗಳೇ ಆಗಿವೆ. ಮತ್ತು ಇವುಗಳ ಆಕಾರಗಳೂ ವಿಕಾರಗಳೂ ವಿಚಿತ್ರಗಳಾಗಿಯೇ ಇವೆ. ಎಲ್ಲ ಬ್ರಹ್ಮಾಂಡಗಳ ಸಮಸ್ತ ಸೃಷ್ಟಿದೃಷ್ಟಿಗಳು ತತ್ತ್ವಜ್ಞನ ವಿಷಯದಲ್ಲಿ ವೃಷ್ಟಿಗಳು ನೀರಿಗಿಂತ ಹೇಗೆ ವ್ಯತಿರಿಕ್ತವಾದವುಗಳಲ್ಲವೋ ಹಾಗೆಯೇ ಪರಬ್ರಹ್ಮನಿಗಿಂತ ವ್ಯತಿರಿಕ್ತವಾದವುಗಳು ಅಲ್ಲವೇ ಅಲ್ಲವು. ತತ್ತ್ವಜ್ಞಾನ ರಹಿತನಾದರೋ ಮೂಢ ಜನರು ಮೇಘದ ದೆಸೆಯಿಂದ ವೃಷ್ಟಿಯು (ಮಳೆಯು) ಉದ್ಭವಿಸುವುದೆಂದು ಭಾವಿಸುವಂತೆ ತಟಸ್ಥನಾದ ಈಶ್ವರನ ದೆಸೆಯಿಂದ ಸೃಷ್ಟಿಗಳು ಉಂಟಾಗುವುದೆಂದು ತಪ್ಪಾಗಿ ತಿಳಿದುಕೊಂಡು ಭೇದಜ್ಞಾನವುಳ್ಳವನಾಗುವನು.

(ತತ್ತ್ವಜ್ಞಾನಿಯು "ಸೃಷ್ಟಿ ದೃಷ್ಟಿಯು ಯಥಾರ್ಥವಲ್ಲ. ಪ್ರಪಂಚವೆಂಬುದು ಮೂರ್ಖರಿಂದ ಸರ್ವಾಧಿಷ್ಠಾನವಾದ ಪರಬ್ರಹ್ಮನಲ್ಲಿ ಅವಿದ್ಯೆಯಿಂದ ಅಧ್ಯಸ್ತವಾದುದು. (ರಜ್ಜುವಿನಲ್ಲಿ ಸರ್ಪದಂತೆ ಕಲ್ಪಿತವಾದುದು) ಈ ಸೃಷ್ಟಿವಾದವೆಲ್ಲವೂ ಅವಿದ್ಯಕ ವ್ಯವಹಾರ ಮಾತ್ರವೇ. ಇಂತಹ ಮಿಥ್ಯಾಸೃಷ್ಟಿಯು, ಅಧಿಷ್ಠಾನಕ್ಕಿಂತ

ವ್ಯತಿರಿಕ್ತಾ ನ ಸರ್ವೇಷಾಂ ಸಮಸ್ತಾಃ ಸೃಷ್ಟಿದೃಷ್ಟಯಃ ।
ವ್ಯತಿರಿಕ್ತಾ ದ್ರವಾಂಭೋಧಿಸ್ವಾಷ್ಮೀಲಾಃ ಶಾಲ್ಮಲೇರಿವ ॥ ೩೦ ॥

ಇಹ ಸೃಷ್ಟಿಷು ಪುಷ್ಟಾಸು ನಿಕೃಷ್ಟಾಸು ಚ ರಾಘವ ।
ಪರಮಾನ್ನಭಸೋ ಜಾತಾಸ್ತನ್ಮಾತ್ರಮಲಮಾಲಿಕಾ ॥ ೩೧ ॥

ಕದಾಚಿತ್ಪ್ರಥಮಂ ವ್ಯೋಮ ಪ್ರತಿಷ್ಠಾಮಧಿಗಚ್ಛತಿ ।
ತತಃ ಪ್ರಜಾಯತೇ ಬ್ರಹ್ಮಾ ವ್ಯೋಮಜೋಽಸೌ ಪ್ರಜಾಪತಿಃ ॥ ೩೨ ॥

ವ್ಯತಿರಿಕ್ತವಾಗಿ ಸದ್ಭಾವವನ್ನು ಎಂದಿಗೂ ಎಲ್ಲಿಯೂ ಪಡೆದಿರುವುದಿಲ್ಲ ಎಂದು ದೃಢವಾಗಿ ತಿಳಿದುಕೊಂಡಿರುವನು.)

೩೦. ಪರಮಾರ್ಥ ದೃಷ್ಟಿಯಿಂದಲಾದರೋ ಒಂದು ಶಾಲ್ಮಲೀ ವೃಕ್ಷಕ್ಕೂ ಅದರ ಬೇರು, ನಾರು ತೊಗಟೆ, ಎಲೆ, ಬೀಜ ಮುಂತಾದವುಗಳಿಗೂ ಭೇದ ವಿಲ್ಲದಿರುವಂತೆಯೇ ಅಜ್ಞಪ್ರಾಜ್ಞರೆಂಬ ವಿಶೇಷವೇ ಇಲ್ಲದೆ ಸರ್ವಜನರಿಗೂ ಒಂದೇ ಬಗೆಯಾಗಿ ಈ ಸಮಸ್ತ ಸೃಷ್ಟಿ ದೃಷ್ಟಿಗಳು ಪರಬ್ರಹ್ಮನಿಗಿಂತ ವ್ಯತಿರಿಕ್ತಗಳಲ್ಲವೇ ಅಲ್ಲವು.

೩೧. ಎಲೈ ರಾಘವನೇ, ಸ್ಥೂಲಭೂತಗಳಿಂದ ಆರಬ್ಧವಾದ ದೇಹಾದಿಗಳ ಲ್ಲಿಯೂ ಸೂಕ್ಷ್ಮ ಭೂತಾರಬ್ಧಗಳಾದ ಇಂದ್ರಿಯಾದಿಗಳಲ್ಲಿಯೂ (ಸ್ಥೂಲ ಮತ್ತು ಸೂಕ್ಷ್ಮ ಎಂಬ ಎರಡು ವಿಧ ಸೃಷ್ಟಿಗಳಲ್ಲಿಯೂ) ಅವ್ಯಾಕೃತವಾದ ಪರಮಾಕಾಶದಿಂದ ಉತ್ಪನ್ನಗಳಾದ ಸರ್ವ ಭಾವಗಳು ಭೂತಸೂಕ್ಷ್ಮಗಳೆನ್ನಿಸುವ ಪಂಚತನ್ಮಾತ್ರಗಳೆಂಬ ಮಾಯಾಮಲದೊಡನೆ ಸೇರಿಕೊಂಡು ಒಂದು ದಾರದಲ್ಲಿ ಪವಣಿಸಲ್ಪಟ್ಟ ಸ್ಫಟಿಕಮಣಿ ಅಥವಾ ರುದ್ರಾಕ್ಷಗಳ ಮಾಲಿಕೆಗಳಂತೆ ಇರುವುವು.

೩೨. ಒಂದು ಕಾಲದಲ್ಲಿ ಮೊಟ್ಟಮೊದಲು ಆಕಾಶವು ಸ್ಥೂಲಭಾವದಿಂದ ಸ್ಥಿತಿಯನ್ನು ಪಡೆಯುವುದು. ಅದರ ದೆಸೆಯಿಂದ ಚತುರ್ಮುಖ ಬ್ರಹ್ಮನು ಹುಟ್ಟುವನು. ಅದುಕಾರಣ ಅವನು ಆಗ ಆಕಾಶಜ (ವ್ಯೋಮಜ) ಪ್ರಜಾಪತಿ ಯೆನ್ನಿಸಿಕೊಳ್ಳುವನು.

ಕದಾಚಿತ್ಪ್ರಥಮಂ ವಾಯುಃ ಪ್ರತಿಷ್ಠಾಮಧಿಗಚ್ಛತಿ ।
ತತಃ ಪ್ರಜಾಯತೇ ಬ್ರಹ್ಮಾ ವಾಯುಜೋಽಸೌ ಪ್ರಜಾಪತಿಃ ॥ ೩೩ ॥

ಕದಾಚಿತ್ಪ್ರಥಮಂ ತೇಜಃ ಪ್ರತಿಷ್ಠಾಮಧಿಗಚ್ಛತಿ ।
ತತಃ ಪ್ರಜಾಯತೇ ಕರ್ತಾ ತೈಜಸೋಽಸೌ ಪ್ರಜಾಪತಿಃ ॥ ೩೪ ॥

ಕದಾಚಿತ್ಪ್ರಥಮಂ ವಾರಿ ಪ್ರತಿಷ್ಠಾಮಧಿಗಚ್ಛತಿ ।
ತತಃ ಪ್ರಜಾಯತೇ ಬ್ರಹ್ಮಾ ವಾರಿಜೋಽಸೌ ಪ್ರಜಾಪತಿಃ ॥ ೩೫ ॥

ಕದಾಚಿತ್ಪ್ರಥಮಂ ಪೃಥ್ವೀ ಸ್ಫಾರತಾಮಧಿಗಚ್ಛತಿ ।
ತತಃ ಪ್ರಜಾಯತೇ ಬ್ರಹ್ಮಾ ಪಾರ್ಥಿವೋಽಸೌ ಪ್ರಜಾಪತಿಃ ॥ ೩೬ ॥

---

೩೩. ಇನ್ನೊಂದು ಸಮಯದಲ್ಲಿ ಪ್ರಥಮತಃ ವಾಯುವು ಸ್ಥೂಲೀಭಾವದಿಂದ ನೆಲೆಯನ್ನು ಹೊಂದುವುದು. ಅದರ ದೆಸೆಯಿಂದ ಬ್ರಹ್ಮನು ಹುಟ್ಟುವನು. ಆದುದರಿಂದ ಅವನಿಗೆ ವಾಯುಜ ಪ್ರಜಾಪತಿಯೆಂಬ ನಾಮಾಂತರವೂ ಉಂಟಾಗುವುದು.

೩೪. ಇನ್ನೊಂದು ಸಮಯದಲ್ಲಿ ಪ್ರಥಮತಃ ತೇಜಸ್ಸು ಸ್ಥೂಲೀಭಾವದಿಂದ ನೆಲೆಗೊಳ್ಳುವುದು. ಅದರ ದೆಸೆಯಿಂದ ತರ್ತ್ರವಾದ ಬ್ರಹ್ಮನು ಉದಯಿಸುವನು. ಆ ಕಾರಣದಿಂದ ಅವನು ಆಗ (ತೈಜಸ = ತೇಜಸ್ಸಿನಿಂದ ಹುಟ್ಟಿದ) ಪ್ರಜಾಪತಿ ಯೆಂದು ವ್ಯವಹರಿಸಲ್ಪಡುವನು.

೩೫. ಒಂದು ಕಾಲದಲ್ಲಿ ಜಲವು ಪ್ರಥಮತಃ ಸ್ಥೂಲಭಾವದಿಂದ ನೆಲೆಸುವುದು. ಅದರಿಂದ ಬ್ರಹ್ಮನು ಉತ್ಪನ್ನನಾಗುವನು. ಆದುದರಿಂದ ಆಗ ಅವನು ವಾರಿಜ ಪ್ರಜಾಪತಿಯೆನ್ನಿಸಲ್ಪಡುವನು.

೩೬. ಮತ್ತೊಂದು ಕಾಲದಲ್ಲಿ ಪ್ರಥಮತಃ ಪೃಥಿವಿಯು ವೈಶಾಲ್ಯವನ್ನು ಹೊಂದಿ ಸ್ಥೂಲಭಾವದಿಂದ ನೆಲೆಗೊಳ್ಳುವುದು. ಅದರ ದೆಸೆಯಿಂದ ಬ್ರಹ್ಮನು ಉದಯಿಸುವನು. ಆದುದರಿಂದ ಅವನಿಗೆ ಪಾರ್ಥಿವ (ಪೃಥಿವಿಯಿಂದ ಜಾತನಾದ) ಪ್ರಜಾಪತಿ ಎಂಬ ಹೆಸರು ಬರುವುದು.

ಇದಂ ಚತ್ವಾರಿ ಸಂಪೀಡ್ಯ ಪಂಚಮಂ ವರ್ಧತೇ ಯದಾ ।
ತದಾ ತಜ್ಜಾತ ಏವೈಷ ಕುರುತೇ ಜಾಗತೀಂ ಕ್ರಿಯಾಮ್ ॥ ೩೭ ॥

ಕದಾಚಿದಪ್ಸು ವಾಯೌ ವಾ ಸುಸ್ಫಾರೇ ವಾಪಿ ತೇಜಸಿ ।
ಸ್ವಯಂ ಸಂಪದ್ಯತೇಽಕಸ್ಮಾತ್ಪ್ರಮಾನ್ಪ್ರಕೃತಿಭಾವಿತಃ ॥ ೩೮ ॥

ತಸ್ಯಾಥ ಶಬ್ದೋ ವದನಾತ್ಕದಾಚಿಜ್ಜಾಯತೇ ಪದಾತ್ ।
ಕದಾಚಿದಂಶಾತ್ಪೃಷ್ಠಾದ್ವಾ ಕದಾಚಿಲ್ಲೋಚನಾತ್ಕರಾತ್ ॥ ೩೯ ॥

---

೩೭. ಆಕಾಶಾದಿ ಪಂಚಭೂತಗಳೊಳಗೆ ಯಾವುದಾದರೂ ಒಂದು ಭೂತವು ಉಳಿದ ಇತರ ನಾಲ್ಕು ಭೂತಗಳನ್ನು ಮರೆಮಾಡಿಕೊಂಡು (ತಿರೋಭೂತವಾದಂತೆ ಮಾಡಿ) ಐದನೆಯ ಭೂತವಾದ ತಾನು ಯಾವಾಗ ತನ್ನ ಅಂಶವನ್ನು ಹೆಚ್ಚಿಸಿ ಕೊಂಡು ವೃದ್ಧಿ ಹೊಂದುವುದೋ ಆಗ ಅದಕ್ಕೆ ಪ್ರಥಮತಃ ಸ್ಥೂಲೀಭಾವವು ಏರ್ಪಡುವುದು. ಬಳಿಕ, ಅದರ ದೆಸೆಯಿಂದಲೇ ಉತ್ಪತ್ತಿ ಪಡೆದ ಈ ಬ್ರಹ್ಮನು ಪ್ರಾಪಂಚಿಕ ವ್ಯವಹಾರವನ್ನು ಅಂದರೆ ಮುಂದಿನ ಜಗತ್ಸೃಷ್ಟಿ ಮುಂತಾದ ವ್ಯಾಪಾರವನ್ನು ನೆರವೇರಿಸುವನು.

೩೮. ಒಂದು ಸಮಯದಲ್ಲಿ ಜಲವಾಗಲೀ, ವಾಯುವಾಗಲೀ ಅಥವಾ ತೇಜಸ್ಸಾಗಲೀ ಅಧಿಕ ಭಾಗವುಳ್ಳದ್ದಾಗಿ ಅತ್ಯಂತ ಉಲ್ಬಣವಾದರೆ ಆಗ ಅದೇ ಉಪಾಧಿಯಾಗುಳ್ಳ ಪ್ರಜಾಪತಿಯು (ಪುರುಷನು= ಪುಮರ್ಾ) ಪೂರ್ವೋಪಾಸನ ಕ್ರಮಾನುಸಾರಿಯಾದ ಸ್ವಭಾವದಿಂದ ವಾಸಿತನಾಗಿ ತಾನಾಗಿಯೇ ಜಲಜ, ವಾಯುಜ ತೈಜಸಾದ್ಯಾಕಾರದಿಂದ ಆಕಸ್ಮಿಕವಾಗಿ ಸಂಪನ್ನನಾಗುವನು.

[ಹೀಗೆ ಒಂದೊಂದು ಸಮಯದಲ್ಲಿ ಒಂದೊಂದು ಭೂತವು ಉಲ್ಬಣವಾಗುವ ಕಾರಣ ಆಗಾಗ ಬ್ರಹ್ಮನು ಅದದರಿಂದ ಹುಟ್ಟಿದನೆಂಬ ವ್ಯವಹಾರವು ಉಪಪನ್ನ ವಾಗುವುದು.]

೩೯. ಅನಂತರ ಆ ಪ್ರಜಾಪತಿಯ ಮುಖದಿಂದಲೂ ಒಂದು ಸಮಯದಲ್ಲಿ ಪಾದದಿಂದಲೂ ಒಂದು ಕಾಲದಲ್ಲಿ ಪುರೋಭಾಗದಿಂದಲೂ ಒಂದು ಸಮಯದಲ್ಲಿ ಪೃಷ್ಠಭಾಗ [ಬೆನ್ನು] ದಿಂದಲೂ ಒಂದೊಂದು ಸಮಯದಲ್ಲಿ ಕಣ್ಣುಗಳಿಂದಲೂ ಕೈಗಳಿಂದಲೂ ನಾಮರೂಪಗಳು ಉತ್ಪನ್ನವಾಗುವುವು.

ಕದಾಚಿತ್ಪುರುಷಸ್ಯಾಸ್ಯ ನಾಭೌ ಪದ್ಮಂ ಪ್ರಜಾಯತೇ ।
ತಸ್ಮಿನ್ಸಂವರ್ಧತೇ ಬ್ರಹ್ಮಾ ಪದ್ಮಜೋಽಸೌ ಪ್ರಕೀರ್ತಿತಃ ॥ ೪೦ ॥

ಮಾಯೇಯಂ ಸ್ವಪ್ನವದ್ಭ್ರಾಂತಿರ್ಮಿಥ್ಯಾರಚಿತ ಚಕ್ರಿಕಾ ।
ಮನೋರಾಜ್ಯಮಿವಾಲೋಲಸಲಿಲಾವರ್ತಸುಂದರೀ ॥ ೪೧ ॥

ಕಿಮಿವಾಸ್ಯಾಂ ವದ ಜ್ಞಪ್ತೌ ಕಥಂ ಸಂಭವತೀಹ ತೇ ।
ಕ್ವಚಿದ್ಬಾಲಮನೋರಾಜ್ಯಮಿದಂ ಪರ್ಯನುಯುಜ್ಯತೇ ॥ ೪೨ ॥

[ಬ್ರಾಹ್ಮಣೋಽಸ್ಯಮುಖಮಾಸೀತ್ ಬಾಹೂರಾಜನ್ಯಃ ಕೃತಃ ಊರೂತದಸ್ಯ ಯದ್ವೈಶ್ಯಃ ಪದ್ಭ್ಯಾಂಶೂದ್ರೋ ಅಜಾಯತ ಚಂದ್ರಮಾ ಮನಸೋಜಾತಃ ಚಕ್ಷೋಃ ಸೂರ್ಯೋಅಜಾಯತ ಮುಖಾತ್ ಇಂದ್ರಶ್ಚಾಗ್ನಿಶ್ಚ ಪ್ರಾಣಾತ್ ವಾಯು ರಜಾಯತ— ನಾಭ್ಯಾ ಆಸೀದಂತರಿಕ್ಷಂ-ಶೀರ್ಷ್ಣೋ ದ್ಯೌಸ್ಸಮವರ್ತತ ಪದ್ಭ್ಯಾಂ ಭೂಮಿಃದಿಶಃ ಶ್ರೋತ್ರಾತ್-ಇತ್ಯಾದಿ ಪುರುಷಸೂಕ್ತ ಮಂತ್ರಗಳನ್ನು ಗಮನಿಸಬೇಕು.]

೪೦. ಒಂದು ಸಮಯದಲ್ಲಿ ನಾರಾಯಣನೆಂಬ ಈ ಪುರುಷನ ನಾಭಿಯಲ್ಲಿ ಪದ್ಮವು ಜನಿಸುವುದು. ಈ ಪದ್ಮದೊಳಗೆ ಚತುರ್ಮುಖ ಬ್ರಹ್ಮನು ಹುಟ್ಟಿ ವೃದ್ಧಿ ಹೊಂದುವನು. ಅದು ಕಾರಣವೇ ಇವನಿಗೆ ಪದ್ಮಜನೆಂಬ ಹೆಸರುಂಟಾಗಿರುವುದು.

೪೧. ಅಯ್ಯ ರಾಮಚಂದ್ರ, ಪರಮಾರ್ಥ ಸತ್ಯವಾದ ನಿರ್ವಿಕಾರಿಯಾದ ಬ್ರಹ್ಮವು ತನಗೆ ತಾನೇ ನಾನಾ ನಾಮರೂಪಗಳುಳ್ಳದ್ದಾಗಿ ಜನಿಸುವುದು ಎಂಬುದು ಯಾವುದೋ ಇದೇ ಮಾಯೆಯು ಇದು ಸ್ವಪ್ನಸದೃಶವಾದ ಭ್ರಾಂತಿಯು ಇದು ಮಿಥ್ಯಾಭೂತವಾಗಿಯೇ ಒಂದು ಚಕ್ರದಂತೆ ರಚಿತವಾಗಿ ಸದಾ ಪರಿವರ್ತಿತವಾಗಿರುವುದು. [ಗಿರ್ರನೆ ಸುತ್ತುತ್ತಿರುವುದು.] ಇದು ಮನೋರಥದಿಂದ ಕಲ್ಪಿತವಾದ ರಾಜ್ಯವೈಭವದಂತೆ ಅತಿ ಚಂಚಲವಾದುದು ಮತ್ತು ನೀರಿನ ಸುಳಿಯಂತೆ ಸುಂದರವಾಗಿ ಕಾಣಿಸತಕ್ಕದಾಗಿರುವುದು.

೪೨. ಹೀಗೆ ಸದ್ರೂಪನಾದ ಪುರುಷನ ನಾಭಿಕಮಲದಲ್ಲಿ ಜನ್ಮವನ್ನು ಪಡೆಯುವುದು ಅಸಂಭವವೆಂದು ಚೆನ್ನಾಗಿ ಗೊತ್ತಾಗಿಬಿಟ್ಟರೆ ಬಳಿಕ, ಅಸಂಗನಾಗಿಯೂ ಅದ್ವಿತೀಯನಾಗಿಯೂ ಇರುವ ಚೈತನ್ಯದಲ್ಲಿ ಯಾವ ದ್ವಿತೀಯವಾದ

ಕದಾಚಿದಂಬರೇ ಶುದ್ಧೇ ಮನಸ್ತತ್ವಾನುರಂಜನಾತ್ ।
ಸೌವರ್ಣಂ ಬ್ರಹ್ಮಗರ್ಭಂ ಚ ಸ್ವಯಮಂಡಂ ಪ್ರವರ್ತತೇ ॥ ೪೩ ॥

ಕದಾಚಿದೇವ ಪುರುಷೋ ವೀರ್ಯಂ ಸೃಜತಿ ವಾರಿಣಿ ।
ತಸ್ಮಾತ್ಪ್ರಜಾಯತೇ ಪದ್ಮಂ ಬ್ರಹ್ಮಾಂಡಮಥವಾ ಮಹತ್ ॥ ೪೪ ॥

ತಸ್ಮಾತ್ಪ್ರಜಾಯತೇ ಬ್ರಹ್ಮಾ ಕದಾಚಿದ್ಭಾಸ್ಕರೋಽಸ್ಯಸೌ ।
ಕದಾಚಿದ್ವರುಣೋ ಬ್ರಹ್ಮಾ ಕದಾಚಿದ್ವಾಯುರಂಡಜಃ ॥ ೪೫ ॥

ಜಗದ್ರೂಪವು ಹೇಗೆ ತಾನೇ ಯಾವಾಗ ಸಂಭವಿಸುವುದು ? ನೀನೇ ಹೇಳು. (ನೋಡೋಣ) ಹೀಗಿರುವಲ್ಲಿ ನಿನ್ನ ಈಗಿನ ಪ್ರಶ್ನೆಯು "ಬಾಲಕರ ಮನಸ್ಸಿಗೆ ತೋರುವ ರಾಜ್ಯಭ್ರಾಂತಿಯು ಎಲ್ಲಿಂದ ಬಂದಿತು ?" ಎಂಬ ಪ್ರಶ್ನೆಗೆ ಸಮಾನವಾಗಿಯೇ ಇರುವುದಲ್ಲವೆ ?

೪೩. ಮನಸ್ಸು ಅಚಿಂತ್ಯ ರಚನಾ ಶಕ್ತಿಯುತವಾಗಿರುವ ಕಾರಣ ಈ ಪದ್ಮಜೋತ್ಪತ್ತಿಯಂತೆಯೇ ಒಂದಾನೊಂದು ಕಾಲದಲ್ಲಿ ಶುದ್ಧವಾದ ಆಕಾಶದೊಳಗೆ ಮನಸ್ತತ್ವದ ಆ ವೇಶದ ದೆಸೆಯಿಂದ ಬ್ರಹ್ಮನನ್ನು ಗರ್ಭದಲ್ಲಿ ಧರಿಸಿರುವ ಸುವರ್ಣಮಯ ಅಂಡವು ತಾನಾಗಿ ಪ್ರವರ್ತಿಸುವುದು. ಅದರಿಂದ ಚತುರ್ಮುಖ ಬ್ರಹ್ಮನೂ ಉದಯಿಸುವನು.

೪೪. ಹೀಗೆಯೇ, ಮತ್ತೊಂದು ಕಾಲದಲ್ಲಿ ಪುರುಷರು ಜಲದಲ್ಲಿ ವೀರ್ಯವನ್ನು ಬಿಡುವನು. (ಸೃಜಿಸುವನು) ಅದರ ದೆಸೆಯಿಂದ ಭೂಪದ್ಮವಾಗಲಿ ಅಥವಾ ಮಹಾ ಬ್ರಹ್ಮಾಂಡವಾಗಲೀ ಉದಯಹೊಂದುವುದು.

೪೫. ಬೇರೊಂದು ಸಮಯದಲ್ಲಿ ಅದರ ದೆಸೆಯಿಂದ ಬ್ರಹ್ಮನು ಜನಿಸುವನು. ಇವನು ಹಿಂದಣಕಲ್ಪದಲ್ಲಿ ಸೂರ್ಯನ ಅಧಿಕಾರದಲ್ಲಿದ್ದವನು. ಇದರಂತೆಯೇ ಒಂದಾನೊಂದು ಕಾಲದಲ್ಲಿ ವರುಣನಾಗಿದ್ದವನು ಈಗ ಬ್ರಹ್ಮನಾಗುವನು. ಇನ್ನೊಂದು ಸಮಯದಲ್ಲಿ ವಾಯುವು ಆ ಅಂತದಿಂದ ಜನಿಸುವುದು.

(ಇತರ ದೇವತೆಗಳೂ ಹೀಗೆಯೇ ಉದಯಿಸುವರೆಂದು ತಿಳಿಯಬೇಕು.)

ಏವಮಂತರ್ವಿಹೀನಾಸು ವಿಚಿತ್ರಾಸ್ವಿಹ ಸೃಷ್ಟಿಷು ।
ವಿಚಿತ್ರೋತ್ಪತ್ತಯೋ ರಾಮ ಬ್ರಹ್ಮಣೋ ವಿವಿಧಾ ಗತಾಃ　　॥ ೪೬ ॥

ನಿದರ್ಶನಾರ್ಥಂ ಸೃಷ್ಟೇಸ್ತು ಮಯೈಕಸ್ಯ ಪ್ರಜಾಪತೇಃ ।
ಭವತೇ ಕಥಿತೋತ್ಪತ್ತಿರ್ನ ತತ್ರ ನಿಯಮಃ ಕ್ವಚಿತ್　　॥ ೪೭ ॥

ಮನೋವಿಜೃಂಭಣಮಿದಂ ಸಂಸಾರ ಇತಿ ಸಂಮತಮ್ ।
ಸಂಬೋಧನಾಯ ಭವತಃ ಸೃಷ್ಟಿಕ್ರಮ ಉದಾಹೃತಃ　　॥ ೪೮ ॥

ಸಾತ್ವಿಕೀಪ್ರಭೃತಯೋ ಯಾಶ್ಚ ಜಾತಯಶ್ಚೇತ್ಥಮಾಗತಾಃ ।
ಇತಿ ತೇ ಕಥನಾಯೈಷ ಸೃಷ್ಟಿಕ್ರಮ ಉದಾಹೃತಃ　　॥ ೪೯ ॥

---

೪೬. ಅಯ್ಯ ರಾಮ, ಹೀಗೆ ಅತಿ ವಿಚಿತ್ರಗಳಾದ ನಾನಾ ಸೃಷ್ಟಿಗಳು ಪ್ರತ್ಯಗಾತ್ಮ (ಪರಬ್ರಹ್ಮ)ನೊಳಗೆ ಅಸತ್ಯಗಳೇ ಆಗಿರುವಾಗ (ಇಲ್ಲದಿರುವಾಗ) ಪ್ರಕೃತ ಈ ಹಿರಣ್ಯಗರ್ಭನ (ಚತುರ್ಮುಖ) ವಿವಿಧ ವಿಚಿತ್ರಗಳಾದ ಉತ್ಪತ್ತಿಗಳು ಎಷ್ಟೋ ಅಸಂಖ್ಯಾಂಕವಾಗಿ ಕಳೆದು ಹೋಗಿವೆ.

೪೭. ಸೃಷ್ಟಿಕ್ರಮದ ನಿದರ್ಶನಕ್ಕೋಸ್ಕರವಾಗಿ ನಾನು ಈಗ ನಿನಗೆ ಒಬ್ಬ ಪ್ರಜಾಪತಿಯ (ಬ್ರಹ್ಮ) ಉತ್ಪತ್ತಿಯನ್ನು ಹೇಳಿರುವೆನು. ಅಷ್ಟೇ ಹೊರತು ಆ ವಿಷಯದಲ್ಲಿ ಯಾವದೊಂದು ಬಗೆಯ ನಿಯಮವೂ ಎಲ್ಲಿಯೂ ಎಂದಿಗೂ ಇಲ್ಲವೇ ಇಲ್ಲ.

೪೮. ಈ ಮನಸ್ಸು ವಿಲಾಸಗೊಂಡು ವಿಜೃಂಭಿಸುವುದೇ ಸಂಸಾರವೆನ್ನಿಸುವುದು ಎಂಬುದು ಸಕಲ ಶಾಸ್ತ್ರ ಸಮ್ಮತವಾದ ಸಿದ್ಧಾಂತವು. ಆದರೆ ನಿನಗೆ ಚೆನ್ನಾಗಿ ಬೋಧವುಂಟಾಗುವುದಕ್ಕಾಗಿಯೇ ಈಗ ಈ ಸೃಷ್ಟಿಯ ಕ್ರಮವನ್ನು ನಾನು ವಿವರಿಸಿ ಹೇಳಿರುವೆನು.

೪೯. ಸಾತ್ವಿಕೀಯೇ ಮೊದಲಾದ ಯಾವ ಯಾವ ಜೀವಜಾತಿಗಳಿರುವುವೋ ಅವು ಯಾವ ಯಾವ ರೀತಿಯಾಗಿ ಬಂದುವೋ ಅದನ್ನು ನಿನಗೆ ತಿಳಿಯುವುದಕ್ಕೋಸ್ಕರವಾಗಿಯೇ ನಾನು ಈಗ ಈ ಸೃಷ್ಟಿಕ್ರಮವನ್ನು ಹೇಳಿರುವೆನು.

ಪುನಃ ಸೃಷ್ಟಿಃ ಪುನರ್ನಾಶಃ ಪುನರ್ದುಃಖಂ ಪುನಸ್ಸುಖಮ್ ।
ಪುನರಜ್ಞಃ ಪುನಸ್ತಜ್ಜ್ಞೋ ಬಂಧಮೋಕ್ಷದೃಶಃ ಪುನಃ ॥ ೫೦ ॥

ಪುನಃ ಸೃಷ್ಟಿಕರಾವೀತವೀತಸ್ನೇಹದೃಶಃ ಪುನಃ ।
ದೀಪಾ ಇವ ಕೃತಾಲೋಕಾಃ ಪ್ರಶಾಮ್ಯಂತ್ಯುದ್ಭವಂತಿ ಚ ॥ ೫೧ ॥

ದೇಹೋತ್ಪತ್ತೌ ವಿನಾಶೇ ಚ ದೀಪಾನಾಂ ಬ್ರಹ್ಮಣಾಮಪಿ ।
ಕಾಲೇನಾಧಿಕತಾಂ ತ್ಯಕ್ತ್ವಾ ನಾಶೇ ಭೇದೋ ನ ಕಶ್ಚನ ॥ ೫೨ ॥

೫೦. ಪುನಃ ಪುನಃ ಸೃಷ್ಟಿಯಾಗುತ್ತಲಿರುವುದು. ಸೃಷ್ಟವಾದ ಹಾಗೆಲ್ಲ ಅದದು ಮತ್ತೆ ಮತ್ತೆ ನಾಶಹೊಂದುತ್ತಲೂ ಇರುವುದು. ಹೀಗೆಯೇ ದುಃಖಗಳೂ ಸುಖಗಳೂ ಪುನಃ ಪುನಃ ಪರಂಪರೆಯಾಗಿ ಬರುತ್ತಲೇ ಇರುವುವು. ಮನುಷ್ಯನು ಪುನಃ ಪುನಃ ಅಜ್ಞಾನಿಯಾಗಿಯೂ ಮತ್ತೆ ಮತ್ತೆ ಜ್ಞಾನಿಯಾಗಿಯೂ ಆಗುವನು. ಬಂಧಮೋಕ್ಷಗಳೆಂಬ ದೃಷ್ಟಿಗಳೂ ಪುನಃ ಪುನಃ ಉಂಟಾಗುತ್ತಿರುವುವು.

(ಮೋಕ್ಷದೃಷ್ಟಿಗಳು—ಮೋಕ್ಷವು ಉಂಟು ಎಂಬ ಕಲ್ಪನೆಗಳು.)

೫೧. ಸೃಷ್ಟಿ ಕರ್ತೃಗಳು ಪುನಃಪುನಃ ಭೂತ, ಭವಿಷ್ಯತ್, ವರ್ತಮಾನಗಳಾದ ತಮಗೆ ಪ್ರಿಯತಮವಾದ ಸೃಷ್ಟಿಗಳಲ್ಲಿ ಸ್ನೇಹಪೂರ್ಣವಾದ ದೃಷ್ಟಿಯುಳ್ಳವರಾಗಿ, ದೀಪಗಳಂತೆ ಪ್ರಕಾಶವನ್ನುಂಟುಮಾಡುತ್ತ, ಮತ್ತೆಮತ್ತೆ ಉದ್ಭವಿಸುತ್ತಲೂ, ಶಾಂತರಾಗುತ್ತಲೂ ಇರುವರು.

[ವೀತಾಃ—ಅತೀತ (ಭೂತಕಾಲಿಕ) ಪ್ರಿಯಗಳು. ಅವೀತಾಃ—ವರ್ತಮಾನ ಮತ್ತು ಆಗಾಮಿ ಪ್ರಿಯಗಳು.]

೫೨. ದೀಪಗಳಿಗೂ ಚತುರ್ಮುಖ ಬ್ರಹ್ಮರುಗಳಿಗೂ ಕೂಡ ದೇಹಗಳು ಉತ್ಪತ್ತಿಯಾಗುವ ವಿಷಯದಲ್ಲಿಯೂ ಅವು ನಾಶಹೊಂದುವ ವಿಷಯದಲ್ಲಿಯೂ ಕೂಡ ಯಾವೊಂದು ಭೇದವೂ ಇಲ್ಲ. ಕಾಲದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವು ಕಾಣುವುದು. ದೀಪಗಳು ಸ್ವಲ್ಪ ಕಾಲದವರೆವಿಗೆ ಮಾತ್ರ ಇರತಕ್ಕುವುಗಳು. ಬ್ರಹ್ಮರುಗಳಾದರೋ ಅದಕ್ಕಿಂತಲೂ ಅಧಿಕವಾದ ಚಿರಕಾಲಸ್ಥಾಯಿಗಳಾಗಿರುವರು.

ದೇಹೋತ್ಪತ್ತೌ ವಿನಾಶೇಚ ಎಂಬುದಾಗಿಯೂ ನಾಶೇಭೇದೋನಕಶ್ಚನ ಎಂಬುದಾಗಿಯೂ ಶ್ಲೋಕದಲ್ಲಿ ಎರಡು ಸಲ "ನಾಶ" ಎಂಬ ಪದವು ಬಂದಿರುವು

ಪುನಃ ಕೃತಂ ಪುನಸ್ತ್ರೇತಾ ಪುನಃ ಸದ್ವಾಪರಃ ಕಲಿಃ ।
ಪುನರಾವರ್ತತೇ ಸರ್ವಂ ಚಕ್ರಾವರ್ತತಯಾ ಜಗತ್ ॥ ೫೩ ॥

ಪುನರ್ಮನ್ವಂತರಾರಂಭಾಃ ಪುನಃ ಕಲ್ಪಪರಂಪರಾಃ ।
ಪುನಃ ಪುನಃ ಕಾರ್ಯದಶಾಃ ಪ್ರಾತಃ ಪ್ರಾತರಹೋ ಯಥಾ ॥ ೫೪ ॥

ಲೋಕಾಲೋಕಕಲಾಕಾಲಕಲನಾಕಲಿತಾಂತರಮ್ ।
ಪುನಃ ಪುನರಿದಂ ಸರ್ವಂ ನ ಕಿಂಚನ ಪುನಃಪುನಃ ॥ ೫೫ ॥

ದರಿಂದ ಪುನರುಕ್ತಿಯೆಂದು ಭ್ರಮಿಸಬಾರದು. ಉತ್ಪತ್ತಿ ವಿನಾಶಗಳು ಎಂಬುದಕ್ಕೆ ಆದ್ಯಂತಕ್ಷಣಿಕಭಾವ ವಿಕಾರಗಳು ಎಂದರ್ಥ ಕೊನೆಯ ನಾಶ ಎಂಬ ಪದಕ್ಕೆ ಆದ್ಯಂತಗಳಿಲ್ಲದ ಪೂರ್ವೋತ್ತರ ಕಾಲಗಳೆರಡರಲ್ಲಿಯೂ ಸುತರಾಂ ಇಲ್ಲದಿರುವಿಕೆ ಎಂದರ್ಥ.

೫೩. ಕೃತತ್ರೇತಾದ್ವಾಪರ ಕಲಿಗಳೆಂಬ ಚತುರ್ಯುಗಗಳು ಒಂದಾದ ಮೇಲೆ ಮತ್ತೊಂದರಂತೆ ಕ್ರಮವಾಗಿ ಪುನಃ ಪುನಃ ಎಷ್ಟೋಸಲ ಬರುತ್ತಲೂ ಕಳೆದು ಹೋಗುತ್ತಲೂ ಇರುವುವು. ಹೀಗೆ ಸಮಸ್ತ ಜಗತ್ತೂ ಚಕ್ರವು ವೇಗದಿಂದ ಗರ್ರನೆ ಸುತ್ತುತ್ತಿರುವಂತೆಯೇ ಪುನಃ ಪುನಃ ಸುತ್ತುತ್ತಲಿರುವುದು.

[ಕಾಲಕ್ರಮೇಣ ಜಗತಃ ಪರಿವರ್ತಮಾನಾ ಚಕ್ರಾರಪಂಕ್ತಿರಿವಗಚ್ಛತಿ ಭಾಗ್ಯ ಪಂಕ್ತಿಃ ಎಂದು ಭಾಸಮಹಾಕವಿಯು ಸ್ವಪ್ನವಾಸವದತ್ತ ನಾಟಕದಲ್ಲಿ ಹೇಳಿರುವನು.]

೫೪. ಪ್ರತಿಯೊಂದು ಪ್ರಾತಃಕಾಲದಲ್ಲಿಯೂ ಮತ್ತೆ ಮತ್ತೆ ಹಗಲು ಹೇಗೆ ಆರಂಭವಾಗಿ ಪ್ರವರ್ತಿಸುವುದೋ ಹಾಗೆ ಪುನಃ ಪುನಃ ಮನ್ವಂತರಗಳು ಕ್ರಮವಾಗಿ ಆರಂಭವಾಗುವುವು. ಪುನಃ ಪುನಃ ಕಲ್ಪಪರಂಪರೆಗಳು ಉಂಟಾಗುವುವು. ಪುನಃ ಪುನಃ ಆಯಾ ಕಾಲಾನುಸಾರಿಗಳಾದ ಕಾರ್ಯದಶೆಗಳು ಯಥಾಕ್ರಮವಾಗಿ ಪ್ರವರ್ತಿಸುವುವು.

೫೫. ಹಗಲು, ರಾತ್ರಿ, ಕಲೆ ಮುಂತಾದ ಕಾಲ ಭೇದಗಳಿಂದ ವ್ಯಾಪ್ತವಾದ ಪ್ರಾಣಿಗಳ ಆಯುಸ್ಸಿನ ಕಾಲ ಕಲ್ಪನೆಗಳಿಂದ ಪರಿಚ್ಛಿನ್ನಗಳಾದ (ಒಂದು ಮಿತಿಗೆ

ಅನಾಹತೇ ಪ್ರತಪ್ತೇಽಯಃಪಿಂಡೇಽನಲಕಣಾ ಇವ ।
ಇಮೇ ಭಾವಾಃ ಸ್ಥಿತಾ ನಿತ್ಯಂ ಚಿದಾಕಾಶೇ ಸ್ವಭಾವತಃ ॥ ೫೬ ॥

ಕದಾಚಿದನಭಿವ್ಯಕ್ತಂ ಕದಾಚಿದ್ವ್ಯಕ್ತಿಮಾಗತಮ್ ।
ಇದಮಸ್ತಿ ಪರೇ ತತ್ವೇ ಸರ್ವಂ ವೃಕ್ಷ ಇವಾರ್ತವಮ್ ॥ ೫೭ ॥

ಚಿತ್ಸ್ಪಂದ ಏವ ಸರ್ವಾತ್ಮಾ ಸರ್ವದೈವೇದೃಶಾಕೃತಿಃ ।
ಯದಸ್ಮಾಜ್ಜಾಯತೇ ಸರ್ಗೋ ದ್ವಿಂದುತ್ವಮಿವ ಲೋಚನಾತ್ ॥ ೫೮ ॥

ಒಳಗಾದ) ಸರ್ವಪದಾರ್ಥಗಳಿಂದೊಡಗೂಡಿದ ಈ ಸಮಸ್ತ ಜಗತ್ತೂ ಪುನಃ ಪುನಃ ಪರಿವರ್ತಿತವಾಗಿಯೇ ಇರುವುದು. ಹೀಗೆ ಪುನಃ ಪುನಃ ಪರಿವರ್ತಿತವಾಗದಿರುವ ವಸ್ತುವೊಂದೂ ಇಲ್ಲವೇ ಇಲ್ಲ.

(ಒಂದು ಮುಹೂರ್ತಕಾಲಕ್ಕೆ ಹನ್ನೆರಡು ಕ್ಷಣಗಳು. ಒಂದು ಕ್ಷಣದ ಮೂವತ್ತನೆಯ ಒಂದು ಭಾಗದಷ್ಟು ಕಾಲವು ಕಲಾಎನ್ನಿಸುವುದು. ಒಂದು ಕಲೆಗೆ ಮೂವತ್ತು ಕಾಷ್ಠೆಗಳು ಹದಿನೆಂಟು ನಿಮೇಷಗಳಷ್ಟು ಕಾಲಕ್ಕೆ ಒಂದು ಕಾಷ್ಠಾ ಎಂದು ಹೆಸರು. ಹೀಗೆ ಕಾಲ ಭೇದ ಇರುವುದು.)

೫೬. ಕಲ್ಲು ಮುಂತಾದವುಗಳ ಹೊಡೆತಕ್ಕೆ ಸಿಕ್ಕದಿರುವ ಚೆನ್ನಾಗಿ ಕೆಂಪಗೆ ಬೆಂಕಿಯಲ್ಲಿ ಕಾದ, ಕಬ್ಬಿಣದ ಉಂಡೆಯಲ್ಲಿ ಅಗ್ನಿಕಣಗಳು ತುಂಬಿಕೊಂಡಿರುವಂತೆ ಈ ಸಕಲ ಪದಾರ್ಥಗಳೂ ಮಾಯಾಬೀಜ ಸ್ವಭಾವದ ದೆಸೆಯಿಂದ ಚಿದಾಕಾಶದಲ್ಲಿ ಸದಾ ಎಡಬಿಡದೆ ತುಂಬಿರುವುವು.

೫೭. ಆಯಾ ಋತು ಧರ್ಮಾನುಸಾರವಾಗಿ ಮುಂದೆ ಆವಿರ್ಭವಿಸುವ ಪುಷ್ಪ ಫಲಾದಿಗಳು ವೃಕ್ಷದಲ್ಲಿ ಅಡಕವಾಗಿರುವಂತೆ ಈ ಸಕಲ ಬ್ರಹ್ಮಾಂಡವೂ ಒಂದು ಸಲ ಅವ್ಯಕ್ತವಾಗಿಯೂ ಇನ್ನೊಂದು ಸಲ ವ್ಯಕ್ತವಾಗಿಯೂ ಪರತತ್ತ್ವವಾದ ಪರಬ್ರಹ್ಮದಲ್ಲಿ ಇರುವುದು.

೫೮. ಚಿತ್ತಿನ ವಿವರ್ತವೇ ಹೀಗೆ ಸರ್ವಸ್ವರೂಪವಾಗಿರುವುದು. ಅದು ಸರ್ವದಾ ಈ ಬಗೆಯಾದ ಆಕಾರವುಳ್ಳದ್ದಾಗಿರುವುದು. "ಇದರ ದೆಸೆಯಿಂದ ಬ್ರಹ್ಮಾಂಡ ಸೃಷ್ಟಿಯು ಆಗುವುದು" ಎಂಬುದು ಯಾವುದುಂಟೋ ಅದು

ಚಿತಃ ಸರ್ವಾಃ ಸಮಾಯಾಂತಿ ಸಂತತಾಃ ಸೃಷ್ಟಿದೃಷ್ಟಯಃ ।
ತತ್ಸ್ಥಾ ಏವಾಪ್ಯತತ್ಸ್ಥಾಭಾಶ್ಚಂದ್ರಾದಿವ ಮರೀಚಯಃ ॥ ೫೯ ॥

ನ ಕದಾಚನ ಸಂಸಾರಃ ಕಿಲಾಯಂ ರಾಮ ಸತ್ಸದಾ ।
ಸರ್ವಶಕ್ತಾವಸಂಸಾರಶಕ್ತಿತಾ ವಿದ್ಯತೇ ಯತಃ ॥ ೬೦ ॥

ನಚೈವೇದಂ ಕದಾಚಿತ್ತು ಸಾಧೋ ಜಗದನೀದೃಶಮ್ ।
ಸರ್ವಶಕ್ತೌ ಹಿ ಸಂಸಾರಶಕ್ತಿತಾ ವಿದ್ಯತೇ ಯತಃ ॥ ೬೧ ॥

ಮಹಾಕಲ್ಪಾವಧಿಃ ಕಾಲೇನ ಸಂಸಾರಿತಯೋದ್ಧಯಾ ।
ನ ಭವಿಷ್ಯತಿ ಸಂಸಾರ ಇದಾನೀಮಿತಿ ಯುಜ್ಯತೇ ॥ ೬೨ ॥

ನೇತ್ರದೋಷದಿಂದ ಚಂದ್ರದ್ವಯಗಳು ಕಾಣುವಂತೆ ಕೇವಲ ಭ್ರಮೆಯಿಂದೇ ತಿಳಿಯಬೇಕು.

೫೯. ಕಿರಣಗಳು ಚಂದ್ರನ ದೆಸೆಯಿಂದ ಹೇಗೋ ಹಾಗೆ ಚಿತ್ತಿನೊಳಗೆಯೇ ಇದ್ದರೂ ಕೂಡ ಅದರೊಳಗೆ ಇಲ್ಲದಿರುವಂತೆ ತೋರುತ್ತಿರುವ ಈ ಸಕಲ ಸೃಷ್ಟಿ ದೃಷ್ಟಿಗಳೂ ಅನವರತವಾಗಿ ಚಿತ್ತಿನ ದೆಸೆಯಿಂದಲೇ ಉದ್ಭವಿಸಿ ಹೊರಕ್ಕೆ ಬರುತ್ತಲಿರುವುವು.

೬೦. ಅಯ್ಯ ರಾಮ, ಈ ಸಂಸಾರವೆಂಬುದು ಎಂದಿಗೂ ಸರ್ವದಾ ಸತ್ಯವಾದುದಲ್ಲವೇ ಅಲ್ಲ. ಏಕೆಂದರೆ ಸರ್ವಶಕ್ತಿಯುಕ್ತನಾಗಿರುವ ಆ ಪರಬ್ರಹ್ಮ ತತ್ತ್ವದಲ್ಲಿ ಪರಮಾರ್ಥತಃ (ಅಸಂಗಾದ್ವಿತೀಯ ಸ್ವಭಾವರೂಪ) ಅಸಂಸಾರಿ ಸ್ವಭಾವವೇ. ಸರ್ವದಾ ನೆಲೆಸಿರುವುದು.

[ಪರಬ್ರಹ್ಮವು ಅದ್ವಿತೀಯನೂ ಅಸಂಗನೂ ಆಗಿರುವುದರಿಂದ ಸಂಸಾರಾಭಾವವೇ ಪರಬ್ರಹ್ಮದ ಸ್ವಭಾವವೆಂದರ್ಥ.]

೬೧. ಎಲೈ ಸಾಧುವೇ, ಈ ಜಗತ್ತು ಈ ಪ್ರಕಾರವಾಗಿ ಇರತಕ್ಕುದಲ್ಲವೆಂದೂ ಎಂದಿಗೂ ಹೇಳಲಾಗದು. ಏಕೆಂದರೆ ಸರ್ವಶಕ್ತಿಯುತನಾದ ಪರಮಾತ್ಮನಲ್ಲಿ ಆಪಾತತಃ ಜಗದ್ಬೀಜ ಮರ್ಯಾದೆಯೆಂಬ ಸಂಸಾರ ಶಕ್ತಿಯೂ ಸ್ಫುರಿಸುತ್ತಿರುವುದು.

೬೨. ಹೀಗೆ ಅಧಿಷ್ಠಾನ ಚೈತನ್ಯದಿಂದ ಉದ್ದೀಪ್ತವಾದ ಸಂಸಾರಿ ಸ್ವಭಾವ

ಜ್ಞದೃಷ್ಟ್ಯಾ ಸರ್ವಮೇವೇದಂ ಬ್ರಹ್ಮೈವೇತಿ ಮಹಾಮತೇ ।
ನಾಸ್ತಿ ಸಂಸಾರ ಇತ್ಯೇತದುಪಪದ್ಯತ ಏವ ಚ ॥ ೬೩ ॥

ಅಜ್ಞದೃಷ್ಟ್ಯಾ ತ್ವವಿಚ್ಛಿನ್ನಸಂಸಾರತ್ವಾದನಾರತಮ್ ।
ನಿತ್ಯಾ ಸಂಸಾರಮಾಯೇಯಂ ಮಿಥ್ಯಾಪೀಹೋಪಪದ್ಯತೇ ॥ ೬೪ ॥

ಪುನಃಪುನಶ್ಚ ಭಾವಿತ್ವಾನ್ನ ಕದಾಚಿದನೀದೃಶಮ್ ।
ಜಗದಿತ್ಯೇತದಿತ್ಯುಕ್ತಂ ನ ಮೃಷಾ ರಘುನಂದನ ॥ ೬೫ ॥

ಅನಾರತಮತದ್ರೂಪಾ ದಿಶೋ ದೃಷ್ಟ್ವಾ ವಿನಶ್ವರಾಃ ।
ವಿನಾಶೀದಂ ಜಗತ್ಸರ್ವಮಿತಿ ಕಿಂ ನೋಪಪದ್ಯತೇ ॥ ೬೬ ॥

ದಿಂದಲೂ ಕಾಲದಿಂದಲೂ ಉಪಲಕ್ಷಿತವಾದ ಈ ಸಂಸಾರವು ವೈಜ್ಞಾನಿಕ ಮೋಕ್ಷವೆಂಬ ಮಹಾಪ್ರಳಯಕಾಲ ಪರ್ಯಂತವೂ ಇರುವುದು. ಅಲ್ಲಿಂದ ಮುಂದೆ ಇರುವುದಿಲ್ಲ ಎಂಬ ವ್ಯವಹಾರವು ಈಗ ಯುಕ್ತವಾಗಿರುವುದು.

೬೩. ಅಯ್ಯಾ ಮಹಾಬುದ್ಧಿಶಾಲಿಯೇ, ತತ್ತ್ವಜ್ಞದೃಷ್ಟಿಯಿಂದ ಈ ದೃಶ್ಯವೆಲ್ಲವೂ ಕೂಡ ಬ್ರಹ್ಮವೇ ಆಗಿರುವ ಕಾರಣ ಸಂಸಾರವೆಂಬುದು ಇಲ್ಲವೇ ಇಲ್ಲವೆಂಬ ವ್ಯವಹಾರವು ಉಪಪನ್ನವೇ ಆಗಿರುವುದು.

೬೪. ಅಜ್ಞಾನಿಯ ದೃಷ್ಟಿಯಲ್ಲಿಯಾದರೋ ಸಂತತವೂ (ಅವಿಶ್ರಾಂತವಾಗಿ) ಅವಿಚ್ಛಿನ್ನವಾಗಿ ಸಂಸಾರವು ಪ್ರವರ್ತಿಸುತ್ತಲೇ ಇರುವ ಕಾರಣ ಈ ಸಂಸಾರ ಮಾಯೆಯು ಮಿಥ್ಯೆಯಾದರೂ ಕೂಡ ನಿತ್ಯವಾಗಿರುವುದೆಂಬ ವಾದವೂ ಉಪಪನ್ನವಾಗುವುದು.

೬೫. ಅಯ್ಯ ರಘುನಂದನ, ಪ್ರವಾಹರೂಪವಾದ ಈ ಜಗತ್ತು ಪುನಃ ಪುನಃ ಸಂಭವಿಸುತ್ತಿರುವ ಕಾರಣದಿಂದಲೇ "ಈ ಜಗತ್ತು ಈ ಪ್ರಕಾರವಾಗಿ ಇರತಕ್ಕುದಲ್ಲವೆಂದೂ ಹೇಳಲಾಗದು" (ನಕದಾಚಿದನೀದೃಶಂ ಜಗತ್) ಎಂಬೀ ದೃಷ್ಟಿಯಿಂದ ಪೂರ್ವ ಮೀಮಾಂಸಕರು. ಜಗತ್ತನ್ನು ನಿತ್ಯವೆಂದು ಹೇಳುವ ಮಾತೂ (ವಾದವೂ) ಅಸತ್ಯವಾಗುವುದಿಲ್ಲ.

೬೬. ದಿಕ್ಕು ದಿಕ್ಕುಗಳಲ್ಲಿ ಉದಯಿಸುವ ವಿದ್ಯುತ್ (ಮಿಂಚು)

ಸರ್ವತ್ರೋದಿತಚಂದ್ರಾರ್ಕಾ ದಿಶೋ ದೃಷ್ಟಾಃ ಸ್ಥಿರಾಚಲಾಃ ।
ಅವಿನಾಶಿ ಜಗತ್ಸರ್ವಮಿತ್ಯಪ್ಯವಿತಥೋಪಮಮ್ ॥ ೬೭ ॥

ನ ತದಸ್ತಿ ನ ಯತ್ತಸ್ಮಿನ್ನೇಕಸ್ಮಿನ್ವಿತತಾತ್ಮನಿ ।
ಸಂಕಲ್ಪಕಲನಾಜಾಲಮನಾಖ್ಯೇನೋಪಪದ್ಯತೇ ॥ ೬೮ ॥

ಪುನಃ ಪುನರಿದಂ ಸರ್ವಂ ಪುನರ್ಮರಣಜನ್ಮನೀ ।
ಪುನಃ ಸುಖಂ ಪುನರ್ದುಃಖಂ ಪುನಃ ಕರಣಕರ್ಮಣೀ ॥ ೬೯ ॥

ಮೊದಲಾದವುಗಳು ಸರ್ವದಾ ಒಂದು ಕ್ಷಣಕಾಲದೊಳಗಾಗಿ ಧ್ವಂಸವನ್ನು ಹೊಂದುವ ಸ್ವಭಾವಗಳುಳ್ಳವುಗಳಾಗಿಯೂ ನಶ್ವರಗಳಾಗಿಯೂ ಹೇಗೆ ಕಾಣುತ್ತಿರುವುವೋ ಹಾಗೆಯೇ ಈ ಸಕಲ ಜಗತ್ತು ಕ್ಷಣಿಕವಾದುದು ವಿನಶ್ವರವಾದುದು ಎಂದು ಕ್ಷಣಿಕವಾದಿಗಳಾದ ಬೌದ್ಧರು ತಮ್ಮ ಶಾಸ್ತ್ರ ಪ್ರಕ್ರಿಯೆಯನ್ನು ನಿರ್ವಹಿಸುವುದಕ್ಕಾಗಿ ಕಲ್ಪಿಸಿಕೊಂಡಿರುವ ವ್ಯವಹಾರವೂ ಕೂಡ ಅಜ್ಞರಾದ ಅವರ ದೃಷ್ಟಿಯಿಂದ ಏಕೆ ಉಪಪನ್ನವಾಗುವುದಿಲ್ಲ ?

೬೭. ಹೀಗೆಯೇ ಚಂದ್ರಸೂರ್ಯಾದಿಗಳ ವಿಶೇಷ ಪ್ರಕಾಶದಿಂದ ಬೆಳಗುವ ದಿಕ್ಕುಗಳಲ್ಲಿ ಸರ್ವತ್ರ ಪರ್ವತಭೂಮ್ಯಾದಿಗಳು ಸ್ಥಿರಗಳಾಗಿ ಹೇಗೆ ಕಾಣುತ್ತಿರುವುವೋ ಹಾಗೆಯೇ ಈ ಜಗತ್ತೆಲ್ಲವೂ ತನ್ನ ಸತ್ತೆಯಿಂದ ಯಾವಾಗಲೂ ಸತ್ಯವಾದುದೇ ಆಗಿದೆ. ವಿನಾಶಿಯಾಗಿಲ್ಲ (ಅವಿನಾಶಿಯು) ಎಂದು ಸಾಂಖ್ಯರು ಹೇಳುವ ಉಪಮಾನವೂ ಸುಳ್ಳಾಗಿಲ್ಲ. (ಅನೃತವಲ್ಲ.)

೬೮. ಸರ್ವವ್ಯಾಪಿಯಾಗಿ ಅತಿವಿಸ್ತೃತವಾದ ಅದ್ವಿತೀಯಾತ್ಮನಾದ ಆ ಪರಬ್ರಹ್ಮನಲ್ಲಿ ಸಂಕಲ್ಪಕಲ್ಪಿತವಾಗಿರುವ ಜಗತ್ಸಮುದಾಯವು ಇಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. (ಅಂದರೆ ಸಂಕಲ್ಪಕಲ್ಪಿತವಾದ ಪದಾರ್ಥಗಳಲ್ಲಿ ಅನುಪಪನ್ನವಾದುದು ಒಂದೂ ಇಲ್ಲ.) ಆದರೆ ನಾಮರೂಪಾದಿ ವಿಕಾರಗಳೇ ಇಲ್ಲದ ಪರಬ್ರಹ್ಮನಲ್ಲಿ ಸಂಕಲ್ಪಕಲ್ಪನೆಯೆಂಬುದೇ ಉಪಪನ್ನವಾಗುವುದಿಲ್ಲ.

೬೯. ವ್ಯವಹಾರ ದೃಷ್ಟಿಯಲ್ಲಿಯಾದರೋ ಈ ಸಮಸ್ತ ಬ್ರಹ್ಮಾಂಡವೂ ಪುನಃ ಪುನಃ ಒಂದೊಂದು ಕಲ್ಪದಲ್ಲಿಯೂ ಉದಯಿಸುವುದು. ಪುನಃ ಪುನಃ ಜನನ ಮರಣಗಳೂ ಉಂಟಾಗುವುವು. ಮತ್ತೆ ಮತ್ತೆ ಸುಖವೂ ದುಃಖವೂ, ಕರ್ಮಗಳೂ ಅವುಗಳ ಸಾಧಕತಮವಾದ ಕರಣಗಳೂ ಸಂಭವಿಸುವುವು.

ಪುನರಾಶಾಃ ಪುನರ್ವ್ಯೋಮ ಪುನರಂಭೋಧಯೋಽದ್ರಯಃ ।
ಅಭ್ಯುದೇತಿ ಪುನಃ ಸೃಷ್ಟಿಃ ಖವದರ್ಕಪ್ರಭಾ ಯಥಾ ॥ ೭೦ ॥

ಪುನರ್ದೈತ್ಯಾಃ ಪುನರ್ದೇವಾಃ ಪುನರ್ಲೋಕಾಂತರಕ್ರಮಾಃ ।
ಪುನಃ ಸ್ವರ್ಗಾಪವರ್ಗೇಹಾಃ ಪುನರಿಂದ್ರಃ ಪುನಃ ಶಶೀ ॥ ೭೧ ॥

ಪುನರ್ನಾರಾಯಣೋ ದೇವಃ ಪುನರ್ದನುಸುತಾದಯಃ ।
ಪುನರಾಶಾಚಲಚ್ಚಾರುಚಂದ್ರಾರ್ಕವರುಣಾನಿಲಾಃ ॥ ೭೨ ॥

ಸುಮೇರುಕರ್ಣಿಕಾಕಾಂತಾ ಸಹ್ಯಕೇಸರಶಾಲಿನೀ ।
ಪೂರ್ಣಾ ಸ್ಫೀತೋದರೋದೇತಿ ರೋದಸೀ ನಲಿನೀ ಪುನಃ ॥ ೭೩ ॥

---

೭೦. ಪುನಃ ದಿಕ್ಕುಗಳೂ ಮತ್ತೆ ಆಕಾಶವೂ, ಸಮುದ್ರಗಳೂ ಪರ್ವತಗಳೂ ಪುನಃ ಪುನಃ ಉದ್ಭವಿಸುವುವು. ಗವಾಕ್ಷಗಳ (ಜೆಳಕಿಂಡಿ) ಛಿದ್ರಗಳುಳ್ಳ ಮನೆಗಳೊಳಗೆ ಒಂದೇ ಆದ ಸೂರ್ಯಪ್ರಕಾಶವು ಹೇಗೆ ನಾನಾಕಾರವಾಗಿ ಉದಯಿಸಿ ಪ್ರಸರಿಸುವುದೋ ಹಾಗೆಯೇ ಈ ಸೃಷ್ಟಿಯೂ ಮತ್ತೆ ಮತ್ತೆ ಉಂಟಾಗುತ್ತಿರುವುದು. (ಉದಯಿಸಿ ಸರ್ವತ್ರ ಪ್ರಸರಿಸುವುದು.)

೭೧. ರಾಕ್ಷಸರೂ ದೇವತೆಗಳೂ ಮತ್ತೆ ಮತ್ತೆ ಉದಯಿಸುವರು. ವಿವಿಧ ಭುವನಾಂತರಗಳ ಕ್ರಮಗಳೂ ಮತ್ತೆ ಉಂಟಾಗುವುವು. ಸ್ವರ್ಗ ಮೋಕ್ಷಾಭಿಲಾಷೆಗಳೂ ಪುನಃ ಪುನಃ ತಲೆದೋರುವುವು. ಪುನಃ ಇಂದ್ರನೂ ಚಂದ್ರನೂ ಮತ್ತೆ ಮತ್ತೆ ಹುಟ್ಟುವರು.

೭೨. ಪುನಃ ಪುನಃ ದೇವದೇವನಾದ ಶ್ರೀಮನ್ನಾರಾಯಣನೂ ಅವತಾರ ಮಾಡುವನು. ದಾನವಾದಿ ಲೋಕಕಂಟಕರೂ (ಧರ್ಮವಿದ್ವೇಷಿಗಳು) ಮತ್ತೆ ಮತ್ತೆ ಜನಿಸುವರು. ಚಂದ್ರ, ಸೂರ್ಯ ವರುಣವಾಯ್ವಾದಿಗಳು ಮತ್ತೆ ಮತ್ತೆ ಎಲ್ಲ ದಿಕ್ಕುಗಳಲ್ಲಿಯೂ ಬಲುರಮ್ಯವಾಗಿ ಚಲಿಸುವರು.

೭೩. ಮಹಾಮೇರು ಪರ್ವತವೆಂಬ ಕರ್ಣಿಕೆ (ತೊಟ್ಟು) ಯಿಂದ ಅತಿ ಸುಂದರವಾಗಿಯೂ ಸಹ್ಯಾದ್ರಿಯೆಂಬ ಕೇಸರದಿಂದ ಪ್ರಕಾಶಮಾನವಾಗಿಯೂ ಇರುವ ಭೂಮ್ಯಾಕಾಶ ರೂಪವಾದ ಕಮಲತೆಯು ಪುನಃ ಪರಿಪೂರ್ಣವಾಗಿಯೂ ಅತಿ ವಿಸ್ತೃತವಾದ ಮಧ್ಯ ಪ್ರದೇಶವುಳ್ಳದ್ದಾಗಿಯೂ ಉದಯಿಸುವುದು.

ವ್ಯೋಮಕಾನನಮಾಕ್ರಮ್ಯ ವಲ್ಗತ್ಯಂಶುನಖೋತ್ಕರೈಃ ।
ತಮಃ ಕರಿಘಟಾ ಭೇತ್ತುಂ ಪುನರ್ಭಾಸ್ಕರಕೇಸರೀ ॥ ೨೪ ॥

ಪುನರಿಂದುಶ್ಚಲತ್ಸ್ವಚ್ಛಮಂಜರೀಸುಂದರೈಃ ಕರೈಃ ।
ಕರೋತ್ಯಮೃತಮಾಹ್ಲಾದಿದಿಗ್ವಧೂಮುಖಮಂಡನಂ ॥ ೨೫ ॥

ಪುನಃ ಸ್ವರ್ಗತರೋಃ ಪುಣ್ಯಕ್ಷಯವಾತಸಮೀರಿತಾಃ ।
ಪತಂತೀಹ ವಿನುನ್ನಾಂಗಾಃ ಪುಣ್ಯಕೃತ್ಪುಷ್ಪರಾಶಯಃ ॥ ೨೬ ॥

ಪುನಃ ಕಾರ್ಯಕ್ರಿಯಾಪಕ್ಷೈಃ ಸಂಸಾರಾರಂಭನಾಮಕಂ ।
ಕಿಂಚಿತ್ಪಟಪಟಂ ಕೃತ್ವಾ ಯಾತಿ ಕಾಲಕಪಿಂಜಲಃ ॥ ೨೭ ॥

---

೨೪. ಸೂರ್ಯನೆಂಬ ಸಿಂಹವು ತನ್ನ ತೀಕ್ಷ್ಣವಾದ ಕಿರಣಜಾಲಗಳೆಂಬ ನಖಪಂಕ್ತಿಗಳಿಂದ ಅಂಧಕಾರವೆಂಬ ಮದಿಸಿದ ಆನೆಗಳ ಹಿಂಡನ್ನು ಸೀಳುವುದಕ್ಕೋಸ್ಕರ ಪುನಃ ಗಗನಮಂಡಲವೆಂಬ ಮಹಾರಣ್ಯವನ್ನು ಆಕ್ರಮಿಸಿಕೊಂಡು ನರ್ತನ ಮಾಡುವುದು (ವಿಹರಿಸುವುದು.)

೨೫. ಚಂದ್ರನೂ ಕೂಡ ಮಂದಮಾರುತದಿಂದ ಚಲಿಸುತ್ತಿರುವ ಪುಷ್ಪಮಂಜರಿಗಳಂತೆ ಸುಂದರವಾಗಿರುವ ಅತಿ ಸ್ವಚ್ಛವಾದ ತನ್ನ ಕಿರಣಗಳಿಂದ ದಿಕ್ಕುಗಳೆಂಬ ಸುಂದರಿಯರ ಮುಖಕ್ಕೆ ಅಲಂಕಾರಪ್ರಾಯವಾದ ಸರ್ವಲೋಕಾಹ್ಲಾದಕವಾದ ದಿವ್ಯಾಮೃತವನ್ನು ಪುನಃ ಸ್ರವಿಸುತ್ತಿರುವನು.

೨೬. ಸ್ವರ್ಗಲೋಕವೆಂಬ ವೃಕ್ಷದ ದೆಸೆಯಿಂದ ಪುಣ್ಯಕರ್ಮಗಳನ್ನು ಆಚರಿಸಿರತಕ್ಕ ಧರ್ಮಾತ್ಮರೆಂಬ ಹೂಗಳ ಗೊಂಚಲುಗಳು (ಸ್ವರ್ಗೋಪಭೋಗದಿಂದ) ಪುಣ್ಯಕ್ಷಯವೆಂಬ ವಾಯುವಿನಿಂದ ಪ್ರಚಾಲಿತಗಳಾಗಿ ಜರ್ಝರಿತ ಶರೀರಗಳಾಗಿ ಪುನಃ ಭೂಲೋಕದಲ್ಲಿ ಬೀಳುವುವು.

೨೭. ಸೃಷ್ಟಿಕಾಲವೆಂಬ ಕಪಿಂಜಲ ಪಕ್ಷಿಯು ವಿವಿಧ ಕಾರ್ಯಗಳನ್ನು ಮಾಡುವಿಕೆಯೆಂಬ ರೆಕ್ಕೆಗಳಿಂದ ಪುನಃ ಪುನಃ ಸಂಸಾರಾರಂಭವೆಂಬ "ಪಟಪಟ" ಶಬ್ದವನ್ನು ಮಾಡಿ ಬೇಗ ಕಳೆದುಹೋಗುವುದು.

ಪುನರಿಂದ್ರಾದಿಕೇ ಯಾತೇ ಸಜ್ಜಮಾಸ್ಥಾಯ ಕೇವಲಂ ।
ಆಯಾತ್ಯಪರದೇವೇಂದ್ರಷಟ್ಪದಃ ಸ್ವರ್ಗಪಂಕಜಂ ॥ ೭೮ ॥

ಪುನಃ ಕಾಲಂ ಕೃತಾಪೂತಂ ಕಲುಷೀಕುರುತೇ ಕಲಿಃ ।
ಸಚಕ್ರಿಣಮಿವಾಂಭೋಧಿಂ ಪ್ರವೃದ್ಧೋಽವಕರಾನಿಲಃ ॥ ೭೯ ॥

ಪುನಃ ಕಾಲಕುಲಾಲೇನ ಕೃತಭೂತಶರಾವಕಂ !
ಚಕ್ರಮಾವರ್ತ್ಯತೇ ವೇಗಾದಜಸ್ರಂ ಕಲ್ಪನಾಮಕಂ ॥ ೮೦ ॥

ಪುನರ್ನೀರಸತಾಮೇತಿ ಜಗದಸ್ತಶುಭಸ್ಥಿತಿ ।
ಅಭ್ಯಾಸೀಭೂತಸಂಕಲ್ಪಂ ಸಂಶುಷ್ಕಮಿವ-ಕಾನನಂ ॥ ೮೧ ॥

---

೭೮. ಅದುವರೆವಿಗೂ ಇದ್ದ (ಪೂರ್ವದ) ಇಂದ್ರನೆಂಬ ಒಂದು ಕ್ಷುದ್ರವಾದ ಭ್ರಮರವು ತನ್ನ ಅಧಿಕಾರದಿಂದ ನಿವೃತ್ತನಾಗಲಾಗಿ (ಪದಚ್ಯುತನಾಗಲು) ನವೀನಗಳಾದ ಆಯಾಮನಂತರಗಳಲ್ಲಿ ಅಧಿಕೃತರಾದ ದೇವತಾಗಣಗಳ ಮಧ್ಯದಲ್ಲಿ ಸಿದ್ಧವಾಗಿರುವ ಐರಾವತ, ಉಚ್ಚೈಃಶ್ರವಸ್ ಇತ್ಯಾದಿಗಳನ್ನು ಹತ್ತಿಕೊಂಡು ಮೊದಲಿನ ದೇವಗಣಗಳಿಂದ ಶೂನ್ಯವಾಗಿ ಹೊಸಬರಾದ ಅಲಂಕೃತವಾಗಿರುವ ಸ್ವರ್ಗರಾಜ್ಯವೆಂಬ ಕಮಲಪುಷ್ಪದ ಮೇಲೆ ಹೊಸಬನಾದ ಇನ್ನೊಬ್ಬ ದೇವೇಂದ್ರನೆಂಬ ಭ್ರಮರವು ಮತ್ತೆ ಮತ್ತೆ ಬಂದು ಕುಳಿತುಕೊಳ್ಳುವುದು.

೭೯. ಪುಡಿಮಣ್ಣಿನ ಧೂಳೀಪಟಲವನ್ನು ವಿಶೇಷವಾಗಿ ಎರಚುವ ಪ್ರಳಯ ಮಾರುತವು ಅತ್ಯಂತ ವೃದ್ಧಿಯನ್ನೈದಿ ಬಲವಾಗಿ ಬೀಸುತ್ತಾ, ಶ್ರೀಮನ್ನಾರಾಯಣನಿಂದೊಡಗೂಡಿರುವ ಕ್ಷೀರಸಮುದ್ರವನ್ನೂ ಕೂಡ ಕಲುಷಿತವನ್ನಾಗಿ ಮಾಡುವಂತೆ ಕೃತಯುಗದಿಂದ ಸರ್ವತ್ರ ಅತಿ ಪವಿತ್ರವಾದ ಕಾಲವನ್ನು ಅಧರ್ಮಮಯವಾದ ಕಲಿಯು ಪುನಃ ಕಲುಷಮಯ (ಅಧರ್ಮಮಯ)ವನ್ನಾಗಿ ಮಾಡುವುದು.

೮೦. ಕಾಲವೆಂಬ ಕುಂಬಾರನು ಪ್ರಾಣಿಗಳೆಂಬ ವಿವಿಧಗಳಾದ ಅಸಂಖ್ಯಾಕ ಘಟಶರಾವಾದಿ ಮೃಣ್ಮಯಪಾತ್ರೆಗಳನ್ನು ವಿರಚಿಸುವಂತಹ ಕಲ್ಪವೆಂಬ ಹೆಸರುಳ್ಳ ಚಕ್ರವನ್ನು ಅನವರತವೂ ಪುನಃ ಪುನಃ ಬಲುವೇಗದಿಂದ ಸುತ್ತಿಸುತ್ತಿರುವನು.

೮೧. ಯಾರಿಗೆ ಯಾವ ವಿಷಯದಲ್ಲಿ ಪೂರ್ವಾಭ್ಯಾಸವಿರುವುದೋ ಅದಕ್ಕೆ ಅನುಗುಣವಾದ ಸಂಕಲ್ಪಗಳುಳ್ಳಂತಹ ಈ ಜಗತ್ತು ತನ್ನಲ್ಲಿರುವ ಶುಭಾವಹವಾದ

ಪುನರರ್ಕಗಣೇಷ್ವಗ್ನಿದಗ್ಧಾನಂತಕಲೇವರಂ ।
ಸರ್ವಭೂತಾಸ್ಥಿಸಂಪೂರ್ಣಂ ಜಗದೇತಿ ಶ್ಮಶಾನತಾಂ ॥ ೮೨ ॥

ಪುನಃ ಕುಲಾಚಲಾಕಾರಪುಷ್ಕರಾವರ್ತವರ್ಷಣೈಃ ।
ನೃತ್ಯದ್ಭವಬೃಹತ್ಫೇನಾಂ ಯಾತ್ಯೇಕಾರ್ಣವತಾಂ ಜಗತ್ ॥ ೮೩ ॥

ಪುನಃ ಸಂಶಾಂತವಾಯ್ವಂಬುರಿಕ್ತಂ ಸಕಲವಸ್ತುಭಿಃ ।
ತದಪೂರ್ವಮಿವಾಕಾಶಂ ಜಗದಾಯಾತಿ ಶೂನ್ಯತಾಂ ॥ ೮೪ ॥

ಪುನಃ ಕತಿಪಯಾ ಭುಕ್ತ್ವಾ ಸಮಾಃ ಸಮರಸಾಶಯಃ ।
ಜೀವಿತಂ ಜೀರ್ಣಯಾ ತನ್ವಾ ಪುನಃ ಸ್ವಾತ್ಮನಿ ಲೀಯತೇ ॥ ೮೫ ॥

ಸಕಲ ಸದ್ವ್ಯವಹಾರಗಳೂ ಅಸ್ತಹೊಂದಿದುದಾಗಿ ಚೆನ್ನಾಗಿ ಒಣಗಿಹೋದ ಅರಣ್ಯದಂತೆ, ಪುನಃ ಪುನಃ ಧರ್ಮರಸಹೀನವಾಗಿ ಬಿಡುವುದು.

೮೨. ಈ ಜಗತ್ತು ಮತ್ತೆಯೂ ದ್ವಾದಶಾದಿತ್ಯರೆಂಬ ಅಗ್ನಿಗಳಲ್ಲಿ ತನ್ನ ಅನಂತ ಶರೀರಗಳನ್ನೆಲ್ಲ ಸುಟ್ಟುಕೊಳ್ಳುವುದು. ಹೀಗೆ ಈ ಜಗತ್ತಿನಲ್ಲಿ ಮತ್ತೆ ಮತ್ತೆ ಸುಟ್ಟುಹೋದ ಸಕಲ ಭೂತಗಳ ಅಸ್ಥಿ (ಮೂಳೆ)ಗಳು ತುಂಬಿಕೊಂಡು ಶ್ಮಶಾನದಂತೆ ಅತಿ ಭಯಂಕರವಾದ ಸ್ಥಿತಿಯು ತೋರುವುದು.

೮೩. ಮತ್ತೆಯೂ ಕುಲಪರ್ವತಗಳ ಆಕಾರದಷ್ಟು ಆಕಾರವುಳ್ಳ ಪುಷ್ಕರಾವರ್ತಗಳೆಂಬ ಮೇಘಗಳ ಧಾರಾಕಾರವಾದ ಮಳೆಗಳಿಂದ ಈ ಜಗತ್ತೆಲ್ಲವೂ ಒಂದೇ ಒಂದು ದೊಡ್ಡ ಸಮುದ್ರದಂತೆ ಕಾಣುವುದು. ಇಂತಹ ಅಪಾರವಾದ ಜಗತ್ಸಮುದ್ರದೊಳಗೆ ಕೇಲಾಡುವ ದೊಡ್ಡ ನೊರೆಯ ರಾಶಿಯಂತೆ ಕಾಲ ರುದ್ರನು ನರ್ತನಮಾಡುವನು.

೮೪. ವಾಯುವೂ ಜಲವೂ ಪುನಃ ಶಾಂತವಾಗಿ ಸಕಲ ವಸ್ತುಶೂನ್ಯವಾಗಿರುವ ಈ ಜಗತ್ತು ಮತ್ತೆ ಮತ್ತೆ ಅಪೂರ್ವವಾದ (ಹೊಸ) ಆಕಾಶದಂತೆ ಸರ್ವತ್ರ ಶೂನ್ಯವಾಗಿಯೇ ತೋರುವುದು.

೮೫. ಆತ್ಮನು ಸಮರಸವಾದ (ಪ್ರಶಾಂತವಾದ ಅಥವಾ ಸಾಮ್ಯಸ್ಥಿತಿಯಲ್ಲಿರುವ) ಮನಸ್ಸುಳ್ಳವನಾಗಿ ಪುನಃ ಕೆಲವು ವರ್ಷಗಳ ಕಾಲ ಜೀವಿತವನ್ನು

ಪುನರನ್ಯೇನ ಕಾಲೇನ ತಥೈವ ಜಗತಾಂ ಗಣಾನ್ ।
ಮನಸ್ತನೋತಿ ವ್ಯೋಮ್ನಿ ಶೂನ್ಯೇ ಗಂಧರ್ವನಗರಂ ಯಥಾ ॥ ೮೬ ॥

ಪುನಃ ಸರ್ವಸಮಾರಂಭಃ ಪ್ರಲಯೇ ಸರ್ವಸಂಭವಃ ।
ಸರ್ವಂ ಪುನರಿದಂ ರಾಮ ಚಕ್ರವತ್ಪರಿವರ್ತತೇ ॥ ೮೭ ॥

ಕಿಮೇತಸ್ಮಿನ್ ಮಹಾಮಾಯಾಡಂಬರೇ ದೀರ್ಘಶಂಬರೇ ।
ರಾಮ ಸತ್ಯಮಸತ್ಯಂ ವಾ ನಿರ್ಣೀಯಂ ಯದಿಹೋಚ್ಯತೇ ॥ ೮೮ ॥

ದಾಶೂರಾಖ್ಯಾಯಿಕೇವೇಯಂ ರಾಮ ಸಂಸಾರಚಕ್ರಿಕಾ ।
ಕಲ್ಪನಾರಚಿತಾಕಾರಾ ವಸ್ತುಶೂನ್ಯಾ ನ ವಸ್ತುತಃ ॥ ೮೯ ॥

ಅನುಭವಿಸಿ, ಮತ್ತೆ ದೇಹವು ಜೀರ್ಣವಾಗಿ ಹೋಗಲಾಗಿ ಸ್ವಾತ್ಮನಲ್ಲಿಯೇ (ತನ್ನಲ್ಲಿಯೇ) ಲಯಹೊಂದುವನು.

೮೬. ಮನಸ್ಸು ಶೂನ್ಯವಾದ ಆಕಾಶದಲ್ಲಿ ಗಂಧರ್ವ ನಗರವನ್ನು ಹೇಗೋ ಹಾಗೆ ಪುನಃ ಪುನಃ ಪೂರ್ವದಲ್ಲಿದ್ದಂತೆಯೇ ಬೇರೆ ಬೇರೆ ಕಾಲಗಳಲ್ಲಿ ನಾನಾ ಜಗತ್ಸಮುದಾಯಗಳನ್ನು ಅತಿ ವಿಸ್ತಾರವಾಗಿ ಕಲ್ಪನೆ ಮಾಡುತ್ತಿರುವುದು.

೮೭. ಅಯ್ಯ ರಾಮ, ಪುನಃ ಪ್ರಳಯವಾಗಿ ಹೋದ ಬಳಿಕ, ಮತ್ತೆ ಸೃಷ್ಟಿಯು ಪ್ರಾರಂಭವಾಗುವುದು. ಪುನಃ ಪುನಃ ಸರ್ವವೂ ಉದಯಿಸುವುದು. ಹೀಗೆ ಪುನಃ ಪುನಃ ಈ ಜಗತ್ತೆಲ್ಲವೂ ಚಕ್ರದಂತೆ ಸರ್ವದಾ ಸುತ್ತುತ್ತಿರುವುದು.

೮೮. ರಾಮ, ಅತಿ ದೀರ್ಘಕಾಲಿಕ ಭ್ರಮಪ್ರದವಾದ ಈ ಮಹಾಮಾಯಾಡಂಬರದಲ್ಲಿ ಸತ್ಯವೆಂದಾಗಲೀ, ಅಸತ್ಯವೆಂದಾಗಲೀ ವಿಚಾರಮಾಡಿ "ಇದು ಇಂತಹುದೆಂದು" ನಿಶ್ಚಯಿಸಿ ಹೇಳಬಹುದಾದುದು ಯಾವುದಿರುವುದು? ಹೇಳು.

೮೯. ಅಯ್ಯ ರಾಮ, ಈ ಸಂಸಾರ ಚಕ್ರವು ದಾಶೂರೋಪಾಖ್ಯಾನದಂತೆ ಕೇವಲ ಕಲ್ಪನೆಯಿಂದಲೇ ರಚಿತವಾದ ಆಕಾರವುಳ್ಳದ್ದಾಗಿ ನಿಷ್ಪನ್ನವಾಗಿರುವುದು. ಇದು ಎಂದೆಂದಿಗೂ ವಸ್ತು ಶೂನ್ಯವಾದುದೇ ಆಗಿರುವುದು. ವಾಸ್ತವವಾಗಿ ಸಂಸಾರವೆಂಬುದು ಸರ್ವಥಾ ಇಲ್ಲವೇ ಇಲ್ಲ.

ಅವಿರಲಮಿದಮಾತತಂ ವಿಕಲ್ಪೈ-
ರಸದುದಿತೈರಪಿ ತೈರ್ದ್ವಿಚಂದ್ರಕಲ್ಪೈಃ
ವಿರಚಿತಮುಸತಾನುಪನ್ನ ಸತ್ಯಂ
ಜಗದಿಹ ತೇನ ವಿಮೂಢಯಾ ಕಿಮುತ್ಥಾ || ೯೦ ||

ಇತ್ಯಾರ್ಷೇ ವಾಸಿಷ್ಠ ರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
"ಜಗದ್ಭಾವನಿರ್ಣಯಯೋಗೋಪದೇಶೋ" ನಾಮ ಸಪ್ತಚತ್ವಾರಿಂಶಃ ಸರ್ಗಃ

---

೯೦. ಅಯ್ಯ ರಾಮ, ಈ ಜಗತ್ತು ಚಂದ್ರದ್ವಯ ಭ್ರಾಂತಿಸದೃಶಗಳಾದ ಅಜ್ಞಾನದಿಂದಲೇ ಉದಯಿಸಿದ ಅಸತ್ಯಗಳಾದ ನಾನಾ ವಿಕಲ್ಪಗಳಿಂದ ಎಡಬಿಡದೆ (ಅವಿಚ್ಛಿನ್ನ ಪ್ರವಾಹರೂಪವಾಗಿ) ಸಂತತವೂ ನಿಬಿಡವಾಗಿ ಅತಿ ವಿಸ್ತೃತವಾಗಿ ಕಾಣುವುದು. ಇದನ್ನು ರಚಿಸಿದ ಕರ್ತೃವೇ (ಯಾವನೊಬ್ಬನೂ) ಇಲ್ಲವು. ಈ ಜಗತ್ತು ವಸ್ತುತಃ ಅಧಿಷ್ಠಾನ ಬ್ರಹ್ಮಚೈತನ್ಯದ ಸತ್ತೆಯನ್ನು ಅನುಸರಿಸಿ ಪ್ರವರ್ತಿಸುವುದು. ಅದುಕಾರಣ ವಸ್ತುಸ್ಥಿತಿಯು ಹೀಗಿರುವಾಗ ನಿನ್ನ ಈ ಮೌಢ್ಯವು ಯಾವ ನಿಮಿತ್ತದಿಂದ ಉಂಟಾಗಿರುವುದು ?

[ನೀನು ಯಾವ ನಿಮಿತ್ತವನ್ನು ಕಾಣುವೆಯೋ ಅದು ವಸ್ತುತಃ ಇಲ್ಲವೇ ಇಲ್ಲ. ಯಾವುದು ಪರಮಾರ್ಥತಃ ಇರತಕ್ಕುದೋ ಅದು ನಿರ್ಭಯವಾದ, ಸದಾನಂದಾದ್ವಿತೀಯ ಬ್ರಹ್ಮವೇ ಆಗಿರುವ ಕಾರಣ ಈ ನಿರ್ನಿಮಿತ್ತಕವಾದ ಮೋಹವು (ಮೌಢ್ಯವು) ನಿನಗೆ ಯುಕ್ತವಾದುದಲ್ಲಿ ಎಂದು ಭಾವ.]

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಜಗದ್ಭಾವನಿರ್ಣಯಯೋಗೋಪದೇಶ" ಎಂಬ
ನಾಲ್ವತ್ತೇಳನೆಯ ಸರ್ಗವು

ಅಷ್ಟ ಚತ್ವಾರಿಂಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಕ್ರಿಯಾವಿಶೇಷಬಹುಲಾ ಭೋಗೈಶ್ವರ್ಯಹತಾಶಯಾಃ ।
ನಾಪೇಕ್ಷಂತೇ ಯದಾ ಸತ್ಯಂ ನ ಪಶ್ಯಂತಿ ಶಠಾಸ್ತದಾ ॥ ೧ ॥

ನಲವತ್ತೆಂಟನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು.—ಸಾಧಾರಣವಾಗಿ ಪ್ರಪಂಚದಲ್ಲಿ ಸರ್ವರೂ ಐಹಿಕ ಮತ್ತು ಆಮುಷ್ಮಿಕ ಭೋಗೋಪಾಯಗಳಾದ ಲೌಕಿಕ ಮತ್ತು ವೈದಿಕ ನಾನಾ ಕರ್ಮ ಕಲಾಪಗಳ ವಿಶೇಷಗಳಲ್ಲಿ ನಿರತರಾಗಿ ತಮ್ಮ ಕಾಮಗಳನ್ನು ಹೆಚ್ಚಿಸಿ ಕೊಂಡಿರುವರು. ಇವರ ಮನಸ್ಸು ಭೋಗೈಶ್ವರ್ಯಗಳಲ್ಲಿಯೇ ಮಗ್ನವಾಗಿ ಮೋಹಗೊಂಡಿರುವುದು. ಇಂತಹವರು ತಮ್ಮನ್ನೂ, ಪರರನ್ನೂ, ಸರ್ವದಾ ವಂಚಿಸುತ್ತಾ ಶಠರಾಗಿರುವರು. ಇಂತಹ ಅವಿವೇಕಿಗಳು ಮತ್ತತೆಯಿಂದ ಯಾವಾಗ ಸತ್ಯವಸ್ತುವನ್ನು ಆಪೇಕ್ಷಿಸದೆ ಹೋಗುವರೋ ಆಗ ಅದು ಅವರಿಗೆ ಗೋಚರ ವಾಗುವುದೂ ಇಲ್ಲ.

(ನಾವು ಯಾವಾಗ ಒಂದು ವಸ್ತುವನ್ನು ಉಪೇಕ್ಷೆಮಾಡಿ ಅದರ ಕಡೆಗೆ ಗಮನ ಕೊಡುವುದಿಲ್ಲವೋ ಆಗ ಅದು ನಮ್ಮ ಕಣ್ಣೆದುರಿಗೆ ಇದ್ದರೂ ಕೂಡ, ಕಾಣುವುದೇ ಇಲ್ಲವಷ್ಟೆ ! ಈ ಕಾರಣದಿಂದ, ಈ ಸಂಸಾರ ಚಕ್ರವು ಕೇವಲ ಕಲ್ಪನಾ ಮಾತ್ರವಾಗಿದ್ದರೂ ಮತ್ತು ಪರಬ್ರಹ್ಮವು ಮಾತ್ರವೇ ಪರಮಾರ್ಥಸತ್ಯವಾಗಿದ್ದರೂ ಕೂಡ, ಪ್ರಪಂಚದಲ್ಲಿ ಮಹಾಮೇಧಾವಿಗಳೂ, ಪ್ರತಿಭಾಶಾಲಿಗಳೂ ಎಷ್ಟೋ ಮಂದಿ ಇದ್ದಾಗ್ಯೂ ಅವರೊಬ್ಬರಾದರೂ ಬ್ರಹ್ಮವೊಂದೇ ಸತ್ಯ, ಜಗತ್ತು, ಮಿಥ್ಯೆ, ಎಂಬ ಎಂಬ ತತ್ತ್ವವನ್ನು ಕಾಣಲಾರದವರಾಗಿರುವರು. ಅವರು ಅಪೇಕ್ಷಿಸಿ ಪ್ರಯತ್ನ ಪಟ್ಟಿದ್ದರೆ ಕಾಣಬಹುದಾಗಿತ್ತೆಂದು ತಾತ್ಪರ್ಯ.)

ಯೇ ತು ಪಾರಂ ಗತಾ ಬುದ್ಧೇರಿಂದ್ರಿಯೈರ್ನ ವಶೀಕೃತಾಃ ।
ತ ಏನಾಂ ಜಾಗತೀಂ ಮಾಯಾಂ ಪ್ರಶ್ಯಂತಿ ಕಲಬಿಲ್ವವತ್ ॥ ೨ ॥

ತುಚ್ಛಾಂ ತಾಂ ಜಾಗತೀಂ ಮಾಯಾಂ ದೃಷ್ಟ್ವಾ ಜೀವೋ ವಿಚಾರವಾನ್ ।
ಅಹಂಕಾರಮಯೀಂ ಮಾಯಾಂ ತ್ಯಜತ್ಯಹಿರಿವ ತ್ವಚಂ ॥ ೩ ॥

ಅಸಕ್ತತಾಂ ತತೋಽಭ್ಯೇತ್ಯ ಪುನಾ ರಾಮನ ಜಾಯತೇ ।
ಕ್ಷೇತ್ರೇಷ್ವಪಿ ಚಿರಂ ತಿಷ್ಠನ್ಬೀಜಂ ದಗ್ಧಮಿವಾಗ್ನಿನಾ ॥ ೪ ॥

---

೨. ಯಾರಾದರೆ ಜ್ಞಾನಮಾರ್ಗದ ಪಾರಂಗತರಾಗಿರುವರೋ ಮತ್ತು ಇಂದ್ರಿಯಗಳಿಂದ ಪರಾಜಿತರಾಗಿ, ಅವುಗಳ ಅಧೀನದಲ್ಲಿ ಇಲ್ಲವೋ ಅಂತಹ ಮಹಾತ್ಮರು ಮಾತ್ರವೇ ಈ ಪ್ರಾಪಂಚಿಕ ಮಾಯೆಯನ್ನು ಕರತಲಗತವಾದ ಬಿಲ್ವಫಲದಂತೆ (ತಮ್ಮ ಅಂಗೈಯಲ್ಲಿರುವ ಬಿಲ್ವಫಲದಂತೆ ಸ್ಪಷ್ಟವಾಗಿ ತಿಳಿಯುವರು. (ಜಗತ್ತು ಮಾಯಾಕಲ್ಪಿತವಾಗಿ ಮಿಥ್ಯೆಯೆಂಬುದಾಗಿ ತಿಳಿಯುವರು. ಹಾಗೆಯೇ ಪರಬ್ರಹ್ಮವೊಂದೇ ಪರಮಾರ್ಥ ಸತ್ಯವೆಂದೂ ನಿಶ್ಚಯವಾಗಿ ಮನಗಾಣುವರು.)

೩. ಮಮಕಾರದ (ನನ್ನದು ಎಂಬ ಅಭಿಮಾನ) ಅಭಿನಿವೇಶಕ್ಕೆ ಕಾರಣವಾದ ಬಾಹ್ಯವಾದ ಪ್ರಪಂಚದ ಈ ಮಾಯೆಯು ತುಚ್ಛವಾದುದೆಂದು (ಅಸತ್ಯ) ಚೆನ್ನಾಗಿ ಮನಗಂಡ ಬಳಿಕ, ಜೀವನು ಅಧ್ಯಾತ್ಮಶಾಸ್ತ್ರ ವಿಚಾರಪರನಾಗಿ ಹಾವು ಜೀರ್ಣವಾದ ಪೊರೆಯನ್ನು ತಾನಾಗಿ ಬಿಟ್ಟುಬಿಡುವಂತೆ ಅಹಂಕಾರದ ಅಭಿನಿವೇಶಕ್ಕೆ ಕಾರಣವಾದ ಅಂತರವಾದ ಮಾಯೆಯನ್ನು ಬಿಟ್ಟುಬಿಡುವನು.

೪. ರಾಮ, ಆನಂತರ ಈ ಜೀವನು ಜಗತ್ತಿನಲ್ಲಿ ಸರ್ವತ್ರ ಅನಾಸಕ್ತನಾಗಿ ಬಿಟ್ಟು ಕ್ಷೇತ್ರಗಳಲ್ಲಿಯೇ (ಶರೀರಗಳಲ್ಲಿಯೇ) ಬಹು ದೀರ್ಘಕಾಲ ಇರುವವನಾದರೂ ಅಗ್ನಿಯಿಂದ ದಗ್ಧವಾದ ಬೀಜವು ಬಹುಕಾಲ ಕ್ಷೇತ್ರ (ಹೊಲ, ಗದ್ದೆ)ಗಳಲ್ಲಿ ಇರುವುದಾದರೂ ಮೊಳಕೆ ಹೊರಡದೆ ಇರುವಂತೆ ಪುನರ್ಜನ್ಮವನ್ನು ಎಂದಿಗೂ ಪಡೆಯುವುದಿಲ್ಲ.

(ಕ್ಷೇತ್ರಂ= ಶರೀರ (ಇದಂ ಶರೀರಂ ಕೌಂತೇಯ ಕ್ಷೇತ್ರ ಮಿತ್ಯಭಿಧೀಯತೇ) ಕ್ಷೇತ್ರಂ= ಹೊಲ, ಗದ್ದೆ ಮುಂತಾದ ಹಸನಾದ ಭೂಮಿ.)

ಆಧಿವ್ಯಾಧಿಪರೀತಾಯ ಪ್ರಾತರ್ವಾದ್ಯ ವಿನಾಶನೇ ।
ಪ್ರಯತಂತೇ ಶರೀರಾಯ ಹಿತಮಜ್ಞಾಸ್ತು ನಾತ್ಮನೇ ॥ ೫ ॥

ತ್ವಮಪ್ಯಜ್ಞ ವದಜ್ಞಸ್ಯ ಶರೀರಸ್ಯ ಸಮೀಹಿತಂ ।
ಮಾ ಸಂಪಾದಯ ದುಃಖಾಯಾ ಭವಾತ್ಮೈಕಪರಾಯಣಃ ॥ ೬ ॥

ಶ್ರೀರಾಮ ಉವಾಚ—

ದಾಶೂರಾಖ್ಯಾಯಿಕೇವೇಯಂ ಸುಖಸಂಸಾರಚಕ್ರಿಕಾ ।
ಕಲ್ಪನಾರಚಿತಾಕಾರಾ ವಸ್ತುಶೂನ್ಯೇತಿ ಕಿಂ ಪ್ರಭೋ ॥ ೭ ॥

ಶ್ರೀ ವಸಿಷ್ಠ ಉವಾಚಃ—

ಜಗನ್ಮಾಯಾಸ್ವರೂಪಸ್ಯ ವರ್ಣನಾವ್ಯಪದೇಶತಃ ।
ದಾಶೂರಾಖ್ಯಾಯಿಕಾಂ ರಾಮ ವರ್ಣ್ಯಮಾನಾಂ ಮಯಾ ಶೃಣು ॥ ೮ ॥

---

೫. ಆತ್ಮ ತತ್ತ್ವಜ್ಞರಲ್ಲದ ಮೂಢರಾದರೋ ಆಧಿ ವ್ಯಾದಿಗಳಿಂದ [ಮಾನಸಿಕ ಮತ್ತು ಶಾರೀರಕ ರೋಗಗಳು) ವ್ಯಾಪ್ತವಾಗಿಯೂ, ನಾಳೆ ಬೆಳಿಗ್ಗೆಯೋ ಅಥವಾ ಈಗಲೇಯೋ ನಾಶವನ್ನೂ ಹೊಂದುತಕ್ಕುದಾಗಿಯೂ ಇರುವ ಈ ಹಾಳು ಶರೀರಕ್ಕೆ ಹಿತವನ್ನುಂಟುಮಾಡಬೇಕೆಂದು ವೃಥಾ ಪ್ರಯತ್ನಿಸುತ್ತಿರುವರೇ ಹೊರತು, ಆತ್ಮ ಹಿತಕ್ಕಾಗಿ ಸ್ವಲ್ಪವೂ ಪ್ರಯತ್ನಿಸುತ್ತಿಲ್ಲ.

೬. ರಾಮ, ನೀನೂ ಕೂಡ, ಅಜ್ಞಾನಿಯಂತೆ ಕೇವಲ ಜಡವಾದ ಈ ಶರೀರದ ಇಷ್ಟಾರ್ಥವನ್ನೂ (ಹಿತವನ್ನೂ) ಸಾಧಿಸುವುದಕ್ಕಾಗಿ ಪ್ರಯತ್ನಪಟ್ಟು ದುಃಖಕ್ಕೆ ಒಳಗಾಗಬೇಡ. ಸರ್ವದಾ ಆತ್ಮೈಕನಿಷ್ಠನಾಗಿ ವಿಚಾರಪರನಾಗಿರು.

೭. ಶ್ರೀರಾಮನು ಕೇಳಿದನು—ಪ್ರಭುಗಳೇ, ತಾವು ಹಿಂದಿನ ಸರ್ಗದ ಕೊನೆಯಲ್ಲಿ ದಾಶೂರೋಪಾಖ್ಯಾನದಂತೆ ವಿಷಯ ಸುಖವೇ ಪ್ರಯೋಜನವಾಗುಳ್ಳ ಈ ಸಂಸಾರ ಚಕ್ರವು ಮಾನಸಿಕ ಸಂಕಲ್ಪ ಕಲ್ಪನೆಯಿಂದ ರಚಿತವಾದ ಆಕಾರವುಳ್ಳದ್ದೆಂದೂ ವಸ್ತುತಃ ಅಸತ್ಯ [ಶೂನ್ಯ]ವೆಂದೂ ಹೇಳಿದಿರಲ್ಲವೆ ! ! ಅದೆಂತಹುದು ? ಅದನ್ನು ದಯೆಮಾಡಿ ವರ್ಣಿಸಬೇಕು.

೮. ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಮ, ಜಗತ್ತಿನ ಮಾಯಾ

ಅಸ್ತ್ಯಸ್ಮಿನ್ ವರುಧಾಪೀಠೇ ವಿಚಿತ್ರಕುಸುಮದ್ರುಮಃ ।
ಮಾಗಧೋ ನಾಮ ವಿಖ್ಯಾತಃ ಶ್ರೀಮಾನ್ ಜನಪದೋಮಹಾನ್ ॥ ೯ ॥

ಕದಂಬವನವಿಸ್ತಾರ ಲೀಲಾವಲಿತಜಂಗಲಃ ।
ವಿಚಿತ್ರವಿಹಗವ್ಯೂಹಸರ್ವಾಶ್ಚರ್ಯಮನೋಹರಃ ॥ ೧೦ ॥

ಸಸ್ಯಸಂಕಟಸೀಮಾಂತಃ ಪುರೋಪವನಮಂಡಿತಃ ।
ಕಮಲೋತ್ಪಲ ಕಲ್ಹಾರಪೂರ್ಣಸರ್ವಸರಿತ್ತಟಃ ॥ ೧೧ ॥

ಉದ್ಯಾನದೋಲಾವಿಲಸಲ್ಲಲನಾಗೇಯಘುಂಘುಮಃ ।
ನಿಶೋಪಭುಕ್ತ ಕುಸುಮನೀರಂಧ್ರವಿಶಿಖಾವನಿಃ ॥ ೧೨ ॥

ಸ್ವರೂಪವನ್ನು ವರ್ಣನೆ ಮಾಡುವ ನೆವದಲ್ಲಿ (ಸಂದರ್ಭ) ಈಗ ನಾನು ನಿನಗೆ ಉದಾಹರಣೆಯಾಗಿ ಹೇಳುವ ಅಂತರಾಳಿಕವಾದ ಈ ದಾಶೂರೋಪಾಖ್ಯಾನವನ್ನೂ ಕೇಳುವವನಾಗು.

೯. ಈ ಭೂಮಂಡಲದಲ್ಲಿ ವಿಚಿತ್ರಗಳಾದ ನಾನಾ ಪುಷ್ಪ ವೃಕ್ಷಗಳಿಂದ ರಮ್ಯವಾಗಿಯೂ ಸಕಲೈಶ್ವರ್ಯಪೂರ್ಣವಾಗಿಯೂ ಇರುವ ಮಗಧವೆಂದು ಬಹು ಪ್ರಸಿದ್ಧವಾದ ಒಂದು ದೊಡ್ಡ ದೇಶವಿರುವುದು.

೧೦. ಅಲ್ಲಿ ಕದಂಬ ವೃಕ್ಷಗಳ ತೋಪುಗಳು ವಿಸ್ತಾರವಾಗಿ ಬಹಳ ಸೊಂಪಿನಿಂದ ಬೆಳೆದು ವನ ಪ್ರಾಂತಗಳನ್ನೂ ಮುಚ್ಚಿಕೊಂಡಿರುವುವು. ವಿಚಿತ್ರಗಳಾದ ಪಕ್ಷಿಗಳ ಸಮೂಹಗಳು ಸರ್ವರಿಗೂ ಆಶ್ಚರ್ಯಕರವನ್ನುಂಟು ಮಾಡುತ್ತ ಮನೋಹರವಾದ ರೀತಿಯಲ್ಲಿ ಸರ್ವತ್ರ ಹಾರಾಡುತ್ತಿರುವುವು.

೧೧. ಆ ದೇಶದ ಗ್ರಾಮಗಳ ಎಲ್ಲೆ ಕಟ್ಟೆಗಳಲ್ಲಿ ನಾನಾ ಸಸ್ಯಗಳು ಹುಲುಸಾಗಿ ಬೆಳೆದು ತುಂಬಿಕೊಂಡಿರುವುವು. ಆ ದೇಶದ ಪಟ್ಟಣಗಳೆಲ್ಲವೂ ಉದ್ಯಾನವನಗಳಿಂದ ಶೋಭಿಸುತ್ತಿರುವುವು. ಎಲ್ಲ ನದಿಗಳ ದಡಗಳೂ ಕಮಲ, ಉತ್ಪಲ, ಕಲ್ಹಾರ ಮುಂತಾದ ಪುಷ್ಪಗಳಿಂದ ಸರ್ವದಾ ಪರಿಪೂರ್ಣಗಳಾಗಿ ವಿರಾಜಮಾನವಾಗಿರುವುವು.

೧೨. ಆ ದೇಶದ ಉಪವನಗಳಲ್ಲಿ ವಿಲಾಸವತಿಯರಾದ ಸುಂದರಿಯರು ದೋಲಾ (ಉಯ್ಯಾಲೆ) ವಿಹಾರ ಮಾಡುತ್ತಲೂ ಸಂಗೀತಗಳನ್ನು ಹಾಡುತ್ತಲೂ

ತತ್ರೈಕಸ್ಮಿನ್ ಗಿರಿತಟೇ ಕರ್ಣಿಕಾರಸಮಾಕುಲೇ ।
ಕದಲೀಖಂಡನೀರಂಧ್ರ ನೀಪಗುಲ್ಮವಿರಾಜಿತೇ ॥ ೧೩ ॥

ಪುಷ್ಪೌಘಸ್ಫೂರ್ಜದನಿಲೇ ಕೇಸರಾರುಣಧೂಲಿನಿ ।
ಕಾರಂಡವಕೃತಾರಾವೇ ರಸತ್ಸರಸಸಾರಸೇ ॥ ೧೪ ॥

ತಸ್ಮಿನ್ನಗವರೇ ಪುಣ್ಯೇ ವಿಚಿತ್ರವಿಹಗದ್ರುಮೇ ।
ಕಶ್ಚಿತ್ಪರಮಧರ್ಮಾತ್ಮಾ ಮುನಿರಾಸೀನ್ಮಹಾತಪಾಃ ॥ ೧೫ ॥

ದಾಶೂರನಾಮಾ ಮಹತಾ ತಪೋಯೋಗೇನ ಸಂಯುತಃ ।
ಕದಂಬವೃಕ್ಷವಾಸ್ತವ್ಯೋ ವೀತರಾಗೋ ಮಹಾಮತಿಃ ॥ ೧೬ ॥

ಘುಂಘುಮ ಧ್ವನಿಗೆಯ್ಯುತ್ತಿರುವರು. ರಾತ್ರಿಯಲ್ಲಿ ಉಪಭೋಗಿಸಲ್ಪಟ್ಟ ಹೂವುಗಳು ದಟ್ಟವಾಗಿ ಭೂಮಿಯ ಮೇಲೆಲ್ಲಾ ಮನ್ಮಥನ ಬಾಣಗಳಂತೆ ಬಿದ್ದಿದ್ದುವು.

೧೩. ಇಂತಹ ಆ ಮಗಧ ದೇಶದೊಳಗೆ ಕರ್ಣಿಕಾರ (ಕಣಿಗಲೆ) ಗಿಡಗಳಿಂದ ನಿಬಿಡವಾಗಿಯೂ ಬಾಳೆ ಗಿಡಗಳ ತೋಟಗಳಿಂದ ಸಾಂದ್ರ (ದಟ್ಟ) ವಾದ ನೀಪ ವೃಕ್ಷಗಳ ಪೊದೆಗಳಿಂದ ವಿರಾಜಮಾನವಾಗಿಯೂ ಇರುವ ಒಂದು ರಮ್ಯವಾದ ಪರ್ವತ ಪ್ರಾಂತವಿರುವುದು.

೧೪. ಮತ್ತು ಆ ಪರ್ವತದಲ್ಲಿ ಪುಷ್ಪ ಸಮುದಾಯಗಳಿಂದ ಮಂದಮಾರುತವು ಧ್ವನಿಮಾಡುತ್ತಾ ಬೀಸುತ್ತಿರುವುದು. ಪುಷ್ಪಗಳ ಪರಾಗಗಳಿಂದ ಧೂಳಿಯೆಲ್ಲವೂ ಕೆಂಪಗೆ ಕಾಣುತ್ತಿರುವುದು. ಕಾರಂಡವಪಕ್ಷಿಗಳು ಕೂಗುತ್ತಿರುವುವು. ಸಾರಸ ಪಕ್ಷಿಗಳು ಅನುರಕ್ತಗಳಾಗಿ ಧ್ವನಿಮಾಡುತ್ತಿರುವುವು.

೧೫-೧೬. ವಿಚಿತ್ರಗಳಾದ ಪಕ್ಷಿಗಳಿಂದಲೂ ವೃಕ್ಷಗಳಿಂದಲೂ ಶೋಭಿಸುತ್ತಿರುವ ಪುಣ್ಯಪ್ರದವಾದ ಆ ಪರ್ವತ ಶ್ರೇಷ್ಠದಲ್ಲಿ ಪರಮಧರ್ಮಾತ್ಮನಾಗಿಯೂ ಮಹಾ ತಪಸ್ವಿಯಾಗಿಯೂ ದಾಶೂರನೆಂಬ ಹೆಸರಿನಿಂದ ಪ್ರಖ್ಯಾತನಾಗಿಯೂ ಇರುವ ಒಬ್ಬ ಮಹರ್ಷಿಯಿದ್ದನು. ಮಹಾಜ್ಞಾನಿಯಾದ ಆ ಮುನೀಶ್ವರನು ಅತ್ಯಂತ ವಿರಕ್ತನಾಗಿ ವಿಶೇಷವಾದ ಮಹಾ ತಪಸ್ಸಿನಿಂದ ಸಹಿತವಾದ ಯೋಗಶಕ್ತಿಯಿಂದ ಸಂಪನ್ನನಾಗಿ ಒಂದು ಕದಂಬವೃಕ್ಷದ ಅಗ್ರಭಾಗದಲ್ಲಿ ವಾಸಮಾಡಿಕೊಂಡಿದ್ದನು.

ಶ್ರೀರಾಮ ಉವಾಚ—

ಅಸೌ ತಪಸ್ವೀ ಭಗವನ್ನಿಷಿನೇ ಕೇನ ಹೇತುನಾ ।
ಕಥಂ ಚಾಪ್ಯವಸತ್ಪೃಷ್ಠೇ ಕದಂಬಸ್ಯ ಮಹಾತರೋಃ ॥ ೧೭ ॥

ಶ್ರೀ ವಸಿಷ್ಠ ಉವಾಚ:—

ಶರಲೋಮೇತಿ ವಿಖ್ಯಾತಃ ಪಿತಾ ತಸ್ಯ ಬಭೂವ ಹ ।
ರಾಮಾಪರ ಇವ ಬ್ರಹ್ಮಾ ತಸ್ಮಿನ್ನೇವಾವಸದ್ಗಿರೌ ॥ ೧೮ ॥

ತಸ್ಯಾಸಾವೇಕಪುತ್ರೋಽಭೂತ್ಕಚೋ ದೇವಗುರೋರಿವ ।
ತೇನ ಸಾರ್ಧಂ ಸ ಪುತ್ರೇಣ ನೀತವಾ೯ ಜೀವಿತಂ ವನೇ ॥ ೧೯ ॥

ಅಥಾಸೌ ಶರಲೋಮಾತ್ರ ಭುಕ್ತ್ವಾ ಯುಗಗಣಂ ಯಯೌ ।
ತ್ಯಕ್ತದೇಹಃ ಸುರಾಗಾರಂ ಮುಕ್ತನೀಡಃ ಖಗೋ ಯಥಾ ॥ ೨೦ ॥

---

೧೭. ಶ್ರೀರಾಮನು ಹೇಳಿದನು. (ಈ ಮಾತನ್ನು ಕೇಳಿ ಗುರುಗಳನ್ನು ಪ್ರಶ್ನಿಸಿದನು.) ಭಗವಂತರೇ (ಪೂಜ್ಯರೇ,) ಆ ದಾಶೂರನೆಂಬ ತಪಸ್ವಿಯು ಆ ಮಹಾರಣ್ಯದಲ್ಲಿ ದೊಡ್ಡ ಕದಂಬವೃಕ್ಷದ ಮೇಲುಗಡೆಯಲ್ಲಿ ಯಾವ ಪ್ರಭಾವದಿಂದ ಮತ್ತು ಯಾವ ಪ್ರಕಾರವಲ್ಲಿ ಏತಕ್ಕಾಗಿ ಹಾಗೆ ವಾಸಮಾಡಿಕೊಂಡಿದ್ದನು ?

೧೮. ಶ್ರೀ ವಸಿಷ್ಠನು ಹೇಳಿದನು. ಅಯ್ಯ ರಾಮ; ಆ ದಾಶೂರಮುನಿಗೆ ಶರಲೋಮನೆಂದು ಪ್ರಸಿದ್ಧನಾದ ತಂದೆ ಇದ್ದನು. ಆತನು, ಎರಡನೆಯ (ಬೇರೊಬ್ಬ) ಬ್ರಹ್ಮನಂತೆ ಅತಿ ತೇಜೋವಂತನಾಗಿ ಆ ಪರ್ವತದಲ್ಲಿಯೇ ವಾಸಮಾಡಿ ಕೊಂಡಿದ್ದನು.

೧೯. ದೇವಗುರುವಾದ ಬೃಹಸ್ಪತಿಗೆ ಕಚನು ಹೇಗೋ ಹಾಗೆ ಆ ಶರಲೋಮನು ತನ್ನ ಆ ಮಗನ ಸಂಗಡ ಕಾಡಿನಲ್ಲಿಯೇ ಇದ್ದುಕೊಂಡು ತನ್ನ ಜೀವಿತ ಕಾಲವನ್ನು ನೂಕುತ್ತಿದ್ದನು.

೨೦. ತರುವಾಯ ಸ್ವಲ್ಪಕಾಲ ಆ ಶರಲೋಮಮುನಿಯು ಸುಖದುಃಖಾದಿ ದ್ವಂದ್ವಸಮೂಹಾತ್ಮಕಗಳಾದ ತನ್ನ ಪ್ರಾರಬ್ಧ ಕರ್ಮಫಲವನ್ನು ಈ ಲೋಕದಲ್ಲಿ ಉಪಯೋಗಿಸಿ, ಕೊನೆಯಲ್ಲಿ ಪಕ್ಷಿಯು ತಾನು ವಾಸಮಾಡುವ ಗೂಡನ್ನು ಬಿಟ್ಟು

ಏಕ ಏವ ವನೇ ತಸ್ಮಿನ್ ದಾಶೂರಃ ಪ್ರರುರೋದ ಹ ।
ದಶಾಪನೀತಪಿತೃಕಃ ಕರುಣಂ ಕುರರೋ ಯಥಾ ॥ ೨೧ ॥

ಮಾತಾಪಿತೃವಿಯೋಗೇನ ಶೋಕಸಂತಾಪಿತಾಶಯಃ ।
ಮ್ಲಾನಿಮಭ್ಯಾಯಯೌ ನೂನಂ ಹೇಮಂತ ಇವ ಪಂಕಜಂ ॥ ೨೨ ॥

ಬಾಲೋಽಸಾವತಿದೀನಾತ್ಮಾ ವನದೇವತಯಾ ವನೇ ।
ಇತ್ಥಮಾಶ್ವಾಸಿತೋ ರಾಮ ತದಾಽದೃಶ್ಯಶರೀರಯಾ ॥ ೨೩ ॥

ಆಕಾಶಕ್ಕೆ ಹಾರುವಂತೆ ತನ್ನ ಪ್ರಾರಬ್ಧ ದೇಹವನ್ನು ಪರಿತ್ಯಾಗಮಾಡಿ, ದೇವಲೋಕಕ್ಕೆ ಹೊರಟುಹೋದನು.

೨೧. ಹೀಗೆ ವಿಧಿವಶರಾಗಿ ತನ್ನ ತಾಯಿತಂದೆಗಳು ಲೋಕಾಂತರವನ್ನು ಸೇರಲಾಗಿ ಆ ದಾಶೂರನು ಆ ಕಾಡಿನಲ್ಲಿ ಒಬ್ಬೊಂಟಿಗನಾಗಿ ಬೇರೆ ಯಾರಸಹಾಯವೂ ಇಲ್ಲದೆ ಗುಬ್ಬಚ್ಚಿಯಂತೆ ಅತಿ ದೈನ್ಯದಿಂದ ಮನಸ್ಸು ಕರಗುವ ರೀತಿಯಲ್ಲಿ ಬಲವಾಗಿ ಅಳತೊಡಗಿದನು.

(ಏಕಏವ ಎಂಬ ಪದದಿಂದ ಅವನ ತಾಯಿಯೂ ಮೊದಲೇ ಮೃತಳಾಗಿದ್ದ ಳೆಂದು ತೋರುವುದು.)

೨೨. ಹೀಗೆ ಆ ದಾಶೂರನು ತಾಯಿತಂದೆಗಳ ಅಗಲಿಕೆಯಿಂದುಂಟಾದ ಶೋಕದಿಂದ ಬೆಂದು ಬೇಗುದಿಗೊಂಡ ಮನಸ್ಸುಳ್ಳವನ್ನಾಗಿ= ಹೇಮಂತ ಋತುವಿನಲ್ಲಿನ ಕಮಲದಂತೆ ಬಹಳವಾಗಿ ಕಳೆಗುಂದಿದನು. (ತೇಜೋಹೀನ ನಾದನು.)

೨೩. ರಾಮ, ಆಗ, ಆ ಕಾಡಿನಲ್ಲಿ ಅತಿ ದೈನ್ಯದಿಂದ ಬಹಳವಾಗಿ ಗೋಳಾಡು ತ್ತಲಿದ್ದ ಆ ಬಾಲಕನನ್ನು ನೋಡಿ ಅಲ್ಲಿನ ವನದೇವತೆಯು ಅವನ ಕಣ್ಣಿಗೆ ಕಾಣಿಸಿ ಕೊಳ್ಳದೆ ಅದೃಶ್ಯಳಾಗಿದ್ದುಕೊಂಡು ಮುಂದೆ ಹೇಳುವ ರೀತಿಯಲ್ಲಿ ಸಮಾಧಾನ ಪಡಿಸಿದಳು.

ಋಷಿಪುತ್ರ ಮಹಾಪ್ರಾಜ್ಞ ಕಿಮಜ್ಞ ಇವ ರೋದಿಷಿ ।
ಸಂಸಾರಸ್ಯ ನ ಕಸ್ಮಾತ್ತ್ವಂ ಸ್ವರೂಪಂ ವೇತ್ಸಿ ಚಂಚಲಂ ॥ ೨೪ ॥

ಸರ್ವದೈವೇದೃಶೀ ಸಾಧೋ ಸಂಸಾರೇ ಸಂಸೃತಿಶ್ಚಲಾ ।
ಜಾಯತೇ ಜೀವ್ಯತೇ ಪಶ್ಚಾದವಶ್ಯಂ ಚ ವಿನಶ್ಯತಿ ॥ ೨೫ ॥

ಯದ್ಯತ್ಕಿಂಚಿದ್ದೃಶ್ಯದೃಶಿ ಬ್ರಹ್ಮಾದಿಕಮಿದಂ ಮುನೇ ।
ಗಂತವ್ಯಸ್ತೇನ ಸರ್ವೇಣ ನಾತ್ರ ಸಂಶಯಃ ॥ ೨೬ ॥

ತದರ್ಥಂ ಮಾ ಕೃಥಾ ವ್ಯರ್ಥಂ ವಿಷಾದಂ ಮರಣೇ ಪಿತುಃ ।
ಅವಶ್ಯಭಾವ್ಯಸ್ತಮಯೋ ಜಾತಸ್ಯಾಃಪತೇರಿವ ॥ ೨೭ ॥

---

೨೪. ಅಯ್ಯ ಮಹಾಪ್ರಾಜ್ಞನಾದ ಋಷಿಪುತ್ರನೇ, ನೀನೇಕೆ ಹೀಗೆ ಅಜ್ಞನಂತೆ ಅಳುತ್ತಿರುವೆ ? ಈ ಸಂಸಾರದ ಸ್ವರೂಪವು ಅತಿ ಚಂಚಲವು ಎಂಬ ವಿಚಾರವನ್ನು ನೀನೂ ಇನ್ನೂ ಏಕೆ ತಿಳಿಯದಿರುವೆ ?

೨೫. ಎಲೈ ಸಾಧುವೇ, ಈ ಸಂಸಾರವು ಸರ್ವದಾ (ಯಾವಾಗಲೂ ಕೂಡ) ಇಂತಹುದಾಗಿಯೇ ಅತ್ಯಂತ ಚಂಚಲವಾದುದು. ಈ ಸಂಸಾರದಲ್ಲಿ ದೇಹಿಯು ಪುನಃ ಪುನಃ ಹುಟ್ಟುತ್ತಲೂ ಸ್ವಲ್ಪಕಾಲ ಜೀವಿಸಿಕೊಂಡಿರುತ್ತಲೂ ತರುವಾಯ ಕೊನೆಯಲ್ಲಿ ಅತ್ಯವಶ್ಯಕವಾಗಿ ಮರಣಹೊಂದುತ್ತಲೂ ಇರುವನು.

೨೬. ಅಯ್ಯ ಮುನಿಯೇ, ವ್ಯವಹಾರ ದೃಷ್ಟಿಯಲ್ಲಿ ಈ ಬ್ರಹ್ಮಾದಿಕವಾದ ದೃಶ್ಯವು ಯಾವುಯಾವುದಿರುವುದೋ ಅದೆಲ್ಲವೂ ಅವಶ್ಯವಾಗಿ ಇಲ್ಲಿ ನಾಶವನ್ನು ಹೊಂದಿಯೇತೀರಬೇಕು. ಈ ವಿಚಾರದಲ್ಲಿ ಸ್ವಲ್ಪವೂ ಸಂಶಯವಿಲ್ಲ.

(ಅನ್ತವನ್ತ ಇಮೇದೇಹಾಃ ನಿತ್ಯಸ್ಯೋಕ್ತಾಃ ಶರೀರಿಣಃ । ಅನಾಶಿನೋಽಪ್ರಮೇಯಸ್ಯ—ಗೀತಾ ೨–೧೮.)

೨೭. ಸಂಸಾರದ ಸ್ವರೂಪವೇ ವಿನಾಶಿಯಾಗಿರುವ ಕಾರಣ ನೀನು ನಿನ್ನ ತಂದೆಯು ಮರಣದ ವಿಚಾರದಲ್ಲಿ ವ್ಯರ್ಥವಾಗಿ ದುಃಖಿಸಬೇಡ. ಸೂರ್ಯನು ಪ್ರತಿದಿನಸವೂ ದಿವಾ ಮುಖದಲ್ಲಿ ಉದಯಿಸಿದ ಬಳಿಕ, ನಿಶಾಮುಖದಲ್ಲಿ ತಪ್ಪದೆ ಅಸ್ತಂಗತನಾಗುವುದು ಸರ್ವಾನುಭವಸಿದ್ಧವಷ್ಟೆ. ಅದರಂತೆಯೇ ಈ ಜಗತ್ತಿನಲ್ಲಿ

ಅಶರೀರಾಮಿತಿ ಶ್ರುತ್ವಾ ಗಿರಮಾರಕ್ತಲೋಚನಃ ।
ಧೈರ್ಯಮಾಸಾದಯಾಮಾಸ ಶಿಖಂಡೀ ಸ್ತನಿತಾದಿವ ॥ ೨೮ ॥

ಉತ್ಥಾಯಾವಶ್ಯಕಂ ಕೃತ್ವಾ ಪಾಶ್ಚಾತ್ಯಂ ಪಿತುರಾದರಾತ್ ।
ಚಕಾರ ತಪಸೇ ಬುದ್ಧಿಂ ದೃಢಾಮುತ್ತಮಸಿದ್ಧಯೇ ॥ ೨೯ ॥

ಬ್ರಾಹ್ಮೇಣ ಕರ್ಮಣಾ ತಸ್ಯ ವಿಪಿನೇ ಚರತಸ್ತಪಃ ।
ಅನಂತಸಂಕಲ್ಪಮಯಂ ಶ್ರೋತ್ರಿಯತ್ವಂ ಬಭೂವಹ ॥ ೩೦ ॥

ಯಾವ ಯಾವುದು ಜನಿಸುವುದೋ ಅದದೆಲ್ಲವೂ ಅವಶ್ಯವಾಗಿ ನಾಶವನ್ನು ಹೊಂದಿಯೇ ತೀರಬೇಕಾಗಿರುವುದು. (ಸಾದಿಯಾದುದೆಲ್ಲಕ್ಕೂ ಮರಣವು (ಅಂತವು) ಬೆನ್ನಂಟಿಕೊಂಡೇ ಇರುವುದು.)

[ಜಾತಸ್ಯ ಹಿಧ್ರುವೋಮೃತ್ಯುಃ ಧ್ರುವಂಜನ್ಮಮೃತಸ್ಯ ಚ॥ ಗೀತಾ ೨-೨೭. ಮತ್ತು ಅವ್ಯಕ್ತಾದೀನಿ ಭೂತಾನಿ ವ್ಯಕ್ತಮಧ್ಯಾನಿ ಭಾರತ । ಅವ್ಯಕ್ತನಿಧನಾನ್ಯೇವ ತತ್ರಕಾ ಪರಿದೇವನಾ ಗೀತಾ ೨-೨೮.]

೨೮. ಆ ಸಮಯದಲ್ಲಿ ಈ ರೀತಿಯಾಗಿ ಎಲ್ಲಿಂದಲೋ ಕೇಳಿಸಿದ ಅಶರೀರ ವಾಣಿಯನ್ನು ಕೇಳಿ ದುಃಖದಿಂದ ಕೆಂಪಾದ ಕಣ್ಣುಗಳುಳ್ಳವನಾದ ದಾಶೂರನು ಮೇಘಧ್ವನಿಯನ್ನು ಕೇಳಿದ ನವಿಲು ಸಮಾಧಾನ ಹೊಂದುವಂತೆ ಮನಸ್ಸಿನಲ್ಲಿ ಧೈರ್ಯವನ್ನು ತಾಳಿ ಸಮಾಶ್ವಸ್ತನಾದನು.

೨೯. ಬಳಿಕ,ಅಲ್ಲಿಂದೆದ್ದು ಆ ಕಾಲದಲ್ಲಿ ಆವಶ್ಯಕರ್ತವ್ಯವಾದ ತಂದೆಯ ಉತ್ತರ ಕ್ರಿಯಾದಿಗಳನ್ನು (ಔರ್ಧ್ವದೈಹಿಕ ಕರ್ಮ) ಆದರದಿಂದ (ಶ್ರದ್ಧೆಯಿಂದ) ನೆರವೇರಿಸಿ, ಉತ್ತಮವಾದ ಸಿದ್ಧಿಯನ್ನು ಪಡೆಯುವುದಕ್ಕೋಸ್ಕರ ತಪಸ್ಸನ್ನು ಆಚರಿಸಬೇಕೆಂದು ದೃಢಸಂಕಲ್ಪ ಮಾಡಿದನು.

೩೦. ಆಗ ಬ್ರಾಹ್ಮಣ್ಯೋಚಿತವಾದ ಸ್ನಾನ ಸಂಧ್ಯಾದಿ ಕರ್ಮಕಲಾಪದಿಂದ ಆ ಕಾಡಿನಲ್ಲಿ ತಪಸ್ಸುಮಾಡುತ್ತಲಿದ್ದ ದಾಶೂರನ ಶ್ರೋತ್ರಿಯತ್ವವು ಬಹುತರವಾದ ಶುದ್ಧಿ, ಅಶುದ್ಧಿ ಮುಂತಾದ ಕಲ್ಪನೆಗಳಿಂದ ಪ್ರಚುರವಾಗಿ ಇದ್ದಿತು. (ನಾನು ಈಗ ಶುದ್ಧನಾದೆನೇ? ಈ ಸ್ಥಳವು ಶುದ್ಧವಾಗಿದೆಯೇ? ಈಗ ಈ ಅಶುದ್ಧವಾದ ವಸ್ತು

ಅಜ್ಞಾತಜ್ಞೇಯಬುದ್ಧೇಸ್ತು ಶ್ರೋತ್ರಿಯಸ್ಯ ತಯಾತಯಾ ।
ನ ವಿಶಶ್ರಾಮ ಚೇತೋಽಸ್ಯ ಪವಿತ್ರೇಽಪಿ ಧರಾತಲೇ ॥ ೩೧ ॥

ಕೇವಲಂ ಸರ್ವಮೇವೇದಮಪಿ ಶುದ್ಧಂ ಧರಾತಲಂ ।
ಅಶುದ್ಧಮಿವ ಪಶ್ಯನ್ಸ ನ ರೇಮೇ ಕ್ವಚಿದೇವ ಹಿ ॥ ೩೨ ॥

ಅಥ ಸಂಕಲ್ಪಯಾಮಾಸ ಸ್ವಸಂಕಲ್ಪನಯೈವ ಸಃ ।
ವೃಕ್ಷಾಗ್ರಮೇವ ಸಂಶುದ್ಧಂ ಸ್ಥಿತಿಸ್ತತ್ರೋಚಿತಾ ಮಮ ॥ ೩೩ ॥

ತದಿದಾನೀಂ ತಪಸ್ತಪ್ಸ್ಯೇ ತಪಸಾ ಯೇನ ಶಾಖಿಷು ।
ಖಗವತ್ಸ್ಥಿತಿಮಾಪ್ನೋಮಿ ಶಾಖಾಸು ಚ ದಲೇಷು ಚ. ॥ ೩೪ ॥

ಗಳನ್ನು ಶುದ್ಧವಾಗಿ ತೊಳೆಯಬೇಕಾಗಿರುವುದು. ನಾನು ಈಗ ಅಶುದ್ಧನಾಗಿ ಬಿಟ್ಟೆನು. ಪುನಃ ಸ್ನಾನವಮಾಡಬೇಕು. ಇತ್ಯಾದಿ ನಾನಾ ಸಂಕಲ್ಪಯುಕ್ತನಾಗಿಬಿಟ್ಟನು.)

(ಶ್ರೋತ್ರಿಯತ್ವ-ವೇದಧ್ಯಾಯನ, ಅದರ ಅರ್ಥ ವಿಚಾರ, ವೈದಿಕ ಕರ್ಮಾಚರಣೆ ಇತ್ಯಾದಿ.)

೩೧. ಅವಶ್ಯಜ್ಞೇಯವಾದ ಪರಬ್ರಹ್ಮವನ್ನು ತಿಳಿಯದ ಬುದ್ಧಿಯುಳ್ಳವನಾಗಿ (ಆತ್ಮತತ್ತ್ವಜ್ಞಾನರಹಿತವಾಗಿ) ಕೇವಲ ಶ್ರೋತ್ರಿಯನಾಗಿದ್ದ ಆ ದಾಶೂರನ ಮನಸ್ಸು ಆಯಾ ಶುದ್ಧಿ, ಅಶುದ್ಧಿ ಮುಂತಾದ ನಾನಾ ವಿಚಾರ ಕಲ್ಪನೆಗಳಿಂದ ಕೂಡಿಕೊಂಡು ಪವಿತ್ರವಾದ ಸ್ಥಳದ ವಿಷಯದಲ್ಲಿಯೂ ಕೂಡ ಸಂಶಯಗ್ರಸ್ತವಾಗಿಯೇ ಉಳಿದು ಸ್ವಲ್ಪವೂ ವಿಶ್ರಾಂತಿಯನ್ನು ಪಡೆಯಲೇ ಇಲ್ಲ.

೩೨. ಈ ಸಮಸ್ತವಾದ ಭೂಮಂಡಲವು, ಎಲ್ಲಿಯಾದರೂ ಸರಿಯೇ ಕೇವಲ ಶುದ್ಧವಾಗಿರುವುದೇನು? ಎಂದು ವಿಚಾರ ಮಾಡುತ್ತಾ ಕೊನೆಗೆ ಅವನು ಈ ಭೂಮಿಯನ್ನೆಲ್ಲವೂ ಅಪರಿಶುದ್ಧವಾಗಿರುವಂತೆಯೇ ಭಾವಿಸಿಕೊಂಡು ಯಾವುದೊಂದು ಸ್ಥಳದಲ್ಲಿಯೂ ಸ್ವಲ್ಪವೂ ಅಭಿರುಚಿಯುಳ್ಳವನಾಗಲೇ ಇಲ್ಲ.

೩೩-೩೪. ಅನಂತರ ಅವನು ತನ್ನ ಮನಸ್ಸಿನಲ್ಲಿ ಸ್ವಸಂಕಲ್ಪದಿಂದಲೇ "ಈ ಭೂಮಿಯೆಲ್ಲವೂ ಸರ್ವಥಾ ಅಶುದ್ಧವಾದುದು. ಅದುಕಾರಣ ನನ್ನ ಕರ್ಮಾಚರಣೆಗೆ ಯೋಗ್ಯವಾಗಿಲ್ಲ. ಮರಗಳ ಅಗ್ರಭಾವವು ಮಾತ್ರವೇ ಅತಿ ಪವಿತ್ರವಾದುದು. ಅಲ್ಲಿ

ಇತಿ ಸಂಚಿಂತ್ಯ ಸಂಜ್ವಾಲ್ಯ ಹುತಾಶಮತಿಭಾಸ್ವರಂ ।
ಜುಹಾವ ತಸ್ಮಿನ್ ಪ್ರೋತ್ಕೃತ್ಯ ಮಾಂಸಂ ಸ್ವಸ್ಕಂಧಭಿತ್ತಿತಃ ॥ ೩೫ ॥

ಅಥಗೀರ್ವಾಣವೃಂದಸ್ಯ ಸಮಗ್ರಾ ಗಲಭಿತ್ತಯಃ ।
ಮನ್ಮುಖತ್ವೇನ ಮಾ ಯಾಂತು ವಿಪ್ರಮಾಂಸೇನ ಭಸ್ಮತಾಂ ॥ ೩೬ ॥

ಇತಿ ವಿಂಚಿಂತ್ಯ ಭಗವಾನ್ ಸಪ್ತಾರ್ಚಿಸ್ತಸ್ಯ ದೇವತಾ ।
ಪುರೋ ಬಭೂವ ದೀಪ್ತಾಂಶುರ್ದೀಪ್ತಾಂಶುರ್ವಾಕ್ಪತೇರಿವ ॥ ೩೭ ॥

ವಾಸಮಾಡುವುದೇ ಶ್ರೋತ್ರಿಯ ಬ್ರಾಹ್ಮಣನಾದ ನನಗೆ ಉಚಿತವು. ಈ ಕಾರಣ ದಿಂದ ಯಾವ ತಪಶ್ಚರ್ಯೆಯಿಂದ ಈಗ ನಾನು ಹಕ್ಕಿಗಳಂತೆ ವೃಕ್ಷಾಗ್ರಗಳಲ್ಲಿ ಕೊಂಬೆ ಗಳ ಮೇಲೆಯೂ ಎಲೆಗಳ ಮಧ್ಯದಲ್ಲಿಯೂ ವಾಸಮಾಡುವ ಸ್ಥಿತಿಯನ್ನು (ಸಾಮ ರ್ಥ್ಯವನ್ನು) ಪಡೆಯಬಲ್ಲನೋ ಅಂತಹ ತಪಸ್ಸು ಮಾಡುವೆನು”ಎಂದು ಸ್ಥಿರಸಂಕಲ್ಪ ಮಾಡಿದನು.

೩೫. ಈ ರೀತಿಯಾಗಿ ಮನಸ್ಸಿನಲ್ಲಿ ಯೋಚಿಸಿ, ಬಳಿಕ, ಯಜ್ಞೇಶ್ವರನನ್ನು ಪ್ರತಿಷ್ಠೆಮಾಡಿ, ಸಮಿತ್ತುಗಳಿಂದ ಪ್ರಜ್ವಲಿಸುತ್ತಲಿರುವ ಬಹು ದೇದೀಪ್ಯಮಾನವಾದ ಅಗ್ನಿಯಲ್ಲಿ ತನ್ನ ವಿಶಾಲವಾದ ಹೆಗಲಿನಿಂದ ಮಾಂಸಗಳನ್ನು ಕತ್ತರಿಸಿ ಕತ್ತರಿಸಿ ಹೋಮಮಾಡಿದನು.

(ಪೂರ್ವ ಶ್ಲೋಕದಲ್ಲಿ ಅವನು ತಪಸ್ಸನ್ನು ಮಾಡುವ ಸಂಕಲ್ಪಮಾಡಿದನು. ಎಂದು ಹೇಳಿ ಇಲ್ಲಿ ತನ್ನ ದೇಹದಿಂದ ಮಾಂಸವನ್ನು ಕತ್ತರಿಸಿ ಹೋಮಮಾಡಿದನು. ಎಂದು ಹೇಳಿರುವುದನ್ನು ಪರ್ಯಾಲೋಚಿಸಿದರೆ ದಾಶೂರನು ತಾನು ಸಂಕಲ್ಪಿಸಿ ದ್ದಂತೆ ತಪಸ್ಸು ಮಾಡಿದರೂ ಅದರಿಂದ ಶೀಘ್ರವಾಗಿ ತನ್ನ ಮನೋರಥವನ್ನು ಸಿದ್ಧಿ ಯಾಗದೇ ಹೋದಕಾರಣ ಈ ರೀತಿಯಾಗಿ ಹೋಮ ಮಾಡುವ ಸಾಹಸಕ್ಕೆ ಕೈಹಾಕಿ ದನೆಂದು ತೋರುವುದು. ಎಂಬುದಾಗಿ ತಾತ್ಪರ್ಯ ಪ್ರಕಾಶ ಟೀಕಾಕಾರರು ಅಭಿ ಪ್ರಾಯಪಟ್ಟಿರುವರು.)

೩೬-೩೭. ಅನಂತರ ಭಗವಂತಇಂದ ಅಗ್ನಿ ದೇವನು “ದೇವತೆಗಳಿಗೆಲ್ಲ ಮುಖ ಸ್ಥಾನೀಯನಾದ ನಾನು ತೆಗೆದುಕೊಂಡು ಹೋಗಿ ಕೊಡುವ ಶ್ರೋತ್ರಿಯ ಬ್ರಾಹ್ಮ ಣನ ಮಾಂಸವನ್ನು ತಿನ್ನುವಾಗ ಅದರಿಂದ ಈ ಸಕಲ ದೇವತಾಗಣಗಳ ಕಂಠಗ ಳೆಲ್ಲವೂ ನನ್ನ ಮೂಲಕ ಸಮಗ್ರವಾಗಿ ಸುಟ್ಟು ಬೂದಿಯಾಗದಿರಲಿ” ಎಂಬುದಾಗಿ

ಉವಾಚ ವಚನಂ ಧೀರಂ ಕುಮಾರಾಭಿಮತಂ ವರಂ ।
ಗೃಹಾಣ ಸ್ಥಾಪಿತಂ ಸಾಧೋ ಕೋಶಾಕಾಶಾನ್ಮಣಿಂ ಯಥಾ ॥ ೩೮ ॥

ಇತ್ಯುಕ್ತವಂತಮನಲಮರ್ಘಪುಷ್ಪೇಣ ಶೋಭಿನಾ ।
ಸಂಪೂಜ್ಯ ಸ್ತುತಿವಾದೇನ ಪ್ರಾಹ ವಿಪ್ರಕುಮಾರಕಃ ॥ ೩೯ ॥

ಭಗವನ್ ಭೂತಪೂರ್ಣಾಯಾ ಭುವಃ ಪಾವನಮಂಡಲಂ ।
ನಾಪ್ನೋಮಿ ತೇನ ವೃಕ್ಷಾಣಾಮುಪರಿ ಸ್ಥಿತಿರಸ್ತು ಮೇ ॥ ೪೦ ॥

ಬಹು ದೀರ್ಘಾಲೋಚನೆಮಾಡಿ ಸೂರ್ಯನು ಬೃಹಸ್ಪತಿಯು ಮುಂದೆ ಬಂದು ನಿಲ್ಲು ವಂತೆ ಆಗ ಆ ದಾಶೂರನ ಆರಾಧ್ಯದೇವತೆಯಾದ ಯಜ್ಞೇಶ್ವರನು ಅತ್ಯಂತ ದೇದೀ ಪ್ಯಮಾನವಾದ ದೇಹವನ್ನು ಧರಿಸಿ ಅವನೆದುರಿನಲ್ಲಿ ಪ್ರತ್ಯಕ್ಷನಾಗಿ ಬಂದು ನಿಂತನು.

("ಅಗ್ನಿಮುಖಾ ವೈ ದೇವಾಃ"ಎಂಬ ಶ್ರುತಿಯು ಸಕಲ ದೇವತೆಗಳಿಗೂ ಅಗ್ನಿ ಯೇ ಮುಖವೆಂದು ಹೇಳುವುದು. "ನವಿಷಂ ವಿಷಮಿತ್ಯಾಹುಃ ಬ್ರಹ್ಮಸ್ವಂ ವಿಷ ಮುಚ್ಯತೇ" ಇತ್ಯಾದಿ ಶಾಸ್ತ್ರಗಳು ಬ್ರಹ್ಮಸ್ವವೇ ಕಾಲಕೂಟಾದಿ ಮಹಾವಿಷಗಳಿಗಿಂತ ಮಿಗಿಲಾದುದೆಂದೂ ಅದನ್ನು ಮುಟ್ಟಿದ ಮಾತ್ರದಿಂದಲೇ ಸರ್ವನಾಶವಾಗುವುದೆಂದೂ ಹೇಳುತ್ತಿರುವುವು. ಹೀಗಿರುವಾಗ ಆ ಶ್ರೋತ್ರಿಯನು ಹೋಮ ಮಾಡಿದ ಅವನ ಶರೀರದ ಮಾಂಸಖಂಡಗಳನ್ನು ತಿನ್ನಲು ಹೋದಾಗ ದೇವತೆಗಳ ಕುತ್ತಿಗೆಗಳನ್ನು ಬ್ರಾಹ್ಮಣನ ಮಾಂಸಗಳು ಅಗ್ನಿಗಿಂತಲೂ ಹೆಚ್ಚಾಗಿ ಸುಟ್ಟು ಬೂದಿಮಾಡದೆ ಇರು ವುದೇ ಇಲ್ಲ. ಎಂದು ಹೆದರಿ ಅಗ್ನಿಯು ಕೂಡಲೆ ಪ್ರತ್ಯಕ್ಷನಾದನೆಂದು ಭಾವ.)

೩೮. ತರುವಾಯ ಆ ಅಗ್ನಿದೇವನು 'ಅಯ್ಯ, ಸಾಧುವಾದ ಬ್ರಾಹ್ಮಣ ಕುಮಾರನೇ, ಸಾಹಸಿಯೇ (ಧೀರನೇ), ಜೊಕ್ಕಸದ ಮಧ್ಯದಲ್ಲಿ ಗುಪ್ತವಾಗಿಟ್ಟಿದ್ದ ರತ್ನವನ್ನು ಅದರ ಸ್ವಾಮಿಯು (ಯಜಮಾನ) ತನಗೆ ಬೇಕಾದಾಗ ತೆಗೆದುಕೊಳ್ಳು ವಂತೆ ಈಗ ನೀನು ನಿನ್ನ ಸಂಕಲ್ಪದಿಂದಲೇ ಸಿದ್ಧವಾಗಿರುವ ಇಷ್ಟನಾದ ವರವನ್ನು ಸ್ವೀಕರಿಸು' ಎಂದು ಹೇಳಿದನು.

೩೯-೪೦. ಹೀಗೆಂದು ಹೇಳಿದ ಅಗ್ನಿದೇವನನ್ನು ಆ ಬ್ರಾಹ್ಮಣ ಕುಮಾರನು

ಇತ್ಯುಕ್ತೇ ಮುನಿಪುತ್ರೇಣ ಸರ್ವದೇವಮುಖಂ ಶಿಖೀ ।
ಏವಮಸ್ತು ತವೇತ್ಯುಕ್ತ್ವಾ ಜಗಾಮಾಂತರ್ಧಿಮೀಶ್ವರಃ ॥ ೪೧ ॥

ತಸ್ಮಿನ್ ಅಂತರ್ಹಿತೇ ದೇವೇ ಕ್ಷಣಾತ್ಸಾಂಧ್ಯ ಇವಾಂಬುಜೇ ।
ಪೂರ್ಣಕಾಮಃ ಕುಮಾರೋಽಸೌ ಪೂರ್ಣೇಂದುರಿವ ಚಾಬಭೌ ॥ ೪೨ ॥

[ದಾಶೂರನು] ದಿವ್ಯಗಳಾದ ಅರ್ಘ್ಯಪುಷ್ಪಾದಿಗಳಿಂದ ಚೆನ್ನಾಗಿ ಪೂಜಿಸಿ ವಿವಿಧವಾಗಿ ಸ್ತೋತ್ರಮಾಡಿ-"ಎಲೈ ಭಗವಂತನೇ, ಈ ಭೂಮಂಡಲವೆಲ್ಲವೂ ಸರ್ವದಾ ಸರ್ವತ್ರ ಪ್ರಾಣಿಕೋಟಿಗಳಿಂದ ಪರಿಪೂರ್ಣವಾಗಿರುವ ಕಾರಣ ಇದರ ಯಾವದೊಂದು ಪ್ರದೇಶದಲ್ಲಿಯೂ ನನಗೆ ವಾಸಾರ್ಹವಾದ ಪವಿತ್ರವಾದ ಸ್ಥಳವೇ (ಸ್ಥಾನವೇ) ಸಿಕ್ಕದಾಗಿರುವುದು. ಆದುದರಿಂದ ವೃಕ್ಷಗಳ ಅಗ್ರಭಾಗದಲ್ಲಿ (ಮೇಲುಗಡೆ) ವಾಸ ಮಾಡಲು ತಕ್ಕ ಸಾಮರ್ಥ್ಯವು ನನಗೆ ಉಂಟಾಗುವಂತೆ ವರವನ್ನು ದಯಪಾಲಿಸಬೇಕು" ಎಂದು ಪ್ರಾರ್ಥಿಸಿಕೊಂಡನು.

೪೧. ಹೀಗೆಂದು ಆ ಋಷಿಪುತ್ರನಾದ ದಾಶೂರನು ವಿಜ್ಞಾಪಿಸಿಕೊಳ್ಳಲಾಗಿ ಸಕಲ ದೇವತೆಗಳ ಮುಖಸ್ಥಾನೀಯನಾದ ಯಜ್ಞೇಶ್ವರನು "ನಿನಗೆ ಹಾಗೆಯೇ ಆಗಲಿ" ಎಂದು ವರವನ್ನು ಅನುಗ್ರಹಿಸಿ, ತತ್‌ಕ್ಷಣವೇ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

(ಅಗ್ನಿಗೆ ವರಪ್ರದಾನ ಸಾಮರ್ಥ್ಯವುಂಟೆಂದು ಸೂಚಿಸಲು ಈಶ್ವರಃ ಎಂಬ ವಿಶೇಷಣವನ್ನು ಹೇಳಿದೆ.)

೪೨. ಆ ಅಗ್ನಿದೇವನು ಹೀಗೆ ಆ ಕ್ಷಣವೇ, ಸಾಯಂಕಾಲಿಕವಾದ ಕಮಲ ಪುಷ್ಪದಂತೆ ಅಲ್ಲಿಯೇ ಅಂತರ್ಹಿತನಾದ ಒಡನೆಯೇ, ತನ್ನ ಮನೋರಥಸಿದ್ಧಿಯಿಂದ ಪೂರ್ಣಕಾಮನಾದ ಆ ಮುನಿಕುಮಾರನು ಷೋಡಶಕಲಾಪರಿಪೂರ್ಣನಾದ ಚಂದ್ರನಂತೆ ವಿರಾಜಿಸಿದನು.

ಅಧಿಗತಾಭಿಮತಾನನಮಂಡಲ
ದ್ಯುತಿಭರೇಣ ಜಹಾಸ ಸ ತುಷ್ಟಿಮಾ̃ ।
ಶಶಿನಮಾಪ್ತಕಲಾಕುಲ ಮಂಬುಜಂ
ವಿಕಸಿತಂ ಚ ಸಿತಸ್ಮಿತಶೋಭಿನಾ ॥ ೪೩ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ ಸ್ಥಿತಿ ಪ್ರಕರಣೇ
"ದಾಶೂರೋಪಾಖ್ಯಾನೇ ದಾಶೂರವರಪ್ರದಾನವರ್ಣನಂ"
ಅಷ್ಟಚತ್ವಾರಿಂಶಃ ಸರ್ಗಃ

---

೪೩. ತನಗೆ ಅಭಿಮತವಾದ ವರವು ಸಿಕ್ಕಿದುದರಿಂದ ಬಹಳ ಸಂತೃಪ್ತನಾದ ಆ ಮುನಿಕುಮಾರನು ಶುಭ್ರವಾದ ಮಂದಹಾಸದಿಂದ ಶೋಭಿಸುತ್ತಿರುವ ತನ್ನ ಮುಖಮಂಡಲದ ಅತಿಶಯವಾದ ಕಾಂತಿಯಿಂದ ಷೋಡಶಕಲಾಪರಿಪೂರ್ಣನಾದ ಚಂದ್ರನನ್ನೂ ಮತ್ತು ಚೆನ್ನಾಗಿ ಅರಳಿ ಕಂಗೊಳಿಸುವ ಕಮಲವನ್ನೂ ಪರಿಹಾಸ ಮಾಡುತ್ತಲಿದ್ದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ದಾಶೂರವರ ಪ್ರದಾನವರ್ಣನ" ಎಂಬ
ನಲ್ವತ್ತೆಂಟನೆಯ ಸರ್ಗವು

ಏಕೋನಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಅಥ ಕಾನನಮಧ್ಯಸ್ಥಂ ಚುಂಬಿತಾಂಬುದಮಂಡಲಂ ।
ಮಧ್ಯಾಹ್ನಖಿನ್ನಸೂರ್ಯಾಶ್ವಸೇವಿತಸ್ಕಂಧಮಂಡಲಂ ॥ ೧ ॥

ವಿತಾನಮಿವ ದಿಕ್ಕುಕ್ಷಿದೀರ್ಘಂ ವಿಟಪಬಾಹುಭಿಃ ।
ಆಲೋಕಯಂತಂ ಕಕುಭೋ ವಿಕಾಸಿಕುಸುಮೇಕ್ಷಣೈಃ ॥ ೨ ॥

ನಲವತ್ತೊಂಬತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಅಯ್ಯಾ ರಾಮ, ಹಿಂದಿನ ಸರ್ಗದಲ್ಲಿ ಹೇಳಿದಂತೆ, ಅಗ್ನಿಯು ದಾಶೂರನಿಗೆ ವರಪ್ರದಾನಮಾಡಿ ಹೊರಟುಹೋದನಂತರ ಆ ದಾಶೂರನು ಕಾಡಿನ ಮಧ್ಯದಲ್ಲಿದ್ದ ಒಂದು ಕದಂಬ ವೃಕ್ಷವನ್ನು ನೋಡಿದನು. ಆ ಮರವು ತನ್ನ ಅಗ್ರಭಾವದಿಂದ ಮೇಘ ಮಂಡಲವನ್ನು ಮುಟ್ಟುತ್ತಿದ್ದಿತು. ಬಹುದೂರ ಸಂಚಾರದಿಂದ ಮಧ್ಯಾಹ್ನ ಕಾಲದಲ್ಲಿ ಆಯಾಸಗೊಂಡವುಗಳಂತೆ ಸೂರ್ಯನ ರಥಕ್ಕೆ ಕಟ್ಟಿರುವ ಕುದುರೆಗಳು ಈ ಕದಂಬ ವೃಕ್ಷದ ಕವಲುಗಳಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುತ್ತಿವೆಯೋ ಎನ್ನುವಷ್ಟು ಎತ್ತರವಾಗಿದ್ದಿತು.

(ಇಲ್ಲಿಂದ ಮೊದಲು ಈ ಸರ್ಗದ ಕೊನೆಯುವರೆವಿಗೂ ಕದಂಬ ವೃಕ್ಷದ ವರ್ಣನೆಯೇ ಆಗಿದೆ. ಈ ದ್ವಿತೀಯಾಂತವಾದ ಪದಗಳೆಲ್ಲ ೩೪ನೆಯ ಶ್ಲೋಕದಲ್ಲಿರುವ "ಕದಂಬ ವೃಕ್ಷ" ಎಂಬುದರ ವಿಶೇಷಣಗಳು. ಈ ಎಲ್ಲ ಶ್ಲೋಕಗಳನ್ನು ಒಟ್ಟುಗೂಡಿಸಿ, ೩೪ನೆಯ ಶ್ಲೋಕದ ಕೊನೆಯಲ್ಲಿರುವ "ದದರ್ಶ" ಎಂಬ ಕ್ರಿಯಾ ಪದದೊಂದಿಗೆ ಸಮನ್ವಯಮಾಡಬೇಕು.)

೨. ಆ ವೃಕ್ಷವು ತನ್ನ ಕೊಂಬೆಗಳೆಂಬ ಬಾಹುಗಳಿಂದ ದಿಙ್ಮಂಡಲದ ಮಧ್ಯದಲ್ಲಿ ಅತಿ ದೀರ್ಘವಾದ ವಿತಾನವನ್ನು (ಮೇಲುಕಟ್ಟನ್ನು) ಕಟ್ಟುತ್ತಿದೆಯೋ ಎಂಬಂತೆಯೂ ಅರಳಿರುವ ಹೂಗಳೆಂಬ ಕಣ್ಣುಗಳಿಂದ ವಿತಾನದಿಂದ (ಮೇಲುಕಟ್ಟು

ವಾತಾವಧೂಲಿತಾನಲ್ಪ ಭ್ರಮದ್ಭ್ರಮರಕುಂತಲಂ ।
ಪ್ರಮಾರ್ಜಯಂತಮಾಶಾನಾಂ ಮುಖಂ ಪಲ್ಲವಪಾಣಿಭಿಃ ॥ ೩ ॥

ಕೃಚ್ಛ್ರೈರುರುಗುಡುಚ್ಛಾಚ್ಛಭಂಜರೀಪುಂಜಕಂಜರೈಃ ।
ಆಸ್ಯೈರಿವಸತಾಂಬೂಲೈರ್ಹಸಂತಂ ವನಮಾಲಿಕಾಃ ॥ ೪ ॥

ಲತಾವಿಲಸಿತೋಲ್ಲಾಸ್ಯೈಃ ಪುಷ್ಪಕೇಸರಧೂಲಿಭಿಃ ।
ಆಬದ್ಧಮಂಡಲಾಭೋಗಂ ಪೂರ್ಣೇಂದುಮಿವ ದೀಪ್ತಿಭಿಃ ॥ ೫ ॥

ನಿಂದ) ಅನಾವೃತವಾದ ಪ್ರದೇಶವು ಬೇರೆಯಾವುದಾದರೂ ಉಳಿದಿದೆಯೋ ಅಥವಾ ಇಲ್ಲವೋ ಎಂದು ದಿಕ್ಕುಗಳನ್ನು ನೋಡುತ್ತಿದೆಯೋ ಎಂಬಂತೆಯೂ ಕಾಣುತ್ತಿತ್ತು.

೩. ಆ ಮರದ ಮೇಲೆ ಚಲಿಸುತ್ತಲಿರುವ ಭ್ರಮರಗಳೇ ವಾಯುವಿನಿಂದ ಪರಾಗ ಶೂನ್ಯವಾಗಿ ಮಾಡಲ್ಪಟ್ಟ ಅಧಿಕವಾದ ಕೇಶಪಾಶಗಳಂತೆ ಮೆರೆಯುತ್ತಿದ್ದವು. ಮರವು ತನ್ನ ಚಿಗುರುಗಳೆಂಬ ಕೈಗಳಿಂದ ದಿಕ್ಕುಗಳೆಂಬ ಲಲನೆಯರ ಮುಖವನ್ನು ಒರೆಸುತ್ತಿದ್ದಿತು.

೪. ಆ ಕದಂಬ ವೃಕ್ಷಕ್ಕೆ ಅಮೃತವಲ್ಲಿಯ ಹಂಬುಗಳು ಅನೇಕವಾಗಿ ಹಬ್ಬಿ ಕೊಂಡಿದ್ದುವು. ಅವುಗಳ ದಂತ ಪಙ್ಕ್ತಿಗಳಂತೆ ಶುಭ್ರವಾದ ಹೂಗಳ ಗೊಂಚಲು ಗಳಿಂದ ಆ ಮರದ ಪಲ್ಲವ ಪ್ರದೇಶಗಳು ಕೇಸರ ವರ್ಣಮಯವಾಗಿದ್ದುವು. ಈ ಕಾರಣದಿಂದ, ಆ ಮರವು ತಾಂಬೂಲವನ್ನು ಅಗಿದು, ಕೆಂಪಾದ ತನ್ನ ಮುಖ (ಬಾಯಿ) ಗಳಿಂದ ವನಪಙ್ಕ್ತಿಗಳನ್ನು ನೋಡಿ ನಗುತ್ತಿದೆಯೋ ಎಂಬಂತೆ ತೋರುತ್ತಿತ್ತು.

೫. ಪೂರ್ಣ ಚಂದ್ರನ ಸುತ್ತಲೂ ಪ್ರಕಾಶಗಳು ಒಂದು ಪರಿಧಿ (ಪರಿವೇಷ) ಯ ಆಕಾರವಾಗಿ ಹರಡಿಕೊಳ್ಳುವಂತೆ ಆ ಮರದ ಸುತ್ತಲೂ ಬೆಳೆದಿರುವ ಲತೆಗಳ ಶೋಭಾತಿಶಯದಿಂದ ಉಲ್ಲಾಸಗೊಂಡ, ಹೂಗಳ ಕೇಸರ (ಕಿಂಜಲ್ಕ) ಗಳಲ್ಲಿರುವ ಪರಾಗಗಳು ಮಂಡಲಾಕಾರವಾಗಿ ಒಂದು ಪರಿಧಿಯನ್ನು ಕಟ್ಟಿದ ರೀತಿಯಲ್ಲಿ ಬಿದ್ದು ಕೊಂಡಿದ್ದುವು.

ಸಂಕಟಂ ವಿಟಪಾವಲ್ಯಾ ಕುಂಜಕೂಜಚ್ಚಕೋರಯಾ ।
ಛನ್ನಯಾ ಸಿದ್ಧವೀಥ್ಯೇವ ಜಗದುಚ್ಚತಯಾ ಶ್ರಿಯಂ ॥ ೬ ॥

ಸ್ಪಂದಪೀಠೋಪವಿಷ್ಟಾನಾಂ ಲಂಬಮಾನೈಃ ಕಲಾಪಿನಾಂ ।
ಕಲಾಪೈಃ ಶೋಭಿತಂ ವ್ಯೋಮ ಸೇಂದ್ರಚಾಪೈರಿವಾಂಬುದೈಃ ॥ ೭ ॥

ಮಗ್ನೋನ್ಮಗ್ನೈಃ ಪ್ರತಿಸ್ಕಂಧಮಾಶ್ರಿತೈಶ್ಚಮರೈ ಸಿತೈಃ ।
ಪೂರ್ಣಂ ಮುಹುರ್ದೃಷ್ಟನಷ್ಟೈಃ ಸಂವತ್ಸರಮಿವೇಂದುಭಿಃ ॥ ೮ ॥

---

೬. ಲತೆಗಳಿಂದ ಆಚ್ಛಾದಿತವಾಗಿ ಶೀತಳವಾದ ಪ್ರದೇಶಗಳಲ್ಲಿ ಚಕೋರ ಪಕ್ಷಿಗಳು ಆ ಕದಂಬ ವೃಕ್ಷದ ಸಾಲಾಗಿರುವ ಕೊಂಬೆಗಳ ಮೇಲೆ ಕುಳಿತು ಸುಶ್ರಾವ್ಯವಾಗಿ ಕೂಗುತ್ತಿದ್ದುವು. ಇಂತಹ ಕೊಂಬೆಗಳು ಅನೇಕವಾಗಿ ನಿಬಿಡವಾಗಿದ್ದುವು. ಬಹಳ ಎತ್ತರವಾಗಿ ಬೆಳೆದಿರುವ ಆ ಮರವನ್ನು ಗ್ರಹನಕ್ಷತ್ರ ವಿಮಾನಾದಿಗಳಿಂದ ಆಚ್ಛಾದಿತವಾದ ಆಕಾಶಮಾರ್ಗವು ಆಶ್ರಯಿಸಿರುವ ಕಾರಣದಿಂದ ಅದು ಒಂದು ದೊಡ್ಡ ಬ್ರಹ್ಮಾಂಡವೋ ಎಂಬಂತೆ ಕಾಣುತ್ತಿತ್ತು.

೭. ಆ ಮರದ ವಿಶಾಲವಾದ ಕವಲುಗಳ ಮೇಲೆ ನವಿಲುಗಳು ಗುಂಪಾಗಿ ಕುಳಿತುಕೊಂಡಿರಲು ಕೆಳಗೆ ನೇತಾಡುತ್ತಿರುವ ಅವುಗಳ (ಬಾಲದ) ಗರಿಗಳಿಂದ ಆ ಮರವು ಕಾಮನ ಬಿಲ್ಲುಗಳಿಂದ (ಇಂದ್ರ ಧನಸ್ಸು) ಆವೃತವಾದ ಮೇಘಗಳಿಂದ ವ್ಯಾಪ್ತವಾದ ಆಕಾಶದಂತೆ ಶೋಭಿಸುತ್ತಿದ್ದಿತು.

೮. ಆ ವೃಕ್ಷದ ಪ್ರತಿಯೊಂದು ಕವಲುಗಳ ಕೋಟರಗಳನ್ನು ಆಶ್ರಯಿಸಿ ವಿಶ್ರಮಿಸಿಕೊಳ್ಳುತ್ತಲಿದ್ದ ಬೆಳ್ಳಗಿರುವ ಅನೇಕ ಚಮರ ಮೃಗಗಳು (ಕೋಟರಗಳಲ್ಲಿ) ಅಂತರ್ಗತವಾದ ತಮ್ಮ ಅರ್ಧ ದೇಹಗಳಿಂದ ಮಗ್ನಗಳಾಗಿಯೂ (ಮುಣುಗಿದವುಗಳಾಗಿಯೂ) ಹೊರಕ್ಕೆ ಕಾಣುತ್ತಿರುವ ಅರ್ಧ ದೇಹಗಳಿಂದ ಉನ್ಮಗ್ನಗಳಾಗಿಯೂ (ಅಥವಾ ಕೆಲವು ಕೋಟರಗಳೊಳಗೆ ಪ್ರವೇಶಮಾಡಿಯೂ ಮತ್ತೆ ಕೆಲವು ಹೊರಗೆ ಇದ್ದುಕೊಂಡೂ) ಇರುವ ಕಾರಣ ಕೆಲವು ವೇಳೆ ಪದೇ ಪದೇ ಕಣ್ಣಿಗೆ ಕಾಣುತ್ತಲೂ ಇನ್ನೊಂದು ವೇಳೆ ಕಾಣದೆಯೂ ಒಂದು ಸಂವತ್ಸರದಲ್ಲಿ ದೃಷ್ಟಾದೃಷ್ಟಗಳಾದ ಅನೇಕ ಚಂದ್ರಮಂಡಲಗಳು ಪೂರ್ಣವಾಗಿರುವಂತೆ ಆ ಕದಂಬ ಮರದಲ್ಲೆಲ್ಲಾ ತುಂಬಿಕೊಂಡಿದ್ದುವು.

ಕಪಿಂಜಲಕುಲಾಲಾಪೈಃ ಕಲಕೋಕಿಲಕೋಜತೈಃ ।
ಜೀವಂಜೀವವಿರಾವೈಶ್ಚ ಪ್ರಗಾಯಂತಮಿವೋಚ್ಛ್ರಿತೈಃ ॥ ೯ ॥

ಕಾದಂಬಕಕದಂಬೈಶ್ಚ ಕುಲಾಯಕೃತಕೇಲಿಭಿಃ ।
ಸ್ವರ್ಗಕೋಟರವಿಶ್ರಾಂತೈಃ ಸಿದ್ಧೈರ್ಜಗದಿವಾವೃತಂ ॥ ೧೦ ॥

ಪ್ರವಾಲಚಲಹಸ್ತಾಭಿರಲಿನೇತ್ರಾಭಿರಾಶ್ರಿತಂ ।
ಅಪ್ಸರೋಭಿರಿವ ಸ್ವರ್ಗಂ ಮಂಜರೀಭಿರಿತಸ್ತತಃ ॥ ೧೧ ॥

ಸೇಂದ್ರಚಾಪವಿಲಾಸೇನ ಕುಸುಮೋತ್ಕರರೇಣುನಾ ।
ಮಂಜರೀಪಿಂಜರಾಶ್ಯಾಮಂ ವಿದ್ಯುತ್ವಂತಮಿವಾಂಬುದಂ ॥ ೧೨ ॥

---

೯. ಕಪಿಂಜಲವೆಂಬ ಪಕ್ಷಿ ಸಮುದಾಯಗಳ ಆಲಾಪಗಳಿಂದಲೂ, ಕೋಗಿಲೆಗಳ ಮೃದು ಮಧುರವಾದ ಸ್ವರಗಳಿಂದಲೂ ಜೀವಂಜೀವವೆಂಬ ಹಕ್ಕಿಗಳ (ಚಕೋರ ಪಕ್ಷಿಗಳ ಅತ್ಯುಚ್ಚವಾದ ಕೂಗುಗಳಿಂದಲೂ ಆ ಕದಂಬ ವೃಕ್ಷವು ಗಾನಮಾಡುತ್ತಿರುವುದೋ ಎಂಬಂತೆ ತೋರುತ್ತಿತ್ತು.

೧೦. ಮತ್ತು ಕಲಹಂಸಪಕ್ಷಿಗಳ ಸಮೂಹಗಳು ಆ ಕದಂಬ ವೃಕ್ಷದಲ್ಲಿ ಗೂಡುಗಳನ್ನು ಕಟ್ಟಿಕೊಂಡು ಅವುಗಳಲ್ಲಿ ವಿನೋದವಾಗಿ ಕ್ರೀಡಿಸುತ್ತಿರುವುದರಿಂದ ಅದು ಸ್ವರ್ಗಲೋಕದಲ್ಲಿ ವಿಶ್ರಾಂತಿಹೊಂದುತ್ತಿರುವ ಸಿದ್ಧರೆಂಬ ದೇವಯೋನಿ ವಿಶೇಷಗಳಿಂದ ಆವೃತವಾದ ಬ್ರಹ್ಮಾಂಡವೋ ಎಂಬಂತೆ ಭಾಸವಾಗಿತ್ತು.

೧೧. ಪ್ರವಾಳ (ಹವಳ) ಸದೃಶಗಳಾದ ಕೈಗಳಿಂದಲೂ ಭ್ರಮರಸನ್ನಿಭನೇತ್ರಗಳಿಂದಲೂ ಕೂಡಿ ಮನಸ್ಸು ಆಕರ್ಷಿಸುವ ಅಪ್ಸರಸ್ ಸ್ತ್ರೀಯರಿಂದ ಆವೃತವಾದ ಸ್ವರ್ಗ ಲೋಕದಂತೆ ಆ ಕದಂಬ ವೃಕ್ಷವು ಪ್ರವಾಳಗಳೆಂಬ ಚಂಚಲವಾದ ಕೈಗಳುಳ್ಳ ಮತ್ತು ದುಂಬಿಗಳೆಂಬ ಕಣ್ಣುಗಳುಳ್ಳ ಕುಸುಮ ಮಂಜರಿಗಳಿಂದ ಎಲ್ಲ ಕಡೆಗಳಲ್ಲಿಯೂ ಆಶ್ರಯಿಸಲ್ಪಟ್ಟು ಇದ್ದಿತು.

೧೨. ಬಿಳಿ ದಾವರೆ, ನೀಲೋತ್ಪಲ ಮುಂತಾದ ನಾನಾ ವರ್ಣಗಳ ಲತಾಪುಷ್ಪಗಳಅರುವ ಪರಾಗಗಳು ರಾಶಿರಾಶಿಯಾಗಿ ಮಂಜರಿಗಳಿಂದ (ಹೂಗೊಂಚಲುಗಳಿಂದ) ಹೊಂಬಣ್ಣವಾಗಿಯೂ ಎಲೆಗಳಿಂದ ಸುತ್ತಲೂ ಕಪ್ಪಾಗಿಯೂ ಇದ್ದ ಆ ಕದಂಬ ವೃಕ್ಷದ ಸುತ್ತಲೂ ಇಂದ್ರ ಧನುಸ್ಸಿನ (ಕಾಮನ ಬಿಲ್ಲು) ವಿಲಾಸದಿಂದ ಬಿದ್ದಿರುವ ಕಾರಣ ಆ ಮರವು ಮಿಂಚಿನಿಂದೊಡಗೂಡಿದ ಮೇಘದಂತೆ ವಿರಾಜಿಸುತ್ತಿದ್ದಿತು.

ಸಹಸ್ರಭುಜಶಾಖಾಢ್ಯಂ ಪೂರಿತಾಕಾಶಕೋಟರಂ ।
ವಿಶ್ವರೂಪಟುಪ್ರೋನ್ನೃತ್ತಂ ಚಂದ್ರಾರ್ಕಕೃತಕುಂಡಲಂ ॥ ೧೩ ॥

ತಲೇ ನಿಷಣ್ಣನಾಗೇಂದ್ರಂ ವ್ಯೋಮ್ನಿ ತಾರಾಗಣಾಕುಲಂ ।
ಲತಾಪುಷ್ಪಮಯಂ ಮಧ್ಯೇ ಖಮಂಡಲಮಿವಾಪರಂ ॥ ೧೪ ॥

ಪಿತಾಮಹಮಿವಾಶೇಷ ಶೈಲಕಾನನಶಾಲಿನಂ ।
ಫಲಪಲ್ಲವಪುಷ್ಪಾಣಾಂ ಕೋಶಮೇಕಮಿವಾವನೌ ॥ ೧೫ ॥

ದಧಾನಂ ಕಲಿಕಾಜಾಲಂ ಸ್ಥಗಿತಂ ಪುಷ್ಪಧೂಲಿಭಿಃ ।
ಕಚ್ಛೇಷ್ವರ್ಕಕರಚ್ಛನ್ನತಾರಾಜಾಲಮಿವಾಂಬರಂ ॥ ೧೬ ॥

---

೧೩. ಆ ಮರಕ್ಕೆ ಸಾವಿರಾರು ಕೊಂಬೆಗಳು ಬಾಹುಗಳಂತೆಯೂ ಚಂದ್ರ ಸೂರ್ಯರೇ ಕುಂಡಲಗಳಂತೆಯೂ ಇದ್ದುದರಿಂದಲೂ ಅದು ಆಕಾಶದ ವಿಶಾಲವಾದ ಪ್ರಾಂತವನ್ನೆಲ್ಲ ವ್ಯಾಪಿಸಿಕೊಂಡಿದ್ದುದರಿಂದಲೂ ತನ್ನ ವಿಶ್ವರೂಪವನ್ನು ತೋರಿಸುತ್ತ ನರ್ತನ ಮಾಡುತ್ತಿರುವ ಮಹಾವಿಷ್ಣುವೋ ಎಂಬಂತೆ ಕಾಣುತ್ತಿತ್ತು.

೧೪. ಅದರ ಕೆಳಭಾಗದಲ್ಲಿ ಘಟಸರ್ಪಗಳು (ನಾಗೇಂದ್ರಗಳು) ವಿಶ್ರಮಿಸಿಕೊಳ್ಳುತ್ತಿದ್ದುವು. ಮೇಲುಗಡೆ ಅಂತರಿಕ್ಷದಲ್ಲಿ ನಕ್ಷತ್ರಗಣಗಳು ಆವರಿಸಿಕೊಂಡಿದ್ದುವು. ಮಧ್ಯದಲ್ಲಿ ಲತೆಗಳೂ ಪುಷ್ಪಗಳೂ ತುಂಬಿಕೊಂಡಿದ್ದುವು. ಅದುಕಾರಣ ಆ ಮರವು ಭೂಮಿಯ ತಲಭಾಗದಲ್ಲಿ ನಾಗೇಂದ್ರ (ಆದಿಶೇಷನೇ ಮೊದಲಾದ ಸರ್ಪಗಳು ಮತ್ತು ಅಷ್ಟದಿಗ್ಗಜಗಳು) ಗಳಿಂದ ಕೂಡಿ ಮೇಲೆ ನಕ್ಷತ್ರ ಮಂಡಲವೂ ಮಧ್ಯದಲ್ಲಿ ಲತಾಪುಷ್ಪಾದಿಗಳೂ ಉಳ್ಳ ಇದೇ ಒಂದು ಬೇರೆಯಾದ ಬ್ರಹ್ಮಾಂಡವೋ ಎಂಬಂತೆ ಇತ್ತು.

೧೫. ಬ್ರಹ್ಮದೇವನು ತನ್ನಿಂದಲೇ ಸೃಷ್ಟಿಮಾಡಲ್ಪಟ್ಟ ಸಕಲ ಪ್ರಾಣಿ ಸಂಘಗಳಿಂದಲೂ ಪರ್ವತಗಳಿಂದಲೂ ಅರಣ್ಯಗಳಿಂದಲೂ ಶೋಭಿಸುವಂತೆ ಈ ಕದಂಬ ವೃಕ್ಷವು ತಾನು ಬೆಳೆದಿರುವ ಆ ಪರ್ವತದಲ್ಲಿರುವ ಸಮಸ್ತ ಕಾನನಗಳಿಂದಲೂ ಶೋಭಿಸುತ್ತಲಿದ್ದಿತು. ಮತ್ತು ಫಲ, ಪಲ್ಲವ (ಚಿಗುರೆಲೆ) ಪುಷ್ಪಗಳಿಗೆಲ್ಲ ಭೂಮಿಯಲ್ಲಿ ಇದೊಂದೇ ಕೋಶ (ನಿಧಿ–ಬೊಕ್ಕಸ) ವಾಗಿರುವಂತೆ ನಿರ್ಮಿತವಾಗಿದ್ದಿತು.

೧೬. ಪಲ್ಲವ ಪ್ರದೇಶಗಳಲ್ಲಿ ಮೊಗ್ಗುಗಳ ರಾಶಿಯನ್ನು ಧರಿಸಿರುವುದಾಗಿಯೂ

ವಿಲೋಲವಿಹಗೈಃ ಸ್ಕಂಧೈಃ ಕುಲಾಯಕುಲಸಂಕುಲೈಃ ।
ವಲಿತಂ ಭೂತಲಂ ಲೋಕೇ ಪೂರ್ಣೈರ್ಜನಪದೈರಿವ ॥ ೧೭ ॥

ಮಂಜರೀಸುಪತಾಕಾಢ್ಯಂ ಲತಾಮಂಡಲಮಂಡಿತಂ ।
ಪುಷ್ಪಮಂಕೋಲಧವಲಂ ಪುಷ್ಪಪ್ರಕರಪೂರಿತಂ ॥ ೧೮ ॥

ಕೂಜಚ್ಚಕೋರಭ್ರಮರಶುಕಕೋಕಿಲಸಾರಿಕಂ ।
ಘನಸ್ತಬಕಸಂಛನ್ನಕುಹರೋಗ್ರಗವಾಕ್ಷಕಂ ॥ ೧೯ ॥

ಸಂಚರತ್ಪಕ್ಷಿಬಹುಲಂ ಜನಮಂಥರಕೋಟರಂ ।
ಸರ್ವಾಸಾಂ ವನದೇವಿನಾಂ ಅಂತಃಪುರಮಿವೋತ್ತಮಂ ॥ ೨೦ ॥

ಹೂಗಳ ಪರಾಗಗಳಿಂದ ಆಚ್ಛಾದಿತವಾಗಿಯೂ ಇರುವ ಆ ಮರವು ಸೂರ್ಯಕಿರಣಗಳಿಂದ ಆಚ್ಛಾದಿತವಾದ ನಕ್ಷತ್ರಮಂಡಲಗಳನ್ನು ಧರಿಸುವ ಗಗನಮಂಡಲದಂತೆ ಶೋಭಿಸುತ್ತಿದ್ದಿತು.

೧೭. ಆ ಮರದ ಕವಲು (ಸ್ಕಂಧ) ಭಾಗಗಳಲ್ಲೆಲ್ಲ ಬಗೆಬಗೆಯ ಹಕ್ಕಿಗಳ ಹಿಂಡುಗಳ ಗೂಡುಗಳನ್ನು ಮಾಡಿಕೊಂಡು ವಿಹರಿಸುತ್ತ ಮುತ್ತಿಕೊಂಡಿರುವ ಕಾರಣದಿಂದ ಅದು ಪ್ರಪಂಚದಲ್ಲಿ ಜನಭರಿತಗಳಾದ ನಾನಾ ದೇಶಗಳಿಂದ ವ್ಯಾಪ್ತವಾದ ಭೂತಲದಂತೆ ವಿರಾಜಮಾನವಾಗಿತ್ತು.

೧೮-೨೦. ಮತ್ತು ಆ ಕದಂಬ ವೃಕ್ಷವು ಅಂತಃಪುರದಂತೆ ಪುಷ್ಪಮಂಜರಿಗಳೆಂಬ ಧ್ವಜಪಟಗಳಿಂದ ಕಂಗೊಳಿಸುತ್ತಿತ್ತು. ಲತಾಮಂಟಪಗಳೆಂಬ ಕೊಠಡಿಗಳಿಂದ ಅಲಂಕೃತವಾಗಿತ್ತು. ಹೂಗಳೆಂಬ ಮನೆಯ ಗೋಡೆಗಳಿಗೆ ಲೇಪನಮಾಡುವ ಚೂರ್ಣದಿಂದ (ಸುಣ್ಣ) ಬೆಳ್ಳಗೆ ನಿರ್ಮಲವಾಗಿತ್ತು. ಹೂಗಳ ರಾಶಿಗಳಿಂದ ತುಂಬಿಕೊಂಡಿತ್ತು. ಅಂತಃಪುರದಲ್ಲಿ ಹೇಗೋ ಹಾಗೆ ಈ ಮರದಲ್ಲಿಯೂ, ಚಕೋರ, ಭ್ರಮರ, ಗಿಳಿ, ಕೋಗಿಲೆ, ಶಾರಿಕೆ ಮುಂತಾದ ಪಕ್ಷಿಗಳು ಇಂಪಾಗಿ ಧ್ವನಿಮಾಡುತ್ತಿದ್ದುವು. ಅನೇಕಾನೇಕ ರತ್ನ ಪುಷ್ಪ ಮುತ್ತು ಮುಂತಾದವುಗಳ ಗೊಂಚಲುಗಳಿಂದ ಮಧ್ಯದಲ್ಲಿ ಆಚ್ಛಾದಿತವಾಗಿ ಕಬ್ಬಿಣದ ಅಗಳಿ (ಅರ್ಗಲಾ–bolt) ಗಳಿಂದಲೂ ಕಿಂಚುಪ ಮುಂತಾದ ಸೇವಕರಿಂದಲೂ ಸುಗುಪ್ತವಾದ (ಅತ್ಯುಗ್ರ) ಮುಟ್ಟಲಾಗದ ಗವಾಕ್ಷಿಗಳಿಂದಲೂ ಮಾಡಿರುವ ಅಂತಃಪುರದಂತೆಯೇ ಹೂಗಳ ಗೊಂಚಲುಗಳಿಂದ ಪೂರ್ಣವಾಗಿ ಸರ್ಪಗಳನ್ನೊಳಗೊಂಡಿರುವುದರಿಂದ ಅತ್ಯುಗ್ರ (ಭಯಂಕರ) ವಾದ

ಕೂಜದ್ಭೃಂಗತರಂಗೌಘೈಃ ಪುಷ್ಪಕೇಸರರಾಜಿಭಿಃ ।
ರಾಜಮಾನಂ ಪತಂತೀಭಿಃ ಸರಿದ್ಭಿರಿವ ಪರ್ವತಂ ॥ ೨೧ ॥

ಭ್ರಮದ್ಭಿಃ ಪುಷ್ಪಪತ್ರೌಘೈರ್ಮಂದವಾತವಿಲಾಸಿಭಿಃ ।
ವರ್ಧಮಾನೈರ್ವೃತಸ್ಕಂಧಂ ಶುಭ್ರಾಭ್ರೈರಿವ ಭೂಧರಂ ॥ ೨೨ ॥

ಮಾತಂಗಕಟಘೃಷ್ಟೇನ ಜಾನುಸ್ತಬ್ಧೇನ ಪೀಠಿನಾ ।
ಆಭೋಗಿನಾ ಬದ್ಧಪದಂ ತರುಣೇವ ಮಹಾಚಲಂ ॥ ೨೩ ॥

ಪೊಟ್ಟರೆಗಳುಳ್ಳದ್ದಾಗಿತ್ತು. ಅನೇಕ ಪಕ್ಷಿಗಳು ವಿಶೇಷವಾಗಿ ಇಲ್ಲಿಂದಲ್ಲಿಗೆ ಹಾರಾಡಿ ಕೊಂಡಿದ್ದುವು. ಅಂತಃಪುರದ ಕಿರುಮನೆಗಳಲ್ಲಿ ಜನಗಳು ತುಂಬಿಕೊಂಡಿರುವಂತೆ ಆ ಮರದ ಬುಡದಲ್ಲಿ ನೆರಳಿಗೋಸ್ಕರವಾಗಿ ಬಹು ಮಂದಿ ಜನಗಳು ಗುಂಪು ಕೂಡಿ ಕೊಂಡು ಇರುತ್ತಿದ್ದರು. ಈ ಪ್ರಕಾರವಾಗಿ ಆ ಕದಂಬ ವೃಕ್ಷವು ಸಮಸ್ತ ವನದೇವ ತೆಗಳಿಗೂ ನಿವಾಸ ಯೋಗ್ಯವಾದ ದಿವ್ಯಾಂತಃಪುರದಂತೆ ಶೋಭಿಸುತ್ತಿತ್ತು.

೨೧. ಪುಷ್ಪಗಳ ಕೇಸರಗಳು (ಕಿಂಚಿಲ್ಕ) ರಾಶಿರಾಶಿಯಾಗಿ (ಸಾಲು ಸಾಲಾಗಿ) ದುಂದಿಗಳ ಝುಂಕಾರಧ್ವನಿಯೊಡಗೂಡಿ ಆ ಕದಂಬವೃಕ್ಷದಿಂದ ಅವಿಚ್ಛಿನ್ನವಾಗಿ ಕೆಳಗೆ ಬೀಳುತ್ತಿರುವ ಕಾರಣ ಆ ಮರವು ಝುಳಝುಳನೆ ಧ್ವನಿಮಾಡುತ್ತಾ ಮೇಲಿ ನಿಂದ ಕೆಳಕ್ಕೆ ಹರಿದು ಬರುತ್ತಿರುವ ವಾದ ಪ್ರವಾಹಗಳಿಂದ ಯುಕ್ತವಾದ ನದಿ ಗಳಿಂದ ಪರ್ವತವು ಹೇಗೋ ಹಾಗೆ ವಿರಾಜಮಾನವಾಗಿರುವುದು.

೨೨. ಮಂದಮಾರುತದಿಂದ ಚೆನ್ನಾಗಿ ಅಲುಗಾಡಿಸಲ್ಪಟ್ಟು, ಆ ಮರದ ಕೆಳ ಗಡೆ ಕವಲುಗಳಲ್ಲಿ ಜಾರಿ ಬಿದ್ದು ಹಾರಾಡುತ್ತಿರುವ ಹೂಗಳ ಮತ್ತು ಎಲೆಗಳ ರಾಶಿ ಗಳು ದಿನದಿನಕ್ಕೂ ವೃದ್ಧಿ ಹೊಂದುತ್ತಿರುವ ಕಾರಣ, ಆ ಮರವು ಮಂದಮಾರುತ ದಿಂದ ಸಂಚಾಲಿತಗಳಿಂದ ಬಿಳಿಯ ಮೇಘಗಳಿಂದ ಆವೃತವಾದ ಒಂದು ಪರ್ವತ ದಂತೆ ಪ್ರಕಾಶಿಸುತ್ತಿತ್ತು.

೨೩. ಕಾಡಾನೆಯು ಗಂಡಸ್ಥಲದಿಂದ ಚೆನ್ನಾಗಿ ಉಜ್ಜಲ್ಪಟ್ಟದ್ದಾಗಿಯೂ, ಉನ್ನತವಾದ ಮೊಣಕಾಲುಗಳುಳ್ಳವನ ಮೊಣಕಾಲಿನಂತೆ ಸ್ತಬ್ಧವಾಗಿಯೂ ಪೀಠ ದಂತೆ ಹರಡಿಕೊಂಡದ್ದಾಗಿಯೂ ವಿಸ್ತೀರ್ಣವಾಗಿಯೂ ಇರುವ ಮೂಲ ಬಂಧದಿಂದ (ಬುಡಕಟ್ಟು) ನೆಲದೊಳಕ್ಕೆ ಚೆನ್ನಾಗಿ ಬೇರು ಬಿಟ್ಟುಕೊಂಡು ದೃಢವಾಗಿರುವ ಆ

ವಿಚಿತ್ರವರ್ಣಪಕ್ಷಾಣಾಂ ಸ್ಕಂಧಕೋಟರಚಾರಿಣಾಂ ।
ವೃತಂ ಖಗಾನಾಂ ವೃಂದೇನ ಭೂತಾನಾಮಿವ ಶಾರ್ಙ್ಗಿಣಂ ॥ ೨೪ ॥

ಸ್ತಬಕಾಂಗುಲಿಜಾಲೇನ ಲೋಲೇನಾಭಿನಯಕ್ರಿಯಾಂ ।
ದಿಶಂತಮಿವ ವಲ್ಲೀನಾಂ ಪ್ರನೃತ್ತಾನಾಂ ವನಾನಿಲೈಃ ॥ ೨೫ ॥

ಕಶ್ಚಿದೇವ ನಿವಾಸೋ ಮೇ ನಾರ್ಥಿನಾಮಿತಿ ತುಷ್ಟಿತಃ ।
ನೃತ್ಯಂತಮಿವ ಬಾಹ್ವಾಢ್ಯಲತಾವಲಯವಲ್ಗನೈಃ ॥ ೨೬ ॥

ಕದಂಬವೃಕ್ಷವು ಪರ್ವತದ ಹತ್ತಿರ ಬೆಳೆದಿರುವ ಮರಗಳ ಗುಂಪಿನಿಂದ ಕೂಡಿದ ದೊಡ್ಡ ಬೆಟ್ಟದಂತೆ ಕಾಣಿಸಿತು.

೨೪. ಸಾವಿರಾರು ಪಾರ್ಷದರ ಸಮುದಾಯಗಳು ಸರ್ವಸ್ವರೂಪನಾದ ಶ್ರೀ ನಾರಾಯಣನನ್ನು ಆವರಿಸಿಕೊಂಡಿರುವಂತೆ, ನಾನಾಬಣ್ಣಗಳ ರೆಕ್ಕೆಗಳಿಂದ ಅಂದವಾಗಿರುವ ಬಗೆಬಗೆಯ ಪಕ್ಷಿಗಳ ಹಿಂಡುಗಳು ಆ ಕದಂಬವೃಕ್ಷದ ಕವಲುಗಳಲ್ಲಿಯೂ ಪೊಟ್ಟರೆಗಳಲ್ಲಿಯೂ ಅವರಿಸಿಕೊಂಡಿದ್ದುವು.

[ಶ್ರೀಮನ್ನಾರಾಯಣನ ಒಡ್ಡೋಲಗದಲ್ಲಿ ಇಂದ್ರಾದಿ ಸಕಲ ದೇವತೆಗಳೂ ನಾರದಾದಿಋಷಿಗಳೂ ಪಾರ್ಷದವರು, ಆಗಿರುವರು.]

೨೫. ಅರಣ್ಯದಲ್ಲಿ ಬೀಸುವ ಮಾರುತಗಳಿಂದ ವಿಶೇಷವಾಗಿ ನರ್ತನ ಮಾಡುತ್ತಿರುವ ಲತೆಗಳಿಗೆ ಈ ಮರವು ತನ್ನ ಹೂಗಳ ಗೊಂಚಲುಗಳೆಂಬ ಬೆರಳುಗಳ ಸಮೂಹವನ್ನೂ ಅಳ್ಳಾಡಿಸುತ್ತಾ ಅಭಿನಯ ಮಾಡುವುದನ್ನು (ಅಭಿನಯ ಕೌಶಲ್ಯವನ್ನು) ಉಪದೇಶಮಾಡುತ್ತಿರುವುದೋ ಎಂಬಂತೆ ತೋರುತ್ತಿತ್ತು.

೨೬. ಆ ಮರದಲ್ಲಿ ಬಹು ಸೊಂಪಾಗಿ ಬೆಳೆದು ಹಬ್ಬಿಕೊಂಡಿರುವ ಲತಾವಲಯಗಳು ನರ್ತನ ಮಾಡುತ್ತಿರುವುದರಿಂದ ಅದು—"ನನ್ನ ಮೂಲ (ಬುಡ) ಪೊಟ್ಟರೆ, ಕೊಂಬೆ, ಹೂವು ಎಲೆ ಮುಂತಾದವುಗಳೊಳಗೆ ಯಾವುದೋ ಒಂದು ಮಾತ್ರವೇ ಮನುಷ್ಯ ಮೃಗಪಕ್ಷ್ಯಾದಿ ಪ್ರಾಣಿಗಳಿಗೆ ನಿವಾಸ ಯೋಗ್ಯವಾದುದಾಗಿಲ್ಲ. ಆದರೆ ನನ್ನ ಎಲ್ಲ ಪ್ರದೇಶಗಳೂ ಸಕಲ ಪ್ರಾಣಿಗಳಿಗೂ ನಾನಾ ವಿಧಗಳಲ್ಲಿ ಆಶ್ರಯವಾಗಿರುವುವು. ಪರೋಪಕಾರಮಾಡುವ ವಿಚಾರದಲ್ಲಿ ನನ್ನ ಸರ್ವಾಂಗಗಳೂ

ಲತಾಕಾಂತೈಕಕಾಂತತ್ವಾಚ್ಛೃಂಗಾರರಸ ನಿರ್ಭರಂ ।
ಕಾಕಲ್ಯೇವ ಪ್ರಗಾಯಂತಂ ಮತ್ತಾಲಿನಿಜನಿಸ್ವನೈಃ ॥ ೨೭ ॥

ಆದರೋನ್ಮುಕ್ತಕುಸುಮಂ ಸಿದ್ಧಾನಾಂ ವ್ಯೋಮಚಾರಿಣಾಂ ।
ಸ್ವಾಗತಾನೀವ ಕುರ್ವಾಣಂ ಕೋಕಿಲಾಲಿಕುಲಾರವೈಃ ॥ ೨೮ ॥

ಲತಾಪುಷ್ಪಫಲೋಲ್ಲಾಸಂ ಪ್ರಾಂತಪಂಚಮಹೀರುಹಾಂ ।
ವಿಹಸಂತಮಿವಾಚ್ಛಾಭಿಃ ಪುಷ್ಪಕುಡ್ಮಲದೀಪ್ತಿಭಿಃ ॥ ೨೯ ॥

ಸಫಲವಾಗಿವೆ. ನನ್ನಂತಹ ಪರೋಪಕಾರಿಯು ಯಾವನಿರುವನು?" ಎಂದು ಸಂತುಷ್ಟನಾಗಿ ಹರ್ಷಪರವಶತೆಯಿಂದ ಕುಣಿಯುತ್ತಿರುವುದೋ ಎಂಬಂತೆ ಭಾಸವಾಗುವುದು.

೨೭. ಮಧು (ಪುಷ್ಪರಸ) ಪಾನದಿಂದ ಮದಿಸಿದ ಭ್ರಮರಗಳು ವಿಶೇಷವಾಗಿ ಝುಂಕಾರ ಮಾಡುವುದರಿಂದ ಆ ಕದಂಬ ವೃಕ್ಷವು ನಾನಾ ವಿಧಲತೆಗಳೆಂಬ ಅನೇಕ ಕಾಂತೆಯರಿಗೆ ತಾನೊಬ್ಬನೇ ಕಾಂತನಾಗಿರುವ ಕಾರಣ ಶೃಂಗಾರ ರಸದಿಂದ ಪರಿಪೂರ್ಣವಾಗಿ ಮಧುರವಾದ ಸೂಕ್ಷ್ಮವಾದ ಧ್ವನಿಯಿಂದ ಹಾಡುತ್ತಿದೆಯೋ ಎಂಬಂತೆ ವಿರಾಜಿಸಿತು.

೨೮. ಈ ಕದಂಬವೃಕ್ಷವು ತನ್ನಲ್ಲಿ ವಾಸವಾಗಿರುವ ಕೋಗಿಲೆಗಳ ಮತ್ತು ದುಂಬಿಗಳ ಹಿಂಡುಗಳು ಕೂಗುವ ಧ್ವನಿಗಳ ಮೂಲಕ, ಗಗನಮಾರ್ಗದಲ್ಲಿ ಸಂಚರಿಸುತ್ತ ತನ್ನ ಸಮೀಪಕ್ಕೆ ಬಂದ ಸಿದ್ಧರೆಂಬ ದೇವಯೋನಿಗಳಿಗೆ ಸ್ವಾಗತ ಭಾಷಣಗಳನ್ನು ಹೇಳುತ್ತಲೂ ಆದರದಿಂದ ಹೂವುಗಳನ್ನು ಅವರ ಮೇಲೆ ಎರಚುತ್ತಲೂ ಉಪಚರಿಸುತ್ತಿರುವಂತೆ ಕಾಣುವುದು.

೨೯. ತನ್ನ ಪುಷ್ಪಗಳ ಮತ್ತು ಮೊಗ್ಗುಗಳ ಅತ್ಯಂತ ನಿರ್ಮಲವಾದ (ಶುಭ್ರವಾದ) ಕಾಂತಿಗಳಿಂದ ಆ ಮರವು ತನಗೆ ಸಮೀಪದಲ್ಲಿಯೇ ಬೆಳೆದಿರುವ ವಟ (ಆಲ) ಉದುಂಬರ (ಅತ್ತಿ) ಪ್ಲಕ್ಷ, ಆಮ್ರ (ಮಾವು) ಪಲಾಶ (ಮುತ್ತುಗ) ಗಳೆಂಬ ಪಂಚ ವಿಧ ಪುಣ್ಯವೃಕ್ಷಗಳ (ಅಥವಾ, ಉತ್ತರ ಪ್ರಾಂತದಲ್ಲಿರುವ ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ, ಹರಚಂದನಗಳೆಂಬ ಪಂಚ (ದೇವಲೋಕದ) ವೃಕ್ಷಗಳ) ಲತಾಪುಷ್ಪ ಫಲಗಳ ಉಲ್ಲಾಸವನ್ನು (ಸಮೃದ್ಧಿಯನ್ನು) ಪರಿಹಾಸ ಮಾಡುತ್ತಿದೆಯೋ ಎಂಬಂತೆ ವಿರಾಜಿಸಿತು.

ಪಾರಿಜಾತಮಿವಾಜೇತುಮೂರ್ಧ್ವಾಗ್ರೈಃ ಖಗಮಂಡಲೈಃ ।
ವ್ಯೋಮಾಂತರಾಭಿಧಾವಂತಮಲಿಮುದ್ಧತಕಂಧರಂ ॥ ೩೦ ॥

ಮಧ್ಯಭಾಗಸ್ಫುರದ್ಭೃಂಗೈಃ ಸ್ತಬಕೈರ್ಘನಪಂಕ್ತಿಭಿಃ ।
ಸಹಸ್ರಾಕ್ಷತ್ವಮತುಲ್ಯೈರ್ಜೇತುಮಿಂದ್ರಮಿವೋದ್ಯತಂ ॥ ೩೧ ॥

ಕ್ವಚಿತ್ಕುಸುಮಗುಚ್ಛಾಚ್ಛಫಣಾಮಣಿಗಣಾವೃತಂ ।
ಪಾತಾಲಾದುತ್ಥಿತಂ ಶೇಷಮಿವ ವ್ಯೋಮದಿದೃಕ್ಷಯಾ ॥ ೩೨ ॥

ರಜಸೋದ್ಧೂಲತಾಕಾರಂ ದ್ವಿತೀಯಮಿವ ಶಂಕರಂ
ಛಾಯಯಾ ಫಲಶಾಲಿನ್ಯಾ ಸಮಸ್ತಜನಶಂಕರಂ ॥ ೩೩ ॥

---

೩೦. ಈ ಮರದ ಮೇಲೆ ಕುಳಿತಿದ್ದ ಹಕ್ಕಿಗಳು ಮೇಲಕ್ಕೆ ಹಾರಿ ಮಂಡಲಾಕಾರವಾಗಿ ಸುತ್ತುತ್ತಾ ಇರುವದರಿಂದ ಆ ಮರವು ಸ್ವರ್ಗಲೋಕದ ನಂದವನದಲ್ಲಿರುವ ಪಾರಿಜಾತವೃಕ್ಷವನ್ನು ಸಂಪೂರ್ಣವಾಗಿ ಜಯಿಸಬಿಡಬೇಕೇಂಬ ಆತುರದಿಂದ ಬಹು ಮಟ್ಟಿಗೆ ತನ್ನ ಕುತ್ತಿಗೆಯನ್ನು ಮೇಲಕ್ಕೆತ್ತಿಕೊಂಡು ಗಗನಮಧ್ಯದಲ್ಲಿ ನೇರವಾಗಿ ಓಡುತ್ತಿದೆಯೋ ಎಂಬಂತೆ ಕಾಣುವುದು.

೩೧. ಈ ಕದಂಬ ವೃಕ್ಷದಲ್ಲಿ ನಿಬಿಡವಾದ ಶ್ರೇಣಿಗಳಾಗಿ ಆವಿರ್ಭವಿಸಿರುವ ಅನೇಕ ಪುಷ್ಪಗುಚ್ಛಗಳ ಮಧ್ಯದಲ್ಲಿ ಲಕ್ಷೋಪಲಕ್ಷ ದುಂಬಿಗಳು ಹಾರಾಡುತ್ತಿರುವುದನ್ನು ನೋಡಿದರೆ ಈ ಮರವು ಕಾಂತಿಯಿಂತಲೂ ಎಣಿಕೆ (ಸಂಖ್ಯೆ) ಯಿಂದಲೂ ಅಧಿಕವಾಗಿ ಅಸದೃಶಗಳಾಗಿರುವ ಭೃಂಗಮಯಗಳಾದ ಸ್ತಬಕಗಳಿಂದಲೇ ಅಸಂಖ್ಯಾಕ ಕಣ್ಣುಗಳು ಇರುವಿಕೆಯನ್ನು (ಅಸಂಖ್ಯ ನೇತ್ರತ್ವವನ್ನು) ಪಡೆದು ಕೇವಲ ಒಂದು ಸಾವಿರ ಕಣ್ಣುಗಳುಳ್ಳ (ಸಹಸ್ರಾಕ್ಷನಾದ) ಇಂದ್ರನನ್ನು ಜಯಿಸುವುದಕ್ಕೆ ಪ್ರಯತ್ನ ಪಟ್ಟಿರುವುದೋ ಎಂಬಂತೆ ತೋರುವುದು.

೩೨. ಆ ವೃಕ್ಷದ ಕೆಲವು ಭಾಗಗಳಲ್ಲಿ ಹೂಗಳ ಗೊಂಚಲುಗಳು ಹಾವುಗಳ ಹೆಡೆಗಳಲ್ಲಿರುವ ರತ್ನಗಳಂತೆ ಪ್ರಕಾಶಿಸುತ್ತಿರುವ ಕಾರಣ ಹೂಗಳ ಗೊಂಚಲುಗಳೆಂಬ ಮುತ್ತು ಅವುಗಳಂತೆ ಸ್ವಚ್ಛವಾದ ಹೆಡೆಗಳಲ್ಲಿರುವ ರತ್ನಗಳ ಸಮೂಹದಿಂದ ಆವೃತವಾದ ಆದಿಶೇಷನೇ ಆಕಾಶವನ್ನು ನೋಡಬೇಕೆಂಬ ಕುತೂಹಲದಿಂದ ಪಾತಾಳ ಲೋಕವನ್ನು ಬಿಟ್ಟು ಎದ್ದುಬಂದಿರುವನೋ ಎಂಬಂತೆ ಆ ಮರವು ಶೋಭಿಸಿತು.

೩೩. ಆ ಕದಂಬ ವೃಕ್ಷವು ಸಕಲ ಭಾಗಗಳಲ್ಲಿಯೂ ಹೂಗಳ ಪರಾಗಗಳಿಂದ

ನಿಬಿಡದಲನಿವಾಹಭಿನ್ನಕೋಶೈಃ
ಕುಸುಮಲತಾನವಮಂಡಪೈರುಪೇತಂ ।
ಪುರಮಿವ ಗಗನೇ ಕದಂಬವೃಕ್ಷಂ
ಖಗಕುಲನಾಗರಸಂಕುಲಂ ದದರ್ಶ || ೩೪ ||

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ದಾಶೂರೋಪಾಖ್ಯಾನೇ ದಾಶೂರ ಕದಂಬವರ್ಣನಂ"
ಏಕೋನಪಂಚಾಂಶಃ ಸರ್ಗಃ

ವ್ಯಾಪ್ತವಾಗಿದ್ದ ಕಾರಣ ಅದು ಸರ್ವಾಂಗಗಳಲ್ಲಿಯೂ ಭಸ್ಮೋದ್ಧೂಳಿತವಾದ ಸಾಕ್ಷಾತ್ ಎರಡನೆಯ (ಬೇರೊಬ್ಬ) ಪರಮೇಶ್ವರನೋ ಎಂಬ ಭಾವನೆಯನ್ನುಂಟು ಮಾಡುತ್ತಿತ್ತು. ಆ ಪರಮೇಶ್ವರನು ತನ್ನ ಭಕ್ತರಿಗೆ ಮಾತ್ರವೇ ಸುಖವನ್ನುಂಟು ಮಾಡುತ್ತಾ ಶಂಕರನೆಂದು ಪ್ರಸಿದ್ಧನಾಗಿರುವನು. ಈ ಮರವು ಆದರೋ ತನ್ನ ನೆರಳು, ಫಲ, ಪುಷ್ಪಾದಿಗಳಿಂದ ಸಕಲ ಪ್ರಾಣಿಗಳಿಗೂ ಸುಖಾವಹವಾಗಿದ್ದಿತು.

೩೪. ಮತ್ತು ದಟ್ಟವಾಗಿ ಬೆಳೆದಿರುವ ಎಲೆಗಳ ಸಮೂಹಗಳಲ್ಲಿ ಅರಳಿದ ಮೊಗ್ಗುಗಳುಳ್ಳಂಥ ಮತ್ತು ದಟ್ಟವಾಗಿ ಬೆಳೆದಿರುವ ಎಲೆಗಳ ಸಮೂಹಗಳ ಭೇದದಿಂದ ಬೇರೆ ಬೇರೆಯಾದ ಸಂಸ್ಥಾನಗಳುಳ್ಳಂಥ ಪುಷ್ಪಲತೆಗಳ ಹೊಸ ಮಂಟಪಗಳಿಂದ ಆವೃತವಾಗಿರುವುದರಿಂದಲೂ ಅವುಗಳೊಳಗೆಲ್ಲ ಹಕ್ಕಿಗಳು ಪಟ್ಟಣಿಗರಂತೆ ಗುಂಪು ಗುಂಪಾಗಿ ತುಂಬಿಕೊಂಡಿರುವುದರಿಂದಲೂ ಆ ಕದಂಬ ವೃಕ್ಷವು ಅಂತರಿಕ್ಷದಲ್ಲಿ ನಿಜವಾಗಿಯೇ ನಿರ್ಮಿತವಾದ ಒಂದು ದೊಡ್ಡ ಪಟ್ಟಣವೋ ಎಂಬಂತೆ ವಿರಾಜಮಾನವಾಗಿತ್ತು. ಇಂತಹ ಕದಂಬ ವೃಕ್ಷವನ್ನು ಆ ದಾಶೂರನು ಕಂಡು ನಲಿದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಕದಂಬ ವರ್ಣನ" ಎಂಬ
ನಲ್ವತ್ತೊಂಬತ್ತನೆಯ ಸರ್ಗವು

ಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ತಮಥಾಸೌ ತಥಾ ಬುದ್ಧಿಫಲಪಲ್ಲವಶಾಲಿನಂ ।
ಆನಂದಮಂಥರಮನಾಃ ಪುಷ್ಪರೂಪಾಚಲೋಪಮಂ ॥ ೧ ॥

ಕದಂಬಂ ರೋದಸೀಸ್ತಂಭಮಾರುರೋಹ ವನಸ್ಥಿತಂ ।
ಏಕಾರ್ಣವಗತಂ ಶೌರಿರ್ವಟವೃಕ್ಷಮಿವೋನ್ನತಂ ॥ ೨ ॥

ತತ್ರಾಸೌ ವ್ಯೋಮಲಗ್ನಾಯಾಃ ಶಾಖಾಯಾಃ ಪ್ರಾಂತಪಲ್ಲವೇ ।
ನಿವೇಶ ವಿಗತಾಶಂಕಮೇಕಾಗ್ರಂ ತಪ ಆಸ್ಥಿತಃ ॥ ೩ ॥

ಐವತ್ತನೆಯ ಸರ್ಗ

೧-೨. ಶ್ರೀ ವಸಿಷ್ಠನು (ಪುನಃ) ಹೇಳಿದನು—ಆ ಕದಂಬ ವೃಕ್ಷವನ್ನು ನೋಡಿದ ತರುವಾಯ ಪೂರ್ವೋಕ್ತ ಪ್ರಕಾರವಾದ ಭೂಮಿಯೆಲ್ಲವೂ ಅಪವಿತ್ರವಾದುದು ಎಂಬ ಬುದ್ಧಿಯುಳ್ಳವನಾಗಿದ್ದ ಆ ದಾಶೂರನು ಆನಂದಭರದಿಂದ ಪ್ರಶಾಂತವಾದ ಮನಸ್ಸುಳ್ಳವನಾಗಿ ಫಲಗಳಿಂದಲೂ ಪಲ್ಲವಾದಿಗಳಿಂದಲೂ ಶೋಭಿಸುತ್ತಲಿದ್ದ ಪುಷ್ಪಮಯವಾದ ಪರ್ವತಕ್ಕೆ ಸಮನಾಗಿ ಕಂಗೊಳಿಸುತಲಿದ್ದ ಭೂಮ್ಯಾಕಾಶಗಳ ಮಧ್ಯದಲ್ಲಿ ನೆಟ್ಟಿರುವ ಒಂದು ದೊಡ್ಡ ಸ್ತಂಭದಂತೆ ಆ ಕಾಡಿನಲ್ಲಿದ್ದ ಕದಂಬ ವೃಕ್ಷವನ್ನು ಪ್ರಳಯಕಾಲದಲ್ಲಿ ಏಕಾರ್ಣವ ಮಧ್ಯಗತವಾದ ಮಹಾವಟವೃಕ್ಷವನ್ನು ಶ್ರೀಮನ್ನಾರಾಯಣನು ಹತ್ತುವಂತೆ ಹತ್ತಿ ಕುಳಿತುಕೊಂಡನು.

೩. ಆ ಕದಂಬ ವೃಕ್ಷದ ಮೇಲುಗಡೆ ಚಿತ್ತೈಕಾಗ್ರತೆಯಿಂದ ಘೋರವಾದ ತಪಸ್ಸನ್ನು ಮಾಡುವವನಾಗಿ ಆ ದಾಶೂರನು ಗಗನವನ್ನು ಸ್ಪರ್ಶಮಾಡುತ್ತಿರುವ ಒಂದು ಕೊಂಬೆಯ ತುದಿಯಲ್ಲಿರುವ ಚಿಗುರಿನ ಮೇಲೆ ಸ್ಥಳದ ಅಪವಿತ್ರತೆ ಮುಂತಾದ ಮೊದಲಿನ ಆ ಶಂಕೆಗಳನ್ನು ಸಂಪೂರ್ಣವಾಗಿ ಬಿಟ್ಟು ಬಿಟ್ಟು (ನಿರಾತಂಕನಾಗಿ) ಕುಳಿತನು.

ಅಥೋಪವಿಶ್ಯ ಮೃದುನಿ ನವಪಲ್ಲವವಿಷ್ಟರೇ ।
ಕ್ಷಣಮಾಲೋಕಿತಾಸ್ತೇನ ದಿಶಃ ಕೌತುಕಚಂಚಲಂ ॥ ೪ ॥

ಸರಿದೇಕಾವಲೀರಮ್ಯಾಃ ಶೈಲೇಂದ್ರಸ್ತನಕುಡ್ಮಲಾಃ ।
ನಿರ್ಮಲಾಕಾಶಕಬರಾ ಲೋಲನೀಲಾಂಬುದಾಲಕಾಃ ॥ ೫ ॥

ನೀಲಪಲ್ಲವವಸನಾಃ ಪುಷ್ಪಪೂರಾವತಂಸಿಕಾಃ ।
ಗೃಹೀತಸಾಗರಾಪೂರ್ಣಕಲಶಾಃ ಪುರುಭೂಷಣಾಃ ॥ ೬ ॥

ಧೃತಪ್ರಫುಲ್ಲಪದ್ಮಿನ್ಯಃ ಸುಗಂಧಿಮುಖಮಾರುತಃ ।
ನೀಲಘುಂಘುಮುಕಾಕಲ್ಯೋ ನಿರ್ಝರಾರಾವನೂಪುರಾಃ ॥ ೭ ॥

---

೪. ಬಳಿಕ, ಹೊಸದಾದ ಚಿಗುರೆಲೆಗಳಿಂದ ಬಹು ಮೃದುವಾಗಿ ಕಲ್ಪಿತವಾದ ಆಸನದ ಮೇಲೆ ಅವನು ಕುಳಿತುಕೊಂಡು ಕುತೂಹಲದಿಂದ ಕಣ್ಣುಗಳನ್ನು ತಿರುಗಿಸುತ್ತಾ ಒಂದು ಕ್ಷಣಕಾಲ ಎಲ್ಲ ದಿಕ್ಕುಗಳನ್ನೂ ದೃಷ್ಟಿಸಿ ನೋಡಿದನು.

೫. ಆಗ ಎಲ್ಲ ದಿಕ್ಕುಗಳೂ ಅವನಿಗೆ ಸೌಂದರ್ಯವತಿಯರಾದ ಲಲನಾಮಣಿಗಳಂತೆ ರಮ್ಯವಾಗಿದ್ದುವು. ಹೇಗೆಂದರೆ ಆ ದಿಗಂಗನೆಯರಿಗೆ ನದಿಗಳು ಏಕಾವಳೀ (ಒಂದೆಳೆಯು)ಹಾರಗಳಾಗಿಯೂ ದೊಡ್ಡ ದೊಡ್ಡ ಕುಲಪರ್ವತಗಳು ಸ್ತನಮಂಡಲಗಳಾಗಿಯೂ ನಿರ್ಮಲವಾದ ಆಕಾಶವೇ ಕೇಶರಾಶಿಯಾಗಿಯೂ ಸಂಚರಿಸುತ್ತಲಿರುವ ನೀಲಮೇಘಗಳೇ ಮುಂಗುರುಳುಗಳಾಗಿಯೂ ವಿಶೇಷವಾದ ಲಾವಣ್ಯವನ್ನು ಹೆಚ್ಚಿಸಿದುವು.

೬. ಆ ದಿಗಂಗನೆಯರು ನೀಲವರ್ಣದ ಪಲ್ಲವಗಳೆಂಬ ಉತ್ತಮವಾದ ಸೀರೆಗಳನ್ನುಟ್ಟವರಾಗಿಯೂ ಹೂಗಳ ಗೊಂಚಲುಗಳೆಂಬ ಕರ್ಣಾವತಂಸ (ಕಿವಿಯ ಓಲೆ ಮುಂತಾದ ಒಡವೆ) ಗಳನ್ನು ಧರಿಸಿಯೂ ಸಮುದ್ರಗಳೆಂಬ ಪೂರ್ಣ ಕಲಶಗಳನ್ನು ಕೈಗಳಲ್ಲಿ ಹಿಡಿದವರಾಗಿಯೂ ನಾನಾ ವಿಧ ಅಲಂಕಾರಗಳಿಂದ ಭೂಷಿತೆಯರಾಗಿಯೂ ಇದ್ದರು.

೭. ವಿಲಾಸವತಿಯರಾದ ಲಲನೆಯರು ವಿನೋದಕ್ಕಾಗಿ ತಮ್ಮ ಕೈಗಳಲ್ಲಿ ಹೂಗಳನ್ನು ಧರಿಸುವಂತೆ ಈ ದಿಕ್ಕುಗಳು ವಿಕಾಸಗೊಂಡ ಕಮಲಲತೆಗಳನ್ನು ಧರಿಸಿದ್ದುವು. ಲಲನೆಯರ ಮುಖದಿಂದ ಸುಗಂಧಮಯವಾದ ನಿಶ್ವಾಸವಾಯುವು ಹೊರಡುವಂತೆ ದಿಙ್ಮುಖಗಳಿಂದ ಪುಷ್ಪಗಳ ವಾಸನೆಯಿಂದ ಪೂರ್ಣವಾದ ಮಂದ

ದ್ಯುಮೂರ್ಧಾನೋ ಮಹೀಪಾದಾ ವನಾಲೀರೋಮರಾಜಯಃ ।
ಜಂಗಲೋರು ನಿತಂಬಿನ್ಯಶ್ಚಂದ್ರಾರ್ಕಕೃತಕುಂಡಲಾಃ ॥ ೮ ॥

ಶಾಲಿಸಂಸಾರಕೇದಾರಾಶ್ಚಂದನಸ್ಥಾಲಿಕಾನ್ವಿತಾಃ ।
ಶಿಖರೋರಸಿ ಜಾಲಗ್ನಹಿಮಶುಭ್ರಾಂಬುದಾಂಶುಕಾಃ ॥ ೯ ॥

ಮಹಾರ್ಣವಪಯಃ ಪೂರನವಮಂಡನದರ್ಪಣಾಃ ।
ಋಕ್ಷಾಘರ್ಮಪುಲಕಾ ಭುವನಾಂತಃ ಪುರಾಂತರಾಃ ॥ ೧೦ ॥

ಮಾರುತವು ಬೀಸುತ್ತಿದ್ದಿತು. ಭ್ರಮರ ಕೋಗಿಲೆ ಮುಂತಾದ ಹಕ್ಕಿಗಳ ಧ್ವನಿಗಳು ದಿಗಂಗನೆಯರ ಅವ್ಯಕ್ತಮಧುರವಾದ ಗಾನವಾಗಿ ಪರಿಣಮಿಸಿದುವು. ಪರ್ವತಗಳಿಂದ ಹರಿಯುವ ಜಲ ಪ್ರವಾಹಗಳ ಝುಳ ಝುಳ ಧ್ವನಿಗಳು ದಿಕ್ಕುಗಳೆಂಬ ಲಲನೆಯ ಕಾಲ್ಕಡಗಗಳ ಶಿಂಜಿತ ಧ್ವನಿಯಂತೆ (ನೂಪುರ–ಕಾಲ್ಕಡಗ) ಕೇಳಿಸಿದುವು

೮. ದಿಕ್ಕುಗಳೆಂಬ ಸುಂದರಿಯರಿಗೆ ಆಕಾಶವೇ ತಲೆಯು ಭೂಮಿಯೇ ಪಾದಗಳು. ಕಾನನಗಳ ಶ್ರೇಣಿಯೇ ರೋಮರಾಜಿ. ದೊಡ್ಡ ಮರುಭೂಮಿಗಳೇ ನಿತಂಬಗಳು. ಸೂರ್ಯಚಂದ್ರರೇ ಕುಂಡಗಳು.

೯. ಭತ್ತ ಮುಂತಾದ ಪೈರುಗಳು ಕಂಪಿಸುತ್ತಿರುವ ಕಾರಣ ಈ ದಿಕ್ಕುಗಳೆಂಬ ಅಂಗನೆಯರ ಅಂಗೋಪಾಂಗಗಳು ಚಲಿಸುತ್ತಿರುವಂತೆ ಕಂಡವು. ಭ್ರಮರಗಳಿಂದ ಕೂಡಿದ ಚಂದನವೃಕ್ಷಗಳು ದಿಕ್ಕುಗಳೆಂಬ ಸ್ತ್ರೀಯರ ಗಂಧದಿಂದ ಬೊಳೆಯಲ್ಪಟ್ಟ ಲಲಾಟಗಳಂತೆ ಇದ್ದುವು. ಮತ್ತು ಆ ದಿಗಂಗನೆಯರು ಪರ್ವತಶಿಖರಗಳೆಂಬ ಸ್ತನಗಳ ಮೇಲೆ ಹಿಮದ ಗಡ್ಡೆಗಳಂತೆ ಶುಭ್ರವಾದ ಮೇಘಗಳೆಂಬ ವಸ್ತ್ರಗಳನ್ನು ಹೊದೆದುಕೊಂಡಿದ್ದರು.

೧೦. ದೊಡ್ಡ ದೊಡ್ಡ ಚತುಸಮುದ್ರಗಳ ಜಲಪೂರವೇ ಆ ದಿಕ್ಕುಗಳೆಂಬ ರಮಣೀಯರಿಗೆ ಅಲಂಕಾರ ಮಾಡಿಕೊಳ್ಳಲಿಕ್ಕೆ ಸಾಧಕವಾದ ಹೊಸ ಕನ್ನಡಿಗಳಾಯಿತು. ಇವರಿಗೆ, ತಾರಾಗಣಗಳೇ (ನಕ್ಷತ್ರಗಳ ಗುಂಪು) ಸ್ವೇದ ಬಿಂದುಗಳಾಗಿಯೂ (ಬೆವರಿನ ಹನಿ) ಮೂರು ಲೋಕಗಳ ಅಂತರಾಳವೇ ಅಂತಃಪುರವಾಗಿಯೂ ಇದ್ದುವು.

ಆರ್ತವಸ್ತನಧಾರಿಣ್ಯೋ ಲಗ್ನಸೂರ್ಯಾಂಶುಕುಂಕುಮಾಃ ।
ವಿಚಿತ್ರಕುಸುಮೋಪೇತಾಶ್ಚಂದ್ರಾಂಶುಸಿತಚಂದನಾಃ ॥ ೧೧ ॥

ಗಗನಗತಲತಾದಲೋಪವಿಷ್ಟಃ
ಪ್ರಸೃತವನಾವನಿವಾರಿವಾಹವೇಷಾಃ ।
ತ್ರಿಭುವನವನಿತಾ ದದರ್ಶ ಹೃಷ್ಟಃ
ಕುಸುಮನಿರಂತರಮಂಡಿತಾ ದಶಾಶಾಃ ॥ ೧೨ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
ದಾಶೂರೋಪಾಖ್ಯಾನೇ "ದಾಶೂರದಿಗವಲೋಕನಂ" ನಾಮ
ಪಂಚಾಶಃ ಸರ್ಗಃ

---

೧೧. ಆಯಾ ಋತುಗಳಲ್ಲಿ ಉತ್ಪನ್ನವಾದ ಪಲ್ಲವ ಪುಷ್ಪಗಳೇ ದಿಕ್ಕುಗಳೆಂಬ ಸುಂದರಿಯರಿಗೆ ಕುಪ್ಪಸಗಳಾಗಿದ್ದುವು. ಸೂರ್ಯನ ಕೆಂಪಾದ ಪ್ರಭೆಯು ಅವರ ಹಣೆಯಮೇಲಿರುವ ಕುಂಕುಮದಂತೆ ಕಂಡಿತು. ಅವರು ವಿಚಿತ್ರಗಳಾದ ನಾನಾ ಕುಸುಮ ಮಾಲೆಗಳನ್ನು ತಲೆಯಲ್ಲಿ ಮುಡಿದಿದ್ದರು. ಮತ್ತು, ಚಂದ್ರಪ್ರಭೆ ಅಂದರೆ ಬೆಳದಿಂಗಳ ದಿವ್ಯವಾದ(ಬಿಳಿಯ)ಶ್ವೇತಗಂಧವನ್ನು ಮೈಮೇಲೆಲ್ಲಾ ಬೊಳೆದು ಕೊಂಡಿದ್ದರು.

೧೨. ಅಯ್ಯ ರಾಮ, ಮೊದಲೇ ಹೇಳಿರುವಂತೆ ಅಂತರಿಕ್ಷವನ್ನು ಸೋಕು ತ್ತಿರುವ ಒಂದು ಕೊಂಬೆಯ ತುದಿಯಲ್ಲಿ ಒಂದಲೆಯ ಮೇಲೆ ಕುಳಿತುಕೊಂಡಿರುವ ಆ ದಾಶೂರನು ಪ್ರಮೋದಭರಿತಗಳಾಗಿ, ವಿಸ್ತೀರ್ಣವಾದ ವನಗಳು, ಭೂಮಿಗಳು ಎಂಬ ವಿಚಿತ್ರಗಳಾದ ಅಲಂಕಾರಗಳನ್ನು ಧರಿಸಿರತಕ್ಕವರಾಗಿಯೂ, ನಿರಂತರವೂ ನಾನಾ ಪುಷ್ಪಗಳಿಂದ ವಿಭೂಷಿತೆಯರಾಗಿಯೂ, ಮೂರು ಲೋಕಗಳಲ್ಲಿರುವ ಜನರಿಗೆ ಉಪಭೋಗಾರ್ಹರಾಗಿಯೂ ಇರುವ ದಶದಿಕ್ಕುಗಳೆಂಬ ತ್ರಿಲೋಕ ಸುಂದರಿಯರನ್ನು ನೋಡಿದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ದಾಶೂರದಿಗವಲೋಕನ" ಎಂಬ
ಐವತ್ತನೆಯ ಸರ್ಗವು

ಏಕಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ತತಃ ಪ್ರಭೃತಿ ತತ್ರಾಸೌ ಪ್ರಸಿದ್ಧಸ್ತಾಪಸಾಶ್ರಮೇ ।
ಕದಂಬದಾಶೂರ ಇತಿ ಶೂರಸ್ತಪಸಿ ದಾರುಣೇ ॥ ೧ ॥

ತಸ್ಮಿಂಲ್ಲತಾದಲೌ ಸ್ಥಿತ್ವಾ ವಿಲೋಕ್ಯ ಕಕುಭಃ ಕ್ಷಣಾತ್ ।
ದೃಢಪದ್ಮಾಸನಂ ಬದ್ಧ್ವಾ ದಿಗ್ಭ್ಯಃ ಪ್ರತ್ಯಾಹೃತಾತ್ಮನಾ ॥ ೨ ॥

ಅಜ್ಞಾತಪರಮಾರ್ಥೇನ ಕ್ರಿಯಾಮಾತ್ರೇ ಚ ತಿಷ್ಠತಾ ।
ಫಲಕಾರ್ಪಣ್ಯಯುಕ್ತೇನ ಮನಸಾ ಸೋಽಕರೋನ್ಮಖಂ ॥ ೩ ॥

ಐವತ್ತೊಂದನೆಯ ಸರ್ಗ

೧. ಅಯ್ಯ ರಾಮ, ಮೇಲೆ ವಿವರಿಸಿದ ಕ್ರಮದಲ್ಲಿ, ಆ ದಾಶೂರನು ಕದಂಬ ವೃಕ್ಷವನ್ನು ಆಶ್ರಯಿಸಿ ಅದರ ತುದಿಯಲ್ಲಿ ಕುಳಿತುಕೊಂಡಕಾಲವನ್ನು ಮೊದಲು ಮಾಡಿಕೊಂಡು, ಅತ್ಯುಗ್ರವಾದ ಏಕಾಗ್ರ ತಪಸ್ಸಿನಲ್ಲಿ ಪರಾಙ್ಮುಖನಾಗದೆ, ರಣ ರಂಗದಲ್ಲಿ ಶೂರನಾಥ ಯೋಧನಂತೆ ಸರ್ವದಾ ಉದ್ಯುಕ್ತನಾಗಿದ್ದನು. ಅವನಿಗೆ ಆ ತಪೋವನದಲ್ಲೆಲ್ಲಾ ಅಂದಿನಿಂದ ಕದಂಬ ದಾಶೂರನೆಂಬ ಪ್ರಸಿದ್ಧಿಯುಂಟಾಯಿತು.

೨-೩. ಅಗ, ಅವನು, ಕದಂಬವೃಕ್ಷದ ಒಂದು ಶಾಖಾಗ್ರದಲ್ಲಿ ಒಂದೆಲೆಯ ಮೇಲೆ ನಿಂತುಕೊಂಡು ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲ ದಿಕ್ಕುಗಳನ್ನೂ ನೋಡಿ, ಪದ್ಮಾಸನವನ್ನು ದೃಢವಾಗಿ ಹಾಕಿ, ಬಳಿಕ ಮನಸ್ಸನ್ನು ದಿಕ್ಕುಗಳ ಕಡೆಯಿಂದ ಹಿಂದಕ್ಕೆ ತಿರುಗಿಸಿದವನಾಗಿ, ಪರಮಾರ್ಥವಾದ ಆತ್ಮೈಕತ್ವರೂಪ ತತ್ತ್ವಜ್ಞಾನ ರಹಿತವಾಗಿಯೂ, ಕೇವಲ ಕರ್ಮ ಮಾಡುವುದರಲ್ಲಿಯೇ ಆಸಕ್ತವಾಗಿಯೂ ಫಲಾಭಿ

ನಭೋಗತಲತಾಪತ್ರಸಂಸ್ಥಿತೇನಾಂತರಾತ್ಮನಾ ।
ಸರ್ವಾಃ ಸ್ವಮನಸಾ ತೇನ ಕೃತಾ ಯಜ್ಞಕ್ರಿಯಾಃ ಕ್ರಮಾತ್ ॥ ೪ ॥

ತತ್ರಾಸೌ ದಶ ವರ್ಷಾಣಿ ಮನಸೈವಾಯಜತ್ಸುರಾನಾ ।
ಗವಾಶ್ವನರಮೇಧಾದ್ಯೈರ್ಯಜ್ಞೈರ್ವಿಪುಲದಕ್ಷಿಣೈಃ ॥ ೫ ॥

ಕಾಲೇನಾಮಲತಾಂ ಯಾತೇ ವಿತತೇ ತಸ್ಯ ಚೇತಸಿ ।
ಬಲಾದವತತಾರಾಂತರ್ಜ್ಞಾನಮಾತ್ಮಪ್ರಸಾದಜಂ ॥ ೬ ॥

ಸಂಧಿಯ ದೆಸೆಯಿಂದ ಅತ್ಯಂತ ದೀನವಾಗಿಯೂ ಇರುವ ತನ್ನ ಮನಸ್ಸಿನಿಂದಲೇ ಒಂದು ಯಾಗವನ್ನು ಮಾಡಿದನು.

೪. ಹೀಗೆ, ಅಂತರಿಕ್ಷದಲ್ಲಿ ವ್ಯಾಪಿಸಿಕೊಂಡಿರುವ ವೃಕ್ಷಶಾಖಾಗ್ರದ ಎಲೆಯ ಮೇಲೆ ಕುಳಿತುಕೊಂಡು. ಅಂತರ್ಮುಖಿಯಾಗಿದ್ದಂತಹ ಆ ಕದಂಬದಾಶೂರನು ತನ್ನ ಮನಸ್ಸಿನಲ್ಲಿಯೇ ಕ್ರಮವಾಗಿ ಒಂದಾದಮೇಲೆ ಮತ್ತೊಂದರಂತೆ, ಅಶ್ವಮೇಧಾಂತವಾದ ಸಕಲ ಯಜ್ಞ ಕರ್ಮಗಳನ್ನೂ ಮಾಡಿ ಮುಗಿಸಿದನು.

೫. ಅವನು ಆ ವೃಕ್ಷಾಗ್ರದಲ್ಲಿಯೇ ಒಂದೇ ಸಮನೆ ಹತ್ತು ವರ್ಷಗಳ ಕಾಲವೂ ಅತ್ಯಧಿಕದಕ್ಷಿಣೆಯೇ ಮೊದಲಾದ ಅನಂತ ಸಾಧನ ವಿಶೇಷ ಸಂಪತ್ತಿಯಿಂದ ಸಾಧ್ಯವಾದ ಗೋಮೇಧ, ಅಶ್ವಮೇಧ, ನರಮೇಧ ಮುಂತಾದ ಮಹಾ ಯಾಗಗಳನ್ನು ತನ್ನ ಮನಸ್ಸಿನಿಂದಲೇ ಆಚರಿಸುತ್ತಾ ಇಂದ್ರಾದಿ ಸಕಲ ದೇವತೆಗಳನ್ನೂ ಚೆನ್ನಾಗಿ ಆರಾಧಿಸಿದನು.

೬. ಬಳಿಕ, ಹೀಗೆ ಸ್ವಲ್ಪ ಕಾಲಾನಂತರ, ಅವನ ಮನಸ್ಸು ಫಲಾಸಕ್ತಿನಿಮಿತ್ತಭೂತವಾದ ಕಾರ್ಪಣ್ಯವನ್ನು ತೊರೆದು ಮಹಾ ಔದಾರ್ಯವನ್ನು (ವೈಶಾಲ್ಯವನ್ನು) ಹೊಂದಿ, ರಾಗದ್ವೇಷ. ಶೋಕ ಮೋಹಾದಿ ಸಕಲ ದೋಷಗಳಿಂದ ವಿನಿರ್ಮುಕ್ತವಾಯಿತು. ಹೀಗೆ ಪ್ರತಿಬಂಧಕ್ಷಯವಾದನಂತರ, ಹಿಂದಣ ಜನ್ಮಾಂತರಗಳಲ್ಲಿ ಮಾಡಿದ ಶ್ರವಣಮನನಾದಿ ಸಾಧನಗಳ ಸಂಸ್ಕಾರೋದ್ಬೋಧದ ಬಲದಿಂದ ಅಂತಹ ಅವನ ಸುಸಂಸ್ಕೃತವಾದ ಮನಸ್ಸಿನಲ್ಲಿ ಪರಮಾತ್ಮನ ಅನುಗ್ರಹದಿಂದ ಆವಿರ್ಭವಿಸಿದ ಆತ್ಮೈಕತ್ವ ತತ್ತ್ವಜ್ಞಾನವು ಕ್ರಮೇಣ ಅವತರಿಸಿತು.

ತತೋ ವಿಶೀರ್ಣಾವರಣೋ ವಿಗಲದ್ವಾಸನಾಮಲಃ ।
ಸ ದದರ್ಶೈಕದಾ ತಸ್ಯಾಂ ಲತಾಯಾಮಗ್ರತಃ ಸ್ಥಿತಾಂ ॥ ೭ ॥
ವನದೇವೀಂ ವಿಶಾಲಾಕ್ಷೀಮಾಲೋಕಕುಸುಮಾಂಬರಾಂ
ಕಾಮಿನೀಂ ಕಾಂತವದನಾಂ ಮದಘೂರ್ಣಿತಲೋಚನಾಂ
ನೀಲೋತ್ಪಲಾಮೋದವತೀಮತೀವ ಸುಮನೋಹರಾಂ ॥ ೮ ॥
ತಾಮುವಾಚಾನವದ್ಯಾಂಗೀಂ ಸ ಮುನಿರ್ವಿನತಾನನಾಂ ॥ ೯ ॥
ಕೋಕಿಲಾಕುಸುಮಾಪೂರನತಾಂ ವನಲತಾಮಿವ ।
ಕಾ ತ್ವಮುತ್ಪಲಪತ್ರಾಕ್ಷಿ ಕಾಂತಿವಿಕ್ಷೋಭಿತಸ್ಮರಾ ॥ ೧೦ ॥

೭-೮. ಬಳಿಕ, ತತ್ತ್ವಜ್ಞಾನದಿಂದ ಅಜ್ಞಾನಾವರಣವನ್ನು ಕಳೆದುಕೊಂಡವನಾಗಿಯೂ, ಜ್ಞಾನಾಭ್ಯಾಸದಿಂದ ಸಂಸಾರ ಹೇತುವಾದ ಸಕಲ ವಾಸನೆಗಳೆಂಬ ಮಲಗಳನ್ನು ನಿಶ್ಶೇಷವಾಗಿ ತೊಳೆದುಕೊಂಡು, ಜೀವನ್ಮುಕ್ತನಾಗಿಯೂ ಇದ್ದ ಆ ದಾಶೂರನು ಒಂದು ಸಲ, ಅದೇ ಮರದ ಶಾಖಾಗ್ರದಲ್ಲಿ ನಿಂತಿರುವ ಒಬ್ಬ ವನದೇವತೆಯನ್ನು ತನ್ನೆದುರಿನಲ್ಲಿ ಕಂಡನು. ಆ ದೇವತೆಯು ವಿಶಾಲವಾದ ಕಣ್ಣುಗಳುಳ್ಳವಳೂ, ಪ್ರಕಾಶಮಾನವಾದ ಪುಷ್ಪಮಯವಾದ ಸೀರೆಯನ್ನುಟ್ಟವಳೂ, ಕಾಮೋದ್ರೇಕವನ್ನುಂಟುಮಾಡುವವಳೂ, ಅತಿ ಸುಂದರವಾದ ವದನವುಳ್ಳವಳೂ ಮದವಶದಿಂದ ಅತಿ ಚಂಚಲವಾದ ನೇತ್ರಗಳುಳ್ಳವಳೂ ಕನ್ನೈದಿಲೆಯಂತೆ ಸ್ವಾಭಾವಿಕವಾದ ಸುಗಂಧದಿಂದ ಪರಿಪೂರ್ಣಗಾತ್ರಳೂ ಅತ್ಯಂತ ಮನೋಹಾರಿಣಿಯೂ ಆಗಿದ್ದಳು.

೯-೧೦. ಹೀಗೆ, ಸರ್ವಾಂಗ ಸುಂದರಿಯಾಗಿ (ಭಕ್ತಿ ಪ್ರಣಾಮಲಜ್ಜೆಗಳಿಂದ) ಮುಖವನ್ನು ಬಗ್ಗಿಸಿಕೊಂಡು, ಹೆಣ್ಣು ಕೋಗಿಲೆಯಿಂದಲೂ ಪುಷ್ಪಸ್ತಬಕಗಳ ಭಾರದಿಂದಲೂ ಬೊಗ್ಗಿರುವ ವನಲತೆಯಂತೆ, ತನ್ನ ಮುಂದೆ ನಿಂತಿರುವ ಆ ವನದೇವತೆಯನ್ನು ನೋಡಿ, ಆ ಕದಂಬದಾಶೂರಮುನಿಯು "ಎಲೌ, ಕನ್ನೈದಿಲೆಯ ದಳಗಳಂತೆ ನೇತ್ರಗಳುಳ್ಳ ಸುಂದರಿಯೇ, ನೀನು ಯಾರು ? ನಿನ್ನ ಶರೀರ ಲಾವಣ್ಯದಿಂದ ಸರ್ವರಿಗೂ ಕಾಮೋದ್ರೇಕವನ್ನು ಉಂಟುಮಾಡುತ್ತಿರುವೆಯಲ್ಲಾ! ಒಬ್ಬ ಸಖಿಯನ್ನು ಆಲಿಂಗಿಸಿಕೊಳ್ಳುವಂತೆ–ನೀನು, ಪುಷ್ಪಗಳಿಂದ ಪರಿಪೂರ್ಣವಾದ ಈ ವೃಕ್ಷಾಗ್ರದಲ್ಲಿರುವ ಕೊಂಬೆಯನ್ನು (ಲತೆಯನ್ನು) ಅವಲಂಬಿಸಿಕೊಂಡು ಹೀಗೇಕೆ ನಿಂತಿರುವೆ ?" ಎಂದು ಮಾತನಾಡಿಸಿದನು.

ವಯಸ್ಯಾಮಿವ ಪುಷ್ಪಾಢ್ಯಾಂ ಲತಾಂ ಕಿಮಿವ ತಿಷ್ಠಸಿ ।
ಇತ್ಯುಕ್ತೇ ಮೃಗಶಾಬಾಕ್ಷೀ ಗೌರಪೀನಪಯೋಧರಾ ॥ ೧೧ ॥

ಮುನಿಮಾಹ ಮನೋಹಾರಿ ಮುಗ್ಧಾಕ್ಷರಮಿದಂ ವಚಃ ।
ಯಾನಿ ಯಾನಿ ದುರಾಪಾನಿ ವಾಂಛಿತಾನಿ ಮಹೀತಲೇ ॥ ೧೨ ॥

ಪ್ರಾಪ್ಯಂತೇ ತಾನಿ ತಾನ್ಯಾಶು ಮಹತಾಮೇವ ಯಾಚ್ಞಯಾ ।
ಅಹಮಸ್ಮಿಂಲ್ಲತಾಕೀರ್ಣೇ ತ್ವತ್ಕದಂಬಾ ಭ್ಯಲಂಕೃತೇ ॥ ೧೩ ॥

ಲತಾಲೀಲಾಲಯಾ ಬ್ರಹ್ಮನ್ವಿಪಿನೇ ವನದೇವತಾ ।
ಯಶ್ಚೈತ್ರಸಿತಪಕ್ಷಸ್ಯ ತ್ರಯೋದಶ್ಯಾಂ ಸ್ಮರೋತ್ಸವೇ ॥ ೧೪ ॥

ಬಭೂವ ವನದೇವೀನಾಂ ಸಮಾಜೋ ನಂದನೇ ವನೇ ।
ತತ್ರಾಹಮಗಮಂ ನಾಥ ತ್ರೈಲೋಕ್ಯಲಲನಾಸದಃ ॥ ೧೫ ॥

ತತ್ರ ದೃಷ್ಟ್ವಾ ಮಯಾ ಸರ್ವಾ ವಯಸ್ಯಾ ಮದನೋತ್ಸವೇ ।
ಅಪುತ್ರಯಾ ಪುತ್ರಯುತಾಸ್ತೇನಾಹಂ ದುಃಖಿತಾ ಭೃಶಂ ॥ ೧೬ ॥

ತ್ವಯಿ ಸರ್ವಾರ್ಥಸಾರ್ಥಸ್ಯ ಬೃಹತ್ಕಲ್ಪತರೌ ಸ್ಥಿತೇ ।
ಅನಾಥೇವ ಕಥಂ ನಾಥ ಕಿಲ ಶೋಚ್ಯಾಮ್ಯಪುತ್ರಿಕಾ ॥ ೧೭ ॥

ದೇಹಿ ಮೇ ಭಗವನ್ ಪುತ್ರಂ ನೋಚೇದ್ದೇಹಮಿಹಾಗ್ನಯೇ ।
ಪ್ರಕರೋಮ್ಯಾಹುತಿಂ ಪುತ್ರದುಃಖದಾಹೋಪಶಾಂತಯೇ ॥ ೧೮ ॥

೧೧–೧೮. ಆ ದಾಶೂರನು ಹೀಗೆ ಮಾತನಾಡಿಸಲಾಗಿ ಕೂಡಲೆ, ಹೊಂಬಣ್ಣ ಸ್ಥೂಲದ ಸ್ತನಗಳೂ ಜಿಂಕೆಯ ಮರಿಯ ಹಾಗೆ ತರಳನಯನಗಳೂ ಉಳ್ಳ ಆ ವನದೇವಿಯು, ಆತನನ್ನು ಕುರಿತು, ಮೃದುಮಧುರವಾದ ಅಕ್ಷರಗಳಿಂದ ಕೂಡಿದ ಮನೋಹರವಾದ ಈ ಮಾತನ್ನು ಹೇಳಿದಳು:"ಪ್ರಪಂಚದಲ್ಲಿ ಅತ್ಯಂತ ದುರ್ಲಭಗಳ ಇಷ್ಟಾರ್ಥಗಳು ಎಲ್ಲವೂ ಮಹಾತ್ಮರಲ್ಲಿಗೆ ಹೋಗಿ ವಿನಯದಿಂದ ಪ್ರಾರ್ಥನೆಮಾಡಿದ ಮಾತ್ರದಿಂದಲೇ ಆ ಕ್ಷಣವೇ ಅತ್ಯಂತ ಸುಲಭವಾಗಿ ಕೈಸೇರುವುವು. ಸ್ವಾಮಿ, ವಿಪ್ರವರ್ಯರೇ, ತಾವು ವಾಸವಾಗಿರುವ ಈ ಕದಂಬ ವೃಕ್ಷದಿಂದ ಅಲಂಕೃತವಾಗಿಯೂ ನಾನಾ ಲತೆಗಳಿಂದ ಸಮಾಕ್ರಾಂತವಾಯೂ ಇರುವ ಈ ವನದಲ್ಲಿ, ನಾನು ವನದೇವತೆಯಾಗಿ ಇಲ್ಲಿರುವ ಲತೆಗಳನ್ನೇ ನನ್ನ ವಿಲಾಸಗೃಹವನ್ನಾಗಿ ಮಾಡಿಕೊಂಡು ವಾಸವಾಗಿರುವೆನು. ಸ್ವಾಮಿ,

ತಾಮಿತ್ಯುಕ್ತವತೀಂ ತನ್ವೀಂ ವಿಹಸ್ಯ ಮುನಿಪುಂಗವಃ ।
ಪ್ರಾಹ ಹಸ್ತಗತಂ ಪುಷ್ಪಂ ತಸ್ಯೈ ದತ್ತ್ವಾ ದಯಾನ್ವಿತಃ ॥ ೧೯ ॥

ಗಚ್ಛ ತನ್ವಂಗಿ ಮಾಸೇನ ಪೂಜಾರ್ಹಮಲಿಲೋಚನಂ !
ಪ್ರಸೋಷ್ಯಸೇ ಸುತಂ ಕಾಂತಂ ಪ್ರಸೂನಮಿವ ಸಲ್ಲತಾ ॥ ೨೦ ॥

ಕಿಂತ್ವಸೌ ಮರಣಾವೇಶಯಾಯಿನ್ಯಾ ನಸ್ತ್ವಯಾ ಸುತಃ ।
ಯಾಚಿತಃ ಕೃಚ್ಛ್ರಂ ಸಂಪ್ರಾಪ್ಯ ಜ್ಞಾತಾ ತೇನ ಭವಿಷ್ಯತಿ ॥ ೨೧ ॥

ಹಿಂದೊಂದು ಸಲ, ಚೈತ್ರಮಾಸದ ಶುಕ್ಲಪಕ್ಷದಲ್ಲಿ ತ್ರಯೋದಶಿಯ ದಿವಸ ನಂದನದ ಉದ್ಯಾನವನದಲ್ಲಿ ಮನ್ಮಥೋತ್ಸವವು ಆಚರಿಸಲ್ಪಟ್ಟಿತು. ಆಗ, ಸಕಲ ವನದೇವಿಯರ ಸಭೆಯು ನೆರದಿದ್ದಿತು. ನಾನೂ ಆಗ ಅಲ್ಲಿ ನೆರೆದಿದ್ದ ತ್ರೈಲೋಕ್ಯಸುಂದರಿಯರ ಆ ಸಭೆಗೆ ಹೋದೆನು. ಆ ಮನ್ಮಥೋತ್ಸವದಲ್ಲಿ ನೆರದಿದ್ದ ನನ್ನ ಗೆಳತಿಯರೆಲ್ಲರೂ ಪುತ್ರವತಿಯರಾಗಿದ್ದರು. ನಾನು ಒಬ್ಬಳೇ ಅಪುತ್ರವತಿಯಾಗಿದ್ದೆನು. ಪುತ್ರರೊಂದಿಗೆ ವಿನೋದವಾಗಿ ಮೆರೆಯುತ್ತಿದ್ದ ನನ್ನ ಸಖಿಯರನ್ನು ನೋಡಿ ಅಪುತ್ರವತಿಯಾದ ನನಗೆ ಅತಿ ದುಸ್ಸಹವಾದ ದುಃಖವುಂಟಾಯಿತು. ಹೇ ನಾಥ, ಸಕಲ ಚತುರ್ವಿಧ ಪುರುಷಾರ್ಥಗಳ ಸಮುದಾಯಕ್ಕೂ ದೊಡ್ಡ ಕಲ್ಪವೃಕ್ಷವಾಗಿ ತಾವು ಇಲ್ಲಿ ಇದ್ದುಕೊಂಡಿರಲು ಪುತ್ರಹೀನಳಾದನಾನು ಅನಾಥಳಂತೆ ಹೀಗೆ ಅಳಬೇಕೇ? ಸ್ವಾಮಿ, ನನ್ನನ್ನು ಕರುಣಿಸಿ, ನನಗೆ ಪುತ್ರದಾನವನ್ನು ಮಾಡಿ. ಇಲ್ಲದಿದ್ದರೆ, ನಾನು ಇಲ್ಲಿಯೇ ತಮ್ಮ ಎದುರಿನಲ್ಲಿಯೇ ನನ್ನ ದೇಹವನ್ನು ಈ ದುಃಖ ಶಾರತಿಯನ್ನು ಪಡಿಯುವೆನು.'' ಅಗ್ನಿಯಲ್ಲಿ ಆಹುತಿಯನ್ನಾಗಿ ಅರ್ಪಿಸಿ ಬಿಡುವೆನು.''

೧೯–೨೧. ಈ ರೀತಿಯಾಗಿ ಪ್ರಾರ್ಥಿಸಿದ ಆ ವನದೇವಿಯನ್ನು ನೋಡಿ ಆ ದಾಶೂರ ಮುನಿಪುಂಗವನು ದಯಾನ್ವಿತನಾಗಿ ಸ್ವಲ್ಪ ಮಂದಹಾಸವನ್ನು ಬೀರಿ, ತನ್ನ ಕೈಯಲ್ಲಿದ್ದ ಒಂದು ಹೂವನ್ನು ಅವಳಿಗೆ ಕೊಟ್ಟು "ಎಲೈ ಕೃಶಾಂಗಿಯಾದ ಸುಂದರಿಯೇ, ಶ್ರೇಷ್ಠವಾದ ಲತೆಯು ದೇವಪೂಜಾಯೋಗ್ಯವಾದ ದಿವ್ಯವಾದ ಪುಷ್ಪವನ್ನು ಪ್ರಸವಿಸುವಂತೆ ನೀನು ಇನ್ನೊಂದು ತಿಂಗಳೊಳಗಾಗಿ ಸರ್ವರಿಂದಲೂ ಪೂಜಿಸಲ್ಪಡಲು ಅರ್ಹನಾಗಿಯೂ ದುಂಬಿಗಳಂತೆ ಇರುವ ಕಣ್ಣುಗಳಿಂದ ಸುಂದರನಾಗಿಯೂ ನಯನಾನಂದ

ಇತ್ಯುಕ್ತ್ವಾ ಸ ಮುನಿಸ್ತನ್ವೀಂ ಪ್ರಸನ್ನಮುಖಮಂಡಲಾಂ ।
ಪರಿಚರ್ಯಾಂ ಕರೋಮೀತಿ ಪ್ರಾರ್ಥನೋತ್ಕಾಂ ವ್ಯಸರ್ಜಯತ್ ॥ ೨೨ ॥

ಸಾ ಜಗಾಮಾತ್ಮಸದನಂ ಸೋಽತಿಷ್ಠತ್ಸ್ವಾತ್ಮನಾ ಸಹ ।
ಅವಹತ್ಕ್ರಮಶಃ ಕಾಲ ಋತುಸಂವತ್ಸರಾಂಕಿತಃ ॥ ೨೩ ॥

ಅಥ ದೀರ್ಘೇಣ ಕಾಲೇನ ಸೈವೋತ್ಪಲವಿಲೋಚನಾ ।
ದ್ವಾದಶಾಬ್ದಮುಪಾದಾಯ ಸುತಂ ಮುನಿಮುಪಾಯಯೌ ॥ ೨೪ ॥

ಕರನಾಗಿಯೂ (ಕಾಂತ-ಕಮನೀಯ) ಇರುವ ಪುತ್ರನನ್ನು ಪ್ರಸವಿಸುವೆ; ಆದರೆ ನೀನು ಕಷ್ಟದೆಶೆಯನ್ನು ಅನುಭವಿಸುತ್ತಾ ಮರಣೋನ್ಮುಖಿಯಾಗಿ (ಆತ್ಮಹತ್ಯೆ ಮಾಡಿಕೊಂಡು ಸಾಯುವುದಕ್ಕೂ ಸಿದ್ಧಳಾಗಿ) ನನ್ನ ಹತ್ತಿರ ಬಂದು ಪುತ್ರನನ್ನು ಯಾಚಿಸಿದೆ ಯಾದಕಾರಣ ಆ ನಿನ್ನ ಭಾವಿ ಪುತ್ರನು ಐಹಿಕಾಮುಷ್ಮಿಕ ಭೋಗಗಳಲ್ಲಿ ಸರ್ವತ್ರ ಅನಾಸಕ್ತನಾಗಿ ವಿರಕ್ತನಾದ ತತ್ತ್ವಜ್ಞಾನಿಯಾಗುವನು." ಎಂದು ಹೇಳಿ ಸಂತೈಸಿದನು.

೨೨. ಹೀಗೆಂದು ಹೇಳಿ, ಆ ದಾಶೂರ ಮುನಿಯು—"ಸ್ವಾಮಿ ತಮ್ಮ ಪಾದ ಸೇವೆಯನ್ನು (ಕೈಂಕರ್ಯ) ಮಾಡಿಕೊಂಡು ಇಲ್ಲಿಯೇ ಇರುವೆನು ಅಪ್ಪಣೆಕೊಡಿ" ಎಂದು ಬಹುವಾಗಿ ಪ್ರಾರ್ಥನೆ ಮಾಡುತ್ತಲೂ (ಸ್ವಾಭೀಷ್ಟಲಾಭದಿಂದ) ಸುಪ್ರಸನ್ನವಾದ ಮುಖಮಂಡಲವುಳ್ಳವಳಾಗಿಯೂ ನಿಂತಿದ್ದ ಆ ಕೃಶಾಂಗಿಯಾದ ವನದೇವತೆಯನ್ನು ಕಳುಹಿಸಿಬಿಟ್ಟನು.

೨೩. ಬಳಿಕ, ಅವಳು ತನ್ನ ಮನೆಗೆ ಹೊರಟುಹೋದಳು. ಆ ದಾಶೂರನು ಮೊದಲಿನಂತೆಯೇ ಏಕಾಕಿಯಾಗಿ ಆ ವೃಕ್ಷಾಗ್ರದ ಎಲೆಯ ಮೇಲೆಯೇ ವಾಸಮಾಡಿಕೊಂಡಿದ್ದನು. (ಮಾಸ) ಋತು, ಸಂವತ್ಸರ ಮುಂತಾದ ಭೇದಗಳಿಂದ ಚಿಹ್ನಿತವಾದ ಕಾಲವು ಕ್ರಮೇಣ ಬಹಳವಾಗಿ ಕಳೆದುಹೋಯಿತು.

೨೪. ಹೀಗೆ ಬಹು ದೀರ್ಘಕಾಲವು ಕಳೆದ ತರುವಾಯ ಉತ್ಪಲ ನೇತ್ರೆಯಾದ ಆ ವನದೇವತೆಯು ಹನ್ನೆರಡುವರ್ಷ ವಯಸ್ಸಿನ ಒಬ್ಬ ಬಾಲಕನನ್ನು ಸಂಗಡಕರೆದುಕೊಂಡು ಆ ಮುನಿಯ ಸಮೀಪಕ್ಕೆ ಬಂದಳು.

ಸಾ ಪ್ರಣಮ್ಯೋಪವಿಶ್ಯಾಗ್ರೇ ಮುನಿಮಿಂದುಸಮಾನನಂ ।
ಉವಾಚ ಕಲಯಾ ವಾಚಾ ಚೂತದ್ರುಮಮಿವಾಲಿನೀ ॥ ೨೫ ॥

ಅಯಂ ಸ ಭಗವನ್ ಭವ್ಯಃ ಕುಮಾರಃ ಪುತ್ರ ಆವಯೋಃ ।
ಕೃತೋ ಮಯಾ ಸಮಗ್ರಾಣಾಂ ಕಲಾನಾಂ ಕಿಲ ಕೋವಿದಃ ॥ ೨೬ ॥

ಪ್ರಭೋ ಕೇವಲಮೇತೇನ ಜ್ಞಾನಂ ನಾಧಿಗತಂ ಶುಭಂ ।
ಯೇನ ಸಂಸಾರಚಕ್ರೇಽಸ್ಮಿನ್ನ ಪುನಃ ಪರಿಪೀಡ್ಯತೇ ॥ ೨೭ ॥

ಜ್ಞಾನಂ ತ್ವಮೇವಾಸ್ಯ ವಿಭೋ ಕೃಪಯೋಪದಿಶಾಧುನಾ ।
ಕೋ ಹಿ ನಾಮ ಕುಲೇ ಜಾತಂ ಪುತ್ರಂ ಮೌರ್ಖ್ಯೇಣ ಯೋಜಯೇತ್ ॥ ೨೮ ॥

ಏವಂ ವದಂತೀಂ ಸ ಮುನಿಃ ಸಚ್ಛಿಷ್ಯಮಬಲೇ ಸುತಂ ।
ಇಹೈವ ಸ್ಥಾಪಯೈನಂ ತ್ವಮಿತ್ಯುಕ್ತ್ವಾ ತಾಂ ವಿಸರ್ಜಯತ್ ॥ ೨೯ ॥

೨೫–೨೮. ಚಂದ್ರಮಂಡಲದಂತೆ ಪ್ರಶಾಂತವಾದ ಮುಖವುಳ್ಳವನಾದ ಆ ದಾಶೂರ ಮುನಿಯನ್ನು ನೋಡಿದಕೂಡಲೆ ಆ ವನದೇವಿಯು ಆತನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಎದುರಿಗೆ ಕುಳಿತುಕೊಂಡು ಹೆಣ್ಣು ದುಂಬಿಯು ಮಾವಿನ ಮರವನ್ನು ಮಾತನಾಡಿಸುವಂತೆ ಗಂಭೀರವಾದ ಮೃದು ವಚನಗಳಿಂದ ಆ ಋಷಿಯನ್ನು ಕುರಿತು "ಮಹಾನುಭಾವರೇ, ಇದೋ ಈ ಮಂಗಳಾಂಗನಾದ ಸುಕುಮಾರನು ತಮ್ಮ ಅನುಗ್ರಹದಿಂದ ನಮ್ಮಿರ್ವರ ಪುತ್ರನಾಗಿ ಉದಯಿಸಿರುವನು. ನಾನು ಇದುವರೆಗೆ ಇವನನ್ನು ವೇದಶಾಸ್ತ್ರಾದಿ ಸಮಸ್ತ ಕಲೆಗಳಲ್ಲಿಯೂ ವಿದ್ವಾಂಸನನ್ನಾಗಿ ಮಾಡಿರುವೆನು. ಸ್ವಾಮಿ ಪ್ರಭುಗಳೇ, ಯಾವ ಆತ್ಮ ತತ್ತ್ವಜ್ಞಾನವನ್ನು ಪಡೆದು ಪುನಃ ಇವನು ಈ ಘೋರವಾದ ಸಂಸಾರ ಚಕ್ರದಲ್ಲಿ ಸಿಕ್ಕಿಕೊಂಡು ಪೀಡಿಸಲ್ಪಡದಿರಬಹುದೋ ಅಂತಹ ನಿಶ್ಶ್ರೇಯಸಹೇತುವಾದ ಆತ್ಮೈಕ್ಯಜ್ಞಾನವು ಮಾತ್ರವೇ ಇವನಿಗೆ ಇನ್ನೂ ಲಭಿಸಿಲ್ಲವು. ಸ್ವಾಮಿ, ವಿಭುಗಳೆ. ಅದುಕಾರಣ ತಾವೇ ಈ ಕುಮಾರನಿಗೆ ಈಗ ದಯೆಮಾಡಿ ಬ್ರಹ್ಮಜ್ಞಾನೋಪದೇಶವನ್ನು ಮಾಡಬೇಕೆಂದು ಬೇಡುವೆನು. ತನ್ನ ಕುಲದಲ್ಲಿ (ಗರ್ಭದಲ್ಲಿ) ಹುಟ್ಟಿದ ಮಗನನ್ನು ಯಾವನು ತಾನೇ ಮೂರ್ಖನನ್ನಾಗಿ ಮಾಡಲು ಇಷ್ಟಪಡುವನು?

೨೯. ಹೀಗೆಂದು ಪ್ರಾರ್ಥಿಸುತ್ತಲಿದ್ದ ವನದೇವಿಯನ್ನು ಕುರಿತು, ಎಲೌ ಅಬಲೆಯೇ (ಸ್ತ್ರೀಯೇ), ನೀನು ಈ ನಿನ್ನ ಮಗನನ್ನು ಇಲ್ಲಿಯೇ ನನಗೆ ಉತ್ತಮ ಶಿಷ್ಯ

ತಸ್ಯಾಂ ಗತಾಯಾಂ ಸ ಪಿತುರಂತೇವಾಸಿತಯಾ ತಯಾ ।
ಅತಿಷ್ಠತ್ಸಂಯತೋ ಧೀಮಾನರ್ಕಸ್ಯೇವಾರುಣಃ ಪುರಃ ॥ ೩೦ ॥

ಕದರ್ಥೈಃ ಪ್ರಾಪ್ಯ ವಿಜ್ಞಾನಂ ತತಶ್ಚಿತ್ರಾಭಿರುಕ್ತಿಭಿಃ ।
ಚಿರಕಾಲಮಸೌ ತತ್ರ ಮುನಿಃ ಪುತ್ರಮಬೋಧಯತ್ ॥ ೩೧ ॥

ನನ್ನಾಗಿ ಇಟ್ಟುಬಿಟ್ಟು ಹೊರಡು ಎಂದು ಹೇಳಿ ಆ ಕದಂಬ ದರಶೂರ ಮುನಿಯು ಅವಳನ್ನು (ವನದೇವಿಯನ್ನು) ಕಳುಹಿಸಿಬಿಟ್ಟನು.

೩೦. ಆ ತನ್ನ ತಾಯಿಯು ಹೊರಟುಹೋಗಲು ಬುದ್ಧಿವಂತನಾದ ಆ ಬಾಲಕನು ಬಹಳ ನಿಯಮಗಳಿಂದ ಕೂಡಿದವನಾಗಿ ಸೂರ್ಯನ ಮುಂದೆ ಅರುಣನು ಇರುವಂತೆ ತನ್ನ ತಂದೆಯ ಮುಂದೆ ಶಿಷ್ಯವೃತ್ತಿಯಿಂದ ಇದ್ದನು.

೩೧. ಅಲ್ಲಿ ಆ ಬಾಲಕನು ಬಹುಕಾಲದವರೆಗೆ ಗುರುಶುಶ್ರೂಷಾವ್ರತಚರ್ಯಾದಿ ಕ್ಲೇಶಗಳಿಂದ ಕಷ್ಟಪಡುತ್ತಿದ್ದು ವೇದಾಂತ ಶಾಸ್ತ್ರವನ್ನು ಗುರುಮುಖದಿಂದ ಅಧ್ಯಯನಮಾಡಿ ಉಪಾಯಭೂತವಾದ ಶಾಸ್ತ್ರಜದ್ಯಜ್ಞಾನವನ್ನು ಪಡೆದನು. ಬಳಿಕ, ಆ ದಾಶೂರ ಮುನಿಯು ಆ ವೃಕ್ಷಾಗ್ರದಲ್ಲಿಯೇ ವಿಚಿತ್ರವಾದ ತತ್ತ್ವಮಸ್ಯಾದಿ ಮಹಾವಾಕ್ಯಗಳಿಂದ ಜ್ಞಾನವು ಅನುಭವದಲ್ಲಿ ದೃಢವಾಗಿ ನಿಲ್ಲುವತನಕ ಚಿರಕಾಲ ತತ್ತ್ವೋಪದೇಶಮಾಡಿದನು. ಅಥವಾ ಆ ವೃಕ್ಷಾಗ್ರಹದಲ್ಲಿ ತನ್ನ ಮಗನು ಶಿಷ್ಯವೃತ್ತಿಯಲ್ಲಿದ್ದುಕೊಂಡು ಗುರುಶುಶ್ರೂಷಾದಿಕ್ಲೇಶಗಳನ್ನು ಅನುಭವಿಸುತ್ತಿರುವುದನ್ನು ಕಂಡು ತಾನು ಪೂರ್ವದಲ್ಲಿ ತಪಶ್ಚರ್ಯೆಗಾಗಿ ಬಹುವಾಗಿ ಕಷ್ಟಪಟ್ಟು ಕ್ಲೇಶಗಳ ಸ್ವರೂಪಾನುಭವವನ್ನು ಚೆನ್ನಾಗಿ ಪಡೆದಿರುವವನಾಗಿದ್ದಕಾರಣ ತಂದೆಯಾದ ದಾಶೂರನು ತನ್ನ ಮಗನು ತನ್ನಂತೆ ಕ್ಲೇಶವನ್ನು ಬಹುವಾಗಿ ಅನುಭವಿಸದಿರಲೆಂಬ ವಾತ್ಸಲ್ಯದಿಂದ ಅಲ್ಲಿಯೇ ಇದ್ದುಕೊಂಡು ಚಿರಕಾಲ ವಿಚಿತ್ರಗಳಾದ ಉಪದೇಶವಚನಗಳಿಂದ ತನ್ನ ಮಗನಿಗೆ ಆತ್ಮ ತತ್ತ್ವವನ್ನು ತಾನಾಗಿ ಬೋಧಿಸಿದನು.

(ಈ ಎರಡು ವಿಧ ಅರ್ಥಗಳೂ ಟೀಕಾಕಾರರಿಗೆ ಸಮ್ಮತವಾದವು.)

ಆಖ್ಯಾಯಿಕಾಖ್ಯಾನಶತೈರ್ದೃಷ್ಟಾಂತೈರ್ದೃಷ್ಟಿಕಲ್ಪಿತೈಃ ||
ತಥೇತಿಹಾಸವೃತ್ತಾಂತೈರ್ವೇದವೇದಾಂತ ನಿಶ್ಚಯೈಃ || ೩೨ ||

ಅನುದ್ವೇಗಿತಯಾ ನಿತ್ಯಂ ವಿಸ್ತರೇಣ ಕಥಾಕ್ರಮೈಃ ||
ಅನುಭೂತಿಮುಪಾರೂಢೈರೂಢಿಮೇತಿ ಯಥಾ ಮಯಿ || ೩೩ ||

ಅನುಭವವಶತೋ ರಸಾತಿರಿಕ್ತೈ
ರಲಮುಚಿತಾರ್ಥವಚೋಗಣೈರ್ಮಹಾತ್ಮಾ |
ಜಲದ ಇವ ಶಿಖಂಡಿನಂ ಪುರಸ್ಥಂ
ತನಯಮಬೋಧಯದಂಬರೇ ಮಹರ್ಷಿಃ || ೩೪ ||

ಇತ್ಯಾರ್ಷೇ ವಾಸಿಷ್ಠ ಮಹಾರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
ದಾಶೂರೋಪಾಖ್ಯಾನೇ "ದಾಶೂರಸುತಾನುಬೋಧನಂ" ನಾಮ
ಏಕಪಂಚಾಶಃ ಸರ್ಗಃ

೩೨-೩೩. ಆಗ, ಆ ದಾಶೂರನು ನೂರಾರು ಆಖ್ಯಾಯಿಕೆಗಳಿಂದಲೂ ಆಖ್ಯಾನಗಳಿಂದಲೂ ದೃಷ್ಟಿಕಲ್ಪಿತಗಳಾದ ಅಂದರೆ ಸಾಮ್ಯದರ್ಶನಕಲ್ಪಿತಗಳಾದ ದೃಷ್ಟಾಂತಗಳಿಂದಲೂ ಮಹಾಭಾರತಾದಿ ಇತಿಹಾಸ ಪ್ರಸಿದ್ಧಗಳಾದ ವೃತ್ತಾಂತಗಳಿಂದಲೂ ವೇದಾಂತಶಾಸ್ತ್ರದ ಸಿದ್ಧಾಂತಗಳಿಂದಲೂ ಉಪನಿಷದ್ವಾಕ್ಯಗಳಿಂದಲೂ ಇನ್ನೂ ಇತರಗಳಾದ ಅತಿ ವಿಸ್ತಾರವಾದ ಕಥಾಕ್ರಮಗಳಿಂದಲೂ ತನ್ನ ಅನುಭವಾರೂಢವಾದ ಸಕಲ ಉಪಾಯಗಳಿಂದಲೂ ಕೂಡ ಆ ಬಾಲಕನಿಗೆ ಪ್ರತ್ಯಗಾತ್ಮವಿಷಯಕವಾಗ ತತ್ತ್ವಜ್ಞಾನವು ಅನುಭವಕ್ಕೆ ಬಂದು ಬುದ್ಧಿಯಲ್ಲಿ ದೃಢವಾಗಿ ನಿಲ್ಲುವ ಹಾಗೆ ತಾನು ಸ್ವಲ್ಪವೂ ಕಳವಳವನ್ನು ಹೊಂದದೆ (ಬೇಸರಪಡೆದೆ) ಬಹುಕಾಲ ನಿತ್ಯವೂ ಉಪದೇಶಮಾಡಿದನು.

[ಆಖ್ಯಾಯಿಕಾ-ತನ್ನ ಅನುಭವಾರೂಢವಾಗಿರುವ ಅರ್ಥಗಳನ್ನು ಹೇಳುವ ನಿಬಂಧಗಳು. ಆಖ್ಯಾನಂ-ಇತರರ ಮುಖದಿಂದ ಕೇಳಿರುವ ವೃತ್ತಾಂತಗಳನ್ನು ಹೇಳುವ ನಿಬಂಧಗಳು.]

೩೪. ಕಿವಿಗೆ ಬಿದ್ದಮಾತ್ರದಿಂದಲೇ ಸಂತೋಷವನ್ನುಂಟುಮಾಡಿ ಇತರ ರಸಗಳಿಗಿಂತಲೂ ಅಧಿಕಗಳಾದ ಮತ್ತು ಹೆಣ್ಣು ನವಿಲುಗಳೊಡನೆ ಕುಣಿದಾಡುವುದಕ್ಕೆ

ಉಚಿತವಾದ ಅರ್ಥವುಳ್ಳ ಗುಡುಗು [ಮೇಘಗರ್ಜನೆ-ಸ್ತನಿತ] ಗಳೆಂಬ ತನ್ನ ವಚನಗಳಿಂದ ಆಕಾಶದಲ್ಲಿರುವ ಬೃಹದಾಕಾರವುಳ್ಳ ಮೇಘವು ತನ್ನೆದುರಿಗಿರುವ ನವಿಲನ್ನು ಉದ್ಬೋಧನೆಗೊಳಿಸುವಂತೆ ಸ್ವಾತ್ಮಬೋಧ ಚಮತ್ಕಾರವಶದಿಂದ ಸಕಲ ಪ್ರಾಪಂಚಿಕ ರಸಗಳನ್ನೂ ಮೀರಿರುವ ಮತ್ತು ಪರಮಪುರುಷಾರ್ಥ ರೂಪವಾಗಿರುವ ಕಾರಣ ಅವಶ್ಯವಾಗಿ ತಿಳಿಯಲು ಅರ್ಹವಾದ ಅರ್ಥವುಳ್ಳ ಉಪದೇಶ ವಚನಗಳಿಂದ ಮಹಾತ್ಮನಾದ ದಾಶೂರ ಮಹರ್ಷಿಯು ವೃಕ್ಷಾಗ್ರದಲ್ಲಿಯೇ ಇದ್ದುಕೊಂಡು ತನ್ನೆದುರಿಗೆ ಇರುವ ಮಗನಿಗೆ ಚೆನ್ನಾಗಿ ಜ್ಞಾನೋಪದೇಶ ಮಾಡಿದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ದಾಶೂರಸುತಾನುಬೋಧನ" ಎಂಬ
ಐವತ್ತೊಂದನೆಯ ಸರ್ಗವು

ದ್ವಿಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ಕದಾಚಿದಥ ಮಾರ್ಗೇಣ ತೇನ ಕೈಲಾಸವಾಸಿನೀಂ ।
ಅಹಂ ಸ್ನಾತುಮದೃಶ್ಯಾತ್ಮಾ ವ್ಯೋಮವೀಥೀಗತೋಽಗಮಂ ॥ ೧ ॥

ನಿರ್ಗತ್ಯ ನಭಸಃ ಸಪ್ತಮುನಿಮಂಡಲಕೋಟರಾತ್ ।
ರಾತ್ರೌ ಪ್ರಾಪ್ತೋಽಸ್ಮಿ ಸುಮತೇ ದಾಶೂರತರುಮುನ್ನತಂ ॥ ೨ ॥

ಯಾವಚ್ಛೃಣೋಮಿ ವಿಟಪಕುಹರಾತ್ಕಾನನೇ ವಚಃ ।
ಕುಡ್ಮಲಾಂಭೋಜಲಗ್ನಸ್ಯ ಷಟ್ಪದಸ್ಯೇವ ನಿಃಸ್ವನಂ ॥ ೩ ॥

ಐವತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಮಚಂದ್ರ, ಆಮೇಲೆ ಒಂದಾನೊಂದು ಸಮಯದಲ್ಲಿ, ನಾನು ಕೈಲಾಸದಲ್ಲಿ ಪ್ರವಹಿಸುವ ಗಂಗಾನದಿಯಲ್ಲಿ ಸ್ನಾನ ಮಾಡುವುದಕ್ಕಾಗಿ ಒಬ್ಬರಿಗೂ ಗೋಚರವಾಗದ ದೇಹವುಳ್ಳವನಾಗಿ [ಅಂದರೆ ಯಾರಿಗೂ ಕಾಣಿಸಿಕೊಳ್ಳದೆ] ಗಗನಮಾರ್ಗದಲ್ಲಿ ಪ್ರಯಾಣಮಾಡುತ್ತಾ ಆ ದಾಶೂರ ಮುನಿಯು ವಾಸವಾಗಿದ್ದ ಕದಂಬ ವೃಕ್ಷದ ಸಮೀಪದಲ್ಲಿರುವ ಈ ಮಾರ್ಗದಿಂದಲೇ ಹೋದೆನು.

೨. ಎಲೈ ಸುಮತಿಯಾದ ರಾಮ, ಆಗ ನಾನು ಆಕಾಶದಲ್ಲಿ ಸಪ್ತರ್ಷಿಮಂಡಲದ ಮಧ್ಯಭಾಗದಿಂದ ಹೊರಟು ರಾತ್ರಿವೇಳೆಯಲ್ಲಿ ದಾಶೂರ ಋಷಿಯು ಇದ್ದಂತಹ ಉನ್ನತವಾದ ಕದಂಬ ವೃಕ್ಷದ ಸಮೀಪಕ್ಕೆ ಬಂದು ಸೇರಿದೆನು.

೩. ಅಲ್ಲಿಗೆ ಹೋದಾಗ ತಾವರೆಯ ಮೊಗ್ಗಿನೊಳಗೆ ಸಿಕ್ಕಿಕೊಂಡಿರುವ ಭ್ರಮರದ ಝಂಕಾರ ಧ್ವನಿಯಂತೆ ಆ ಅರಣ್ಯದಲ್ಲಿ ಕದಂಬ ವೃಕ್ಷದ ಕೊಂಬೆಯ ಪೊಟ್ಟರೆಯಿಂದ ಹೊರಡುತ್ತಲಿದ್ದ ಗಂಭೀರವಾಣಿಯು [ಮುಂದೆ ಹೇಳುವ ರೀತಿಯಲ್ಲಿ] ನನ್ನ ಕಿವಿಗೆ ಕೇಳಿಸಿತು.

ಶೃಣುಪುತ್ರ ಮಹಾಬುದ್ಧೇ ವಸ್ತುತೋಽಸ್ಯ ಸಮಾಮಿಮಾಂ ।
ವರ್ಣಯಾಮಿ ಮಹಾಶ್ಚರ್ಯಾಮೇಕಾಮಾಖ್ಯಾಯಿಕಾಂ ತವ ॥ ೪ ॥

ಅಸ್ತಿ ರಾಜಾ ಮಹಾವೀರ್ಯೋ ವಿಖ್ಯಾತೋ ಭುವನತ್ರಯೇ ।
ನಾಮ್ನಾ ಖೋತ್ಥ ಇತಿ ಶ್ರೀಮಾ್ ಜಗದಾಕ್ರಮಣಕ್ಷಮಃ ॥ ೫ ॥

ಅಸ್ಯಾನುಶಾಸನಂ ಸರ್ವೇ ಭುವನೇಷ್ವಪಿ ನಾಯಕಾಃ ।
ಶಿರೋಭಿರ್ಧಾರಯಂತ್ಯಚ್ಚೈಶ್ಚೂಡಾಮಣಿಮಿವಾರ್ಥಿನಃ ॥ ೬ ॥

ಯಃ ಸಾಹಸೈಕರಸಿಕೋ ನಾನಾಶ್ಚರ್ಯವಿಹಾರವಾನ್ ।
ಕೇನಚಿತ್ತ್ರಿಷು ಲೋಕೇಷು ನ ಮಹಾತ್ಮಾ ವಶೀಕೃತಃ ॥ ೭ ॥

---

೪. ಆ ಕದಂಬ ದಾಶೂರನು ಹೇಳಿದನು—ಅದೇನೆಂದರೆ, ಮಹಾಬುದ್ಧಿವಂತನಾದ ಪುತ್ರನೇ, ವಸ್ತುತಃ ನಾನಾ ಆಶ್ಚರ್ಯಮಯವಾದ ಈ ಸಂಸಾರಕ್ಕೆ ಉಪಮಾನವಾಗಿ (ಸಮಾನನಾಗಿ) ಅತ್ಯದ್ಭುತವಾದ ಒಂದು ಆಖ್ಯಾಯಿಕೆಯನ್ನು ನಾನು ಈಗ ನಿನಗೆ ಹೇಳುವೆನು. ಸಾವಧಾನವಾಗಿ ಕೇಳು.

೫. ಮೂರು ಲೋಕಗಳಲ್ಲಿಯೂ ಬಹಳ ಪ್ರಸಿದ್ಧನಾದ ಪ್ರಪಂಚವನ್ನೆಲ್ಲ ಆಕ್ರಮಿಸುವುದರಲ್ಲಿ ಶಕ್ತನಾದ ಶ್ರೀಮಂತನಾದ ಮಹಾವೀರನಾದ ಖೋತ್ಥನೆಂಬ ಹೆಸರುಳ್ಳ ಒಬ್ಬ ರಾಜನಿದ್ದನು.

[ಖ-ಉತ್ಥ–ಖೋತ್ಥ. ಅವ್ಯಾಕೃತವಾದ ಮಹಾಕಾಶದ ದೆಸೆಯಿಂದ ಅಥವಾ ಕಾಲತ್ರಯಗಳಲ್ಲಿಯೂ ಜಗಚ್ಛೂನ್ಯವಾದ ಬ್ರಹ್ಮಾಕಾಶದ ದೆಸೆಯಿಂದ ಹುಟ್ಟಿದವನು ಎಂದರ್ಥ.]

೬. ಧನಿಕರು ಚೂಡಾಮಣಿಗಳನ್ನು ತಲೆಗಳಲ್ಲಿ ಧರಿಸುವಂತೆ ಲೋಕತ್ರಯಗಳಲ್ಲಿರತಕ್ಕ ಸಮಸ್ತ ರಾಜರುಗಳೂ ಕೂಡ ಇವನ ಆಜ್ಞೆಯನ್ನು ಬಹು ಜಾಗರೂಕವಾಗಿ ಶಿರಸಾವಹಿಸಿ ನಡೆಯಿಸುವರು.

[ಬ್ರಹ್ಮವಿಷ್ಣ್ವಾದಿ ದೇವರಾಜರುಗಳಿಗೂ ಇವನ ಆಜ್ಞೆಯನ್ನು ಉಲ್ಲಂಘಿಸುವ ಸಾಮರ್ಥ್ಯವಿರಲಿಲ್ಲವೆಂದರ್ಥ.]

೭. ಸರ್ವದಾ ಕೇವಲ ಸಾಹಸ ಕೃತ್ಯಗಳಲ್ಲಿಯೇ ವಿನೋದಪಡುತ್ತಿದ್ದ

ಯಸ್ಯಾರಂಭಸಹಸ್ರಾಣಿ ಸುಖದುಃಖಪ್ರತಾನ್ಯಲಂ ।
ಸಂಖ್ಯಾತುಂ ಕೇನ ಶಕ್ಯಂತೇ ಕಲ್ಲೋಲಾ ಜಲಧೇರಿವ ॥ ೮ ॥

ಯಸ್ಯ ವೀರ್ಯಂ ಸುವೀರ್ಯಸ್ಯ ನ ಶಸ್ತ್ರೈರ್ನಚ ಪಾವಕೈಃ ।
ಕೇನಚಿದ್ಭುವನೇ ಕ್ರಾಂತಮಾಕಾಶಮಿವ ಮುಷ್ಟಿನಾ ॥ ೯ ॥

ಯದೀಯಾಂ ವಿತತಾರಂಭಾಂ ಲೀಲಾಂ ನಿರ್ಮಾಣಭಾಸುರಾಂ ।
ನ ಮನಾಗನುವರ್ತಂತೇ ಶಕ್ರೋಪೇಂದ್ರಹರಾ ಅಪಿ ॥ ೧೦ ॥

ತ್ರಯಸ್ತಸ್ಯ ಮಹಾಬಾಹೋ ದೇಹಾ ವಿಹರಣಕ್ಷಮಾಃ ।
ಜಗದಾಕ್ರಮ್ಯ ತಿಷ್ಠಂತಿ ಹ್ಯುತ್ತಮಾಧಮಮಧ್ಯಮಾಃ ॥ ೧೧ ॥

ಮಹಾತ್ಮನಾದ ಆ ಖೋತ್ಥರಾಜನು ನಾನಾ ವಿಧಗಳಲ್ಲಿ ಅತ್ಯಾಶ್ಚರ್ಯಕರವಾಗಿ ವಿಹರಿಸುತ್ತಾ ಲೋಕತ್ರಯಗಳಲ್ಲಿಯೂ ಯಾವನಿಂದಲೂ ಆಕ್ರಮಿಸಲ್ಪಡದವನಾಗಿ ಸ್ವತಂತ್ರನಾಗಿದ್ದನು.

೮. ವಿಶೇಷ ಸುಖದುಃಖಪ್ರದಾಯಕಗಳಾದ ಸಮುದ್ರ ತರಂಗಮಾಲಿಗಳಂತೆ ಅನಂತವಾದ ಆ ಮಹಾರಾಜನ ಕಾರ್ಯಾರಂಭಗಳನ್ನು ಸಂಪೂರ್ಣವಾಗಿ ಎಣಿಸುವುದಕ್ಕೆ ಯಾರಿಗೂ ಸಾಧ್ಯವಾಗಿರಲಿಲ್ಲ.

೯. ಆಕಾಶವನ್ನು ಮುಷ್ಟಿಯಿಂದ ಹಿಡಿಯಲು ಆಗದಿರುವಂತೆ ಸರ್ವಲೋಕೈಕ ವೀರನಾದ ಅವನ ವೀರ್ಯವು ಈ ಪ್ರಪಂಚದಲ್ಲಿ ಬೇರೆ ಯಾವನೊಬ್ಬನಿಂದಲೂ ಶಸ್ತ್ರಾಸ್ತ್ರಗಳಿಂದಾಗಲೀ ಅಗ್ನಿಗಳಿಂದಾಗಲೀ ಹೇಗೂ ಸ್ವಲ್ಪಮಾತ್ರವೂ ಆಕ್ರಮಿಸಲ್ಪಡಲಿಲ್ಲ.

೧೦. ಸ್ವಲ್ಪ ಪ್ರಯೋಜನಕ್ಕಾದರೂ ನಾನಾ ವಿಧ ಕಲ್ಪನಾಸಹಸ್ರಗಳೊಡನೆ ಅತಿ ವಿಸ್ತೃತವಾದ ಕಾರ್ಯಾರಂಭಗಳನ್ನು ಮಾಡುತ್ತಿದ್ದ, ಸ್ವಪ್ನ ಮನೋರಥಾದಿ ನಾನಾ ನಿರ್ಮಾಣಗಳಿಂದ ಭಾಸಮಾನವಾದ ಆ ರಾಜನ ಲೀಲೆಯನ್ನು ಇಂದ್ರ, ವಿಷ್ಣು, ಈಶ್ವರಾದಿಗಳೂ ಕೂಡ ಸ್ವಲ್ಪವಾದರೂ ಅನುವರ್ತಿಸಲಾರದೆ ಹೋದರು.

೧೧. ಮಹಾ ಬಾಹುವಾದ ಆ ರಾಜನಿಗೆ ಲೋಕಾಂತರಗಳಲ್ಲೆಲ್ಲ ವಿಹರಿಸುವುದಕ್ಕೆ ಸಮರ್ಥಗಳಾದ, (ಸರ್ವವ್ಯವಹಾರಗಳಿಗೂ ಕ್ರೀಡೆಗಳಿಗೂ ಸಮರ್ಥಗಳಾದ)

ವ್ಯೋಮನ್ಯೇವಾತಿವಿತತೇ ಜಾತೋಽಸೌ ತ್ರಿಶರೀರಕಃ ।
ತತ್ರೈವ ಚ ಸ್ಥಿತಿಂ ಯಾತಃ ಶಬ್ದಪಾತಶ್ಚ ಪಕ್ಷಿವತ್ ॥ ೧೨ ॥

ತತ್ರೈವಾಪಾರಗಗನೇ ನಗರಂ ತೇನ ನಿರ್ಮಿತಂ ।
ಚತುರ್ದಶಮಹಾರಥ್ಯಂ ವಿಭಾಗತ್ರಯಭೂಷಿತಂ ॥ ೧೩ ॥

ಸಾತ್ವಿಕ, ರಾಜಸ, ತಾಮಸಗಳೆಂಬ ಮೂರು ಭೇದಗಳುಳ್ಳ ಉತ್ತಮ, ಮಧ್ಯಮ, ಅಧಮಗಳಾದ ಮೂರು ದೇಹಗಳಿದ್ದು ಅವು ಸಕಲಜಗತ್ತನ್ನೂ ಆಕ್ರಮಿಸಿರುವುವು.

೧೨. ಒಂದು ಪಕ್ಷಿಯು ಮೊದಲು ಮೊಟ್ಟೆ (ಅಂಡ)ಯಾಗಿ ಜನಿಸಿ, ಬಳಿಕ ಸಾವಯವವಾದ ಒಂದು ದೇಹಾಕಾರವನ್ನು ಹೊಂದಿ, ಆಮೇಲೆ ರೆಕ್ಕೆಗಳಿಂದ ಪ್ರಚುರವಾದ (ಗರುನ್ಮಯ) ಮತ್ತೊಂದು ಬಗೆಯ ದೇಹವನ್ನು ಪಡೆಯುವುದು. ಹೀಗೆ ಕ್ರಮವಾಗಿ ಅಂಡ, ಪಿಂಡ, ಗರುನ್ಮಯಗಳೆಂಬ ದೇಹತ್ರಯಾತ್ಮಕನಾಗಿ ಅದು ಆಕಾಶದಲ್ಲಿಯೇ ಜನಿಸಿ, ಅಲ್ಲಿಯೇ ಬೆಳೆದು, ನಿಸ್ಸಾರವಾದ ಫಲಗಳನ್ನು ಭಕ್ಷಿಸುವುದರಲ್ಲಿ ಆಶೆಪಡುತ್ತ, ಎಲ್ಲಿಂದ ಯಾವಾಗ ತನಗೆ ಯಾವ ಅಪಾಯವುಂಟಾಗುವುದೋ ಎಂದು ಭಯಪಡುತ್ತಾ, ಯಾವುದಾದರೊಂದು ಶಬ್ದವನ್ನು ಕೇಳಿದೊಡನೆಯೇ, ಎಲ್ಲಿಗೋ ಹಾರಿಹೋಗಿಬಿಡುವುದು. ಅದಕ್ಕೆ ಅರ್ಥತತ್ವವನ್ನು ವಿಮರ್ಶಿಸಿ ಗ್ರಹಿಸುವಷ್ಟು ಸಾಮರ್ಥ್ಯವಿಲ್ಲವೇ ಇಲ್ಲವಷ್ಟೆ. ಇದರಂತೆಯೇ, ಆ ಖೋತ್ಥರಾಜನು ಅತಿ ವಿಶಾಲವಾದ ಬ್ರಹ್ಮಾಕಾಶದಲ್ಲಿಯೇ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಮೂರು ವಿಧಗಳಾದ ದೇಹಗಳಿಂದ ಕೂಡಿದವನಾಗಿ ಜನ್ಮವನ್ನು ಪಡೆದು, ಅಲ್ಲಿಯೇ ಅಭಿವೃದ್ಧಿಯನ್ನು ಹೊಂದಿ, ಯಾರಿಂದ ಯಾವಾಗ ತನಗೆ ಯಾವ ಅಪಾಯವು ಸಂಭವಿಸುವುದೋ ಎಂದು ಸದಾ ಭೀತನಾಗಿ, ತುಚ್ಛಗಳಾದ ವಿಷಯ ಸುಖಾಸಕ್ತನಾಗಿ, ಆತ್ಮತತ್ತ್ವಗ್ರಹಣದಲ್ಲಿ ಅಸಮರ್ಥನಾಗಿ, ವಿಧಿನಿಷೇಧಾತ್ಮಕ ಶಾಸ್ತ್ರವಚನಗಳನ್ನು ಅನುಸರಿಸುತ್ತಾ ವಿಶೇಷವಾಗಿ ಭ್ರಮಿಸುತ್ತಿರುವನು. (ತೊಳಲುತ್ತಿರುವನು.)

೧೩. ಅವನು ಅಪಾರವಾದ ಆ ಅಂತರಿಕ್ಷದಲ್ಲಿಯೇ ಬ್ರಹ್ಮಾಂಡವೆಂಬ ಒಂದು ದೊಡ್ಡ ನಗರವನ್ನು ನಿರ್ಮಾಣಮಾಡಿದನು. ಆ ನಗರದಲ್ಲಿ ಚತುರ್ದಶಲೋಕಗಳೆಂಬ ವಿಶಾಲವಾದ ರಾಜ ಬೀದಿಗಳಿರುವುವು. ಮತ್ತು ಆ ನಗರವು ಹದಿನಾಲ್ಕು ವಿದ್ಯೆಗಳೆಂಬ ರಾಜಮಾರ್ಗಗಳಿಂದ ವಿಭಕ್ತವಾಗಿರುವುದು. ಹೀಗೆಯೇ ಆ ಪಟ್ಟಣವು ಸ್ವರ್ಗ ಮರ್ತ್ಯಪಾತಾಳಗಳೆಂಬ (ಮೂರು ಲೋಕಗಳು) ಅಥವಾ ಋಗ್ಯಜುಸ್ಸಾಮ

ವನೋಪವನಮಾಲಾಢ್ಯಂ ಕ್ರೀಡಾಶಿಖರಿಸುಂದರಂ ।
ಮುಕ್ತಾಲತಾವಿವಲಿತವಾಪೀಸಪ್ತಕಭೂಷಿತಂ ॥ ೧೪ ॥

ಶೀತಲೋಷ್ಣಾತ್ಮಕಾಕ್ಷೀಣದೀಪದ್ವಯವಿರಾಜಿತಂ ।
ಊರ್ಧ್ವಾಧೋಗತಿರೂಪೇಣ ವಣಿಜ್ಮಾರ್ಗೇಣ ಸಂಕುಲಂ ॥ ೧೫ ॥

ತಸ್ಮಿನ್ನೇವಾತಿವಿಪುಲೇ ಪತ್ತನೇ ತೇನ ಭೂಭೃತಾ ।
ಸಂಸಾರಿಣೋ ವಿರಚಿತಾ ಮುಗ್ಧಾಪವರಕಾ ಗಣಾಃ ॥ ೧೬ ॥

ಗಳೆಂಬ (ಮೂರು ವೇದಗಳು) ಮೂರು ದೊಡ್ಡ ವಿಭಾಗಗಳಿಂದಸುಂದರವಾಗಿ ಕಾಣುವುದು.

೧೪. ಈ ಪಟ್ಟಣದಲ್ಲಿ, ಚಂಪಕ; ದಂಡಕ ಮೊದಲಾದ ಅನೇಕ ಮಹಾರಣ್ಯಗಳೂ ನಂದನ ಚೈತ್ರರಥಾದಿ ವಿವಿಧ ಉದ್ಯಾನವನಗಳೂ ಸಾಲಾಗಿ ಯಥೇಚ್ಛವಾಗಿರುವುವು. ಮೇರು, ಕೈಲಾಸ ಮೊದಲಾದ ಕ್ರೀಡಾಪರ್ವತಗಳಿಂದ ಅಲಂಕೃತವಾಗಿರುವುದು. ಮತ್ತಾ ಗಂಗಾ ಗೋದಾವರಿ ಮೊದಲಾದ ನದಿಗಳೆಂಬ ಮುಕ್ತಾಹಾರಗಳಿಂದ ಪರಿವೃತವಾದ ಸಪ್ತ ಸಮುದ್ರಗಳೆಂಬ ಏಳು ಭಾವಿಗಳಿಂದ ಶೋಭಿಸುತ್ತಿರುವುದು.

೧೫. ಆ ನಗರದಲ್ಲಿ, ಒಂದು ಶೀತಲವಾಗಿಯೂ ಮತ್ತೊಂದು ಉಷ್ಣವಾಗಿಯೂ ಇದ್ದು ಎಂದಿಗೂ ಆರಿಹೋಗದೆಯೂ ಪ್ರಕಾಶವು ಕಡಿಮೆಯಾಗದೆಯೂ ಇರುವ ಚಂದ್ರ ಸೂರ್ಯರೆಂಬ ಎರಡು ದೊಡ್ಡ ದೀಪಗಳು ಸದಾ ಉರಿಯುತ್ತ ಸರ್ವತ್ರ ಪ್ರಕಾಶವನ್ನು ಹರಡುತ್ತಿರುವುವು. ಶಾಸ್ತ್ರೀಯಗಳಾದ ವಿಹಿತ ಕರ್ಮಗಳ ಆಚರಣೆಯಿಂದ ಉರ್ಧ್ವಗತಿಯೂ ಅಶಾಸ್ತ್ರೀಯ ನಿಷಿದ್ಧಕರ್ಮಾಚರಣೆಯಿಂದ ಅಧೋಗತಿಯೂ ಎಂಬ ಎರಡು ಬಗೆಯ ಆ ನಗರದ ಅಂಗಡಿ ಬೀದಿಗಳಲ್ಲಿ ಜನರು ಸರ್ವದಾ ವಿಶೇಷವಾಗಿ ಸಂಚರಿಸುತ್ತಾ ವ್ಯಾಪಾರ ಮಾಡುತ್ತಿರುವರು.

೧೬. ಅತಿ ವಿಶಾಲವಾದ ಆ ನಗರದೊಳಗೆಯೇ ಆ ರಾಜನಿಂದ ಸದಾ ಸಂಚಾರ ಮಾಡುವುದರಲ್ಲಿ ತತ್ಪರರಾಗಿಯೂ ಮತ್ತು ವಿಷಯ ವ್ಯಾಮೂಢವಾಗಿಯೂ ಇರುವ ದೇವ ತಿರ್ಯಕ್ ಮನುಷ್ಯಾದಿ ನಾನಾ ಪ್ರಾಣಿಗಳು ಗುಂಪುಗುಂಪಾಗಿ ವಿರಚಿಸಲ್ಪಟ್ಟಿರುವರು.

ಊರ್ಧ್ವಂ ಕೇಚಿದಧಃ ಕೇಚಿತ್ ಕೇಚಿನ್ಮಧ್ಯೇ ನಿಯೋಜಿತಾಃ ।
ಕೇಚಿಚ್ಚಿರೇಣ ನಶ್ಯಂತಃ ಕೇಚಿಚ್ಛೀಘ್ರವಿನಾಶಿನಃ ॥ ೧೬ ॥

ಅಸಿತಚ್ಛಾದನಚ್ಛನ್ನಾ ನವದ್ವಾರವಿಭೂಷಿತಾಃ ।
ಅನಾರತವಹದ್ವಾತಾ ಬಹುವಾತಾಯನಾನ್ವಿತಾಃ ॥ ೧೮ ॥

ದೀಪಪಂಚಕಸಾಲೋಕಾ ಸ್ತ್ರಿಸ್ಥೂಣಾಃ ಶುಕ್ಲದಾರವಃ ।
ಮಸೃಣಾಲೇಪಪ್ಸೃದವಃ ಪ್ರತೋಲೀಭುಜಸಂಕುಲಾಃ ॥ ೧೯ ॥

[ಸಕಲ ಪ್ರಾಣಿ ಸಂಘಗಳೂ (ದೇವತೆಗಳಿಂದ ಮೊದಲು ಮಾಗು ಜಂತುಗಳ ವರೆವಿಗೆ) ಸಂಸಾರ ಲಂಪಟರಾಗಿ ವಿಷಯ ಸುಖಾಸಕ್ತಿಯಿಂದ ನಾನಾ ವ್ಯಾಪಾರ ಗಳಲ್ಲಿ ಮಗ್ನರಾಗಿರುವರು ಎಂದರ್ಥ.]

೧೭. ಆ ರಾಜನು, ಕೆಲವು ಪ್ರಾಣಿಗಳನ್ನು ಅವವುಗಳ ಯೋಗ್ಯತೆಗೆ ತಕ್ಕಂತೆ ಮೇಲುಗಡೆಯಲ್ಲಿಯೂ (ಮೇಲಣ ಅಂತಸ್ತು) ಮತ್ತೆ ಕೆಲವನ್ನು ಕೆಳಗಡೆಯಲ್ಲಿಯು ಇನ್ನೂ ಬೇರೆ ಕೆಲವನ್ನು ಮಧ್ಯದಲ್ಲಿಯೂ ನಿಯಮಿಸಿಟ್ಟಿರುವನು. ಅವುಗಳಲ್ಲಿ ಕೆಲವು ಬಹು ಕಾಲಾನಂತರ ನಾಶಹೊಂದತಕ್ಕವುಗಳಾಗಿಯೂ (ಚಿರಂಜೀವಿ) ಮತ್ತೆ ಕೆಲವು ಬೇಗನೆ ನಾಶ ಹೊಂದತಕ್ಕವುಗಳಾಗಿಯೂ (ಅಲ್ಪ ಜೀವಿ) ಇರುವುವು.

೧೮–೧೯. ಆ ನಗರದಲ್ಲಿ ಅನೇಕ ಅಪವರಕಗಳು (ಕಿರುಮನೆಗಳು, ದೇಹ ಗಳು) ಆ ರಾಜನಿಂದ ರಚಿತವಾಗಿವೆ. ಇವುಗಳನ್ನು ಕಪ್ಪಾದ ಆಚ್ಛಾದನಗಳು (ಮೇಲು ಚಾವಣೆ-ಕೂದಲುಗಳು) ಮೇಲುಗಡೆ ಮುಚ್ಚಿಕೊಂಡಿರುವುವು. ಇವು ಗಳಿಗೆ ಒಂಭತ್ತು ದ್ವಾರಗಳು ಇರುವುವು. (ಒಂಭತ್ತು ದ್ವಾರಗಳು= ಕಣ್ಣುಗಳೆ ರಡು, ಕಿವಿಗಳೆರಡು, ನಾಸಾರಂಧ್ರಗಳೆರಡು, ಬಾಯಿ, ಮಲಮೂತ್ರದ್ವಾರಗಳೆರಡು, ಅಂತೂ ಹೀಗೆ ದೇಹದಲ್ಲಿ ನವದ್ವಾರಗಳಿವೆ.) ಇವುಗಳಿಂದ ಸರ್ವದಾಯುವಾವು ಸಂಚ ರಿಸುತ್ತಿರುವುದು. (ಉಚ್ಛ್ವಾಸನಿಶ್ವಾಸವಾಯುಗಳು)ಇವುಗಳಲ್ಲಿ ಅನೇಕ ಬೆಳಕುಕಿಂಡಿ ಗಳು (ಗವಾಕ್ಷಗಳು ಮತ್ತು ಊರ್ಧ್ವಮುಖಚ್ಛಿದ್ರಗಳು) ರಚಿತವಾಗಿವೆ. ಈ ಕಿರುಮನೆ(ಗಳೆಂಬ ದೇಹ)ಗಳಲ್ಲಿ ಸಂತತವೂ ಐದು ದೀಪಗಳು (ಪಂಚ ಜ್ಞಾನೇಂದ್ರಿ ಯಗಳು ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ) ಉರಿಯುತ್ತ, ಸರ್ವತ್ರ ಬೆಳ ಕನ್ನು ಬೀರುತ್ತಿರುವುವು. ಎರಡು ತೊಡೆಗಳು (ಊರುದ್ವಯ) ಬೆನ್ನುಮೂಳೆ ಎಂಬ ಮೂರು ಸ್ತಂಭಗಳು ಬಲವಾಗಿ ಇವುಗಳನ್ನು ಎತ್ತಿಹಿಡಿದಿವೆ. ಬಿಳಿಯ ಎಲು

ಮಾಯಯಾ ರಚಿತಾಸ್ತೇನ ರಾಜ್ಞಾ ತೇಷು ಮಹಾತ್ಮನಾ ।
ರಕ್ಷಿತಾರೋ ಮಹಾಯಕ್ಷಾ ನಿತ್ಯಮಲೋಕಭೀರವಃ ॥ ೨೦ ॥

ಅಥಾಪವರಕೌಘೇಷು ಚಲತ್ಸು ಸ ಮಹೀಪತಿಃ ।
ಕರೋತಿ ವಿವಿಧಾಂ ಕ್ರೀಡಾಂ ನೀಡೇಷ್ವಿವ ವಿಹಂಗಮಃ ॥ ೨೧ ॥

ತ್ರಿಶರೀರಶತೇಷ್ವಂತಸ್ತೈರ್ಯಕ್ಷೈಃ ಸಹ ಪುತ್ರಕ ।
ಲೀಲಾವಶಮುಷಿತ್ವಾ ತು ಪುನರ್ನಿರ್ಗಮ್ಯ ಗಚ್ಛತಿ ॥ ೨೨ ॥

ಬುಗಳೆಂಬ ಅನೇಕ ಬಿದಿರುಗಳುಗಳು ಇವುಗಳಿಗೆ ಆಧಾರವಾಗಿವೆ. ಜಿಡ್ಡಾಗಿರುವ ಸುದ್ದೆ (ಗೋಡೆಗಳಿಗೆ ಅಥವಾ ನೆಲಕ್ಕೆ ಬಿಳಿಯ ಮಣ್ಣು) ಗಳಂತಿರುವ ನುಣುವಾದ ಚರ್ಮಗಳಿಂದ ಮೃದುವಾಗಿರುವುವು. ಬಾಹುಗಳೆಂಬ ರಸ್ತೆಗಳು (ದಾರಿಗಳು) ಇವುಗಳಲ್ಲಿ ಬಹಳವಾಗಿರುವುವು.

೨೦. ಮಹಾತ್ಮನಾದ ಆ ರಾಜನು ಕೆಲವು ಮಂದಿ ಯಕ್ಷರನ್ನು (ಕಾರ್ಯಕರಣಗಳಾದ ಅಹಂಕಾರಗಳು) ತನ್ನ ಮಾಯಾಶಕ್ತಿಯಿಂದ ರಚಿಸಿ ಆ ದೇಹಾಪವರಕಗಳ ಮೇಲೆ ತನಗಿರುವ ಅಭಿಮಾನದಿಂದ ಅವುಗಳ ಕಾವಲುಗಾರರನ್ನಾಗಿ ನಿಯಮಿಸಿಸಿದನು. ಆದರೆ ಆ ಯಕ್ಷರು (ಅಹಂಕಾರಗಳು) ಯಾವಾಗಲೂ ಬೆಳಕನ್ನು (ವಿವೇಕವನ್ನು) ನೋಡಿದರೆ ಹೆದರಿಕೊಂಡು ನಿಲ್ಲದೆ ಓಡಿಹೋಗುವರು.

೨೧. ಇಂತಹ ಕಿರುಮನೆಗಳ (ದೇಹಗಳ) ಸಮೂಹಗಳು ನಾನಾ ವಿಧಗಳಾದ ವ್ಯವಹಾರಗಳಲ್ಲಿ ತೊಡಗಿ ಸಂಚರಿಸುತ್ತಿರಲಾಗಿ ಆ ರಾಜನು (ಸಂಕಲ್ಪರೂಪನಾದ ಜೀವನು) ಪಕ್ಷಿಯ ಗೂಡುಗಳಲ್ಲಿ ವಿಹರಿಸುವಂತೆ ಅವುಗಳಲ್ಲಿ ನಾನಾ ವಿಧ ಕ್ರೀಡೆಗಳಿಂದ ವಿಹಾರಮಾಡಿಕೊಂಡಿರುವನು.

೨೨. ಪುತ್ರ, (ವತ್ಸ) ಈ ಪ್ರಕಾರವಾಗಿ, ಸಂಕಲ್ಪಾತ್ಮನಾದ ಜೀವನೆಂಬ ಆ ರಾಜನು ತ್ರಿವಿಧಗಳಾದ (ಸ್ಥೂಲ, ಸೂಕ್ಷ್ಮ, ಕಾರಣ) ಅಸಂಖ್ಯಾಕ ದೇಹಗಳೆಂಬ ಅಪವರಕಗಳೊಳಗೆ ಕಾವಲುಗಾರರಾದ ಅಹಂಕಾರಗಳೆಂಬ ಯಕ್ಷರಿಂದೊಡಗೂಡಿ ನಾನಾ ವಿಧ ಲೀಲೆಗಳಿಂದ ಕ್ರೀಡಿಸುತ್ತಾ ಅಸ್ವತಂತ್ರನಾಗಿಯೇ ಕೆಲವು ಕಾಲ ವಾಸಮಾಡಿಕೊಂಡಿದ್ದು ಆಮೇಲೆ ಅಲ್ಲಿಂದ ಹೊರಕ್ಕೆ ಹೊರಟುಹೋಗುವನು.

ತಸ್ಯೇಚ್ಛಾ ಜಾಯತೇ ವತ್ಸ ಕದಾಚಿಚ್ಚಲ ಚೇತಸಃ ।
ಪುರಂ ಭವಿಷ್ಯನ್ನಿರ್ಮಾಣಂ ಕಿಂಚದ್ಯಾಮೀತಿ ನಿಶ್ಚಲಾ ॥ ೨೩ ॥

ಭೂತಾವಿಷ್ಟ ಇವಾವೇಗಾತ್ತತ ಉತ್ಥಾಯ ಧಾವತಿ ।
ಪುರಂ ತದಪ್ಯಥಾಪ್ನೋತಿ ಗಂಧರ್ವೈರಿವ ನಿರ್ಮಿತಂ ॥ ೨೪ ॥

ತಸ್ಯೇಚ್ಛಾ ಜಾಯತೇ ಪುತ್ರ ಕದಾಚಿಚ್ಚಲಚೇತಸಃ ।
ವಿನಾಶಂ ಸಂಪ್ರಯಾಮೀತಿ ತೇನಾಶು ಸ ವಿನಶ್ಯತಿ ॥ ೨೫ ॥

---

೨೩. ವತ್ಸ, ಹೀಗೆ ಅತ್ಯಂತ ಚಪಲಚಿತ್ತನಾದ (ಸಂಕಲ್ಪಾತ್ಮ ಜೀವನೆಂಬ) ಆ ರಾಜನಿಗೆ ಬೇರೊಂದು ಸಮಯದಲ್ಲಿ ಅಸತ್ತಾದ ಸ್ವಪ್ನಾದಿ ಜಗತ್ (ಭವಿಷ್ಯ ನಿರ್ಮಾಣಂ) ಎಂಬ ಬೇರೊಂದು ನಗರವನ್ನು ಮುಂದೆ ನಿರ್ಮಾಣಮಾಡಿ ಅಲ್ಲಿಗೆ ಹೋಗಬೇಕೆಂಬ ನಿಶ್ಚಲವಾದ [ಅದರ ಭೋಗಾನುಭವನಿರುವಷ್ಟು ಕಾಲ ಮಾತ್ರ ಸ್ಥಿರವಾದ] ಇಚ್ಛೆಯು ಹುಟ್ಟುವುದು.

೨೪. ಇಂತಹ ಇಚ್ಛೆಯುಂಟಾದ ಕ್ಷಣವೇ ಅವನು ಪಿಶಾಚದಿಂದ ಆವಿಷ್ಟನಾದವನಂತೆ ಆ ವೇಗದ ದೆಸೆಯಿಂದ [ನಿದ್ರಾದಿಗಳ ಆವೇಶದಿಂದ] ಅಲ್ಲಿಂದ ಎದ್ದು ಓಡಿ ಹೋಗುವನು. (ಜಾಗ್ರದ್ದೇಹಾಭಿಮಾನವನ್ನು ಬಿಟ್ಟು ಸ್ವಾಪ್ನಶರೀರದ ಕಡೆಗೆ ಓಡುವನು.] ಬಳಿಕ ಕೂಡಲೆ, [ಗಂಧರ್ವರಿಂದ ಆಕಾಶದಲ್ಲಿ ನಿರ್ಮಿತವಾದ ನಗರ] ಗಂಧರ್ವ ನಗರದಂತೆ ಅತ್ಯಂತ ಮಿಥ್ಯಾಭೂತವಾದ ಮತ್ತೊಂದು ಆ ಪಟ್ಟಣವನ್ನೂ ಕೂಡ ಹೋಗಿ ಸೇರಿಕೊಳ್ಳುವನು. [ಸ್ವಾಪ್ನದೇಹತನ್ನೂ ಕೂಡ ತನ್ನ ಅಪೇಕ್ಷೆಯಂತೆಯೇ ಪಡೆಯುವನು.]

೨೫. ಪುತ್ರ, ಹೀಗೆಯೇ ಇರುವಲ್ಲಿ ಚಂಚಲಚಿತ್ತನಾದ ಅವನಿಗೆ ಇನ್ನೊಂದು ಸಲ ಸಂಕಲ್ಪ ಲಯಾವಸ್ಥಾರೂಪ ಸುಷುಪ್ತಿಯನ್ನು [ವಿನಾಶವನ್ನು] ತಾನು ಹೊಂದಬೇಕೆಂದು ಇಚ್ಛೆಯುಂಟಾಗುವುದು. ಅದರಂತೆ ಅವನು ಆಗ ತತ್‌ಕ್ಷಣವೇ ತನ್ನ ಕರ್ಮಬೀಜ ಸಂಸ್ಕಾರಶೇಷವನ್ನು ಅವಿದ್ಯೆಯಲ್ಲಿಯೇ ಲಯಗೊಳಿಸಿ [ನಷ್ಟಪ್ರಾಯನಾಗುವನು] ಸುಷುಪ್ತನಾಗುವನು.

ಪುನರುತ್ಪದ್ಯತೇಽತೂರ್ಣಂ ಸ್ವಾತ್ಮನೋರ್ಮಿರಿವಾಂಭಸಃ ।
ವ್ಯವಹಾರಂ ತನೋತ್ಯುಚ್ಚೈಃ ಪುನರಾರಂಭಮಂಥರಂ ॥ ೨೬ ॥

ಸ್ವಯೈವ ವ್ಯವಹೃತ್ಯಾಥ ಕದಾಚಿತ್ ಪರಿಭೂಯತೇ ।
ಕಿಂಕರೋಽಸ್ಮ್ಯಹಮಜ್ಞೋಽಸ್ಮಿ ದುಃಖಿತೋಽಸ್ಮೀತಿ ಶೋಚತಿ ॥ ೨೭ ॥

---

೨೬. ಜಲದಿಂದ ಅಲೆಯು ಉದಯಿಸುವಂತೆ ಅವನು ಪುನಃ ತನ್ನ ಪೂರ್ವ ಸ್ವಭಾವದಿಂದಲೇ ಪರಿಪೂರ್ಣನಾಗಿ ಉತ್ಪನ್ನನಾಗುವನು. ಮತ್ತೆ ಪೂರ್ವದಂತೆ ನಾನಾ ವಿಧ ಕಾರ್ಯಾರಂಭಗಳಿಂದ ಸಂಕುಲವಾದ ಜಾಗ್ರದ್ವ್ಯವಹಾರವನ್ನು ಹುರುಪಿನಿಂದ ನಡೆಸುವನು.

[ನಿದ್ದೆಯಿಂದ [ಸುಷುಪ್ತಿಯಿಂದ] ಎಚ್ಚೆತ್ತವನಾಗಿ "ನಿನ್ನೆ ರಾತ್ರಿ ಮಲಗಿದ ಆ ನಾನೇ ಈಗ ಎಚ್ಚೆತ್ತೆನು." ಎಂಬ ಪ್ರತ್ಯಭಿಜ್ಞಾನವುಂಟಾಗುವುದು. ಹೀಗೆಯೇ ಬಾಲ್ಯಾದಿಗಳು ಕಳೆದು ವಾರ್ಧಕಾದಿ ಅವಸ್ಥಾಂತರಗಳು ಬಂದಾಗಲೂ "ಹಿಂದೆ ಬಾಲ್ಯದಲ್ಲಿ ತಾಯಿ ತಂದೆಗಳ ಸುಖವನ್ನು ಅನುಭವಿಸಿದ ಆ ನಾನೇ ಈಗ ವಾರ್ಧಕದಲ್ಲಿ ಮೊಮ್ಮಕ್ಕಳಿಂದ ಸುಖಿಸುತ್ತಿರುವೆನು" ಎಂದೂ ಪ್ರತ್ಯಭಿಜ್ಞಾನವು ಉದಯಿಸುವುದು. ಇದರಿಂದ ಆತ್ಮನು ಒಬ್ಬನೇ ಅವಿನಾಶಿಯು, ದೇಹಾದಿಗಳಿಗಿಂತ ಪೃಥಕ್ಕಾಗಿ ವಿಲಕ್ಷಣನಾದವನು ಅವಿಕಾರಿಯು, ಎಂದು ಸ್ಪಷ್ಟವಾಗುವುದು. ಇದನ್ನೇ ಭಗವಂತನು ಗೀತೆಯಲ್ಲಿ (೩-೧೩) ದೇಹಿನೋಽಸ್ಮಿನ್ ಯಥಾದೇಹೇ ಕೌಮಾರಂ ಯೌವನಂ ಜರಾ, ತಥಾ ದೇಹಾಂತರಪ್ರಾಪ್ತಿಃ ಎಂದೂ ಶ್ರೀಮಚ್ಛಂಕರಾಚಾರ್ಯರವರು ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ ವ್ಯಾವೃತ್ತಾಸು,- ಅನುವರ್ತಮಾನಮಹಮಿತಿ, ಅಂತಃಸ್ಫುರಂತಂಸದಾ ॥ ಎಂದೂ ಹೇಳಿರುವರು.]

೨೭. ಹೀಗೆ ಅವನು ವಿವಿಧ ವ್ಯಾಪಾರಗಳನ್ನು ನಡೆಯಿಸುತ್ತಲೂ, ಬಳಿಕ. ಯಾವುದೋ ಒಂದು ಸಮಯದಲ್ಲಿ ತನ್ನ ವ್ಯವಹಾರದಿಂದಲೇ ಶತ್ರು, ರೋಗ, ಬಡತನ ಮುಂತಾದುವುಗಳಿಂದ ಪರಾಭವವನ್ನು ಹೊಂದುವನು. ಅನಂತರ, "ಅಯ್ಯೋ, ನಾನು ನನ್ನ ಇಂದ್ರಿಯಗಳಿಗೆ ಗುಲಾಮನಾಗಿರುವೆನು, ನಾನು ಕೇವಲ ದಡ್ಡನು (ಅಜ್ಞನು-ಮೂಢನು) ಈಗ ನಾನು ಅತ್ಯಂತ ದುಃಖಗಳಿಗೆ ಗುರಿಯಾದೆನು." ಎಂದು ಬಹುವಾಗಿ ಶೋಕಕ್ಕೆ ಗುರಿಯಾಗುವನು.

ಮುದಮೇತ್ಯ ಕಥಾಚಿಚ್ಚ ಸ್ವಯಮಾಯಾತಿ ದೀನತಾಂ ।
ಪ್ರಾವೃಡ್ವರ್ಷಕಲೋಲ್ಲಾಸಪೂರಾದಿವ ನದೀರಯಃ ॥ ೨೮ ॥

ಜಯತಿ ಗಚ್ಛತಿ ವಲ್ಗತಿ ಜೃಂಭತೇ
ಸ್ಫುರತಿ ಭಾತಿ ನ ಭಾತಿ ಚ ಭಾಸುರಃ ।
ಸುತಮಹಾಮಹಿಮಾ ಸ ಮಹೀಪತಿಃ
ಪತಿರಪಾಮಿವ ವಾತರಯಾಕುಲಃ ॥ ೨೯ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
ದಾಶೂರೋಪಾಖ್ಯಾನೇ "ಖೋತ್ಥವಿಭವವರ್ಣನಂ" ನಾಮ ದ್ವಿಪಂಚಾಶಃ ಸರ್ಗಃ

---

೨೮. ಬೇರೊಂದು ಸಮಯದಲ್ಲಿ, ವರ್ಷಾಕಾಲದ ವೃಷ್ಟಿಯಿಂದ ನದೀಪ್ರವಾಹದ ವೇಗವು ಕ್ರಮೇಣ ಹೆಚ್ಚು ಹೆಚ್ಚಾಗಿ ವಿಜೃಂಭಿಸಿ, ಅನಂತರ ಇಳಿಮುಖವಾಗಿ ಕೊನೆಗೆ ಪ್ರಶಾಂತವಾಗುವಂತೆ, ಅವನು ತನ್ನ ಪೂರ್ವಾನುಭೂತ ಸುಖವು ಕಳೆದು ಹೋದ ತರುವಾಯ ಅದನ್ನು ಸ್ಮರಿಸಿಕೊಂಡು, ಹಾಗೆಯೇ ಸ್ವಲ್ಪ ಹೊತ್ತಿನೊಳಗಾಗಿ ದೈನ್ಯವನ್ನು ಪಡೆಯುವನು.

೨೯. ಪುತ್ರನೇ, ಮಹಾಮಹಿಮನೂ ಅತಿ ತೇಜಸ್ವಿಯೂ ಆದ ಆ ಖೋತ್ಥ ರಾಜನು, ಬಿರುಗಾಳಿಯ ರಭಸದಿಂದ ವ್ಯಾಕುಲಿತವಾದ ಮಹಾ ಸಮುದ್ರದಂತೆ, ಒಂದು ಸಮಯದಲ್ಲಿ ಶತ್ರುಗಳನ್ನು ಗೆಲ್ಲುವೆನೆಂಬ ಉತ್ಸಾಹವೂ ಶಕ್ತಿಯೂ ಇರುವಾಗ ತಾನು ಶತ್ರುಗಳಿರುವಲ್ಲಿಗೆ ಹೋಗಿ ಅವರನ್ನು ಕೆಣಕುವನು. ಅಂತೆಯೇ ಅವರನ್ನು ಸೋಲಿಸಿಬಿಡುವನು. ಅದರಿಂದ ಸಂತೋಷಗೊಂಡು ಕುಣಿದಾಡುವನು. ಶತ್ರುಗಳ ಸಂಪತ್ತುಗಳನ್ನೆಲ್ಲ ತಾನು ಕೊಳ್ಳೆ ಹೊಡೆದು ವಿಜೃಂಭಿಸುವನು. ಸಂಚಲಿಸುವನು. ಜಾಗ್ರತ್ ಸ್ವಪ್ನ ಕಾಲಗಳಲ್ಲಿ ಪ್ರಕಾಶಮಾನನಾಗಿರುವನು. ಸುಷುಪ್ತಿ, ಸಮಾಧಿ, ಪ್ರಳಯ, ಮುಕ್ತಿಗಳಲ್ಲಿ ಅಪ್ರಕಾಶನಾಗಿ ಇರುವನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ಖೋತ್ಥ ವಿಭವವರ್ಣನ" ಎಂಬ
ಐವತ್ತೆರಡನೆಯ ಸರ್ಗವು

ತ್ರಿಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅಥಾಪೃಚ್ಛತ್ಸುತಸ್ತತ್ರ ಜಂಬೂದ್ವೀಪೇ ಮಹಾನಿಶಿ ।
ಕದಂಬಾಗ್ರಾವಚೂಡಸ್ಥಂ ಪಿತರಂ ಪಾವನಾಶಯಂ ॥ ೧ ॥

ಪುತ್ರ ಉವಾಚ—

ಕೋಽಸೌ ಪೋತ್ಥ ಇತಿ ಖ್ಯಾತೋ ಭೂಪಸ್ತಾತೋತ್ತಮಾಕೃತಿಃ ।
ಕಥಿತಂ ಚ ಕಿಮೇತನ್ಮೇ ತ್ವಯೇತಿ ಬ್ರೂಹಿ ತತ್ವತಃ ॥ ೨ ॥

ಕ್ವ ಭವಿಷ್ಯತಿ ನಿರ್ಮಾಣಂ ವರ್ತಮಾನೇ ಕ್ವ ಗವ್ಯುತಾ ।
ಉಭಯಾರ್ಥವಿರುದ್ಧತ್ವಾನ್ಮನ್ಯೇ ಮೋಹಾಯ ವಚಸ್ತವ ॥ ೩ ॥

ಐವತ್ಮೂರನೆಯ ಸರ್ಗ

೧. ವಸಿಷ್ಠನು ಹೇಳಿದನು—ರಾಮ, ಹೀಗೆ ದಾಶೂರಮುನಿಯು ಹೇಳಿದುದನ್ನು ಕೇಳಿದ ಬಳಿಕ, ಆತನ ಮಗನು ಆ ಮಹಾನಿಶಿಯಲ್ಲಿ ಜಂಬೂದ್ವೀಪದ ಅರಣ್ಯದೊಳಗೆ ಕದಂಬ ವೃಕ್ಷದ ತುದಿಯಲ್ಲಿ ಚೂಡಾಮಣಿಯಂತೆ ಕುಳಿತಿದ್ದ ಪವಿತ್ರ ಹೃದಯನಾದ ತಂದೆಯನ್ನು ಕುರಿತು ಪ್ರಶ್ನೆ ಮಾಡಿದನು.

೨. ದಾಶೂರಮಗನು ಕೇಳಿದನು—ತಂದೆಯೇ, ಉತ್ತಮವಾದ ಆಕಾರದಿಂದ ಸಂಪನ್ನನಾದ ತಾವು ಉಪದೇಶಿಸಿದ ಖೋತ್ಥನೆಂದು ಪ್ರಸಿದ್ಧನಾದ ಆ ರಾಜನು ಯಾರು? ಈಗ ತಾವು ನನಗೆ ಹೇಳಿದುದೇನು? ತಾವು ಹೇಳಿದುದಕ್ಕೆಲ್ಲ ಗೂಢಾರ್ಥವು ಬೇರೆ ಇರುವುದೆಂದು ನನಗೆ ತೋರುವುದು. ಇದರ ತತ್ತ್ವವನ್ನು ನನಗೆ ವಿವರವಾಗಿ ಪುನಃ ಹೇಳಬೇಕು.

೩. ತಂದೆಯೇ, "ಪುರಂ ಭವಿಷ್ಯನಿರ್ಮಾಣಂ ಕಿಂಚಿದ್ಯಾಮಾತಿ ನಿಶ್ಚಲಾ" (ಸ್ಥಿತಿ ಸರ್ಗ ೫೩–೨೩) ಎಂದು ತಾವು ಹೇಳಿದಿರಲ್ಲವೆ. ಮುಂದೆ ಉಂಟಾಗುವ

ದಾಶೂರ ಉವಾಚ—

ಶೃಣು ಪುತ್ರ ಯಥಾಭೂತಮೇತತ್ತೇ ಕಥಯಾಮ್ಯಹಂ ।
ಯೇನ ಸಂಸಾರಚಕ್ರಸ್ಯ ತತ್ತ್ವಮಸ್ಯಾವಬುಧ್ಯಸೇ ॥ ೪ ॥

ಅಸದಪ್ಯುತ್ಥಿತಾರಂಭಮವಸ್ತುಮಯಮಾತತಂ ।
ಸಂಸಾರಸಂಸ್ಥಾನಮಿದಮೇವಮಾಕಥಿಂ ಮಯಾ ॥ ೫ ॥

ಪರಮಾನ್ನಭಸೋ ಜಾತಃ ಸಂಕಲ್ಪಃ ಖೋತ್ಥ ಉಚ್ಯತೇ ।
ಜಾಯತೇ ಸ್ವಯಮೇವಾಸೌ ಸ್ವಯಮೇವ ವಿಲೀಯತೇ ॥ ೬ ॥

ವಸ್ತುವನ್ನು ಈಗ ನಿರ್ಮಿಸುವುದು ಎಲ್ಲಿ ಸಾಧ್ಯವು? ಈಗ ಇರುತ್ತಿರುವುದು ಹೋಯಿತ್ತು ಎಂಬುದು ಹೇಗೆ? ಹೀಗೆ ಈ ಎರಡು ವಿಷಯಗಳೂ ಅರ್ಥದಲ್ಲಿ ಪರಸ್ಪರ ವಿರುದ್ಧವಾಗಿರುವ ಕಾರಣ, ತಮ್ಮ ಮಾತು ನನಗೆ ಅತ್ಯಂತ ವ್ಯಾಮೋಹ ಹೇತುವಾಗಿರುವುದು.

೪. ದಾಶೂರನು ಹೇಳಿದನು—ಮಗನೇ, ಇದರ ತತ್ತ್ವವನ್ನು ಇದ್ದದ್ದು ಇದ್ದಹಾಗೆ ನಾನು ನಿನಗೆ ಈಗ ಹೇಳುವೆನು ಕೇಳು—ಇದನ್ನು ನೀನು ಸರಿಯಾಗಿ ತಿಳಿದುಕೊಂಡೆಯಾದರೆ, ಆಗ ಈ ಸಂಸಾರದ ತತ್ತ್ವವನ್ನು ನೀನಾಗಿಯೇ ಚೆನ್ನಾಗಿ ತಿಳಿಯುವೆ.

೫. ಈ ಸಂಸಾರದ ಸನ್ನಿವೇಶವು ಅಸತ್ಯವಾದುದಾಗಿದ್ದರೂ (ಪರಮಾರ್ಥಸತ್ತಾಶೂನ್ಯ) ಅಜ್ಞಾನದ ದೆಸೆಯಿಂದಲೇ ಉತ್ಪನ್ನವಾದ ಅನೇಕ ಕಾರ್ಯಾರಂಭಗಳುಳ್ಳದ್ದಾಗಿರುವುದು. ವಸ್ತು ಶೂನ್ಯವಾಗಿಯೇ (ಮಾಯಾಮಯವಾಗಿಯೇ) ಇದ್ದರೂ ಸರ್ವತ್ರ ವ್ಯಾಪಿಸಿಕೊಂಡಿರುವುದು. ಹೀಗೆ ಈ ಅರ್ಥವನ್ನು ಬೋಧಿಸುವುದಕ್ಕಾಗಿಯೇ ನಾನು ಪರೋಕ್ಷವಾಗಿ ಹಿಂದೆ ವರ್ಣಿಸಿದೆನು.

೬. ಪರಬ್ರಹ್ಮಾಕಾಶದ ದೆಸೆಯಿಂದ ಹುಟ್ಟಿದ ಸಂಕಲ್ಪಪ್ರಧಾನವಾದ ಮನಸ್ಸೇ ಖೋತ್ಥನೆಂಬ ರಾಜನೆಂದು ಹೇಳಲ್ಪಡುವುದು. (ಸಮಷ್ಟಿ, ವ್ಯಷ್ಟಿರೂಪ ದ್ವಿಪ್ರಕಾರಕ ಮನಸ್ಸುಗಳನ್ನು ಒಂದಾಗಿ ಕೂಡಿಸುವುದರಿಂದ ಅವ್ಯಕ್ತಾಕಾಶದ ದೆಸೆಯಿಂದ ಉತ್ಥಿತನಾದನು. (ಖಾತ್-ಉತ್ಥಃ) ಎಂಬ ಉತ್ಪತ್ತಿಯಿಂದ ಖೋತ್ಥನೆಂದು ಹೇಳಲ್ಪಟ್ಟಿದೆ.) ಈ ಮನಸ್ಸು ತಾನಾಗಿಯೇ ತನ್ನ ಸಂಕಲ್ಪಜನ್ಯವಾದ ಪ್ರವೃತ್ತಿವಾಸ

ತತ್ಸ್ವರೂಪಮಿದಂ ಸರ್ವಂ ಜಗದಾಭೋಗಿ ವಿದ್ಯತೇ ।
ಜಾಯತೇ ತತ್ರ ಜಾತೇತು ತಸ್ಮಿನ್ನಷ್ಟೇ ವಿನಶ್ಯತಿ　　　　॥ ೭ ॥

ಬ್ರಹ್ಮವಿಷ್ಣ್ವಿಂದ್ರರುದ್ರಾದ್ಯಾಸ್ತಸ್ಯೈವಾವಯವಾನ್ವಿದುಃ ।
ವಿಟಪಾನಿವ ವೃಕ್ಷಸ್ಯ ಶೃಂಗಾಣೀವ ಮಹೀಭೃತಃ　　　　॥ ೮ ॥

ಶೂನ್ಯೇ ವ್ಯೋಮನಿ ತೇನೇದಂ ನಿರ್ಮಿತಂ ತ್ರಿಜಗತ್ಪುರಂ ।
ಪ್ರತಿಭಾಸಾನುಸಂಧಾನಮಾತ್ರೇಣೈತ್ಯ ವಿರಂಚಿತಾಂ　　　　॥ ೯ ॥

ಯತ್ರೇಮೇ ವಿತತಾಲೋಕಾ ಲೋಕಕೋಶಾಶ್ಚತುರ್ದಶ ।
ವನೋಪವನಮಾಲಾಶ್ಚ ಯತ್ರೋದ್ಯಾನಪರಂಪರಾಃ　　　　॥ ೧೦ ॥

ನೆಯು ಉದ್ಭವಿಸುವುದರಿಂದಲೇ ಹುಟ್ಟುವುದು. ಮತ್ತು ನಿವೃತ್ತಿವಾಸನೆಯ ದಾರ್ಢ್ಯದಿಂದ ತಾನೇ ಲಯಹೊಂದುವುದು.

೭. ಅತಿ ವಿಸ್ತಾರವಾದ ಈ ಜಗತ್ತೆಲ್ಲವೂ ಸಂಕಲ್ಪ ಪ್ರಧಾನವಾದ ಮನಸ್ಸಿನ ಪರಿಣಾಮವೇ ಆಗಿರುವುದು. ಅದು ಹುಟ್ಟಿದರೆ ಈ ಜಗತ್ತೂ ಹುಟ್ಟುವುದು. ಮನಸ್ಸು ನಷ್ಟವಾದರೆ ಈ ಜಗತ್ತೂ ನಾಶಹೊಂದುವುದು-

೮. ದೊಡ್ಡ ವೃಕ್ಷಕ್ಕೆ ಕೊಂಬೆಗಳೂ, ಪರ್ವತಗಳಿಗೆ ಶಿಖರಗಳೂ ಹೇಗೆ ಅಂಶ (ಅವಯವ) ಗಳಾಗಿವೆಯೋ ಹಾಗೆಯೇ ಬ್ರಹ್ಮ, ವಿಷ್ಣು, ರುದ್ರ, ಇಂದ್ರ ಮುಂತಾದ ದೇವತೆಗಳೂ ಕೂಡ ಸಂಕಲ್ಪ ಪ್ರಧಾನವಾದ ಮನಸ್ಸಿನ ಅವಯವಗಳಾಗಿರುವರೆಂದು ಶಾಸ್ತ್ರಜ್ಞನು ತಿಳಿದಿರುವನು.

೯. ಆ ಸಂಕಲ್ಪ ಪ್ರಧಾನವಾದ ಮನಸ್ಸು ಸ್ವತಃ ಅಚೇತನವಾದುದಾದರೂ ತನಗೆ ಅಧಿಷ್ಠಾನಭೂತವಾದ ಬ್ರಹ್ಮ ಚೈತನ್ಯದ ಪ್ರತಿಭಾಸವನ್ನೂ (ಸತ್ತೆಯನ್ನೂ) ಅನುಸಂಧಾನ ಮಾಡುವುದರಿಂದ ಮಾತ್ರವೇ ಅದರ ಅನುಗ್ರಹದಿಂದ ಚೇತನವಾದ ಚತುರ್ಮುಖ ಬ್ರಹ್ಮನ ರೂಪವನ್ನೂ ಪಡೆದು ಶೂನ್ಯವಾದ (ಕಾಲತ್ರಯದಲ್ಲಿ ಸರ್ವದಾ ಜಗದತ್ಯಂತಾಭಾವವುಳ್ಳ) ಬ್ರಹ್ಮಾಕಾಶದಲ್ಲಿ ಜಗತ್ತ್ರಯವೆಂಬ ಈ ನಗರವನ್ನೂ ನಿರ್ಮಿಸುವುದು.

೧೦. ಜಗತ್ತ್ರಯವೆಂಬ ಆ ನಗರದೊಳಗೆ ಸೂರ್ಯ ಚಂದ್ರಾದಿಗಳ ಪ್ರಕಾಶ

ಕ್ರೀಡಾಶಿಖರಿಣೋ ಯತ್ರ ಸಹ್ಯಮಂದರಮೇರವಃ ।
ಶೀತೋಷ್ಣದೀಪ್ತೀ ಚಂದ್ರಾರ್ಕೌ ದೀಪೌ ಯತ್ರಾನಲಾಕೃತೀ ॥ ೧೧ ॥

ಸೂರ್ಯಾಂಶುಕಚದಾಲೋಲತರಂಗೋತ್ತುಂಗಮೌಕ್ತಿಕಾಃ ।
ವಹಂತಿ ಸರಿತೋ ಯತ್ರ ಸನ್ಮುಕ್ತಾಫಲಯಶ್ಚಲಾಃ ॥ ೧೨ ॥

ಇಕ್ಷುಕ್ಷೀರಾದಿಸಲಿಲಾ ಮಣಿರತ್ನಬಿಸಾಂಕುರಾಃ ।
ಔರ್ವಾನಲಾಂಬುಜಾ ಯತ್ರ ವಾಪ್ಯಃ ಸಪ್ತ ಮಹಾರ್ಣವಾಃ ॥ ೧೩ ॥

ದಿಂದ ಬಹಳವಾಗಿ ಪ್ರಕಾಶಿಸುತ್ತಿರುವ ಈ ಹದಿನಾಲ್ಕು ಲೋಕಗಳು ಕೋಶಗಳಂತಿರುವುವು.೧ ಮಹಾರಣ್ಯಗಳ ಮತ್ತು ಸಣ್ಣ ಕಾಡುಗಳ ಶ್ರೇಣಿಗಳು ಅಲ್ಲಿನ ಉದ್ಯಾನ ಪರಂಪರೆಗಳಾಗಿರುವುವು. ೨

(೧) ಪೂರ್ವ ಸರ್ಗದ ೧೩ನೇ ಶ್ಲೋಕದಲ್ಲಿರುವ "ಚತುರ್ದಶ ಮಹಾರಥ್ಯಂ" ಎಂಬುದರ ವಿವರಣೆ. (೨) ೧೪ನೇ ಶ್ಲೋಕದಲ್ಲಿರುವ "ವನೋಪವನ ಮಾಲಾಢ್ಯಂ" ಎಂಬುದರ ವಿವರಣೆ.)

೧೧. ಸಹ್ಯ ಮಂದರ ಮೇರು ಮುಂತಾದ ಪರ್ವತಗಳು ಅಲ್ಲಿ ಕ್ರೀಡಾ ಪರ್ವತಗಳಾಗಿವೆ.೩ ಮತ್ತು ಚಂದ್ರ ಸೂರ್ಯರು ಅಗ್ನಿಯ ಹಾಗೆ ದೀಪ್ಯಮಾನವಾಗಿ ಅಲ್ಲಿ ಉರಿಯುತ್ತಿರುವ ಶೀತಳವೂ ಉಷ್ಣವೂ ಆದ ಪ್ರಕಾಶಗಳುಳ್ಳ ಎರಡು ದೀಪಗಳಾಗಿರುವರು.೪

(೩) ೧೪ನೆಯ ಶ್ಲೋಕ. ಕ್ರೀಡಾಃಶಿಖರಿ ಸುಂದರಂ ಎಂಬುದರ ವಿವರಣೆ.

(೪) ೧೫ನೆಯ ಶ್ಲೋಕ. ಶೀತಲೋಷ್ಣಾತ್ಮಕ—ಎಂಬುದರ ವಿವರಣೆ.

೧೨. ಸೂರ್ಯನ ಕಿರಣಗಳಿಂದ ಹೊಳೆಯುತ್ತ ಅತಿ ಚಂಚಲವಾಗಿರುವ ತರಂಗಗಳೆಂಬ ಸ್ಥೂಲ ಮುಕ್ತಾ ಫಲಗಳುಳ್ಳ ನದಿಗಳು ಆ ನಗರದಲ್ಲಿ ಚಂಚಲವಾದ ಒಳ್ಳೆಯ ಮುಕ್ತಾಹಾರಗಳಂತೆ ಹರಿಯುತ್ತಿರುವುವು. ೫

(೫) ೧೪ನೆಯ ಶ್ಲೋಕ. ಮುಕ್ತಾಲತಾ—ಇತ್ಯಾದಿಯ ವಿವರಣೆ.

೧೩. ಸಪ್ತ ಸಮುದ್ರಗಳೇ ಆ ನಗರದಲ್ಲಿ ಭಾವಿಗಳಾಗಿರುವುವು. ಆ ಭಾವಿ

ಅಧ ಉರ್ವ್ಯಾಂ ತಥೋರ್ಧ್ವೇ ಚ ಪುಣ್ಯಾಪುಣ್ಯಧನಶ್ರಿಯಃ ।
ನರಾಸುರಕಿರೀಟಾನಾಂ ಯತ್ರಾಂತಃ ಕ್ರಯವಿಕ್ರಯೌ ॥ ೧೪ ॥

ಗಳಲ್ಲಿ ಇಕ್ಷುರಸ (ಕಬ್ಬಿನ ಹಾಲು) ಕ್ಷೀರ (ಹಸುವಿನ ಹಾಲು) ದಧಿ (ಮೊಸರು) ಇತ್ಯಾದಿ ದ್ರವಗಳೇ ಜಲವಾಗಿಯೂ ಅನರ್ಘವಾದ ನವವಿಧಮಣಿಗಳೇ ತಾವರೆಯ ದಂಟಿನ ಮೊಳಕೆಗಳಾಗಿಯೂ ಬಡ ಬಾಗ್ನಿಯೇ ಕಮಲವಾಗಿಯೂ ಇರುವುವು.

(೧೪ನೆಯ ಶ್ಲೋಕದ ವಾಪೀಸಪ್ತಕ ಭೂಷಿತಂ ಎಂಬುದರ ವಿವರಣೆ.)

೧೪. ಆ ಜಗತ್ರಯವೆಂಬ ನಗರದ ಒಳಗಡೆ ಅಧಃ ಎಂದರೆ ಕೆಳಗಿನ ಭೂಲೋಕದಲ್ಲಿಯೂ ಊರ್ಧ್ವ ಎಂದರೆ ಮೇಲುಗಡೆಯ ಸ್ವರ್ಗ ಲೋಕದಲ್ಲಿಯೂ ಪುಣ್ಯ ಪಾಪಗಳೆಂಬ ಧನರಾಶಿಗಳನ್ನು ಸಂಪಾದಿಸಿಕೊಂಡು ವಾಸಮಾಡುತ್ತಿರುವ ಉತ್ತಮ ಜಾತಿಯ ಜನರು, ಅಸುರರು ಮತ್ತು ನೀಚ ಜಾತಿಯ ಕಿರಾತರುಗಳು ಪರಸ್ಪರ ಕ್ರಯ ವಿಕ್ರಯಗಳನ್ನೂ ಮಾಡಿಕೊಳ್ಳುತ್ತಲಿರುವರು (ವ್ಯಾಪಾರ ನಡೆಯಿಸುತ್ತಿರುವರು.)

(೧೩ನೇ ಶ್ಲೋಕದ ಊರ್ಧ್ವಾಧೋಗತಿರೂಪೇಣವಣಿಜ್ಮಾರ್ಗೇಣ ಸಂಕುಲಃ ಎಂಬುದರ ವಿವರ. ದೇವಾನ್ ಭಾವಯುತಾನೇನ ತೇದೇವಾ ಭಾವಯುಂತುವಃ। ಪರಸ್ಪರಂಭಾವಯಂತಃ ಇತ್ಯಾದಿ. ಭಗವದ್ಗೀತೋಪದಿಷ್ಟವಾದ ಕ್ರಮದಿಂದ-ಕರ್ಮೋಪಾಸನಾಧಿಕಾರಿಗಳಾದ ಆರ್ಯರೂ (ಉತ್ತಮ ವರ್ಣದ ಜನರೂ ದೇವತೆಗಳೂ ಪುಣ್ಯ ಮತ್ತು ಅದರ ಫಲಗಳಿಂದ ಕ್ರಯ ವಿಕ್ರಯರೂಪ ವ್ಯಾಪಾರವನ್ನೂ ನಡೆಯಿಸುವರು. ಕರ್ಮಾನಧಿಕಾರಿಗಳಾದ ಅನಾರ್ಯರು (ಕಿರಾತರು) ಪಾಪ ಮತ್ತು ಅದರ ಫಲಗಳಿಂದ ಸ್ಥಾವರ ಮತ್ತು ತಿರ್ಯಂಗ್ಜಂತುಗಳ ಸಂಗಡ ಪರಸ್ಪರೋಪಕಾರ ಬಾಹುಳ್ಯದಿಂದ ಕ್ರಯವಿಕ್ರಯಗಳನ್ನು ನಡೆಸುವರು. ಎಂದು ಭಾವ.)

ತಸ್ಮಿನ್ನೇವ ಜಗತ್ಯಸ್ಮಿನ್ ಪುರೇ ಸಂಕಲ್ಪಭೂಭೃತಾ ।
ಕ್ರೀಡಾರ್ಥಮಾತ್ಮನಶ್ಚಿತ್ರಾ ದೇಹಾಪವರಕಾಃ ಕೃತಾಃ ॥ ೧೫ ॥

ಕೇಚಿದ್ಗೀರ್ವಾಣನಾಮಾನ ಊರ್ಧ್ವ ಏವ ನಿಯೋಜಿತಾಃ ।
ನರನಾಗಾದಯಃ ಕೇಚಿದಧ ಏವ ನಿಯೋಜಿತಾಃ ॥ ೧೬ ॥

ವಾತಯಂತ್ರಪ್ರವಾಹೇಣ ಚಲಂತೋ ಮಾಂಸಮೃಣ್ಮಯಾಃ ।
ಸಿತಾಸ್ಥಿದಾರವಶ್ಚಿತ್ರಾಸ್ತ್ವಗ್ಲೇಪಮಸೃಣಾಮಲಾಃ ॥ ೧೭ ॥

೧೫–೧೬. ಈ ಜಗತ್ತೆಂಬ ಆ ಪಟ್ಟಣದಲ್ಲಿಯೇ ಸಂಕಲ್ಪಪ್ರಧಾನವೆಂಬ ಮನಸ್ಸೆಂಬ ಭೋತ್ಥರಾಜನಿಂದ ತನ್ನ ವಿನೋದಾರ್ಥವಾಗಿ ನಾನಾ ವಿಚಿತ್ರಗಳಾದ ದೇಹಗಳೆಂಬ ಅಪವರಕ (ಕಿರುಮನೆ) ಗಳು ರಚಿಸಲ್ಪಟ್ಟಿರುವುವು. (೮) ಅವುಗಳೊಳಗೆ ದೇವತೆಗಳೆಂಬುದಾಗಿ ಕರೆಯಲ್ಪಡುವ ಕೆಲವು ಊರ್ಧ್ವಲೋಕ [ಮೇಲಣ ಲೋಕ] ದಲ್ಲಿಯೇ ಇರಸಲ್ಪಟ್ಟಿರುವುವು. ಮನುಷ್ಯ, ಹಾವು ಮುಂತಾದ ಬೇರೆ ಕೆಲವು ಅಧೋಲೋಕ [ಕೆಳಲೋಕ] ದಲ್ಲಿಯೇ ಇರಿಸಲ್ಪಟ್ಟಿರುವುವು. (೯)

[(೮) ಮತ್ತು (೯) ಸರ್ಗ ೫೨, ಶ್ಲೋಕ ೧೬, ಮತ್ತು ೧೭ರ ವಿವರಣೆ.]

೧೭. ಆ ದೇಹಾಪವರಕಗಳು ಪ್ರಾಣಾಪಾನಾದಿ ಪಂಚವಾಯುಗಳೆಂಬ ಯಂತ್ರವು ಪ್ರವಹಿಸುವುದರಿಂದ ಮಾತ್ರವೇ ಚಂಚಲವಾಗಿ ತಿರುಗುತ್ತಿರುವುವು. ಅವುಗಳಲ್ಲಿ ಬೆಳ್ಳಗಿರುವ ಮೂಲೆಗಳೆಂಬ ಮರದ ದಿಮ್ಮಿಗಳಿರುವುವು. (೧೦) ಅವು ಮಾಂಸಖಂಡಗಳೆಂಬ ಮಣ್ಣು ಹೆಂಟೆಗಳಿಂದ ವಿರಚಿತವಾಗಿರುವುವು. ಅವುಗಳ ಮೇಲೆ ಮುಸುಕಿರುವ ಚರ್ಮವು [ಕಿರುಮನೆಯ ಹೊರಭಾಗವು) ಎಣ್ಣೆ ಮೊದಲಾದವುಗಳ ಲೇಪದಿಂದ [ಸುಣ್ಣ ಸುದ್ದೆ ಮುಂತಾದ ಲೇಪನ ದ್ರವ್ಯಗಳಿಂದ] ಮೃದುವಾಗಿಯೂ ನಿರ್ಮಲವಾಗಿಯೂ ಇರುವುದು. ಹೀಗೆ ಆ ದೇಹಾಪವರಕಗಳು ವಿಚಿತ್ರವಾಗಿವೆ. (೧೧)

(೧೦) ೧೯ ಶ್ಲೋಕ ಶುಕ್ಲದಾರವಃ ಎಂಬುದರ ವಿವರಣೆ.

(೧೧) ,, ಮಸೃಣಾಲೇಪಮೃದವಃ ಎಂಬುದರ ವಿವರಣೆ.

ಕೇಚಿಚ್ಚಿರೇಣ ನಶ್ಯಂತಿ ಕೇಚಿಚ್ಛೀಘ್ರವಿನಾಶಿನಃ ।
ಕೇಚಿತ್ಕೇಶೋಲಪ್ರೋಲ್ಲಾಸರಚಿತಾಚ್ಛಾದನ ಶ್ರಿಯಃ || ೧೮ ||

ಕರ್ಣಾಕ್ಷಿನಾಸಾಪ್ರಮುಖೈಃ ದ್ವಾರೈರ್ನವಭಿರನ್ವಿತಾಃ ।
ಅನಾರತವಹತ್ಪ್ರಾಣಪವನೇನೋಷ್ಣಶೀತಲಾಃ || ೧೯ ||

ಕರ್ಣನಾಸಾಸ್ಯತಾಲ್ವಾದಿವಾತಾಯನಗಣಾನ್ವಿತಾಃ ।
ಭುಜಾದ್ಯಂಗಪ್ರತೋಲೀಕಾಃ ಪಂಚೇಂದ್ರಿಯಕುದೀಪಕಾಃ || ೨೦ ||

---

೧೮. ಇಂತಹ ದೇಹಾಪವರಕಗಳಲ್ಲಿ ಕೆಲವು ಬಹುಕಾಲಾನಂತರ ನಾಶಹೊಂದುವುವು. ಕೆಲವು ಬಹು ಬೇಗ ನಾಶವಾಗುವುವು. (೧೨) ಮತ್ತು ಕೆಲವು ಮನೆಗಳ ಮೇಲೆ ಕೂದಲುಗಳೆಂಬ ತೃಣವಿಶೇಷಗಳನ್ನು ರಮ್ಯವಾಗಿ ಚಾವಣಿಯಂತೆ ಹೊದ್ದಿಸಿ ಅಲಂಕಾರ ಮಾಡಿರುವರು. (೧೩)

(೧೨) ೧೭ನೆಯ ಶ್ಲೋಕ ಉತ್ತರಾರ್ಧದ ವಿವರಣೆ.

(೧೩) ೧೮ನೆ ಶ್ಲೋಕ ಅಸಿತಛಾದನಛನ್ನಾಃ ಎಂಬುದರ ವಿವರಣೆ.

೧೯. ಈ ದೇಹಗಳೆಂಬ ಕಿರುಮನೆಗಳು ಒಂದೊಂದೂ ಕಿವಿ, ಕಣ್ಣು, ಮೂಗು ಮುಂತಾದ ಒಂಭತ್ತು ದ್ವಾರಗಳಿಂದ ಕೂಡಿಕೊಂಡಿವೆ. (೧೪) ನಿರಂತರವೂ (ಸರ್ವದಾನಿಲ್ಲದೆ) ಬೀಸುತ್ತಿರುವ ಪ್ರಾಣವಾಯುವಿನಿಂದ ಅವು ಒಂದು ಸಲ ಉಷ್ಣವಾಗಿಯೂ (ಬಿಸಿಯಾಗಿ) ಇನ್ನೊಂದು ಸಲ ಶೀತಲವಾಗಿಯೂ (ತಣ್ಣಗೂ) ಆಗುವುವು. (೧೫)

(೧೪) ೧೮ ಶ್ಲೋಕದ ನವದ್ವಾರವಿಭೂಷಿತಾಃ ಎಂಬುದರ ವಿವರ.

(೧೫) ,, ಅನಾರತವಹದ್ವಾತಾಃ ಎಂಬುದರ ವಿವರ.

೨೦. ಆ ದೇಹಾಪವರಕಗಳು ಕಿವಿ, ಮೂಗು, ಬಾಯಿ, ದವಡೆ ಮುಂತಾದವುಗಳೆಂಬ ವಾತಾಯನಗಳ [ಗವಾಕ್ಷಗಳ] ಸಮುದಾಯದಿಂದ ಕೂಡಿವೆ. (೧೬) ಬಾಹುಗಳು ಮೊದಲಾದ ಅವಯವಗಳೆಂಬ ಬೀದಿಗಳುಳ್ಳವುಗಳಾಗಿವೆ. (೭) ಮತ್ತು ಅವುಗಳಲ್ಲಿ ಜ್ಞಾನೇಂದ್ರಿಯ ಪಂಚಕಗಳೆಂಬ ಸಣ್ಣ ದೀಪಗಳು ಬೆಳಕನ್ನು ಕೊಡುತ್ತಿವೆ. (೧೮)

ಮಾಯಯಾ ರಚಿತಾಸ್ತೇಷು ಸಂಕಲ್ಪೇನ ಮಹಾಪತೇ ।
ಅಹಂಕಾರಮಹಾಯಕ್ಷಾಃ ಪರಮಾಲೋಕಭೀರವಃ ॥ ೨೧ ॥

ದೇಹಾಪವರಕೇಷ್ವಂತರ್ಮಹಾಹಂಕಾರಯಕ್ಷಕೈಃ ।
ಸಹ ಸಂಕ್ರೀಡತೇಽತ್ಯರ್ಥಂ ಸ ಸದೈವಾಸದುತ್ಥಿತೈಃ ॥ ೨೨ ॥

ಯಥಾ ಕುಸೂಲೇ ಮಾರ್ಜಾರೋ ಭಸ್ತ್ರಾಯಾಂ ಭುಜಗೋ ಯಥಾ ।
ಮುಕ್ತಾಫಲಂ ಯಥಾ ವೇಣಾವಹಂಕಾರಸ್ತಥಾ ತನೌ ॥ ೨೩ ॥

---

(೧೬) ೧೮ನೆ ಶ್ಲೋಕ ಬಹುವಾತಾಯನಾನ್ವಿತಾಃ

(೧೭) ೧೯ನೆ ಶ್ಲೋಕ ಪ್ರತೋಳೀಭುಜಸಂಕುಲಾಃ ಮತ್ತು

(೧೮) ೧೯ ಶ್ಲೋಕ ದೀಪಪಂಚಕಸಾಲೋನಾಃ ಎಂಬಿವುಗಳ ವಿವರಣೆಗಳು.

೨೧. ಎಲೈ ಮಹಾಜ್ಞಾನಿಯೇ, ಆ ಸಂಕಲ್ಪರಾಜನು ಆ ದೇಹಾಪವರಕಗಳ ಮೇಲಣ ಅಭಿಮಾನದಿಂದ ಕೂಡಿದವನಾಗಿ ತನ್ನ ಮಾಯಾಶಕ್ತಿಯಿಂದ ಆತ್ಮವಿವೇಕ ವೆಂಬ ಮಹಾಪ್ರಕಾಶವನ್ನು ಕಂಡು ಹೆದರಿ ಓಡತಕ್ಕವರಾದ ಅಹಂಕಾರ ಭೇದಗಳೆಂಬ ಮಹಾ ಯಕ್ಷರನ್ನು ವಿರಚಿಸಿ ಅವುಗಳ ಕಾವಲಿಗಾಗಿ ನಿಯಮಿಸಿ ರುವನು. ೧೯

(೧೯) ಪೂರ್ವಸರ್ಗದ ೨೦ನೆಯ ಶ್ಲೋಕದ ವಿವರಣೆ.

೨೨. ಹೀಗೆ, ಪರಮಾರ್ಥ ಸತ್ತಾಶೂನ್ಯವಾದ ಅಜ್ಞಾನದಿಂದ ಅಸದ್ರೂಪ ಗಳಾಗಿಯೇ ಉದಯಿಸಿರುವ ಅಹಂಕಾರ ಭೇದಗಳೆಂಬ ಮಹಾಯಕ್ಷರೊಡನೆ ಆ ಸಂಕಲ್ಪಾತ್ಮಕ ಜೀವನೆಂಬ ರಾಜನು ಸರ್ವದಾ ಆ ದೇಹಾಪವರಕಗಳೊಳಗೆಯೇ ಸೇರಿ ಕೊಂಡು ಬಹುವಾಗಿ ವಿನೋದದಿಂದ ಕ್ರೀಡಿಸಿಕೊಂಡಿರುವನು. ೨೦

(೨೦) ೨೧ನೆಯ ಶ್ಲೋಕದ ವಿವರಣೆ.

೨೩. ಒಂದು ಕುಸೂಲದಲ್ಲಿ [ತೊಂಬೆ] ಬೆಕ್ಕೂ, ಬಿದಿರು ಪೆಟ್ಟಿಗೆಯೊಳಗೆ ಸರ್ಪವೂ ಬಿದಿರುನೊಳಗೆ ಮತ್ತು [ಮುಕ್ತಾಫಲ] ಗಳೂ ಹೇಗೆ ಅಡಗಿಕೊಂಡಿರು

ಕ್ಷಣಮಭ್ಯುದಯಂ ಯಾಂತಿ ಕ್ಷಣಂ ಶಾಮ್ಯಂತಿ ದೀಪವತ್ ।
ದೇಹಗೇಹೇಷು ಸಂಕಲ್ಪತರಂಗಾಃ ಸಾಗರೇಷ್ವಿವ || ೨೪ ||

ಭವಿಷ್ಯನ್ನವನಿರ್ಮಾಣಂ ಸ ವ್ಯಾಪ್ನೋತಿ ತದಾ ಪುರಂ ।
ಯದಾ ಸಂಕಲ್ಪಿತಂ ವಸ್ತು ಕ್ಷಣಾದೇವ ಪ್ರಪಶ್ಯತಿ || ೨೫ ||

ಅಸಂಕಲ್ಪನಮಾತ್ರೇಣ ಸ್ವೇನೈವಾಶು ವಿನಶ್ಯತಿ ।
ಶ್ರೇಯಸೇ ಪರಮಾಯಸ್ಯ ನಾಶತ್ವೇನ ತು ಸಂಭವಃ || ೨೬ ||

ವುವೋ ಹಾಗೆ ಈ ಅಹಂಕಾರವು ದೇಹದಲ್ಲಿಯೇ ಅಡಗಿಕೊಂಡಿರುವುದು. (ದೇಹವೆಂಬುದೇ ಅಹಂಕಾರವು ಬೇರೆಯಲ್ಲ.)

೨೪. ಸಮುದ್ರಗಳಲ್ಲಿ ತರಂಗಗಳಂತೆಯೂ ಮನೆಗಳೊಳಗೆ ದೀಪಗಳಂತೆಯೂ ಈ ದೇಹಗಳಲ್ಲಿ ನಾನಾ ವಿಧ ಸಂಕಲ್ಪಗಳು ಒಂದು ಕ್ಷಣದಲ್ಲಿ ಉದಯಿಸಿ ವೃದ್ಧಿಯಾಗುತ್ತಲೂ ಇನ್ನೊಂದು ಕ್ಷಣದೊಳಗೆ ಶಾಂತವಾಗುತ್ತಲೂ ಇರುವುವು.

೨೫. ಆ ಸಂಕಲ್ಪರಾಜನು ಯಾವಾಗ ತನ್ನೊಳಗೆ ಮನಸ್ಸಿನಲ್ಲಿ ಸಂಕಲ್ಪಕಲ್ಪಿತವಾದ ವಸ್ತುವನ್ನು ಒಂದು ಕ್ಷಣದೊಳಗಾಗಿಯೇ ನೋಡುವನೋ ಆಗಲೇ ಮುಂದೆ ನಿರ್ಮಾಣವಾಗಬೇಕಾಗಿರುವ ಹೊಸದಾದ ನಗರವನ್ನು [ದೇಹವನ್ನು] ವ್ಯಾಪಿಸುವನು.

[೨೧ ಇದು ಪೂರ್ವ ಸರ್ಗದ ೨೩ನೆ ಶ್ಲೋಕದ ವಿವರಣೆ.]

೨೬. ಮೇಲೆ ಹೇಳಿದ ರೀತಿಯಲ್ಲಿ ಸಂಕಲ್ಪವನ್ನು ಮಾಡದಿರುವ ಮಾತ್ರದಿಂದಲೇ ಆ ಸಂಕಲ್ಪಜೀವರಾಜನು ಕೂಡಲೆ ತಾನಾಗಿಯೇ ಸುಷುಪ್ತಿಯಲ್ಲಿ ಲಯ ಹೊಂದುವನು. ಆಗ, ಅಧಿಕವಾಗಿ ಆಯಾಸಗೊಂಡಿರುವ ಅವನು ವಿಶ್ರಾಂತಿ ಸುಖಾಭಿಲಾಷೆಯಿಂದ ಸುಷುಪ್ತಾವಸ್ಥೆಯಲ್ಲಿ ಸ್ವಸ್ವರೂಪದಲ್ಲಿ ಐಕ್ಯವನ್ನು ಹೊಂದಿ ಸತ್ಸಂಪನ್ನನಾಗಿ ಸ್ವಸ್ಥನಾಗಿರುವನೆಂದು ತಿಳಿಯಬೇಕು.

[೨೨ ಇದು ಹಿಂದಿನ ಸರ್ಗದ ೨೫ನೆ ಶ್ಲೋಕದ ವಿವರಣೆ.]

ಇದರ ತಾತ್ಪರ್ಯವೇನೆಂದರೆ-ಸಂಕಲ್ಪರೂಪನಾದ ಜೀವನು ಜಾಗ್ರತ್ತಿನಲ್ಲಿಯೂ

ಸ್ವಯಂ ಸಂಕಲ್ಪನಾಮಾತ್ರಂ ಜಾಯತೇ ಬಾಲಯಕ್ಷವತು ।
ಅನಂತಾಯಾತ್ಮದುಃಖಾಯ ನಾನಂದಯ ಕದಾಚನ ॥ ೨೬ ॥

ಸ್ವಪ್ನದಲ್ಲಿಯೂ ನಾನಾ ವ್ಯವಹಾರನಿರತನಾಗಿ ಓಡಾಡುವುದರಿಂದ ಅತ್ಯಂತ ಆಯಾಸ ಗೊಂಡು ವಿಶ್ರಾಂತಿ ಸುಖವನ್ನು ಬಯಸಿ ತನ್ನ ಮನದೊಳಗೆ ಯಾವ ಬಗೆಯ ಸಂಕಲ್ಪವನ್ನೂ ಮಾಡದೆ ಎಲ್ಲವನ್ನೂ ಮರೆತು ಸ್ವಸ್ಥನಾಗಿ ಬಿದ್ದುಕೊಂಡು, ಸುಖ ವಾಗಿ ನಿದ್ರಿಸುವನು. ಹೀಗೆ ಅವನು [ಗಾಢ ನಿದ್ರೆಯಲ್ಲಿ] ಸುಷುಪ್ತನಾಗಿ ಸತ್ಸಂಪ ತ್ತಿಯಿಂದ ಸ್ವಸ್ತನಾಗಿದ್ದುಕೊಂಡಿರುವನು. ಅಥವಾ ಹಿಂದಣ ಕೋಟ್ಯಂತರ ಜನ್ಮಾಂತರಗಳಲ್ಲಿ ಜನನಮರಣಗಳ ಪ್ರವಾಹಕ್ಕೆ ಸಿಕ್ಕಿಬಿದ್ದು ದುಃಖಗಳೆಂಬ ದ್ವಂದ್ವ ಗಳನ್ನು ಹೊಂದಿ ವಿಶೇಷವಾಗಿ ಆಯಾಸಪಟ್ಟು ನೊಂದ ಜೀವನು ಯಾವುದೋ ಸುಕೃತ ವಿಶೇಷದಿಂದ ಅದೃಷ್ಟವಶಾತ್ ನಿರ್ವಿಣ್ಣನಾಗಿ "ಕರ್ಮಾದಿಗಳಿಂದ ಮೋಕ್ಷವು ದೊರಕುವುದಿಲ್ಲವು. ಅದುಕಾರಣ ಅವಿದ್ಯಾನಾಶಕ್ಕಾಗಿ (ಮುಕ್ತಿಗಾಗಿ) ಅಧ್ಯಾತ್ಮ ತತ್ತ್ವವಿದ್ಯೆಯನ್ನು ಪಡೆಯಬೇಕು." ಎಂದು ಶಾಸ್ತ್ರಾಚಾರ್ಯಾದಿಗಳ ಸಹಾಯ ದಿಂದ ವಿಚಾರಮಾಡಿ, ಕೊನೆಗೆ ಅಭ್ಯಾಸಾತಿಶಯ ಬಲದಿಂದ ಆತ್ಮತತ್ವಸಾಕ್ಷಾತ್ಕಾರ ವುಂಟಾಗಲಾಗಿ [ಸರ್ವಸಂಕಲ್ಪಗಳಿಗೂ ಮೂಲಭೂತವಾದ ಅವಿದ್ಯಾಕಾಮ ಕರ್ಮಾದಿಗಳನ್ನು ನಿರ್ಮೂಲವಾಗಿ ನಾಶಮಾಡುವುದರ ಮೂಲಕವೇ ಯಾವು ದೊಂದು ಸಂಕಲ್ಪವೂ ಉದಯಿಸದೆ ಇರುವ ಅಸಂಕಲ್ಪನ ಮಾತ್ರದಿಂದ) ಪರಮ ನಿಶ್ಶ್ರೇಯಸರೂಪ ಮೋಕ್ಷಕ್ಕೆ ಸಿದ್ಧಿಯುಂಟಾಗುವುದು ಎಂದು ತಾತ್ಪರ್ಯವನ್ನು ಗ್ರಹಿಸಬೇಕು. ಈ ಮೇಲಣ ಎರಡು ಅರ್ಥಗಳನ್ನು ಮೂಲದಲ್ಲಿ (ಪರಂ-ಆಯಸ್ಯ) ಪರಮಾಯಸ್ಯ ಎಂಬ ಪಾಠವನ್ನು ಇಟ್ಟುಕೊಂಡು ಹೇಳಿದೆ. ಅದರೆ ಪರಮಾಯಾಸ್ಯ (ಪರಮಾಯ-ಅಸ್ಯ) ಎಂಬ ಪಾಠಾಂತರವನ್ನು ಇಟ್ಟುಕೊಂಡಾಗ ಅಸ್ಯ-ಈ ಸಂಕ ಲ್ಪದ, ನಾಶತ್ಶೀನ-ನಾಶಭಾವದಿಂದ ಅಂದರೆ ವಾಸನಾಕ್ಷಯ ಪ್ರಯುಕ್ತವಾದ ಸಕಲ ಸಂಕಲ್ಪ ಶೂನ್ಯಭಾವದಿಂದ ಸಂಭವಃ-ಸಂಭವವು [ನಿಷ್ಪತ್ತಿಯು] ಪರಮಾಯ ಶ್ರೇಯಸೇ-ಪರಮಶ್ರೇಯಸ್ಸಿಗೆ [ಮೋಕ್ಷಕ್ಕೆ] [ಭವತಿ-ಕಾರಣವಾಗುವುದು. ಇದು ಅಧ್ಯಾಹಾರ] ಎಂದು ಅರ್ಥಮಾಡಿ ಸರ್ವತ್ರ ಸಮನ್ವಯ ಮಾಡಬೇಕು.

೨೬. ಬಾಲಕನಿಗೆ ಅಸತ್ಯವಾದ ಬೇತಾಳ ಭ್ರಾಂತಿಯಿಂದ ಅಪರಿಮಿತವಾದ ದುಃಖವುಂಟಾಗುವಂತೆ ಈ ಸಕಲ್ಪ ಮಾತ್ರವು ಅನಂತಾಪರಿಮಿತವಾದ ತನ್ನ ದುಃಖ ಸಂಪಾದನೆಗಾಗಿಯೇ ಸ್ವತಃ ಉದಯಿಸುವುದೇ ಹೊರತು ಎಂದಿಗೂ ಆತ್ಮ ಸಂತೋ ಷಕ್ಕಾಗಿ ಹುಟ್ಟುವುದಿಲ್ಲ. ೨೩ (ಇದು ೨೬ನೇ ಶ್ಲೋಕ ವಿವರಣೆ.]

ಇದಂ ಸ್ಫಾರಂ ಜಗದ್ದುಃಖಂ ಪ್ರತನೋತ್ಯಾತ್ಮಸತ್ತಯಾ ।
ಅಸತ್ತಯಾ ನಾಶಯತಿ ಘನಸಾಂಧ್ಯಂ ಯಥಾ ತಮಃ ॥ ೨೮ ॥

ಸ್ವಯೈವ ದುಃಖದಾಯಿನ್ಯಾ ಚೇಷ್ಟಯಾ ಪರಿರೋದಿತಿ ।
ಕಾಷ್ಠಾವಷ್ಟಬ್ಧವೃಷಣಃ ಕೀಲೋತ್ಪಾಟೀ ಕಪಿರ್ಯಥಾ ॥ ೨೯ ॥

ಸಂಕಲ್ಪಿತಾನಂದಲವಸ್ತಿಷ್ಠತ್ಯುದ್ಧರಕಂಧರಂ ।
ಅಕಸ್ಮಾತ್ಪ್ರಚ್ಯುತಮಧುಬಿಂದುಭುಕ್ಷರಭೋ ಯಥಾ ॥ ೩೦ ॥

---

೨೮. ಗಾಢವಾದ ಅಂಧಕಾರವು ತಾನಿರುವಾಗ ಜನಗಳಿಗೆ ಅಂಧತ್ವ (ಕುರುಡು ತನ-ಕಣ್ಣು ಕಾಣದಿರುವಿಕೆ)ವನ್ನೂ ಉಂಟುಮಾಡುತ್ತಲೂ ತಾನಿಲ್ಲದಿರುವಾಗ ಜನರ ಅಂಧತ್ವವನ್ನೂ ನಿವಾರಣೆ ಮಾಡುತ್ತಲೂ ಇರುವಂತೆ ಈ ಸಂಕಲ್ಪ ಮಾತ್ರವು ತನ್ನ ಸದ್ಭಾವ (ಸತ್ತೆ-ಸ್ಥಿತಿ ಇರುವಿಕೆ) ದಿಂದ ಅತ್ಯಪಾರವಾದ ಜಗದ್ದುಃಖವನ್ನೂ (ಪ್ರಾಪಂಚಿಕ ದುಃಖವನ್ನೂ) ಹೆಚ್ಚು ಹೆಚ್ಚಾಗಿ ತಂದೊಡ್ಡುತ್ತಲೂ ತಾನು ಇಲ್ಲದಿರುವಿಕೆಯಿಂದ (ಅಸದ್ಭಾವದಿಂದ) ಆ ದುಃಖವನ್ನೂ ನಾಶಪಡಿಸುತ್ತಲೂ ಇರುವುದು.

೨೯. ಅರ್ಧ ಕೊಯ್ದುಬಿಟ್ಟಿರುವ ಒಂದು ಮರದ ತೊಲೆಯ ಮೇಲೆ ಕುಳಿತುಕೊಂಡಿದ್ದ ಕಪಿಯು ತೊಲೆಯ ಬಿರುಕಿನಲ್ಲಿ ಸಿಕ್ಕಿಸಿರುವ ಬೆಣೆಯನ್ನೂ ಅವಿವೇಕದಿಂದ ಕಿತ್ತೆಸೆಯಲಾಗಿ ಆ ತೊಲೆಯ ಬಿರುಕುಗಳಲ್ಲಿ ಸರಿಯಾಗಿ ಅದರ ವೃಷಣಗಳು ಸಿಕ್ಕಿಕೊಂಡು ಬಿಡಿಸಿಕೊಳ್ಳಲಾರದೆ, ತನ್ನ ದುಶ್ಚೇಷ್ಟೆಯಿಂದಲೇ ಅಪಾರವಾದ ದುಃಖಕ್ಕೆ ಸಿಕ್ಕಿ ಕೊನೆಗೆ ಅಲ್ಲಿಯೇ ಹೇಗೆ ನಾಶಹೊಂದುವುದೋ ಅದರಂತೆಯೇ ಆ ಸಂಕಲ್ಪಾತ್ಮ ಜೀವನೆಂಬ ರಾಜನು ದುಃಖಪ್ರದವಾದ ತನ್ನದೇ ಆದ ವ್ಯವಹಾರದಿಂದಲೇ ತನ್ನ ಅಜ್ಞಾನವಶದಿಂದಲೇ ದುಃಖವನ್ನೂ ಸಹಿಸಲಾರದೆ ಅತಿಯಾಗಿ ರೋದಿಸುವನು. (ವಿವಿಧವಾಗಿ ಅಳುವನು.) ೨೪

[೨೪] ೨೭ನೇ ಶ್ಲೋಕದ ವಿವರಣೆ. ಕೀಲೋತ್ಪಾಟೀವವಾನರಃ ಎಂಬ ನ್ಯಾಯವು ಪ್ರಸಿದ್ಧವಾದುದು.

೩೦. ಈ ಸಂಕಲ್ಪ ರಾಜನು, ಅತಿ ತುಚ್ಛವಾದ ಮತ್ತು ಅತ್ಯಲ್ಪವಾದ ಒಂದಾನೊಂದು ವೈಷಯಿಕಾನಂದದ ಲೇಶವನ್ನು ತಾನಾಗಿಯೇ ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡು ಅದರ ಲಾಭಕ್ಕಾಗಿ ಅತ್ಯಂತವಾಗಿ ದುಡಿದು, ಬಳಲಿ-ಬೆಂದು ಮೇಳೆ ಅದು ದೊರಕಿಬಿಟ್ಟರೆ ಅಷ್ಟು ಮಾತ್ರದಿಂದಲೇ ಹಿಗ್ಗಿ, ತನ್ನ ಕತ್ತನ್ನು ಎತ್ತಿಕೊಂಡು, ಬಹು

ಕ್ಷಣಂ ವಿರತಿಮಾಯಾತಿ ರತಿಮೇತಿ ಕ್ಷಣಂ ಸ್ವಯಂ ।
ಕ್ಷಣಂ ವಿಕಾರಮಾಯಾತಿ ಸಂಕಲ್ಪೇಶೋ ನೃಪ ಬಾಲವತ್ ॥ ೩೧ ॥

ಏನಂ ಸಕಲಭಾವೇಭ್ಯಃ ಕೃತ್ವಾ ನಿರ್ಮೂಲಮಾದರಾತ್ ।
ಮತಿರಂತಃಪದಂ ಯಾತಿ ಯಥಾ ಪುತ್ರ ತಥಾ ಕುರು ॥ ೩೨ ॥

ತ್ರಯಸ್ತಸ್ಯಾ ಮತೇರ್ದೇಹಾ ಅಧಮೋತ್ತಮಮಧ್ಯಮಾಃ।
ತಮಃಸತ್ವರಜಃಸಂಜ್ಞಾಃ ಕಾರಣಂ ಜಗತಃ ಸ್ಥಿತೇಃ ॥ ೩೩ ॥

ಹೆಮ್ಮೆಯಿಂದ, ದೇವಲೋಕದ ರಾಜ್ಯಾಧಿಕಾರವು ದೊರೆತದ್ದಕ್ಕಿಂತಲೂ ಹೆಚ್ಚಾಗಿ ನಲಿಯುತ್ತಾ, ತನಗೆ ಸಮಾನರಾರೂ ಇಲ್ಲವೆಂದು ಭಾವಿಸಿಕೊಂಡು, ಯಾರನ್ನೂ ಲಕ್ಷಿಸದೆ, ಅಕಸ್ಮಾತ್ತಾಗಿ ಮೇಲಿರುವ ಜೇನು ಗೂಡಿನಿಂದ ಕೆಳಕ್ಕೆ ಬಿದ್ದ ಒಂದು ತೊಟ್ಟು ಜೇನುತುಪ್ಪವನ್ನು ನೆಕ್ಕಿ ನಲಿಯುವ ಒಂದು ಕತ್ತೆಯಂತೆ, ತಾನೇ ತಾನಾಗಿ ಮೆರೆಯುವನು.

[ಹೀಗೆ ಸಂಸಾರದಲ್ಲಿ ವಿಷಯ ಸುಖವೇ ದುರ್ಲಭವಾಗಿರಲಿಕ್ಕಾಗಿ ಮೋಕ್ಷ ಸುಖದ ಪ್ರತ್ಯಾಶೆಯೇ ಇಲ್ಲವೆಂದು ಅಭಿಪ್ರಾಯ.

೩೧. ಈ ಸಂಕಲ್ಪರಾಜನು ಒಬ್ಬ ಮೂಢ ಬಾಲಕನಂತೆ, ಸ್ವಸಂಕಲ್ಪದಿಂದಲೇ ಒಂದು ಕ್ಷಣದಲ್ಲಿ ಪ್ರಪಂಚದ ಎಲ್ಲ ವಿಷಯಗಳಲ್ಲಿಯೂ ಪರಮ ವೈರಾಗ್ಯವನ್ನು ತೋರಿಬಿಡುವನು. ಇನ್ನೊಂದು ಕ್ಷಣದೊಳಗಾಗಿ ಸರ್ವತ್ರ ತಾನೇ ಅನುರಾಗವನ್ನು ಬೀರುವನು. ಮತ್ತೊಂದು ಕ್ಷಣದೊಳಗಾಗಿ ನಾನಾ ವಿಕಾರಗಳಿಗೆ ಒಳಗಾಗುವನು.

೩೨. ವತ್ಸ, ನಿನ್ನ ಸುಸಂಸ್ಕೃತವಾದ ಬುದ್ಧಿಯು, ಈ ಸಂಕಲ್ಪಾತ್ಮರಾಜನನ್ನು ಸಕಲ ಬಾಹ್ಯವಸ್ತುಗಳ ದೆಸೆಯಿಂದ ಹಿಂದಿರುಗಿಸಿ ಸಮಾಧ್ಯಭ್ಯಾಸದಿಂದಲೂ, ಸಂತತವಾದ ಶಾಸ್ತ್ರವಿಚಾರಭ್ಯಾಸದಿಂದಲೂ, ಸಕಲಾನರ್ಥಮೂಲವಾದ ಅವಿದ್ಯಾ ಕಾಮ ಕರ್ಮಾದಿ ವಾಸನಾಶೂನ್ಯನನ್ನಾಗಿ ಮಾಡಿ, ತತ್ತ್ವಜ್ಞಾನವನ್ನು ಪಡೆದು, ಪ್ರತ್ಯಗಾತ್ಮಭೂತ ಪರಬ್ರಹ್ಮಪದವನ್ನು ಅವಲಂಬಿಸಿ ಹೇಗೆ ವಿಶ್ರಮಿಸಿಕೊಳ್ಳಲು ಯೋಗ್ಯವಾಗುವುದೋ ಹಾಗೆ ಪ್ರಯತ್ನ ಪಡುವವನಾಗು.

೩೩. ಆ ಸಂಕಲ್ಪಾತ್ಮಕವಾದ ಮನಸ್ಸಿಗೆ ತಾಮಸ, ಸಾತ್ವಿಕ, ರಾಜಸಗಳೆಂಬ

ತಮೋ ರೂಪ್ತೋ ಹಿ ಸಂಕಲ್ಪೋ ನಿತ್ಯಂ ಪ್ರಾಕೃತಚೇಷ್ಟಯಾ ।
ಪರಾಂ ಕೃಪಣತಾಮೇತ್ಯ ಪ್ರಯಾತಿ ಕೃಮಿಕೀಟನಾಂ ॥ ೩೪ ॥

ಸತ್ವರೂಪ್ತೋ ಹಿ ಸಂಕಲ್ಪೋ ಧರ್ಮಜ್ಞಾನಪರಾಯಣಃ ।
ಅದೂರಕೇವಲೀಭಾವಂ ಸ್ವಾರಾಜ್ಯಮಧಿತಿಷ್ಠತಿ ॥ ೩೫ ॥

ಸಂಜ್ಞೆಗಳುಳ್ಳ ಮೂರು ದೇಹಗಳಿರುವುವು. ಇವು ಅನುಕ್ರಮವಾಗಿ ಅಧಮ, ಉತ್ತಮ, ಮಧ್ಯಮಗಳಾಗಿವೆ. ಇವುಗಳೇ ಈ ಜಗತ್ತಿನ ಸ್ಥಿತಿಗೆ ಕಾರಣವು.

(೨೫) ೧೧ನೆ ಶ್ಲೋಕದ ವಿವರಣೆ.

[ತಸ್ಯಾಃ ಮತೇಃ= ಎಂದು ಪದಚ್ಛೇದ. ಮತೇಃ= ಸಂಕಲ್ಪಾತ್ಮಕ ಮನಸ್ಸಿಗೆ ಎಂದರ್ಥ. ಮತ್ತು ತಮಸ್ಸತ್ವ ರಜಸ್ಸಂಜ್ಞಾಃ ಎಂಬ ಮೂಲದ ಪಾಠಕ್ರಮವನ್ನೇ ಇಟ್ಟುಕೊಂಡು ಟೀಕಿಸಿದೆ.]

೩೪. ಈ ಮೂರರೊಳಗೆ ತಮೋರೂಪ (ತಾಮಸ)ವಾದ ಸಂಕಲ್ಪವು, ಸಂತತವೂ ತನ್ನ ಸ್ವಾಭಾವಿಕವಾದ ಪ್ರವೃತ್ತಿಯಿಂದ ಬಹು ಹೆಚ್ಚಾದ ದೈನ್ಯವನ್ನು(ಕಾರ್ಪಣ್ಯವನ್ನು) ಹೊಂದಿ ನರಕಾದಿ ಲೋಕಗಳಲ್ಲಿ ಅತಿಯಾದ ದುಃಖವನ್ನು ಅನುಭವಿಸಿ, ಕೊನೆಗೆ ಕ್ರಿಮಿಕೀಟಾದಿ ಅತಿ ಜಘನ್ಯವಾದ ತಿರ್ಯಗ್ಜಂತುಗಳ ಯೋನಿಯಲ್ಲಿಯೋ, ಅಥವಾ ತರು ಪಾಷಾಣಾದಿ ಸ್ಥಾವರ ಯೋನಿಯಲ್ಲಿಯೋ ಜನ್ಮಾಂತರವನ್ನು ಹೊಂದುವುದು.

೩೫. ಸತ್ತ್ವರೂಪವಾದ (ಸಾತ್ವಿಕ) ಸಂಕಲ್ಪವಾದರೋ, ಧರ್ಮ [ವೇದವಿಹಿತಕರ್ಮಾನುಷ್ಠಾನ] ಮತ್ತು ಜ್ಞಾನ [ದೇವತೋಪಾಸನ]ಗಳೆಂಬ ಶಾಸ್ತ್ರೀಯ ಪ್ರವೃತ್ತಿ ನಿಯಮಗಳಲ್ಲಿ ನಿರತವಾಗಿದ್ದುಕೊಂಡು, ಮೋಕ್ಷಕ್ಕೆ ಅತ್ಯಂತ ಸನ್ನಿಹಿತವಾದ ಸ್ವರಾಜ್ಯವನ್ನು ಪಡೆದು ಸುಖಿಸುವುದು.

[ಸ್ವಾರಾಜ್ಯಂ= ಸ್ವರ್ಗಲೋಕಾಧಿಪತ್ಯವನ್ನು ನಡೆಯಿಸುವ. ಹಿರಣ್ಯಗರ್ಭ [ಚತುರ್ಮುಖಬ್ರಹ್ಮ]ನ ಪದದವರೆವಿಗೆ ಇರುವ ಸರ್ವ ದೇವತೆಗಳ ಪದ. ಸತ್ತ್ವೋ

ರಜೋರೂಪೋ ಹಿ ಸಂಕಲ್ಪೋ ಲೋಕಸಂವ್ಯವಹಾರವಾನ್ ।
ಪರಿತಿಷ್ಠತಿ ಸಂಸಾರೇ ಪುತ್ರದಾರಾನುರಂಜಿತಃ ॥ ೩೬ ॥

ತ್ರಿವಿಧಂ ತು ಪರಿತ್ಯಜ್ಯ ರೂಪಮೇತನ್ಮಹಾಮತೇ ।
ಸಂಕಲ್ಪಃ ಪರಮಾಯಾತಿ ಪದಮಾತ್ಮಪರಿಕ್ಷಯೇ ॥ ೩೭ ॥

ಸರ್ವಾ ದೃಷ್ಟೀಃ ಪರಿತ್ಯಜ್ಯ ನಿಯಮ್ಯ ಮನಸಾ ಮನಃ ।
ಸಬಾಹ್ಯಾಭ್ಯಂತರಾರ್ಥಸ್ಯ ಸಂಕಲ್ಪಸ್ಯ ಕ್ಷಯಂ ಕುರು ॥ ೩೮ ॥

ತ್ಕರ್ಷವಾದಹಾಗೆಲ್ಲ ಇದರಲ್ಲಿಯೂ ಮೇಲೆ ಮೇಲೆ ಇರುವ ಪದವು (ಸ್ಥಾನವು) ಲಭಿಸುವುದು.] ಅಂದರೆ ದೇವತ್ವ ಪ್ರಾಪ್ತಿಯಾಗುವುದು.

೩೬. ರಜೋರೂಪವಾದ ಸಂಕಲ್ಪವೂ ಕೂಡ ಲೌಕಿಕ ವ್ಯವಹಾರಗಳಲ್ಲಿ ಹೆಚ್ಚಾದ ಆಸಕ್ತಿಯುಳ್ಳದ್ದಾಗಿ [ಮನುಷ್ಯ ಜನ್ಮದಲ್ಲಿದ್ದುಕೊಂಡು] ಪತ್ನೀ ಪುತ್ರಾದಿ ಆತ್ಮೀಯರುಗಳಲ್ಲಿ ವಿಶೇಷವಾದ ಅನುರಾಗವನ್ನಿಟ್ಟುಕೊಂಡು, ಕೇವಲ ಸಂಸಾರದಲ್ಲಿ ಅಭಿನಿವೇಶದಿಂದ ಸುತ್ತುತ್ತಿರುವುದು.

೩೭. ಅಯ್ಯ ಮಹಾ ಬುದ್ಧಿಶಾಲಿಯೇ, ಸಂಕಲ್ಪವು ಈ ಮೂರು ವಿಧವಾದ ರೂಪವನ್ನು ಪರಿತ್ಯಾಗಮಾಡಿದಬಳಿಕ,-ಸಂಕಲ್ಪವು ಆತ್ಯಂತಿಕವಾಗಿ ಉಚ್ಛೇದವಾಗ ಲಾಗಿ (ತನಗೆ ಸುತರಾಂ ಉಳಿವೇ ಇಲ್ಲವಾಗಲು) ಪರಮ ಪದವನ್ನೂ ಅಂದರೆ ಮೋಕ್ಷವನ್ನೂ ಹೊಂದುವುದು.

೩೮. ಅದು ಕಾರಣ, ಈಗ ನೀನು ಸಕಲ ವಿಧಗಳಾದ ಬಾಹ್ಯ (ಪ್ರಾಪಂಚಿಕ) ವ್ಯವಹಾರ ದೃಷ್ಟಿಗಳನ್ನೂ ಸಂಪೂರ್ಣವಾಗಿ ಪರಿತ್ಯಜಿಸಿ ಮನಸ್ಸಿನಿಂದಲೇ ಮನ ಸ್ಸನ್ನು ನಿಗ್ರಹಿಸಿ ಬಾಹ್ಯಾದಿಗಳಿಂದಲೂ ಆಭ್ಯಂತರಾರ್ಥಗಳಿಂದಲೂ ಸಹಿತವಾದ ಸಂಕಲ್ಪವು ಅತ್ಯಂತಿಕವಾದ ಉಚ್ಛೇದವನ್ನೂ (ಸಂಪೂರ್ಣ ನಾಶವನ್ನೂ) ಹೊಂದುವ ಹಾಗೆ ತಕ್ಕ ಪ್ರಯತ್ನ ಮಾಡು.

ಯದಿ ವರ್ಷಸಹಸ್ರಾಣಿ ತಪಶ್ಚರಸಿ ದಾರುಣಂ ।
ಯದಿ ವಾ ವಿಲಯಾತ್ಮಾನಂ ಶಿಲಾಯಾಂ ಚೂರ್ಣಯಸ್ಯಲಂ ॥ ೩೯ ॥

ಯದಿ ವಾಗ್ನಿಂ ಪ್ರವಶಸಿ ವಡವಾಗ್ನಿಮಥಾಪಿ ವಾ ।
ಯದಿ ವಾ ಪತಸಿ ಶ್ವಭ್ರೇ ಖಡ್ಗಧಾರಾಜವೇ ತಥಾ ॥ ೪೦ ॥

ಹರೋ ಯದ್ಯುಪದೇಷ್ಟಾ ತೇ ಹರಿಃ ಕಮಲಜೋಽಪಿ ವಾ ।
ಅತ್ಯಂತಕರುಣಾಕ್ರಾಂತೋ ಲೋಕನಾಥೋಽಥವಾ ಯತಿ ॥ ೪೧ ॥

ಪಾತಾಲಸ್ಥಸ್ಯ ಭೂಸ್ಥಸ್ಯ ಸ್ವರ್ಗಸ್ಥಸ್ಯಾಪಿ ತತ್ತ್ವವ ।
ನಾನ್ಯಃ ಕಶ್ಚಿದುಪಾಯೋಽಸ್ತಿ ಸಂಕಲ್ಪೋಪಶಮಾದೃತೇ ॥ ೪೨ ॥

೩೯–೪೨. ನೀನು ಅನೇಕ ಸಾವಿರ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಅತ್ಯುಗ್ರವಾದ ತಪಸ್ಸನ್ನು ಬಹು ನಿಯತನಾಗಿ ಆಚರಿಸಿದರೂ ಅಥವಾ ಅತ್ಯಲ್ಪ ಕಾಲದೊಳಗಾಗಿಯೇ ನಾಶವಾಗತಕ್ಕ ಸ್ವಭಾವವುಳ್ಳ ಈ ನಿನ್ನ ದೇಹವನ್ನು ಕಲ್ಲು ಬಂಡೆಯ ಮೇಲೆ ಬಡಿಡು ಚೆನ್ನಾಗಿ ಪುಡಿ ಪುಡಿ ಮಾಡಿದರೂ ಅಥವಾ ಅಗ್ನಿಯನ್ನಾಗಲೀ ಬಡಬಾಗ್ನಿಯನ್ನಾಗಲೀ ಪ್ರವೇಶ ಮಾಡಿದರೂ, ಅಥವಾ ಒಂದು ವೇಳೆ ನೀನು ದೊಡ್ಡ ಅಗಾಧವಾದ ಹಳ್ಳದಲ್ಲಿ ಬಿದ್ದರೂ ಅಥವಾ ಕತ್ತಿಗಳ ಅಲಗುಗಳ (ಖಡ್ಗಧಾರೆಗಳ) ರಭಸವಾದ ಹೊಡೆತಗಳಿಗೆ ಸಿಕ್ಕಿಬಿದ್ದರೂ ಅಥವಾ ಶಿವ, ವಿಷ್ಣು, ಬ್ರಹ್ಮರೆಂಬ ತ್ರಿಮೂರ್ತಿಗಳೇ ನಿನಗೆ ಉಪದೇಶಕರಾಗಿ ಏರ್ಪಟ್ಟರೂ, ಅಥವಾ ಅಪಾರ ಕರುಣಾದ್ರ್ರಚಿತ್ತನಾದ ಜಗನ್ನಾಥನಾದ ಯತಿಯು (ಶ್ರೀ ದತ್ತಾತ್ರೇಯ ದೂರ್ವಾಸಾದಿಗಳು) ಯಾರಾದರೂ ಒಬ್ಬರು ನಿನಗೆ ಉಪದೇಶಕರಾಗಿ ಬಂದರೂ ನೀನು ಸ್ವರ್ಗ ಮರ್ತ್ಯ ಪಾತಾಳಾದಿ ಲೋಕದಲ್ಲಿ ಎಲ್ಲಿ ವಾಸ ಮಾಡಿಕೊಂಡಿದ್ದರೂ ನೀನು ಹೇಗೆ ಎಲ್ಲಿ ಇದ್ದರೂ ಏನೇನೇ ಉಪಾಯಗಳನ್ನೂ ಮಾಡಿದರೂ ನಿನ್ನ ಸಂಕಲ್ಪವು ಸಂಪೂರ್ಣವಾಗಿ ಪ್ರಶಾಂತವಾದ ಹೊರತು ಮೋಕ್ಷಕ್ಕೆ ಬೇರೆ ಇನ್ಯಾವುದೊಂದು ಉಪಾಯವೂ ಇಲ್ಲವೇ ಇಲ್ಲ.

[ತನ್ನ ಸಕಲ ಸಂಕಲ್ಪಗಳ ಆತ್ಯಂತಿಕೋಚ್ಛೇದವೇ ಮೋಕ್ಷಕ್ಕೆ ಉಪಾಯವು. ಬೇರೆ ಉಪಾಯವಿಲ್ಲ.]

ಅನಾಬಾಧೇಽವಿಕಾರೇ ಚ ಸುಖೇ ಪರಮಪಾವನೇ ।
ಸಂಕಲ್ಪೋಪಶಮೇ ಯತ್ನಂ ಪೌರುಷೇಣ ಪರಂ ಕುರು ॥ ೪೩ ॥

ಸಂಕಲ್ಪತಂತಾವಖಿಲಾ ಭಾವಾಃ ಪ್ರೋತಾಃ ಕಿಲಾನಘ ।
ಛಿನ್ನೇ ತಂತೌ ನ ಜಾನೇ ತೇಕ್ವ ಯಾಂತಿ ವಿಶರಾರವಃ ॥ ೪೪ ॥

ಅಸತ್ಸತ್ಸದತ್ಸರ್ವಂ ಸಂಕಲ್ಪಾದೇವ ನಾನ್ಯತಃ ।
ಸಂಕಲ್ಪಂ ಸದಸಚ್ಚೈವಮಿಹ ಸತ್ಯಂ ಕಿಮುಚ್ಯತಾಂ ॥ ೪೫ ॥

---

೪೩. ಅಂತಹ ಸಂಕಲ್ಪೋಪ ಶಮವೂ ಆದರೋ ನಿರಾಬಾಧವೂ ಸರ್ವ ವಿಕಾರ ಶೂನ್ಯವೂ ಸುಖ ಸ್ವರೂಪವೂ (ಆನಂದೈಕರಸ) ಅವಿದ್ಯಾದಿ ಸಕಲ ದೋಷ ವಿನಿರ್ಮುಕ್ತವಾಗಿ ಪರಮ ಪವಿತ್ರವೂ ಆದ ಬ್ರಹ್ಮ ಸ್ವರೂಪವೇ ಬೇರೆ ಯಾವುದೂ ಅಲ್ಲ. ಅದು ಕಾರಣ ಆ ಸಂಕಲ್ಪೋಪ ಶಮದಲ್ಲಿ ನಿನ್ನ ಪುರುಷಕಾರದಿಂದ ಸಾಧನ ಚತುಷ್ಟಯ ಸಂಪತ್ತಿ, ಶ್ರವಣ ಮನನ ನಿದಿಧ್ಯಾಸನ ಮುಂತಾದ ವಿಶೇಷ ಪ್ರಯತ್ನ ವನ್ನೂ ಮಾಡುವವನಾಗು.

೪೪. ಎಲೈ ಅನಘ, ವತ್ಸ, ಸಂಕಲ್ಪವೆಂಬ ಒಂದು ತಂತುವಿನಲ್ಲಿ ಸಕಲ ಪದಾರ್ಥಗಳೂ ಪವಣಿಸಲ್ಪಟ್ಟಿರುವವಷ್ಟೇ (ಪ್ರೋತಗಳಾಗಿವೆಯಷ್ಟೆ !) ಆರೋಪಿತಗಳಾದ ಭಾವಗಳಿಗೆ ಆಧಾರವಾದ ಈ ತಂತುವು ಕಿತ್ತು ಹರಿದುಹೋಗಿ ಬಿಡಲಾಗಿ ಆರೋಪಿತ ಗಳಾದ ಆ ಸಕಲ ಭಾವಗಳೂ ವಿಶೇಷ ಬಾಧಿತಗಳಾಗಿ ಚದುರಿ ಚಲ್ಲಾಪಿಲ್ಲಿಯಾಗಿ ಎಲ್ಲಿ ಹೋಗಿ ಬಿಡುವುವೋ ನನಗೆ ತಿಳಿಯದು.

[ಅವು ಬೇರೆ ಮತ್ತಾವ ಸ್ಥಳಕ್ಕೆ ಹೋಗುವುವೋ ಲೋಕದಲ್ಲಿ ಒಬ್ಬರಿಗೂ ಗೊತ್ತಿಲ್ಲ.

೪೫. ಅಸತ್-ಸತ್ ಆಗಿ ತೋರುವುದೂ, ಅಂತೆಯೇ ಸತ್ ಆದುದೆಲ್ಲ— ಅಸತ್ ಆಗಿ ತೋರುವುದೂ ಇದೆಲ್ಲವೂ ಸಂಕಲ್ಪದ ದೆಸೆಯಿಂದಲೇ ಜೊತೆಯಲ್ಲಿಯೇ ಉತ್ಪನ್ನವಾಗಿವೆ. ಮತ್ತೆ ಯಾವುದರಿಂದಲೂ ಅಲ್ಲವು. ಹೀಗೆ ಸಂಕಲ್ಪದಿಂದಲೇ ಉತ್ಪನ್ನವಾಗಿ, ಕಾರ್ಯಗಳಾದ ಸತ್ ಅಸತ್ ಮುಂತಾದ ಸಕಲ ವಿಕಲ್ಪಗಳೂ ತನಗೆ ಕಾರಣವಾಗಿರುವ ಸಂಕಲ್ಪವನ್ನೇ--ಸತ್ ಎಂದೂ ಮತ್ತು ಅಸತ್ ಎಂದೂ ವಿಕಲ್ಪಿಸುವುದಕ್ಕೆ ಅಸಮರ್ಥವಾಗಿರುವಾಗ ಅವು (ತಮಗೆ ಸ್ವಲ್ಪವೂ

ಸಂಕಲ್ಪ್ಯತೇ ಯಥಾ ಯದ್ಯತ್ತತ್ತಥಾ ಭವತಿ ಕ್ಷಣಾತ್ ।
ಮಾ ಕಿಂಚಿದಪಿ ತತ್ತ್ವಜ್ಞ ಸಂಕಲ್ಪಯ ಕದಾಚನ　　　॥ ೪೬ ॥

ನಿಃಸಂಕಲ್ಪೋ ಯಥಾಪ್ರಾಪ್ತವ್ಯವಹಾರಪರೋ ಭವ ।
ಚಿದಚೇತ್ಯೋನ್ಮುಖತ್ವಂ ಹಿ ಯಾತಿ ಸಂಕಲ್ಪಸಂಕ್ಷಯೇ　　　॥ ೪೭ ॥

ಉತ್ಥಾಯ ಸತ್ಸ್ವರೂಪೇಣ ಯೋಽನ್ಯಾಸತ್ಯಮಯಾತ್ಮಕಂ ।
ನ ತಜ್ಜಗದುಃಖಮಿದಂ ವ್ಯರ್ಥಂ ಸದೃಶಮಾತ್ಮನಃ　　　॥ ೪೮ ॥

ತೇನ ದುಃಖಾಯ ಮಹತೇ ಕಿಂ ಮೃತೇನ ತವಾನಘ ।
ಯದದುಃಖಾಯ ತತ್ಪ್ರಾಜ್ಞಾಃ ಸಂಶ್ರಯಂತೀಹ ನೇತರತ್　　　॥ ೪೯ ॥

ಸಂಬಂಧವೇ ಇಲ್ಲದಿರುವ) ಅಸಂಗನಾದ ಪರಮಾರ್ಥ ಸತ್ಯನಾದ ಪರಬ್ರಹ್ಮವನ್ನೂ ವಿಕಲ್ಪಿಸುವುವೆಂದು ಹೇಗೆ ತಾನೇ ಹೇಳಲು ಸಾಧ್ಯವಾದೀತು ?

೪೬. ಯಾವ ಯಾವುದು ಹೇಗೆ ಹೇಗೆ ಸಂಕಲ್ಪಿಸಲ್ಪಡುವುದೋ ಅವದೆಲ್ಲವೂ ಹಾಗೆ ಹಾಗೆಯೇ ತತ್ಕ್ಷಣದಲ್ಲಿಯೇ ಉತ್ಪನ್ನವಾಗಿ ಗೋಚರಿಸುವುದು. ಅದು ಕಾರಣ, ಅಯ್ಯ ತತ್ತ್ವಜ್ಞನೇ, ನೀನು ಯಾವುದೊಂದನ್ನೂ ಎಂದೆಂದಿಗೂ ಸಂಕಲ್ಪಿಸಲೇಬೇಡ.

೪೭. ನೀನು ಸರ್ವದಾ ಸಕಲ ಸಂಕಲ್ಪಶೂನ್ಯನಾಗಿ ಆಯಾ ಕಾಲಗಳಲ್ಲಿ ಯಾದೃಚ್ಛಿತವಾಗಿ ಪ್ರಾಪ್ತವಾದ ವ್ಯವಹಾರಗಳನ್ನೂ ಮಾತ್ರ ನಿರಭಿಮಾನದಿಂದ ಆಚರಿಸುವುದರಲ್ಲಿ ನಿರತನಾಗಿರು. ಸಂಕಲ್ಪವು ಉಚ್ಛೇದವನ್ನೂ ಹೊಂದಿ ಕ್ಷೀಣವಾಗಿ ಹೋಗಲಾಗಿ ಚಿತ್ತು ಚೇತ್ಯಾಮುಖವಾಗಿ ಪ್ರವರ್ತಿಸುವುದಿಲ್ಲ. (ಅನಭಿಮುಖವಾಗುವುದು.)

೪೮. ಕೇವಲ ಸತ್ಯೈಕ ಸ್ವಭಾವವಾದ ಪರಬ್ರಹ್ಮವು ಅಸತ್ಯಮಾಯಾವಶದ ದೆಸೆಯಿಂದ ದೇವ ಮನುಷ್ಯ, ತಿರ್ಯಕ್, ಸ್ಥಾವರ ಮುಂತಾದ ಎಂಭತ್ತು ನಾಲ್ಕು ವಿಧ ಯೋನಿಗಳ ಮೂಲಕ, ಆಯಾ ಪ್ರಾಣಿ ಭೇದರೂಪದಿಂದ ಉದ್ಭವಿಸಿ ವ್ಯರ್ಥವಾಗಿಯೇ ಪ್ರಾಪಂಚಿಕ ದುಃಖವನ್ನೂ ಅನುಭವಿಸುವುದು. ಹೀಗೆ ದುಃಖಾನುಭವ ಮಾಡುವುದು ಆತ್ಮನಿಗೆ ಎಂದಿಗೂ ಉಚಿತವಲ್ಲವು.

೪೯. ಅದು ಕಾರಣ, ಹೀಗೆ ನಾನಾ ಯೋನಿಗಳಲ್ಲಿ ಜನ್ಮವನ್ನೂ ಪಡೆಯುವ

ಅಧಿಗತಪರಮಾರ್ಥತಾಮುಪೇತ್ಯ
ಪ್ರಸಭಮುಪಾಸ್ಯ ವಿಕಲ್ಪಜಾಲಮುಚ್ಚೈಃ ।
ಅಧಿಗಮಯ ಪದಂ ತದದ್ವಿತೀಯಂ
ವಿತತಸುಖಾಯ ಸುಷುಪ್ತಚಿತ್ತವೃತ್ತಿಃ ॥ ೫೦ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ ಸ್ಥಿತಿ ಪ್ರಕರಣೇ ದಾಶೂರೋಪಾಖ್ಯಾನೇ "ಸಂಸಾರನಗರವಿಕಲ್ಪಯೋಗವಿಚಾರೋ" ನಾಮ ಪಂಚಾಶಃ ಸರ್ಗಃ

ನಿಮಿತ್ತದಿಂದಲೂ ಪುನಃ ಪುನಃ ಸಾಯುವುದರಿಂದಲೂ ಕೂಡ, ಕೇವಲ ಅನರ್ಥಮಯವಾದ ಮಹಾ ದುಃಖ ಪರಂಪರೆಯು ಪ್ರಾಪ್ತವಾಗುವುದೇ ಹೊರತು ಮತ್ತೆ ಯಾವ ವಿಧವಾದ ಫಲವೂ ಲಭಿಸುವುದಿಲ್ಲ. ಅನಘನಾದ ವತ್ಸನೇ, ಪ್ರಪಂಚದಲ್ಲಿ ಪ್ರಾಜ್ಞರು ಯಾವುದು ದುಃಖ ಹೇತುವಲ್ಲವೋ ಅಂತಹುದನ್ನೇ ಯಾವಾಗಲೂ ಆಶ್ರಯಿಸುವರು. ತದಿತರವಾದ ದುಃಖ ಹೇತುವನ್ನೂ ಎಂದಿಗೂ ಆಶ್ರಯಿಸುವುದಿಲ್ಲ.

೫೦. ವತ್ಸ, ನೀನು ಆತ್ಮ ತತ್ತ್ವ ಜ್ಞಾನವನ್ನೂ ಸಂಪಾದಿಸಿದವನಾಗಿ ಅತ್ಯಂತ ಪ್ರಬಲವಾದ ವಿಕಲ್ಪ ಜಾಲಗಳನ್ನು ಮೂಲೋಚ್ಛೇದವಾಗುವಷ್ಟು ಬಲಾತ್ಕಾರದಿಂದ ಕಿತ್ತೊಗೆದು ಚಿತ್ತ ವೃತ್ತಿಯನ್ನೂ ಸುಷುಪ್ತ ಸ್ಥಿತಿಯಲ್ಲಿ ಸ್ವಸ್ಥವಾಗಿಯೂ ಪ್ರಶಾಂತವಾಗಿಯೂ ಇಟ್ಟುಕೊಂಡು, ಅದ್ವಿತೀಯವಾದ ಮೋಕ್ಷವೆಂಬ ಪರಮಪದವನ್ನು ನಿರತಿಶಯಾನಂದ ಪ್ರಾಪ್ತಿಗಾಗಿ ಸ್ವಪ್ರಯತ್ನದಿಂದ ಸಾಧಿಸುವವನಾಗು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ-ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ಸಂಸಾರನಗರವಿಕಲ್ಪಯೋಗವಿಚಾರ" ಎಂಬ ಐವತ್ತನೆಯ ಸರ್ಗವು

ಚತುಃಪಂಚಾಶಃ ಸರ್ಗಃ

ಪುತ್ರ ಉವಾಚ—

ಕೀದೃಶಸ್ತಾತ ಸಂಕಲ್ಪಃ ಕಥಮುತ್ಪದ್ಯತೇ ಪ್ರಭೋ ।
ಕಥಂ ಚ ವೃದ್ಧಿಮಾಪ್ನೋತಿ ಕಥಂ ಚೈಷ ವಿನಶ್ಯತಿ ॥ ೧ ॥

ದಾಶೂರ ಉವಾಚ—

ಅನಂತಸ್ಯಾತ್ಮತತ್ತ್ವಸ್ಯ ಸತ್ತಾಸಾಮಾನ್ಯರೂಪಿಣಃ ।
ಚಿತಶ್ಚೇತ್ಯೋನ್ಮುಖತ್ವಂ ಯತ್ತತ್ಸಂಕಲ್ಪಾಂಕುರಂ ವಿದುಃ ॥ ೨ ॥

ಲೇಶತಃ ಪ್ರಾಪ್ತಸತ್ತಾಕಃ ಸ ಏವ ಘನತಾಂ ಶನೈಃ ।
ಯಾತಿ ಚಿತ್ತಖಮಾಪೂರ್ಯ ದೃಢಜಾಡ್ಯಾಯ ಮೇಘವತ್ ॥ ೩ ॥

ಐವತ್ತನಾಲ್ಕನೆಯ ಸರ್ಗ

೧. ದಾಶೂರ ಮುನಿಯ ಮಗನು ಹೇಳಿದನು—ತಂದೆಯೇ ಈ ಸಂಕಲ್ಪವೆಂಬುದು ಎಂತಹುದು? (ಹೇಗಿರುವುದು?) ಸ್ವಾಮಿ, ಇದು ಹೇಗೆ ಉತ್ಪನ್ನವಾಗುವುದು? ಇದು ವೃದ್ಧಿಹೊಂದುವುದು ಹೇಗೆ? ಮತ್ತು ಇದು ಹೇಗೆ ವಿನಾಶ ಹೊಂದುವುದು? ದಯೆಮಾಡಿ ಉಪದೇಶಿಸಬೇಕು.

೨. ದಾಶೂರ ಮುನಿಯು ಹೇಳಿದನು—ಮಗು, ಅನಂತವಾಗಿಯೂ, ಕೇವಲ ಸತ್ತಾ ಸಾಮಾನ್ಯ ರೂಪಿಯಾಗಿಯೂ ಇರುವ ಚಿತ್ (ಚೈತನ್ಯ) ಎಂಬ ಆತ್ಮತತ್ತ್ವವು ಚೇತ್ಯದಲ್ಲಿ (ಜಗತ್ತಿನಲ್ಲಿ) ಅಭಿಮುಖವಾಗುವಿಕೆಯೆಂಬುದು ಯಾವುದೋ ಅದನ್ನೇ ಸಂಕಲ್ಪವೆಂಬ ಮಹಾ ವೃಕ್ಷದ ಅವಿದ್ಯೆಯೆಂಬ ಬೀಜದಿಂದ ಉದ್ಭವಿಸಿದ ಮೊಟ್ಟ ಮೊದಲನೆಯ ಅಂಕುರವೆಂದು (ಮೊಳಕೆ) ಪ್ರಾಜ್ಞರು ತಿಳಿದಿರುವರು.

೩. ಈ ಅಂಕುರವೇ ಅತಿ ಸೂಕ್ಷ್ಮವಾದ ಸ್ವಲ್ಪ ಮಾತ್ರ ಸತ್ತೆಯನ್ನೂ (ಸ್ಥಿತಿಯನ್ನು) ಪಡೆದುದಾಗಿ ಒಂದು ಮೇಘವು ಪ್ರಥಮತಃ ಆಕಾಶದಲ್ಲಿ ತಲೆದೋರಿ

ಭಾವಯಂತೀ ಚಿತಿಶ್ಚೇತ್ಯಂ ವ್ಯತಿರಿಕ್ತಮಿವಾತ್ಮನಃ ।
ಸಂಕಲ್ಪತಾಮುಪಾಯಾತಿ ಬೀಜಮಂಕುರತಾಮಿವ ॥ ೪ ॥

ಸಂಕಲ್ಪೇನಹಿ ಸಂಕಲ್ಪಃ ಸ್ವಯಮೇವ ಪ್ರಜಾಯತೇ ।
ವರ್ಧತೇ ಸ್ವಯಮೇವಾಶು ದುಃಖಾಯ ನ ಸುಖಾಯ ತು ॥ ೫ ॥

ಸಂಕಲ್ಪಮಾತ್ರಂ ಹಿ ಜಗಜ್ಜಲಮಾತ್ರಂ ಯಥಾರ್ಣವಃ ।
ಋತೇ ಸಂಕಲ್ಪಮನ್ಯಾ ತೇ ನಾಸ್ತಿ ಸಂಸಾರದುಃಖಿತಾ ॥ ೬ ॥

ಕ್ರಮೇಣ ಸರ್ವತ್ರ ಹರಡಿಕೊಳ್ಳುವಂತೆ ಚಿತ್ತಾಕಾಶವನ್ನೂ (ಚಿತ್ತವೆಂಬ ಆಕಾಶವನ್ನೂ) ಸರ್ವತಃ ಆವರಿಸಿಕೊಂಡು ಅಧಿಷ್ಠಾನ ಚಿತ್ತಿನ ಚಿತ್ಸ್ವಭಾವವನ್ನೂ ಮರೆಸುವುದರಿಂದ, ಜಡವಾದ ಈ ಪ್ರಪಂಚದ ಆಕಾರವು ಸಂಪನ್ನವಾಗುವ ಸಲುವಾಗಿ ಮೆಲ್ಲ ಮೆಲ್ಲಗೆ (ಕ್ರಮವಾಗಿ) ಘನತೆಯನ್ನೂ (ಸಾಂದ್ರೀಭಾವವನ್ನು–ಸ್ಥೂಲಭಾವವನ್ನೂ) ಪಡೆಯುವುದು. (ಹೀಗೆ ಸಮಷ್ಟಿ ಸಂಕಲ್ಪದಿಂದ ಜಗತ್ತು ಉದ್ಭವಿಸುವುದು.)

೪. ಒಂದು ಬೀಜವನ್ನು ಭೂಮಿಯಲ್ಲಿ ಬಿತ್ತಿ ನೀರಿನಿಂದ ನೆನೆಯಿಸುತ್ತಿದ್ದರೆ ಅದು ಕ್ರಮೇಣ ಮೊಳಕೆಯ ಆಕಾರವನ್ನು ಪಡೆಯುವಂತೆ ಚೇತ್ಯವು (ಜಗತ್ತು) ವಾಸ್ತವವಾಗಿ ತನಗಿಂತ [ಚಿತ್ತಿಗಿಂತ] ಅತಿರಿಕ್ತವಲ್ಲದಿದ್ದರೂ[ಪ್ರತ್ಯೇಕವಾದ ವಸ್ತ್ವಂತರವಲ್ಲದಿದ್ದರೂ] ಅತಿರಿಕ್ತವಾದುದರಂತೆ ಭಾವಿಸುತ್ತಿರುವ ಚಿತ್ತು, ಸಂಕಲ್ಪತ್ವವನ್ನೂ ಪಡೆಯುವುದು. [ಸಂಕಲ್ಪರೂಪವಾಗಿ ಪರಿಣಮಿಸುವುದು.]

೫. ಬಳಿಕ, ಮೂಲಭೂತವಾದ ಒಂದು ಅಂಕುರದ ದೆಸೆಯಿಂದ ನಾನಾ ಶಾಖೋಪಶಾಖೆಗಳು ಹೊರಟು ವೃದ್ಧಿಹೊಂದುವಂತೆ ಅಂತರವಾದ ಸಮಷ್ಟಿ ಸಂಕಲ್ಪದ ದೆಸೆಯಿಂದ–ಬುದ್ಧಿ, ಅಹಂಕಾರ, ಪ್ರಾಣ, ಇಂದ್ರಿಯ, ದೇಹ, ಇತ್ಯಾದಿ ಬಾಹ್ಯ ವಿಷಯಾಕಾರಗಳಾದ ವ್ಯಷ್ಟಿ ಸಂಕಲ್ಪ ಪರಂಪರೆಗಳು ನಿರಂತರವೂ ತಾನಾಗಿಯೇ ಉದಯಿಸುವುವು. ಬಳಿಕ, ತಾವಾಗಿಯೇ ಬಹು ಬೇಗನೆ ವೃದ್ಧಿಯನ್ನೂ ಹೊಂದುವುವು. ಹೀಗೆ ಈ ಸಂಕಲ್ಪವು ಎಂದೆಂದಿಗೂ ಅನಂತ ಅಪರಿಮಿತ ದುಃಖ ಪರಂಪರೆಗಳಿಗೆ ಹೇತುವಾಗುವುದೇ ಹೊರತು ಸುಖ ಹೇತುವಾಗುವುದೇ ಇಲ್ಲವು.

೬. ಸಮುದ್ರವು ಹೇಗೆ ಕೇವಲ ಜಲಮಾತ್ರವೇ ಆಗಿರುವುದೋ ಹಾಗೆ ಈ ದೃಶ್ಯ ಜಗತ್ತೆಲ್ಲವೂ ಕೇವಲ ಸಂಕಲ್ಪ ಮಾತ್ರವೇ ಎಂಬುದು ನಿರ್ವಿವಾದವಾದುದು.

ಕಾಕತಾಲೀಯಯೋಗೇನ ಸಂಜಾತೋಽಸ್ತಿ ಮುಧೈವ ಹಿ ।
ಮೃಗತೃಷ್ಣಾದ್ವಿಚಂದ್ರತ್ವಮಿವಾಸತ್ಯಂ ಚ ವರ್ಧತೇ ॥ ೭ ॥

ನಿಗೀರ್ಣಮಾತುಲಿಂಗಸ್ಯ ಕನಕಪ್ರತ್ಯಯೋ ಯಥಾ ।
ಸ್ವಯಮಭ್ಯೇತ್ಯಸತ್ಯೋಽಂತಃ ಸಂಕಲ್ಪಸ್ತೇ ತಥಾ ಹೃದಿ ॥ ೮ ॥

ಅಸತ್ಯಮೇವ ಜಾಸ್ತ್ವಮಸತ್ಯಮಪಿ ವರ್ತಸೇ ।
ಅಸ್ಮಿನ್ ಜ್ಞಾತೇ ಚ ವಿಜ್ಞಾನೇ ಹ್ಯಸತ್ಯಂ ಸಂವಿಲೀಯತೇ ॥ ೯ ॥

ಪುತ್ರನೇ, ಈ ಸಂಕಲ್ಪವೊಂದು ಹೊರತು [ಸಂಕಲ್ಪವನ್ನೂ ಬಿಟ್ಟರೆ] ನಿನಗೆ ಸಂಸಾರ ದುಃಖಕ್ಕೆ ಕಾರಣವಾದುದು ಬೇರೆ ಯಾವುದೊಂದೂ ಇಲ್ಲವೇ ಇಲ್ಲ.

೭. ಈ ಸಂಕಲ್ಪವು ಕಾಕತಾಳೀಯ ನ್ಯಾಯದಂತೆ ಅನಿರೀಕ್ಷಿತವಾಗಿ ಅಸತ್ಯವಾಗಿಯೇ ಜನಿಸಿರುವುದು. ಮತ್ತು ಇದು ಮೃಗ ತೃಷ್ಣಿಕಾ ಜಲಭ್ರಾಂತಿಯಂತೆಯೂ ಚಂದ್ರದ್ವಯ ಭ್ರಾಂತಿಯಂತೆಯೂ ಅಸತ್ಯವಾಗಿಯೇ ಅಭಿವೃದ್ಧಿಯನ್ನೂ ಹೊಂದುವುದು. [ಹೀಗೆ ನಿರ್ವಿಕಾರವೂ ಅದ್ವಿತೀಯವೂ ಆದ ಪರಬ್ರಹ್ಮನಲ್ಲಿ ನಿರ್ಬೀಜವಾಗಿಯೇ ಜಗತ್ತು ತಾನಾಗಿ ಅತ್ಯಂತಾ ಸತ್ಯವಾಗಿಯೇ ಉದ್ಭವಿಸುವುದು.]

೮. ಮಾತು ಲಿಂಗ [ಮಾದಳದ ಹಣ್ಣು] ವನ್ನೂ ಬಹಳ ಹೆಚ್ಚಾಗಿ ತಿಂದವನಿಗೆ ಕಣ್ಣಿನ ಪಿತ್ತವು ಉದ್ದೀಪತವಾಗಿ-ಕಣ್ಣೆದುರಿನಲ್ಲಿರುವ ಬೆಳ್ಳಗಿರುವ ವಸ್ತುಗಳೂ ಕೂಡ ಚಿನ್ನದಂತೆ ಹಳದಿ ಬಣ್ಣವಾಗಿ ತೋರುವುದು ಸಹಜವೇ ಅಲ್ಲವೆ! ಈ ಮಿಥ್ಯಾಭೂತವಾದ "ಎಲ್ಲವೂ ಹಳದಿಯಾಗಿರುವುದು" ಎಂಬ ಭ್ರಾಂತಿಯು [ಮಾದಳ ಭಕ್ಷಣದಿಂದ ಕಣ್ಣಿಗೆ ಪಿತ್ತ ವೇರಿದವನಿಗೆ] ನಿರ್ಬೀಜವಾಗಿ ಹೇಗೆ ತಾನಾಗಿಯೇ ಉಂಟಾಗುವುದೋ ಹಾಗೆಯೇ ನಿನ್ನ ಹೃದಯದಲ್ಲಿ ಅಸತ್ಯವಾದ ಈ ಸಂಕಲ್ಪವು ತಾನಾಗಿ ಉದ್ಭವಿಸುವುದು.

೯. ವತ್ಸ, ನೀನು ಹುಟ್ಟಿರುವುದೂ ಅಸತ್ಯವೇ. ಈಗ ನೀನು ಇರುವುದೂ ಕೂಡ ಅಸತ್ಯವೇಯೇ. ಉಪದೇಶಾತ್ಮಕವಾದ ಈ ಅಧ್ಯಾತ್ಮ ಶಾಸ್ತ್ರವು ಚೆನ್ನಾಗಿ ತಿಳಿದ ಬಳಿಕ, ನೀನು ಅಸತ್ಯವಾಗಿಯೇ ಲಯವನ್ನೂ ಹೊಂದುವೆ. [ಹೀಗೆ ಸೃಷ್ಟಿ ಸ್ಥಿತಿ ಲಯರೂಪವಾದ ವ್ಯವಹಾರವೆಲ್ಲವೂ ಅಸತ್ಯವೇ ಸರಿ.]

ಅಸೌ ಸೋಽಹಮಿಮೇ ಭಾವಾಃ ಸುಖದುಃಖಮಯಾ ಮಮ ।
ವ್ಯರ್ಥಮೇವೇತಿ ನಾನಾಸ್ಥಾ ಯೇನಾಂತಃ ಪರಿತಪ್ಯಸೇ ॥ ೧೦ ॥

ಅಸನ್ನೇವಾಸ್ಯ ಜಾತೋಽಸಿ ಕುತೋ ಜನ್ಮವಿಲಾಸತಃ ।
ವ್ಯರ್ಥಮೇವಾವಮೂಢೋಽಸಿ ಸಂಕಲ್ಪವಶತಃ ಸ್ವತಃ ॥ ೧೧ ॥

ಮಾ ಸಂಕಲ್ಪಯ ಸಂಕಲ್ಪಂ ಭಾವಂ ಭಾವಯ ಮಾಸ್ಥಿತೌ ।
ಏತಾವತೈವ ಭಾವೇನ ಭವ್ಯೋ ಭವತಿ ಭೂತಯೇ ॥ ೧೨ ॥

---

೧೦. ಸಕಲ ವೇದ ವೇದಾಂತಾದಿ ಶಾಸ್ತ್ರಗಳಲ್ಲಿ ಪ್ರಸಿದ್ಧವಾಗಿ ಔಪಸಿಷದನೆನ್ನಿಸಿರುವ ಪತಪೂರ್ಣಾ ಖಂಡಾ ದ್ವಿತೀಯ ಸಚ್ಚಿದಾನಂದ ರೂಪಾತ್ಮನೇ ನಾನು. ಸುಖ ದುಃಖಮಯಗಳಾಗಿರುವ ಈ ಜನ್ಮಾದಿಭಾವ ವಿಕಾರಗಳೆಲ್ಲವೂ ಸ್ವತಃ ಅವಿಕಾರಿಯಾದ ನನಗೆ ವ್ಯರ್ಥವಾಗಿಯೇ [ಕೇವಲ ಮಿಥ್ಯೆಯಾಗಿಯೇ] ಉಂಟಾದುವು. [ಅಂದರೆ ಈ ಜನ್ಮಾದಿಗಳು ತಾತ್ತ್ವಿಕವೂ, ಸ್ವಾಭಾವಿಕವೂ ಅಲ್ಲ. ಭ್ರಾಂತಿ ಮೂಲಕಗಳೇ] ಎಂಬುದಾಗಿ ಯಾವ ಅಜ್ಞಾನವೆಂಬ ಕಾರಣದಿಂದ ನಿನಗೆ ಇವುಗಳಲ್ಲಿ ಇನ್ನೂ ಅನಾಸ್ಥೆಯು ಉಂಟಾಗದೆ ಇದೆಯೋ ಅಂತಹ ಅಜ್ಞಾನ ದೋಷದಿಂದಲೇ ನೀನು ಹೀಗೆ ದೃಹಯದೊಪಗೆ ಪರಿತಪಿಸುತ್ತಿರುವೆ.

೧೧. ವತ್ಸ, ನೀನು ತಾತ್ತ್ವಿಕವಾಗಿ ಈ ಜನ್ಮಾದಿಗಳ ಸಂಬಂಧವುಳ್ಳವನಾಗಿಲ್ಲ. ಆದರೂ ಭ್ರಾಂತಿಯಿಂದ ಜನ್ಮಾದಿಗಳ ಸಂಬಂಧವನ್ನೂ ಕಲ್ಪಿಸಿಕೊಂಡವನಾಗಿ ಎಂದೆಂದಿಗೂ ಅಸತ್ಯವಾಗಿಯೇ ಹುಟ್ಟಿರುವೆ. ತಾತ್ತ್ವಿಕವಾದ ಪರಿಪೂರ್ಣತೆಯೆಂಬ ಸ್ವಸ್ವರೂಪ ವಿಲಸನದ ದೆಸೆಯಿಂದಲಾದರೋ ಜನ್ಮವೆಂಬುದು ಎಲ್ಲಿಂದ ಬರಬೇಕು ? ಹೀಗಿದ್ದರೂ ಕೂಡ ನೀನು ಮಿಥ್ಯೆಯಾಗಿಯೇ ನಿರರ್ಥಕವಾಗಿ ನಿನ್ನ ಸಂಕಲ್ಪವಶದಿಂದ ನೀನಾಗಿಯೇ ಹೀಗೆ ಅತ್ಯಂತ ವಾ ಮೂಢನಾಗಿರುವೆಯೇಕೆ ?

೧೨. ಮಿಥ್ಯೆಯಾದ ಈ ಭ್ರಾಂತಿಯನ್ನು ನಿವಾರಣೆ ಮಾಡಿಕೊಳ್ಳುವುದಕ್ಕಾಗಿ ನೀನು ಮನಸ್ಸಿನಲ್ಲಿ ಸಂಕಲ್ಪವನ್ನು ಸಂಕಲ್ಪಿಸಬೇಡ. ಮತ್ತು ಪೂರ್ವಾನುಭೂತವಾದ ಸುಖದುಃಖಾದಿ ಭಾವವನ್ನು ಈಗಿನ ಸ್ಥಿತಿಯಲ್ಲಿ ಮನಸ್ಸಿಗೆ ತಂದುಕೊಳ್ಳದಿರು [ಸ್ಮರಿಸದಿರು.]

ಸಂಕಲ್ಪನಾಶಯತ್ನೇನ ನ ಭಯಾನ್ಯನುಗಚ್ಛತಿ ।
ಭಾವನಾಭಾವಮಾತ್ರೇಣ ಸಂಕಲ್ಪಃ ಕ್ಷೀಯತೇ ಸ್ವಯಂ ॥ ೧೩ ॥

ಸುಮನಃಪಲ್ಲವಾಮರ್ದೇ ಕಿಂಚಿದ್ವ್ಯತಿಕರೋ ಭವೇತ್ ।
ಸುಸಾಧ್ಯೋ ಭಾವಮಾತ್ರೇಣ ನತು ಸಂಕಲ್ಪನಾಶನೇ ॥ ೧೪ ॥

[ಏಕೆಂದರೆ ಆ ಬಗೆಯಾದ ಪೂರ್ವಭಾವ ಸ್ಮರಣೆಯಿಂದ ಪೂರ್ವಾನುಭೂತ ಸುಖ ದುಃಖಾದಿಗಳಿಗೆ ಕಾರಣವಾದವುಗಳನ್ನು ಗ್ರಹಿಸುವುದು, ಬಿಡುವುದು ಇತ್ಯಾದಿ ಹೊಸ ಸಂಕಲ್ಪಗಳು ಉದಯಿಸಿಯೇ ತೀರುವುವು. ಅದು ಕಾರಣವೇ ಪೂರ್ವಾನುಭವವನ್ನೂ ಈಗ ಸ್ಮರಿಸಕೂಡದೆಂದು ಹೇಳಿದೆ.]

ಇದಿಷ್ಟು ಮಾತ್ರ ಮಾಡಿಕೊಂಡಿರುವ ಸ್ಥಿತಿಯಿಂದಲೇ ನೀನು ನಿಶ್ರೇಯಸ ರೂಪ ಮೋಕ್ಷಕ್ಕೆ ತಕ್ಕ ಪಾತ್ರನಾಗಿ ಪರಮ ಮಂಗಳರೂಪನಾಗುವೆ.

೧೩. ಹೀಗೆ ಸಂಕಲ್ಪ ನಾಶಕ್ಕಾಗಿ ನೀನು ಪ್ರಯತ್ನ ಮಾಡಿದರೆ ಅದರಿಂದ ನಿನಗೆ ಯಾವ ಬಗೆಯ ಭಯವೂ ಸಂಭವಿಸುವುದಿಲ್ಲ. ಏಕೆಂದರೆ ಭಾವನೆಗಳನ್ನು ಬಿಟ್ಟು, ಇಲ್ಲವಾಗಿ ಮಾಡಿಬಿಡುವ, ಒಂದು ಯತ್ನದಿಂದ ಮಾತ್ರದಿಂದ ಮಾತ್ರವೇ ಸಂಕಲ್ಪವು ತಾನಾಗಿಯೇ ಪೂರ್ತಿಯಾಗಿ ಕ್ಷಯಿಸಿಹೋಗುವುದು.

[ಭಾವನಾಭಾವಃ= ಭಾವನಾನಾಂ ಅಭಾವಃ= ಸಂಕಲ್ಪನಾಶ.] ಸಂಕಲ್ಪ ಕ್ಷಯದಿಂದ ಸರ್ವಭಯ ನಾಶವೂ ಪೂರ್ವಭಾವಾಭಾವನೆಯಿಂದ ಸಂಕಲ್ಪ ಕ್ಷಯ ಎಂಬ ಕ್ರಮವು ಸಿದ್ಧವಾಯಿತು.

೧೪. ಒಂದು ಹೂವನ್ನಾಗಲೀ ಅಥವಾ ಒಂದು ಚಿಗುರೆಲೆಯನ್ನಾಗಲೀ ಕೈಯಿಂದ ಹಿಸುಕಬೇಕಾದರೆ ಸ್ವಲ್ಪವಾದರೂ ಪ್ರಯತ್ನ ಮಾಡಬೇಕಾಗಿ ಬರಬಹುದು. ಆದರೆ ಭಾವನೆಯು ಅಭಾವ ಮಾತ್ರದಿಂದಲೇ ಅನಾಯಾಸವಾಗಿ ಸಾಧಿಸಬಹುದಾದ ಈ ಸಂಕಲ್ಪ ನಾಶದಲ್ಲಿ ಅಷ್ಟು ಸ್ವಲ್ಪ ಮಾತ್ರವಾದ ಶ್ರಮವೂ ಉಂಟಾಗುವುದಿಲ್ಲ. (ಈ ಉಪಾಯವು ಅತ್ಯಂತ ಸುಕರವೆಂದು ಭಾವ.)

ಪುಷ್ಪಾಕ್ರಾಂತೌ ಕರಸ್ಪಂದಯತ್ನಃ ಪುತ್ರೋಪಯುಜ್ಯತೇ।
ತದಪ್ಯುಪಕರೋತ್ಸಸ್ಮಿನ್ನ ಸಂಕಲ್ಪಪರಿಕ್ಷಯೇ ॥ ೧೫ ॥

ಸಂಕಲ್ಪೋ ಯೇನ ಹಂತವ್ಯಸ್ತೇನ ಭಾವವಿಪರ್ಯಯಾತ್ ।
ಅಪ್ಯರ್ಧೇನ ನಿಮೇಷೇಣ ಲೀಲಯೈವ ನಿಹನ್ಯತೇ ॥ ೧೬ ॥

ಭಾವಮಾತ್ರೋಪಸಂಪನ್ನೇ ಸ್ವಾತ್ಮನಿ ಸ್ಥಿತಿಮಾಗತೇ ।
ಸಾಧ್ಯತೇ ಯದಸಾಧ್ಯಂ ತತ್ಕಸ್ಯ ಸ್ಯಾತ್ಕಿಮಿವಾಂಗ ತೇ ॥ ೧೭ ॥

---

೧೫. ಪುತ್ರನೇ, ಒಂದು ಹೂವನ್ನು ಕೈಯಿಂದ ಹಿಡಿದುಕೊಳ್ಳಬೇಕಾದರೆ ಆಗಲೂ ಕೈಯು ಚಲನರೂಪವಾದ ಪ್ರಯತ್ನವು ಅವಶ್ಯಕವಾಗುವುದು. ಈ ಸಂಕಲ್ಪ ಕ್ಷಯದ ವಿಷಯದಲ್ಲಿಯಾದರೋ ಅಷ್ಟು ಅಲ್ಪ ಪ್ರಯತ್ನವೂ ಬೇಕಾಗಿಲ್ಲ. (ಉಪ ಕಾರಕವಾಗಿಲ್ಲ.)

೧೬. ಯಾವನು ಸಂಕಲ್ಪವನ್ನೂ ನಾಶಗೊಳಿಸಬೇಕೆಂದು ಬಯಸುವನೋ ಅವನು ಸುಖ ದುಃಖಾದಿ ಭಾವಗಳ ಭಾವನೆಯನ್ನೂ ಮಾಡದೆ (ಸ್ಮರಿಸದೆ) ಇರುವ ಮಾತ್ರದಿಂದಲೇ ಅರ್ಧ ನಿಮಿಷದೊಳಗಾಗಿ ಲೀಲೆಯಿಂದಲೇ (ಎಳ್ಳಷ್ಟೂ ಶ್ರಮವಿಲ್ಲ ದೆಯೇ ಸಂಕಲ್ಪವನ್ನು ನಾಶಪಡಿಸುವನು.

೧೭. ಕೇವಲ ಭಾವನೆಯಿಂದಲೇ ಸಂಪನ್ನನಾಗಿರುವ (ಅಂದರೆ ನಿರಂತರವೂ ತನ್ನ ಪರಿಪೂರ್ಣಾನಂದಾತ್ಮ ಸ್ವರೂಪ ಚಿಂತನೆಯಿಂದ ಮಾತ್ರವೇ ಪ್ರಾಪ್ತವಾಗಿರುವ) ಆತ್ಮನು ಸ್ವಸ್ವರೂಪದಿಂದ ಪ್ರಚ್ಯುತನಾಗದೆ ಇದ್ದರೆ ಅಸಾಧ್ಯವಾದುದೂ ಅಸಾಧ್ಯ ವಾದುದೂ ಸಾಧ್ಯವಾಗುವುದು. (ಅಸಾಧ್ಯವಾದುದೆಂಬುದೇ ಇಲ್ಲವು.)

[ಈ ಕಾರಣದಿಂದ "ಸಂಕಲ್ಪ ಕ್ಷಯದಿಂದ ಸರ್ವ ದುಃಖೋಪಶಮನವಾ ದರೂ ನಿತ್ಯನಿರತಿಶಯಾನಂದ ರೂಪ ಮೋಕ್ಷ ಪ್ರಾಪ್ತಿಗೆ ಬೇರೆ ಯಾವ ಉಪಾಯಾಂ ತರದ ಆವಶ್ಯಕತೆಯು ಸುತರಾಂ ಇಲ್ಲವೆಂದು ಸುಸ್ಪಷ್ಟವಾಯಿತು. ಮೋಕ್ಷವು ಸ್ವತಃ ಸಿದ್ಧವಾದುದು. (ಹೊಸದಾಗಿ ಸಂಪಾದಿಸಬೇಕಾದುದು ಅಲ್ಲ) ಸ್ವತಃ ಸಿದ್ಧವಾಗಿ ರುವ ಮೋಕ್ಷ ರೂಪ ಸ್ವಭಾವವು ಎಂದಿಗೂ ಬಿಟ್ಟುಹೋಗುವುದಿಲ್ಲ ಎಂಬ ಆಶಯ ದಿಂದ ಅಸಾಧ್ಯವಾದುದು ಸಾಧ್ಯವಾಗುವುದು ಎಂದು ಹೇಳಿರುವುದೇ ಹೊರತು ಹೊಸದಾಗಿ ಇದು ಉತ್ಪನ್ನವಾಗುವುದು ಎಂಬ ಅಭಿಪ್ರಾಯದಿಂದ ಹೇಳಿಲ್ಲ. ಸಕಲ

ಪದಾರ್ಥಗಳಿಗೂ ಅದರ್ಶನವು (ಅಪಾಯವು)ಎರಡು ಬಗೆಯಾದ ಕಾರಣಗಳಿಂದ ಆಗು ವುದನ್ನು ಎಲ್ಲರೂ ಕಂಡಿರುವರು. ಇತರರು ಅಪಹರಿಸಿಕೊಂಡು ಹೋಗಿರುವುದು ಒಂದು ಬಗೆ. ಅಥವಾ ಆ ವಸ್ತುವೇ ಮೊದಲಿನ ತನ್ನ ರೂಪವನ್ನು ಕೆಡಿಸಿಕೊಂಡು ಮತ್ತೊಂದು ರೂಪವನ್ನು ಹೊಂದುವುದು ಇನ್ನೊಂದು ಬಗೆ.]

(ವತ್ಸ,ನಿನ್ನ ಆತ್ಮನು ಯಾರಿಂದ ಅಪಹರಿಸಲ್ಪಟ್ಟು ಯಾವನ ವಶವರ್ತಿಯಾಗಿ ದ್ದುಕೊಂಡು, ನಿನಗೆ ಇಲ್ಲವಾಗುವನು ? ಅಥವಾ ಯಾವುದರಂತೆ ರೂಪಾಂತರವನ್ನು ಹೊಂದಿ ವಿನಾಶಹೊಂದುವನು ? ಹೇಳು ನೋಡೋಣ.)

["ಏಕಮೇವಾ ದ್ವಿತೀಯಂ. ನೇಹ ನಾನಾಸ್ತಿ ಕಿಂಚನ, ತತ್ ತ್ವಮಸಿ' ಇತ್ಯಾದಿ ಅನೇಕ ಶ್ರುತಿಗಳು ಉದ್ಘೋಷಿಸುತ್ತಿರುವಂತೆ ಆತ್ಮನು ಅದ್ವಿತೀಯನು. ಆತ್ಮನಿಗಿಂತ ಅನ್ಯನಾದವನು ಯಾವನೂ ಪ್ರಸಿದ್ಧನಾಗಿಲ್ಲವು. ಹೀಗಿರುವಲ್ಲಿ ಆತ್ಮ ನನ್ನು ಅಪಹರಿಸುವವನು ಮತ್ತೊಬ್ಬನು ಯಾವನಿರುವನು ? ಆತ್ಮಾಂತರಾಭಾವ ದಿಂದಲೇ–ಆತ್ಮನು ಇತರರಿಂದ ಅಪಹರಿಸಲ್ಪಡುವನು ಎಂಬ ಮಾತಿಗೆ ಅರ್ಥವೇ ಇಲ್ಲವಾಗುವುದು. ಹೀಗೆ ಆತ್ಮನಿಗೆ ಪರಾಪಹಾರರೂಪ ಅಪಗಮವು ಸುತರಾಂ ಅಸಂಭವವೆಂಬುದು ಸ್ಥಿರಪಟ್ಟಿತು. ಅಂತೆಯೇ ಆತ್ಮನು ಪೂರ್ವರೂಪವನ್ನು ಬಿಟ್ಟು ರೂಪಾಂತರವನ್ನು ಹೊಂದಿ ನಾಶವಾಗುವನು ಎಂದು ಹೇಳುವುದಕ್ಕೂ ಆಗುವುದಿಲ್ಲ. ಒಂದು ಘಟವು ನಾಶಹೊಂದಿದರೆ ಅದು ತನ್ನ ಪೂರ್ವರೂಪವನ್ನು ಬಿಟ್ಟು ಕಪಾಲ (ಬೋಕಿ ಹೆಂಚು) ವಾಗಿಯೋ ಅಥವಾ ಬರಿಮಣ್ಣಾಗಿಯೋ ಇರುವುದು ಅಲ್ಲವೆ ! ಹೀಗೆ ಆತ್ಮನು ರೂಪಾಂತರವನ್ನು ಹೊಂದಿರುವನು ಎಂದರೆ, ಆಗ ಅವನು ಯಾವು ದರಂತೆ ಬೇರೆ ರೂಪವನ್ನು ಪಡೆದಿರುವನೋ ಅದನ್ನು ಹೇಳಬೇಕಾಗಿ ಬರುವುದು ಮತ್ತು ಆತ್ಮನು ಬೇರೆ ರೂಪದಲ್ಲಿರುವನು ಎಂಬುದನ್ನು ನೋಡುವವರು ಯಾರು ? ತಾನು ರೂಪಾಂತರದಲ್ಲಿರುವುದನ್ನು ನಷ್ಟನಾದ ಆತ್ಮನು ತಾನೇ ನೋಡುವುದಕ್ಕೆ ಶಕ್ಯವಿಲ್ಲ. ಆತ್ಮನಿಗಿಂತ ಬೇರೆ ದ್ರಷ್ಟೃವು[ನೋಡುವವನು]ಇಲ್ಲವೇ ಇಲ್ಲ.]

[ನಾನ್ಯೋಽತೋಽಸ್ತಿ ದ್ರಷ್ಟಾ ಎಂದು ಶ್ರುತಿಯು ಹೇಳುವುದು. ಅಂತೂ ಆತ್ಮಾತಿರಿಕ್ತನಾದ ಬೇರೆ ದ್ರಷ್ಟೃವು ಯಾವನೂ ಅಸಿದ್ಧನಾದ ಕಾರಣದಿಂದಲೂ ತನ್ನ ನಾಶವನ್ನೂ ತಾನೇ ನೋಡುವನು ಎಂದು ಹೇಳುವುದು ಅಶಕ್ಯವೂ ಮತ್ತು ಅಸಂಭವವೂ ಆದ್ದ‌ರಿಂದ ಕಾರಣದಿಂದಲೂ ಆತ್ಮನಾಶವೆಂಬುದು ಅಸಾಕ್ಷಿಕವಾಗುವುದು. ಪ್ರಮಾಣ ಸಿದ್ಧವಾಗುವುದಿಲ್ಲ. ಇದನ್ನು ಒಪ್ಪುವುದಕ್ಕಾಗುವುದೂ ಇಲ್ಲ. ಮೇಲೆ ವಿವರಿಸಿದಂತೆ ಆತ್ಮನು ಪರರಿಂದ ಅಪಹರಿಸಲ್ಪಡತಕ್ಕವನೂ ಅಲ್ಲ. ಪೂರ್ವ ರೂಪ

ಸಂಕಲ್ಪೇನೈವ ಸಂಕಲ್ಪಂ ಮನಸಾ ಸ್ವಮನೋ ಮುನೇ ।
ಛಿತ್ವಾ ಸ್ವಾತ್ಮನಿ ತಿಷ್ಠ ತ್ವಂ ಕಿಮೇತಾವತಿ ದುಷ್ಕರಂ ॥ ೧೮ ॥

ಉಪಶಾಂತೇ ಹಿ ಸಂಕಲ್ಪೇ ಉಪಶಾಂತಮಿದಂ ಭವೇತ್ ।
ಸಂಸಾರದುಃಖಮುಖಿಲಂ ಮೂಲಾದಪಿ ಮಹಾಮತೇ ॥ ೧೯ ॥

ಸಂಕಲ್ಪೋ ಹಿ ಮನೋ ಜೀವಶ್ಚಿತ್ತಂ ಬುದ್ಧಿಃ ಸವಾಸನಾ ।
ನಾಮ್ನೈವಾನ್ಯತ್ವಮೇತೇಷಾಂ ನಾರ್ಥೇನಾರ್ಥವಿದಾಂ ವರ ॥ ೨೦ ॥

ವನ್ನು ಬಿಟ್ಟು ರೂಪಾಂತರವನ್ನೂ ಹೊಂದತಕ್ಕವನೂ ಅಲ್ಲ. ಹೀಗೆ ಆತ್ಮನಿಗೆ ನಾಶದ ಪ್ರಸಕ್ತಿಯೇ ಇಲ್ಲ. ಆತ್ಮನು ಅವಿನಾಶಿಯು; ಸ್ವತಃ ಸಿದ್ಧನು. ಪರಿಪೂರ್ಣನು. ನಿತ್ಯನಿರತಿಶಯಾನಂದ ರೂಪನು. ಆದುದರಿಂದ ಮೋಕ್ಷವೆಂಬುದು ಸ್ವತಃಸಿದ್ಧವಾದ ಸ್ವಾಭಾವಿಕ ಸ್ವರೂಪವೇ ಹೊರತು, ಅದು ಉತ್ಪಾದ್ಯವೂ ಅಲ್ಲ; ಪ್ರಾಪ್ಯವೂ ಸಂಸ್ಕಾರ್ಯವೂ ಹೇಯವೂ ಉಪಾದೇಯವೂ ಆಗಿಲ್ಲವು ಎಂದು ತಿಳಿಯಬೇಕು. ಬಂಧವೆಂಬುದು ಆತ್ಮನಿಗೆ ಅವಿದ್ಯಾದ್ಯಾರೋಪಿತವಾದುದು. (ಭ್ರಾಂತಿ ಮೂಲವು) ಸ್ವಾಜ್ಞಾನ ನಿಮಿತ್ತಕವು. ತತ್ತ್ವ ಜ್ಞಾನದಿಂದ ಅಜ್ಞಾನವು ಧ್ವಂಸಹೊಂದಿದರೆ ಸಾಕು (ನಿಮಿತ್ತನಾಶದಿಂದ ನೈಮಿತ್ತಿಕ ನಾಶವು ಸಿದ್ಧ.) (ಬಂಧ ನಿವೃತ್ತಿಯಾಗಿ) ಆಗಲೇ ತಾನಾಗಿಯೇ ಸ್ವಾಭಾವಿಕವಾದ ಮೋಕ್ಷವು ಪ್ರಕಾಶಿಸುವುದು. ಇದು ಸಿದ್ಧಾಂತವು.]

೧೮. ಮನನ ಸಮರ್ಥನಾದ [ಮುನಿ] ಪುತ್ರನೇ, ಪೂರ್ವೋಕ್ತವಾದ ತತ್ತ್ವವನ್ನು ಚೆನ್ನಾಗಿ ವಿಚಾರಿಸಿ, ನೀನು–"ಇನ್ನು ಯಾವ ಸಂಕಲ್ಪಗಳನ್ನೂ ಮಾಡುವುದೇ ಇಲ್ಲ" ಎಂಬ ದೃಢ ಸಂಕಲ್ಪದಿಂದಲೇ, ಸಕಲ ಸಂಕಲ್ಪಗಳನ್ನೂ ಆತ್ಮ ತತ್ತ್ವ ಮನನರೂಪವಾದ ಮನಸ್ಸಿನಿಂದಲೇ, ನಿನ್ನ ಮನಸ್ಸನ್ನೂ ಕತ್ತರಿಸಿ ಹಾಕಿ ಸ್ವಾತ್ಮನಿಷ್ಠನಾಗಿ ಇರು. ಇಷ್ಟು ಮಾತ್ರದಲ್ಲಿ ದುಷ್ಕರವಾದುದು ಯಾವುದಿರುವುದು ?

೧೯. ಅಯ್ಯ ಮಹಾ ಮತಿಯೇ, ಸಂಕಲ್ಪವೆಂಬುದೊಂದು ಶಾಂತವಾಗಿ ಬಿಟ್ಟರೆ ಸಾಕು. ಕೂಡಲೇ ಸಮಸ್ತವಾದ ಈ ಸಂಸಾರ ದುಃಖವೂ ಸಮೂಲವಾಗಿ ಶಾಂತವಾಗಿಬಿಡುವುದು. [ಸರ್ವದಾ ಇಲ್ಲವಾಗಿ ಧ್ವಸ್ತವಾಗಿಬಿಡುವದು.]

೨೦. ಶಬ್ದಾರ್ಥ ಜ್ಞಾನಿಗಳಲ್ಲಿ ಉತ್ತಮನಾದ ಪುತ್ರನೇ, ಸಂಕಲ್ಪ, ಮನಸ್ಸು,

ಸಂಕಲ್ಪನಾದ್ವೃತೇ ನೇಹ ಕಿಂಚಿದೇವಾಸ್ತಿ ಕುತ್ರಚಿತ್ ।
ತಮೇವ ಹೃದಯಾಚ್ಛಿಂಧಿ ಕಿಮೇತತ್ಪರಿಶೋಚಸಿ ॥ ೨೧ ॥

ಯಥೈವೇದಂ ನಭಃ ಶೂನ್ಯಂ ಜಗಚ್ಛೂನ್ಯಂ ತಥೈವ ಹಿ ।
ಅಸನ್ಮಯುವಿಕಲ್ಪೋತ್ಥೇ ಉಭೇ ಏತೇ ತತೇ ಯತಃ ॥ ೨೨ ॥

ಜೀವ, ಚಿತ್ತ, ಬುದ್ಧಿ, ವಾಸನಾ ಎಂಬವುಗಳಿಗೆ ಶಬ್ದಗಳಲ್ಲಿ ಮಾತ್ರವೇ ಭೇದವು ತೋರುವುದಲ್ಲದೆ ಅರ್ಥದಲ್ಲಿ ಸ್ವಲ್ಪವಾದರೂ ಯಾವೊಂದು ಭೇದವೂ ಇಲ್ಲವೆಂದು ತಿಳಿ. ಅದು ಕಾರಣ ಸಂಕಲ್ಪವೆಂಬುದೊಂದು ಉಪಶಾಂತವಾದ ಮಾತ್ರದಿಂದಲೇ ಜೀವ ಚಿತ್ತಾದಿಗಳೆಲ್ಲವೂ ಶಾಂತವಾಗಿ ಬಿಟ್ಟುವೆಂದೇ ಅರ್ಥವು.

೨೧. ನಮ್ಮ ಹೃದಯದಲ್ಲಿ ನಾವು ಸಂಕಲ್ಪಗಳನ್ನು ಸಂಕಲ್ಪಿಸದೇ ಹೋದರೆ ಆಗ ಈ ಜಗತ್ತಿನಲ್ಲಿ ಎಲ್ಲಿಯೂ ಯಾವುದೊಂದೂ ಇರುವುದಿಲ್ಲ. ಅದು ಕಾರಣ, ನೀನು ನಿನ್ನ ಮನಸ್ಸಿನಲ್ಲಿ ಆ ಸಂಕಲ್ಪವನ್ನೇ ಮೊದಲು ಕತ್ತರಿಸಿಹಾಕಿಬಿಡು. ಹಾಗೆ ಸಂಕಲ್ಪವನ್ನು ಕತ್ತರಿಸುವ ಪ್ರಯತ್ನ ಮಾಡದೆ ಈ ದೃಶ್ಯವನ್ನು ಕುರಿತು ನೀನು ಹೀಗೇಕೆ ದುಃಖಿಸುವೆ?

೨೨. ಈ ಆಕಾಶವು ಹೇಗೆ ಶೂನ್ಯವಾದುದೋ ಹಾಗೆಯೇ ಈ ಜಗತ್ತೂ ಶೂನ್ಯವಾದುದು. ಅಂದರೆ ಮರುಭೂಮಿಯಲ್ಲಿ ಅಜ್ಞಾನದಿಂದ ಉದಯಿಸುವ ಮರೀಚಿಕಾ (ಜಲ) ಭ್ರಾಂತಿಯು ನಷ್ಟ (ಉಚ್ಛಿನ್ನ) ವಾದರೂ ಕೂಡ ಮರುಭೂಮಿಯು ಶೂನ್ಯಾತ್ಮಕವಲ್ಲವಷ್ಟೇ? ಈ ನಿದರ್ಶನದಂತೆಯೇ ನಿರ್ವಿಕಲ್ಪ ಪರಬ್ರಹ್ಮನಲ್ಲಿ ಅವಿದ್ಯೆಯಿಂದ ತೋರುವ ಜಗತ್‌ಜೀವ ಮುಂತಾದ ಸಕಲ ದೃಶ್ಯಗಳೂ ತತ್ತ್ವಜ್ಞಾನದಿಂದ ಬಾಧಿತವಾದರೂ ಕೂಡ ವಿಕಲ್ಪಗಳಿಗೆಲ್ಲಾ ಆಧಾರವಾದ ದೃಗ್ರೂಪನಾದ ಆತ್ಮನು ಶೂನ್ಯಾತ್ಮಕನಲ್ಲವು. ಈ ಮರೀಚಿಕಾ ಭಾಂತ್ರಿಯೂ ಜಗಜ್ಜೀವ ಭ್ರಾಂತಿಯೂ ಇವೆರಡೂ ಸಮಾನಧರ್ಮಿಗಳು. ಏಕೆಂದರೆ ಇವೆರಡೂ ಅಸನ್ಮಯ (ಮಾಯಾಮಯ) ವಾದ ವಿಕಲ್ಪದಿಂದ ಉದ್ಭವಿಸಿ ಸತ್ಯವಾದ ಅಧಿಷ್ಠಾನದಲ್ಲಿ ಮಿಥ್ಯೆಯಿಂದ ಅವಿದ್ಯೆಯಿಂದ ಅಧ್ಯಾರೋಪಿತಗಳಾಗಿ ಅತಿ ವಿಸ್ತೃತಗಳಾಗಿವೆ.

[೨೦ನೆಯ ಶ್ಲೋಕದಲ್ಲಿ ಸಂಕಲ್ಪ, ಜೀವ, ಬುದ್ಧಿ ಮುಂತಾದವುಗಳೆಲ್ಲವೂ ಅರ್ಥತಃ ಅಭಿನ್ನವಾದವು ಎಂದು ಹೇಳಿದ್ದಾಯಿತು. ಇದರಿಂದ ಸಂಕಲ್ಪಕ್ಕೆ ಕ್ಷಯವುಂಟಾದರೆ ಜೀವಾದಿಗಳಿಗೂ ಕ್ಷಯವುಂಟಾಗುವ ಕಾರಣ ಜೀವನು ಪರಮಾತ್ಮನಿ

ಅಸಿದ್ಧಂ ಸರ್ವಮೇವೈತದಸಿದ್ಧೇನೈವ ಸಾಧಿತಂ ।
ಸಂಕಲ್ಪೇನ ಜಗದ್ಯಸ್ಮಾದ್ಭಾವನಾ ಕ್ವಾವತಿಷ್ಠತಾಂ
ಸತ್ಯಾಸ್ಥಾಯಾಯ ಸತ್ಯಾಂತು ಕಿಂ ನಿಷ್ಠಾವಾಸನಾ ಭವೇತ್ ॥ ೨೩ ॥

ಭಾವನಾಕ್ಷಯತಃ ಸಿದ್ಧಿಸ್ತತಃ ಪ್ರಾಪ್ಯಂ ನ ಶಿಷ್ಯತೇ ।
ತಸ್ಮಾದಸದಿದಂ ಸರ್ವಂ ವಿಜ್ಞೇಯಂ ಹೇಲಯೋದ್ಧಯಾ ॥ ೨೪ ॥

ತನುಭಾವನಯಾ ತೇನ ಸುಖದುಃಖೈರ್ನ ಲಿಪ್ಯತೇ ।
ಅವಸ್ತ್ವಿತಿ ಚ ನಿರ್ಣೀಯ ಸ್ನೇಹಾಸ್ಥಾ ನ ಪ್ರವರ್ತತೇ ॥ ೨೫ ॥

ಗಿಂತ ಅಭಿನ್ನನೂ ಆಗಿದ್ದು ಜೀವನಿಗಿಂತ ಪೃಥಕ್ಕಾದ ಬೇರೆ ಆತ್ಮನೇ ಇಲ್ಲದಿರುವುದರಿಂದ ಕೊನೆಗೆ ಆತ್ಮನೇ ಇಲ್ಲವಾಗಿ ಶೂನ್ಯವಾದದಲ್ಲಿ ಪರ್ಯವಸಿತವಾಗಬಹುದು. ಎಂಬ ಆಶಂಕೆಯೂ ಇದರಿಂದ ಪರಿಹೃತವಾಯಿತು.]

೨೩. ಈ ಸಮಸ್ತವಾದ ಜಗತ್ತೂ ಸ್ವತಃ ಅಸಿದ್ಧವಾದುದೇ ಹೌದು. ಇದು ಅತ್ಯಂತಾಸಿದ್ಧವಾದ ಸಂಕಲ್ಪದಿಂದಲೇ ಸಾಧಿತವಾಗಿರುವುದು. ಹೀಗೆ ಅಸತ್ಯವಾಗಿರುವ ಈ ಜಗತ್ತಿನಲ್ಲಿ ಪುನಃ ಭಾವನೆಯು ಉಂಟಾಗಬಹುದಾದರೆ ಅದು ಎಲ್ಲಿತಾನೇ ಇರಲಾಗುವುದು? (ಅದಕ್ಕೆ ಆಶ್ರಯವಾದುದು ಯಾವುದಿರುವುದು?) ಜಗತ್ತು ಶೂನ್ಯವೆಂದು ಜ್ಞಾನದಿಂದ ಬಾಧಿತವಾದರೂ ಆ ಜಗತ್ತು ಪುನಃ ಭಾವನೆಯಿಂದ ಉದಯಿಸುವುದಿಲ್ಲ. ಏಕೆಂದರೆ ಬಾಧಿತವಾದ ಅರ್ಥದಲ್ಲಿ ಭಾವನೆಯೇ ಅವತರಿಸುವುದಿಲ್ಲ.

೨೪. ಹೀಗೆ ಭಾವನೆಯನ್ನು ಸಮೂಲವಾಗಿ ನಾಶಪಡಿಸಿಬಿಟ್ಟರೆ ಅದರಿಂದ ತತ್ಕ್ಷಣವೇ (ಪರಮಪದವ್ಯಾಪ್ತಿರೂಪ) ಸಿದ್ಧಿಯುಂಟಾಗುವುದು. ಸಿದ್ಧಿಯಾದ ಬಳಿಕ, ಪ್ರಾಪ್ಯವಾದುದು ಒಂದೂ ಉಳಿದಿರುವುದಿಲ್ಲ. ಅದುಕಾರಣ ಈ ದೃಶ್ಯದಲ್ಲಿ ತಿರಸ್ಕಾರಬುದ್ಧಿಯನ್ನು ಅಭ್ಯಾಸವಶದಿಂದ ದೃಢಪಡಿಸಿಕೊಂಡು ಕ್ರಮವಾಗಿ ಈ ದೃಶ್ಯವೆಲ್ಲವೂ ಅಸತ್ಯವಾದುದೇ ಎಂದು ನಿರ್ಣಯವಾಗಿ ತಿಳಿದುಕೊಳ್ಳಬೇಕು.

೨೫. ಈ ದೃಶ್ಯಾವಹೇಲನದಿಂದ ದೇಹಾದಿಗಳಲ್ಲಿ ಅಭಿಮಾನದಿಂದ ಆತ್ಮಾಭಿಮಾನದಿಂದುಂಟಾಗುವ ಸಕಲ ಪೂರ್ವೋಕ್ತ ಸುಖದುಃಖಗಳ ಲೇಪವು ಸುತರಾಂ ಇಲ್ಲವಾಗುವುದು. ತರುವಾಯ, ಈ ದೇಹಕ್ಕೆ ಸಂಬಂಧಪಟ್ಟ ಮಕ್ಕಳು, ಹೆಂಡತಿ, ಮನೆ ಧನ, ವಾಹನ ಇತ್ಯಾದಿಗಳೆಲ್ಲವೂ ಅಸತ್ಯವೇ ಎಂಬ ನಿಶ್ಚಯವುಂಟಾಗಿ ಅವುಗಳಲ್ಲೆಲ್ಲ ಸ್ನೇಹಪೂರ್ವಕವಾದ ಆಸ್ಥೆಯೂ ಪ್ರವರ್ತಿಸುವುದಿಲ್ಲ.

ಆಸ್ಥಾಕ್ಷಯೇ ನ ಜಾಯೇತೇ ಹರ್ಷಾಮರ್ಷೌ ಭವಾಭವೌ ।
ತಸ್ಮಾದಸದಿದಂ ಸರ್ವಂ ಸುಖದುಃಖಾದಿವಿಭ್ರಮೈಃ ॥ ೨೬ ॥

ಮನೋ ಜೀವಃ ಸ್ಫುರತ್ಯುಚ್ಚೈಃ ಮಾನಸಂ ನಗರಂ ಜಗತ್ ।
ಭವಿಷ್ಯದ್ವರ್ತಮಾನಂ ಚ ಭೂತಂ ಪರಿವರ್ತಯನ್ ॥ ೨೭ ॥

ವಾಸನಾವಲಿತಂ ಲೋಕೇ ಸ್ಫುರಚ್ಛಕ್ತಿ ಮನಃ ಸ್ಥಿತಂ ।
ಕರೋತಿ ಸ್ವಾಶಯೇನೇಮಾಂ ವ್ಯವಸ್ಥಾಂ ಮಲಿನಶ್ಚಲಃ ॥ ೨೮ ॥

ಆತ್ಮನಃ ಸದೃಶೀಂ ಲೀಲಾಂ ಜೀವೋ ಹೃದ್ವನಮರ್ಕಟಃ ।
ದೀರ್ಘಮಾಕಾರಮಾದಾಯ ನಿಮೇಷಾದ್ಯಾತಿ ಹ್ರಸ್ವತಾಂ ॥ ೨೯ ॥

---

೨೬. ಹೀಗೆ ಆಸ್ಥೆಯು ಕ್ಷೀಣವಾಗಲಾಗಿ, ಹರ್ಷಕೋಪಗಳೂ ಜನನಮರಣಗಳೂ ಉಂಟಾಗುವುದಿಲ್ಲ. ಅದರಿಂದ ಸುಖದುಃಖ, ಜನ್ಮಮರಣ, ವಿಭ್ರಮಗಳಿಂದ ಒಡಗೂಡಿದ ಈ ಸಮಸ್ತವೂ ಅಸತ್ಯವೆಂದು ದೃಢವಾಗಿ ನಿರ್ಣಯಿಸಬೇಕು.

೨೭. ಈ ಮನಸ್ಸೇ ಚಿತ್ತಿನಲ್ಲಿ ಪ್ರತಿಬಿಂಬಿಸುವುದರಿಂದ ಜೀವನಾಗಿ ಭೂತ ಭವಿಷ್ಯತ್, ವರ್ತಮಾನಕಾಲಿಕವಾದ ಜಗತ್ತೆಂಬ ಮಾನಸನಗರವನ್ನು (ಮನಸ್ಸಿನಿಂದ ಕಲ್ಪಿಸಿದ) ರಚಿಸುತ್ತಲೂ ಅದಕ್ಕೆ ವಿವಿಧವಾಗಿ ಪರಿಣಾಮಗಳನ್ನುಂಟುಮಾಡುತ್ತಲೂ ಮತ್ತು ನಾಶಗೊಳಿಸುತ್ತಲೂ ವಿಶೇಷವಾಗಿ ಸ್ಫುರಿಸುತ್ತಿರುವದು.

೨೮-೨೯. ಲೋಕದಲ್ಲಿ, ವಾಸನಾವಿಷ್ಟವಾದ (ಆಕ್ರಾಂತವಾದ) ಮನಸ್ಸು ವಿವಿಧವಾಗಿ ಸ್ಫುರಿಸತಕ್ಕ ಶಕ್ತಿಗಳನ್ನು ಒಳಗೊಂಡದ್ದಾಗಿರುವುದು. ಹೀಗಿರುವ ಕಾರಣ ಹೃದಯವೆಂಬ ವನದಲ್ಲಿ ಮರ್ಕಟದಂತಿರುವ ಅತ್ಯಂತ ಮಲಿನನೂ ಚಂಚಲನೂ ಆದ ಜೀವನು ತನ್ನ ಇಚ್ಛೆಯಿಂದ ಪೂರ್ವೋಕ್ತವಾದ ರಚನ, ಪರಿಣಾಮ, ವಿನಾಶ ಮುಂತಾದ ವ್ಯವಸ್ಥೆಯನ್ನು ಮಾಡುವನು. ಇದು ಅವನಿಗೆ ಸ್ವಭಾವ ಸದೃಶವಾದ ಲೀಲೆಯಾಗಿರುವುದು. ಇವನು ಒಂದು ವೇಳೆ ದೀರ್ಘವಾದ ಆಕಾರವನ್ನು ಸ್ವೀಕರಿಸಿ ಇದ್ದುಕೊಂಡು ಇನ್ನೊಂದು ವೇಳೆ ಹಾಗೆಯೇ ಒಂದು ನಿಮಿಷದೊಳಗಾಗಿ ಹ್ರಸ್ವವಾದ ಆಕೃತಿಯನ್ನೂ ಹೊಂದಿಬಿಡುವನು.

ಗ್ರಹೀತುಂ ಚ ನ ಶಕ್ಯಂತೇ ಸಂಕಲ್ಪಜಲವೀಚಯಃ ।
ಮನಾಗ್ದೃಷ್ಟ್ವಾ ವಿವರ್ಧಂತೇ ಹ್ರಸಂತಿ ಸಪರಿಚ್ಛದಾಃ ॥ ೩೦ ॥

ತೃಣಮಾತ್ರೇಣ ದೀಪ್ಯಂತೇ ಸಂಕಲ್ಪಾ ವಹ್ನಿಶೇಷವತ್ ।
ಜಗತ್ಯಪ್ರಕಟಾಕಾರಾಃ ಪ್ರದೀಪ್ತಾಃ ಕ್ಷಣಭಂಗುರಾಃ
ಭ್ರಮದಾ ಜಡಸಂಸ್ಥಾನಾಃ ಸಂಕಲ್ಪಾಸ್ತಡಿದಗ್ನಯಃ ॥ ೩೧ ॥

---

೩೦. ಈ ಸಂಕಲ್ಪಗಳೆಂಬ ನೀರಿನ ಅಲೆಗಳನ್ನು ಅಡಗಿಸುವುದಕ್ಕೆ ಯಾರಿಗೂ ಶಕ್ಯವಲ್ಲ. ಸ್ವಲ್ಪಮಾತ್ರ ವಿಷಯ ದರ್ಶನವಾದೊಡನೆಯೇ ಬಹಳವಾಗಿ ವೃದ್ಧಿ ಹೊಂದುವುವು. ಆದರೆ ವಿಷಯದರ್ಶನ ಸ್ಮರಣಗಳನ್ನು ಪರಿತ್ಯಾಗಮಾಡುವುದರಿಂದ, ತಮ್ಮ ಪರಿವಾರಸಮೇತವಾಗಿ ಇವು ಹ್ರಾಸವನ್ನು (ಕ್ಷೀಣದೆಸೆಯನ್ನು, ಕೃಶತ್ವವನ್ನು) ಹೊಂದಿಬಿಡುವುವು.

೩೧. ಬೆಂಕಿಯೆಲ್ಲವೂ ಆರಿಹೋಗಿ ಒಂದೇ ಒಂದು ಕಿಡಿಯುಷ್ಟು ಉಳಿದುಕೊಂಡಿದ್ದರೂ ಆ ಅಗ್ನಿಕಣವೇ ಒಂದು ಹುಲ್ಲುಕಡ್ಡಿಯು ಸೋಕಿದ ಮಾತ್ರದಿಂದಲೇ ಹೇಗೆ ತಟ್ಟನೆ ಹೊತ್ತಿಕೊಂಡು ದೊಡ್ಡದಾಗಿ ಉರಿಯುವುದೋ ಹಾಗೆಯೇ ಸಂಕಲ್ಪಗಳು (ತೃಣಸದೃಶ) ಅಲ್ಪವಿಷಯ ಸಾನ್ನಿಧ್ಯದಿಂದಲೂ ಉದ್ಬುದ್ಧವಾಗುವುವು.

ಮತ್ತು ಈ ಸಂಕಲ್ಪಗಳೆಂಬ ವಿದ್ಯುದಗ್ನಿಗಳು ಪ್ರಪಂಚದಲ್ಲಿ ಅವ್ಯಕ್ತವಾದ ಆಕಾರಗಳುಳ್ಳವುಗಳಾಗಿಯೂ ನಾನಾ ಭ್ರಾಂತಿಜನಕಗಳಾಗಿಯೂ ಜಡವಾದ ದೃಶ್ಯ ವಿಷಯುಗಳಲ್ಲಿ ಸ್ಥಿತಿಯನ್ನು ಹೊಂದಿದವುಗಳಾಗಿಯೂ ಇವೆ.

(ವಿದ್ಯುತ್ತುಗಳ ಪರವಾಗಿ ಸ್ಥಾಣು (ಮರದ ಬುಡ, ಮೋಟುಮರ) ಮೊದಲಾದವುಗಳಲ್ಲಿ ಚೋರಾದಿ ಭ್ರಾಂತಿಯನ್ನುಂಟುಮಾಡತಕ್ಕವು ಎಂದರ್ಥ. ಸಂಕಲ್ಪ ಪರವಾಗಿ ಜಗದ್ರೂಪ ಭ್ರಾಂತಿಹೇತುವೆಂದರ್ಥ. ಜಡ ಸಂಸ್ಥಾನಾಃ ಎನ್ನುವುದಕ್ಕೆ ವಿದ್ಯುತ್ಪರವಾಗಿ ಜಲದಲ್ಲಿ ಸ್ಥಿತಿಯುಳ್ಳದೆಂದೂ ಸಂಕಲ್ಪಪರವಾಗಿ ಜಡವಾದ ವಿಷಯುಗಳನ್ನು ಆಶ್ರಯಿಸಿ ಸ್ಥಿತಿಯುಳ್ಳದೆಂದೂ ಶ್ಲೇಷೆಯಿಂದ ಅರ್ಥವನ್ನು ಹೇಳಬೇಕು.)

ಯದೇವಾಸನ್ಮಯಂ ಪುತ್ರ ತದೇವಾಶು ಚಿಕಿತ್ಸಿತುಂ ।
ಶಕ್ಯತೇ ನಾತ್ರ ಸಂದೇಹೋ ನಾಸತ್ಸದ್ಭವತಿ ಕ್ವಚಿತ್ ॥ ೩೨ ॥

ಸಂಸ್ಥಿತೋ ಯದಿ ಸಂಕಲ್ಪೋ ದುಶ್ಚಿಕಿತ್ಸ್ಯಃ ಸ್ವತೋ ಭವೇತ್ ।
ಕಿಂತ್ವಸದ್ಭೂತ ಏವೈಷ ಸುಚಿಕಿತ್ಸ್ಯಸ್ತದಾ ಭವೇತ್ ॥ ೩೩ ॥

ಅಕೃತ್ರಿಮಂ ಚೇತ್ಸಂಸಾರಮಲಮಂಗಾರಕಾರ್ಷ್ಣ್ಯವತ್ ।
ತದೇತತ್ ಕ್ಷಾಲನೇ ಸಾಧೋ ಕಃ ಪ್ರವರ್ತೇತ ದುರ್ಮತಿಃ ॥ ೩೪ ॥

---

೩೨. ಪುತ್ರ, ಯಾವುದು ಜಗತ್ತಿನಲ್ಲಿ ಕೇವಲ ಅಸತ್ಯಭೂತವಾದುದೇ ಆಗಿರುವುದೋ ಅದಕ್ಕೆ ಮಾತ್ರವೇ ಚಿಕಿತ್ಸಾದಿಗಳನ್ನು ಮಾಡಿ, ಬೇಗನೆ ಅದನ್ನು ಪರಿಹರಿಸಲು ಶಕ್ಯವಾಗುವುದು. ಇದರಲ್ಲಿ ಸಂಶಯವಿಲ್ಲ. ವಸ್ತುತಃ ಅಸತ್ಯವಾದುದು ಎಂದಿಗೂ ಎಲ್ಲಿಯೂ ಸತ್ಯವಾಗಲೇ ಆರದು. ಅದುಕಾರಣ ಅಸತ್ಯವಾದ ಅಜ್ಞಾನ ವಿಕಾರವಾದ ಸಂಕಲ್ಪವು ತತ್ತ್ವಜ್ಞಾನದಿಂದ ಶೀಘ್ರವಾಗಿ ನಿವಾರಣೀಯವಾಗುವುದೆಂದು ತಿಳಿ.

(ಇಲ್ಲಿಂದ ಮುಂದೆ ಸಂಕಲ್ಪವು ಹೇಗೆ ನಾಶವಾಗುವುದು? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಿದೆ.)

೩೩. ಸಂಕಲ್ಪವು ವಾಸ್ತವವಾಗಿ (ಸತ್ಯವಾಗಿ) ಇರತಕ್ಕುದಾಗಿದ್ದ ಪಕ್ಷದಲ್ಲಿ, ಆಗ ಅದನ್ನು ಪರಿಹರಿಸುವುದು ಅವಶಕ್ಯವಾಗುತ್ತಿತ್ತು. ಆದರೆ ಇದು ಸ್ವತಃ ಅತ್ಯಂತಾಸತ್ ಆಗಿರುವುದು. ಆದುದರಿಂದಲೇ ಇದನ್ನು ಬಹು ಸುಲಭವಾಗಿ ಚಿಕಿತ್ಸೆಮಾಡಿ ನಿವಾರಣೆಮಾಡಿಕೊಳ್ಳಬಹುದು.

೩೪. ಸಾಧುವೇ, ಅಂಗಾರ (ಇದ್ದಲು) ದಲ್ಲಿನ ಕಪ್ಪುಬಣ್ಣದಂತೆ ಈ ಸಂಸಾರ ಮಲವು ಅಕೃತ್ರಿಮ (ಸಹಜ ಸ್ವಭಾವಸಿದ್ಧ) ವಾಗಿದ್ದಿದ್ದ ಪಕ್ಷದಲ್ಲಿ (ಅದನ್ನು ತೊಳೆದು ಶುಚಿಮಾಡುವುದು ಹೇಗೂ ಯಾರಿಗೂ ಅಸಾಧ್ಯವೇ ಆದಕಾರಣ) ಅದನ್ನು ತೊಳೆದು ನಿರ್ಮಲಮಾಡುವುದಕ್ಕಾಗಿ, ಯಾವ ಬುದ್ಧಿಹೀನನು ಆದರೂ ಪ್ರವರ್ತಿಸುವನೇನು? (ಎಂತಹ ಹುಚ್ಚನೂ ಅಸಾಧ್ಯವಾದ ಈ ಕೆಲಸದಲ್ಲಿ ಪ್ರವರ್ತಿಸುವುದಿಲ್ಲ.)

(ಕೃತಿ – ಮಿಥ್ಯಾಕಲ್ಪನೆಯಿಂದ, ನಿರ್ವೃತ್ತಂ–ಕೃತ್ರಿಮಂ ತದ್ಭಿನ್ನವಾದುದು ಅಕೃತ್ರಿಮ-ಸತ್ಯ.)

ಕಿಂ ತ್ವೇತತ್ತಂಡುಲೇಷ್ವೇವ ತುಷಕಂಚುಕವತ್ಸ್ಥಿತಂ ।
ಯತಸ್ತತಃ ಪ್ರಯತ್ನೇನ ಪೌರುಷೇಣ ವಿನಶ್ಯತಿ ॥ ೩೫ ॥

ಅಕೃತ್ರಿಮಮಪಿ ಪ್ರಾಪ್ತಂ ಭೃಶಂ ಪುತ್ರ ತಥಾ ಪುನಃ ।
ಸುಖೋಚ್ಛೇದ್ಯತಯಾ ಜ್ಞಸ್ಯ ಸಂಸಾರಮಲಮಾತತಂ ॥ ೩೬ ॥

ತಂಡುಲಸ್ಯ ಯಥಾ ಚರ್ಮ ಯಥಾ ತಾಮ್ರಸ್ಯ ಕಾಲಿಮಾ ।
ನಶ್ಯತಿ ಕ್ರಿಯಯಾ ಪುತ್ರ ಪುರುಷಸ್ಯ ತಥಾ ಮಲಂ ॥ ೩೭ ॥

ನಶ್ಯತ್ಯೇವ ನ ಸಂದೇಹಸ್ತಸ್ಮಾದುದ್ಯಮವಾನ್ ಭವ ॥ ೩೮ ॥

---

೩೫. ಆದರೆ ಅಕ್ಕಿಯ ಮೇಲೆ, ಹೊರಗಡೆ, ಹೊಟ್ಟು ಮುಸುಕಿಕೊಂಡಿರುವಂತೆ ಈ ಸಂಸಾರಮಲವು ಆತ್ಮಜ್ಞಾನವನ್ನು ಆಚ್ಛಾದನೆಮಾಡಿಕೊಂಡು ಮರೆಯಿಸಿರುವುದು, ಈ ಕಾರಣದಿಂದ ಭತ್ತವನ್ನು ಕುಟ್ಟಿ ಪ್ರಯತ್ನಪಟ್ಟರೆ ನಾವು ಅಕ್ಕಿಯ ಮೇಲೆ ಮುಚ್ಚಿಕೊಂಡಿರುವ ಹೊಟ್ಟನ್ನು ಬೇರ್ಪಡಿಸಿ ಶುದ್ಧವಾದ ಅಕ್ಕಿಯನ್ನು ಹೇಗೆ ಪಡೆಯಬಲ್ಲೆವೋ ಹಾಗೆಯೇ ನಮ್ಮ ಪ್ರಯತ್ನ ವಿಶೇಷದಿಂದ ಈ ಸಂಸಾರಮಲವನ್ನು ನಾಶಪಡಿಸಿ ನಿತ್ಯಶುದ್ಧನಾದ ಅಸಂಸಾರಿಯಾದ ನಿಷ್ಪ್ರಪಂಚನಾದ ಆತ್ಮನನ್ನು ಯಥಾರ್ಥವಾಗಿ ದೊರಕಿಸಿಕೊಳ್ಳಬಹುದು.

೩೬. ಪುತ್ರ, ಒಂದು ವೇಳೆ, ಈ ಸಂಸಾರಮಲವು ಅಕೃತ್ರಿಮವಾಗಿ (ಅನಾದಿಭೂತವಾದುದಾದರೂ) ಸಂಪ್ರಾಪ್ತವಾಗಿದ್ದರೂ ಕೂಡ ತತ್ತ್ವಜ್ಞನಿಗೆ ಸುಖೋಚ್ಛೇದ್ಯವಾಗಿಯೇ (ಅನಾಯಾಸದಿಂದ ನಾಶಮಾಡಲು ಶಕ್ಯ) ಬಹಳವಾಗಿ ವ್ಯಾಪಿಸಿಕೊಂಡಿರುವುದೇ ಹೊರತು ಅವನಿಗೆ, ಈ ಸಂಸಾರಮಲವು ದುರುಚ್ಛೇದವಾಗಿ (ನಾಶಮಾಡಲು ಅಶಕ್ಯವಾಗಿ) ಇಲ್ಲವು. ಅಜ್ಞಾನಮೂಲಕವಾಗಿ ಶುಕ್ತಿ, ರಜ್ಜು ಮೊದಲಾದವುಗಳಲ್ಲಿ ವಿಸ್ತರಿಸಿಕೊಂಡಿರುವ (ಆರೋಪಿತ) ರಜತ, ಸರ್ಪ ಮುಂತಾದ ಭ್ರಾಂತಿಗಳು ಶುಕ್ತಿ ರಜ್ಜು ಮೊದಲಾದವುಗಳ ಯಥಾರ್ಥವಾದ ಪೃಥಕ್ಸ್ವರೂಪಜ್ಞಾನದಿಂದ ತತ್ಕ್ಷಣವೇ ನಿವೃತ್ತಿಯಾಗಿಬಿಡುವುವಲ್ಲವೇ !

[ಕೃತಿ–ಕಾರಣ ವ್ಯಾಪಾರ, ಅದರಿಂದ ನಿವೃತ್ತವಾದುದು ಕೃತ್ರಿಮ. ತದ್ಭಿನ್ನವಾದುದು ಅಕೃತ್ರಿಮ, ಅನಾದಿಭೂತವಾದುದು ಎಂದರ್ಥ.]

೩೭–೩೮. ಅಕ್ಕಿಯ ಮೇಲೆ ಮುಸುಕಿಕೊಂಡು ಇರುವ ಹೊಟ್ಟು ಮತ್ತು ತಾಮ್ರದ ಮೇಲೆ ಇರುವ [ಕಪ್ಪು] ಕೊಳೆಯು ಹೇಗೆ ಪುರುಷ ಪ್ರಯತ್ನದಿಂದ

ಅಸತ್ಕಲ್ಪೈಃವಿಕಲ್ಪೈರ್ಯಸ್ತ್ಸಂಸಾರೋ ನ ಜಿತೋ ಮುಧಾ ।
ಸ್ತೋಕೇನಾಶು ಲಯಂ ಯಾತಿ ಕ್ವಾಸದ್ವಸ್ತು ಚಿರಂ ಸ್ಥಿತಂ ॥ ೩೯ ॥

ಅಸತ್ಯಾಮೇತಿ ಸಂಸಾರಃ ಸ್ವವ್ಯವಸ್ಥಾಂ ವಿಚಾರತಃ ।
ದೀಪಾಲೋಕಾದಿವಾಂಧಸ್ಯ ದ್ವೀಂದುತ್ವಂ ಸ್ವೀಕ್ಷಿತಾದಿವ ॥ ೪೦ ॥

ನಾಸೌ ತವ ನ ಚಾಸ್ಯ ತ್ವಂ ಭ್ರಾಂತಿಂ ಪುತ್ರ ಪರಿತ್ಯಜ ।
ಅಸತ್ಯೇ ಸತ್ಯವದ್ದೃಷ್ಟೇ ಭಾವನಾ ಮಾಸ್ತ್ರ ಹೀದೃಶಃ ॥ ೪೧ ॥

ನಾಶಹೊಂದುವುದೋ ಹಾಗೆ ಪುರುಷ ಪ್ರಯತ್ನದಿಂದಲೇ ಈ ಸಂಸಾರಮಲವೂ ನಾಶ ಹೊಂದಿಯೇ ತೀರುವುದು ಇದರಲ್ಲಿ ಸಂದೇಹವಿಲ್ಲ. ಅದುಕಾರಣ, ನೀನು, ಈ ಸಂಸಾರಮಲವನ್ನು ನಾಶಮಾಡುವ ಕಾರ್ಯಸಿದ್ಧಿಯಾಗುವವರೆಗೂ ನಿರಂತರ ಜಾಗರೂಕನಾಗಿ ಉದ್ಯಮಶೀಲನಾಗಿರು.

೩೯. ವತ್ಸ, ಅಸನ್ಮಯಗಳಾದ ನಾನಾ ವಿಕಲ್ಪಗಳಿಂದ ಉಪಲಕ್ಷಿತವಾದ ಈ ಸಂಸಾರವು ಇದುವರೆವಿಗೂ ನಿನ್ನಿಂದ ಜಯಿಸಲ್ಪಡದೆ ಇರುವುದು. ನಿರರ್ಥಕವಾದುದೇ ಸರಿ. (ಉಪಾಯದ ಪರಿಜ್ಞಾನವಿಲ್ಲದುದರಿಂದಲೇ ನೀನು ಇದುವರೆವಿಗೂ ಸಂಸಾರವನ್ನು ಜಯಿಸಿಲ್ಲವೆಂದರ್ಥ.) ಈ ಉಪಾಯ ಜ್ಞಾನವು ಸ್ವಲ್ಪಮಟ್ಟಿಗೆ ಉಂಟಾದರೂ ಸಂಸಾರವು ಬಲು ಬೇಗ ಲಯಹೊಂದಿಬಿಡುವುದು. ಅಸತ್ತಾದ ವಸ್ತುವು ಎಲ್ಲಿ, ಯಾವಾಗ ತಾನೇ, ಚಿರಸ್ಥಾಯಿಯಾಗಿರುವುದು ?

೪೦. ಕತ್ತಲೆಯಿಂದ ಕಣ್ಣು ಕಾಣದೆ ಇರತಕ್ಕವನಿಗೆ ದೀಪ ಪ್ರಕಾಶವು ದೊರೆತ ಒಡನೆಯೇ ವಸ್ತುಗಳೆಲ್ಲವೂ ತಾವಾಗಿಯೇ ಚೆನ್ನಾಗಿ ಕಾಣುವಂತೆಯೂ ಸರಿಯಾಗಿ ನೋಡದಿರುವಾಗ ಭ್ರಾಂತನಿಗೆ ಆಕಾಶದಲ್ಲಿ ಕಾಣುವ ಚಂದ್ರ ದ್ವಯ ಭ್ರಾಂತಿಯು ಸರಿಯಾಗಿ ವಿವೇಕದಿಂದ ನೋಡಿದ ಕೂಡಲೇ ನಿವೃತ್ತಿಯಾಗುವಂತೆಯೂ ಈ ಸಂಸಾರವು ವಿಚಾರಪೂರ್ವಕವಾದ ವಿವೇಕದಿಂದ ತಾನು ಅಸತ್ಯನೆಂಬುದನ್ನು (ತನ್ನಲ್ಲಿರುವ ಅಸತ್ಯತ್ವವನ್ನು) ತೋರ್ಪಡಿಸಿಕೊಳ್ಳುವುದು.

೪೧. ಪುತ್ರ, ಈ ಸಂಸಾರವು ನಿನಗೆ ಸಂಬಂಧಪಟ್ಟುದಾಗಿಯೂ ಇಲ್ಲ ಮತ್ತು ನೀನೂ ಕೂಡ ಈ ಸಂಸಾರದೊಂದಿಗೆ ಯಾವ ವಿಧವಾದ ಸಂಬಂಧವನ್ನೂ ಪಡೆದವನಾಗಿಯೂ ಇಲ್ಲ. ಈ ಸಂಸಾರದ ಮೇಲೆ ಇಟ್ಟಿರುವ ಭ್ರಾಂತಿಮೂಲವಾದ 'ನಾನು'

ಮಮ ಗುರುವಿಭವೋಜ್ಜ್ವಲಾ ವಿಲಾಸಾ
ಇತಿ ತವ ಮಾಸ್ತು ವೃಥೈವ ವಿಭ್ರಮೋಽಂತಃ ।
ತ್ವಮಪಿ ಚ ವಿತತಾಶ್ಚ ತೇ ವಿಲಾಸಾ
ವಿಲಸತಿ ಸರ್ವಮಿದಂ ತದಾತ್ಮತತ್ತ್ವಂ ॥ ೪೩ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಸ್ಥಿತಿಪ್ರಕರಣೇ
ದಾಶೂರೋಪಾಖ್ಯಾನೇ "ಸಂಕಲ್ಪಚಿಕಿತ್ಸಾ" ನಾಮ ಚತುಃಪಂಚಾಶಃ ಸರ್ಗಃ

ನನ್ನದು ಎಂಬ ಅಹಂಕಾರ ಮಮಕಾರಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡು. ಏಕೆಂದರೆ, ಅಸತ್ಯವಾದುದು ಭ್ರಾಂತಿಯ ದೆಸೆಯಿಂದ ಸತ್ಯವಸ್ತುವಿನಂತೆ ಕಾಣಲ್ಪಟ್ಟ ಮಾತ್ರದಿಂದಲೇ ಇಂತಹ ಅಸತ್ಯ ಪ್ರಪಂಚವನ್ನು (ಸಂಸಾರವನ್ನು) ಪುನಃ ಚಿಂತಿಸುವುದು ಎಂದಿಗೂ ಯುಕ್ತವಾಗುವುದಿಲ್ಲ.

೪೨. ವತ್ಸ, ವಿಶೇಷವಾದ ವೈಭವಗಳಿಂದ ಉಜ್ವಲವಾದ ಭೋಗ ವಿಲಾಸಗಳು ನನಗೆ ಲಭಿಸಿರುವುವು" ಎಂಬೀ ವ್ಯರ್ಥವಾದ ಭ್ರಾಂತಿಯು ನಿನ್ನ ಮನಸ್ಸಿನೊಳಗೆ ಎಂದೆಂದಿಗೂ ಗೋಚರವಾಗದಿರಲಿ. ಏಕೆಂದರೆ, ನೀನೂ ಮತ್ತು ನಿನ್ನ ಅತಿ ವಿಸ್ತೃತಗಳಾದ ಆ ವಿಲಾಸಗಳೂ ಇತ್ಯಾದಿಗಳೆಲ್ಲವೂ ಆ ಆತ್ಮ ತತ್ತ್ವವೇ ಆಗಿ ವಿಲಸಿತವಾಗಿವೆಯೇ ಹೊರತು ಬೇರೆಯಲ್ಲ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ಸಂಕಲ್ಪಚಿಕಿತ್ಸಾ" ಎಂಬ
ಐವತ್ತನಾಲ್ಕನೆಯ ಸರ್ಗವು

ಪಂಚಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಇತ್ಯಾಕರ್ಣ್ಯ ತದಾ ತತ್ರ ರಾತ್ರಾವಾಲಪನಂ ದ್ವಯೋಃ ।
ಅಹಂ ರಘುಕುಲಾಕಾಶ ಶಶಾಂಕ ರಘುನಂದನ ॥ ೧ ॥

ಅಶಿತಃ ಖಾತ್ಕದಂಬಾಗ್ರೇ ಪತ್ರಪುಷ್ಪಫಲಾಕುಲೇ ।
ತೂಷ್ಣೀಂ ನಿರ್ವೃಷ್ಟಮುಕ್ತಾತ್ಮಾ ಶೃಂಗಾಗ್ರ ಇವ ತೋಯದಃ ॥ ೨ ॥

ಅಪಶ್ಯಂ ತತ್ರ ದಾಶೂರಂ ಶೂರಮಿಂದ್ರಿಯನಿಗ್ರಹೇ ।
ಪರೇಣ ತಪಸಾ ಯುಕ್ತಂ ತೇಜಸೇವ ಹುತಾಶನಂ ॥ ೩ ॥

ತೇಜೋಭಿರ್ದೇಹನಿಷ್ಕ್ರಾಂತೈಃ ಕಾಂಚನೀಕೃತಭೂತಲಂ ।
ತಾಪಯಂತಂ ಪ್ರದೇಶಂ ತಂ ಭುವನಂ ಭಾಸ್ಕರೋ ಯಥಾ ॥ ೪ ॥

ಐವತ್ತೈದನೆಯ ಸರ್ಗ

೧. ವಸಿಷ್ಠನು ಹೇಳಿದನು—ರಘುಕುಲವೆಂಬ ಆಕಾಶದಲ್ಲಿ ಚಂದ್ರನಂತಿರುವ ಅಯ್ಯ ರಘುನಂದನ, ಆಗ ಆ ಕದಂಬ ಶಾಖಾಗ್ರದಲ್ಲಿ ಆ ರಾತ್ರಿ ವೇಳೆಯಲ್ಲಿ ತಂದೆ ಮಕ್ಕಳಿಗೆ ಈ ಪ್ರಕಾರವಾಗಿ ನಡೆದ ಸಲ್ಲಾಪವನ್ನು ನಾನು ಕೇಳಿ, ಚೆನ್ನಾಗಿ ಮಳೆಗರೆದು ತನ್ನ ಜಲಭಾರವನ್ನು ಕಳೆದುಕೊಂಡು ಹಗುರವಾದ ಮೇಘವು ಒಂದು ಪರ್ವತದ ಶಿಖರದ ತುದಿಯ ಮೇಲೆ ಬಂದೆರಗುವಂತೆ ಪುತ್ರ ಪುಷ್ಪ ಫಲಾದಿಗಳಿಂದ ವ್ಯಾಪ್ತವಾದ ಆ ಕದಂಬ ವೃಕ್ಷದ ಶಾಖಾಗ್ರದಲ್ಲಿ ಆಕಾಶದಿಂದ ನಿಶ್ಶಬ್ದವಾಗಿ ಇಳಿದು ಹೋದೆನು.

೨–೪. ಒಡನೆಯೇ ಅಲ್ಲಿ ತೇಜಸ್ಸಿನಿಂದ ಕೂಡಿದ ಅಗ್ನಿಯಂತೆ ಮಹಾ ದಾರುಣವಾದ ತಪಸ್ಸಿನಿಂದ ಕೂಡಿದವನಾಗಿಯೂ ತನ್ನ ದೇಹದಿಂದ ಹೊರ ಹೊರಡುತ್ತಿರುವ ತೇಜಸ್ಸುಗಳಿಂದ ಭೂಮಂಡಲವನ್ನೆಲ್ಲ ಸುವರ್ಣ (ಭಂಗಾರ) ಮಯವನ್ನಾಗಿ ಮಾಡುತ್ತಿರುವವನಾಗಿಯೂ, ಸೂರ್ಯನು ಬ್ರಹ್ಮಾಂಡವನ್ನೆಲ್ಲ ತಪಿಸುವಂತೆ ತನ್ನ

ಮಾಮಥಾಲೋಕ್ಯ ಸಂಪ್ರಾಪ್ತಂ ದಾಶೂರೋಽರ್ಘಸಪರ್ಯಯಾ ।
ವಿತೀರ್ಣವಿಷ್ಟರಂ ಪತ್ರಪೂಜಯಾ ಪರ್ಯಪೂಜಯತ್ ॥ ೫ ॥

ತತಃ ಪೂರ್ವಕಥಾಸ್ತೇನ ಸಹ ದಾಶೂರ ಭಾಸ್ವತಾ ।
ಕೃತಾಸ್ತನಯಸಂಬೋಧಾಃ ಸಂಸಾರೋತ್ತರಣಕ್ಷಮಾಃ ॥ ೬ ॥

ದೃಷ್ಟವಾಂಸ್ತಮಹಂ ವೃಕ್ಷಂ ಕೋರಕೋತ್ತರಕೋಟರಂ ।
ದಾಶೂರಸ್ಯೇಚ್ಛಯಾ ಸರ್ವೈರಯುತದ್ಭಿರ್ಮೃಗವ್ರಜೈಃ ॥ ೭ ॥

ಸೇವ್ಯಮಾನಂ ವನಮಿವ ಲತಾಮಂಡಲಮಂಡಿತಂ ।
ಸ್ಮಿತೇನ ವಿಸ್ಫುಟಮಿವ ಶ್ವಸನಸ್ಫುರಿತಚ್ಛದಂ ॥ ೮ ॥

ಸುತ್ತಮುತ್ತಲಿನ ಪ್ರದೇಶವನ್ನೆಲ್ಲ ಪ್ರಕಾಶಪಡಿಸುತ್ತಿರುದವನಾಗಿಯೂ, ಇಂದ್ರಿಯ ನಿಗ್ರಹದಲ್ಲಿ ಅತ್ಯಂತ ಧೀರನಾಗಿಯೂ ಇದ್ದ ಆ ದಾಶೂರ ಮುನಿಯನ್ನು ನೋಡಿದೆನು.

೫. ಅನಂತರ ಅಲ್ಲಿಗೆ ಹೋದ ನನ್ನನ್ನು ಕಂಡು ದಾಶೂರ ಮುನಿಯು ಕೂಡಲೇ ಎದ್ದು ನನಗೆ ಆಸನವನ್ನು ಕೊಟ್ಟು, ಅರ್ಘ್ಯಪಾದ್ಯಾದಿಗಳಿಂದಲೂ ಪತ್ರ ಪುಷ್ಪ ಫಲಾದಿ ಪೂಜಾ ವಿಧಿಗಳಿಂದಲೂ ತತ್ಕಾಲೋಚಿತವಾಗಿ ಶಾಸ್ತ್ರ ವಿಧಾನದಂತೆ ಸತ್ಕರಿಸಿದನು.

೬. ಆಮೇಲೆ, ಸ್ವಲ್ಪ ಕಾಲ ನಾನು ಸೂರ್ಯನಂತೆ ಅತ್ಯಂತ ವಿರಾಜಮಾನನಾದ ಆ ದಾಶೂರ ಮುನಿಯ ಸಂಗಡ, ಆತನು ಆದುವರೆವಿಗೆ ಅಲ್ಲಿಯೇ ತನ್ನ ಮಗನಿಗೆ ಜ್ಞಾನೋದಯವಾಗುವಂತೆ ಬೋಧಿಸಿದ ಸಂಸಾರ ಸಾಗರದಿಂದ ದಾಟಿಸುವುದಕ್ಕೆ ಸಮರ್ಥಗಳಾದ ಆ ಪೂರ್ವ ಕಥೆಗಳನ್ನು ಪ್ರಸ್ತಾಪ ಮಾಡಿದೆನು.

(ಕಥಾ= ಅನ್ಯೋನ್ಯ ತತ್ತ್ವ ವಿಷಯಕ ಸಂಲ್ಲಾಪ. ಇದು ವಾದ, ಜಲ್ಪ, ವಿತಂಡಾ ಎಂದು ಮೂರು ವಿಧ.)

೭-೮. ಹೀಗೆ ಸ್ವಲ್ಪ ಹೊತ್ತು ಕಳೆದ ಬಳಿಕ ನಾನು ಆ ಕದಂಬ ವೃಕ್ಷವನ್ನೂ ನೋಡಿದೆನು. ಆ ಮರದ ಎಲ್ಲಾ ಪೊಟ್ಟರೆ (ಕೋಟರ) ಗಳಲ್ಲಿಯೂ ಮೊಗ್ಗುಗಳು ತುಂಬಿಕೊಂಡಿದ್ದುವು. ಅಲ್ಲಿದ್ದ ಸಕಲ ಮೃಗಗಳ ಸಮೂಹಗಳೂ ದಾಶೂರ ಮುನಿಯ ಇಚ್ಛೆಯಂತೆ ಆ ಮರವನ್ನೂ ಸ್ವಲ್ಪವೂ ವ್ಯಾಕುಲಗೊಳಿಸದೆ ಸೇವಿಸುತ್ತಿ

ಲತಾಕೋಟಿಗತೈರ್ಭ್ರಾಂತೈಶ್ಚಾಮರೈರಿಂದು ಸುಂದರೈಃ ।
ಶುಭ್ರಾಭ್ರಖಂಡನಿಕರೈಃ ಶರನ್ನಭ ಇವಾವೃತಂ ॥ ೯ ॥

ಪ್ರಾಲೇಯಕಣಪದ್ಧತ್ಯಾ ಮುಕ್ತಾವಲ್ಯಾಭ್ಯಲಂಕೃತಂ ।
ಸರ್ವಾವಯವಪೋವಾಚ್ಛಪುಷ್ಪಪೂರೈಃ ಪ್ರಪೂರಿತಂ ॥ ೧೦ ॥

ಸ್ವರೇಣುಚಂದನಾಲೇಪೈಃ ಸಮಾಲಬ್ಧಮಖಂಡಿತಂ ।
ಸ್ವಚ್ಛದಾಭೋಗವಿಪುಲರಕ್ತಾಂಬರಪರಿಚ್ಛದಂ ॥ ೧೧ ॥

ದ್ದವು. ಆ ವೃಕ್ಷವು ನಾನಾ ಲತಸಮೂಹಗಳಿಂದ ಒಂದು ಉದ್ಯಾನವನದಂತೆ ವಿರಾಜಿಸುತ್ತಲಿತ್ತು. ಮಂದ ಮಾರುತವು ಬೀಸುವುದರಿಂದ ಅದರ ಎಲೆಗಳು ಚಲಿಸುತ್ತಲಿದ್ದುವು. ಹೀಗೆ ಆ ಮರವು ಮಂದಹಾಸದಿಂದ ಸ್ಫುಟವಾಗಿದೆಯೋ ಎಂಬಂತೆ ಕಾಣುತ್ತಿತ್ತು.

೯. ಶುಭ್ರವಾದ (ಬಿಳುಪಾದ) ಮೇಘ ಖಂಡಗಳ ಗುಂಪುಗಳಿಂದ ಶರತ್ಕಾಲದ ಆಕಾಶವು ಆವೃತವಾಗಿ ಇರುವಂತೆ ಆ ವೃಕ್ಷವು ತನ್ನ ಕೊಂಬೆಗಳ ತುದಿಯಲ್ಲಿ ಸಿಕ್ಕಿಕೊಂಡು ಹಾರಾಡುತ್ತಿರುವ ಚಂದ್ರನಂತೆ ಸುಂದರವಾದ ಚಮರ ಮೃಗದ ಬಾಲದ ಕೂದಲು ಗೊಂಚಲುಗಳಿಂದ ಶೋಭಿಸುತ್ತಿದ್ದಿತು.

೧೦. ಹಿಮಕಣಗಳು (ಮಂಜಿನ ಹನಿಗಳು ಒಂದೇ ಸಾಲಾಗಿ ಬಿದ್ದಿದ್ದರಿಂದ ಅದು ಮುತ್ತಿನ ಹಾರಗಳಿಂದ ಅಲಂಕೃತವಾಗಿದ್ದಂತೆ ಕಂಡಿತು. ಅದರ ಸಕಲಾವಯಗಳೂ ಕೂಡ ಬಿಳುಪಾದ ಪುಷ್ಪಮಂಜರಿಗಳಿಂದ ಪರಿಪೂರಿತವಾಗಿದ್ದುವು.

೧೧. ಆ ಕದಂಬ ವೃಕ್ಷದ ಹೂಗಳ ಪರಾಗಗಳೇ ಅದರ ದೇಹದಲ್ಲೆಲ್ಲ ಎಡೆಬಿಡದೆ ಅಖಂಡವಾಗಿ ವ್ಯಾಪಿಸಿಕೊಂಡು ಸರ್ವತ್ರ ಗಂಧದಿಂದ ಲಿಪ್ತವಾಗಿದ್ದಂತೆ ತೋರಿದುವು. ಆ ಮರದ ಅಗಲವಾದ ಎಲೆಗಳೇ ಶರೀರದ ತುಂಬ ಮುಚ್ಚುವಂತಹ ರಕ್ತವರ್ಣಮಯವಾದ ವಿಸ್ತಾರವಾದ ವಸ್ತ್ರ (ಹಚ್ಚಡ) ವಾಗಿದ್ದುವು.

ವಿವಾಹಾಯೈವ ವೇಷೇಣ ಪುಷ್ಪಭಾರಾತಿಭಾರಿಣಾ ।
ಲತಾಂಗನಾನುಷಕ್ತೇನ ನಾಗರೇಣ ಕೃತೋಪಮಾಂ ॥ ೧೨ ॥

ಮುನಿಬದ್ಧೋಟಜಾಕಾರಲತಾಮಂಡಪಮಂಡಿತಂ ।
ಮಂಜರೀಭಿಃ ಪತಾಕಾಭಿರ್ಯುಕ್ತಂ ಪುರಮಹೋತ್ಸವೇ ॥ ೧೩ ॥

ಮೃಗಕಂಡೂಯನಧ್ವಸ್ತಪುಷ್ಪಧೂಳಿವಿಧೂಸರಂ ।
ಪ್ರೋತ್ಸಾರಿತೋಪಾಂತವನಂ ಮೃಷಮಲ್ಲಮಿವೋತ್ಥಿತಂ ॥ ೧೪ ॥

ಬರ್ಹಿಭಿಃ ಕುಸುಮೋದ್ಭ್ರಾಂತಪರಾಗಪರಿಪಾಟಲೈಃ ।
ನಿಕ್ಷೇಪಕ್ಷಿಪ್ತಸಂಧ್ಯಾಭ್ರಬಾಲವಾಲಮಿವಾಚಲೈಃ ॥ ೧೫ ॥

---

೧೨. ಹೀಗೆ ಆ ವೃಕ್ಷವು ವಿಶೇಷವಾಗಿ ಹೂಗಳನ್ನು ಧರಿಸಿಕೊಂಡು ಲತೆಯೆಂಬ ನೂತನ ವಧುವಿನೊಡಗೂಡಿ ವಿವಾಹಾರ್ಥವಾಗಿ ಸಮುಚಿತವಾದ ವೇಷ ಭೂಷಾದಿಗಳಿಂದ ಅಲಂಕರಿಸಿಕೊಂಡು ಸಿದ್ಧನಾಗಿರುವ ಒಬ್ಬ ನಾಗರಿಕ ವರನಂತೆ (ಮದುಮಣಾಗ) ಅತಿ ಸುಂದರವಾಗಿ ಕಂಡಿತು.

೧೩. ಆ ಕದಂಬ ವೃಕ್ಷವು ದಾಶೂರ ಮುನಿಯಿಂದ ವಿರಚಿತವಾದ ಪರ್ಣಶಾಲೆಗಳೋ ಎಂಬಂತೆ ಕಾಣುವ ಲತಾಮಂಡಪಗಳಿಂದ ಅಲಂಕೃತವಾಗಿದ್ದಿತು. ಉತ್ಸವ ಕಾಲಗಳಲ್ಲಿ ಪಟ್ಟಣವು ಧ್ವಜಗಳಿಂದ ಅಲಂಕರಿಸಲ್ಪಡುವಂತೆ ಈ ವೃಕ್ಷವು ಪುಷ್ಪಸ್ತಂಭಕಗಳಿಂದ ಅಲಂಕೃತವಾಗಿದ್ದಿತು.

೧೪. ಕಾಡು ಮೃಗವು ಬಂದು ತನ್ನ ಮೈಯನ್ನು ಆ ಕದಂಬ ವೃಕ್ಷದ ಬುಡಕ್ಕೆ ಹಾಕಿ ಬಲವಾಗಿ ಉಜ್ಜುವುದರಿಂದ ಮರವು ಅಲುಗಾಡಿ ಅದರ ಪುಷ್ಪ ಪರಾಗವೆಲ್ಲವೂ ಹಾರಿ, ಅದರ ಮೈ ಮೇಲೆಲ್ಲಾ ಬಿದ್ದಿತು. ಈ ಕಾರಣದಿಂದ ಅದು (ಆ ವನಮೃಗವು) ಹತ್ತಿರದಲ್ಲಿದ್ದ ವನವನ್ನೆಲ್ಲ ಧ್ವಂಸ ಮಾಡಿ ಓಡಿಬಂದಿರುವ ಒಂದು ದೊಡ್ಡ ಗೂಳಿಯಂತೆ ಶೋಭಿಸಿತು.

೧೫. ಪುಷ್ಪ ಮಂಜರಿಗಳಿಂದ ಹೊರಟ ಪರಾಗಗಳ ಸಂಪರ್ಕದಿಂದ ಪಾಟಲ ವರ್ಣವಾಗಿರುವ ನವಿಲುಗಳು (ಪಾಟಲ–ಬಿಳುಪು ಮಿಶ್ರವಾದ ಕೆಂಪು–ಶ್ವೇತ ರಕ್ತ) ಆ ಕದಂಬ ವೃಕ್ಷದ ಮೇಲೆ ವಾಸವಾಗಿದ್ದುವು. ಇದನ್ನು ನೋಡಿದರೆ ಪರ್ವತಗಳು

ಪ್ರವಾಲಾರುಣಹಸ್ತೇನ ಕುಸುಮಸ್ಮಿತಶೋಭಿನಾ |
ಮಧುನಾ ಘೂರ್ಣಮಾನೇನ ಪ್ರಾಂತೇನ ಪುಲಕತ್ವಿಷಾ || ೧೬ ||

ನೀರಂಧ್ರಪುಷ್ಪಪೂರ್ಣೇನ ಘೂರ್ಣಿತೇನ ವನಾನಿಲೈಃ |
ನಿದ್ರಾಲುಕುಡ್ಮಲದೃಶಾ ಸ್ತಬಕಸ್ತನಧಾರಿಣಾ || ೧೭ ||

ಪುಷ್ಪಜಾಲರಜಃಪುಂಜಕುಂಕುಮಾರುಣವಾಸಸಾ |
ಲತಾವಿತಾನನಿಲಯವಾತಾಯನ ನಿಷಂಗಿಣಾ || ೧೮ ||

ನೀಲಪುಷ್ಪಲತಾದೋಲಾಲೀಲಾಲಾಸ್ಯವಿಲಾಸಿನಾ |
ಆಪಾದಮಸ್ತಕಪ್ರಾಂತಂ ಸರ್ವತೋ ನಿರ್ಮಿತಾಲಯಂ || ೧೯ ||

ವೃಂದೇನ ವನದೇವೀನಾಂ ಕೋಕಿಲಾಲಾಪಶಾಲಿನಾ |
ಸಂಸಿಗ್ಧಮಂಜರೀಜಾಲಮಲಿನೇತ್ರೇಣ ಭಾಸಿನಾ || ೨೦ ||

ಸಾಯಂಕಾಲದ ಮೇಘ ಜಾಲಗಳೆಂಬ ತಮ್ಮ ಕೇಶಪಾಶಗಳನ್ನು ಈ ಮರದ ಮೇಲೆ ನಿಕ್ಷೇಪವಾಗಿ (ನ್ಯಾಸ) ಇಟ್ಟಿರುವುವೋ ಎಂಬಂತೆ ತೋರುತ್ತಿತ್ತು.

[ನಿಕ್ಷೇಪ =ನ್ಯಾಸ= ಕಾಲಾಂತರದಲ್ಲಿ ಪುನಃ ತೆಗೆದುಕೊಳ್ಳುವ ಉದ್ದೇಶದಿಂದ ಈಗ ಇನ್ನೊಬ್ಬರ ವಶದಲ್ಲಿ ಜೋಪಾನವಾಗಿ ಇರಿಸಿದ ವಸ್ತು.]

೧೯-೨೦. ಆ ಕದಂಬ ವೃಕ್ಷದ ಬುಡದಿಂದ ಮೊದಲ್ಗೊಂಡು ತುದಿಯವರೆಗೂ ವನದೇವತೆಗಳು ಗುಂಪು ಗುಂಪಾಗಿ ಆವಾಸಮಾಡಿಕೊಂಡಿರುವಂತೆ ತೋರುತ್ತಿತ್ತು. ಆ ಕದಂಬ ವೃಕ್ಷದ ಚಿಗುರುಗಳೇ ಆ ವನದೇವಿಯರ ಕೆಂಪಾದ ಹಸ್ತಗಳಂತೆ ಕಾಣುತ್ತಿದ್ದುವು. ಪುಷ್ಪಗಳೇ ಅವರ ಮಂದಹಾಸದಂತೆ ಶೋಭಿಸಿದುವು. ಮಕರಂದವೆಂಬ ಮಧುಪಾನದಿಂದ ಅವರು ಭ್ರಮಿಸುತ್ತಿದ್ದರು. ಕೇಸರಗಳು ಮರದ ಮೇಲೆಲ್ಲಾ ತುಂಬಿಕೊಂಡಿದ್ದ ಕಾರಣ ಅವು ವನದೇವಿಯರ ಮೈ ಮೇಲಣ ರೋಮಾಂಚಗಳಂತೆ (ವ್ಯಾಪಿಸಿಕೊಂಡಿದ್ದವು) ಕಾಣಿಸಿದವು. ಆ ವನದೇವಿಯರು ಹೂವುಗಳಿಂದ ನಿಬಿಡವಾಗಿ (ಒತ್ತಾಗಿ-ದಟ್ಟವಾಗಿ) ಪೂರ್ಣರಾಗಿದ್ದರು. ಕಾಡಿನಲ್ಲಿ ಬೀಸುತ್ತಿದ್ದ ವಾಯುವಿನಿಂದ ಮರವು ಚಲಿಸಿದಾಗಲೆಲ್ಲ-ಆ ವನದೇವಿಯರು ನರ್ತನ ಮಾಡುತ್ತಿರುವಂತೆ ತೋರುತ್ತಿತ್ತು. ಮರದ ತುಂಬ ಮೊಗ್ಗುಗಳು ಬಿಟ್ಟಿರುವುದರಿಂದ-ಅವರು ನಿದ್ರೆಯಿಂದ ಕಣ್ಣುಮುಚ್ಚಿಕೊಂಡಿರುವಂತೆ ಕಂಡಿತು. ಆ ವನದೇವಿಯರು ಮರದ ಪುಷ್ಪಗಳ ಗೊಂಚಲುಗಳೆಂಬ ಸ್ತನ ಮಂಡಲಗಳಿಂದ ವಿಭೂಷಿತೆಯ

ಅವಶ್ಯಾಯೋಪಶಮಿತರತಿಖೇದೈರ್ಮದಾಲಸೈಃ ।
ಪುಷ್ಪಧೂಲಸಮಾಲಬ್ಧೈರಾಶ್ಲಿಷ್ಟೈರ್ನಿಬಿಡಂ ಮಿಥಃ ॥ ೨೧ ॥

ಪುಷ್ಪಾಂತರಾಂತಃಪುರಗೈಃ ಕಿಮಪಿ ಪ್ರಣಯೋಚಿತಂ ।
ಧ್ವನದ್ಭಿರಭಿತಃ ಸ್ವಚ್ಛಮತ್ತಾಲಿಯುಗಲೈರ್ವೃತಂ ॥ ೨೨ ॥

ಕಾನನೋಪಾಂತನಗರೀಘುಂಘುಮಾಕರ್ಣನೇಚ್ಛಯಾ ।
ಕ್ಷಣಮುತ್ಕರ್ಣಮಾಶಾಂತಚಾರುವರ್ಣಟಾಂಕೃತೈಃ ॥ ೨೩ ॥

ರಾಗಿರುವಂತೆ ಭಾವಿಸಿದರು. ಪುಷ್ಪ ಪರಾಗಗಳ ರಾಶಿಗಳು ವನದೇವಿಯರು ಉಟ್ಟಿರುವ ಕೆಂಪು ಸೀರೆಗಳಂತೆ ಇದ್ದುವು. ಲತಾ ಸಮೂಹಗಳೆಂಬ ಮನೆಗಳ ಮಧ್ಯದಲ್ಲಿರುವ ಅವಕಾಶವೆಂಬ ಗವಾಕ್ಷ (ಕಿಟಕಿಗಳಲ್ಲಿ) ಗಳಲ್ಲಿ ಅವರು ಕುಳಿತುಕೊಂಡಿರುವಂತೆ ತೋರಿದವು. ವನದೇವಿಯರು ನೀಲವರ್ಣದ ಹೂಗಳು ಬಿಟ್ಟಿರುವ ಲತೆಗಳಿಂದ ಉಯ್ಯಾಲೆಗಳನ್ನು ಕಟ್ಟಿಕೊಂಡು ಅವುಗಳಲ್ಲಿ ಕುಳಿತು ವಿಹರಿಸುತ್ತಲೂ ಕುಣಿದಾಡುತ್ತಲೂ ವಿನೋದಪಡುತ್ತಿರುವಂತೆ ಕಂಡಿತು. ಮರದಲ್ಲಿ ವಾಸವಾಗಿರುವ ಕೋಗಿಲೆಗಳ ಪಂಚಮ ರಾಗಗಳೇ ವನದೇವಿಯರ ಸಂಲ್ಲಾಪಗಳಾಗಿದ್ದುವು. ಕುಸುಮ ಮಂಜರಿಗಳೋ ಎಂಬ ಭ್ರಾಂತಿಯನ್ನುಂಟುಮಾಡುವ ಭ್ರಮರಗಳೆಂಬ ನೇತ್ರಗಳಿಂದ ವನದೇವಿಯರು ವಿರಾಜಿಸುತ್ತಿದ್ದರು. ಇಂತಹ ವನದೇವಿಯರು ಆ ವೃಕ್ಷದಲ್ಲಿ ಬುಡದಿಂದ ತುದಿವರೆಗೆ ಮನೆಮಾಡಿಕೊಂಡು ವಾಸಿಸುತ್ತಿರುವಂತೆ ತೋರಿತು.

೨೧-೨೨. ಹಿಮದ ಬೀಳುವಿಕೆಯಿಂದ ತಮ್ಮ ರತಿ ಖೇದವನ್ನೂ ನಿವಾರಣೆ ಮಾಡಿಕೊಂಡವುಗಳಾಗಿಯೂ, ಮಧುಪಾನದಿಂದ ಏರಿದ ಮದದಿಂದ ಅತ್ಯಂತ ಜಡವಾಗಿಯೂ (ಚಟುವಟಿಕೆ ಇಲ್ಲದವುಗಳೂ) ಪುಷ್ಪ ಪರಾಗಗಳಿಂದ ವಿಲಿಪ್ತಗಳಾಗಿಯೂ ಅನ್ಯೋನ್ಯವಾಗಿ ರಹಸ್ಯವಲ್ಲಿ ಗಾಢಾಲಿಂಗನೆ ಮಾಡಿದವುಗಳಾಗಿಯೂ, ಪುಷ್ಪಗಳ ಮಧ್ಯ ಭಾಗಗಳೆಂಬ ಅಂತಃಪುರಗಳಲ್ಲಿ ವಿಲಾಸಗೊಂಡು ವಾಸವಾಗಿರತಕ್ಕವುಗಳಾಗಿಯೂ, ತಮ್ಮ ತಮ್ಮ ಪ್ರಣಯುಗಳಿಗೆ ತಕ್ಕಂತೆ ತತ್ಕಾಲೋಚಿತವಾದ ಯಾವುದೋ ಒಂದು ಬಗೆಯ ಧ್ವನಿಮಾಡತಕ್ಕವುಗಳಾಗಿಯೂ ಇರುವ ಅನೇಕಗಳಾದ ನಿರ್ಮಲಗಳಾದ ಮದಿಸಿದ ಭ್ರಮರ ದಂಪತಿಗಳಿಂದ (ಮಿಥುನ) ಆ ಕದಂಬ ವೃಕ್ಷವು ಸುತ್ತಲೂ ಆವೃತವಾಗಿದ್ದಿತು.

೨೩. ದಿಕ್ಕುಗಳ ಪ್ರಾಂತಗಳಲ್ಲಿ ವರ್ಣವೆಂಬ ಕಪ್ಪು ನೊಣಗಳು ಮಧುರ

ಕ್ಷಣಂ ದಲಾಗ್ರ ವಿಶ್ರಾಂತಮುಗ್ಧಮುಗ್ಧಶಿರಸ್ತಯಾ ।
ಪಶ್ಯದ್ಭಿರಿಂದ್ವಂಶುಕವಜ್ಜಾಲಾಮರ್ಣವಮೇಖಲಾಂ ॥ ೨೪ ॥

ವನಸ್ಥಲೀನಾಂ ತನಯೈರ್ನಯೈರ್ಮೂರ್ತಿಮಿವಾಸ್ಥಿತೈಃ ।
ಶುಭೈಃ ಪತ್ರಪುಟೇಷ್ವಂತರ್ಮೃಗೈಃ ಸಾರತಲಾಂತರಂ ॥ ೨೫ ॥

ನೀಡಶ್ವಸತ್ಸುವಿಶ್ವಸ್ತಸುಪ್ತಮಾತ್ರಕಪಕ್ಷಿಣಂ ।
ಪಾಕಚ್ಯುತಫಲೋಪಾಂತಭೂತಕಂಚುಕ ಮಂಡಲೀ ॥ ೨೬ ॥

ಸಂದಿಗ್ಧಮೂಕಭ್ರಮರಂ ಗುಚ್ಛೈಃ ಪೂಜಾಕ್ಷಸೂತ್ರಕೈಃ ।
ಶ್ಯಾಮಲೀಕೃತಪರ್ಯಂತಂ ನೀಡೈಃ ಪಲ್ಲವಮಂಡಿತೈಃ ॥ ೨೭ ॥

ವಾಗಿ ಕೂಗುತ್ತಿದ್ದ ಧ್ವನಿಗಳಿಂದ ಆ ಮರವು, ಆ ಅರಣ್ಯದ ಸಮೀಪದಲ್ಲಿರುವ ಪಟ್ಟಣದ ಮೃಗ ಪಕ್ಷ್ಯಾದಿ ಪ್ರಾಣಿಗಳ ಆಕ್ರೋಶವನ್ನು (ಕೂಗುಗಳನ್ನೂ) ಕೇಳಬೇಕೆಂಬ ಕುತೂಹಲದಿಂದ ಸ್ವಲ್ಪ ಹೊತ್ತು ತನ್ನ ಕಿವಿಗಳನ್ನು ಮೇಲಕ್ಕೆತ್ತಿಕೊಂಡು ಆಲೈಸುತ್ತಿದೆಯೋ ಎಂಬಂತೆ ತೋರಿತು.

೨೪–೨೫. ಆ ವೃಕ್ಷದ ಪಲ್ಲವಗಳೆಂಬ ದಿಂಬುಗಳ ಮೇಲೆ ಕಪಿಗಳೇ ಮೊದಲಾದ ಮೃಗಗಳು ತಮ್ಮ ಚಾಪಲದಿಂದಲೂ ನಿದ್ರಾವೇಶದಿಂದಲೂ ಸ್ವಲ್ಪ ಹೊತ್ತು ನೋಡುವುದಕ್ಕೆ ಬಹು ರಮ್ಯನಾದ್ದ ತಲೆಗಳನ್ನು ಇಟ್ಟುಕೊಂಡು ವಿಶ್ರಾಂತಿ ಪಡೆಯುತ್ತಿದ್ದ ಕಾರಣ ಚಂದ್ರಕಿರಣಗಳಿಂದ ಹೊದ್ದಿಸಲ್ಪಟ್ಟಿದ್ದಂತಹ (ಮುಚ್ಚಲ್ಪಟ್ಟಿದ್ದ) ವನೋಪವನಗಳೆಂಬ ಅಂಗೋಪಾಗಗಳಿಂದ ವಿರಾಜಿಸುತ್ತಲಿದ್ದ ಸಮುದ್ರ ಪರ್ಯಂತವಾದ ಭೂಮಿಯನ್ನು ನೋಡುತ್ತಿದ್ದಂತೆ ಕಂಡವು ಮತ್ತು ಆ ಮೃಗಗಳು ವನಭೂಮಿಯ ಮಕ್ಕಳಂತೆಯೂ ಋಷಿಯ ತಪಃ ಪ್ರಭಾವದಿಂದ ಮೂರ್ತಿ ಮತ್ತಾಗಿ ದೇಹಧಾರಿಗಳಾದ ವಿನಯಗಳಂತೆಯೂ ಇದ್ದುವು. ಹೀಗೆ ಆ ಮೃಗಗಳು ಆ ಮರದ ಪರ್ಣ ಜಾಲಗಳ ಮಧ್ಯ ಭಾಗಗಳಲ್ಲಿ ಗುಂಪು ಗುಂಪಾಗಿ ಅಡಗಿಕೊಂಡಿದ್ದು ಆ ವೃಕ್ಷದ ಮೂಲ ಪ್ರದೇಶವನ್ನೂ (ಕೆಳಗಡೆಯ ಭೂ ಭಾಗವನ್ನೂ) ಕೊಂಬೆ ಮುಂತಾದ ಒಳಭಾಗಗಳನ್ನೂ ಸಾರ್ಥಕವಾದವುಗಳನ್ನಾಗಿಯೂ ಶೋಭಾವಹಗಳನ್ನಾಗಿಯೂ ಮಾಡಿದುವು.

೨೬–೨೭. ಆ ಮರದ ಗೂಡುಗಳಲ್ಲಿ ನಾನಾ ಪಕ್ಷಿ ಜಾತಿಗಳು ಮುನಿ ಪ್ರಭಾವ

ಸುಗಂಧಿತಾಶೇಷವನಂ ಪುಷ್ಪಮೇಘೀಕೃತಾಂಬರಂ ।
ಧೂಲೀಕದಂಬಶಬಲಫಲೌಘವಲಿತಂ ತಲೇ ॥ ೨೮ ॥

ಬಹುನಾತ್ರ ಕಿಮುಕ್ತೇನ ನ ಕಿಂಚಿದಪಿ ವಿದ್ಯತೇ ।
ಪತ್ರಂ ಯತ್ರ ತತೌ ಯತ್ರ ನೋಪ್ಯತೇ ವಾನಯುಜ್ಯತೇ ॥ ೨೯ ॥

ದಿಂದ ನಿಶ್ಶಂಕವಾಗಿ ಮಲಗಿಕೊಂಡ ಕ್ಷಣದಲ್ಲಿಯೇ ಸುಖವಾಗಿ ನಿದ್ರಿಸುತ್ತಿರುವುದು ಅವುಗಳ ಶ್ವಾಸದಿಂದ ಗೊತ್ತಾಗುತ್ತಿತ್ತು. ಆ ಮರದ ಸುಪಕ್ವವಾದ ಹಣ್ಣುಗಳ ಮೇಲೆ ದುಂಬಿಗಳು ಕುಳಿತಿರುವಾಗಲೇ ಆ ಹಣ್ಣುಗಳ ತೊಟ್ಟು ಕಳಚಿ ಕೆಳಗೆ ಬಿದ್ದು ಬಿಡುವುವು. ಆಗ ದುಂಬಿಗಳು ಹಾರಿಹೋದ ಬಳಿಕ, ಆ ಹಣ್ಣುಗಳ ಸುತ್ತಲೂ ಜಿಂಕೆ ಮುಂತಾದ ಪ್ರಾಣಿಗಳು ಬಂದು ಕವಚಪ್ರಾಯವಾಗಿ ಮರೆಯಾಗಿ ನಿಲ್ಲುವುವು. ಅಂತಹ ಪ್ರಾಣಿಗಳ ಗುಂಪನ್ನು ನೋಡಿ ಭ್ರಮರಗಳು ಪ್ರಾಣಭಯದಿಂದ ತಲೆತಪ್ಪಿಸಿಕೊಂಡು ನಿಶ್ಶಬ್ದವಾಗಿ ದೂರಕ್ಕೆ ಸರಿಯುತ್ತಿದ್ದುವು. ಆ ಕಾಲದಲ್ಲಿ ಜಪ ಮಾಡುವುದಕ್ಕಾಗಿ ಕೈಯ್ಯಲ್ಲಿ ಹಿಡಿದುಕೊಂಡಿರುವ ಜಪಮಾಲೆಗಳೋ ಎಂಬಂತೆ ಲತಾಗುಚ್ಛಗಳು (ಬಳ್ಳಿಗಳ ಗೊಂಚಲುಗಳು ನೇತಾಡುತ್ತಿದ್ದುವು. ಪಲ್ಲವ ವಿಭೂಷಿತಗಳಾದ ಹಕ್ಕಿಗಳ ಗೂಡುಗಳಿಂದ ಸಮೀಪದ ವನಭಾಗವೆಲ್ಲವೂ ನೀಲವರ್ಣಮಯವಾಗಿ ಶೋಭಿಸಿತು.

೨೮. ಆ ವೃಕ್ಷವು ಆ ಅರಣ್ಯವನ್ನೆಲ್ಲ ಸುಗಂಧಮಯವನ್ನಾಗಿ ಮಾಡಿತು. ಗಗನಮಂಡಲವನ್ನೂ ಪುಷ್ಪಮಯಗಳಾದ ಮೇಘಗಳಿಂದ ಆವೃತವಾಗಿರುವ ಹಾಗೆ ಕಾಣುವಂತೆ ಮಾಡಿತು. ಆ ವೃಕ್ಷದ ಬುಡದಲ್ಲಿ ಧೂಳಿಯ ರಾಶಿಯ ಮೇಲೆ ನಾನಾ ಬಣ್ಣಗಳ ಹಣ್ಣುಗಳು ರಾಶಿ ರಾಶಿಯಾಗಿ ಬಿದ್ದು ಮುಚ್ಚಿಕೊಂಡು ಹೋಗಿದ್ದುವು.

೨೯. ಅಯ್ಯ ರಾಮ, ಈಗ ಬಹಳ ಹೇಳಿ ಪ್ರಯೋಜನವೇನು? (ಆ ಮರವನ್ನು) ಎಷ್ಟು ವರ್ಣಿಸಿದರೂ ಸಾಲದು. (ವರ್ಣನೆ ಮಾಡಲು ನನಗೆ ಶಕ್ತಿಯೂ ಇಲ್ಲ.) ಆ ಕದಂಬ ವೃಕ್ಷದಲ್ಲಿ ಪಕ್ಷಿಗಳಿಂದ ವಾಸಮಾಡಲ್ಪಡದೆಯೂ ಅಥವಾ ಇತರ ಪ್ರಾಣಿಗಳಿಂದ ಯಾವದಾದರೊಂದು ವಿಧದಲ್ಲಿ ಉಪಯೋಗಿಸಲ್ಪಡದೆಯೂ ಇರುವ ಒಂದೆಲೆಯೂ ಕೂಡ ಇರಲೇ ಇಲ್ಲ.

ಕಚ್ಛೇ ಕಚ್ಛೇ ಖಗಾ ಲೀನಾಸ್ತಸ್ಯ ಭೂರುಹಭೂಪತೇಃ ।
ಪತ್ರೇಪತ್ರೇ ಮೃಗಾಃ ಸುಪ್ತಾ ವಿಶ್ರಾಂತಾಶ್ಚ ಪದೇ ಪದೇ ॥ ೩೦ ॥

ಏವಂಗುಣವಿಶಿಷ್ಟಂ ತಂ ಸಮಾಲೋಕಯತೋ ಮಮ ।
ಮಹೋತ್ಸವೇನ ಸದೃಶೀ ಸಾ ಬಭೂವ ತಮಸ್ವಿನೀ ॥ ೩೧ ॥

ತತಃ ಕಥಾಭೀ ರಮ್ಯಾಭಿಃ ಸ ತಸ್ಯ ತನಯೋ ಮಯಾ ।
ವಿಜ್ಞಾನಾಲೋಕರಮ್ಯಾಭಿರ್ನೀತೋ ಬೋಧಂ ಪರಂ ಪುನಃ ॥ ೩೨ ॥

ಆವಯೋಸ್ತತ್ರ ಚಿತ್ರಾಭಿಃ ಕಥಾಭಿರಿತರೇತರಂ ।
ಶರ್ವರೀ ಸಾ ವ್ಯತೀಯಾಯ ಮುಹೂರ್ತ ಇವ ಕಾಂತಯೋಃ ॥ ೩೩ ॥

---

೩೦. ಆ ವನದಲ್ಲಿ ಬೆಳೆದಿರುವ ವೃಕ್ಷಗಳಿಗೆಲ್ಲಾ ಅಧಿರಾಜನಂತಿರುವ ಆ ಕದಂಬ ವೃಕ್ಷದ ಪ್ರತಿಯೊಂದು ಪತ್ರದ ಮೇಲೆಯೂ ಮೃಗಗಳು ಮಲಗಿಕೊಂಡಿದ್ದುವು. ಒಂದೊಂದು ಭಾಗದಲ್ಲಿಯೂ ನಾನಾವಿಧ ಮೃಗಗಳು ವಿಶ್ರಮಿಸಿಕೊಂಡಿದ್ದುವು. ಎಲೆ ಮುಂತಾದುವುಗಳ ಕೆಳಗಡೆಯಲ್ಲೆಲ್ಲ ಹಕ್ಕಿಗಳು ಬಂದು ಅಡಗಿಕೊಂಡಿದ್ದುವು.

೩೧. ಇಂತಹ ಸರ್ವೋಪಕಾರಕ್ಷಮವಾಗಿ ಬಹು ಶ್ಲಾಘ್ಯವಾದ ಗುಣಗಳಿಂದ ವಿಶಿಷ್ಟವಾಗಿರುವ ಆ ಕದಂಬ ವೃಕ್ಷವನ್ನು ನೋಡುತ್ತಲಿದ್ದ ನನಗೆ ಆ ರಾತ್ರಿಯು ದೊಡ್ಡಮಹೋತ್ಸವ ಸದೃಶವಾಗಿ ಬಹು ಸಂತೋಷದಿಂದ ಕಳೆಯಿತು.

೩೨. ತರುವಾಯ ಶಾಸ್ತ್ರೀಯವಾದ ತತ್ತ್ವಜ್ಞಾನಬೋಧಕಗಳಾಗಿ ಅತ್ಯಂತ ರಮಣೀಯವಾದ ಅತಿವಿಚಿತ್ರಗಳಿಂದ ಕಥೋಪನ್ಯಾಸಗಳಿಂದ, ನಾನೂ ಆ ದಾಶೂರನ ಮಗನಿಗೆ ಮತ್ತೂ ಹೆಚ್ಚಾಗಿ ಆತ್ಮಜ್ಞಾನವು ಪ್ರಕಾಶಿಸುವಂತೆ ಮಾಡಿದೆನು. (ತತ್ತ್ವೋಪದೇಶ ಮಾಡಿದೆನು).

೩೩. ಹೀಗೆ ಒಬ್ಬರಿಗೊಬ್ಬರು ವಿಚಿತ್ರಗಳಿಂದ ನಾನಾ ಕಥಾಪ್ರಸ್ತಾಪಗಳನ್ನು ಹೇಳುತ್ತಲೂ, ಕೇಳುತ್ತಲೂ, ನಾವಿಬ್ಬರೂ ಅನ್ಯೋನ್ಯ ಪ್ರೀತ್ಯಾದರಗಳಿಂದ ಕೂಡಿದವರಾಗಿ ಆ ರಾತ್ರಿಯನ್ನು ಒಂದು ಮುಹೂರ್ತದಂತೆ ಅತಿ ವಿನೋದದಿಂದ ಕಳೆದೆವು.

ಪ್ರಾತಃ ಪ್ರತನುತಾಂ ಯಾತೇ ಪುಷ್ಪದ್ಧಿರ್ಘನಜಾಲಕೇ ।
ಸ್ವರ್ಗಾಂಗನಾಂಗಭೋಗಾಭೇ ತಾರಕಾನಿಕರೇ ಶನೈಃ ॥ ೩೪ ॥

ಆಕದಂಬನಭೋಭಾಗಮುಪಯಾತಂ ಸುತಾನ್ವಿತಂ ।
ಅಹಂ ವಿಸೃಜ್ಯ ದಾಶೂರಂ ತತೋಽಮರನದೀಂ ಗತಃ ॥ ೩೫ ॥

ತತ್ರಾಭಿಮತಮಾಸಾದ್ಯ ಸ್ಥಾನಮೇತ್ಯ ನಭಸ್ತಲಂ ।
ಪ್ರವಿಶ್ಯ ಖಂ ಮುನೀನಾಂ ಚ ಮಧ್ಯಂ ಸ್ವಸ್ಥ ಇವಸ್ಥಿತಃ ॥ ೩೬ ॥

ದಾಶೂರಾಖ್ಯಾಯಿಕೈಷಾ ತೇ ಕಥಿತಾ ರಘುನಂದನ ।
ಜಗತಃ ಪ್ರತಿಬಿಂಬಾಭಾ ಸತ್ಯಾಕಾರಾಪ್ಯಸನ್ಮಯೀ ॥ ೩೭ ॥

ದಾಶೂರಾಖ್ಯಾಯಿಕೇವೇಯಮಿತ್ಯೇತತ್ಕಥಿತಂ ಮಯಾ ।
ತುಭ್ಯಂ ರಾಘವ ಬೋಧಾಯ ಜಗದ್ರೂಪನಿರೂಪಣೇ ॥ ೩೮ ॥

೩೪-೩೫. ಮಾರನೆಯದಿನ ಬೆಳಿಗ್ಗೆ ಆ ಕದಂಬವೃಕ್ಷದ ಪುಷ್ಪಸಮೃದ್ಧಿಗಳ ನಿಬಿಡವಾದ ರಾಶಿಯೋ ಎಂಬಂತೆಯೂ ಅಪ್ಸರ ಸ್ತ್ರೀಯರ ದೇಹಗಳಿಂದ ಜಾರಿದ ರತಿ ಖೇದದಿಂದ ಉತ್ಪನ್ನವಾದ ಸ್ವೇದಬಿಂದುಗಳ ಸಮುದಾಯವೋ ಎಂಬಂತೆಯೂ ಕಾಣುತ್ತಿದ್ದ ನಕ್ಷತ್ರಗಳ ಸಮೂಹಗಳು ಕ್ರಮೇಣ ಅದೃಶ್ಯವಾಗಲಾಗಿ ದಾಶೂರ ಮುನಿಯು ತನ್ನ ಮಗನೊಡನೆ ಆ ಕದಂಬ ವೃಕ್ಷದ ಶಾಖಾಗ್ರದವರೆವಿಗೂ ಬಂದು ಆದರದಿಂದ ನನ್ನನ್ನು ಬೀಳ್ಕೊಟ್ಟನು. ಬಳಿಕ, ನಾನು ಅವರನ್ನು ಹಿಂದಕ್ಕೆ ಕಳುಹಿಸಿ ಸ್ನಾನ ಸಂಧ್ಯಾದಿ ಆಹ್ನಿಕಗಳನ್ನು ಮಾಡುವುದಕ್ಕಾಗಿ ದೇವಗಂಗಾನದಿಗೆ ಹೋದೆನು.

೩೬. ಅಲ್ಲಿ ನನಗೆ ಅಭಿಮತವಾದ ಪ್ರದೇಶಕ್ಕೆ ಹೋಗಿ ಗಗನತಲವನ್ನು ಸೇರಿ ಅಲ್ಲಿಂದ ದೇವಲೋಕವನ್ನು ಪ್ರವೇಶಿಸಿ ಅಲ್ಲಿಯ ಮುನಿಮಂಡಲದ ಮಧ್ಯದೊಳಗೆ ಸ್ವಸ್ಥನಾಗಿ ಸುಖದಿಂದ ಇದ್ದೆನು.

೩೭. ಅಯ್ಯ ರಘುನಂದನ, ಇದೋ ಈ ರೀತಿಯಾಗಿ ಜಗತ್ತಿನ ಪ್ರತಿಬಿಂಬವೋ ಎಂಬಂತೆ ತೋರುವ ಮತ್ತು ಸತ್ಯಾಕಾರವಾಗಿದ್ದರೂ ವಸ್ತುತಃ ಅಸತ್ಯಭೂತವಾದ ದಾಶೂರೋಪಾಖ್ಯಾನವನ್ನು ನಾನು ನಿನಗೆ ಹೇಳಿರುವೆನು.

೩೮. ಅಯ್ಯಾ ರಾಘವ, ಹಿಂದೆ ನಾನು ನಿನಗೆ ಜಗತ್ತಿನ ಸ್ವರೂಪವನ್ನು ನಿರೂಪಣೆಮಾಡಿರುವ ಸಂದರ್ಭದಲ್ಲಿ ಸುಸ್ಪಷ್ಟವಾಗಿ ಆ ವಿಚಾರವು ನಿನಗೆ ತಿಳಿಯುವುದ

ತಸ್ಮಾದವಾಸ್ತವೀಂ ತ್ಯಕ್ತ್ವಾ ವಾಸ್ತವೀಮಪಿ ರಂಜನಾಂ ।
ದಾಶೂರಸಿದ್ಧಾಂತದೃಶಾ ಸದೋದಾರೋ ಭವಾತ್ಮವಾನ್ ॥ ೩೯ ॥

ತಸ್ಮಾದ್ವಿಕಲ್ಪಂ ಮಲಮಾತ್ಮನಸ್ತ್ವಂ
ನಿರ್ಧೂಯ ಪಶ್ಯಾಮಲಮಾತ್ಮತತ್ತ್ವಂ ।
ಆಸಾದಯಿಷ್ಯಸ್ಯಚಿರಾತ್ಪದಂ ತತ್
ಭವಿಷ್ಯಸೀಜ್ಯೋ ಭುವನೇಷು ಯೇನ ॥ ೪೦ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕೀಯೇ ಸ್ಥಿತಿ ಪ್ರಕರಣೇ
ದಾಶೂರೋಪಾಖ್ಯಾನೇ "ವಸಿಷ್ಠ ದಾಶೂರಮೇಲನಂ" ನಾಮ ಪಂಚಪಂಚಾಶಃ ಸರ್ಗಃ

ಕ್ಯೋಸ್ಕರವಾಗಿ "ಇದು ದಾಶೂರೋಪಾಖ್ಯಾನದಂತೆ ಇರುವುದು" ಎಂದು ಹೇಳಿದ್ದೆ ನಲ್ಲವೆ. !

೩೯. ಅಯ್ಯಾ ರಾಮ, ಅದುಕಾರಣ, ನೀನು ಈಗ ಅಸತ್ತಾಗಿಯೂ ಇರುವ ಎರಡು ವಿಧವಾದ ವಿಷಯಗಳಲ್ಲಿರುವ ಅನುರಾಗವನ್ನು ಪರಿತ್ಯಜಿಸಿ ದಾಶೂರೋಪಾಖ್ಯಾನದಲ್ಲಿ ಉಪದಿಷ್ಟವಾದ ಸಿದ್ಧಾಂತ ದೃಷ್ಟಿಯಿಂದ ಆತ್ಮತತ್ವವನ್ನು ಚೆನ್ನಾಗಿ ಮನನ ಮಾಡಿ ಸರ್ವದಾ ಉದಾರನಾಗಿಯೂ (ಅಕೃಪಣ-ಮಹಾತ್ಮ) ಆತ್ಮೈಕನಿಷ್ಠನಾಗಿಯೂ ಇರು.

೪೦. ಅಯ್ಯ ರಾಮ, ಆದಕಾರಣ, ಇನ್ನು ನೀನು, ಆತ್ಮನಿಗೆ ಮಲದಂತಿರುವ ವಿಕಲ್ಪ ಜಾಲವನ್ನು ಅಂಟಿಸಿಕೊಳ್ಳದೆ ಚೆನ್ನಾಗಿ ಕೊಡಹಿ ಕಳೆದುಕೊಂಡು, ನಿರ್ಮಲವಾದ ಆತ್ಮತತ್ತ್ವವನ್ನು ಕಾಣುವವನಾಗು. ಹೀಗೆ ನಾನು ಹೇಳಿದಂತೆ ಮಾಡುವುದರಿಂದ ನೀನು ಶೀಘ್ರದಲ್ಲಿಯೇ ಆ ಪರಮಪದವನ್ನು ಹೊಂದುವೆ. ಇದರಿಂದ ನೀನು ಲೋಕದಲ್ಲಿ ಸರ್ವತ್ರ ಸರ್ವರಿಗೂ ಪೂಜ್ಯನಾಗುವೆ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ವಸಿಷ್ಠ ದಾಶೂರಮೇಲನ" ಎಂಬ
ಐವತ್ತೈದನೆಯ ಸರ್ಗವು.

ಷಟ್‌ಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚ:--

ನಾಸ್ತೀದಮಿತಿ ನಿರ್ಣೀಯ ಸರ್ವತಸ್ತ್ಯಜ ರಂಜನಾಂ ।
ಯನ್ನಾಸ್ತಿ ತತ್ಪ್ರತಿ ಕಿಲ ಕೇವಾಸ್ಥೇಹ ವಿಚಾರಿಣಾಂ ॥ ೧ ॥

ದೃಶ್ಯಮಾನಮಥೇದಂ ಚೇದಸ್ತಿ ಸತ್ತಾಮುಪಾಗತಂ ।
ತಿಷ್ಠ ಸ್ವಾತ್ಮನಿ ಬಧ್ನಾಸಿ ತ್ವಂ ಕಿಮತ್ರ ಕಿಲಾತ್ಮತಾಂ ॥ ೨ ॥

ಐವತ್ತಆರನೆಯ ಸರ್ಗ

೧. ಅಯ್ಯ ರಾಮಭದ್ರ, ನೀನು ಶಾಸ್ತ್ರಾಚಾರ್ಯೋಪದೇಶಗಳಿಂದಲೂ ಯುಕ್ತ್ಯನುಭವಗಳಿಂದಲೂ ಈ ದೃಶ್ಯ ಜಗತ್ತೆಲ್ಲವೂ ಇಲ್ಲವೇ ಇಲ್ಲವೆಂದು ವಿಚಾರ ಮಾಡಿ ದೃಢನಿರ್ಣಯ ಮಾಡಿಕೊಂಡು ಇದರಲ್ಲಿ ನಿನಗಿರುವ ("ಅಹಂ-ಮಮ") ಅಹಂಕಾರ ಮಮಕಾರ ಸಂಸರ್ಗ ತಾದಾತ್ಮ್ಯಾಧ್ಯಾಸ ರೂಪವಾದ ಅನುರಾಗವನ್ನು ಸರ್ವತ್ರ ಪರಿತ್ಯಾಗ ಮಾಡು. ವಿಚಾರಪರರಾದ ವಿವೇಕಿಗಳಿಗೆ ಸುತರಾಂ (ಸರ್ವದಾ) ಇಲ್ಲದೇ ಇರುವ ವಸ್ತುವಿನ ವಿಷಯದಲ್ಲಿ ಆಸ್ಥೆ (ಆಸಕ್ತಿ)ಯಾವುದು ತಾನೆ ಇರುವುದು ?

೨. ದೃಶ್ಯವಾದ ಈ ದೇಹಾದಿ ಜಗತ್ತು ನಿನ್ನ (ಆತ್ಮನ) ಸತ್ತೆಯನ್ನು (ಸದ್ಭಾವ) ಅಪೇಕ್ಷಿಸದೆ ಸ್ವತಂತ್ರವಾದ ಸತ್ತೆಯನ್ನು ಪಡೆದು ಸತ್ ಆಗಿರುವುದು ಎಂದು ನೀನು ಹೇಳುವೆಯಾದರೆ, ಆಗ ನೀನೂ ಕೂಡ ವಸ್ತುತಃ ಆ ದೇಹಾದಿಗಳ ಸತ್ತೆಯನ್ನು ಅಪೇಕ್ಷಿಸದೆ ಇರುವ (ಸ್ವತಂತ್ರ ಸ್ವಸತ್ತಾಕವಾದ) (ಅಸಂಗೋದಾಸೀನ ಚಿದ್ರೂಪನಾದ) ಆತ್ಮನಲ್ಲಿ ಇರು. ಈ ದೇಹಾದಿಗಳಲ್ಲಿ ಅಧ್ಯಾಸದಿಂದ ನೀನು ಏತಕ್ಕಾಗಿ ಆತ್ಮಬುದ್ಧಿಯನ್ನು ಇಡುವೆ. ಹೀಗೆ ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನಿಡುವುದು ನಿನಗೆ ಉಚಿತವಲ್ಲ.

ಅಥ ಚೇದಸ್ತಿ ನಾಸ್ತೀದಮಿತಿ ನಿಶ್ಚಯವಾನಸಿ ।
ತಥಾಪಿ ಭಾವನಾಸಂಗಃ ಕಥಂ ಯುಕ್ತಶ್ಚಲಾಚಲೇ ॥ ೩ ॥

ನೇದಮಸ್ತಿ ಜಗದ್ರಾಮ ತವ ನಾಸ್ತಿ ಮಹಾಮತೇ ।
ಕೇವಲಂ ಸ್ವಚ್ಛಮೇವೇತ್ಥಂ ಯಾತತಂ ಮಿತಮಿದೃಶಂ ॥ ೪ ॥

(ತಿಷ್ಠ ಸ್ವಾತ್ಮನಿ ಎಂಬ ಪಾಠವನ್ನು ಅನುಸರಿಸಿ ಮೇಲಣ ಅರ್ಥವನ್ನು ಬರೆದಿದೆ. ತಿಷ್ಠತು*ಆತ್ಮನಿ= ತಿಷ್ಠತ್ವಾತ್ಮನಿ ಎಂಬ ಪಾಠಾಂತರವನ್ನಿಟ್ಟುಕೊಂಡರೆ ಆಗ, ದೇಹಾದಿ ಈ ಜಡ ಜಗತ್ತು ಸ್ವತಂತ್ರವಾಗಿ ಸತ್ತೆಯನ್ನು ಪಡೆದು ಇರುವುದೇ ಆದರೆ ಅದು ತನ್ನ ಜಡಸ್ವಭಾವದಲ್ಲಿ ಇದ್ದುಕೊಂಡಿರಲಿ. ನೀನೇಕೆ ಅದರಲ್ಲಿ ಆತ್ಮಭಾವನೆಯನ್ನು ಇಡಬೇಕು ? ಎಂದರ್ಥ.)

ಈ ದೃಶ್ಯ ದೇಹಾದಿ ಜಗತ್ತು ಸತ್ ಎಂದು ಒಂದುವೇಳೆ ತಿಳಿದರೂ ಆಗಲೂ ಅದರಲ್ಲಿ ನಾನು ನನ್ನದು ಎಂಬ ಅಭಿಮಾನವಿಡುವುದು ಉಚಿತವಲ್ಲ. ಎಂದು ಈ ಶ್ಲೋಕದಲ್ಲಿ ಹೇಳಿದ್ದಾಯಿತು.

೩. ಅಥವಾ ಇದು ಇದೆ ಮತ್ತು ಇಲ್ಲ (ಸದಸತ್ ಸ್ವರೂಪ)ವೆಂದು ನೀನು ದೃಢನಿಶ್ಚಯವುಳ್ಳವನಾಗಿರುವುದಾದರೆ ಆಗಲೂ ಚಲಾಚಲವಾದ (ಸತ್ವಾಸತ್ತ್ವಗಳೆರಡೂ ಅನ್ಯೋನ್ಯ ಉಚ್ಛೇದರೂಪವಾಗಿರುವುದರಿಂದ ಅನಿಯತಸ್ವಭಾವವುಳ್ಳ) ಈ ದೇಹಾದಿಗಳಲ್ಲಿ ತಾದಾತ್ಮ್ಯಾಧ್ಯಾಸರೂಪವಾದ ಆತ್ಮಭಾವನೆಯನ್ನು ಇಡುವುದು ಹೇಗೆ ಯುಕ್ತವಾಗುವುದು ?

೪. ಅಥವಾ, ರಾಮ, ಈ ದೇಹಾದಿ ದೃಶ್ಯ ಜಗತ್ತು ಇಲ್ಲವೇ ಇಲ್ಲ (ಅಸತ್) ಎಂದು ನೀನು ದೃಢವಾಗಿ ತಿಳಿದುಕೊಂಡಿದ್ದರೆ ಆಗ ನಿನಗೆ ಬಂಧವೂ ಇಲ್ಲವೇಇಲ್ಲ. ಅದ್ವಿತೀಯವಾದ ನಿತ್ಯ ಶುದ್ಧವಾದ ಆತ್ಮತತ್ವವೇ ಈ ಪ್ರಕಾರವಾಗಿ ಸರ್ವತ್ರ ವಿಸ್ತೀರ್ಣವಾಗಿ ವ್ಯಾಪಿಸಿಕೊಂಡು ಭ್ರಾಂತಿಯಿಂದ ಜಗದ್ರೂಪವಾಗಿ ತೋರುವುದೆಂದು ಪ್ರಮಾಣಗೋಚರವಾಗುವುದು.

ನೇದಂ ಕರ್ತೃಕೃತಂ ಕಿಂಚಿನ್ನ ವಾ ಕರ್ತೃಕೃತಕ್ರಮಂ ।
ಸ್ವಯಮಾಭಾಸತೇ ಚೇದಂ ಕರ್ತ್ರಕರ್ತೃಪದಂ ಗತಂ ॥ ೫ ॥

ಅಕರ್ತೃಕಂ ಜಗಜ್ಜಾಲಂ ಭವತ್ವಥ ಶಕರ್ತೃಕಂ ।
ಮಾ ತ್ವಮೇತೇನ ಶಬಲಂ ಭಾವಯನ್ನಾಸ್ವ ಚೇತಸಿ ॥ ೬ ॥

ಸರ್ವೇಂದ್ರಿಯ ವಿಹೀನಾತ್ಮಾ ಕರ್ತೇವ ಸ ಜಡೋಪಮಃ ।
ಅಕರ್ತೃ ಚ ತದಾ ಮನ್ಯೇ ಕಾಕತಾಲೀಯವಜ್ಜಗತ್ ॥ ೭ ॥

(ಹೀಗೆ ದೇಹಾದಿ ಜಗತ್ತು ಸತ್, ಸದಸತ್, ಅಥವಾ ಅಸತ್, ಎಂದು ಹೇಳುವ ಮೂರು ಪಕ್ಷಗಳಲ್ಲಿಯೂ ಅದರಲ್ಲಿ ಆತ್ಮಭಾವನೆಯನ್ನಿಡುವುದು ಸರ್ವಥಾ ಅನುಚಿತವೆಂದು ತಾತ್ಪರ್ಯ.)

೫. ಮತ್ತೂ ಕೂಡ ಈ ದೃಶ್ಯ ದೇಹಾದಿ ಜಗತ್ತು ಸಕರ್ತೃಕವೇ? (ಯಾವನಾದರೊಬ್ಬ ಕರ್ತೃವಿನಿಂದ ನಿರ್ಮಿತವಾದುದೇ?) ಅಥವಾ ಅಕರ್ತೃಕವೇ? ಅಥವಾ ಕರ್ತೃ ಅಕರ್ತೃ ಸಾಧಾರಣವಾಗಿ ಉದಾಸೀನನಾದ ಆತ್ಮನ ಸನ್ನಿಧಾನ ಮಾತ್ರದಿಂದ ಸ್ವರೂಪವನ್ನು ಪಡೆದು ಸ್ವತಃ ಭಾಸಿಸುತ್ತಲಿರುವುದೇ? ಎಂಬೀ ಮೂರು ಬಗೆಯಾಗಿಯೂ ವಿಚಾರವುಂಟಾಗಬಹುದು.

(ಈ ಮೂರು ಬಗೆಯಲ್ಲಿಯೂ ನೀನು ಜಗತ್ತಿನಲ್ಲಿ ಆತ್ಮಬುದ್ಧಿಯನ್ನಿಡುವುದು ಸರ್ವಥಾ ಯುಕ್ತವಲ್ಲ ಎಂದರ್ಥವನ್ನು ಸೂಚಿಸಿದೆ.)

೬. ಈ ಜಗಜ್ಜಾಲವು ಸಕರ್ತೃಕವಾದರೂ ಆಗಲಿ. ಅಥವಾ ಅಕರ್ತೃಕವಾದುದಾಗಿಯಾದರೂ ಇರಲಿ. ನೀನು ಅನ್ಯೋನ್ಯತಾದಾತ್ಮ್ಯಾಧ್ಯಾಸದಿಂದ ಈ ಜಗತ್ತಿನೊಡನೆ ಐಕ್ಯವನ್ನು ಪಡೆವಂತೆ ದೇಹಾದಿಗಳಲ್ಲಿ ಆತ್ಮಭಾವವನ್ನು ಇಟ್ಟು ಮನಸ್ಸಿನಲ್ಲಿ ಭಾವನೆ ಮಾಡುತ್ತಾ ಇರಬೇಡ.

೭. ಯತ್ತದದ್ರೇಶ್ಯಂ ಅಗ್ರಾಹ್ಯಂ ಅವರ್ಣಂ ಅಚಕ್ಷುಃಶ್ರೋತ್ರಂತದಪಾಣಿಪಾದಂ । ನಿತ್ಯಂವಿಭುಂ ಸರ್ವಗತಂ ಸುಸೂಕ್ಷ್ಮಂತದವ್ಯಯ. ಭೂತಯೋನಿಂ ಪರಿಪಶ್ಯಂತಿಧೀರಾಃ (ಮುಂಡಕ ೧-೧-೬) ಇತ್ಯಾದಿ ಸಾವಿರಾರು ಶ್ರುತಿಗಳು ಆತ್ಮನು (ಬ್ರಹ್ಮವು) ಅಸಂಗನೂ ಉದಾಸೀನನೂ ಚಕ್ಷುರಾದಿ ಸಕಲೇಂದ್ರಿಯ

ಕಾಕತಾಲೀಯಯೋಗೇನ ಜಾತಂಯತ್ಕಿಂಚಿದೇವ ತತ್ ।
ತಸ್ಮಿನ್ ಭಾವಾನುಸಂಧಾನಂ ಬಾಲೋ ಬಧ್ನಾತಿ ನೇತರಃ ॥ ೮ ॥

ವಿಹೀನನೂ ಅವಿಕ್ರಿಯನೂ ಆಗಿರುವನೆಂದು ಉದ್ಘೋಷಿಸುತ್ತಿರುವುವು. ಅದು ಕಾರಣವೇ ಜಡವಾದ ಪರ್ವತಾದಿಗಳಂತೆ ಅಚಲನು. ಮೇರು ಪರ್ವತವು ಸೂರ್ಯನನ್ನು ಸುತ್ತಿಸುತ್ತಿರುವುದು ಎಂಬ ವ್ಯವಹಾರವು ಹೇಗೆ ಔಪಚಾರಿಕವಾಗಿ ರೂಢವಾಗಿರುವುದೋ ಹಾಗೆಯೇ ಅಸಂಗನೂ ಅಚಲನೂ ಆದ ಆತ್ಮನು (ಈಶ್ವರ ಪರಬ್ರಹ್ಮ) ಜಗತ್ತನ್ನು ಸೃಷ್ಟಿಸುವವನು ಎಂಬ ವ್ಯವಹಾರವೂ ಔಪಚಾರಿಕವಾದುದು. ಅಂದರೆ ಪರಮೇಶ್ವರನು ಜಗತ್ಕರ್ತೃವಿನಂತೆ ತೋರುವನೇ ಹೊರತು (ನಿಜವಾಗಿಯೂ) ವಸ್ತುತಃ ಕರ್ತೃವಾಗಿಲ್ಲವು.

"ಯತೋವಾ ಇಮಾನಿ ಭೂತಾನಿ ಜಾಯಂತೇ" (ತೈತ್ತಿರೀಯ) "ವಿಶ್ವಸ್ಯ ಕರ್ತಾರ್ಭುವನಸ್ಯ ಗೋಪ್ತಾ" (ಮಹಾನಾರಾಯಣ) ಇತ್ಯಾದಿ ಬ್ರಹ್ಮನಿಂದ ಜಗತ್ತು ಸೃಷ್ಟಿಸಲ್ಪಟ್ಟಿತು ಎಂದು ಹೇಳುವ ಶ್ರುತಿವಾಕ್ಯಗಳಿಗೆಲ್ಲಾ (ಕಾರ್ಯಕಾರಣಗಳಿಗೆ ಐಕ್ಯವನ್ನು ಹೇಳಿ.) ಜಗನ್ಮಿಥ್ಯಾತ್ವವನ್ನು ಪ್ರತಿಪಾದನೆ ಮಾಡುವುದೇ ತಾತ್ಪರ್ಯವು ಎಂಬೀರಹಸ್ಯವು ಯಾವಾಗ ಚೆನ್ನಾಗಿ ನಿರ್ಣೀತವಾಗುವುದೋ ಆಗ ಕಾಕತಾಳೀಯ ನ್ಯಾಯದಿಂದ ಪರಿದೃಶ್ಯಮಾನವಾದ ಈ ಜಗತ್ತು ಅಕರ್ತೃಕವು ಎಂಬ ಜ್ಞಾನವೇ ದೃಢಪಡುವುದೆಂದು ನಾನು ಭಾವಿಸುವೆನು.

(ಹೀಗೆ ಈ ಕಾರಣದಿಂದ ಅಕರ್ತೃಕತ್ವವಾದವು ಉದಯಿಸಿ ಇಲ್ಲಿ ಉಪನ್ಯಸ್ತ ವಾಗಿರುವುದು. "ಯತೋವಾ ಇಮಾನಿ ಭೂತಾನಿ ಜಾಯಂತೇ" ಇತ್ಯಾದಿ ಸೃಷ್ಟಿ ಸ್ಥಿತಿಲಯ: ಪ್ರತಿಪಾದಕವಾದ: ವಾಕ್ಯಗಳು ಪರಬ್ರಹ್ಮನ ತಟಸ್ಥಲಕ್ಷಣ ಬೋಧಕಗಳು ಸತ್ಯಂ ಜ್ಞಾನಮನಂತಂ ವಿಜ್ಞಾನಮಾನಂದಂ ಇತ್ಯಾದಿಗಳು ಸ್ವರೂಪ ಬೋಧಕಗಳು ಕಾರ್ಯವು ಕಾರಣಾನನ್ಯವಾದುದೆಂದು ಆರಂಭಣಾಧಿಕರಣದಲ್ಲಿ ಸುಸ್ಪಷ್ಟವಾಗಿ ಶ್ರೀಮದಾಚಾರ್ಯರವರು ವರ್ಣಿಸಿರುವರು. ನೇಹ ನಾನಾಸ್ತಿಕಿಂಚನ, ಇಂದ್ರೋ ಮಾಯಾಭಿಃ ಪುರುರೂಪಃ ಈಯತೇ ಅಜಾಯಮಾನೋ ಬಹುಧಾಮಾಯಯಾ ಜಾಯತೇತಿಸಃ । ಈ ವಿಷಯವನ್ನು ಹಿಂದೆಯೇ ವಿವರಿಸಲಾಗಿದೆ.)

೮. ಪೂರ್ವೋಕ್ತ ರೀತಿಯಾಗಿ ಕಾಕತಾಳೀಯ ನ್ಯಾಯದಂತೆ ಉದಯಿಸಿರುವ ಈ ಜಗತ್ತು ಅನಿರ್ವಚನೀಯವಾದುದೇ ಸರಿ. ಇಂತಹ ಮಿಥ್ಯಾಜಗತ್ತಿನಲ್ಲಿ ಅತ್ಯಂತ

ನ ಕದಾಚಿದದಿದಂ ಶಾಂತಂ ಜಗದ್ರಾಮ ನಚ ಕ್ಷಯಿ ।
ಅಜಸ್ರಂ ದೃಶ್ಯಮಾನತ್ವಾದ್ಭಾವಿತ್ವಾಚ್ಚ ಪುನಃ ಪುನಃ ॥ ೯ ॥

ನ ಕದಾಚಿದದಿದಂ ಚಾಸ್ತಿ ಜಗದ್ರಾಮ ನಚ ಕ್ಷಯಿ ।
ಅಜಸ್ರಂ ಕ್ಷೀಯಮಾಣತ್ವಾನ್ನಾಸ್ತಿತ್ವಾಚ್ಚಾನುಮಾನತಃ ॥ ೧೦ ॥

ವಿಮೂಢನಾದ ಅವಿವೇಕಿಯು ಅಹಂಕಾರ ಮಮಕಾರರೂಪ ಅಭಿಮಾನದಿಂದ ಪುನಃ ಪುನಃ ಸ್ಮರಣೆ ಮಾಡುವನೇ ಹೊರತು ತತ್ತ್ವಜ್ಞನು ಎಂದಿಗೂ ಅನುಸಂಧಾನ ಮಾಡುವುದಿಲ್ಲ.

೯. ರಾಮ, (ಅತ್ಯಂತಾ ಭಾವ ವಿಷಯ) ಸರ್ವಥಾ ಶೂನ್ಯವಾದುದು ಎಂದೆಂದಿಗೂ ಉತ್ಪನ್ನವಾಗುವುದಿಲ್ಲವು. ಆದರೆ ಈ ಜಗತ್ತು ಸರ್ವದಾ (ನಿರಂತರವೂ) ಪುನಃ ಪುನಃ ಉತ್ಪತ್ತಿ ಹೊಂದುತ್ತಿರುವುದರಿಂದ ಈ ಜಗತ್ತು ಎಂದಿಗೂ ಅತ್ಯಂತಾ ಭಾವ ವಿಷಯವಾದ ಶೂನ್ಯವೆಂದು (ಶಾಂತ) ಹೇಳುವುದಕ್ಕಾಗುವುದಿಲ್ಲ. ಹಾಗೆಯೇ ಪ್ರಧ್ವಂಸಾಭಾವ ವಿಷಯವಾದ (ಕ್ಷಯಹೊಂದಿದ= ಸ್ವಲ್ಪಕಾಲ ಇದ್ದು ನಾಶ ಹೊಂದಿದ) ಶೂನ್ಯಸ್ವಭಾವವುಳ್ಳ ವಸ್ತುವು ದೃಗ್ಗೋಚರವಾಗುವುದು ಅಸಂಭವ. ಆದರೆ ಈ ಜಗತ್ತು ನಿರಂತರವೂ ಕಣ್ಣಿಗೆ ಕಾಣುತ್ತಿರುವುದರಿಂದ ಇದನ್ನು ಕ್ಷಯಿ ಅಂದರೆ ಪ್ರಧ್ವಂಸದಿಂದ ಉಂಟಾಗುವ ಶೂನ್ಯಸ್ವಭಾವವುಳ್ಳದ್ದು) ಎಂದು ಹೇಳುವುದಕ್ಕೂ ಸಾಧ್ಯವಿಲ್ಲ.

೧೦. ರಾಮ, (ಈ ಜಗತ್ತು ಆತ್ಮನಂತೆ ಸರ್ವದಾ ಸತ್ಸ್ವಭಾವವೆಂದಾಗಲಿ ಅಥವಾ ಕ್ಷಣಿಕಸತ್ತಾಸ್ವಭಾವವೆಂದಾಗಲಿ [ಒಂದು ಕ್ಷಣಕಾಲ ಮಾತ್ರ ಇರತಕ್ಕದ್ದು] ಹೇಳುವುದೂ ಯುಕ್ತವಲ್ಲ. ಏಕೆಂದರೆ] ಈ ಜಗತ್ತು ಪ್ರತಿಕ್ಷಣದಲ್ಲಿಯೂ ಅನೇಕ ಪರಿಣಾಮ ಭೇದಗಳಿಂದ ಕ್ಷಯಿಸುತ್ತಿರುವುದು ಸರ್ವಾನುಭವಸಿದ್ಧವೂ ಅದುಕಾರಣ ಜಗತ್ತು ಆತ್ಮನಂತೆ ನಿತ್ಯಸತ್ತಾಸ್ವಭಾವವೆಂದು ಹೇಳಿದ್ದೇ ಆದರೆ ಪೂರ್ವೋಕ್ತ ಅನುಭವಕ್ಕೆ ವಿರೋಧವುಂಟಾಗುವುದು. ಆದುದರಿಂದ ಇದು ಆತ್ಮನಂತೆ ಸತ್ಸ್ವಭಾವ ವೆಂದು ಹೇಳುವದಕ್ಕೆ ಆಗುವುದಿಲ್ಲ. ಮತ್ತು ಭೂತಭವಿಷ್ಯತ್ಕಾಲಗಳಲ್ಲಿ ಯಾವುದು ಅಸತ್ ಆದುದೋ [ಇಲ್ಲವೇ ಇಲ್ಲವೆಂದು ಪ್ರಸಿದ್ಧವೋ ಅದು ವರ್ತಮಾನ ಕಾಲದಲ್ಲಿಯೂ ಅಸತ್ ಎಂದೇ ಅನುಮಾನ ಪ್ರಮಾಣದಿಂದ ಸಿದ್ಧವಾಗುವುದು. ಹೀಗೆ ಕಾಲತ್ರಯದಲ್ಲಿಯೂ ಅಸತ್ತಾಗಿರುವುದಕ್ಕೆ ಸತ್ತ್ವವು ಎಲ್ಲಿಯದು ? ಆದುದರಿಂದ ಈ ಜಗತ್ತನ್ನು ಕ್ಷಣಿಕಸತ್ತಾಸ್ವಭಾವವೆಂದು ಹೇಳಲಿಕ್ಕೂ ಬರುವುದಿಲ್ಲ.

ಸರ್ವೇಂದ್ರಿಯಪದಾತೀತೋ ಯದಾ ಕರ್ತೇಹ ವಿಜ್ವರಃ ।
ಕುರ್ವಾಣಃ ಸರ್ವದಾ ಖೇದಂ ನ ಕದಾಚನ ಗಚ್ಛತಿ ॥ ೧೧ ॥

ತೇನೇಯಂ ನಿಯತಿಃ ಪ್ರೌಢಾ ಭಾವಾಭಾವದಶಾಮಯೀ ।
ಈದೃಶ್ಯೇವ ಸ್ಥಿರಾ ದೀರ್ಘಾ ಮಿಥ್ಯೋತ್ಥಾಪಿ ಚ ದೃಶ್ಯತೇ ॥ ೧೨ ॥

ಅಪರ್ಯಂತಸ್ಯ ಕಾಲಸ್ಯ ಕಶ್ಚಿದಂಶಃ ಶರಚ್ಛತಂ ।
ತಾವನ್ಮಾತ್ರಮಹಾಶ್ಚರ್ಯಃ ಕಿಮರ್ಥಂ ಸೋಽನುಧಾವತಿ ॥ ೧೩ ॥

[ಅಸ್ತಿ= ನಿತ್ಯಸತ್ತಾಸ್ವಭಾವ–ಕ್ಷಯಿ–ಕ್ಷಣಿಕ ಸತ್ತಾಸ್ವಭಾವ ಎಂದು-ತಾ-ಪ್ರ.] [ಆದಾವಂತೇಚಯನ್ನಾಸ್ತಿ ವರ್ತಮಾನೇಪಿ ತತ್ತಥಾ ಎಂಬ ಮಾಂಡೂಕ್ಯ ಕಾರಿಕೆಯಲ್ಲಿ ಈ ಅನುಮಾನವು ಉಕ್ತವಾಗಿದೆ. ಮೊದಲೇ ಟಿಪ್ಪಣಿ ಬರೆದಿದೆ.]

೧೧. ಪರಮಾತ್ಮನು ಸಕಲೇಂದ್ರಿಯಗಳಿಗೂ ಸರ್ವಥಾ ಅಗೋಚರನು. ಸ್ವರೂಪತಃ ಸಕಲೋಪದ್ರವರಹಿತನಾದ ಸಚ್ಚಿದಾನಂದರೂಪನು. ಮತ್ತು ಕೂಟಸ್ಥನು. ಇಂತಹ ಆತ್ಮನ ಸ್ವಭಾವವನ್ನೂ ಪರಿಗಣಿಸದೆ ಕೇವಲ ಸನ್ನಿಧಾನ ಮಾತ್ರದಿಂದಲೇ ನಿಯತಿ [ಸೃಜಿಸಲ್ಪಡಬೇಕಾಗಿರುವ ಪ್ರಾಣಿಗಳ ಕರ್ಮ] ವಶದಿಂದ ಸಂಭವಿಸುವ ಸೃಷ್ಟ್ಯಾದಿ ವ್ಯಾಪಾರಗಳಲ್ಲಿ ಆತ್ಮನಿಗೆ ಕರ್ತೃತ್ವವನ್ನು ಒಂದುವೇಳೆ ಒಪ್ಪಿಕೊಂಡು ಆತ್ಮನು ಸರ್ವದಾ ಜಗತ್ತನ್ನು ಸೃಷ್ಟಿಮಾಡುವವನು ಎಂದು ಹೇಳಿದರೂ ಆ ಆತ್ಮನು ಈ ದೃಶ್ಯದಲ್ಲಿ ಅಭಿಮಾನವನ್ನಿಟ್ಟುಕೊಂಡು ಅದರಿಂದ ಖೇದವನ್ನು ಎಂದೆಂದಿಗೂ ಹೊಂದುವುದಿಲ್ಲ.

೧೨. ಜನನ ಮರಣಾದಿ ನಾನಾ ಅವಸ್ಥೆಗಳಿಂದ ಪ್ರಚುರವಾಗಿರುವ ಈ ನಿಯತಿಯು ಆ ಪರಮಾತ್ಮನಿಂದಲೇ ಅತ್ಯಂತ ಪ್ರೌಢವಾಗಿರುವುದು. ಇಂತಹ ಆ ನಿಯತಿಯೇ ವಸ್ತುತಃ ಮಿಥ್ಯೆಯಾಗಿ [ಸುಳ್ಳಾಗಿಯೇ] ಉದಯಿಸಿದ್ದರೂ ಕೂಡ ಅದು ಸ್ಥಿರವಾಗಿಯೂ ಅತಿ ದೀರ್ಘವಾಗಿಯೂ [ಬಹುಕಾಲವಿರುವುದಾಗಿಯೂ] ಕಾಣಿಸಿಕೊಳ್ಳುತ್ತಿರುವುದು.

೧೩. ಕಾಲವಾದರೋ ಆದ್ಯಂತರಹಿತವಾದುದು. ಮನುಷ್ಯ ದೇಹದ ಆಯುಸ್ಸಿನ ಪರಮಾವಧಿ ಕಾಲವಾದ ನೂರು ವರ್ಷವು ಆ ಕಾಲದ ಯಾವುದೋ ಒಂದು ಅತ್ಯಂತ ಸೂಕ್ಷ್ಮವಾದ ಅಂಶವಾಗಿರುವುದು. ಅನಾದ್ಯನಂತಗಳಾದ ಪೂರ್ವೋತ್ತರ ಕಾಲಗಳಲ್ಲಿ ಎಂದೆಂದಿಗೂ ಸರ್ವಥಾ ಅಸತ್ತಾಗಿರುವ ಕಾರಣ ಅತ್ಯಂತಾ

ಸ್ಥಿರಾಶ್ಚೇಜ್ಜಗತಾಂ ಭಾವಾಸ್ತತ್ತ್ಯಾದಾಸ್ಥಾ ನ ಶೋಭತೇ ।
ಕಥಮನ್ಯೋನ್ಯಸಂಶ್ಲೇಷೋ ಜಡಚೇತನಯೋಃ ಕಿಲ ॥ ೧೪ ॥

ಅಸ್ಥಿರಾಶ್ಚೇಜ್ಜಗದ್ಭಾವಾಸ್ತದಾಪ್ಯಾಸ್ಥಾ ನ ಶೋಭತೇ ।
ಪಯಃ ಫೇನಾಸ್ಥಿರಸ್ಯಾಂತೇ ದುಃಖಮೇಷಾ ದದಾತಿ ತೇ ॥ ೧೫ ॥

ಸಂಭಾವಿತವಾದ ಮತ್ತು ದೇಹವು ಬದುಕಿರುವಷ್ಟು ಅಲ್ಪ ಕಾಲದಲ್ಲಿ ಮಾತ್ರವೇ ಅತಿದೃಢವಾದ ದೇಹಾದ್ಯಾತ್ಮತಾಭಾವವೆಂಬ ಆಶ್ಚರ್ಯವುಳ್ಳವನಾಗಿ ಸರ್ವೇಂದ್ರಿಯ ಗಳಿಗೂ ಅಗೋಚರನಾದ ಆ ಆತ್ಮನು ಏತಕ್ಕೋಸ್ಕರವಾಗಿ ಹೀಗೆ ಓಡಾಡುವನು ? ಹೀಗೆ ಓಡಾಡುವುದು ಸರ್ವದಾ ಅನುಚಿತವು ಎಂದು ಭಾವ.

೧೪. ಈ ಜಗತ್ತು ಅಕರ್ತೃಕವು ಎಂದು ಹೇಳುವ ಪಕ್ಷದಲ್ಲಿ ಇದು [ಜಗತ್] ಸ್ಥಿರವೋ ಅಥವಾ ಅಸ್ಥಿರವೋ ಎಂದು ವಿಚಾರವು ಉಂಟಾಗುವುದು. ಈ ಎರಡು ವಿಧಗಳಲ್ಲಿಯೂ ಜಗತ್ತಿನಲ್ಲಿ ಆಸ್ಥೆಯನ್ನು [ಅಭಿಮಾನವನ್ನು] ಇಡುವುದು ಯುಕ್ತವಲ್ಲ. ಹೇಗೆಂದರೆ ಈ ಪ್ರಾಪಂಚಿಕ ವಿಷಯಜಾಲಗಳು ಸ್ಥಿರವಾದವು ಎಂದು ಒಪ್ಪಿಕೊಂಡರೆ ಅವು ಸ್ಥಿರವಾಗಿರುವ ಕಾರಣದಿಂದಲೇ ಬಿಡುವುದಕ್ಕೂ ಸ್ವೀಕರಿಸು ವುದಕ್ಕೂ ಅಯೋಗ್ಯವಾಗುವುವು. ಹೀಗೆ ಹಾನೋಪಾದಾನಗಳಿಗೆ ಅಯೋಗ್ಯ ವಾಗಿರುವಾಗ ಅವುಗಳಲ್ಲಿ ಅಸ್ಥೆಯನ್ನಿಡುವುದು ಸರಿಯಾಗುವುದಿಲ್ಲ. ಮತ್ತು ಅಸಂಗನಾದ ಚಿದಾತ್ಮನಿಗೂ ಜಡವಾದ ಜಗತ್ತಿಗೂ ಸ್ವಭಾವತಃ ಅನ್ಯೋನ್ಯ ಸಂಸರ್ಗವು (ಸಂಬಂಧವಾದ) [ಒಂದಕ್ಕೊಂದು ಸೇರಿ ಬೆರೆಯುವಿಕೆ] ಅತ್ಯಂತಾ ಸಂಭವವಾಗಿರುವ ಕಾರಣವೂ ಈ ಜಗದ್ಭಾವಗಳಲ್ಲಿ ಆಸ್ಥೆಯಿಡುವುದು ಸರ್ವಥಾ ಅನುಚಿತವಾಗುವುದು.

೧೫. ಅಥವಾ ಈ ಜಗದ್ಭಾವಗಳು ಅಸ್ಥಿರಗಳೇ ಎಂದು ಹೇಳುವ ಪಕ್ಷದಲ್ಲಿಯೂ ಅವುಗಳಲ್ಲಿ ಆಸ್ಥೆಯನ್ನು ಇಡುವುದು ಅಯುಕ್ತವು. ಒಂದು ವಸ್ತುವು ಸ್ಥಿರವಲ್ಲ. ಅಲ್ಪಕಾಲದೊಳಗಾಗಿ ನಾಶಹೊಂದುವುದು ಖಂಡಿತ ಎಂದು ದೃಢವಾಗಿ ತಿಳಿದ ಮೇಲೆಯೂ ಅದರಲ್ಲಿ ಯಾರಿಗೂ ಸಾಧಾರಣವಾಗಿ ಆಸ್ಥೆಯುಂಟಾಗುವುದಿಲ್ಲ. ಅಸ್ಥಿರವಾದ ವಸ್ತುವಿನಲ್ಲಿ ಆಸ್ಥೆಯನ್ನು ಏಕೆ ಮಾಡಬೇಕು ? ಅದರಿಂದ ಆಗುವ ಪ್ರಯೋಜನವೇನು ? ನೀರಿನ ಮೇಲೆ ಉದ್ಭವಿಸುವ ನೊರೆಯು ಅಸ್ಥಿರವೆಂದು ಎಲ್ಲರಿಗೂ ಗೊತ್ತಿರುವಾಗ ಅದರಲ್ಲಿ ಯಾರೂ ಆಸ್ಥೆಯನ್ನು ಇಡುವುದಿಲ್ಲ. ಒಂದು ವೇಳೆ, ಅದನ್ನು [ಭ್ರಾಂತಿಯಿಂದ] ನೆಚ್ಚಿಕೊಂಡರೆ ಅದು ನಾಶವಾಗಿಬಿಟ್ಟು

ಆಸ್ಥಾಬಂಧೋ ಮಹಾಬಾಹೋ ಜಗದ್ಭಾವತ್ವಮಾತ್ಮನಃ ।
ನ ಸ್ಥಿರಾಸ್ಥಿರಯೋಃ ಫೇನಶೈಲಯೋರಿವ ರಾಜತೇ ॥ ೧೬ ॥

ಸರ್ವಕರ್ತಾಪ್ಯಕರ್ತೇವ ಕರೋತ್ಯಾತ್ಮಾ ನ ಕಿಂಚನ ।
ತಿಷ್ಠತ್ಯೇವಮುದಾಸೀನ ಆಲೋಕಂ ಪ್ರತಿ ದೀಪವತ್ ॥ ೧೭ ॥

ಕೊನೆಯಲ್ಲಿ ಅದು ದುಃಖ ಹೇತುವಾಗುವುದೇ ಹೊರತು ಎಂದಿಗೂ ಅದರಿಂದ ಸುಖವುಂಟಾಗುವುದಿಲ್ಲ. ಅದರಂತೆಯೇ ಅಸ್ಥಿರವೆಂದು ದೃಢವಾಗಿ ಗೊತ್ತಾದ ಜಗದ್ಭಾವಗಳಲ್ಲಿ ಅಭಿಮಾನಬಿಟ್ಟರೆ ಅದು ಕೊನೆಯಲ್ಲಿ ದುಃಖಹೇತುವೇ ಆಗುವುದು. ಎಂದಿಗೂ ಸುಖಕರವಾಗುವುದಿಲ್ಲ.

೧೬. ಎಲೈ ಮಹಾಬಾಹುವೇ, ಆತ್ಮನ ಜಗತ್ಸಭಾವತ್ವವು. ಅಂದರೆ ಜಗತ್ಸ್ವಭಾವವಾದ ಜನ್ಮ ನಾಶಾದಿ ವಿಕಾರಗಳನ್ನು ಪಡೆಯುವಿಕೆಯು ಯಾವುದುಂಟೋ ಅದಕ್ಕೇ ಆಸ್ಥೆಯೆಂದು ಹೆಸರು. ಪರಸ್ಪರ ತಾದಾತ್ಮ್ಯ ಸಂಸರ್ಗಾಧ್ಯಾಸವೆಂಬುದು ಆಸ್ಥಾಬಂಧವು. ತತ್ವವನ್ನು ವಿಮರ್ಶೆಮಾಡಲಾಗಿ ಸ್ಥಿರವಾಗಿರುವ ಆತ್ಮನಿಗೂ ಅಸ್ಥಿರವಾದ ಜಗತ್ತಿಗೂ ತಾದಾತ್ಮ್ಯ ರೂಪವಾದ ಆಸ್ಥಾಬಂಧವು ಶೈಲ (ಪರ್ವತ) ಮತ್ತು ಫೇನ (ನೀರಿನ ನೊರೆ) ಗಳಿಗೆ ಹೇಗೆ ತಾದಾತ್ಮ್ಯವು ಸಂಭವಿಸುವುದಿಲ್ಲವೊ ಹಾಗೆ ಎಂದಿಗೂ ಘಟಿಸುವುದೇ ಇಲ್ಲ.

೧೭. ಹೀಗೆ ಆತ್ಮನು ಜಗತ್ಕರ್ತೃವಲ್ಲ ಎಂದು ಹೇಳುವ ಪಕ್ಷದಲ್ಲಿ ಆಸ್ಥೆಯು ಅನುಚಿತವಾಗುವುದು. ಆತ್ಮನಿಗೆ ಕರ್ತೃತ್ವವನ್ನು ಹೇಳುವ ಪಕ್ಷದಲ್ಲಿ ಆಸ್ಥೆಯು ಉಚಿತವಾಗಬಹುದಲ್ಲಾ ಎಂದರೆ ಅಹುದು. ವಾಸ್ತವವಾಗಿ ಆತ್ಮನು ಜಗತ್ಕರ್ತೃವಾಗಿದ್ದಿದ್ದರೆ ಜಗತ್ತಿನಲ್ಲಿ ಆಸ್ಥೆಯನ್ನಿಡುವುದೂ ಉಚಿತವೆಂದು ಹೇಳಬಹುದಾಗಿತ್ತು. ಆದರೆ ಆತ್ಮನು ಸರ್ವದಾ ಜಗತ್ತಿಗೆ ಕರ್ತೃವಾಗಿಲ್ಲವೇ ಇಲ್ಲ. ಆತ್ಮನು ಸಕಲ ಜಗತ್ತಿಗೂ ಕರ್ತೃವು ಎಂಬ ವ್ಯವಹಾರವು ರೂಢವಾಗಿದ್ದರೂ ಅವನು ಸ್ವಭಾವತಃ ಕರ್ತೃವಲ್ಲದವನಾಗಿ (ಅಕರ್ತೃ) ಶೈಲದಂತೆ ಚಲನಾದಿ ಯಾವುದೊಂದು ವಿಕಾರವೂ ಇಲ್ಲದೆ ಅಚಲನಾಗಿಯೂ ಉದಾಸೀನನಾಗಿಯೂ ಯಾವದೊಂದನ್ನೂ ಮಾಡದವನಾಗಿಯೇ ಇರುವನು. ಲೋಕದಲ್ಲಿ ದೀಪವಿರುವ ಸ್ಥಳದಲ್ಲಿ ಅದರ ಪ್ರಕಾಶವು ಸುತ್ತಲೂ ಪ್ರಸರಿಸುವುದು. ದೀಪವು ಆ ಬೆಳಕನ್ನು ಎಂದಿಗೂ ಮಾಡುವುದಿಲ್ಲ. ದೀಪವು ಬೆಳಕನ್ನು ಉಂಟುಮಾಡಿ ಹರಡುವ ವಿಷಯದಲ್ಲಿ ಉದಾಸೀನವಾಗಿದ್ದರೂಕೂಡ

ಕುರ್ವನ್ನ ಕಿಂಚಿಕ್ಕುರುತೇ ದಿವಾಕಾರ್ಯವಿವಾಂಶುಮಾನ್ ।
ಗಚ್ಛನ್ನ ಗಚ್ಛತಿ ಸ್ವಸ್ಥಃ ಸ್ವಾಸ್ಪದಸ್ಥೋ ರವಿರ್ಯಥಾ ॥ ೧೮ ॥

ಆ ದೀಪದ ಸನ್ನಿಧಾನ ಮಾತ್ರದಿಂದ ಬೆಳಕು ಹರಡುವುದು ಸ್ವಾಭಾವಿಕವಾಗಿರುವ ಕಾರಣದಿಂದ ದೀಪವು ಬೆಳಕನ್ನುಂಟುಮಾಡುವುದೆಂಬ ವ್ಯವಹಾರವು ರೂಢವಾಗಿರುವಂತೆಯೇ ಆತ್ಮನೂ ಕೂಡ ಸ್ವತಃ ಉದಾಸೀನನೂ ಅಕರ್ತೃವೂ ಅವಿಕಾರಿಯೂ ಆಗಿದ್ದರೂ ಆತ್ಮನ ಸಾನ್ನಿಧ್ಯಮಾತ್ರದಿಂದಲೇ ಜಗದುತ್ಪತ್ತಿ ಸ್ಥಿತಿಲಯಾದಿ ಸಕಲ ಕಾರ್ಯಗಳೂ ನಿರ್ವಾಹವಾಗುವುದರಿಂದ ಜಗತ್ಕರ್ತೃವು ಎಂದು ಔಪಚಾರಿಕವಾಗಿ ಹೇಳಲ್ಪಡುವನು.

ನಿಜವಾಗಿ ಯಾವಾಗಲೂ ಎಲ್ಲಿಯೂ ಜಗತ್ತು ಉತ್ಪನ್ನವಾಗಿಲ್ಲ. ಈ ಜಗತ್ತು ಶುಕ್ತಿ ರಜತಾದಿಗಳಂತೆ ಆ ಕಾಲದಲ್ಲಿ ಮಾತ್ರ ಭ್ರಾಂತಿಯಿಂದಲೇ ಕಾಣುವುವು ಎಂಬುದು ಸಿದ್ಧಾಂತ ಜಾಗ್ರದ್ದೃಶ್ಯಗಳು ಸ್ವಪ್ನದೃಶ್ಯಗಳಂತೆಯೇ ಅಸತ್ಯ (ಮಿಥ್ಯೆ) ಎಂಬುದು ಅನುಭವಸಿದ್ಧ ಈ ವಿಚಾರವು ಮಾಂಡೂಕ್ಯೋಪನಿಷತ್ತಿನ ಶ್ರೀ ಗೌಡಪಾದೀಯ ಕಾರಿಕೆಗಳಲ್ಲಿ ಯುಕ್ತಿ ಯುಕ್ತವಾಗಿಯೂ ಅನುಭವ ಪೂರ್ವಕವಾಗಿಯೂ ನಿರ್ಣೀತವಾಗಿರುವುದು.

೧೮. ಸೂರ್ಯೋದಯವಾದೊಡನೆಯೇ ಸಕಲ ಪ್ರಾಣಿಗಳು ದಿನವಹಿ ನಡೆಸುವ ಕೃತ್ಯಗಳು ನಿರ್ವಾಹವಾಗಿರುವುದರಿಂದ ಈ ವ್ಯವಹಾರಗಳಿಗೆಲ್ಲ ಸೂರ್ಯನೇ ಕರ್ತೃವೆಂದು ಹೇಳಬಹುದಾದರೂ ಕೂಡ ಸೂರ್ಯನು ವಸ್ತುತಃ ಯಾವ ವ್ಯವಹಾರವನ್ನೂ ಮಾಡುವುದಿಲ್ಲ. ಇದರಂತೆಯೇ ಸರ್ವಶಕ್ತನೂ ಸರ್ವಸಾಕ್ಷಿಯೂ ಆಗಿರುವ ಆತ್ಮನು ಎಲ್ಲವನ್ನೂ ಮಾಡುತ್ತಿರುವಂತೆ ತೋರಿದರೂ ವಸ್ತುತಃ ಅವನು ಏನನ್ನೂ ಮಾಡುವುದೇ ಇಲ್ಲ. ಸೂರ್ಯನು ತಾನು ಇರುವ ಸ್ಥಳದಲ್ಲಿಯೇ ಇದ್ದುಕೊಂಡು ಚಲಿಸದೆ ಇರುವನು ಆದರೆ ಭ್ರಾಂತರು "ಸೂರ್ಯನು ಪೂರ್ವದಲ್ಲಿ ಹುಟ್ಟಿ ಹಗಲೆಲ್ಲ ಸಂಚರಿಸಿ ಪಶ್ಚಿಮದಿಕ್ಕಿಗೆ ಹೋಗಿ ಮುಳುಗುವನು"ಎಂದು ದೃಢವಾಗಿ ಭಾವಿಸಿಕೊಂಡಿದ್ದರೂಕೂಡ ಅವನು ಸಂಚಾರಮಾಡದವನೆಂದೇ ಶಾಸ್ತ್ರಜ್ಞರು ಹೇಗೆ ತಿಳಿದಿದ್ದರೋ ಹಾಗೆಯೇ ಆತ್ಮನೂ ಗಮನಾ ಗಮನಾದಿ ವ್ಯವಹಾರಗಳನ್ನು ಮಾಡುತ್ತಿರುವವನೆಂದು ತಜ್ಞರು ತಿಳಿದಿದ್ದರೂ ಕೂಡ ತತ್ತ್ವಜ್ಞರ ದೃಷ್ಟಿಯಲ್ಲಿ ಸ್ವಸ್ಥನಾಗಿಯೇ ಗಮನಾದಿ ಸಕಲ ವ್ಯವಹಾರಗಳಿಗೂ ಆಸ್ಪದನಲ್ಲದವನಾಗಿಯೇ ಇರುವನು.

ಯತಃ ಕುತಶ್ಚಿದೇವೇದಂ ಸಂಪನ್ನಮಿವ ಲಕ್ಷ್ಯತೇ ।
ಅರುಣಾತೀರವದ್ವಾರಿಪೂರಾವರ್ತವದಾತತಂ ॥ ೧೯ ॥

ಇತಿ ಚೇದ್ಭವತಾ ರಾಮ ನೈಪುಣ್ಯೇನಾವಧಾರಿತಂ ।
ಪ್ರಮಾಣಪರಿಶುದ್ಧೇನ ಚೇತಸಾ ಚ ವಿಚಾರಿತಂ ॥ ೨೦ ॥

ತಥಾಪಿ ಭಾವನಾಂ ಸಾಧೋ ಪದಾರ್ಥಂ ಪ್ರತಿ ನಾರ್ಹಸಿ ।
ಅಲಾತಚಕ್ರೇ ಸ್ವಪ್ನೇ ಚ ಭ್ರಮೌ ವಾ ಕೇವ ಭಾವನಾ ॥ ೨೧ ॥

---

೧೯ "ಅರುಣಾ" ಎಂಬುದೊಂದು ಪುರಾಣ ಪ್ರಸಿದ್ಧವಾದ ನದಿಯು. ಅದರ ತೀರವು ಸ್ವಭಾವತಃ ಬಹು ಶಿಲಾಮಯವಾಗಿ ಅತ್ಯಂತ ವಿಷಮವಾದುದು. ನೀರಿನ ಪ್ರವಾಹವೂ ತಗ್ಗಾದ ಪ್ರದೇಶಕ್ಕೆ ಅಭಿಮುಖವಾಗಿ ಹರಿಯುವ ಸ್ವಭಾವವುಳ್ಳದ್ದು. ಮತ್ತು ಪ್ರವಾಹ ವೈಷಮ್ಯವನ್ನುಂಟುಮಾಡುವುದೂ ಅಲ್ಲ ಹೀಗೆ ಆ ನದೀತೀರವೂ ಇವೆರಡೂ ಪ್ರವಾದ ಮಧ್ಯದಲ್ಲಿ ಸುಳಿಗಳನ್ನುಂಟುಮಾಡಬೇಕೆಂದು ಬಯಸುವುದಿಲ್ಲ. ಉದಾಸೀನವಾಗಿರುವುವು. ವಸ್ತುಸ್ಥಿತಿಯು ಹೀಗಿದ್ದರೂ ಇವೆರಡೂ ಒಟ್ಟಿಗೆ ಸೇರಿದಾಗ ಅವೆರಡರ ಸನ್ನಿಧಾನದಲ್ಲಿ ಆಕಸ್ಮಿಕವಾಗಿ ಸುಳಿಗಳು ಉತ್ಪನ್ನವಾಗುವುವು. ಎಷ್ಟು ವಿಧವಾಗಿ ಯೋಚಿಸಿದರೂ ಈ ಸುಳಿಗಳು ಹುಟ್ಟುವುದಕ್ಕೆ ನದೀತೀರವೂ ಕಾರಣವಲ್ಲ. ಜಲಪ್ರವಾಹವೂ ಕಾರಣವಲ್ಲ. ಅದು ಹೇಗೆಯೋ ತನುಗೆ ತಾವಾಗಿಯೇ ಆಕಸ್ಮಿಕವಾಗಿ ಸುಳಿಗಳು ಉದ್ಭವಿಸುವುವು. ಈ ದೃಷ್ಟಾಂತದಂತೆಯೇ ಚಿತ್, ಜಡೆಗಳು ಪರಸ್ಪರ ಒಟ್ಟಿಗೆ ಸೇರಿದಾಗ ಈ ಜಗತ್ತೆಂಬುದು ತನಗೆ ತಾನಾಗಿಯೇ ವಿಸ್ತಾರವಾಗಿ ಅದು ಹೇಗೋ ಆಕಸ್ಮಿಕವಾಗಿ ಉದಯ ಹೊಂದಿರುವಂತೆ ಕಾಣುವುದು.

ಸೂರ್ಯನು ದಿನಕೃತ್ಯಗಳಿಗೆ ಕೇವಲ ನಿಮಿತ್ತಮಾತ್ರ. ದಿನಕೃತ್ಯಗಳನ್ನು ನಡೆಯಿಸತಕ್ಕ ಪಾಲನೆಗಳು ಸೂರ್ಯನಿಗಿಂತ ಪ್ರತ್ಯೇಕವಾಗಿರುತ್ತಾರೆ. ಆದರೆ ಜಗನ್ನಿರ್ಮಾಣದಲ್ಲಿ ಆತ್ಮನಿಗಿಂತ ಬೇರೆ ಕರ್ತೃಗಳು ಯಾರೂ ಕಾಣುವುದಿಲ್ಲ. ಅದು ಕಾರಣ ಪೂರ್ವಶ್ಲೋಕದ ದೃಷ್ಟಾಂತದಲ್ಲಿ ವೈಷಮ್ಯವಿರುವುದು ಎಂಬ ಆಶಂಕೆಹುಟ್ಟಿ ಲಾಗಿ ಈ ನದೀದೃಷ್ಟಾಂತವನ್ನು ಈ ಶ್ಲೋಕದಲ್ಲಿ ಹೇಳಿದೆ ಎಂದು ತಿಳಿಯಬೇಕು.

೨೦–೨೧ ಅಯ್ಯ ಸಾಧುವಾದ ರಾಮ, ನಾನು ನಿನಗೆ ಇದುವರೆವಿಗೆ ವಿವರಿಸಿದ ರೀತಿಯಲ್ಲಿ ಜಗತ್ಕರ್ತೃತ್ವಾದಿ ವಿಚಾರಗಳನ್ನು ನೀನು ಬುದ್ಧಿ ಕುಶಲತೆಯಿಂದ

ಅಕಸ್ಮಾದಾಗತೋ ಜಂತುಃ ಸೌಹಾರ್ದಸ್ಯ ನ ಭಾಜನಂ ।
ಭ್ರಮೋದ್ಭೂತಂ ಜಗಜ್ಜಾಲಮಾಸ್ಥಾಯಾಸ್ತನ್ನ ಭಾಜನಂ ॥ ೨೨ ॥

ಔಷ್ಣ್ಯೇಂದೌ ಶೀತಲೇ ಭಾನೌ ಮೃಗತೃಷ್ಣಾಜಲೇ ತಥಾ ।
ಯಥಾ ನ ಭಾವಯಸ್ಯಾಸ್ಥಾಮೇವಂ ಭಾವಯ ಮಾಸ್ಥಿತೌ ॥ ೨೩ ॥

ಚೆನ್ನಾಗಿ ನಿರ್ಧರಿಸಿ ತಿಳಿದುಕೊಂಡಿದ್ದೇ ಆದರೆ ಮತ್ತು ಪ್ರಮಾಣ ಜ್ಞಾನದಿಂದ ಸಂಶಯಾದಿ ಶೂನ್ಯವಾಗಿ ಶುದ್ಧವಾದ ನಿನ್ನ ಮನಸ್ಸಿನಿಂದ ಚೆನ್ನಾಗಿ ಯುಕ್ತಿ ಪುರಸ್ಸರ ವಿಚಾರಮಾಡಿ ತಿಳಿದದ್ದೇ ಆದರೆ ಇನ್ನು ಮೇಲೆ ನೀನು ಈ ಪ್ರಾಪಂಚಿಕ ಪದಾರ್ಥಗಳ ವಿಷಯದಲ್ಲಿ ಆಸ್ಥೆಯನ್ನಿಡುವುದು ಸುತರಾಂ ನಿನಗೆ ಉಚಿತವಲ್ಲ. ಚಕ್ರಾಕಾರವಾಗಿ ಸುತ್ತಿಸಲ್ಪಡುವ ಬೆಂಕಿಯ ಕೊಳ್ಳಿಯಲ್ಲಿಯೂ ಸ್ವಪ್ನದಲ್ಲಿ ಕಾಣುವ ಭಾವಗಳಲ್ಲಿಯೂ ಭ್ರಾಂತಿ ದೃಶ್ಯವಾದ ಪ್ರಾತಿಭಾಸಿಕವಾದ ಶುಕ್ತಿ ರಜತಾದಿಗಳಲ್ಲಿಯೂ ಅವುಗಳ ಮಿಥ್ಯಾತ್ವ ಸ್ವಭಾವವನ್ನು ವಿಚಾರವಿಮರ್ಶೆಗಳಿಂದ ಮನಗಂಡಿರುವ ಜ್ಞಾನಿಗಳಿಗೆ ಆಸ್ಥೆಯುಂಟಾಗುವುದೇನು ? ಎಂದಿಗೂ ಇಲ್ಲವೆಂದು ಭಾವ.

೨೨. ಅಕಸ್ಮಾತಾಗಿ (ಅಕಾರಣವಾಗಿ) ಬಂದಂತ ಯಾವುದೊಂದು ಪ್ರಾಣಿಯೂ ಲೋಕದಲ್ಲಿ ಸುಖವಾಗಿ ಬಾಳಬೇಕೆಂಬ ಅಪೇಕ್ಷೆಯುಳ್ಳ ಯಾವನೊಬ್ಬನ ಸ್ನೇಹಕ್ಕೂ (ವಿಶ್ವಾಸಕ್ಕೂ) ಪಾತ್ರನಾಗುವುದಿಲ್ಲ. ಈ ಜಗಜ್ಜಾಲವೂ ಕೂಡ ಭ್ರಾಂತಿಯಿಂದ ಆಕಸ್ಮಿಕವಾಗಿ (ಅಕಾರಣವಾಗಿ) ಅದುಹೇಗೋ ಉದ್ಭವಿಸಿರುವುದು. ಆದುದರಿಂದ ಅದು ಯಾವನೊಬ್ಬನ ಆಸ್ಥೆಗೂ ಪಾತ್ರವಲ್ಲವು.

೨೩. ಛಳಿಯಿಂದ ಪೀಡಿತನಾಗಿ ಚಂದ್ರನಲ್ಲಿ ಉಷ್ಣವಿರುವುದೆಂದು ಭ್ರಾಂತಿಯಿಂದ ಗ್ರಹಿಸಿದಾಗಲೂ ಬಿಸಿಲಿನಿಂದ ಸಂತಪ್ತನಾಗಿ ಭ್ರಾಂತಿಯಿಂದ ತಣ್ಣಗಿದ್ದಾನೆಂದು ಭಾವಿಸಿದ ಸೂರ್ಯನಲ್ಲಿಯೂ ಮತ್ತು ನೀರಡಿಕೆಯಿಂದ ನರಳುತ್ತಾ ಮೃಗತೃಷ್ಣಿಕೆಯಲ್ಲಿ (ಬಿಸಿಲ್ಗುದುರೆ) ನೀರು ಇರುವುದೆಂದು ಭ್ರಮೆಯಿಂದ ತಿಳಿದುಕೊಂಡಾಗಲೂ ಅವುಗಳಲ್ಲಿ ನೀನು ಆಸ್ಥೆಯನ್ನಿಡದೆ ತಟಸ್ಥನಾಗಿರುವಂತೆಯೇ ನೀನು ಭ್ರಾಂತಿಮೂಲವಾದ ಈ ಜಗತ್ತಿನ ಸ್ಥಿತಿಯಲ್ಲಿಯೂ ಸ್ವಲ್ಪವೂ ಆಸೆಯನ್ನಿಡದೆ ಉದಾಸೀನನಾಗಿರು.

ಸಂಕಲ್ಪಪುರುಷಸ್ವಪ್ನಜನದ್ವೀಂದುತ್ವ ವಿಭ್ರಮಂ ।
ಯಥಾ ಪಶ್ಯಸಿ ಪಶ್ಯ ತ್ವಂ ಭಾವಜಾತಮಿದಂ ತಥಾ ॥ ೨೪ ॥

ಅಂತರಾಸ್ಥಾಂ ಪರಿತ್ಯಜ್ಯ ಭಾವಶ್ರೀಭಾವನಾಮಯೀಂ ।
ಯೋಽಸಿ ಸೋಽಸಿ ಜಗತ್ಯಸ್ಮಿಂಲ್ಲೀಲಯಾ ವಿಹರಾನಘ ॥ ೨೫ ॥

ಅಕರ್ತೃಕರ್ತೃಪದಂ ಹಿತ್ವಾ ಹಿತ್ವೇಚ್ಛಾಮಪಿ ಕುರ್ವತಃ ।
ಸರ್ವಭಾವಾಂತರಸ್ಥಸ್ಯ ಸರ್ವಾತೀತಸ್ಯ ಚಾತ್ಮನಃ
ಇಯಂ ಸಂನಿಧಿಮಾತ್ರೇಣ ನಿಯತಿಃ ಪರಿಜೃಂಭತೇ ॥ ೨೬ ॥

---

೨೪. ಸಂಕಲ್ಪ ಮಾತ್ರದಿಂದಲೇ ಕಲ್ಪಿತನಾದ ಪುರುಷನನ್ನು ಕನಸಿನಲ್ಲಿ ಕಂಡ ಜನವನ್ನೂ ಭ್ರಾಂತಿಯಿಂದಲೇ ತೋರುವ ಚಂದ್ರದ್ವಯವನ್ನೂ (ಎರಡು ಚಂದ್ರರುಗಳು) ನೀನು ಹೇಗೆ ವಿಚಾರದಶೆಯಲ್ಲಿ ಕೇವಲ ಮಿಥ್ಯೆ (ಅಸತ್ಯ) ಯೆಂದು ತಿಳಿಯುವೆಯೋ ಹಾಗೆಯೇ ಈ ಜಗದ್ಭಾವಗಳ ಸಮುದಾಯವೂ ಅಸತ್ಯವೆಂದೇ ದೃಢವಾಗಿ ತಿಳಿಯುವನಾಗು.

೨೫. ಅಯ್ಯಾ, ಅವಿದ್ಯಾದಿ ಸಕಲ ದೋಷವಿನಿರ್ಮುಕ್ತನಾದ ರಾಮ, ನೀನು ಈ ಪ್ರಾಪಂಚಿಕ ವಸ್ತುಗಳ ಸೌಂದರ್ಯ ಚಿಂತನೆಯಿಂದ ಪ್ರಚುರವಾದ ನಿನ್ನ ಮನಸ್ಸಿನೊಳಗಿರುವ ಆಸ್ಥೆಯನ್ನು ಪೂರ್ತಿಯಾಗಿ ಬಿಟ್ಟು ಬಿಟ್ಟು ಈ ಜಗತ್ತಿನಲ್ಲಿ ಲೀಲೆಯಿಂದ ವಿಹರಿಸಿಕೊಂಡಿರು. ನಾನು ಜಗತ್ತಿಗೆ ಕರ್ತೃವಲ್ಲನೆಂಬ ಸ್ಥಿತಿಯನ್ನೂ ಅದರ ಇಚ್ಛೆಯನ್ನೂ ಅಂತೆಯೇ ತಾನು ಜಗತ್ಕರ್ತೃವೆಂಬ ಸ್ಥಿತಿಯನ್ನೂ ಅದರ ಇಚ್ಛೆಯನ್ನೂ ಕೂಡ ಅಡಗಿಸಿಕೊಂಡುಬಿಟ್ಟರೆ ವಾಸ್ತವವಾಗಿ ನೀನು ಯಾವ ಅಸಂಸಾರ್ಯಾತ್ಮನಾಗಿರುವೆಯೋ ಅದೇ ಆತ್ಮನಾಗಿಯೇ (ಆಸ್ಥೆಯನ್ನು ಬಿಟ್ಟು ಜಗತ್ತಿನಲ್ಲಿ ವಿಹರಿಸುವಾಗಲೂ) ಇರುವ ಸಂಸಾರದ ಬಂಧವು ನಿನಗೆ ಸುತರಾಂ ಉಂಟಾಗುವುದಿಲ್ಲ.

೨೬. ಔದಾಸೀನ್ಯದಿಂದ ಸಕಲ ಪ್ರಪಂಚ ವ್ಯವಹಾರಗಳಿಗೆ ಕರ್ತೃಭೂತನಾಗಿಯೂ ಸಕಲ ಪದಾರ್ಥಗಳ ಅಂತರ್ಗತನಾಗಿಯೂ ಮತ್ತು ಸರ್ವಾತೀತನಾಗಿಯೂ ಇರುವ ಆತ್ಮನ ಸಾನ್ನಿಧ್ಯ ಮಾತ್ರದಿಂದಲೇ ಈ ಜಗತ್ಸೃಷ್ಟಿರೂಪವಾದ ನಿಯತಿಯು ವಿಜೃಂಭಿಸುತ್ತಲಿರುವುದು (ನಿರಿಚ್ಛಾಪೂರ್ವಕನಾಗಿಯೇ ವ್ಯವಹಾರಾಕಾರದಿಂದ ಪ್ರಸಿದ್ಧಿ ಹೊಂದುವುದು.)

ದೀಪಸಂನಿಧಿಮಾತ್ರೇಣ ನಿರಿಚ್ಛೈವ ಪ್ರಕಾಶತೇ ॥ ೨೭ ॥

ಅಭ್ರಸಂನಿಧಿಮಾತ್ರೇಣ ಕುಟಜಾನಿ ಯಥಾ ಸ್ವಯಂ ।
ಆತ್ಮಸಂನಿಧಿಮಾತ್ರೇಣ ತ್ರಿಜಗಂತಿ ತಥಾ ಸ್ವಯಂ ॥ ೨೮ ॥

ಸರ್ವೇಚ್ಛಾರಹಿತೇ ಭಾನೌ ಯಥಾ ವ್ಯೋಮನಿ ತಿಷ್ಠತಿ ।
ಜಾಯತೇ ವ್ಯವಹಾರಶ್ಚ ಸತಿ ದೇವೇ ತಥಾ ಕ್ರಿಯಾ ॥ ೨೯ ॥

ನಿರಿಚ್ಛೇ ಸಂಸ್ಥಿತೇ ರತ್ನೇ ಯಥಾಲೋಕಃ ಪ್ರವರ್ತತೇ ।
ಸತ್ತಾಮಾತ್ರೇಣ ದೇವೇ ತು ತಥೈವಾಯಂ ಜಗದ್ಗಣಃ ॥ ೩೦ ॥

೨೭-೨೮ ದೀಪಕ್ಕೆ ತನ್ನ ಪ್ರಕಾಶವನ್ನು ಹರಡಬೇಕೆಂಬ ಇಚ್ಛೆಯಿಲ್ಲದೆಯೇ ಅದರ ಸಾನ್ನಿಧ್ಯಮಾತ್ರದಿಂದಲೇ ಅದರ ಬೆಳಕು ತಾನಾಗಿಯೇ ಪ್ರಕಾಶಿಸುವಂತೆಯೂ ಮೇಘಗಳ ಇಚ್ಛೆಯಿಲ್ಲದೆಯೇ ಅವುಗಳ ಸನ್ನಿಧಿಮಾತ್ರದಿಂದ ಕುಟಜಪುಷ್ಪಗಳು ತಾವಾಗಿಯೇ ಆವಿರ್ಭವಿಸುವಂತೆಯೂ ಆತ್ಮನ ಸಾನ್ನಿಧ್ಯಮಾತ್ರದಿಂದಲೇ ಈಮೂರು ಲೋಕಗಳೂ ತಾವಾಗಿಯೇ (ಆತ್ಮನ ಇಚ್ಛೆಯಿಲ್ಲದಿದ್ದರೂ) ಆವಿರ್ಭವಿಸಿ ಬೆಳಗುತ್ತಲಿರುವುವು.

೨೯. ಯಾವುದೊಂದುಬಗೆಯ ಇಚ್ಛೆಯೂ ಇಲ್ಲದವನಾಗಿ ಕರ್ಮಸಾಕ್ಷಿಯಾದ ಸೂರ್ಯದೇವನು ಗಗನಮಂಡಲದಲ್ಲಿದ್ದಮಾತ್ರದಿಂದಲೇ ಸಕಲವಿಧಗಳಾದ ಜಗದ್ವ್ಯವಹಾರಗಳು ತಾವಾಗಿಯೇ ಹೇಗೆ ನಡೆಯುವುವೊ ಹಾಗೆಯೇ ಅಸಂಗನಾದ ಪರಮಾತ್ಮನು ಸರ್ವಸಾಕ್ಷಿಯಾಗಿದ್ದುಕೊಂಡಿರಲು ಈ ಜಗತ್ಸೃಷ್ಟಿರೂಪ ಕ್ರಿಯಾ ಕಲಾಪಗಳು ತಾವಾಗಿಯೇ ನಡೆದುಕೊಂಡು ಬರುವುವು.

೩೦. ಮತ್ತು ಸ್ವಚ್ಛವಾದ ಒಂದು ರತ್ನವು ತನ್ನ ಕಾಂತಿಯನ್ನು ಹರಡಬೇಕೆಂಬ ಇಚ್ಛೆಯಿಲ್ಲದೆಯೇ ಎಲ್ಲೋ ಒಂದು ಕಡೆ ಬಿದ್ದಿದ್ದರೂ ಕೂಡ ಆ ದಿವ್ಯರತ್ನದ ಸಾನ್ನಿಧ್ಯ ಮಾತ್ರದಿಂದ ಅದರ ಕಾಂತಿಯು ತಾನಾಗಿಯೇ ಸುತ್ತಲೂ ವ್ಯಾಪಿಸಿಕೊಳ್ಳುವಂತೆಯೇ ಸ್ವಯಂಪ್ರಕಾಶಮಾನನಾದ ಆತ್ಮನ ಇಚ್ಛೆಯಿಲ್ಲದೆಯೇ ಅವನ ಅಸ್ತಿತ್ವ (ಇರುವಿಕೆ) ಮಾತ್ರದಿಂದಲೇ ಈ ಜಗತ್ಸಮುದಾಯವು ತಾನಾಗಿ ಪ್ರವರ್ತಿಸುವುದು.

ಅತಃ ಸ್ವಾತ್ಮನಿ ಕರ್ತೃತ್ವಮಕರ್ತೃತ್ವಂ ಚ ಸಂಸ್ಥಿತಂ ।
ನಿರಿಚ್ಛತ್ವಾದಕರ್ತಾಸೌ ಕರ್ತಾ ಸಂನಿಧಿಮಾತ್ರತಃ ॥ ೩೧ ॥

ಸರ್ವೇಂದ್ರಿಯಾದ್ಯತೀತತ್ವಾತ್ಕರ್ತಾ ಭೋಕ್ತಾ ನ ಸನ್ಮಯಃ ।
ಇಂದ್ರಿಯಾಂತರ್ಗತತ್ವಾತ್ತು ಕರ್ತಾ ಭೋಕ್ತಾ ಸ ಏವಹಿ ॥ ೩೨ ॥

ದ್ವೇ ಏವಾತ್ಮನಿ ವಿದ್ಯೇತೇ ಕರ್ತೃತಾಽಕರ್ತೃತಾನಘ।
ಯಯೈವ ಪಶ್ಯತಿ ಶ್ರೇಯಸ್ತಾಮಾಶ್ರಿತ್ಯ ಸ್ಥಿರೋ ಭವ ॥ ೩೩ ॥

ಸರ್ವಸ್ಥೋಽಹಮಕರ್ತೇತಿ ದೃಢಭಾವನಯಾನಯಾ ।
ಪ್ರವಾಹಪತಿತಂ ಕಾರ್ಯಂ ಕುರ್ವನ್ನಪಿ ನ ಲಿಪ್ಯತೇ ॥ ೩೪ ॥

---

೩೧. ಅದುಕಾರಣ, ಮೇಲೆ ಹೇಳಿದ ರೀತಿಯಲ್ಲಿ ಆತ್ಮನಲ್ಲಿ ಕರ್ತೃತ್ವ ಅಕರ್ತೃತ್ವಗಳೆರಡೂ ಸಂಭವಿಸುವುವು. (ಇದ್ದುಕೊಂಡಿವೆ.) ಆತ್ಮನಿಗೆ ಇಚ್ಛೆಯೇ ಇಲ್ಲದಿರುವ ಕಾರಣ ಅವನು ಅಕರ್ತೃವೆಂದೂ ಕೇವಲ ಸಾನ್ನಿಧ್ಯದಿಂದ ಕರ್ತೃವೆಂದೂ ಎರಡು ಬಗೆಯಾಗಿ ಆತ್ಮನು ವ್ಯವಹಾರಗೋಚರನಾಗಿರುವನು.

೩೨. ಕೇವಲ ಸದ್ರೂಪನಾದ ಆತ್ಮನು ಸಕಲೇಂದ್ರಿಯಗಳಿಗೂ ಮನಸ್ಸನಾಕ್ ಮುಂತಾದವುಗಳಿಗೂ ಅತೀತನಾಗಿರುವ ಕಾರಣ ಅಕರ್ತೃವೂ ಅಭೋಕ್ತೃವೂ ಆಗಿರುವನು. ಆದರೆ ಸರ್ವಾಂತರ್ಯಾಮಿಯಾದ ಆ ಆತ್ಮನೇ ಇಂದ್ರಿಯಗಳ ಅಂತರ್ಗತನಾಗಿರುವ ಕಾರಣದಿಂದ ಕರ್ತೃವೆಂದೂ ಭೋಕ್ತೃವೆಂದೂ ಎನ್ನಿಸುವನು.

೩೩. ಅಯ್ಯ ಅನಘನಾದ ರಾಮ, ಹೀಗೆ ಕರ್ತೃತ್ವ ಅಕರ್ತೃತ್ವಗಳು ಎರಡೂ ಕೂಡ ಆತ್ಮನಲ್ಲಿಯೇ ಇದ್ದುಕೊಂಡಿವೆ. ಯಾವ ಭಾವನೆಯಿಂದ ನಿನಗೆ ಶ್ರೇಯಸ್ಸು ಲಭಿಸುವುದೆಂದು ತೋರುವುದೋ ಆ ಭಾವನೆಯನ್ನು ನೀನು ಆಶ್ರಯಿಸಿ, ಅದರಲ್ಲಿಯೇ ಸ್ಥಿರನಾಗಿರು.

೩೪. "ನಾನು ಸರ್ವಗತನು. ಸರ್ವಾಂತರ್ಯಾಮಿಯು. ಕರ್ತೃತ್ವಾದಿ ವಿಕಾರಗಳಿಲ್ಲದವನು" ಎಂಬೀ ತಾತ್ವಿಕವಾದ ಭಾವನೆಯನ್ನು ಮನಸ್ಸಿನಲ್ಲಿ ದೃಢಪಡಿಸಿಕೊಂಡು ಅಭಿಮಾನರಹಿತನಾಗಿ ಪೂರ್ವದಂತೆ ಪ್ರಪಂಚದಲ್ಲಿ ವ್ಯವಹರಿಸುತ್ತಿರುವವನಾದರೂ (ಪ್ರಾಪಂಚಿಕ ವ್ಯವಹಾರವೆಂಬ ಪ್ರವಾಹದಲ್ಲಿ ಸಿಕ್ಕಿಕೊಂಡು ಯಾದೃಚ್ಛಿಕವಾಗಿ ಒದಗಿದ ಕೆಲವು ವ್ಯವಹಾರಗಳನ್ನು ನಿರಭಿಸಂಧಿಯಿಂದ ಮಾಡುತ್ತಿರುವವನಾದರೂ)

ಯಾತಿ ನೀರಸತಾಂ ಜಂತುರಪ್ರವೃತ್ತೇಶ್ಚ ಚೇತಸಃ ।
ಯಸ್ಯಾಹಂ ಕಿಂಚಿದೇವೇಹ ನ ಕರೋಮೀತಿ ನಿಶ್ಚಯಃ ॥ ೩೫ ॥

ಭೋಗೌಘಕಾಮವಾಂಸ್ತತ್ರ ಕಃ ಕರೋತು ಜಹಾತು ವಾ ।
ತಸ್ಮಾನ್ನಿತ್ಯಮಕರ್ತಾಹಮಿತಿ ಭಾವನಯೇದ್ಧಯಾ ।
ಪರಮಾಮೃತನಾಮ್ನೀ ಸಾ ಸಮತೈವಾವಶಿಷ್ಯತೇ ॥ ೩೬ ॥

ಸ್ವಲ್ಪ ಮಾತ್ರವೂ ಅದರಿಂದ ಲೇಪವನ್ನು ಹೊಂದದೆ ಅವಿಕ್ರಿಯನಾಗಿಯೆ ಇರುವನು.

೩೫. ವಿವೇಕಶಾಲಿಯಾದ ಯಾವ ಮಹಾನುಭಾವನು "ನಾನು ಈ ಜಗತ್ತಿನಲ್ಲಿ ಯಾವುದೊಂದು ಕರ್ಮವನ್ನೂ ಮಾಡುವವನು ಅಲ್ಲವೇ ಅಲ್ಲವು ಅಂದರೆ ಕರ್ತೃವು ಅಲ್ಲವು"–ಎಂಬೀಭಾವನೆಯನ್ನು ಮನಸ್ಸಿನೊಳಗೆ ದೃಢವಾಗಿ ನಿಶ್ಚಯಿಸಿಕೊಂಡಿರುವನೋ ಅವನು ಕ್ರಮವಾಗಿ ಸರ್ವವ್ಯವಹಾರಗಳಲ್ಲಿಯೂ ವೈರಾಗ್ಯವನ್ನು ಪಡೆಯುವನು. ಅವನ ಮನಸ್ಸು ಯಾವುದೊಂದರಲ್ಲಿಯೂ ಪ್ರವರ್ತಿಸದೆ ಸರ್ವತ್ರ ಪರಾಙ್ಮುಖವಾಗಿ ಬಿಡುವುದು. ಇಂತಹ ವಿವೇಕ ವೈರಾಗ್ಯಸಂಪನ್ನನಾದವನು ಯಾವನುತಾನೇ ಈ ಜಗತ್ತಿನಲ್ಲಿ ಯಾವ ಭೋಗಸಮುದಾಯಗಳಲ್ಲಿ ಆಶೆಯುಳ್ಳವನಾಗಿ ಯಾವ ಕಾರ್ಯವನ್ನು ಮಾಡುವನು ಅಥವಾ ಯಾವುದನ್ನು ಮಾಡದೆ ಬಿಡುವನು ?

(ವಿರಕ್ತನಾದವನು ಯಾವನೂ ಭೋಗೇಚ್ಛೆಯಿಲ್ಲದವನಾದ ಕಾರಣ ಯಾವುದೊಂದು ಕಾರ್ಯವನ್ನೂ ಸ್ವತಃ ಮಾಡಲು ಪ್ರವರ್ತಿಸುವುದೂ ಇಲ್ಲ. ಬಿಡುವುದೂಇಲ್ಲ: ಕೇವಲ ತಟಸ್ಥನಾಗಿರುವನು: ಎಂದು ತಾತ್ಪರ್ಯ.)

೩೬. ಅದುಕಾರಣ, ಹೀಗೆ "ನಾನು ಎಂದಿಗೂ ಕರ್ತೃವಲ್ಲವೇ ಅಲ್ಲವು ಎಂಬ ಭಾವನೆಯು ಸರ್ವದಾ ಮನಸ್ಸಿನಲ್ಲಿ ದೃಢನಿಶ್ಚಿತವಾಗಿಬಿಟ್ಟರೆ ಆಗ ಅತ್ಯಂತ ನಿಃಶ್ರೇಯಸಹೇತುವಾದ ಸಮತ್ವಸ್ಥಿತಿಯು ಮಾತ್ರವೇ ಸ್ಥಿರವಾಗಿ ಉಳಿಯುವುದು. ಆ ಸಮತ್ವಸ್ಥಿತಿಯನ್ನು ಜ್ಞಾನಿಗಳು "ಪರಮಾಮೃತ"ವೆಂಬ ಹೆಸರಿನಿಂದ ಕರೆಯುವರು. (ವ್ಯವಹರಿಸುವರು.)

ಅಥ ಸರ್ವಂ ಕರೋಮೀತಿ ಮಹಾಕರ್ತೃತಯಾ ತಯಾ ।
ಯದೀಚ್ಛಸಿ ಸ್ಥಿತಂ ರಾಮ ತತ್ತಾಮುತ್ತಮಾಂ ವಿದುಃ ॥ ೩೭ ॥

ಅಹೋ ಯನ್ನ ಕರೋಮೀಮಂ ಸಮಗ್ರಂ ಜಾಗತಂ ಭ್ರಮಂ ।
ರಾಗದ್ವೇಷಕ್ರಮಸ್ತತ್ರ ಕುತೋಽನ್ಯಸ್ಯಾತ್ಯಸಂಭವಾತ್ ॥ ೩೮ ॥

---

೩೭. ಅಥವಾ, "ನಾನೇ ಎಲ್ಲವನ್ನೂ ಮಾಡತಕ್ಕವನು. (ಸರ್ವಕ್ಕೂ ಕರ್ತೃ) ಎಂದು ಮಹಾಕರ್ತೃತ್ವವನ್ನು ತನ್ನಲ್ಲಿ ಆರೋಪಿಸಿಕೊಂಡು ವ್ಯವಹರಿಸಬೇಕೆಂಬ ಇಚ್ಛೆಯು ನಿನಗೆ ಇರುವ ಪಕ್ಷದಲ್ಲಿ ಅದೂ ಬಾಧಕವಾಗುವುದಿಲ್ಲ. ಅದೂ ಕೂಡ ಉತ್ತಮವಾದ ಸ್ಥಿತಿಯೆಂದೇ ಜ್ಞಾನಿಗಳ ಅಭಿಪ್ರಾಯವು.

೩೮. ಸಮಗ್ರವಾದ ಜಗದ್ವ್ಯಾಪಾರವೆಲ್ಲವೂ ಕೇವಲ ಭ್ರಾಂತಿಮಯವಾದುದು. ಇಂತಹ ಭ್ರಾಂತಿಮೂಲವಾದ ಯಾವುದೊಂದು ವ್ಯವಹಾರವನ್ನೂ ನಾನು ಮಾಡುವುದೇ ಇಲ್ಲ. ಇಂತಹ ಸ್ಥಿತಿಯಲ್ಲಿ ನನಗಿಂತಲೂ ಬೇರೆಯಾದ ಮತ್ತೊಂದು ವಸ್ತುವಿದ್ದರಲ್ಲವೆ ಅದರಿಂದ ರಾಗದ್ವೇಷಗಳು ಉಂಟಾಗಬಹುದು. ಅಂತಹ ರಾಗದ್ವೇಷ ಹೇತುವಾದ ನನಗಿಂತ ಬೇರೆಯಾದ ಮತ್ತೊಂದು ವಸ್ತುವೇ ಅತ್ಯಂತಾಸಂಭವವಾದ ಕಾರಣ ನನಗೆ ರಾಗದ್ವೇಷಗಳ ಪ್ರಸಕ್ತಿಯು ತಾನೇ ಏತರಿಂದ ಹೇಗೆ ಸಂಭವಿಸಬಲ್ಲುದು ? (ಸಂಭವಿಸುವುದೇ ಇಲ್ಲವೆಂದು ಭಾವ.)

(ಈ ಶ್ಲೋಕದ ಒನೆಯ ಪಾದವು ಕುತೋಽನ್ಯಸ್ಯಾತ್. ಸಂಭವಾತ್ ಎಂದಿಟ್ಟುಕೊಂಡು ಮೇಲಣ ವ್ಯಾಖ್ಯಾನಮಾಡಿದೆ. ಯತಃಸ್ಯಾತ್ ತಸ್ಯ ಮದನ್ಯಸ್ಯ ಅತ್ಯಂತಂ ಅಸಂಭವಾತ್ ಆದರೆ ಕುತೋಽನ್ಯಸ್ಯಾನ್ಯಾಸಂಭವಾತ್ ಎಂಬ ಪಾಠಾಂತರವೂ ಸೂಚಿತವಾಗಿದೆ. ಅಕರ್ತುಃ ಅನ್ಯಸ್ಯಕರ್ತುರೇವ ಅನ್ಯಸ್ಯರಾಗಾದೇಃ ಸಂಭವಾತ್ ಅಂದರೆ ಅಕರ್ತನಾದ ಆತ್ಮನಿಗಿಂತ ಅನ್ಯನಾದ ಕರ್ತೃವಿಗೇನೇ ರಾಗದ್ವೇಷಾದಿಗಳು ಸಂಭವಿಸುವುವು. ಕರ್ತೃವಲ್ಲದ (ಅಕರ್ತೃ) ಆತ್ಮನಿಗೆ ರಾಗದ್ವೇಷಗಳ ಪ್ರಸಕ್ತಿಯೇ ಇಲ್ಲವು ಎಂದು ತಾತ್ಪರ್ಯ.)

ಯದನ್ಯೇನ ಶರೀರಂ ತು ದಗ್ಧಮನ್ಯೇನ ಲಾಲಿತಂ ।
ಸೋऽಸ್ಮದಾರಂಭ ಏವಾತಃ ಕಃ ಖೇದೋಲ್ಲಾಸಯೋಃ ಕ್ರಮಃ ॥ ೩೯ ॥

ಮತ್ಸುಖಾಸುಖವಿಸ್ತಾರೇ ಜಗಜ್ಜಾಲಕ್ಷಯೋದಯೇ ।
ಅಯಂ ಕರ್ತೇತಿ ಮತ್ವಾಂತಃ ಕಃ ಖೇದೋಲ್ಲಾಸಯೋಃ ಕ್ರಮಃ ॥ ೪೦ ॥

ಖೇದೋಲ್ಲಾಸವಿಲಾಸೇಷು ಸ್ವಾತ್ಮಕರ್ತೃತಯೈತಯಾ ।
ಸ್ವಯಮೇವ ಲಯಂ ಯಾತೇ ಸಮತೈವಾವಶಿಷ್ಯತೇ ॥ ೪೧ ॥

ಸಮತಾ ಸರ್ವಭೂತೇಷು ಯಾಸೌ ಸತ್ಯಾ ಪರಾ ಸ್ಥಿತಿಃ ।
ತಸ್ಯಾಮವಸ್ಥಿತಂ ಚಿತ್ತಂ ನ ಭೂಯೋ ಜನ್ಮಭಾಕ್ ಮನಾಕ್ ॥ ೪೨ ॥

---

೩೯. ನಾನು ಎಲ್ಲಕ್ಕೂ ಕರ್ತೃವೆಂದಿಟ್ಟುಕೊಂಡರೂ ಕೂಡ ಆಗಲೂ ಇತರರು ಶರೀರವನ್ನು ಸುಟ್ಟುಬಿಟ್ಟರೆಂಬುದೂ ಇನ್ನು ಬೇರೆಯವರು ಅದನ್ನು ಲಾಲಿಸಿ ಪೋಷಿಸಿದರೆಂಬುದೂ ಇದೆಲ್ಲವೂ ನಾವು ಮಾಡಿದ ಕಾರ್ಯವೇ ಆಗಿಬಿಡುವ ಕಾರಣ ಈ ಸಂದರ್ಭದಲ್ಲಿಯೂ ದುಃಖಹರ್ಷಗಳುಂಟಾಗುವ ಪ್ರಸಕ್ತಿಗೆ ಹೇತುವು ಯಾವುದಿರುವುದು ? [ಯಾವುದೂ ಇಲ್ಲವಷ್ಟೆ?]

೪೦. ನನ್ನ ಸುಖದುಃಖಗಳು ಹೆಚ್ಚುವ ವಿಷಯದಲ್ಲಿಯೂ, ಜಗತ್ಸಮುದಾಯಗಳ ಲಯ ಉತ್ಪತ್ತಿ ಮುಂತಾದವುಗಳಿಗೂ ನಾನೇ ಕರ್ತೃವು ಎಂದು ಮನಸ್ಸಿನೊಳಗೆ ದೃಢವಾಗಿ ನಿಶ್ಚಯಮಾಡಿಕೊಂಡಿರುವಾತನಿಗೆ ದುಃಖವಾಗಲಿ ಸಂತೋಷವಾಗಲಿ ಉಂಟಾಗುವುದೆಂದು ಊಹಿಸುವ ಬಗೆಯಾವುದು ?

೪೧. ಹೀಗೆ, ಎಲ್ಲಕ್ಕೂ ನಾನೇ ಕರ್ತೃವಾಗಿರುವೆನು, ಎಂಬೀ ದೃಢವಾದ ಭಾವನೆಯಿಂದ ದುಃಖ, ಉಲ್ಲಾಸ, ವಿಲಾಸ ಮುಂತಾದವುಗಳು ತಮಗೆ ತಾವಾಗಿಯೇ ಲಯವನ್ನು ಹೊಂದಿದ ಬಳಿಕ ಸರ್ವಸಮತ್ವರೂಪ ಅತಿ ಪ್ರಶಸ್ತವಾದ ಸ್ಥಿತಿಯು ಮಾತ್ರವೇ ಉಳಿದುಕೊಳ್ಳುವುದೇ [ಅವಶಿಷ್ಟವಾಗುವುದು.]

೪೨. ಹೀಗೆ ಸರ್ವಭೂತಗಳಲ್ಲಿಯೂ ಸಮತ್ವರೂಪಜ್ಞಾನವಾವುದುಂಟೋ ಅದು ಪರಮಾರ್ಥಸತ್ಯವು: ಅದೇ ಪರಮಗತಿಯು: ಇಂತಹ ಸಾಮ್ಯಸ್ಥಿತಿಯಲ್ಲಿ

ಅಥವಾ ಸರ್ವಕರ್ತೃತ್ವಮಕರ್ತೃತ್ವಂ ಚ ರಾಘವ ।
ಸರ್ವಂ ತ್ಯಕ್ತ್ವಾ ಮನಃ ಪೀತ್ವಾ ಯೋಸಿ ಸೋಸಿ ಸ್ಥಿರೋ ಭವ ॥ ೪೩ ॥

ಅಹಂ ಸೋಽಹಮಯಂ ನಾಹಂ ಕರೋಮೀದಮಿದಂ ತು ನ ।
ಇತಿ ಭಾವಾನುಸಂಧಾನಮಯೀ ದೃಷ್ಟಿರ್ನ ತುಷ್ಟಯೇ ॥ ೪೪ ॥

ಚಿರಕಾಲದಿಂದ ಸ್ಥಿರವಾಗಿ ನಿಂತಿರುವ ಚಿತ್ತವು ಪುನಃ ಎಂದೆಂದಿಗೂ ಸ್ವಲ್ಪ ಮಾತ್ರವೂ ಜನನ ಮರಣಾದಿ ಕ್ಲೇಶಗಳಿಗೆ ಗುರಿಯಾಗುವುದೇ ಇಲ್ಲ.

[ಹೀಗೆ ಇದುವರೆವಿಗೆ ಅಭ್ಯಾಸಬಲದಿಂದ ಕರ್ತೃತ್ವ ಅಕರ್ತೃತ್ವಗಳೆಂಬ ಎರಡು ದೃಷ್ಟಿಗಳನ್ನು ವ್ಯುತ್ಪಾದಿಸಿ ಇನ್ನು ಮುಂದೆ ಪರಿನಿಷ್ಠಿತವಾದ ಪಾರಮಾರ್ಥಿಕ ದೃಷ್ಟಿಯನ್ನು ವಿವರಿಸುವರು.]

೪೩. ಅಯ್ಯ ರಾಘವ ಇನ್ನೂ ಹೇಳುವೆನು. ಕೇಳು ಅಥವಾ ನೀನು [ಮೇಲೆ ಹೇಳಿದಂತಹ] "ಸರ್ವಕ್ಕೂ ನಾನು ಕರ್ತೃ"ವೆಂಬ ಭಾವನೆಯನ್ನೂ ಮತ್ತು "ಕರ್ತೃವಲ್ಲವು'' ಎಂಬ ಭಾವನೆಯನ್ನೂ ಬಿಟ್ಟು ಬಿಟ್ಟು ನಿನ್ನ ಮನಸ್ಸನ್ನು ಅಡಗಿಸಿ ಬಿಟ್ಟರೆ ಆಗ ನೀನು ವಸ್ತುತಃ ಯಾವ ಅದ್ವಿತೀಯಾತ್ಮನಾಗಿರುವೆಯೋ ಅದೇ ಕೇವಲಾತ್ಮನಾಗಿಯೇ ಇದ್ದುಕೊಂಡಿರುವೆ. ಈ ಪರಿನಿಷ್ಠಿತವಾದ ಪಾರಮಾರ್ಥಿಕ ಸ್ಥಿತಿಯಲ್ಲಿ ನೀನು ಅಚಲವಾಗಿ ನಿಲ್ಲುವವನಾಗು.

೪೪. "ಈ ದೇಹದಲ್ಲಿ ಪ್ರಸಿದ್ಧನಾದ ಆತ್ಮನು ಸರ್ವದೇಹಾತ್ಮಕ ಸಮಷ್ಟಿ ರೂಪನು. ಈ ದೇಹೇಂದ್ರಿಯಾದಿಗಳು ನಾನು ಅಲ್ಲ. ಈ ದೇಹದಲ್ಲಿ ಪ್ರಸಿದ್ಧವಾದ ಆತ್ಮನು ಮಾತ್ರವೇ ನಾನು ಅಲ್ಲ. ನಾನು ಇದನ್ನು ಮಾಡುವೆನು. ಇದನ್ನು ನಾನು ಮಾಡುವುದೇ ಇಲ್ಲ'' ಎಂಬೀ ಮೊದಲಾದ ಭಾವನೆಗಳನ್ನು ಸರ್ವದಾ ಮನಸ್ಸಿನಲ್ಲಿ ಅನುಸಂಧಾನ ಮಾಡಿಕೊಳ್ಳುತ್ತಿರುವ ದೃಷ್ಟಿಯಾವುದುಂಟೋ ಅದು ಎಂದಿಗೂ ಆನಂದಹೇತುವಾಗುವುದಿಲ್ಲ.

ಸಾ ಕಾಲಸೂತ್ರಪದವೀ ಸಾ ಮಹಾವೀಚಿವಾಗುರಾ ।
ಸಾಸಿಪತ್ರವನಶ್ರೇಣೀ ಯಾ ದೇಹೋಽಹಮಿತಿ ಸ್ಥಿತಿಃ ॥ ೪೫ ॥

ಸಾ ತ್ಯಾಜ್ಯಾ ಸರ್ವಯತ್ನೇನ ಸರ್ವನಾಶೇಽಪ್ಯುಪಸ್ಥಿತೇ ।
ಸ್ಪ್ರಷ್ಟವ್ಯಾ ಸಾ ನ ಭವ್ಯೇನ ಸಶ್ವಮಾಂಸೇವ ಪುಪ್ಕಸೀ ॥ ೪೬ ॥

ತಯಾ ಸುದೂರೋಜ್ಝಿತಯಾ ದೃಷ್ಟ್ಯಾ ಪಟಲಲೇಖಯಾ ।
ಉದೇತಿ ಪರಮಾ ದೃಷ್ಟಿರ್ಜ್ಯೋತ್ಸ್ನೇವ ವಿಗತಾಂಬುದಾ ।
ಯಯಾಭ್ಯುದಿತಯಾ ರಾಮ ತೀರ್ಯತೇ ಭವಸಾಗರಃ ॥ ೪೭ ॥

---

೪೫. "ದೇಹವೇ ನಾನು" ಎಂಬ ಸ್ಥಿತಿಯಾವುದುಂಟೋ ಅದೇ ಕಾಲಸೂತ್ರವೆಂಬ ಮಹಾ ನರಕಕ್ಕೆ ಮಾರ್ಗವು. ಅದೇ ಮಹಾ ವೀಚಿ ಎಂಬ ನರಕಕ್ಕೆ ಸೆಳೆದೊಯ್ಯುವ ಬಲೆಯು. ಅದೇ ಅಸಿಪತ್ರವನವೆಂಬ ನರಕ ವಿಶೇಷಗಳ ಪಙ್ಕ್ತಿಯು. ಸಂಶಯಪಡಬೇಡ.

೪೬. "ದೇಹವೇ ನಾನು" ಎಂಬ ದೇಹಾತ್ಮ ಭ್ರಾಂತಿಯು ಆತ್ಮವಿನಾಶಕ್ಕೆ ಮೂಲವು. ಅದುಕಾರಣ ಆತ್ಮ ಶ್ರೇಯಸ್ಸನ್ನು ಅಭಿಲಷಿಸುವ ವಿವೇಕಶಾಲಿಯಾದವನು ತನ್ನ ಸರ್ವಸ್ವವೂ ನಾಶವಾಗತಕ್ಕ ಸಂಭವವು ಒದಗಿದರೂ ಕೂಡ ಅದನ್ನೂ ನಿರ್ಲಕ್ಷಿಸಿ ಸರ್ವಪ್ರಯತ್ನಗಳಿಂದಲೂ ಸ್ವಾತ್ಮವಿನಾಶಮೂಲವಾದ ದೇಹಾತ್ಮ ಭ್ರಾಂತಿಯನ್ನು ಬಿಟ್ಟುಬಿಡಬೇಕು. ಶ್ವಮಾಂಸ (ನಾಯಿಯ ಮಾಂಸ) ವನ್ನು ಧರಿಸಿರುವ ಚಂಡಾಲ ಸ್ತ್ರೀಯನ್ನು ಮುಟ್ಟದೆಯೇ ದೂರದಲ್ಲಿರಿಸುವಂತೆ ಹೇಯವಾದ ದೇಹಾತ್ಮ ಬುದ್ಧಿಯನ್ನೂ ಸರ್ವಥಾ ಸ್ಪರ್ಶಮಾಡದೆ ಬಲು ದೂರದಲ್ಲಿರಿಸಬೇಕು.

೪೭. ವಿಶುದ್ಧವಾದ ಕೇವಲಾತ್ಮಜ್ಞಾನವು ಪ್ರಕಾಶಿಸುವುದಕ್ಕೆ ಅಡ್ಡಿಯಾಗಿ, ಆವರಣ ವಿಕ್ಷೇಪಗಳಿಗೆ ಕಾರಣಭೂತವಾಗಿ, ದುರ್ಭೇದ್ಯವಾಗಿರುವ ಈ ದೇಹಾತ್ಮ ಬುದ್ಧಿಯನ್ನು ಹತ್ತಿರಕ್ಕೆ ಬರಗೊಡಿಸದೆ ಬಹು ದೂರದಲ್ಲಿ ಓಡಿಸಿಬಿಟ್ಟರೆ ಆಗ ಚಂದ್ರಮಂಡಲವನ್ನು ಕವಿದುಕೊಂಡಿರುವ ಮೇಘಮಾಲೆಯು ತೊಲಗಿದ ಕೂಡಲೆ ಚಂದ್ರನ ಬೆಳುದಿಂಗಳು ತಾನಾಗಿಯೇ ಉದಯಿಸಿ ಬೆಳಗುವಂತೆ ಅತ್ಯಂತ ಪ್ರಶಸ್ತವಾದ ಸ್ವತಃ ಪ್ರಕಾಶವಾದ ಪಾರಮಾರ್ಥಿಕ ಆತ್ಮಜ್ಞಾನವು ತಾನಾಗಿಯೇ ಆವಿರ್ಭವಿ

ಕರ್ತಾ ನಾಸ್ಮಿ ನ ಚಾಹಮಸ್ಮಿ ಸ ಇತಿ ಜ್ಞಾತ್ವೈವಮಂತಃ ಸ್ಫುಟಂ ।
ಕರ್ತಾ ಚಾಸ್ಮಿ ಸಮಗ್ರಮಸ್ಮಿ ತದಿತಿ ಜ್ಞಾತ್ವಾಥವಾ ನಿಶ್ಚಯಂ

ಕೋಽಪ್ಯೇವಾಸ್ಮಿ ನ ಕಿಂಚಿದೇವಮಿತಿ ವಾ ನಿರ್ಣೀಯ ಸರ್ವೋತ್ತಮೇ
ತಿಷ್ಠ ತ್ವಂ ಸ್ವಪದೇ ಸ್ಥಿತಾಃ ಪದವಿದೋ ಯತ್ರೋತ್ತಮಾಃ ಸಾಧವಃ ॥ ೪೮ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
"ಕರ್ತೃತ್ವವಿಚಾರಯೋಗೋಪದೇಶಕರಣಂ" ನಾಮ ಷಟ್ಪಂಚಾಶಃ ಸರ್ಗಃ

ಸುವುದು. ಅಯ್ಯ ರಾಮಚಂದ್ರ, ಹೀಗೆ ಆವಿರ್ಭವಿಸಿದ ಆತ್ಮಜ್ಞಾನವೆಂಬ ಸುದೃಢವಾದ ನಾವೆಯ ಸಹಾಯದಿಂದ ಅಪಾರವಾದ ಸಂಸಾರವೆಂಬ ಸಮುದ್ರವನ್ನು ಸುರಕ್ಷಿತವಾಗಿ ದಾಟಲು ಸಾಧ್ಯವಾಗುವುದು.

(ಆತ್ಮಜ್ಞಾನದಿಂದ ಮಾತ್ರವೇ ಸಂಸಾರ ಸಾಗರವನ್ನು ದಾಟಲು ಸಾಧ್ಯ. ಉಪಾಯಾಂತರಗಳಿಂದ ಸಾಧ್ಯವೇ ಇಲ್ಲ ಎಂಬುದನ್ನು ಅವಧರಿಸಬೇಕು.)

೪೮. ಅಯ್ಯ ರಾಮ, ಈಗ ನೀನು "ನಾನು ಯಾವುದೊಂದಕ್ಕೂ ಕರ್ತೃವಲ್ಲವು. ಮತ್ತು ಕರ್ತೃತ್ವ ಪ್ರಯೋಜಕಗಳಾದ ಈ ದೇಹಾದಿಗಳೂ ನಾನು ಅಲ್ಲ" ಎಂದು ಸುಸ್ಪಷ್ಟವಾಗಿ ನಿನ್ನ ಮನಸ್ಸಿನಲ್ಲಿ ನಿಶ್ಚಯಮಾಡಿಕೊಳ್ಳು. ಅಥವಾ "ಸರ್ವಕ್ಕೂ ನಾನೇ ಕರ್ತೃವಾಗಿರುವೆನು. ಮತ್ತು ಸರ್ವಸಮಷ್ಟಿಭೂತವಾದ ಈ ಬ್ರಹ್ಮಾಂಡವೂ ನಾನೇ ಆಗಿರುವೆನು" ಎಂದಾಗಲಿ ದೃಢನಿಶ್ಚಯಮಾಡಿಕೊ. ಅದೂ ಇಲ್ಲದಿದ್ದರೆ "ಪರಿದೃಶ್ಯಮಾನವಾದ ಈ ವಸ್ತು ಜಾತವೊಂದೂ ನಾನು ಅಲ್ಲ; ಲೋಕಪ್ರಸಿದ್ಧವಾದ (ಅಜ್ಞಜನರು ಭಾವಿಸಿರುವಂತಹ) ಪರಿಚ್ಛಿನ್ನನೂ ಜಡನೂ ದುಃಖಸ್ವಭಾವಾತ್ಮನೂ ಅಲ್ಲ. ಆದರೆ ಇದಕ್ಕೆ ವಿಲಕ್ಷಣನಾದ ಪರಿಪೂರ್ಣನಾದ ಸತ್ಯಚಿದ್ರೂಪ ಪರಮಾತ್ಮನೇ ನಾನು" ಎಂಬುದಾಗಿಯಾದರೂ ಸುದೃಢವಾಗಿ ನಿರ್ಣಯಮಾಡಿಕೊಂಡು ಸರ್ವೋತ್ಕೃಷ್ಟವಾದ ಪರಮಪದದಲ್ಲಿ (ಸ್ವಾತ್ಮ ಸ್ಥಿತಿಯಲ್ಲಿ) ಸದಾ ಕದಲದೆ ಇದ್ದುಬಿಡು. ಬ್ರಹ್ಮವೇತ್ತೃ (ಜ್ಞಾನಿಗಳಾದ) ಉತ್ತಮರಾದ ಸಾಧುಜನರೆಲ್ಲರೂ ಸರ್ವದಾ ಈ ಸ್ವಾತ್ಮಸ್ಥಿತಿಯಲ್ಲಿಯೇ ಅಚಲರಾಗಿದ್ದುಕೊಂಡು ಪರಮಪುರುಷಾರ್ಥವನ್ನು ಗಳಿಸಿಕೊಂಡಿರುವರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ಕರ್ತೃತ್ವವಿಚಾರ
ಯೋಗೋಪದೇಶಕರಣ" ಎಂಬ ಐವತ್ತಾರನೆಯ ಸರ್ಗವು

ಸಪ್ತಪಂಚಾಶಃ ಸರ್ಗಃ

ಶ್ರೀ ರಾಮ ಉವಾಚ:—

ಸತ್ಯಮೇತತ್ತ್ವಯಾ ಬ್ರಹ್ಮನ್ ಯದುಕ್ತಂ ಸೂಕ್ತಿಸುಂದರಂ ।
ಅಕರ್ತೈವ ಕರ್ತಾತ್ಮಾ ಭೋಕ್ತಾಭೋಕ್ತೈವ ಭೂತಕೃತ್ ॥ ೧ ॥

ಸರ್ವೇಶ್ವರಃ ಸರ್ವಗಶ್ಚ ಚಿನ್ಮಾತ್ರಮಮಲಂ ಪದಂ ।
ಸ್ಥಾನಂ ಭುವಿ ವಪುರ್ದೇವಃ ಸರ್ವಭೂತಾಂತರಸ್ಥಿತಃ ॥ ೨ ॥

ಐವತ್ತೇಳನೆಯ ಸರ್ಗ

೧. ಶ್ರೀ ರಾಮನು (ಶ್ರೀ ವಸಿಷ್ಠ ಋಷಿಗಳನ್ನು ಕುರಿತು) ಹೇಳುವನು. ಸ್ವಾಮಿ, ಬ್ರಹ್ಮರ್ಷಿಗಳೇ, ತಾವು ಇದುವರೆವಿಗೆ ಉಪದೇಶಮಾಡಿದುದೆಲ್ಲವೂ ಯಥಾರ್ಥವೇ (ಸತ್ಯ-ಪ್ರಮಾಣ) ಸರಿ! ತಮ್ಮ ವಾಕ್ಯಗಳೂ ಅತಿ ಸುಂದರವಾದುವು. ಆತ್ಮನು ನಿಜವಾಗಿ ಸ್ವತಃ ಕರ್ತೃವಲ್ಲದಿದ್ದರೂ ಕೂಡ ಕರ್ತೃವೆನ್ನಿಸುವನು. ಹಾಗೆಯೇ ಭೋಕ್ತೃವಲ್ಲದಿದ್ದರೂ ಭೋಕ್ತೃವೆಂದೂ ಸಕಲ ಭೂತಗಳನ್ನು ಸೃಷ್ಟಿಸುವವನೆಂದೂ ಎನ್ನಿಸಿಕೊಳ್ಳುವನು.

೨. ದೇವ (ಸ್ವಯಂಜ್ಯೋತಿ ಸ್ವರೂಪನಾದ) ನಾದ ಆತ್ಮನು ಸರ್ವೇಶ್ವರನೂ ಸರ್ವಗತನೂ ಕೇವಲ ಚಿನ್ಮಾತ್ರನೂ ಅವಿದ್ಯಾದಿದೋಷರಹಿತನೂ (ನಿತ್ಯಶುದ್ಧನೂ) ಯೋಗಿಗಳಿಗೆ ಗಮ್ಯವಾದ ಪರಮಪದವೂ ಆಗಿರುವನು. ಸರ್ವಭೂತಗಳೂ ಆತ್ಮನಲ್ಲಿ ನೆಲೆಸಿರುವುವು. (ಸ್ಥಾನಂ ತಿಷ್ಠಂತಿ ಸರ್ವಭೂತಾನಿ ಅಸ್ಮಿನ್ ಇತಿ) ಜಗತ್ತಿನಲ್ಲಿ ಚತುರ್ವಿಧ ಭೂತಗ್ರಾಮಗಳಿಗೆ ಶರೀರದಂತೆ ಇವನೇ ಆಶ್ರಯನು. ಮತ್ತು ಸರ್ವಭೂತಗಳ ಹೃದಯದಲ್ಲಿ ಅಂತರ್ಯಾಮಿಯಾಗಿಯೂ ಇರುವನು.

ಹೃದಯಂಗಮತಾಂ ಪ್ರಾಪ್ತಮಿದಾನೀಂ ಬ್ರಹ್ಮ ಮೇ ವಿಭೋ ।
ತ್ವದುಕ್ತಿಭಿರ್ಯಥಾಂಭೋದಧಾರಾಭಿರ್ಭೂಭೃದವ್ಯಥಃ ॥ ೩ ॥

ಔದಾಸೀನ್ಯಾದನಿಚ್ಛತ್ವಾನ್ನ ಭುಂಕ್ತೇ ನ ಕರೋತಿ ಚ ।
ಸಮಗ್ರಾಲೋಕಕಾರಿತ್ವಾದ್ಭುಂಕ್ತೇ ದೇವಃ ಕರೋತಿ ಚ ॥ ೪ ॥

ಕ್ವಿಂತ್ವಯಂ ಭಗವನ್ಸ್ಫಾರ ಸಂಶಯೋ ಮೇ ಹೃದಿ ಸ್ಥಿತಃ ।
ತಂ ತ್ವಂ ಭಿಂಧಿ ಗಿರಾ ಬ್ರಹ್ಮನ್ ದೀಧಿತ್ಯೇಂದುರ್ಯಥಾ ತಮಃ ॥ ೫ ॥

(ಮಯಾತತಮಿದಂ ಸರ್ವಂ ಜಗತ್ ಅವ್ಯಕ್ತಮೂರ್ತಿನಾ । ಮತ್‌ಸ್ಥಾನಿ ಸರ್ವಭೂತಾನಿನ ಚಾಹಂತೇಷ್ವವಸ್ಥಿತಃ ॥ ಗೀತಾ ೯-೪ ಗಮನಿಸಿ.)

೩. ಸ್ವಾಮಿ, ವಿಭುವಾದ ಗುರುವೇ, ತಮ್ಮ ಉಪದೇಶದಿಂದ ಈಗ ನನಗೆ ಆತ್ಮಯಥಾತ್ಮ್ಯಜ್ಞಾನವುಂಟಾಗಿರುವ ಕಾರಣ ಬ್ರಹ್ಮಸ್ವರೂಪವು (ಹೃದಯಂಗಮವಾಗಿ) ಅನುಭವಾರೂಢವಾಗಿರುವುದು. ಮೇಘಗಳ ವರ್ಷಧಾರೆಯಿಂದ ಪರ್ವತವು ಹೇಗೆ ಬೇಸಿಗೆಯ ಸಂತಾಪಶೂನ್ಯವಾಗುವುದೋ ಹಾಗೆಯೇ ತಮ್ಮ ಸೂಕ್ತಗಳಿಂದ ನಾನೂ ಸಕಲೋಪದ್ರವರಹಿತನಾಗಿ ನಿತ್ಯಾನಂದರೂಪನಾಗಿರುವೆನು.

[ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ॥ ಸಂಪಶ್ಯನ್ ಬ್ರಹ್ಮಪರಮಂ ಯಾತಿನಾನ್ಯೇನ ಹೇತುನಾ ॥ ಬೃಹದಾರಣ್ಯಕ.]

೪. ದೇವನಾದ (ಸ್ವಪ್ರಕಾಶ ಆತ್ಮನು ಸ್ವಭಾವತಃ ಕೇವಲ ಉದಾಸೀನನೂ ಅವಿಕ್ರಿಯನೂ ಆಗಿರುವುದರಿಂದ ಏನನ್ನೂ ಮಾಡುವುದಿಲ್ಲ. (ಯಾವುದಕ್ಕೂ ಕರ್ತೃವಾಗುವುದಿಲ್ಲ.) ನಿಸ್ಸ್ಪೃಹನಾಗಿರುವ ಕಾರಣ ಯಾವುದನ್ನೂ ಅನುಭವಿಸುವವನೂ ಅಲ್ಲ [ಭೋಕ್ತೃವೂ ಅಲ್ಲ.] ಆದರೆ, ಸಮಗ್ರವಾದ ದೃಶ್ಯ [ಜಗತ್]ಕ್ಕೂ ಕಾರಣನಾಗಿಯೂ ಸಾಕ್ಷಿಯಾಗಿಯೂ ಇರುವುದರಿಂದ ಕರ್ತೃವೂ ಭೋಕ್ತೃವೂ ಆಗಿರುವನೆಂದು ತಿಳಿದಿರುವೆನು.

೫. ಮಹಾಮಹಿಮರಾದ ಗುರುವರ್ಯರೇ, ಹೀಗೆ ಈ ತತ್ವಗಳೆಲ್ಲವೂ ನನ್ನ ಮನಸ್ಸಿನಲ್ಲಿ ದೃಢವಾಗಿ ನಿಶ್ಚಿತವಾಗಿರುವುವು. ಆದರೆ ಇದೊಂದು [ಮುಂದೆ

ಇದಂ ಸತ್ತದಿದಂ ವಾ ಸದಯಂ ಸೋಽಹಮಿದಂ ನತು ।
ಅಯಮೇಕೋ ದ್ವಿತೀಯೋಽಯಮಿತ್ಯಾದಿಕಲನಾಮಯಂ ॥ ೬ ॥

ಏಕಸ್ಮಿನ್ ವಿದ್ಯತೇ ಧ್ವಾಂತೇ ನೀಹಾರ ಇವ ಭಾಸ್ಕರೇ ।
ಇದಂ ಪ್ರಥಮಮೇವಾಚ್ಛೇ ಕಥಮಾತ್ಮನಿ ಸಂಸ್ಥಿತಂ ॥ ೭ ॥

ಹೇಳುವ] ದೊಡ್ಡ ಸಂಶಯವು ನನ್ನ ಮನಸ್ಸಿನಲ್ಲಿ ಬೇರೂರಿಕೊಂಡು ಪೀಡಿಸುತ್ತಿರುವುದು. ಆದುದರಿಂದ, ಸ್ವಾಮಿ ಬ್ರಹ್ಮಜ್ಞರೇ, ಚಂದ್ರನು ತನ್ನ ಕಿರಣಜಾಲದಿಂದ ಕತ್ತಲೆಯನ್ನು ಓಡಿಸುವಂತೆ, ತಾವು ತಮ್ಮ ಉಪದೇಶವಚನಗಳೆಂಬ ಅಸಿಧಾರೆಯಿಂದ ನನ್ನ ಸಂಶಯದ ಮೂಲವನ್ನು ಕತ್ತರಿಸಿ ನನ್ನನ್ನು ಶೋಕರಹಿತನನ್ನಾಗಿ ಮಾಡಬೇಕೆಂದು ಪ್ರಾರ್ಥಿಸುವೆನು.

೬–೭. (ಸಂಶಯವು ಯಾವುದೆಂದರೆ) ಹಿಂದಿನ ಸರ್ಗದಲ್ಲಿ ತಾವು ಬೋಧಿಸಿದ ಉಪದೇಶವನ್ನು ಪರ್ಯಾಲೋಚಿಸಿದರೆ ಈ ಜಗತ್ತು "ಸತ್" ಎಂದಾಗಲೀ ಅಥವಾ "ಅಸತ್" ಎಂದಾಗಲೀ ಹೇಳಬಹುದು. ಆತ್ಮನೆಂದು ಪ್ರಸಿದ್ಧನಾದ ನಾನು (ಅಹಂ ಎಂಬುದು) ಸಮಷ್ಟಿರೂಪನೇ ಆಗಿರುವೆನಲ್ಲವೆ ವ್ಯಷ್ಟಿ ಶರೀರ ಮಾತ್ರ ರೂಪನಲ್ಲವು ಎಂದೂ ಗೊತ್ತಾಗುವುದು. ಮತ್ತು ಈ ಪ್ರಪಂಚವು ಸಮಷ್ಟಿ ದೃಷ್ಟಿಯಿಂದ ಅದ್ವಿತೀಯ (ಏಕ)ವೆಂದೂ ವ್ಯಷ್ಟಿದೃಷ್ಟಿಯಿಂದ ಸದ್ವಿತೀಯ (ನಾನಾ) ವೆಂದೂ ಹೇಳಿದಂತಾಗುವುದು. ಇದೇ ಮೊದಲಾದ ಅನಿಯತವೂ ಬಹುರೂಪವೂ ಆದ ಕಲ್ಪನೆಗಳಿಂದ ಪ್ರಚುರವಾದ ಜಗತ್ತು ಅದ್ವಿತೀಯನಾದ ನಿಯತವಾದ ಒಂದೇ ಸ್ವಭಾವವುಳ್ಳ ಸ್ವಪ್ರಕಾಶನಾಗಿರುವ ಕಾರಣ ಸ್ವತಏವ ಮೋಹಾಂಧಕಾರ ಶೂನ್ಯನಾಗಿ ಕೇವಲ ಜ್ಞಾನಸ್ವರೂಪನಾದ ನಿಷ್ಕಳಂಕನಾದ (ನಿತ್ಯಶುದ್ಧ ನಿರವದ್ಯ) ಆತ್ಮನಲ್ಲಿ ಹೇಗೆ ತಾನೇ ಇರಲು ಸಾಧ್ಯವಾದೀತು ? ಪರಸ್ಪರ ವಿರುದ್ಧ ಸ್ವಭಾವವುಳ್ಳವುಗಳಿಗೆ ಒಂದು ಕಡೆಯಲ್ಲಿ (ಏಕತ್ರ) ಸಮಾವೇಶವು ಸರ್ವಥಾ ಅಸಂಭವವಲ್ಲವೆ ? ಮಧ್ಯಾಹ್ನ ಸಮಯದಲ್ಲಿ ಸೂರ್ಯನು ಪ್ರತಪಿಸುತ್ತಿರುವಾಗ ಅವನಲ್ಲಿ ಮಂಜು (ಹಿಮವಿದೆ) ಇದೆ ಎಂದು ಹೇಳುವುದು ಲೋಕ ವಿರುದ್ಧವಾದುದಲ್ಲವೆ ? ಸ್ವೋಕ್ತಿವ್ಯಾಘಾತದಂತೆ ತೋರುವ ತಮ್ಮ ಪೂರ್ವಾಪರ ವಚನಗಳ ರಹಸ್ಯವಾದ ವಾಕ್ಯಾರ್ಥವು ನನಗೆ ತಿಳಿಯದೆ ಇರುವುದು. ಒಂದು ವೇಳೆ ತಾವು "ಮಾಯಾ ಶಬಳನಾದ ಆತ್ಮನಲ್ಲಿ ಅನಾದಿಯಾಗಿ ಮೊದಲಿನಿಂದಲೂ ಈ ಜಗತ್ತೆಲ್ಲವೂ ಅನಭಿವ್ಯಕ್ತವಾಗಿ (ಅಸ್ಪಷ್ಟವಾಗಿ ಗೂಢವಾಗಿ) ಇದ್ದುಕೊಂಡು, ಈಗ ಅಭಿವ್ಯಕ್ತವಾಗಿರುವುದು" ಎಂದು ಹೇಳುವು

ಶ್ರೀ ವಸಿಷ್ಠ ಉವಾಚ--

ಸಿದ್ಧಾಂತಕಾಲ ಏವಾಸ್ಯ ಸಂಪ್ರಶ್ನಸ್ಯೋತ್ತರೇ ಸ್ಥಿರಂ ।
ಕಥಯಿಷ್ಯಾಮಿ ತೇ ರಾಮ ಯೇನ ಜ್ಞಾಸ್ಯಸಿ ತತ್ತ್ವತಃ ॥ ೮ ॥

ದಾದರೆ ಆಗಲೂ ನನ್ನ ಸಂದೇಹವು ತೊಲಗುವುದಿಲ್ಲ. ನಿತ್ಯ ಶುದ್ಧನಾದ ಸಚ್ಚಿದಾನಂದಾತ್ಮನಲ್ಲಿ "ಜಗತ್ತು ಅನಾದಿಯಾಗಿದ್ದುಕೊಂಡಿರುವುದು" ಎಂಬ ವಾದವು ತಾನೆ ಅದು ಹೇಗೆ ಸಮಂಜಸವೂ ಪ್ರಮಾಣಸಿದ್ಧವೂ ಆಗುವುದು ? ಎಂಬ ನನ್ನ ಪ್ರಶ್ನೆಯು ಇದ್ದೇ ಇರುವುದು.

೮. ಶ್ರೀ ವಸಿಷ್ಠನು ಹೇಳಿದನು, ಎಲೈ ರಾಮ, ಈಗ ನೀನು ಮಾಡಿದ ಪ್ರಶ್ನೆಗೆ ನಾನು ಇನ್ನು ಮುಂದೆ ನಿರ್ವಾಣಪ್ರಕರಣದ ಉತ್ತರಾರ್ಧದಲ್ಲಿ "ಪಾಷಾಣಾ ಖ್ಯಾನ"ಮುಂತಾದುವನ್ನು ವಿವರಿಸುವ ಕಾಲದಲ್ಲಿಯೇ ಸರಿಯಾದ ಸಮಾಧಾನವನ್ನು [ಉತ್ತರವನ್ನು] ಹೇಳುವೆನು. ಅದರಿಂದ ನೀನು ನಿನ್ನ ಮನಸ್ಸಿನ ಸಂಶಯಗಳೆಲ್ಲ ವನ್ನೂ ತೊಲಗಿಸುವಂತಹ ಆತ್ಮಜ್ಞಾನವನ್ನು ತಾತ್ತ್ವಿಕವಾಗಿ ಪಡೆಯುವೆ.

[ಶ್ರೀರಾಮನು ಪ್ರಶ್ನೆಯಿಂದಲೇ "ಅವನಿಗೆ, ಸ್ವಪ್ರಕಾಶ ಪ್ರತ್ಯಗಾತ್ಮದರ್ಶನವೂ ಆತ್ಮನು ಸರ್ವದೇಹಗಳಲ್ಲಿ ಏಕರೂಪನಾಗಿರುವನೆಂಬ ಜ್ಞಾನವೂ ಜಗತ್ತು ಅನಿರ್ವಚ ವಾದುದು ಎಂಬ ಅರಿವೂ ಉಂಟಾಗಿರುವುದು; ಆದರೆ ವಾಸನಾಕ್ಷಯವಾಗದಿರುವ ಕಾರಣ ಸಕಲ ಸಂಶಯಗಳಿಗೂ ಮೂಲವಾದ ಅವಿದ್ಯೆಯನ್ನು ನಿರ್ಮೂಲಗೊಳಿಸುವ ಆತ್ಮೈಕ್ಯಜ್ಞಾನದ ಅನುಭವವು ಉಂಟಾಗಿಲ್ಲ. ಆದ್ದರಿಂದಲೇ ಅವನು ಈ ರೀತಿ ಸಂಶಯಪಟ್ಟು ಅದರ ಪರಿಹಾರಕ್ಕಾಗಿ ಪ್ರಶ್ನೆ ಮಾಡುತ್ತಿರುವನು" ಎಂದು ಶ್ರೀ ವಸಿಷ್ಠನು ತಿಳಿದುಕೊಂಡು ಪ್ರಕೃತ ವಾಸನಾಕ್ಷಯೋಪಾಯಗಳನ್ನು ಉಪದೇಶಿಸುವ ಇಚ್ಛೆಯಿಂದ ಶ್ರೀರಾಮನ ಪ್ರಶ್ನೆಗೆ ಮುಂದೆ ಉತ್ತರವನ್ನು ಹೇಳುವರೆಂದೂ ಈಗ ಹೇಳಿದರೂ ಮನಸ್ಸಿಗೆ ಹಿಡಿಯಲಾರದೆಂದೂ ಅಭಿಪ್ರಾಯ ವನ್ನು ಸೂಚಿಸಿದ್ದಾರೆ.]

ಮೋಕ್ಷೋಪಾಯಸ್ಯ ಸಿದ್ಧಾಂತಮಸಂಪ್ರಾಪ್ಯ ನ ರಾಘವ ।
ಶ್ರೋತುಂ ಪ್ರಶ್ನೋತ್ತರಾಣೀತ್ಯಾನ್ಯಲಂ ಯೋಗ್ಯೋ ಭವಿಷ್ಯಸಿ ॥ ೯ ॥

ಕಾಂತಾಗೀತಗಿರಾಂ ರಾಮ ತರುಣೋ ಭಾಜನಂ ಯಥಾ ।
ಪ್ರಶ್ನಾನಾಮುತ್ತಮೋಕ್ತೀನಾಂ ಪುಣ್ಯಕೃದ್ಭಾಜನಂ ತಥಾ ॥ ೧೦ ॥

ವೃಥಾ ಭವತಿ ಬಾಲೇಷು ಯಥಾ ರಾಗಮಯೀ ಕಥಾ ।
ನಿರರ್ಥಕಾಲ್ಪಬೋಧೇಷು ತಥೋದಾರೋದಯಾ ಕಥಾ ॥ ೧೧ ॥

---

೯. ರಾಘವ, ಮೋಕ್ಷೋಪಾಯವಾದ ಈ ನನ್ನ ಉಪದೇಶದ ಸಿದ್ಧಾಂತವನ್ನು [ಪರಿನಿಷ್ಠಿತವಾದ ಅಖಂಡಾಕಾರಾನುಭವವನ್ನು] ನೀನು ಇನ್ನೂ ಪಡೆಯದೆ ಇರುವ ಸ್ಥಿತಿಯಲ್ಲಿ ಈಗ ಇಂತಹ ಪ್ರಶ್ನೆಗಳನ್ನು ಹಾಕಿ, ಅವುಗಳಿಗೆ ಸಮಂಜಸವಾದ ಉತ್ತರಗಳನ್ನು ಕೇಳಿ ಯಥಾರ್ಥವಾಗಿ ತಿಳಿದುಕೊಂಡು, ಧಾರಣೆ ಮಾಡುವುದಕ್ಕೆ ತಕ್ಕಷ್ಟು ಸಂಪೂರ್ಣ ಯೋಗ್ಯತೆ ನಿನಗೆ ಇಲ್ಲವು.

೧೦. ರಾಮ, ತನ್ನ ಕಾಂತೆಯು ಗಾನಮಾಡುತ್ತಿರಲು ಆ ಇಂಪಾದ ಸಂಗೀತದ ರಸಾಸ್ವಾದನೆ ಮಾಡಲು ಒಳ್ಳೆ ಪ್ರಾಯದಲ್ಲಿರುವ [ತರುಣ ಯೌವನಸ್ಥ]ನೇ ಆದ ಆಕೆಯ ಪತಿಯು ಹೇಗೆ ಸರಿಯಾದ ಪಾತ್ರನೋ ಹಾಗೆಯೇ ಈ ಪ್ರಶ್ನೆಗಳನ್ನು ಹಾಕುವುದಕ್ಕೂ ಇವುಗಳಿಗೆ ತಕ್ಕ ಪ್ರಶಸ್ತವಾದ ಉತ್ತರಗಳನ್ನು ಪಡೆಯುವುದಕ್ಕೂ ಪರಿನಿಷ್ಠಿತಾತ್ಮಜ್ಞಾನಸಂಪನ್ನನಾದ ಸುಕೃತಿಯೇ ತಕ್ಕ ಪಾತ್ರನು.

೧೧. ವಿಲಾಸಿ ಜನಗಳ ಅನುರಾಗಾದಿಗಳನ್ನು ವರ್ಣಿಸುವ ಪ್ರಣಯ ಕಥೆಗಳು ಅಲ್ಪವಯಸ್ಕರಾದ ಬಾಲಕರ ವಿಷಯದಲ್ಲಿ ಯಾವುದೊಂದು ಮನೋವಿಕಾರಕ್ಕೂ ಕಾರಣವಾಗದೆ ಹೇಗೆ ನಿಷ್ಫಲವಾಗುವುವೋ ಹಾಗೆಯೇ ಅಲ್ಪಜ್ಞರಾದವರಿಗೆ ಪರಮ ನಿಶ್ಶ್ರೇಯಸ ಹೇತುವಾದ ವಿವೇಕ ವೈರಾಗ್ಯಾಭ್ಯಾಸ ಮೊದಲಾದ ಮೋಕ್ಷೋಪಾಯಗಳನ್ನು ಉಪದೇಶಮಾಡುವಿಕೆಯು ನಿರರ್ಥಕವಾಗುವುದು. (ಅನರ್ಥಕಾರಿಯಾಗುವುದು.)

ಕಸ್ಮಿಂಶ್ಚಿದೇವ ಸಮಯೇ ಕಿಂಚಿತ್ಸಂಸೋ ವಿರಾಜತೇ ।
ಫಲಸಾಭಾತಿ ವೃಕ್ಷಸ್ಯ ಶರದ್ಯೇವ ನ ಮಾಧವೇ ॥ ೧೨ ॥

ಉಪದೇಶಗಿರೋ ವೃದ್ಧೇ ರಂಜನಾ ನಿರ್ಮಲೇ ಪಟೇ ।
ಲಗಂತ್ಯುದಾರವಿಜ್ಞಾನಕಥಾ ಚಾಧಿಗತಾತ್ಮನಿ ॥ ೧೩ ॥

ಪ್ರಶ್ನಸ್ಯಾಸ್ಯೋತ್ತರಂ ಪೂರ್ವಂ ಲೇಶತಃ ಕಥಿತಂ ಮಯಾ ।
ನ ವಿಸ್ತರೇಣ ತೇನೈತನ್ನ ಜ್ಞಾತಂ ಭವತಾ ಸ್ಫುಟಂ ॥ ೧೪ ॥

---

೧೨. ಯಾವುದೋ ಒಂದು ಸಮಯದಲ್ಲಿ ಮಾತ್ರವೇ ಒಂದಾನೊಂದು ವಸ್ತುವು ಒಬ್ಬೊಬ್ಬ ಮನುಷ್ಯನಿಗೆ ಶೋಭಿಸುವುದು. (ಎಲ್ಲ ವಸ್ತುಗಳೂ, ಸರ್ವಕಾಲಗಳಲ್ಲಿಯೂ ಸರ್ವರಿಗೂ ಹಿತಕರವಾಗಿರುವುದೂ ಇಲ್ಲ ಶೋಭಿಸುವುದೂ ಇಲ್ಲ.) ಶರದೃತುವಿನಲ್ಲಿ ಮಾತ್ರವೇ ನಿಂಬೆ, ಕಿತ್ತಿಳೆ ಮುಂತಾದ ವೃಕ್ಷಗಳು ಫಲಭರಿತವಾಗಿ ಶೋಭಿಸುವುವೇ ಹೊರತು ವಸಂತ ಋತುವಿನಲ್ಲಿ ಫಲಗಳು ವೃಕ್ಷಗಳಿಗೆ ಶೋಭಾವಹವಾಗುವುದಿಲ್ಲ. (ನಿನ್ನ ಪ್ರಶ್ನೆಯು ಸಿದ್ಧಾಂತ ಕಾಲದಲ್ಲಿ ಮಾತ್ರ ಶೋಭಿಸುವುದು ಎಂದು ಭಾವ.)

೧೩. ವೈರಾಗ್ಯೋಪದೇಶಾದಿ ಶಾಸ್ತ್ರೀಯವಚನಗಳು ಜ್ಞಾನವೃದ್ಧನಾದ ವಿವೇಕಶಾಲಿಯ ಮನಸ್ಸಿನಲ್ಲಿಯೂ ಬಣ್ಣ ಹಾಕುವಿಕೆಯು ನಿರ್ಮಲವಾದ ಬಿಳಿಯ ಬಟ್ಟೆಯ ಮೇಲೆಯೂ ಪರಮಪುರುಷಾರ್ಥವಾದ ಆತ್ಮಜ್ಞಾನ ಸಾಧಕ ಉಪಾಯ ಕಥನವು ಆತ್ಮಜ್ಞಾನ ಸಂಪನ್ನನಾದವನಲ್ಲಿಯೂ ಚೆನ್ನಾಗಿ ಅಲ್ಪಪ್ರಯತ್ನದಿಂದಲೇ ಅಂಟಿಕೊಳ್ಳುವುವೇ ಹೊರತು ಸಂಸಾರಾನುರಕ್ತನಾದ ನರಪಶುವಿನ ಮನಸ್ಸಿನಲ್ಲಿ ಉಪದೇಶ ವಚನಗಳೂ ಮಲಿನವಸ್ತ್ರದಲ್ಲಿ ಬಣ್ಣವೂ ಆತ್ಮಜ್ಞಾನರಹಿತನಾದ ಅಜ್ಞನಲ್ಲಿ ಸಿದ್ಧಾಂತವಚನಗಳೂ ಅಂಟಿಕೊಳ್ಳುವುದಿಲ್ಲ.

೧೪. ರಾಮ, ನೀನು ಈಗ ಕೇಳಿದ ಪ್ರಶ್ನೆಗೆ ತಕ್ಕ ಉತ್ತರವನ್ನು ನಾನು ಮೊದಲೇ ಭಾರ್ಗವೋಪಾಖ್ಯಾನದ ಕೊನೆಯಲ್ಲಿ ಸೂಕ್ಷ್ಮವಾಗಿ ಸ್ವಲ್ಪಮಟ್ಟಿಗೆ ಹೇಳಿರುವೆನು. ನಿನಗೆ ಇನ್ನೂ ಸರಿಯಾದ (ಪೂರ್ಣವಾದ) ಸಾಧನ ಚತುಷ್ಟಯ ಸಂಪತ್ತಿ ಮೊದಲಾದ ಅಧಿಕಾರವು (ಯೋಗ್ಯತೆ) ಇಲ್ಲದುದನ್ನು ಕಂಡು ಅದನ್ನು

ಯದಿ ತ್ವಮಾತ್ಮನಾತ್ಮಾನಮಧಿಗಚ್ಛಸಿ ತಂ ಸ್ವಯಂ |
ಏತತ್ಪ್ರಶ್ನೋತ್ತರಂ ಸಾಧು ಜಾನಾಸ್ಯತ್ರ ನ ಸಂಶಯಃ ॥ ೧೫ ॥

ಮಯಾ ಸಿದ್ಧಾಂತಕಾಲೇ ತು ಪ್ರಾಪ್ತಬೋಧೇ ತ್ವಯಿ ಸ್ಥಿತೇ |
ವಕ್ತವ್ಯೋ ವಿಸ್ತರೇಣೈವ ಸಾಧೋ ಪ್ರಶ್ನೋತ್ತರಕ್ರಮಃ ॥ ೧೬ ॥

ಜಾನಾತ್ಯಾತ್ಮನಮಾತ್ಮೈವ ಕೃತ ಆತ್ಮಾತ್ಮನೈವ ಹಿ |
ಆತ್ಮೈವ ಸಂಪ್ರಸನ್ನಃ ಸನ್ನಾತ್ಮಾನಾಂ ಪ್ರತಿಪದ್ಯತೇ ॥ ೧೭ ॥

ಆಗ ವಿಸ್ತಾರವಾಗಿ ಹೇಳಲಿಲ್ಲ. ಅದುಕಾರಣವೇ ಈ ವಿಚಾರವು ನಿನಗೆ ಸ್ಪಷ್ಟವಾಗಿ ತಿಳಿದಿಲ್ಲ.

೧೫. ನೀನು ಯಾವಾಗ ನಿನ್ನ ಮನಸ್ಸಿನಿಂದಲೇ ಅಖಂಡಾಕಾರವಾದ ಸಚ್ಚಿದಾನಂದರೂಪ ಆತ್ಮನನ್ನು ನೀನೇ ತಿಳಿದುಕೊಳ್ಳುವೆಯೋ ಆಗಲೇ ಈ ಪ್ರಶ್ನೆಗೆ ಸರಿಯಾದ ಉತ್ತರವನ್ನು (ನಾನು ಉಪದೇಶಮಾಡದೆ ಹೋದರೂ ಕೂಡ) ಚೆನ್ನಾಗಿ (ನಿಷ್ಕರ್ಷೆಯಾಗಿ) ತಿಳಿದುಕೊಳ್ಳುವೆ ಈ ವಿಷಯದಲ್ಲಿ ಸಂಶಯವಿಲ್ಲ.

೧೬. ಸಿದ್ಧಾಂತವನ್ನು ಹೇಳುವ ಕಾಲದಲ್ಲಾದರೋ ಎಲೈ ಸಾಧುವೇ, ನೀನು ಆತ್ಮಜ್ಞಾನ ಪರಿನಿಷ್ಠಿತನಾಗಿರಲಾಗಿ ಈ ನಿನ್ನ ಪ್ರಶ್ನೆಗೆ ಸರಿಯಾದ ಉತ್ತರವು ನನ್ನಿಂದ ಹೆಚ್ಚು ವಿಸ್ತಾರವಾಗಿಯೇ ಕ್ರಮವರಿತು ಹೇಳಲ್ಪಡಬೇಕಾಗಿರುವುದು. (ನಿನಗೆ ಆಗ ಸರಿಯಾದ ಅಧಿಕಾರಸಂಪತ್ತಿಯುಂಟಾಗಿರುವ ಕಾರಣ ಆಗ ಉಪದೇಶ ಮಾಡುವುದೇ ಉಚಿತ. ಈಗ ಉಪದೇಶಮಾಡುವುದು ಉಚಿತವಲ್ಲ ಎಂದು ಭಾವ.]

೧೭. ಆತ್ಮನೇ ಆತ್ಮನು ಸಂಸಾರಿಯಾಗಿರುವುದನ್ನೂ ತಿಳಿಯುವನು. ಏಕೆಂದರೆ ಆತ್ಮನಿಂದಲೇ ಆತ್ಮನು ಅಜ್ಞಾನದ ದೆಸೆಯಿಂದ ಅಪ್ರಸನ್ನನಾಗಿರುವ ಕಾರಣ ಹಾಗೆ ಸಂಸಾರಿಯಾಗಿ ಮಾಡಲ್ಪಡುವನು. ಆ ಆತ್ಮನೇ ಅಧ್ಯಾತ್ಮಜ್ಞಾನ ಸಂಪತ್ತಿಯಿಂದ ಪ್ರಸನ್ನನಾಗಿ ಸರ್ವತ್ರ ಪರಿಪೂರ್ಣವಾದ ಆತ್ಮನನ್ನು ಪಡೆಯುವನು. (ಈ ಕಾರಣದಿಂದ, ರಾಮ, ನೀನು ಸಮಾಧ್ಯಭ್ಯಾಸಬಲದಿಂದ ಚಿತ್ತಶುದ್ಧಿ, ವಿವೇಕ, ವೈರಾಗ್ಯಾದಿಗಳನ್ನು ಹೊಂದಿ ಆತ್ಮಜ್ಞಾನದಲ್ಲಿ ಪರಿನಿಷ್ಠಿತನಾಗಬೇಕು. ನನ್ನ ಉಪದೇಶವಾದರೋ ಜ್ಞಾನಮಾರ್ಗದ ದ್ವಾರಪ್ರದರ್ಶನ ಮಾತ್ರವೇ ಆಗಿರುವುದು.)

ತದೇತ್ಕಥಿತಂ ರಾಮ ಕರ್ತ್ರಕರ್ತೃವಿಚಾರಣಂ ।
ಅಜ್ಞಾತತ್ವಾತ್ತು ತಾವೇತಾಮಕ್ಷೀಣವಾಸನೋ ಭವೇತ್ ॥ ೧೮ ॥

ಬದ್ಧೋ ಹಿ ವಾಸನಾಬದ್ಧೋ ಮೋಕ್ಷಃ ಸ್ಯಾದ್ವಾಸನಾಕ್ಷಯಃ ।
ವಾಸನಾಸ್ತ್ವಂ ಪರಿತ್ಯಜ್ಯ ಮೋಕ್ಷಾರ್ಥಿತ್ವಮಪಿ ತ್ಯಜ ॥ ೧೯ ॥

ತಾಮಸೀರ್ವಾಸನಾಃ ಪೂರ್ವಂ ತ್ಯಕ್ತ್ವಾ ವಿಷಯವಾಸಿತಾಃ ।
ಮೈತ್ರ್ಯಾದಿಭಾವನಾನಾಮ್ನೀಂ ಗೃಹಾಣಾಮಲವಾಸನಾಂ ॥ ೨೦ ॥

ಆತ್ಮನು ಅಜ್ಞಾನದ ಮೂಲಕ ತಾನು ಜೀವನೆಂದೂ, ಕರ್ತೃವೆಂದೂ ಭೋಕ್ತೃವೆಂದೂ ತಪ್ಪಾಗಿಯೇ ತಿಳಿದುಕೊಳ್ಳುವನು. ತತ್ತ್ವಜ್ಞಾನದಿಂದ ಅನರ್ಥ ಹೇತುವಾದ ಅಜ್ಞಾನವು ನಿವೃತ್ತಿಯಾದ ಕೂಡಲೇ ತಾನು ದೇಶಕಾಲಾದಿಗಳಿಂದ ಅಪರಿಚ್ಛಿನ್ನನಾದ ಪೂರ್ಣಸ್ವರೂಪನೆಂದೂ ಕರ್ತೃವೂ ಅಲ್ಲ ಭೋಕ್ತೃವೂ ಅಲ್ಲವೆಂದೂ ನಿಜವಾದ ಆತ್ಮಸ್ವರೂಪಜ್ಞಾನ ಸಂಪನ್ನನಾಗುವನು.

೧೮. ಅಯ್ಯ ರಾಮ, ಆತ್ಮನ ಕರ್ತೃತ್ವಾ ಕರ್ತೃತ್ವರೂಪ ಈ ವಿಚಾರವೂ ಕೂಡ ನನ್ನಿಂದ, ನಿನಗೆ, ಅಖಂಡಾಕಾರವಾದ ಬ್ರಹ್ಮಾತ್ಮಜ್ಞಾನವನ್ನು ಉದ್ದೇಶಿಸಿಯೇ ಮೊದಲೇ ಹೇಳಲ್ಪಟ್ಟಿರುವುದು. ಹೀಗೆ ನಾನು ಉಪದೇಶಮಾಡಿದ್ದರೂ ಕೂಡ ಆ ಖಂಡಾತ್ಮಸ್ವರೂಪವನ್ನು ನೀನು ಇದುವರೆವಿಗೂ ತಿಳಿಯದವನಾಗಿಯೇ ಇರುವ ಕಾರಣ ನಿನಗೆ ಇನ್ನೂ ವಾಸನಾಕ್ಷಯವು ಉಂಟಾಗಿಲ್ಲ ಎಂದು ನಾನು ಸಂಭಾವಿಸುವೆನು.

೧೯. ವಾಸನೆಯೇ ಸಂಸಾರ ಹೇತುವು. ಆದುದರಿಂದ, ವಾಸನೆಯಿಂದ ಬದ್ಧನಾಗಿರುವವನೇ ಸಂಸಾರಪಾಶದಿಂದ ಬದ್ಧನಾದವನೆನ್ನಿಸುವನು. ವಾಸನಾಕ್ಷಯವೇ (ಸಂಸಾರ ನಾಶ) ಮೋಕ್ಷವೆನ್ನಿಸುವುದು. ಇದು ಬಂಧಮೋಕ್ಷಗಳ ರಹಸ್ಯವು. ರಾಮ, ನೀನು ಈ ರಹಸ್ಯವನ್ನು ತಿಳಿದು ಸಕಲ ವಿಧ ವಾಸನೆಗಳನ್ನು ಪರಿತ್ಯಜಿಸಿ ಕೊನೆಗೆ ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆಯನ್ನೂ ಕೂಡ (ಬಯಕೆಯನ್ನೂ) ಬಿಟ್ಟುಬಿಡುವವನಾಗು.

೨೦. ವಾಸನಾಕ್ಷಯಕ್ಕೆ ದೃಢವಾದ ವೈರಾಗ್ಯವು ಪ್ರಥಮ ಪೀಠಿಕೆಯು. ಆದುದರಿಂದ ನೀನು ಪ್ರಥಮತಃ-ಶಬ್ದಾದಿ ವಿಷಯಗಳಲ್ಲಿ ಬಹು ಹೆಚ್ಚಾದ ಆಸಕ್ತಿ

ತಾಮಪ್ಯಂತಃ ಪರಿತ್ಯಜ್ಯ ತಾಭಿರ್ವ್ಯವಹರನ್ನಪಿ ।
ಅಂತಃಶಾಂತಸಮಸ್ತೇಹೋ ಭವ ಚಿನ್ಮಾತ್ರವಾಸನಃ ॥ ೨೧ ॥

ತಾಮಪ್ಯಥ ಪರಿತ್ಯಜ್ಯ ಮನೋಬುದ್ಧಿಸಮನ್ವಿತಾಂ ।
ಶೇಷೇ ಸ್ಥಿರಸಮಾಧಾನೋ ಯೇನ ತತ್ತ್ಯಜ ॥ ೨೨ ॥

(ಅಭಿನಿವೇಶ)ಯಿಂದ ಕೂಡಿರುವ ಕೇವಲ ತಮಃಪ್ರಧಾನವಾದ ತಿರ್ಯಗ್ಜಂತುಗಳ ಜನ್ಮಕ್ಕೆ ಹೇತುವಾಗಿರುವ ತಾಮಸ ವಾಸನೆಗಳನ್ನೂ ರಾಜಸ ಮನುಷ್ಯಾದಿ ಜನ್ಮಪ್ರದಗಳಾಗಿರುವ ರಾಜಸವಾಸನೆಗಳನ್ನೂ ಕೂಡ ಬಿಟ್ಟು ಬಿಟ್ಟು ಅನಂತರ ಮೈತ್ರ್ಯಾದಿ ಭಾವನೆ ಎಂದು ಕರೆಯಲ್ಪಡುವ ಶುದ್ಧ ಸಾತ್ವಿಕವಾದ ವಾಸನೆಯನ್ನು ಪರಿಗ್ರಹಿಸು.

[ಮೈತ್ರೀ, ಕರುಣಾ, ಮುದಿತಾ, ಉಪೇಕ್ಷಾ ಎಂಬಿವು ಯೋಗಶಾಸ್ತ್ರೋಕ್ತವಾದ ಭಾವನೆಗಳು. "ಮೈತ್ರೀಕರುಣಾ ಮುದಿತೋಪೇಕ್ಷಾಣಾಂ ಸುಖದುಃಖ ಪುಣ್ಯಾಪುಣ್ಯಫಲಾನಾಂ ಭಾವನಾತಶ್ಚಿತ್ತ ಪ್ರಸಾದನಂ" ಪಾತಂಜಲ ಯೋಗಸೂತ್ರ. ಸಮಾಧಿಪಾದ ಸೂತ್ರ ೩೩.]

೨೧. ಪೂರ್ವೋಕ್ತ ಮೈತ್ರ್ಯಾದಿಗಳಿಂದ ಹೊರಗೆ ಸಕಲ ವ್ಯವಹಾರಗಳನ್ನು ನಡೆಯಿಸುತ್ತಿರುವವನಾದರೂ ಚಿನ್ಮಾತ್ರವ್ಯತಿರಿಕ್ತವಾದ ಮೈತ್ರ್ಯಾದಿಗಳೂ ಕೂಡ ನಿಜವಾಗಿ ಇಲ್ಲವೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡು ಆ ಮೈತ್ರ್ಯಾದಿ ಭಾವನೆಯನ್ನೂ ತ್ಯಾಗಮಾಡಿ ಮತ್ತು ಮನಸ್ಸಿನಲ್ಲಿ ರೂಢವಾಗಿರುವ ಸಮಸ್ತವಾದ ವಿಷಯಾಭಿಲಾಷೆಗಳನ್ನೂ ಶಮನಮಾಡಿ ಬಳಿಕ ಸಂಪ್ರಜ್ಞಾತ ಸಮಾಧಿಯನ್ನು ಅಭ್ಯಾಸಮಾಡುವುದರ ಮೂಲಕ; ಮನಸ್ಸಿನೊಳಗೆ "ಚಿನ್ಮಾತ್ರನೇ ನಾನು" ಎಂಬ ದೃಢವಾದ ವಾಸನೆಯುಳ್ಳವನಾಗಿರು.

"ವಿತರ್ಕ ವಿಚಾರಾನಂದಾಸ್ಮಿತಾರೂಪಾನುಗಮಾತ್ ಸಂಪ್ರಜ್ಞಾತಃ ।"
ಪಾತಂಜಲಯೋಗಸೂತ್ರ ಸಮಾಧಿಪಾದ ಸೂತ್ರ ೧೭.

೨೨. ಅನಂತರ, ಚಿತ್ತ ಮತ್ತು ಚಿತ್ತವೃತ್ತಿಗಳಿಂದ ಸಹಿತವಾಗಿ ಆ ಚಿನ್ಮಾತ್ರ ವಾಸನೆಯನ್ನೂ ಪರಿತ್ಯಜಿಸಿ ಸರ್ವಕ್ಕೂ ಆತ್ಮವಾಗಿರುವ ಕಾರಣವೇ ತ್ಯಾಗ

ಚಿನ್ಮಯಃ ಕಲನಾ ಕಾಲಪ್ರಕಾಶತಿಮಿರಾದಿಕಂ ।
ವಾಸನಾಂ ವಾಸಿತಾರಂ ಚ ಪ್ರಾಣಸ್ಪಂದನಪೂರ್ವಕಂ ॥ ೨೩ ॥

ಸಮೂಲಮಪಿ ಸಂತ್ಯಕ್ತ್ವಾ ವ್ಯೋಮಸೌಮ್ಯಪ್ರಶಾಂತಧೀಃ ।
ಯಸ್ತ್ವಂ ಭವಸಿ ಸದ್ಬುದ್ಧೇ ಸ ಭವಾನಸ್ತು ಸತ್ಕೃತಃ ॥ ೨೪ ॥

ಮಾಡುವುದಕ್ಕೆ ಅಶಕ್ಯವಾಗಿರುವುದರಿಂದ ಅವಶ್ಯವಾಗಿ ಅವಶಿಷ್ಟವಾದ ಪ್ರತ್ಯಗಾತ್ಮ ತತ್ವದಲ್ಲಿ ಸ್ಥಿರವಿಶ್ರಾಂತಿಯನ್ನು ಪಡೆದವನಾಗಿ ತರುವಾಯ ಸಕಲ ವಿಧವಾದ ದ್ವೈತಕಲ್ಪನೆಗೂ ಆಧಾರನಾಗಿ ಮೂಲಸ್ತಂಭದಂತಿರುವ ಯಾವ ಅಹಂಕಾರದಿಂದ ಪೂರ್ವೋಕ್ತವಾದುದೆಲ್ಲವನ್ನೂ ಬಿಡುವೆಯೋ ಆ ಅಹಂಕಾರವನ್ನೂ ಬಿಟ್ಟುಬಿಡು.

("ವಿರಾಮಪ್ರತ್ಯಯಾಭ್ಯಾಸ ಪೂರ್ವಃ ಸಂಸ್ಕಾರಶೇಷಃ ಅನ್ಯಃ" ಪಾತಂಜಲ ಯೋಗ ಸೂತ್ರ ೧೮. ಎಂಬ ನಿರ್ಬೀಜ ಅಸಂಪ್ರಜ್ಞಾತ ಸಮಾಧಿಯು ಇಲ್ಲಿ ಉಪದಿಷ್ಟವಾಗಿರುವುದು.)

[ಆಯಾ ವಸ್ತುಗಳಲ್ಲಿಟ್ಟಿರುವ, "ನಾನು, ನನ್ನದು" (ಅಹಂ, ಮಮ) ಎಂಬ ಅಭಿಮಾನವನ್ನು ನೀಗುವುದೇ ಸರ್ವವಸ್ತುಗಳ ತ್ಯಾಗವೆನ್ನಿಸುವುದು. ಅಂತಹ ಅಭಿಮಾನ ವರ್ಜನವು ಅಹಂಕಾರದ ವಿಷಯದಲ್ಲಿಯೂ ಶುದ್ಧ ಚಿನ್ಮಾತ್ರರೂಪ ಪೂರ್ಣಾತ್ಮಜ್ಞಾನದಿಂದ ಅಜ್ಞಾನವು ಧ್ವಂಸವಾಗುವುದರ ಮೂಲಕ ಸ್ವತಏವ ಸಂಭವಿಸುವುದು ಎಂದು ತಿಳಿಯಬೇಕು.]

೨೩–೨೪. ಅಯ್ಯ ಸದ್ಬುದ್ಧಿಯುಳ್ಳವನಾದ ರಾಮಚಂದ್ರ, ನೀನು ಕೇವಲ ಚಿದ್ರೂಪನಾಗಿಯೇ ಇರುತ್ತಾ ಪ್ರಾಣವಾಯುವಿನ ಚಲನ ಪೂರ್ವಕನಾಗಿ ಸಕಲ ಕಲ್ಪನೆಗಳು [ಸಂಕಲ್ಪಗಳು] ಕಾಲ, ಪ್ರಕಾಶ, ಅಂಧಕಾರ ಮುಂತಾದವುಗಳನ್ನೂ ವಾಸನೆಯನ್ನೂ ವಿಷಯವನ್ನೂ ವಿಷಯದ್ವಾರಗಳಿಂದ ಇಂದ್ರಿಯಗಳನ್ನೂ ಮೂಲಸಹಿತವಾದ ಅಹಂಕಾರವನ್ನೂ ಕೂಡ ಸಂಪೂರ್ಣವಾಗಿ ಲಯಗೊಳಿಸಿ ಆಕಾಶದಂತೆ ಸೌಮ್ಯವಾಗಿಯೂ ಪ್ರಶಾಂತವಾಗಿಯೂ [ವಿಕ್ಷೇಪಶೂನ್ಯ] ಇರುವ ಅಖಂಡಾಕಾರವಾದ ಬ್ರಹ್ಮಾತ್ಮ ಬುದ್ಧಿಯುಳ್ಳವನಾಗಿ ಯಾವ ಚಿನ್ಮಯ ಪರಬ್ರಹ್ಮವೇ ಆಗುವೆಯೋ ಅಂತಹ ಪರಮಾರ್ಥ ಸಚ್ಚಿದಾನಂದರೂಪನಾಗಿಯೇ ಸಕಲ ಲೋಕ ಪೂಜಿತನಾಗಿ ಇರು.

ಹೃದಯಾತ್ಸಂಪರಿತ್ಯಜ್ಯ ಸರ್ವಮೇವ ಮಹಾಮತಿಃ ।
ಯಸ್ತಿಷ್ಠತಿ ಗತವ್ಯಗ್ರಃ ಸ ಮುಕ್ತಃ ಪರಮೇಶ್ವರಃ ॥ ೨೫ ॥

ಸಮಾಧಿಮಥ ಕರ್ಮಾಣಿ ಮಾ ಕರೋತು ಕರೋತು ವಾ ।
ಹೃದಯೇನಾಸ್ತಸರ್ವಾಸ್ಥೋ ಮುಕ್ತ ಏವೋತ್ತಮಾಶಯಃ ॥ ೨೬ ॥

---

೨೫. ಯಾವ ಮಹಾ ಜ್ಞಾನಿಯು ಸಮಸ್ತವಾದ ದ್ವೈತ ಕಲ್ಪನೆಯನ್ನೂ [ದೃಶ್ಯವನ್ನೆಲ್ಲ] ತನ್ನ ಹೃದಯದಿಂದ [ಪುನಃ ಉದ್ಭವಿಸದಹಾಗೆ] ಸಂಪೂರ್ಣವಾಗಿ ತ್ಯಾಗಮಾಡಿ ಸಕಲ ವಿಕ್ಷೇಪಗಳಿಗೂ ಕಾರಣವಾದ ಅಭಿಮಾನವನ್ನೂ ಕಳೆದು ಕೊಂಡವನಾಗಿ ಇರುವನೋ ಅಂತಹ ಮುಕ್ತನಾದ ಮಹನೀಯನು ಸಾಕ್ಷಾತ್ ಪರಮೇಶ್ವರನೇ.

೨೬. ಹೀಗೆ ಅಭ್ಯಾಸ ಪರಿಪಾಕದಿಂದ ಪ್ರಶಸ್ತವಾದ ಮನಸ್ಸುಳ್ಳವನಾದ ಯೋಗಸಂಸಿದ್ಧನು ಕೃತಕೃತ್ಯನು. ಅವನು ಸಮಾಧಿಯನ್ನೂ ಮತ್ತು ಕರ್ಮಗಳನ್ನೂ ಮಾಡುತ್ತಲಾದರೂ ಇರಲಿ. ಅಥವಾ ಮಾಡದೆ ಆದರೂ ಇರಲಿ. ಅವನು ಹೇಗೇ ಇದ್ದರೂ ಕೂಡ ಅವನ ಹೃದಯದಲ್ಲಿ ಸಕಲ ವಿಧಗಳಾದ ಅಭಿಮಾನಾಧ್ಯಾಸಗಳೂ ಲಯಹೊಂದಿರುವ ಕಾರಣ ಅವನು ನಿಜವಾಗಿಯೂ ಮುಕ್ತನೇ ಇದರಲ್ಲಿ ಸಂಶಯವಿಲ್ಲ.

ಯಾವ ಮಹಾನುಭಾವನ ಮನಸ್ಸು ಸರ್ವವಾಸನಾಜಾಲರಹಿತವಾಗಿರುವುದೋ ಅಂತಹ ಕೃತಕೃತ್ಯನಾದವನಿಗೆ ನೈಷ್ಕರ್ಮ್ಯದಿಂದಲೂ ಪ್ರಯೋಜನವಿಲ್ಲ. ಕರ್ಮಗಳಿಂದಲೂ ಪ್ರಯೋಜನವಿಲ್ಲ. ಸಮಾಧ್ಯಭ್ಯಾಸ, ಮಂತ್ರ ಜಪ ಮುಂತಾದವು ಗಳಿಂದಲೂ ಏನೂ ಪ್ರಯೋಜನವಿಲ್ಲ.

[ಯಸ್ತ್ವಾತ್ಮರತಿರೇವಸ್ಯಾತ್ ಆತ್ಮತೃಪ್ತಶ್ಚಮಾನವಃ । ಆತ್ಮನ್ಯೇವ ಚಸಂತುಷ್ಟಸ್ತಸ್ಯಕಾರ್ಯಂ ನ ವಿದ್ಯತೇ ॥ ನೈವತಸ್ಯಕೃತೇನಾರ್ಥೋ ನಾಕೃತೇನೇಹಕಶ್ಚನ । ನಚಾಸ್ಯಸರ್ವಭೂತೇಷು ಕಶ್ಚಿದರ್ಥ ವ್ಯಪಾಶ್ರಯಃ ॥ ಭಗವದ್ಗೀತಾ ಅಧ್ಯಾಯ ೩. ಶ್ಲೋಕ ೧೭-೧೮.)

ನೈಷ್ಕರ್ಮ್ಯೇಣ ನ ತಸ್ಯಾರ್ಥೋ ನ ತಸ್ಯಾರ್ಥೋಽಸ್ತಿ ಕರ್ಮಭಿಃ ।
ನ ಸಮಾಧಾನಜಪ್ಯಾಭ್ಯಾಂ ಯಸ್ಯ ನಿರ್ವಾಸನಂ ಮನಃ ॥ ೨೭ ॥

ವಿಚಾರಿತಮಲಂ ಶಾಸ್ತ್ರಂ ಚಿರಮುದ್ಗ್ರಾಹಿತಂ ಮಿಥಃ ।
ಸಂತ್ಯಕ್ತವಾಸನಾನ್ಮೌನಾದೃತೇ ನಾಸ್ತ್ಯುತ್ತಮಂ ಪದಂ ॥ ೨೮ ॥

ದೃಷ್ಟಂ ದ್ರಷ್ಟವ್ಯಮಖಿಲಂ ಭ್ರಾಂತ್ವಾ ಭ್ರಾಂತ್ವಾ ದಿಶೋ ದಶ ।
ಜನಾಃ ಕತಿಪಯಾ ಏವ ಯಥಾವಸ್ತ್ವಲೋಕಿತಃ ॥ ೨೯ ॥

---

೨೮. (ಕೆಲವು ಕಾಲ ಶ್ರವಣಮನನ ಧ್ಯಾನಾದಿಗಳನ್ನು ಅನುಷ್ಠಾನಮಾಡಿದ ಮೇಲೆ ವಾಸನಾಕ್ಷಯವಾಗುವುದಕ್ಕಿಂತ ಮುಂಚೆಯೇ ತಾನು ಕೃತಕೃತ್ಯನಾಗಿಬಿಟ್ಟೆ ನೆಂದು ಯಾರೂ ಭ್ರಮಿಸಬಾರದು.)

ಸಕಲ ವೇದಾಂತಾದಿ ಶಾಸ್ತ್ರಾರ್ಥಗಳನ್ನು ಬಹುಕಾಲ ಸಮಗ್ರವಾಗಿ ವಿಚಾರ ಮಾಡಿದ್ದಾಯಿತು. ಮಹಾ ಮಹಾ ವಿದ್ವಾಂಸರೊಡನೆ ಪರಸ್ಪರ ವಾದ ಮಾಡಿ ಬಹು ಶ್ರಮದಿಂದಲೂ ಸಕಲ ವಿದ್ವಾಂಸರ ಸಮ್ಮತಿಯಿಂದಲೂ ಇದೇ ಮೋಕ್ಷ ಶಾಸ್ತ್ರದ ಪರಮರಹಸ್ಯವೆಂದು ನಿರ್ಣಯಮಾಡಿದ್ದೂ ಆಯಿತು. ಆದರೇನು? ಅದೊಂದರಿಂದಲೂ ಸುತರಾಂ ಯಾವ ಪ್ರಯೋಜನವೂ ಇಲ್ಲ. ಸಕಲ ವಾಸನೆ ಗಳನ್ನೂ ಪರಿತ್ಯಾಗಮಾಡಿ ಮೌನಸ್ಥಿತಿಯನ್ನು (ಅಂದರೆ ಶಾಸ್ತ್ರ ಸಂಪ್ರದಾಯದಲ್ಲಿ ಬಾಲ್ಯ ಪಾಂಡಿತ್ಯ ಶಬ್ದವಾಚ್ಯಗಳಾದ ಶ್ರವಣಮನನಾದಿಗಳ ಪರಿಪಾಕಜನ್ಯವಾಗಿ ನಿರ್ವಿಕಲ್ಪಕ ಅಸಂಪ್ರಜ್ಞಾತ ಸಮಾಧಿಯು ಪರಿಪಕ್ವವಾಗುವ ಪರ್ಯಂತವೂ ಮುನಿ ಭಾವವನ್ನು) ಆಚರಿಸದೇ ಹೋದಪಕ್ಷದಲ್ಲಿ ಮತ್ತೆ ಬೇರೆ ಯಾವುದರಿಂದಲೂ ಪರಿ ಸಿಷ್ಠ ಬ್ರಹ್ಮತತ್ತ್ವಜ್ಞಾನರೂಪ ಪರಮಪದವು ಎಂದಿಗೂ ದೊರಕುವುದಿಲ್ಲ.

(ತಸ್ಮಾತ್ ಬ್ರಾಹ್ಮಣಃ ಪಾಂಡಿತ್ಯಂ ನಿರ್ವಿದ್ಯ ಬಾಲ್ಯೇನ ತಿಷ್ಠಾಸೇತ್ ಬಾಲ್ಯಂ ಚ ಪಾಂಡಿತ್ಯಂಚ ನಿರ್ವಿದ್ಯಾಥ ಮುನಿರಮೌನಂ ಮೌನಂಚ ನಿರ್ವಿದ್ಯಾಥ ಬ್ರಾಹ್ಮಣಃ ॥ ಏಷ ನಿತ್ಯೋ ಮಹಿಮಾ ಬಾಹ್ಮಣಸ್ಯ ॥ ಬೃಹದಾರಣ್ಯಕ ಅಧ್ಯಾಯ ೫ ಬ್ರಾಹ್ಮಣ ೫ ಮಂತ್ರ ೧.)

೨೯. ಹತ್ತು ದಿಕ್ಕುಗಳಲ್ಲಿಯೂ ಪುನಃ ಪುನಃ ಸುತ್ತಿ ಸುತ್ತಿ ನೋಡಬೇಕಾಗಿ ರುವುದನ್ನೆಲ್ಲ ನೋಡಿಯಾಯಿತು. ವಸ್ತು ತತ್ತ್ವವನ್ನು ಯಥಾರ್ಥವಾಗಿ ತಿಳಿದಿರುವ

ಯದ್ಯದಾಲೋಕ್ಯತೇ ಕಿಂಚಿತ್ಕಶ್ಚಿದ್ಯತ್ತನ್ನ ವಿದ್ಯತೇ ।
ಈಪ್ಸಿತಾನೀಪ್ಸಿತಾದನ್ಯನ್ನ ತತ್ರ ಯತತೇ ಜನಃ ॥ ೩೦ ॥

ಯೇ ಕೇಚನ ಸಮಾರಂಭಾ ಯೇ ಜನಸ್ಯ ಕ್ರಿಯಾಕ್ರಮಾಃ ।
ತೇ ಸರ್ವೇ ದೇಹಮಾತ್ರಾರ್ಥಮಾತ್ಮಾರ್ಥ ನತು ಕಿಂಚನ ॥ ೩೧ ॥

ಪ್ರಾಜ್ಞರು ಬಹಳ ವಿರಳ (ಎಲ್ಲೋ ಕೆಲವು ಮಂದಿ ಮಾತ್ರ ಇರುವರು) ಮತ್ತು ದುರ್ಲಭರು.

೩೦. ಸಾಧಾರಣವಾಗಿ ಲೋಕದಲ್ಲಿ ಸರ್ವರೂ ಬಹಿರ್ಮುಖರಾಗಿಯೇ ಪ್ರವರ್ತಿಸುವರು. ಮತ್ತು ಹೊರಗೆ ಇಷ್ಟಾನಿಷ್ಟರೂಪ ಉಭಯ ವಿಧವಾದ ವಸ್ತುಗಳನ್ನು ಕಾಣುವರು. ಆಮೇಲೆ ಇಷ್ಟಪ್ರಾಪ್ತಿ, ಅನಿಷ್ಟಪರಿಹಾರಗಳಿಗಾಗಿ ಮಾತ್ರವೇ ಸರ್ವದಾ ತೊಳಲುತ್ತಿರುವರು. ಆದರೆ ಇಂದ್ರಿಯಾಗೋಚರವೂ ಸರ್ವಾತ್ಮನಾಗಿರುವ ಕಾರಣದಿಂದ ಹೇಯವೂ ಅಲ್ಲದೆ ಉಪಾದೇಯವೂ ಇಲ್ಲದೆ ಇಷ್ಟಾನಿಷ್ಟರೂಪ ಜಗತ್ತಿಗಿಂತ ಪೃಥಕ್ಕಾಗಿರುವ ಆತ್ಮ ತತ್ವದಲ್ಲಿ ಸಾಮಾನ್ಯವಾಗಿ ಯಾವನೊಬ್ಬನೂ ಪ್ರಯತ್ನಿಸುವುದೇ ಇಲ್ಲ.

(ಈ ದೃಶ್ಯವಾದ ಜಗತ್ತು ಪ್ರಾಣಿಗಳ ಮನೋಭಾವ, ಕಾಲ, ದೇಶ ಮೊದಲಾದವುಗಳ ಸ್ಥಿತಿಗೆ ಅನುಗುಣವಾಗಿ ಇಷ್ಟವೂ ಅನಿಷ್ಟವೂ ಆಗುವುದು. ಇಷ್ಟಾನಿಷ್ಟಗಳ ಹೊರತು ಬೇರೆ ಯಾವುದೊಂದೂ ಹೊರಗೆ ಕಾಣುವುದಿಲ್ಲ. ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ಎಂದು ಗೀತೆಯಲ್ಲಿ ಭಗವಂತನು ಹೇಳಿರುವಂತೆ ತತ್ತ್ವಜಿಜ್ಞಾಸೆಯಲ್ಲಿ ತೊಡಗುವವರು ಬಹಳ ವಿರಳ. ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ ತಸ್ಮಾತ್ ಪರಾಙ್ ಪಶ್ಯತಿ ನಾನ್ತರಾತ್ಮನ್ । ಕಶ್ಚಿದ್ಧೀರಃ ಪ್ರತ್ಯಗಾತ್ಮಾನ ಮೈಕ್ಷತ್ ಆವೃತ್ತಚಕ್ಷುರಮೃತತ್ವಮಿಚ್ಛನ್ ಎಂಬ ಶ್ರುತಿಯನ್ನು ಗಮನಿಸಿ.)

೩೧. ಜಗತ್ತಿನಲ್ಲಿ ಜನರು ಮಾಡುವ ಸಕಲ ಲೌಕಿಕ ವ್ಯವಹಾರಗಳೂ ಅವುಗಳಿಂದ ದೊರಕಿಸಿಕೊಳ್ಳುವ ಸಕಲ ವಿಷಯಗಳೂ ವೈದಿಕವಾದ ಯಜ್ಞಾದಿ ಸಕಲ

ಪಾತಾಲೇ ಬ್ರಹ್ಮಲೋಕೇ ಚ ಸ್ವರ್ಗೇ ಚ ವಸುಧಾತಲೇ ।
ವ್ಯೋಮ್ನಿ ಕತಿಪಯಾ ಏವ ದೃಶ್ಯಂತೇ ದೃಷ್ಟದೃಷ್ಟಯಃ ॥ ೩೨ ॥

ಇದಂ ಹೇಯಮುಪಾದೇಯಮಿದಮಿತ್ಯಸದುತ್ಥಿತೌ ।
ನಿಶ್ಚಯೌ ಗಲಿತೌ ಯಸ್ಯ ಜ್ಞಸ್ಯಾಸಾವತಿದುರ್ಲಭಃ ॥ ೩೩ ॥

ಕರೋತು ಭುವನೇ ರಾಜ್ಯಂ ವಿಶತ್ವಂಭೋದಮಂಬು ವಾ ।
ನಾತ್ಮಲಾಭಾದೃತೇ ಜಂತುರ್ವಿಶ್ರಾಂತಿಮಧಿಗಚ್ಛತಿ ॥ ೩೪ ॥

ಕರ್ಮಾನುಷ್ಠಾನಗಳೂ ಇವೆಲ್ಲವೂ ಅವರವರ ದೇಹಗಳ ಪುಷ್ಟಿ ತುಷ್ಟಿಗಳಿಗಾಗಿ ಮಾತ್ರವೇ ಆಗಿವೆ. ಆತ್ಮತತ್ವ ಜ್ಞಾನಾರ್ಥನಾಗಿಯಾದರೋ ಯಾವುದೊಂದು ಪ್ರಯತ್ನವೂ ಮಾಡಲ್ಪಡುವುದಿಲ್ಲ.

೩೨. ಪಾತಾಳ, ಬ್ರಹ್ಮಲೋಕ, ಸ್ವರ್ಗಲೋಕ, ಭೂಲೋಕ, ಅಂತರಿಕ್ಷ ಮೊದಲಾದ ಸಕಲ ಲೋಕಗಳಿಗೂ ಹೋಗಿ ನೋಡಿ ಪ್ರಯತ್ನಪಟ್ಟು ಸರ್ವತ್ರ ಹುಡುಕಿದರೂ ಚಿದೇಕರಸ ಬ್ರಹ್ಮಜ್ಞಾನವನ್ನು ಪಡೆದಿರುವ ಮಹನೀಯರು ಅತ್ಯಲ್ಪ ಸಂಖ್ಯೆಯಲ್ಲಿ ಕೆಲವರು ಮಾತ್ರವೇ ಕಾಣುವದು.

೩೩. ಇದು ತ್ಯಾಜ್ಯ–ಇದು ಗ್ರಾಹ್ಯ ಎಂಬುದಾಗಿ ಜಗತ್ತಿನ ವಿಷಯದಲ್ಲಿ ಅಸತ್ಯವಾಗಿಯೇ ಉದಯಿಸಿರುವ ನಿಶ್ಚಯ ಭ್ರಾಂತಿ ಜ್ಞಾನಗಳು ಯಾವ ಪ್ರಾಜ್ಞನಿಗೆ ತೊಲಗಿಹೋಗಿವೆಯೋ ಅಂತಹ ಆತ್ಮಜ್ಞನು ಅತ್ಯಂತ ದುರ್ಲಭನು.

[ಭ್ರಮಕಾಲದಲ್ಲಿ ಅಸತ್ಯವಾದುದಾದರೂ ಭ್ರಾಂತಿ ಜ್ಞಾನವು ದೃಢವಾಗಿ ನಿಶ್ಚಯ ಜ್ಞಾನದಂತೆಯೇ ಇದ್ದುಬಿಡುವುದು. ವಸ್ತು ಯಾಥಾತ್ಮ್ಯ ಜ್ಞಾನವುಂಟಾದ ಕೂಡಲೇ ಭ್ರಾಂತಿಯು ನಿವೃತ್ತಿಯಾಗುವುದು.]

೩೪. ಪಶುಪ್ರಾಯನಾದ ಅಜ್ಞನು ಸ್ವರ್ಗಾದಿ ಲೋಕತ್ರಯಗಳಿಗೂ ರಾಜನಾಗಿ ತನ್ನ ಆಧಿಪತ್ಯವನ್ನೂ ನಡೆಯಿಸಲಿ. ಇಂದ್ರ ಪದವಿಯನ್ನೂ ಸಂಪಾದಿಸಿ, ಮೇಘ ಮಂಡಲವನ್ನೂ ಹೊಕ್ಕು ಮೇಘಗಳ ಮೇಲೆ ತನ್ನ ಅಧಿಕಾರವನ್ನು ತೋರಲಿ. ಅಥವಾ ವರುಣನ ಪದವಿಯನ್ನು ಹೊಂದಿ ಜಲವನ್ನಾದರೂ ಪ್ರವೇಶಿ

ಯೇ ಮಹಾಮತಯಃ ಸಂತಃ ಶೂರಾಶ್ಚೇಂದ್ರಿಯಶತ್ರುಷು ।
ಜನ್ಮಜ್ವರವಿನಾಶಾಯ ತ ಉಪಾಸ್ಯಾ ಮಹಾಧಿಯಃ ॥ ೩೫ ॥

ಸರ್ವತ್ರ ಪಂಚಭೂತಾನಿ ಷಷ್ಠ ಕಿಂಚಿನ್ನ ವಿದ್ಯತೇ ।
ಪಾತಾಲೇ ಭೂತಲೇ ಸ್ವರ್ಗೇ ರತಿರ್ಮೇತು ಕ್ವ ಧೀರಧೀಃ ॥ ೩೬ ॥

---

೩೪. ಅಥವಾ ಯೋಗ ಸಿದ್ಧಿಗಳನ್ನು ಸಂಪಾದಿಸಿ ಭೂತಗಳನ್ನೂ ಗೆದ್ದು ಸ್ವೇಚ್ಛೆಯಿಂದ ಸರ್ವತ್ರ ಎಲ್ಲಿಗೆಬೇಕಾದರೂ ಹೋಗಲಿ. ಏನೇ ಮಾಡಿದರೂ ಕೂಡ ಆತ್ಮಜ್ಞಾನವನ್ನೂ ಪಡೆಯದೆ ಹೋದರೆ ಅವನು ಎಂದಿಗೂ ಎಲ್ಲಿಯೂ ವಿಶ್ರಾಂತಿಯನ್ನು ಹೊಂದುವುದೇ ಇಲ್ಲ.

[ಸಂಸಾರದಲ್ಲಿ ರಾಜ್ಯ ಲಾಭ ಮುಂತಾದ ವಿಷಯಗಳೆಲ್ಲ ಕ್ಷಣಿಕವೂ ಶ್ರಮಪದವೂ ಆಗಿವೆ ಎಂದರ್ಥ.]

೩೫. ಯಾವ ಸತ್ಪುರುಷರು ಅತ್ಮಜ್ಞಾನನಿಷ್ಠರಾಗಿಯೂ ಇದ್ರಿಯಗಳೆಂಬ ಪರಮ ಶತ್ರುಗಳನ್ನೂ (ವಿವೇಕ ವೈರಾಗ್ಯಗಳೆಂಬ) ತಮ್ಮ ಶೌರ್ಯದಿಂದ ನಿಗ್ರಹಿಸಿದವರಾಗಿಯೂ ಇರುವರೋ ಅಂತಹ ಮಹಾ ಪ್ರಾಜ್ಞರನ್ನು ಜನನಮರಣರೂಪವಾದ ವಿಷಮ ಜ್ವರವು ಶಾಂತವಾಗುವುದಕ್ಕೋಸ್ಕರ ಶ್ರದ್ಧೆಯಿಂದ ಆಶ್ರಯಿಸಿ (ಸೇವಿಸಿ) ಆತ್ಮ ತತ್ತ್ವ ವಿಚಾರ ಪರನಾಗಬೇಕು.

[ಸಂಸಾರ ದುಃಖದಿಂದ ವಿಶ್ರಾಂತನಾಗುವುದಕ್ಕೆ ಉಪಾಯಾಂತರವು ಇಲ್ಲ.]

೩೬. ಸ್ವರ್ಗ, ಭೂಮಿ, ಪಾತಾಳಗಳೆಂಬ ಲೋಕತ್ರಯಗಳಿಗೆ ಹೋಗಿ ಸರ್ವತ್ರ ಹುಡುಕಿನೋಡಿದರೂ ಎಲ್ಲ ಕಡೆಯಲ್ಲಿಯೂ ಪೃಥಿವ್ಯಾದಿ ಪಂಚ ಭೂತಗಳು ಕಾಣುವುವೇ ಹೊರತು ಬೇರೆ ಆರನೆಯದಾದ ಯಾವುದೊಂದು ಸಮವೂ ಇರುವುದಿಲ್ಲ. (ಈ ಭೂತಗಳೋ ಕ್ಷಣ ವಿಧ್ವಂಸಿಗಳು ಮತ್ತು ದುಃಖ ಜನಕಗಳು) ಹೀಗಿರುವಲ್ಲಿ ಧೀರನಾದ (ಎಂತಹ ಸಂದರ್ಭದಲ್ಲಿಯೂ ವಿಕಾರವನ್ನೂ ಹೊಂದದ) ಪ್ರಾಜ್ಞನ ಬುದ್ಧಿಯು ಯಾವ ವಸ್ತುವಿನಲ್ಲಿ ಅನುರಾಗವನ್ನು ಇಟ್ಟು ರಮಿಸಬೇಕು? (ಅಂತಹ ವಸ್ತುವೇ ಇಲ್ಲವೆಂದು ತಾತ್ಪರ್ಯ.)

ಯುಕ್ತ್ಯಾ ವೈ ಚರತೋ ಜ್ಞಸ್ಯ ಸಂಸಾರೋ ಗೋಷ್ಪದಾಕೃತಿಃ ।
ದೂರಸಂತ್ಯಕ್ತಯುಕ್ತೇಸ್ತು ಮಹಾಮತ್ತಾರ್ಣವೋಪಮಃ ॥ ೩೭ ॥

ಕದಂಬಗೋಲಕೈಸ್ತುಲ್ಯಂ ಬ್ರಹ್ಮಾಂಡಂ ಸ್ಫಾರಚೇತಸಃ ।
ಕಿಂ ಪ್ರಯಚ್ಛತಿ ಕಿಂ ಭುಂಕ್ತೇ ಪ್ರಾಪ್ತೇಽಸ್ಮಿನ್ ಸಕಲೇಽಪಿ ಸಃ ॥ ೩೮ ॥

[ತತ್ತ್ವಜ್ಞಾನನಿಷ್ಠನಾದ ಮಹಾತ್ಮನಿಗೆ ಪುನಃ ಭೋಗ ಭೂಮಿಗಳಲ್ಲಿ ಅನುರಾಗವು ಉದಯಿಸಲು ಅವಕಾಶವೇ ಇಲ್ಲ.]

೩೭. ಅನ್ನೇನ ಸೌಮ್ಯ ಶುಂಗೇನಾಪೋ ಮೂಲಮನ್ವಿಚ್ಛ ಇತ್ಯಾದಿ)ಶ್ರುತಿ ಪ್ರದರ್ಶಿತವಾದ ಯುಕ್ತಿ ಪರ್ಯಾಲೋಚನೆಯಿಂದ ವ್ಯವಹರಿಸುವಂತಹ ಪ್ರಾಜ್ಞನಿಗೆ ಪಂಚಭೂತಮಯವಾದ ಈ ಅಪಾರ ಸಂಸಾರವು ಒಂದು ಗೋವಿನ ಪಾದದಷ್ಟು ಅಲ್ಪಾಕಾರವಾಗಿದ್ದು ಅನಾಯಾಸವಾಗಿ ದಾಟುವುದಕ್ಕೆ ಯೋಗ್ಯವಾಗುವುದು. ಶಾಸ್ತ್ರೋಕ್ತ ಯುಕ್ತಿಗಳನ್ನು ಪರ್ಯಾಲೋಚಿಸದೆ ದೂರದಲ್ಲಿ ಅವುಗಳನ್ನು ಬಿಟ್ಟಿರುವ ಅಜ್ಞನಿಗಾದರೋ ಅದೇ ಸಂಸಾರವು ಪ್ರಳಯ ಕಾಲದ ಮಹಾ ಸಮುದ್ರಾಕಾರವಾಗಿಯೂ ಸರ್ವಥಾ ದಾಟುವುದಕ್ಕೆ ಅಶಕ್ಯವಾಗಿಯೂ ಇರುವದು.

(ಅನ್ನೇನ ಶೌಮ್ಯ ಶುಂಗೇನಾಪೋ ಮೂಲಮನ್ವಿಚ್ಛ ಅದ್ಭಿಃ ಉಸೌಮ್ಯ ಶುಂಗೇನತೇಜೋ ಮೂಲಮನ್ವಿಚ್ಛ ! ತೇಜಸಾ ಸೌಮ್ಯ ಶುಂಗೇನ ಸನ್ಮೂಲಮನ್ವಿಚ್ಛ ಸನ್ಮೂಲಾಃಸೌಮ್ಯ ಇಮಾಃ ಸರ್ವಾಃ ಪ್ರಜಾಃ, ಸದಾಯತನಾಃ, ಸತ್ಪ್ರತಿಷ್ಠಾಃ ಛಾಂದೋಗ್ಯ ೬-೮-೪.]

(ಸರ್ವಾಧಿಷ್ಠಾನವಾದ ಬ್ರಹ್ಮದರ್ಶನದಿಂದ (ಸಾಕ್ಷಾತ್ಕಾರದಿಂದ) ಪಂಚ ಭೂತಗಳೂ ಅಸತ್ಯವೆಂಬ ನಿಶ್ಚಯವುಂಟಾಗಿರುವ ಕಾರಣ ಅವುಗಳನ್ನು ದಾಟುವುದು ತತ್ತ್ವಜ್ಞರಿಗೆ ಸುಲಭ. ಅಜ್ಞರಿಗೆ ಸಾಧ್ಯವೇ ಇಲ್ಲ ಎಂದು ಭಾವ.)

೩೮. ಉದಾರ ಮನಸ್ಕನಾದ ಆತ್ಮಜ್ಞನು ನಿತ್ಯನಿರವಧಿಕಾತ್ಮಾನಂದ ದೃಷ್ಟಿಯಿಂದ ನೋಡುವಾಗ ಸಮಸ್ತವಾದ ಈ ಬ್ರಹ್ಮಾಂಡದಲ್ಲಿ ಲಭಿಸುವ ಸುಖವೆಲ್ಲವೂ

ಏತದರ್ಥಮಬುದ್ಧೀನಾಂ ಯನ್ಮಹಾಸಮರಕ್ರಿಯಾಃ ।
ತನ್ಮನ್ಯೇ ರಾಮ ಧಿಕ್ಕಾರ್ಯಂ ದ್ವಂದ್ವಲಕ್ಷಕ್ಷಯಾವಹಂ ॥ ೩೯ ॥

ಕಲ್ಪಮಾತ್ರೇಣ ಕಾಲೇನ ಸುಮಹಾಪೇವೋದರೆ ।
ತಸ್ಮಿನ್ನತಿ ಹಿ ಯೋ ನಾಶಃ ಸರ್ವಾಧಿರಮಹಾಧಿಯಾಂ ॥ ೪೦ ॥

ಈಚಲು ಹಣ್ಣಿನ ಹೋಳುಗಳಂತೆ, ಅತಿ ತುಚ್ಛವೆಂದೂ ಅತ್ಯಲ್ಪವೆಂದೂ ದೃಢವಾಗಿ ತಿಳಿದಿರುವನು. ಇಂತಹ ಸಕಲವಾದ ಬ್ರಹ್ಮಾಂಡವು ತನ್ನ ಅಧೀನಕ್ಕೆ ಬಂದರೂ ಕೂಡ ತುಚ್ಛವಾದ ಧನದಾರಾದಿ ಭೋಗ್ಯ ವಸ್ತುಗಳಲ್ಲಿ ಆ ಪ್ರಾಜ್ಞನು ಇತರರಿಗೆ ಏನನ್ನು ಕೊಡುವನು ? ಮತ್ತು ತಾನು ಏನನ್ನು ತಾನೇ ಅನುಭವಿಸುವನು ?

[ಯಾವದರಲ್ಲಿಯೂ ದಾನ ಮಾಡುವ ಮತ್ತು ತಾನು ಅನುಭವಿಸುವ ಇಚ್ಛೆಯೇ ಪ್ರಸಕ್ತವಾಗುವುದಿಲ್ಲ.]

೩೯. ಅಯ್ಯ ರಾಮ, ಇಂತಹ ಅತಿ ತುಚ್ಛವಾದ ಬ್ರಹ್ಮಾಂಡದಲ್ಲಿಯೂ ಕೂಡ ಯಾವುದೋ ಒಂದು ಅತ್ಯಂತ ಅಲ್ಪವಾದ ಏಕ ದೇಶ (ಒಂದು ಭಾಗ)ವನ್ನು ಪಡೆಯುವುದಕ್ಕೋಸ್ಕರ ಬುದ್ಧಿಹೀನರಾದ ಕೆಲವು ರಾಜರು ಸ್ವಪಕ್ಷದಲ್ಲಿಯೂ ಶತ್ರು ಪಕ್ಷದಲ್ಲಿಯೂ ಕೂಡ ಅನೇಕ ಲಕ್ಷೋಪಲಕ್ಷ ಪ್ರಾಣಿ ಸಮೂಹಗಳನ್ನು ನಾಶಪಡಿಸುವ ಅತಿ ಹಿಂಸಾಕರವಾದ ದೊಡ್ಡ ಯುದ್ಧಗಳನ್ನು ಮಾಡುವಿಕೆಯು ಕೇವಲ ದೂಷ್ಯವಾದ ನೀಚ ಕೃತ್ಯನೆಂದು ನಾನು ಭಾವಿಸುವೆನು.

೪೦. ಮಹಾ ಪ್ರಳಯಕಾಲ ಪರ್ಯಂತವೂ ಚಿರಕಾಲ ಭೋಗಾರ್ಹವಾಗಿರುವ ಬ್ರಹ್ಮ ಪದವಿಯಲ್ಲಿಯೂ ಆಶೆಯನ್ನಿಡುವುದು ಯುಕ್ತವಲ್ಲ, ಆ ಬ್ರಹ್ಮ ಪದವಿಯು ನಶ್ವರವಾದುದು-ಶಾಶ್ವತವಲ್ಲ. ಒಂದು ಕಲ್ಪ ಮಾತ್ರ ಕಾಲಕ್ಕೆ ಎರಡು ಪರಾರ್ಧಗಳ ಅವಧಿಯುಂಟು. ಇಷ್ಟು ಅಲ್ಪ ಕಾಲದಲ್ಲಿ ಅದು ಕೊನೆಗಾಣುವುದು. ಇದರ ಮಧ್ಯ ಭಾಗವು ಅತ್ಯಂತ ಸೂಕ್ಷ್ಮವಾದುದು. ಈ ಬ್ರಹ್ಮ ಪದವಿಯಲ್ಲಿಯೂ ಇದು ಸಕಲ ಪ್ರಾಣಿಗಳ ಪ್ರಳಯಕ್ಕೆ ನಿಮಿತ್ತವಾಗಿರುವ ನಾಶವು ಸಂಭವಿಸುವುದು. ಈ ನಾಶವು ದುರಂತವಾದ ಮನೋವ್ಯಥೆಗೆ ಕಾರಣವಾಗುವುದು. ಇಂತಹುದರಲ್ಲಿ ಮಹಾ ಮೂಢರಾದವರು ಆಶೆ ಪಡುವರೇ ಹೊರತು ತತ್ತ್ವಜ್ಞರು ಎಂದಿಗೂ ಆಶೆಪಡುವುದಿಲ್ಲ.

ಆತ್ಮನೋ ಜ್ಞಸ್ಯ ಸರ್ಗಾದೇರ್ಯನ್ಮನಾಗಪಿ ನೋದ್ಗತಂ ।
ತಸ್ಮಿನ್ ಜಗತ್ರಯೇ ಪ್ರಾಪ್ತೇ ಕಿಂಚಿದಾತ್ಮಾ ಬಲೀಭವೇತ್ ॥ ೪೧ ॥

ಇತಃ ಶೈಲಶತೈರ್ವ್ಯಾಪ್ತಾ ತಥೇತೋ ಜಲರಾಶಿಭಿಃ ।
ಕಿಯಾನಸ್ಯ ಭುವೋ ದೇಹೋ ಯೇನೋದಾರಂ ಪ್ರಪೂರಯೇತ್ ॥ ೪೨ ॥

---

೪೧. ತತ್ತ್ವಜ್ಞಾನ ದೃಷ್ಟಿಯಿಂದ ಯಾವ ಈ ಜಗತ್ರಯವು ಸೃಷ್ಟಿ ಮೊದಲಾದ ಯಾವ ಉಪಾಯದಿಂದಲೂ ಸ್ವಲ್ಪ ಮಾತ್ರವೂ ಉತ್ಪನ್ನವಾಗಲೇ ಇಲ್ಲವೋ ಅಂತಹ ಅತಿತುಚ್ಛವಾದಿ ವಂಧ್ಯಾಪುತ್ರನಂತೆ ಅತ್ಯಂತಾಸತ್ಯವಾದ ಮೂರು ಲೋಕಗಳು ಪ್ರಾಪ್ತವಾದರೂ ಕೂಡ ಅದರಿಂದ ಚಿದೇಕರಸನಾದ ಆತ್ಮನು ಪುಷ್ಟಿಗೊಂಡು ಬಲಿಷ್ಠನಾಗುವನೇನು ? ಬಲಿಷ್ಠನಾಗುವ ಸಂಭವವಿದ್ದಿದ್ದರೆ ಅಲ್ಲವೆ ಆತ್ಮನಿಗೆ ಅದರಲ್ಲಿ ಅನುರಾಗವು ಉಂಟಾಗಬಹುದಾಗಿತ್ತು.

[ನ ನಿರೋಧೋ ನಚೋತ್ಪತ್ತಿಃ ನಬದ್ಧೋ ನಚಸಾಧಕಃ ನಮುಮುಕ್ಷುಃ ನವಾಮುಕ್ತಃ ಇತ್ಯೇಷಾ ಪರಮಾರ್ಥತಾ ಎಂದು ಶ್ರೀ ಗೌಡಪಾದಾಚಾರ್ಯರವರು ತಮ್ಮ ಮಾಂಡೋಕ್ಯೋಪನಿಷತ್ಕಾರಿಕೆಗಳಲ್ಲಿ ಉಪದೇಶಿಸಿರುವುದನ್ನೂ ತಿಳಿಯಿರಿ. ಪರಮಾರ್ಥತಃ ಜಗತ್ತು ಸೃಷ್ಟಿಯಾಗಲೇ ಇಲ್ಲವೆಂದು ಗೊತ್ತಾಗುವುದು.]

೪೨. ಈ ಭೂಮಿಯು ಇತ್ತ ಒಂದು ಕಡೆ ನೂರಾರು ಪರ್ವತ ಶ್ರೇಣಿಗಳಿಂದ ವ್ಯಾಪ್ತವಾಗಿರುವುದು. ಹಾಗೆಯೇ ಮತ್ತೊಂದು ಕಡೆ ಸುತ್ತಲೂ ಅದನ್ನು ಸಮುದ್ರಗಳೂ ಆವರಿಸಿಕೊಂಡಿರುವುವು. ಇವುಗಳನ್ನು ಕಳೆದರೆ ಉಳಿದ ಈ ಭೂಮಿಯ ಆಕಾರವು (ವಿಸ್ತೀರ್ಣವು) ಎಷ್ಟು ಅಲ್ಪ ಪ್ರಮಾಣವುಳ್ಳದಾಗಿರುವುದು ? ನೀನೇ ಯೋಚಿಸು. ಇದರ ಯಾವ ಭಾಗವು ಸರ್ವವನ್ನೂ ತ್ಯಾಗ ಮಾಡಿ ಶೂನ್ಯವಾಗಿರುವ (ನಿಸ್ಪೃಹವಾಗಿರುವ) ಉದಾರವಾದ ಮನಸ್ಸುಳ್ಳ ಮಹಾತ್ಮನ ಮನೋರಥವನ್ನೂ ಪೂರೈಸಬಹುದು ? (ಹೀಗೆ ಈ ಭೂಲೋಕದ ಅಖಂಡವಾದ ಏಕಚತ್ರಾಧಿಪತ್ಯ ರೂಪ ಸಾಮ್ರಾಜ್ಯ ಪದವಿಯೂ ಕೂಡ ಅಸಾರಬಹುಳವಾಗಿರುವ ಕಾರಣ ಇದರಲ್ಲಿಯೂ ಪ್ರಾಜ್ಞನಿಗೆ ಅನುರಾಗವು ಹುಟ್ಟುವುದಿಲ್ಲ.

ನ ತದಸ್ತಿ ಜಗತ್ಯಸ್ಮಿನ್ ಸಪಾತಾಲಸುರಾಲಯೇ ।
ಯನ್ನಾಮಾತ್ಮವತೋ ಜ್ಞಸ್ಯ ಕಿಂಚಿತ್ಕಾರ್ಯತರಂ ಭವೇತ್ ॥ ೪೩ ॥

ಏಕತಾಮನುಯಾತಸ್ಯ ವ್ಯೋಮವನ್ನಿತತಸ್ಯ ಚ ।
ಸ್ವಸ್ಥಸ್ಯಾತ್ಮವತೋ ಜ್ಞಸ್ಯ ಸ್ಥಿತಸ್ಯಾತ್ಮನ್ಯಚೇತಸಃ ॥ ೪೪ ॥

ಶರೀರಜಾಲ ನೀಹಾರಧೂಸರಾ ಶೂನ್ಯಕೋಟರಾ ।
ಶಾಂತಸಂಸಾರಸುಭಗಾ ತ್ರಿಲೋಕೀವಿಪುಲಾತಟೀ ॥ ೪೫ ॥

---

೪೩. ಆತ್ಮವಂತನಾದ ಜ್ಞಾನಿಯು ಆಪ್ತಸರ್ವಕಾಮನಾಗಿ ಕೃತಕೃತ್ಯನಾಗಿರುವ ಕಾರಣ ಈ ಭೂಲೋಕಗಳಲ್ಲಿಯೂ ಸ್ವರ್ಗಪಾತಾಳಲೋಕಗಳಲ್ಲಿಯೂ ಕೂಡ ಅತ್ಯವಶ್ಯ ಕರ್ತವ್ಯವಾದ ಕರ್ಮವು ಒಂದೂ ಸಹ ಸರ್ವಥಾ ಇಲ್ಲವೇ ಇಲ್ಲ.

[ಯಸ್ತ್ವಾತ್ಮರತಿರೇವಸ್ಯಾತ್ ಆತ್ಮತೃಪ್ತಶ್ಚಮಾನವಃ ಆತ್ಮನ್ಯೇವಚ ಸಂತುಷ್ಟಃ ತಸ್ಯಕಾರ್ಯಂನ ವಿದ್ಯತೇ ॥ ನೈವತಸ್ಯಕೃತೇನಾರ್ಥಃ ನಾಕೃತೇನೇಹ ಕಶ್ಚನ । ನಚಾಸ್ಯ ಸರ್ವ ಭೂತೇಷು ಕಶ್ಚಿದರ್ಥ ವ್ಯಪಾಶ್ರಯಃ ॥ ಭಗವದ್ಗೀತಾ ಅಧ್ಯಾಯ ೩ ಶ್ಲೋಕ ೧೭–೧೮.)

೪೪–೪೫. ಆತ್ಮೈಕ್ಯವನ್ನೂ ಪಡೆದವನಾಗಿಯೂ ಆಕಾಶದಂತೆ ಸರ್ವಗತನಾಗಿಯೂ ಸ್ವಸ್ಥನಾಗಿಯೂ ಆತ್ಮ ಸ್ವರೂಪದಲ್ಲಿ ಅಚಲನಾಗಿಯೂ (ಸ್ಥಿರ) ನಿರ್ಮನಸ್ಕನಾಗಿಯೂ ಇರುವ ಆತ್ಮವಂತನಾದ ಪ್ರಾಜ್ಞನಿಗೆ ಅತಿ ವಿಸ್ತಾರವಾದ ಈ ಲೋಕತ್ರಯವೂ ಮೃಗತೃಷ್ಣಾ ನದಿಯು (ಬಿಸಿಲು ಗುದುರೆ-ಮರು ಮರೀಚಿಕೆ) ದಡವಾಗಿ ತೋರುವುದು. ಈ ತ್ರಿಲೋಕಿಯು ಸಕಲ ಸಂಸಾರವೂ ಅತ್ಯಂತಿಕವಾಗಿ ನಿವೃತ್ತಿಯಾಗಿ (ಪ್ರಶಾಂತವಾಗಿ)ರುವ ಕಾರಣ ಬಹು ರಮಣೀಯವಾಗಿ ಕಾಣುವುದು. ಇದರ ಒಳ ಭಾಗವು ಆಕಾಶದ ಮಧ್ಯ ಭಾಗದಂತೆ ಶೂನ್ಯವಾಗುವುದು. (ಮೂರ್ತರೂಪವಾಗಿರುವುದಿಲ್ಲ.) ದೇಹ ಜಾಲಗಳೆಂಬ ಹಿಮಜಲ ಕಣಗಳಾದ ಈ ತ್ರಿಲೋಕಿಯೆಂಬ ಬಿಸಿಲು ಕುದುರೆಯು ಆಚ್ಛಾದಿತವಾಗಿರುವುದು. (ಹೀಗೆ ಆತ್ಮನಿಷ್ಠನಾದ ಜ್ಞಾನಿಗೆ ಸ್ವಲ್ಪ ಮಾತ್ರವು ಪ್ರಪಂಚವು ಬೇಕಿಲ್ಲವೆಂದು ಭಾವಾರ್ಥ.)

ಸ್ಫಾರಬ್ರಹ್ಮಾಮಲಾಂಭೋಧಿಫೇನಾಃ ಸರ್ವೇ ಕುಲಾಚಲಾಃ ।
ಚಿದಾದಿತ್ಯಮಹಾಭಾಸಮೃಗತೃಷ್ಣಾಜಲಶ್ರಿಯಃ ॥ ೪೬ ॥

ಆತ್ಮತತ್ತ್ವಮಹಾಂಭೋಧಿವೀಚಯಃ ಸರ್ಗರಾಜಯಃ ।
ಅನುತ್ತಮಪದಾಂಭೋದವೃಷ್ಟಯಃ ಶಾಸ್ತ್ರದೃಷ್ಟಯಃ ॥ ೪೭ ॥

ಚಂದ್ರಾಗ್ನಿತಪನಾಲೋಕಾ ಘಟಕಾಷ್ಠಾದಿಸನ್ನಿಭಾಃ ।
ಪ್ರಕಾಶನೀಯಾಶ್ಚಿದ್ರೂಪತ್ವಿಷೋ ಮಲಕಣಾಸ್ತಥಾ ॥ ೪೮ ॥

ವಿಹರಂತಿ ಸ್ವಮಾತ್ಮಾನಃ ಸಂಸಾರವನಚಾರಿಣಃ ।
ಕಾಮಭೋಗೋಪಗ್ರಾಸಮೃಗಾ ನರಸುರಾಸುರಾಃ ॥ ೪೯ ॥

ಅಸ್ಥಿಖಂಡಾರ್ಗಲಾಮೂರ್ಧಪಿಧಾನಾಃ ಸ್ನಾಯುಶೃಂಖಲಾಃ ।
ಜಗದ್ದೇಹಾ ಜರಜ್ಜೀವರಕ್ತಮಾಂಸಸಮುದ್ಗಕಾಃ ॥ ೫೦ ॥

ವನಮಾಲಾಮೃಗಾ ಮುಗ್ಧಾಃ ಪುರಸಂಚಾರಿತಾ ಸ್ಥಿತೌ ।
ಬಾಲಬುದ್ಧಿವಿನೋದಾಯ ಯೋಚಿತಾಶ್ಚರ್ಮಪುತ್ರಿಕಾಃ ॥ ೫೧ ॥

೪೬–೫೧. ಅಂತಹ ಸ್ಥಿತಿಪ್ರಜ್ಞನಾದ ಜೀವನ್ಮುಕ್ತನಿಗೆ ಸಕಲ ಕುಲಪರ್ವತಗಳೂ ನಿತ್ಯಶುದ್ಧನೂ ನಿರವಧಿಕನೂ ನಿತ್ಯ ಮುಕ್ತನೂ ಆದ ಪರಮಾತ್ಮನೆಂಬ ಮಹಾಸಾಗರದಲ್ಲಿ ನೊರೆಗಳಂತೆ ತೇಲಾಡುವುವು. ನದೀ ಸಮುದ್ರಾದಿ ಸಕಲ ಜಲಾಶಯಗಳೂ ಚಿದ್ರೂಪನಾದ (ಸ್ವಪ್ರಕಾಶ) ಪರಬ್ರಹ್ಮನೆಂಬ ಸೂರ್ಯನ ಅತಿ ತೀವ್ರವಾದ ಪ್ರಕಾಶದಲ್ಲಿ ಭ್ರಾಂತಿಯಿಂದ ಉದಯಿಸಿದ ಬಿಸಿಲ್ಗುದುರೆಗಳಂತೆ ಭಾಸಿಸುವುವು. ನಾನಾ ಬಗೆಗಳಾದ ಈ ಸೃಷ್ಟಿ ಪರಂಪರೆಗಳು ಆತ್ಮತತ್ತ್ವವೆಂಬ ಮಹಾಸಮುದ್ರದಲ್ಲಿ ಅಲೆಗಳಂತೆ ಆವಿರ್ಭವಿಸುವುವು. ಶ್ರೌತಸ್ಮಾರ್ತ ಧರ್ಮಗಳು, ಬ್ರಹ್ಮ ಮುಂತಾದ ಶಾಸ್ತ್ರದರ್ಶನಗಳು ಎಲ್ಲವೂ ಸರ್ವೋತ್ತಮವಾದ ಆ ಪರಮಪದವೆಂಬ ಮೇಘಮಾಲೆಯ ವೃಷ್ಟಿಕಲ್ಪಗಳಾಗಿರುವುವು. ಚಂದ್ರ, ಅಗ್ನಿ, ಸೂರ್ಯರೆಂಬ ದಿವ್ಯಜ್ಯೋತಿಗಳೂ ಕೂಡ ಬ್ರಹ್ಮಜ್ಞನ ದೃಷ್ಟಿಯಲ್ಲಿ ಘಟ (ಮಣ್ಣಿನಗಡಿಗೆ) ಕಾಷ್ಠ (ಮರದತುಂಡು) ಮೊದಲಾದವುಗಳಂತೆ ಅತ್ಯಂತ ಜಡವಸ್ತುಗಳಾಗಿ ಸ್ವತಃ ಅಪ್ರಕಾಶವಾಗಿರುವುವು. ಮತ್ತು ಇವುಗಳು ಸ್ವಯಂಪ್ರಕಾಶನಾದ (ಚಿದ್ರೂಪನಾದ) ಆತ್ಮನ ತೇಜಸ್ಸಿನಿಂದಲೇ ಪ್ರಕಾಶವನ್ನು ಪಡೆದು ವಿರಾಜಸತಕ್ಕವುಗಳಾಗಿ ಇರುವುವು. (ನತತ್ರಸೂರ್ಯೋಭಾತಿನ ಚಂದ್ರತಾರಕಂ ನೇಮಾವಿದ್ಯುತೋಭಾಂತಿ ಕುತೋಽಯಮಗ್ನಿಃ। ತಮೇವ ಭಾಂತಮನುಭಾತಿ ಸರ್ವಂ ತಸ್ಯಭಾಸಾ ಸರ್ವಮಿದಂ ವಿಭಾತಿ ॥

ಎಂಬೀಶ್ರುತಿಯು. ಈ ವಿಷಯದಲ್ಲಿ ಪ್ರಯಾಣ ಯದಾದಿತ್ಯಗತಂ ತೇಜಃ ಜಗತ್ ಭಾಸಯತೇಽಖಿಲಂ । ಯಚ್ಚಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಂ ॥ ಎಂದೂ ಭಗವಂತನು ಗೀತೆಯಲ್ಲಿ ಬೋಧಿಸಿರುವುದನ್ನು ಗಮನಿಸಬೇಕು.

ಚಂದ್ರ ಸೂರ್ಯಾದಿ ದಿವ್ಯ ಜ್ಯೋತಿಗಳ ಪಾಡೇ ಹೀಗಿರುವಾಗ, ಇನ್ನು ಅತ್ಯಂತ ಮಲಿನಗಳಾದ ಪಾರ್ಥಿವಾದಿ ಸಕಲ ಧಾತುಗಳೂ ಲೌಕಿಕಾಗ್ನಿಯ ಕಣಗಳೂ ಮುಂತಾದವು ಸುತರಾಂ ಅಪ್ರಕಾಶಗಳು ಅವು ಚಿತ್ತಿನ ಪ್ರಕಾಶದಿಂದಲೇ ಹೊಳೆಯುವುವು ಎಂಬುದನ್ನು ಹೇಳಲೇಕೆ? (ಅದು ಕೈಮುತಿಕ ನ್ಯಾಯಸಿದ್ಧ ವಲ್ಲವೆ?) ಮತ್ತು ಸ್ವಪ್ನಸದೃಶಗಳಾದ ತಮ್ಮ ದೇಹೇಂದ್ರಿಯಾದಿಗಳಲ್ಲಿ ಆತ್ಮ ಬುದ್ಧಿಯನ್ನು ಇಟ್ಟುಕೊಂಡು ವಿಹರಿಸುತ್ತಿರುವ ದೇವ, ರಾಕ್ಷಸ, ಮನುಷ್ಯಾದಿಗಳನ್ನು ಸಂಸಾರವೆಂಬ ವನದಲ್ಲಿ ಸಂಚರಿಸತಕ್ಕ ವಿಷಯೋಪಭೋಗಗಳೆಂಬ ಹುಲ್ಲು ಗಾವಲಿನಲ್ಲಿ ಹುಲ್ಲನ್ನು (ಕಾಮಗಳನ್ನು) ಮೇಯುತ್ತಿರುವ ತಿರ್ಯಗ್ಜಂತುಗಳೆಂದು ಜ್ಞಾನಿಗಳು ಭಾವಿಸಿರುವರು. ಮತ್ತು ಸ್ವರ್ಗಾದಿ ಸಕಲ ಲೋಕಗಳಲ್ಲಿರುವ ದೇವ ರಾಕ್ಷಸ ಮನುಷ್ಯಾದಿ ದೇಹಗಳೆಲ್ಲವನ್ನೂ ಅನಾದಿ ಸಂಸಾರವೆಂಬ ವನಮಧ್ಯದಲ್ಲಿ ಚಿರಕಾಲದಿಂದ ಸುತ್ತಿ ಸುತ್ತಿ ಬಹಳ ಜೀರ್ಣವಾಗಿರುವ ಜೀವಗಳನ್ನು ಕ್ರಮ ಕ್ರಮವಾಗಿ ಬಂಧಿಸುವದಕ್ಕಾಗಿ ರಕ್ತಮಾಂಸಗಳಿಂದ ಸೃಷ್ಟಿಕರ್ತನು ನಿರ್ಮಿಸಿರುವ ಪಂಜರಗಳೆಂದು ಆತ್ಮಜ್ಞರು ತಿಳಿಯುವರು. ಆ ದೇಹಗಳೆಂಬ ಪಂಜರಗಳಿಗೆ ಅಸ್ಥಿಖಂಡಗಳೇ (ಎಲುಬುಗಳ ಗೂಡುಗಳು) ಅರ್ಗಳ (ಚಿಲುಕ) ಗಳಾಗಿರುವುವು. ತಲೆಗಳೇ ಮೇಲುಮುಚ್ಚಳವಾಗಿರುವುವು. ನಾಡಿ (ನರ)ಗಳೇ ಲೋಹಮಯವಾದ ಸರಪಣಿಯಾಗಿ [ಸಂಕೋಲೆ-ಶೃಂಖಲಾ]ರುವುವು. ಎಂದೂ ತಿಳಿದಿರುವರು. ಮತ್ತು ಹೀಗೆ ಜೀವಾವಿಷ್ಟಗಳಾದ [ಉಸಿರಾಡುತ್ತಿರುದ] ಚರ್ಮದ ಬೊಂಬೆಗಳೇ ನಾನಾವಿಧ ಸಂಸಾರಗಳೆಂಬ ದುರ್ಗಮವಾದ ಅರಣ್ಯ ಪಂಗ್ತಿಗಳಲ್ಲಿ ಓಡಾಡುವವಿ ವೇಕಶೂನ್ಯವಾದ ಕಾಡುಮೃಗಗಳೆಂದೂ ಇಂತಹ ಅವಿವೇಕಿ ಕಾಡುಮೃಗಗಳಂತಿರುವ ಅಜ್ಞಾನಿಗಳು ಅತ್ಯಲ್ಪವಾದ ಹುಲ್ಲುಗಳ ಗ್ರಾಸದಂತೆ ಅತಿತುಚ್ಛವಾದ ವಿರಸವಾದ ಕಾಮೋಪ ಭೋಗಗಳಿಂದ ಸಂತೋಷಪಡುವುದಕ್ಕಾಗಿ ಆಯಾ ಭೋಗಭೂಮಿಗಳೆಂಬ ಪಟ್ಟಣಗಳೊಳಗೆ ಸಂಚರಿಸುವ ಸ್ಥಿತಿಯಲ್ಲಿ ಅವರನ್ನು ಸೃಷ್ಟಿಕರ್ತನು ಇರಿಸಿರುವ ನೆಂದೂ ತಿಳಿದಿರುವರು.

[ಬಾಲಬುದ್ಧಿ ವಿನೋದಾಯ ಮಕ್ಕಳು ಆಟವಾಡುವಾಗ ಅಲ್ಪ ವಸ್ತು ಗಳಿಂದಲೇ ಮನಸ್ಸಿನಲ್ಲಿ ಆನಂದಪಡುವವು.]

ಸ್ವಸಂವಿಧೋದಾರಮನಾ ಮನಾಗಪಿ ಮಹಾಮತಿಃ ।
ನ ಜ್ಞಶ್ಚಲತಿ ಭೋಗೌಘೈಃ ಮಂದವಾತೈರಿವಾಚಲಃ ॥ ೫೨ ॥

ತಸ್ಮಿನ್ ಕಿಲ ಪದೇ ರಾಮ ಜ್ಞಸ್ತಿಷ್ಠತಿ ಮಹೋತ್ತಮೇ ।
ಯಸ್ಮಿಂಶ್ಚಂದ್ರಾರ್ಕದೇಶೋಽಪಿ ನ ಪಾತಾಲಮಿವ ಸ್ಥಿತಃ ॥ ೫೩ ॥

ಯಸ್ಯಾಲೋಕಾಲೋಕಪಾಲಾಃ ಸಮಾಲೋಕಾಃ ಸುವೇದಿನಃ ।
ಶರೀರಂ ಪಾಂತ್ಯಯಮಿವ ಪಶ್ಯನ್ಮೂಢಾಃ ಕ್ಷಪಾರ್ಣವೇ ॥ ೫೪ ॥

---

೫೨. ಸರ್ವತ್ಯಾಗಿಯಾದ ಮಹಾಪ್ರಾಜ್ಞನಾದರೋ ಸ್ವಲ್ಪವಾದರೂ ಅಜ್ಞನಂತೆ ಭೋಗಲಂಲಸನಾಗಿ ಇರ ವವನಲ್ಲ. ಮಂದವಾಯುಗಳಿಂದ ಪರ್ವತವು ಸ್ವಲ್ಪವೂ ಚಲಿಸದೆ ಸ್ಥಿರವಾಗಿರುವಂತೆ ತತ್ವಜ್ಞನು ಯೋಗಸಮುದಾಯಗಳಿಂದ ಸ್ವಲ್ಪ ಮಾತ್ರವೂ ಒಂದು ಸಲವಾದರೂ ತತ್ವಚ್ಯುತನಾಗದೆಯೇ ಸ್ವಾತ್ಮಾರಾಮನಾಗಿ ಸ್ವಸ್ಥನಾಗಿರುವನು.

೫೩. ರಾಮ, ಯಾವ ಪರಮಪದದಲ್ಲಿ ನಿಂತು ನೋಡಿದರೆ ಚಂದ್ರ ಸೂರ್ಯ ಮಂಡಲಗಳ ಪ್ರದೇಶವೂ ಅಂಧಕಾರಮಯವಾದ ಪಾತಾಳದಷ್ಟು ಅಲ್ಪಪ್ರಕಾಶಮಾನ ವಾಗಿಯೂ [ತೇಜೋಹೀನವಾಗಿಯೂ] ಕೂಡ ಇರುವುದಿಲ್ಲವೋ ಅಂತಹ ಮಹಾ ಉತ್ತಮವಾದ ಪರಮಪದದಲ್ಲಿ ತತ್ವಜ್ಞನು ಸರ್ವದಾ ಸ್ಥಿರನಾಗಿರುವನು.

[ಚಂದ್ರಾರ್ಕದೇಶೋಽಪಿ ನ ಪಾತಾಲಮಿವಸ್ಥಿತಃ ಎನ್ನುವುದಕ್ಕೆ ಚಂದ್ರಸೂರ್ಯರು ಸಂಚರಿಸುವ ಪ್ರದೇಶವಾದ ಅತ್ಯಂತ ವಿಪುಲವಾದ ಆಕಾಶವೂ ಕೂಡ ಪಾತಾಳದಂತೆ [ಭೂಮಿಯ ಒಂದು ಸಣ್ಣ ರಂಧ್ರದಂತೆ] ಅಲ್ಪ ರೂಪದಿಂದಲೂ ಕೂಡ ಇಲ್ಲವು ಎಂಬ ಅರ್ಥಾಂತರವು ತಾತ್ಪರ್ಯ ಪ್ರಕಾಶದಲ್ಲಿದೆ.]

೫೪. ಮತ್ತು ತತ್ವಜ್ಞನ ಚಿತ್ಪ್ರಕಾಶದಿಂದ ಚತುರ್ಮುಖ ಬ್ರಹ್ಮಾದಿ ಸಮಸ್ತ [ಆಧಿಕಾರಿಕ) ಲೋಕಪಾಲಕರು ಸರ್ವಲೋಕ ಸಾಧಾರಣವಾದ ಅಲ್ಪಪ್ರಕಾಶ ವುಳ್ಳವರಾಗಿಯೂ ಬಹಿಃ ಚಕ್ಷುರಾದಿ ಇಂದ್ರಿಯಗಳ ಮೂಲಕವೂ, ಅಂತರ್ಬುದ್ಧಿ ಯಿಂದಲೂ ತಮ್ಮ ತಮ್ಮ ವ್ಯವಹಾರಗಳಿಗೆ ಉಚಿತವಾದ ಜ್ಞಾನಸಂಪನ್ನರಾಗಿಯೂ, ಅಜ್ಞಾನ ಸಾಗರದಲ್ಲಿ ಮಗ್ನರಾಗಿಯೂ ಅಶರೀರನೂ ದೇಹಾದಿಗಳಿಗಿಂತ ಅತಿರಿಕ್ತನೂ

ನ ಕೇಚನ ಜಗದ್ಭಾವಾಸ್ತತ್ತ್ವಜ್ಞಂ ರಂಜಯಂತ್ಯಮೀ ।
ಅಪ್ಯಭ್ಯಾಸಗತಾಃ ಸ್ಫಾರಹೃದಯಂ ಖಮಿವಾಂಬುದಾಃ ॥ ೫೫ ॥

ನ ಕೇಚನ ಜಗದ್ಭಾವಾಸ್ತತ್ತ್ವಜ್ಞಂ ರಂಜಯಂತ್ಯಮೀ ।
ಮರ್ಕಟಾ ಇವ ನೃತ್ಯಂತೋ ಗೌರೀಲಾಸ್ಯಾರ್ಥಿನಂ ಹರಂ ॥ ೫೬ ॥

ನ ಕೇಚನ ಜಗದ್ಭಾವಾಸ್ತತ್ತ್ವಜಂ ರಂಜ್ಞಯಂತ್ಯಮೀ ।
ಪ್ರಾಕ್ತನ ಪ್ರತಿಬಿಂಬಶ್ರೀ ರತ್ನಂ ಕುಂಭಗತಂಯಥಾ ॥ ೫೭ ॥

ಆಗಿರುವ ಸ್ವಾತ್ಮಸ್ವರೂಪವನ್ನು ವಿವೇಕದಿಂದ ಪ್ರತ್ಯೇಕವಾಗಿ ಕಾಣುತ್ತಿದ್ದರೂ ಕೂಡ ಅಜ್ಞಜನರಂತೆ ಕೇವಲ ಮೂಢರಾಗಿ ತಮ್ಮ ದೇಹಾದಿಗಳಲ್ಲಿ ಆತ್ಮಭಾವವನ್ನು ಇಟ್ಟುಕೊಂಡು ಚಿರಕಾಲದಿಂದ ದೃಢವಾಗಿ ಅಭ್ಯಸ್ತವಾದ ಭೋಗವಾಸನೆಯಿಂದ ಸಹಕೃತವಾದ ಆಧಿಕಾರಿ ಪ್ರಾರಬ್ಧದ ಪ್ರಾಬಲ್ಯದ ಪೆಸೆಯಿಂದ ಪ್ರೇರಿತರಾಗಿ ತಮ್ಮ ದೇಹಗಳನ್ನು ಕಾಪಾಡಿಕೊಂಡು ಇರುವರು.

೫೫. ವಿಶಾಲವಾದ ಆಕಾಶಕ್ಕೆ ಮೇಘಗಳು ಯಾವ ಬಗೆಯ ಲೇಪವನ್ನೂ ಹೇಗೆ ಮಾಡಲಾರವೋ ಹಾಗೆಯೇ ವೈರಾಗ್ಯದಾರ್ಢ್ಯದಿಂದ ಭೋಗವಾಸನಾಕ್ಷಯವುಂಟಾಗಿ ವಾಸನಾಶೂನ್ಯವಾದ ಶುದ್ಧಾಂತಃಕರಣವುಳ್ಳ ತತ್ವಜ್ಞನಿಗೆ ತ್ರೈಲೋಕ್ಯರಾಜ್ಯಾದಿ ಈ ಜಗದ್ಭಾವಗಳು (ಪ್ರಾಪಂಚಿಕ ವಿಷಯಗಳು) ಯಾವುವೂ ಕೂಡ ಪುನಃ ಪುನಃ ಅನುಭವಗೋಚರವಾಗುತ್ತಿದ್ದರೂ ಯಾವ (ರಾಗ) ಲೇಪವನ್ನೂ ಉಂಟು ಮಾಡುವುದಿಲ್ಲ. (ಯಾವ ಮನೋವಿಕಾರವನ್ನೂ ಉಂಟುಮಾಡುವುದಿಲ್ಲ.)

೫೬. ತನ್ನ ಪತ್ನಿಯಾದ ಪಾರ್ವತೀದೇವಿಯು ವಿಲಾಸದಿಂದ ನರ್ತನ ಮಾಡುವುದನ್ನು ನೋಡಿ ಸಂತೋಷಪಡಬೇಕೆಂದು ಅಪೇಕ್ಷಿಸುತ್ತಿರುವ ಈಶ್ವರನನ್ನು ಕಪಿಗಳು ನರ್ತನಮಾಡಿ ಹೇಗೆ ಸಂತೋಷಪಡಿಸಲಾರವೋ ಹಾಗೆ ಈ ಪ್ರಾಪಂಚಿಕ ಭಾವಗಳು ಎಲ್ಲವೂ ತತ್ವಜ್ಞನನ್ನು ಸಂತೋಷಪಡಿಸಲಾರವು.

೫೭. ಹಿಂದಿನ ಕಾಲದಲ್ಲಿ ಎಂದರೆ ಒಂದು ಸ್ವಚ್ಛವಾದ ರತ್ನವು ಒಂದು ಗಡಿಗೆಯ (ಕುಂಭ) ಹೊರಗೆ ಇರುವ ಕಾಲದಲ್ಲಿ ಆ ರತ್ನದ ಒಳಗೆ ಕಾಣುತ್ತಿದ್ದ ಸಮೀಪದಲ್ಲಿರುವ ಸ್ತಂಭ, ಗೋಡೆ ಮುಂತಾದವುಗಳ ಪ್ರತಿಬಿಂಬದ ಸಂಸರ್ಗವು, ಅದೇ ರತ್ನವು ಒಂದು ಗಡಿಗೆಯೊಳಗೆ ಇರುವ ಕಾಲದಲ್ಲಿ ಹೇಗೆ ಇರುವುದಿಲ್ಲವೋ

ವಜ್ರಾರ್ಪಿತೋಪಮಮಸನ್ಮಯಮಂಬುಭಂಗ—
ತುಂಗಂ ತರಂಗಕೃತಬಿಂಬಮಿವಾವಲೋಕ್ಯ ।
ಲೋಲಾಂ ತನೀಹಿತಸುಸುಖೇಷು ರತಿಂ ನ ಯಾತಿ ।
ತಜ್ಞಃ ಕುಶೈವಲಲವೇಷ್ವಿವ ರಾಜಹಂಸಃ ॥ ೫೮ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
"ಪೂರ್ಣಾಶಯಸ್ವರೂಪವರ್ಣನಂ" ನಾಮ ಸಪ್ತಪಂಚಾಶಃ ಸರ್ಗಃ

ಹಾಗೆಯೇ ತತ್ತ್ವಜ್ಞನಿಗೆ ಈ ಪ್ರಾಪಂಚಿಕ ಭಾವಗಳ ಸಂಪರ್ಕವೂ ಸ್ವಲ್ಪವಾದರೂ ಇರುವುದಿಲ್ಲ. (ಯಾವ ದೋಷವನ್ನೂ ಉಂಟುಮಾಡಲಾರವು.)

೫೮. ಅಯ್ಯ ರಾಮ, ಹೀಗೆ ತತ್ತ್ವಜ್ಞನು ಚತುರ್ಮುಖ ಬ್ರಹ್ಮನ ಪದವಿಯ ಪರ್ಯಂತವಾದ ಈ ಸಮಸ್ತ ಜಗದ್ವೈಭವವನ್ನೂ ಅಜ್ಞದೃಷ್ಟಿಯಿಂದ ಅತ್ಯಂತ ದುರ್ಭೇದ್ಯವಾಗಿರುವ ಕಾರಣ ವಜ್ರದೊಳಗೆ ಕಾಣಿಸುವ ಪ್ರತಿಬಿಂಬಕ್ಕೆ ಸಮಾನವಾದದ್ದನ್ನಾಗಿಯೂ ಪ್ರಾಜ್ಞದೃಷ್ಟಿಯಿಂದ ನೀರಿನ ಮೇಲೆ ಅಕಸ್ಮಾತ್ ಎತ್ತರವಾಗಿ ಏಳುವ, ಅಲೆಯಂತೆ ಉನ್ನತವಾಗಿ ತರಂಗಗಳ ತುದಿಯಲ್ಲಿ ಕಾಣುವ ಚಂದ್ರ ಸೂರ್ಯಾದಿಗಳ ಪ್ರತಿಬಿಂಬದಂತೆ ಅಸ್ಥಿರವೂ ಅನಿರ್ವಚನೀಯವೂ ಆಗಿರುವುದನ್ನಾಗಿಯೂ ತತ್ತ್ವದೃಷ್ಟಿಯಿಂದ ಕೇವಲ ಅಸನ್ಮಯವೂ ತುಚ್ಛವೂ ಆಗಿರುವುದನ್ನಾಗಿಯೂ ಚೆನ್ನಾಗಿ ನಿರ್ಣಯವಾಗಿ ತಿಳಿದುಕೊಂಡು ರಾಜಹಂಸಪಕ್ಷಿಯು ಅಸಹ್ಯವಾದ [ಕುತ್ಸಿತ] ತುಚ್ಛಪಾಪುಚೆಗಳಲ್ಲಿ ಹೇಗೆ ಪ್ರೀತಿಯಿಡುವುದಿಲ್ಲವೋ ಹಾಗೆ ಅಜ್ಞಜರನಂತೆ ಈ ಜಗದ್ವೈಭವಗಳಲ್ಲಿ ಯಾವುದೊಂದನ್ನೂ ಆಶಿಸುವುದೂ ಇಲ್ಲ. ಅದರಿಂದ ಸಂತೋಷಪಡುವುದೂ ಇಲ್ಲ. ಅಜ್ಞಜನರು ಮಾತ್ರವೇ ಅಸ್ಥಿರವೂ ಅಸದ್ರೂಪವೂ ಆದ ಈ ಜಗದ್ವೈಭವವನ್ನು ಆಶಿಸುವರು ಮತ್ತು ಅದರಿಂದ ಅಲ್ಪಸುಖವನ್ನು ಅನುಭವಿಸಿ ತೃಪ್ತಿಪಡುವರು.

ಇಂತಿಪ್ಪ ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದ ದಾಶೂರೋಪಾಖ್ಯಾನದಲ್ಲಿ "ಪೂರ್ಣಾಶಯ
ಸ್ವರೂಪವರ್ಣನಂ" ಎಂಬ ಐವತ್ತೇಳನೆಯ ಸರ್ಗವು

ಅಷ್ಟಪಂಚಾಶಃ ಸರ್ಗಃ

ಶ್ರೀ ವಸಿಷ್ಠ ಉವಾಚಃ—

ಅತ್ರೈವ ವಸ್ತುನ್ಯುದಿತಾ ಶೃಣು ರಾಘವ ಪೂರ್ವಜಾಃ ।
ಕಚೇನ ಗಾಥಾ ಯಾ ಗೀತಾ ಬಾರ್ಹಸ್ಪತ್ಯೇನ ಪಾವನಾಃ ॥ ೧ ॥

ಕಸ್ಮಿಂಶ್ಚಿನ್ಮೇರುಗಹನೇಽ ತಿಷ್ಠನ್ ಸುರಗುರೋಃ ಸುತಃ ।
ಕದಾಚಿದಭ್ಯಾಸವಶಾದ್ವಿಶ್ರಾಂತಿಂ ಪ್ರಾಪ ಚಾತ್ಮನಿ ॥ ೨ ॥

ಸಮ್ಯಗ್ಜ್ಞಾನಾಮೃತಾಪೂರ್ಣಾ ಮತಿರ್ನಾರಮತಾಸ್ಯ ಸಾ ।
ಪಂಚಭೂತಮಯೇ ಮಾನ್ಯೇ ದೃಶ್ಯೇಽಸ್ಮಿನ್ ಪೇಲವಾತ್ಮನಿ ॥ ೩ ॥

ಐವತ್ತೆಂಟನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ರಾಘವ, ಪೂರ್ವೋಕ್ತವಾದ ಇದೇ ವಿಷಯದಲ್ಲಿ ಬೃಹಸ್ಪತಿ ಪುತ್ರನಾದ ಕಚನು ಹೇಳಿರುವ ಪರಮ ಪವಿತ್ರಗಳಾದ ಪುರಾತನ ಕಾಲದ ಗಾಥೆಗಳನ್ನು ನಾನು ನಿನಗೆ ಈಗ ಹೇಳುವೆನು ಕೇಳು.

೨. ಹಿಂದೆ ಒಂದಾನೊಂದು ಕಾಲದಲ್ಲಿ ಮೇರು ಪರ್ವತದ ಯಾವುದೋ ಒಂದು ಕಾನನ ಮಧ್ಯದಲ್ಲಿದ್ದಂಥ ಸುರಗುರು (ಬೃಹಸ್ಪತಿ) ವಿನ ಮಗನಾದ ಕಚನು ಅದುವರೆವಿಗೆ ತಾನು ಗುರುಮುಖದಿಂದ ಅಧ್ಯಯನ ಮಾಡಿ ಕೇಳಿ ತಿಳಿದಿದ್ದ ಬ್ರಹ್ಮ ವಿದ್ಯೆಯ ಮನನ ನಿದಿಧ್ಯಾಸನಗಳ ಮೂಲಕವಾದ ಪರಿಪಾಕದಿಂದ ಸ್ವಾತ್ಮದಲ್ಲಿ ವಿಶ್ರಾಂತಿಯನ್ನು ಪಡೆದಿದ್ದನು.

೩. ಪಾರಮಾರ್ಥಿಕವಾದ ಆತ್ಮ ತತ್ವ ಜ್ಞಾನವೆಂಬ ಅಮೃತರಸದಿಂದ ಸಂಪೂರ್ಣನಾದ ಆ ಕಚನ ಮನಸ್ಸು, ಅತ್ಯಂತ ಅನಾದರಣೀಯವಾದ ಕ್ಷಯಿಸಿಹೋಗುವ

ಸ ತೇನ ನಿರ್ವಿಣ್ಣ ಇವ ಸದಾತ್ಮತ್ವಾದೃತೇ ಪದಂ ।
ಅಪಶ್ಯನ್ ಸಮುವಾಚೇದಮೇಕೋ ಗದ್ಗಗಯಾ ಗಿರಾ　　॥ ೪ ॥

ಕಿಂ ಕರೋಮಿ ಕ್ವ ಗಚ್ಛಾಮಿ ಕಿಂ ಗೃಹ್ಣಾಮಿ ತ್ಯಜಾಮಿ ಕಿಂ ।
ಆತ್ಮನಾ ಪೂರಿತಂ ವಿಶ್ವಂ ಮಹಾಕಲ್ಪಾಂಬುನಾ ಯಥಾ　　॥ ೫ ॥

ದುಃಖಮಾತ್ಮಾ ಸುಖಂ ಚೈವ ಖಮಾಶಾಸುಮಹತ್ತಯಾ ।
ಸರ್ವಮಾತ್ಮಮಯಂ ಜ್ಞಾತಂ ನಷ್ಟಕಷ್ಟೋಽಹಮಾತ್ಮನಾ　　॥ ೬ ॥

ಸ್ವಭಾವವುಳ್ಳ (ಪೇಲವಾತ್ಮಕವಾದ) ಈ ಪಾಂಚಭೌತಿಕವಾದ ದೃಶ್ಯ ಜಗತ್ತಿನಲ್ಲಿ ರಮಿಸಲಿಲ್ಲ (ಅನುರಾಗವುಳ್ಳದ್ದಾಗಿರಲಿಲ್ಲ.)

೪. ಹೀಗೆ ನಿಸ್ಸಾರವಾದ ದೃಶ್ಯದಲ್ಲಿ ಅನುರಕ್ತನಾಗಿಲ್ಲದುದರಿಂದ ಅವನು ಸರ್ವದಾ ಅದ್ವಿತೀಯವಾದ ಆತ್ಮ ಸ್ವರೂಪವನ್ನು ಮಾತ್ರವೇ ಸರ್ವತ್ರ ಕಾಣುತ್ತ ತದತಿರಿಕ್ತವಾದ ಬೇರೆ ಯಾವುದೊಂದು ವಸ್ತುವನ್ನೂ ಕಾಣದೆ ತಾನೊಬ್ಬನೇ ನಿರ್ವಿಣ್ಣನಾಗಿರುವವನೋ ಎಂಬಂತೆ ಹರ್ಷದಿಂದ ಗದ್ಗದಿತವಾದ ನುಡಿಗಳಿಂದ ಮುಂದೆ ಹೇಳುವ ತತ್ವವನ್ನು ಹೇಳಿದನು.

೫. ಈಗ ನಾನು ಏನನ್ನು ಮಾಡಲಿ ? ಎಲ್ಲಿಗೆ ಹೋಗಲಿ ? ಏನನ್ನು ತೆಗೆದು ಕೊಳ್ಳಲಿ ? ಯಾವುದನ್ನು ಬಿಡಲಿ ? ಸಮಸ್ತವಾದ ಈ ವಿಶ್ವವು (ಜಗತ್ತು) ಮಹಾ ಪ್ರಳಯ ಕಾಲದ ನೀರಿನಿಂದ ಹೇಗೆಯೋ ಹಾಗೆಯೇ ಆತ್ಮನಿಂದ ಪರಿಪೂರ್ಣವಾಗಿರುವುದು.

[ಯತ್ರತ್ವಸ್ಯ ಸರ್ವಮಾತ್ಮೈವಾಭೂತ್ ತತ್‌ಕೇನ ಕಂಪಶ್ಯೇತ್, ಕೇನ ಕಂ ಶೃಣುಯಾತ್. ಇತ್ಯಾದಿ ಶ್ರುತಿಯು ಆತ್ಮನಲ್ಲಿ ಕ್ರಿಯಾಕಾರಕ ಫಲಾದಿಗಳನ್ನು ಸರ್ವಥಾ ನಿರಾಕರಿಸುವುದು.]

೬. ಪರಿಹರಣೀಯವಾದ ದುಃಖವು, ಸುಖದುಃಖಗಳನ್ನು ಅನುಭವಿಸುವ ಜೀವನೂ ಅಪೇಕ್ಷಣೀಯವಾದ ಸುಖವು, ಇತ್ಯಾದಿ ಸಕಲ ಜಗತ್ತೂ ಕೂಡ ಮೂಲಾನ್ವೇಷಣದಲ್ಲಿ ಆಕಾಶ ಮಾತ್ರವಾಗಿಯೇ (ಶೂನ್ಯವಾಗಿಯೇ) ಇದ್ದುಕೊಂಡು ದಿಕ್ಕುಗಳಿಗಿಂತಲೂ ಮತ್ತು ಮನೋರಥಗಳಿಗಿಂತಲೂ ಅತ್ಯಂತ ದೊಡ್ಡದಾಗಿರುವ ಕಾರಣ ಇದೆಲ್ಲವೂ ಆತ್ಮವೇ ಎಂಬ ದೃಢ ನಿಶ್ಚಯವು ನನಗೆ ಉಂಟಾಗಿರುವುದು. ನಾನು ಈಗ ಆನಂದೈಕರಸನಾದ ಆತ್ಮನೆಂದು ತಿಳಿದು, ಸರ್ವದುಃಖ ವಿನಿರ್ಮುಕ್ತನಾಗಿರುವೆನು.

ಸಬಾಹ್ಯಾಭ್ಯಂತರೇ ದೇಹೇ ಅಧಶ್ಚೋರ್ಧ್ವಂ ಚ ದಿಕ್ಷು ಚ ।
ಇತ ಆತ್ಮಾ ತತಶ್ಚಾತ್ಮಾ ನಾಸ್ತ್ಯನಾತ್ಮಮಯಂ ಕ್ವಚಿತ್ ॥ ೭ ॥

ಸರ್ವತ್ರೈವ ಸ್ಥಿತೋ ಹ್ಯಾತ್ಮಾ ಸರ್ವಮಾತ್ಮಮಯಂ ಸ್ಥಿತಂ ।
ಸರ್ವಮೇವೇದಮಾತ್ಮೈವಮಾತ್ಮನ್ಯೇವ ಭವಾಮ್ಯಹಂ ॥ ೮ ॥

ಯನ್ನಾಮ ನಾಮ ತತ್ಕಿಂಚಿತ್ಸರ್ವಮೇವಾಹಮಾಂತರಃ ।
ಆಪೂರಿತಾಪಾರನಭಾಃ ಸರ್ವತ್ರ ಸನ್ಮಯಃ ಸ್ಥಿತಃ ॥ ೯ ॥

[ಈ ಕಾರಣದಿಂದ ನನಗೆ ಹಾನೋಪಾದಾನ (ಬಿಡುವುದು, ತೆಗೆದುಕೊಳ್ಳು ವುದು) ಗಮನಾಗಮನ ಇತ್ಯಾದಿ ವ್ಯವಹಾರವು ಯಾವುದೂ ಇಲ್ಲ. ಆದರಿಂದ ಪ್ರಯೋಜನವೂ ಇಲ್ಲ ಎಂದು ತಾತ್ಪರ್ಯ.]

೭. ದೇಹದಲ್ಲಿ ಹೊರಗೂ, ಒಳಗೂ, ಕೆಳಗೂ ಮೇಲೆಯೂ ಮತ್ತು ಎಲ್ಲ ದಿಕ್ಕುಗಳಲ್ಲಿಯೂ ಆತ್ಮನು ವ್ಯಾಪಿಸಿರುವನು. ಇತ್ತಲೂ ಆತ್ಮನಿರುವನು· ಅತ್ತಲೂ ಆತ್ಮನಿರುವನು. ಆತ್ಮಮಯವಲ್ಲದುದು ಯಾವುದೊಂದೂ ಎಲ್ಲಿಯೂ ಇಲ್ಲವೇ ಇಲ್ಲ.

೮. ಎಲ್ಲೆಲ್ಲಿಯೂ (ಸರ್ವತ) ನಿಜವಾಗಿಯೂ ಆತ್ಮನೇ ಕಾಣುತ್ತಿರುವನು. (ಇರುವನು). ಎಲ್ಲವೂ ಆತ್ಮಮಯವಾಗಿಯೇ ಇದೆ. ಇದೆಲ್ಲವೂ ಕೂಡ ಆತ್ಮವೇ ಸರಿ. ಈ ತಾತ್ವಿಕ ದೃಷ್ಟಿಯಿಂದ, ಹೀಗೆ ನಾನು ಸರ್ವದಾ ಪರಮಾತ್ಮನಲ್ಲಿಯೇ ಪರಮಾತ್ಮನಾಗಿಯೇ ಇರುವೆನು.

೯. ಯಾವದು ಚೇತನವೆಂದು ಪ್ರಸಿದ್ಧವಾಗಿದೆಯೋ ಯಾವ ಯಾವುದು ಅಚೇತನವೆಂದು ಪ್ರಸಿದ್ಧವಾಗಿದೆಯೋ ಅದೆಲ್ಲವೂ ನಾನೇಯೆ! ನಾನು ಸರ್ವಾಂತರ್ಯಾಮಿಯಾಗಿ ಅಪಾರವಾದ ಆಕಾಶವನ್ನೂ ಕೂಡ ಪೂರ್ತಿಯಾಗಿ ವ್ಯಾಪಿಸಿಕೊಂಡು ಸರ್ವತ್ರ ಸದ್ರೂಪನಾಗಿಯೇ ಇರುವೆನು. ನಾನು ಸರ್ವತ್ರ ಪರಿಪೂರ್ಣನೂ, ಆನಂದಘನನೂ, ಅದ್ವಿತೀಯನೂ, ಸಮುದ್ರದಂತೆ ಅಪಾರನೂ ಸುಖ ಸ್ವರೂಪನೂ ಸರ್ವ ವ್ಯಾಪಿಯೂ ಆಗಿರುವೆನು.

[ಮಹಾತ್ಮಾ ಆನಂದಘನನಾದ ಸರ್ವವ್ಯಾಪಿ].

ಪೂರ್ಣಸ್ತಿಷ್ಠಾಮಿ ಮೋದಾತ್ಮಾ ಸುಖಮೇಕಾರ್ಣವೋಪಮಃ
ಇತ್ಯೇವಂ ಭಾವಯಂಸ್ತತ್ರ ಕನಕಾಚಲಕುಂಜಕೇ || ೧೦ ||

ಉಚ್ಚಾರಯನ್ನೋಂಕಾರಂ ಚ ಘಂಟಾಸ್ವನಮಿವ ಕ್ರಮಾತ್ ।
ಓಂಕಾರಸ್ಯ ಕಲಾಮಾತ್ರಂ ಪಾಶ್ಚಾತ್ಯಂ ಪಾಲಕೋಮಲಂ ।
ನಾಂತರಸ್ಥೋ ನ ಬಾಹ್ಯಸ್ಥೋ ಭಾವಯನ್ಪರಮೋ ಹೃದಿ || ೧೧ ||

---

೧೦. ರಾಮ, ಆ ಕಚನು ಆ ಮೇರುಪರ್ವತದ ವನಮಧ್ಯದಲ್ಲಿ ಇದುವರೆವಿಗೆ ನಾನು ನಿನಗೆ ಈಗಲೇ ವಿವರಿಸಿದ ಪ್ರಕಾರವಾಗಿ ಮನಸ್ಸಿನಲ್ಲಿ ಭಾವಿಸುತ್ತಲೂ ಕ್ರಮವಾಗಿ ಘಂಟಾನಾದವಂತೆ ಗಂಭೀರಸ್ವರದಿಂದ ಅವಿಚ್ಛಿನ್ನವಾಗಿ ಓಂಕಾರವನ್ನು ಉಚ್ಚರಿಸುತ್ತಲೂ ಇದ್ದನು.

[ಪ್ರಣವೋಧನುಃ ಶರೋಹ್ಯಾತ್ಮಾ ಬ್ರಹ್ಮತಲ್ಲಕ್ಷ್ಯಮುಚ್ಯತೇ । ಅಪ್ರಮತ್ತೇನ ವೇದ್ಧವ್ಯಂ ಶರವತ್ ತನ್ಮಯೋ ಭವೇತ್ ಎಂಬ ಶ್ರುತಿಯನ್ನು ಗಮನಿಸಿ] ಮುಂಡಕೋಪನಿಷತ್ ೨-೪.

೧೧. ಆಗ ಕಚನು, ಓಂಕಾರದ ಆಕಾರ, ಉಕಾರ ಮಕಾರಗಳನ್ನು (ಪಾದಗಳನ್ನೂ-ಮಾತ್ರೆಗಳನ್ನೂ ಕ್ರಮವಾಗಿ ಜಪಿಸುತ್ತ, ತರುವಾಯ ವಿಶ್ವ, ತೈಜಸ, ಪ್ರಾಜ್ಞವಾಚಕಗಳಾದ ಆ ಮೂರು ಮಾತ್ರೆಗಳಲ್ಲಿ ಪೂರ್ವ ಪೂರ್ವ(ಮೊದ ಮೊದಲಿನ) ಮಾತ್ರೆಗಳನ್ನೂ ವಿಶ್ವಾದಿಗಳ ಸಹಿತ, ಉತ್ತರೋತ್ತಮ (ಮುಂದೆ ಮುಂದೆ ಇರುವ) ಮಾತ್ರೆಗಳಲ್ಲಿ ಲಯ ಮಾಡುತ್ತ ಆ ಓಂಕಾರದ ಶಿರಸ್ಸಿನಲ್ಲಿ ಕೊನೆಯದಾಗಿರುವ ಒಂದು ಕೂದಲಿನಷ್ಟು ಅತಿ ಸೂಕ್ಷ್ಮವೂ ಕೋಮಲವೂ ಆಗಿರುವ ಮತ್ತು ಸಕಲ ಮಾತ್ರೆಗಳ ಪ್ರವಿಲಯಕ್ಕೂ ಪರಮಾವಧಿಯಾಗಿರುವ ಅರ್ಧಮಾತ್ರಾತ್ಮಕವಾದ ಕಲಾ ಮಾತ್ರವನ್ನೂ ಪ್ರಶಸ್ತವಾದ ತನ್ನ ಹೃದಯದಲ್ಲಿ ನಿರಂತರವೂ ಭಾವಿಸುತ್ತ ತದ್ಭಾವಾಪನ್ನನಾಗಿ ಆಂತರವಾದ ಕಾರಣದಲ್ಲಿಯೂ ಇಲ್ಲದೆ ಮತ್ತು ಬಾಹ್ಯವಾದ ಕಾರ್ಯದಲ್ಲಿಯೂ ಇಲ್ಲದೆ ತುರೀಯಾತ್ಮಸ್ಥಿತಿಯಲ್ಲಿದ್ದನು.

(ಓಂಕಾರಂ ಪಾದ ಶೋ ವಿದ್ಯಾತ್ ಪಾದಾ ಮಾತ್ರಾನ ಸಂಶಯಃ । ಓಂಕಾರಂ ಪಾದಶೋಜ್ಞಾತ್ವಾ ನಕಿಂಚಿದಪಿ ಚಿಂತಯೇತ್ ॥ ಯುಂಜೀತ ಪ್ರಣವೇ ಚೇತಃ-ಪ್ರಣವೋ ಬ್ರಹ್ಮನಿರ್ಭಯಂ । ಪ್ರಣವೇ ನಿತ್ಯಯುಕ್ತಸ್ಯ ನಭಯಂ ವಿದ್ಯತೇ

44

ನ್ಯಪಗತಕಲನಾ ಕಲಂಕಶುದ್ಧೋ
ಹೃದಯನಿರಂತನ ಲೀನವಾತವೃತ್ತಿಃ ।
ಗತಘನಶರದಾಶಯೋಪಮಾನಃ
ಸ್ಥಿತ ಇತಿ ರಾಮ ಕಚಃ ಸ ಗಾಯಮಾನಃ ॥ ೧೨ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
"ಕಚಗಾಥಾ" ನಾಮ ಅಷ್ಟಪಂಚಾಶಃ ಸರ್ಗಃ

ಕ್ವಚಿತ್ ॥ ಪ್ರಣವಂ ಹಿ ಈಶ್ವರಂ ವಿದ್ಯಾತ್, ಸರ್ವಸ್ಯಹೃದಿ ಸಂಸ್ಥಿತಂ । ಸರ್ವ ವ್ಯಾಪಿನಮೋಂಕಾರಂ ಮತ್ವಾಧೀರೋ ನ ಶೋಚತಿ ॥ ಅಮಾತ್ರೋ ನನ್ತಮಾತ್ರಶ್ಚ ದ್ವೈತಸ್ಯೋಪಶಮಃ ಶಿವಃ । ಓಂಕಾರೋ ವಿದಿತೋಯೇನ ಸಮುನಿರ್ನೇತರೋ ಜನಃ ॥ ಇತ್ಯಾದಿ ಮಾಂಡೂಕ್ಯೋಪನಿಷತ್ಕಾರಿಕಾ ಆಗಮ ಪ್ರಕರಣ.) ಇವುಗಳ ಅರ್ಥವು ಸುಲಭವಾಗಿದೆ. ವಿವರಿಸಲಿಲ್ಲ.

೧೨. ರಾಮಚಂದ್ರ, ಆ ಕಚನು ಸಕಲ ವಿಧ ಸಂಕಲ್ಪಕಲ್ಪನೆಗಳೆಂಬ ಮಾಲಿನ್ಯವನ್ನು ಪೂರ್ಣವಾಗಿ ಹೋಗಲಾಡಿಸಿಕೊಂಡು ಅತ್ಯಂತ ಶುದ್ಧನಾಗಿ ಪ್ರಾಣಾದಿವಾಯುಗಳ ಚಲನೆಯನ್ನೂ ಹೃದಯದೊಳಗಡೆಯೇ ನಿರಂತರ ನಿರೋಧಮಾಡಿದವನಾಗಿ ಮೇಘಗಳು ಚಲಿಸದೆ ಇರುವ ನಿರ್ಮಲವಾದ ಶರದೃತುವಿನ ಆಕಾಶಕ್ಕೆ ಸಮಾನನಾಗಿ ಪೂರ್ವೋಕ್ತ ಗಾಥೆಗಳನ್ನು ಗಾನ ಮಾಡುತ್ತ ಆತ್ಮಾರಾಮನಾಗಿದ್ದನು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಕಚಗಾಥಾ" ಎಂಬ ಐವತ್ತೆಂಟನೆಯ ಸರ್ಗವು

ಏಕೋನಷಷ್ಠಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಅನ್ನಪಾನಾಂಗನಾಸಂಗಾದೃತೇ ನಾಸ್ತೀಹ ಕಿಂಚನ ।
ಶುಭಮಸ್ತೀತ್ಯತಿ ಸಂವಾದಿ ಮಹಾನ್ಮಿಮಿವ ವಾಂಥತು ॥ ೧ ॥

ತಿರ್ಯಂಚಃ ಪಶವೋ ಮೂಢಾ ಯೇ ನ ತುಷ್ಯಂತ್ಯಸಾಧವಃ ।
ಭೋಗೈಃ ಕೃಪಣಸರ್ವಸ್ವೈರಾದಿಮಧ್ಯಾಂತಪೇಲವೈಃ
ವಿಶ್ವಾಸಂ ಯಾಂತಿ ಯೇ ಲೋ ತೈರಲಂ ನಗರರ್ದಜ್ಯೈಃ ॥ ೨ ॥

ಐವತ್ತೊಂಭತ್ತನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು—ಅಯ್ಯ ರಾಮಚಂದ್ರ, ಕೇಳು—ನಾಲಗೆ ಮುಂತಾದ ಇಂದ್ರಿಯಗಳ ಸಂಸರ್ಗವಶದಿಂದ ತತ್ಕಾಲದಲ್ಲಿ ಮಾತ್ರ ಸುಖಾವಹವಾಗಿರುವಂತೆ ತೋರುವ ಅನ್ನ, ಪಾನ, ಸ್ತ್ರೀ (ಹೆಣ್ಣು) ಗಳೆಂಬ ತುಚ್ಛ ಕ್ಷಣಿಕ ವಿಷಯಗಳನ್ನು ಬಿಟ್ಟು ಬಿಟ್ಟರೆ ಈ ಪ್ರಪಂಚದಲ್ಲಿ ಶ್ರೇಯಸ್ಕರವಾದ ಬೇರೊಂದು ಪುರುಷಾರ್ಥವು ಯಾವುದೂ ಇಲ್ಲವೇ ಇಲ್ಲ ಎಂಬೀತತ್ವವನ್ನೂ ಶ್ರುತಿ, ಸ್ಮೃತಿ, ಗುರೂಪದೇಶ, ಸ್ವಾನುಭವಗಳಿಗೆ ಅನುಸಾರವಾಗಿ ವಿಚಾರ ಮಾಡಿ ದೃಢ ನಿಶ್ಚಯವಾಗಿ ಮನಗಂಡಿರುವ ಮಹನೀಯನು ಈ ಲೌಕಿಕ ಭೋಗಗಳಲ್ಲಿ ಯಾವುದನ್ನೂ ತಾನೇ ಅಪೇಕ್ಷಿಸಿಯಾನು. (ಅವನು ಇಚ್ಛಿಸಲು ಯೋಗ್ಯವಾದ ಯಾವುದೊಂದು ಐಹಿಕ ವಸ್ತುವೂ ಇರುವುದಿಲ್ಲವೆಂದರ್ಥ.)

೨. ಅಸಾಧುಗಳು ಆದಿಮಧ್ಯ ಅಂತಗಳಲ್ಲೆಲ್ಲಾ ಅತ್ಯಂತ ವಿರಸವಾಗಿ ಜುಗುಪ್ಸೆಯನ್ನುಂಟುಮಾಡುವ ಮತ್ತು ತುಚ್ಛರಾದವರು ಮಾತ್ರ ತಮ್ಮ ಸರ್ವಸ್ವವೆಂದೂ ಭಾವಿಸುವ ಅನ್ನ ಪಾನಾದಿ ಐಹಿಕ ಭೋಗಗಳಿಂದ ತೃಪ್ತಿಹೊಂದುವ ಕಾರಣ ಅವರು ಅತ್ಯಂತಮೂಢರಾದ ತಿರ್ಯಗ್ಜಂತುಗಳೇ ಸರಿ. ಇಂತಹ ಅಲ್ಪ ತುಚ್ಛ ವಿಷಯಗಳಿಂದಲೂ ಯಾರು ಈ ಲೋಕದಲ್ಲಿ ವಿಶ್ವಾಸವನ್ನು ಹೊಂದುವರೋ ಅವರು ಮನು

ಇತಃ ಕೇಶಾ ಇತೋ ರಕ್ತಮಿತೀಯಂ ಪ್ರಮದಾತನುಃ ।
ಏತಯಾ ಶೋಷಮಾಯಾಂತಿ ಸಾರಮೇಯಾ ನ ಮಾನವಾಃ ॥ ೩ ॥

ವೃನ್ಮಹೀದಾರುತರವೋ ದೇಹಾ ಮಾಂಸಮಯಾ ಅಪಿ ।
ಅಧೋ ಭೂರಂಬರಂ ಪೃಷ್ಠೇ ಕಿಮಪೂರ್ವಂ ಸುಖಾಯ ತು ॥ ೪ ॥

ಮಾತ್ರಾಸ್ಪರ್ಶಾನುಸಾರಿಣ್ಯೋ ವಿವೇಕಪದಭಂಗುರಾಃ ।
ಮೋಹಾಯೈವಾಪರಾಮೃಷ್ಟಾಃ ಸಕಲಾ ಲೋಕಸಂವಿದಃ ॥ ೫ ॥

ಷ್ಯಾಕಾರದಿಂದ ಸಂಚರಿಸುವ ಕತ್ತಿಗಳಲ್ಲದೆ ಮತ್ತೇನು ? ಅಂತಹವರಿಂದ ತಮಗಾ ಗಲೀ ಪರರಿಗಾಗಲಿ ಏನು ಪ್ರಯೋಜನ ?

೩. ಒಂದು ಕಡೆ ನೋಡಿದರೆ ಕೂದಲುಗಳು. ಮತ್ತೊಂದು ಕಡೆ ರಕ್ತ, ಮಾಂಸ, ಎಲುಬು ಮುಂತಾದ ಅಸಹ್ಯವಾದ ವಸ್ತುಗಳು. ಇವಿಷ್ಟು ಮಾತ್ರವೇ ಒಟ್ಟಿಗೇ ಸ್ತ್ರೀಯರ ಶರೀರವೆನ್ನಿಸಿರುವುದು. ಇಂತಹ ಸ್ತ್ರೀಯರ ಶರೀರ ಗಳನ್ನು ಕಂಡು ಮೋಹಪರವಶನಾಗಿ ರಮಿಸುವ ನರಾಧಮರು ನಿಜವಾಗಿಯೂ ನಾಯಿಗಳೇ ಹೊರತು ಎಂದಿಗೂ ಮನುಷ್ಯರೆನ್ನಿಸಿಕೊಳ್ಳುವುದಿಲ್ಲ.

(ಶುನೀಮನ್ವೇತಿಶ್ವಾ ಎಂದು ಭರ್ತೃಹರಿಯು ವರ್ಣಿಸಿರುವನು. ನಾರೀಸ್ತನ ಭರನಾಭೀದೇಶಂ ದೃಷ್ಟ್ವಾಮಾಗಾ ಮೋಹಾವೇಶಂ । ಏತನ್ಮಾಂಸವಸಾದಿ ವಿಕಾರಂ ಮನಸಿವಿಚಿಂತಯವಾರಂವಾರಂ ಎಂದು ಶ್ರೀ ಶಂಕರಭಗವತ್ಪಾದಾಚಾರ್ಯರವರು ಉಪದೇಶಿಸಿರುವರು.)

೪. ಪ್ರಪಂಚದಲ್ಲಿ ಸಾಧಾರಣವಾಗಿ ಎಲ್ಲರೂ ಭೋಗೋಪಕರಣಗಳೆಂದು ಭಾವಿಸಿರುವ ಭೂಮಿಯೆಂಬುದು ಎಲ್ಲವೂ ಬರಿಯಮಣ್ಣೇ ವೃಕ್ಷಗಳೆಂಬುದು ಎಲ್ಲವೂ ಉರಿದು ಬೂದಿಯಾಗುವ ಬರಿಯ ಸೌದೆ. ದೇಹಗಳಾದರೋ ಕೇವಲ ಮಾಂಸ ಖಂಡಗಳ ಮುದ್ದೆ. ಕೆಳಗೆ ನೋಡಿದರೆ ಭೂಮಿ. ಮೇಲೆ ನೋಡಿದರೆ ಬರಿಯ (ಶೂನ್ಯವಾದ) ಆಕಾಶ. ಹೀಗಿರುವಾಗ ಈ ಜಗತ್ತಿನಲ್ಲಿ ಸಾರಭೂತವಾದ ಸುಖ ಸಾಧನವು ಯಾವುದು ಇರುವುದು ? (ಇಲ್ಲವೇ ಇಲ್ಲವೆಂದು ತಾತ್ಪರ್ಯ.)

೫. ಈ ಲೋಕದಲ್ಲಿ ಜನಗಳ ಸಮಸ್ತ ವ್ಯವಹಾರಗಳೂ ಶ್ರೋತ್ರಾದಿ ಜ್ಞಾನೇಂದ್ರಿಯಗಳಿಗೆ ಶಬ್ದಾದಿ ವಿಷಯಗಳೊಡನೆ ಉಂಟಾಗುವ ಸಂಸರ್ಗವನ್ನು

ಸರ್ವಸ್ಯಾ ಏವ ಪರ್ಯಂತೇ ಸುಖಾಶಾಯಾಶ್ಚ ಸಂಸ್ಥಿತಂ ।
ಮಾಲಿನ್ಯಂ ದುಃಖಮಸ್ಯೈವಂ ಜ್ವಾಲಾಯಾ ಇವ ಕಜ್ಜಲಂ ॥ ೬ ॥

ಆಗಮಾಪಾಯಿನೋಽನಿತ್ಯಾ ಮನಃಷಷ್ಠೇಂದ್ರಿಯ ಕ್ರಿಯಾಃ ।
ಲತಾ ನಾಗೇಂದ್ರಮೃದಿತಾ ಧಾರಯಂತಿ ನ ಸಂಪದಃ । ॥ ೭ ॥

ಪುತ್ರಿಕಾರಕ್ತಮಾಂಸಸ್ಯ ಕಾಂತೇಯಮಿತಿ ಸಾದರಂ ।
ಸ್ವದೇಹನಾಮ್ನಾ ಸ್ಥಿತಯೇ ಶ್ಲಿಷ್ಯತೇ ಮೋಹಕಕ್ರಮಃ ॥ ೮ ॥

ಅನುಸರಿಸಿ ನಡೆಯುತಕ್ಕವುಗಳು. ತತ್ವಜ್ಞಾನೋದಯವಾದಾಗ ಹಠಾತ್ತನೆ ತಾವಾಗಿಯೇ ಧ್ವಂಸವನ್ನು ಹೊಂದುವುವು. ಮತ್ತು ಅವಿಚಾರಮಣೀಯ ವಾದವುಗಳು. ಇವು ಸರ್ವರಿಗೂ ಮೋಹಜನಕಗಳಾಗಿರುವುವು.

[ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖ ದುಃಖದಾಃ । ಭಗವದ್ಗೀತಾ ೨ ಶ್ಲೋಕ ೧೪.]

೬. ಸಾದೆಯು ಉರಿದುಹೋದ ತರುವಾಯ ಕೊನೆಯೂ ಕಪ್ಪಾದ ಮಸಿ (ಕಾಡಿಕೆ)ಯೇ ಉಳಿಯುವಂತೆ ಸಕಲವಿಧಗಳಾದ ನಮ್ಮ ಭೋಗೇಚ್ಛೆಗಳ ಕೊನೆಯಲ್ಲಿ ಯಾದರೋ ವಿಷಯ ಲಾಭದಿಂದಲಾಗಲಿ ಅಥವಾ ಅಲಾಭದಿಂದಲಾಗಲೀ ಹೇಗಾದರೂ ಮಾಲಿನ್ಯವು (ಪಾಪವೂ ಮತ್ತು ವಿಯೋಗ ವಿಷಾದಗಳಿಂದ ಪ್ರಯುಕ್ತವಾದ ದುಃಖವೂ) ಮಾತ್ರ ಉಳಿದು ನಿಲ್ಲುವುದು.

೭. ಶ್ರೋತ್ರಾದಿ ಪಂಚಜ್ಞಾನೇಂದ್ರಿಯಗಳಿಂದಲೂ ಆರನೆಯ ಇಂದ್ರಿಯವಾದ ಮನಸ್ಸಿನಿಂದಲೂ (ಅಂತರಂಗ) ನಡೆಯುತಕ್ಕ ವ್ಯವಹಾರಗಳೂ ಎಲ್ಲವೂ ಆಗಮ ಅಪಾಯ (ಲಾಭನಾಶ)ಗಳನ್ನುಳ್ಳವುಗಳು. ಆದುದರಿಂದಲೇ ಅವು ಅನಿತ್ಯಗಳು. ನಾವು ನಿತ್ಯವೂ ಉಪಯೋಗಿಸುವ ವಿಷಯ ಸಂಪತ್ತುಗಳು ದೊಡ್ಡ ಆನೆಗಳಿಂದ ತುಳಿದು ಧ್ವಂಸಮಾಡಲ್ಪಟ್ಟ ಲತೆಗಳಿಗೆ ಸಮಾನವಾಗಿ ಬಲುಬೇಗ ನಾಶ ಹೊಂದುವುವು.

೮. ಲೋಕದಲ್ಲಿರುವ ಪುರುಷರಾದವರು ಅಸ್ಥಿಪಂಜರಗಳಲ್ಲಿ ಇವು ತಮ್ಮ ದೇಹಗಳೆಂಬುದಾಗಿ ವ್ಯವಹರಿಸುತ್ತಾ ರಕ್ತಮಾಂಸವಾದ ಗೊಂಬೆಯನ್ನು ಕಂಡು

ಸರ್ವಂ ಸತ್ಯಮಿದಂ ರಾಮ ಸ್ಥಿರಮಜ್ಞಸ್ಯ ತುಷ್ಟಯೇ ।
ಜ್ಞಸ್ಯಾಸ್ಥೈರ್ಯಮಸತ್ಯಂ ಚ ಜಗದ್ರಾಮ ನ ತುಷ್ಟಯೇ ॥ ೯ ॥

ಅಭುಕ್ತೇಽಪಿ ವಿಷಾಯೈಷಾ ವಿಷಮೂರ್ಛಾಂ ಪ್ರಯಚ್ಛತಿ ।
ತಾಂ ಪರಿತ್ಯಜ್ಯ ಭೋಗಾಸ್ಥಾಂ ಸ್ವಾತ್ಮೈಕತ್ವಗತಿಂ ಭಜ ॥ ೧೦ ॥

ಇವಳು ನನ್ನ ಕಾಂತಾಮಣಿಯೆಂದು ಭ್ರಮಿಸಿ ಅತ್ಯಾದರದಿಂದ ಆಲಿಂಗಿಸಿ ಕೊಳ್ಳುವರು. ಇದು ಮಹಾಮೋಹಜನಕವಾದ ಕಾಮದ ಕೃತ್ಯವು.

೯. ಅಯ್ಯ ರಾಮ, ಅಜ್ಞನಾದ ನರಾಧಮನಿಗೆ ಸಮಸ್ತವಾದ ಈ ದೃಶ್ಯ ಜಾಲವು ಸತ್ಯವೂ ಸ್ಥಿರವೂ ಆಗಿರುವಂತೆ ಭ್ರಾಂತಿಯಿಂದ ತೋರುತ್ತಾ ಸಂತೋಷಕ್ಕೆ ಹೇತುವಾಗುವುದು. ಅದ್ವಿತೀಯಾತ್ಮತತ್ವಜ್ಞನಾದ ಮಹಾತ್ಮನಿಗಾದರೋ ಅದೇ ದೃಶ್ಯ ಜಗತ್ತು ಅಸತ್ಯವೆಂದೂ ಅಸ್ಥಿರವೆಂದೂ ದೃಢನಿಶ್ಚಯವಿರುವ ಕಾರಣ ಅದು ಎಂದಿಗೂ ಸ್ವಲ್ಪವೂ ಸಂತೋಷಪ್ರದವಾಗುವುದಿಲ್ಲ.

೧೦. ವಿಷಯೋಪಭೋಗವಲ್ಲಿ ಸಾಧಾರಣ ಜನರಿಗೆ ಸಹಜವಾಗಿರುವ ಆಸಕ್ತಿಯು ವಿಷಯಗಳನ್ನು ಅನುಭವಿಸದೆಯೇ ಇರುವಾಗಲೂ ಕೂಡ, ವಿಷಸ್ವರೂಪವಾಗಿಯೇ ಪರಿಣಮಿಸಿ ಜನಗಳಿಗೆ ವಿಷದಂತೆ ಮೂರ್ಛೆಯನ್ನುಂಟು ಮಾಡಿ ಬಿಡುವುದು; ಅದು ಕಾರಣ ರಾಮ, ನೀನು ಇಂತಹ ಭೋಗಾಸಕ್ತಿಯನ್ನು ಸಂಪೂರ್ಣವಾಗಿ ಪರಿತ್ಯಾಗಮಾಡಿ ನಿರತಿಶಯಾನಂದರೂಪವಾದ ಅದ್ವೈತಾತ್ಮ ತತ್ವನಿಷ್ಠೆಯನ್ನು ಹೊಂದುವವನಾಗು.

[ವಿಷಯಗಳನ್ನು ಅನುಭವಿಸದಿದ್ದರೂ ಕೂಡ ಭೋಗಾಸಕ್ತಿಯು ಇಷ್ಟು ಅನರ್ಥಕಾರಿಯಾಗಿರುವಲ್ಲಿ ಇನ್ನು ವಿಷಯಗಳನ್ನು ಅನುಭವಿಸಿದ್ದೇ ಆದರೆ ಆಗ ಅದು ಅತ್ಯಾಂತ ದುಸ್ಸಹವಾದ ಮಹಾಅನರ್ಥ ಪರಂಪರೆಗಳಿಗ ಹೇತುವಾಗುವುದೆಂಬುದು ಕೈಮುತಿಕ ನ್ಯಾಯಸಿದ್ಧ.]

ಅನಾತ್ಮಮಯಭಾವೇನ ಚಿತ್ತಂ ಸ್ಥಿತಿಮುಪಾಗತಂ ।
ಯದಾ ತದೈತದಾಜಾತಂ ಜಗಜ್ಜಾಲಮಸನ್ಮಯಂ ॥ ೧೧ ॥

ವಾಸನಾವಶತೋ ಬ್ರಹ್ಮಮನಸಾ ಕಲ್ಪಿತಂ ವಪುಃ ।
ತೇಜಸಾ ಶ್ರಿತಕುಡ್ಯೇನ ಹೇಮಾಭತ್ವಮಿವಾತ್ಮನಃ ॥ ೧೨ ॥

ಶ್ರೀರಾಮ ಉವಾಚ—

ವೈರಿಂಚಪದಮಾಸಾದ್ಯ ಮನೋ ಬ್ರಹ್ಮರ್ಷೇ ಮಹಾಮತೇ
ಇದಂ ಜಗತ್ಸ್ವಘನತಾಂ ಕಥಮಾನಯತಿ ಕ್ರಮಾತ್ ॥ ॥ ೧೩ ॥

---

೧೧. ಮತ್ತು ಭೋಗವಾಸನೆಯಿಂದಲೇ ಅನಾತ್ಮಗಳಾದ ತನ್ನ ದೇಹೇಂದ್ರಿಯಾದಿಗಳಲ್ಲಿಯೂ ಪುತ್ರಭಾರ್ಯಾದಿಗಳ ದೇಹಾದಿಗಳಲ್ಲಿಯೂ (ಅಧ್ಯಾಸರೂಪವಾದ) ಆತ್ಮಭಾವನೆಯು ಉದಯಿಸುವುದು. ಯಾವಾಗ ಮನಸ್ಸು ಈ ಮಿಥ್ಯಾತ್ಮಭಾವನೆಯಲ್ಲಿಯೇ ಸ್ಥಿರವಾಗಿ ನಿಂತುಬಿಡುವುದೋ ಆಗ ಅಸತ್ಯವಾದ ಈ ದೃಶ್ಯಜಗಜ್ಜಾಲವು ಅದು ಹೇಗೋ ಆವಿರ್ಭವಿಸಿ ತೋರುವುದು.

೧೨. ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನು ಪ್ರಾಣಿಗಳ ಭೋಗವಾಸನೆ, ಕರ್ಮಗಳು ಇತ್ಯಾದಿಗಳ ವಶದಿಂದ ಅವುಗಳಿಗೆ ಅನುಸಾರವಾಗಿಯೇ ತನ್ನ ಮನಸ್ಸಿನಲ್ಲಿ ತದನುಗುಣವಾದ ನಾನಾವಿಧ ಶರೀರಗಳನ್ನು ಸಂಕಲ್ಪಿಸಿ ಜಗತ್ತನ್ನು ಸೃಷ್ಟಿಸುವನು. ಸುವರ್ಣ, ಬೆಳ್ಳಿ, ಇಂದ್ರನೀಲ, ಸ್ಫಟಿಕ ಇತ್ಯಾದಿಗಳ ಗೋಡೆಯನ್ನು ಆಶ್ರಯಿಸಿರುವ (ಅವುಗಳಲ್ಲಿ ಪ್ರತಿಬಿಂಬಿಸಿರುವ) ಸೂರ್ಯಚಂದ್ರಾದಿಗಳ ಪ್ರಕಾಶವು ಆಯಾ ಗೋಡೆಗಳಿಗೆ ಅನುಸಾರವಾದ ಸ್ವರೂಪವನ್ನೇ ಹೇಗೆ ಕಲ್ಪಿಸುವುದೋ ಅದರಂತೆಯೇ ಈ ಜಗತ್ತೂ ಕೂಡ ಬ್ರಹ್ಮನ ಸಂಕಲ್ಪದಿಂದ ಆಯಾಪ್ರಾಣಿಗಳ ಭೋಗವಾಸನಾದಿಗಳನ್ನು ಅನುಸರಿಸಿ ತದನುಗುಣವಾಗಿ ಸೃಷ್ಟಿಯಾಗುವುದು. (ಎಂದು ತಾತ್ಪರ್ಯ.) ಶ್ರೀರಾಮನು ಹೇಳಿದನು. (ಬ್ರಹ್ಮನು ಮನಸ್ಸಿನಿಂದ ಜಗತ್ತನ್ನು ಕಲ್ಪಿಸುವ ಕ್ರಮವನ್ನು ನಿರೂಪಿಸಬೇಕೆಂದು ಗುರುಗಳನ್ನು ಪ್ರಶ್ನೆಮಾಡಿದನು.)

೧೩. ಸ್ವಾಮಿ, ಮಹಾಜ್ಞಾನಿಗಳಾದ ಬ್ರಹ್ಮರ್ಷಿಗಳೇ, ಪೂರ್ವೋಪಾಸಕನ ಮನಸ್ಸು ಸಮಷ್ಟ್ಯಾತ್ಮತ್ವವನ್ನು ಭಾವನೆಮಾಡುತ್ತಾ ಅದರ ಉಪಚಯದಿಂದುಂಟಾದ ಸಂಸ್ಕಾರ ಪರಿಪಾಕದಿಂದ ತನ್ನ ಹಿಂದಿನ ವ್ಯಷ್ಟ್ಯಭಿಮಾನವನ್ನು

ಶ್ರೀ ವಸಿಷ್ಠ ಉವಾಚ—
ಗರ್ಭತಲ್ಪಾತ್ಸಮುತ್ಥಾಯ ಪದ್ಮಜಃ ಪ್ರಥಮಃ ಶಿಶುಃ
ಬ್ರಹ್ಮೇತಿ ಶಬ್ದಮಕರೋದ್ಬ್ರಹ್ಮಾ ತೇನ ಸ ಉಚ್ಯತೇ । ॥ ೧೪ ॥

ಸಂಕಲ್ಪಜಾಲರೂಪಸ್ಯ ಮನಸಾ ಕಲ್ಪಿತಾಕೃತೇಃ ।
ಅಕರೋತ್ತಸ್ಯ ಸಂಕಲ್ಪಲಕ್ಷ್ಮೀಃ ಪದಮಥೋತ್ತರೇ ॥ ೧೫ ॥

ತತಃ ಸಂಕಲ್ಪಯಾಮಾಸ ಪೂರ್ವಂ ತೇಜೋ ಮಹಾಪ್ರಭಂ ।
ಶರದಂತೇ ಲತಾಚಕ್ರಚಕ್ರೀಕೃತದಿಗಂತರಂ ॥ ೧೬ ॥

ನೀಗಿಕೊಂಡು ಸಮಷ್ಟ್ಯಾತ್ಮಕವಾಗಿ ನಿಷ್ಪನ್ನವಾದ ಬ್ರಹ್ಮಪದವನ್ನು ಹೊಂದಿ ಕಾರ್ಯ ಬ್ರಹ್ಮಭೂತವಾಗಿ ಕ್ರಮಕ್ರಮವಾಗಿ ಅದು ಹೇಗೆ ಈ ಜಗತ್ತನ್ನು ಚತುರ್ವಿಧ ಭೂತಗ್ರಾಮಗಳಿಂದ ನಿಬಿಡವಾದದ್ದನ್ನಾಗಿ ಮಾಡುವುದು ? (ಇದನ್ನು ದಯೆಮಾಡಿ ವಿವರಿಸಬೇಕು ಎಂಬುದಾಗಿ ಅವಾಂತರ ಸೃಷ್ಟಿಕ್ರಮವನ್ನು ಪ್ರಶ್ನೆ ಮಾಡಿದನು.)

೧೪. ಶ್ರೀ ವಸಿಷ್ಠನು ಹೇಳಿದನು. ಪ್ರಥಮ ಶಿಶುವಾಗಿ ಆವಿರ್ಭವಿಸಿದ ಹಿರಣ್ಯಗರ್ಭನು ಪದ್ಮಕೋಶವೆಂಬ ಗರ್ಭಶಯ್ಯೆಯ ದೆಸೆಯಿಂದ ಎಚ್ಚೆತ್ತು (ಜಾಗೃತನಾಗಿ) "ಬ್ರಹ್ಮ" ಎಂಬುದಾಗಿ ಶಬ್ದಮಾಡಿದನು. ಅದು ಕಾರಣ ಅವನು ಬ್ರಹ್ಮನೆಂದು ಕರೆಯಲ್ಪಟ್ಟಿರುವನು.

೧೫. ಹೀಗೆ ಜಾಗರಣಕಲ್ಪನಾನಂತರ ಸಂಕಲ್ಪಾತ್ಮಕ ಮನಸ್ಸಮಷ್ಟಿ ರೂಪನಾಗಿಯೂ ತನ್ನ ಮನಸ್ಸಿನಿಂದಲೇ ಕಲ್ಪಿತವಾದ ಚತುರ್ಮುಖಾಂದ್ಯಾಕಾರವುಳ್ಳವನಾಗಿಯೂ ಇರುವ ಅವನ ಸಂಕಲ್ಪವು ಮುಂದಿನ ಸೃಷ್ಟಿಯಲ್ಲಿ ತೊಡಗಿತು (ವ್ಯವಸಾಯ ಮಾಡಿತು.)

೧೬. ಆ ಮೇಲೆ, ಮೊಟ್ಟಮೊದಲನೆಯದಾಗಿ ಮಹಾಪ್ರಕಾಶವುಳ್ಳ (ಆದಿತ್ಯನೆಂಬ) ತೇಜಸ್ಸನ್ನು ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡನು. ಆ ತೇಜಸ್ಸು ಶರತ್ಕಾಲವು ಮುಗಿದುಹೋದ ಮೇಲೆ (ಹೇಮಂತಋತುವಿನಲ್ಲಿ) ಹಿಮದಿಂದ ಬೆಳ್ಳಗಿರುವ ಲತೆಗಳ ಸಮೂಹಗಳು ದಿಙ್ಮಂಡಲಗಳನ್ನೆಲ್ಲ ಬೆಳ್ಳಗೆ ಪ್ರಕಾಶಪಡಿಸುವಂತೆ ಲೋಕಗಳನ್ನೆಲ್ಲ ಪ್ರಕಾಶಪಡಿಸಿತು.

ಪಕ್ಷಪ್ರತಿಮುನಿಸ್ಯೂತಕಮುಂಶಾತಿಗುಣಾಕ್ಷರಂ ।
ಪುಂಜಪಿಂಜರಪರ್ಯಂತಂ ಹೇಮಜ್ಞಾನನಿಭಾಂಬರಂ ॥ ೧೭ ॥

ಜಾಲಹೇಮಲತಾಜಾಲಜಟಾಲನಿಜಮಂದಿರಂ ।
ಕಚತ್ಪ್ರಸರದುದ್ಯಾನಾಕಾರಕುಂಡಲಮಂಡಿತಂ ॥ ೧೮ ॥

ತಂ ಶರೀರಂ ಮನಸ್ತಸ್ಮಿಂಸ್ತತಸ್ತೇಜಸಿ ಭಾಸ್ವರೇ ।
ಆತ್ಮಾಕಾರಸಮಾಕಾರಂ ಭಾಸ್ವರಂ ಸಮಕಲ್ಪಯತ್ ॥ ೧೯ ॥

---

೧೭. ಹೊರಕ್ಕೆ ಚಾಚಿದ (ಪ್ರಸಾರಮಾಡಿದ) ಹಕ್ಕಿಗಳ ರೆಕ್ಕೆಗಳಿಗೆ ಸದೃಶವಾದ ಅದರ ಉಭಯ ಪಾರ್ಶ್ವಗಳಲ್ಲಿಯೂ ಆ ತೇಜಸ್ಸು ತಂತುಗಳ (ನೂಲು) ಸಮೂಹವನ್ನು ನೆಯ್ಯುವುದರಿಂದ ಬಹುತಂತುಗಳುಳ್ಳ ಪಟವನ್ನು ನೂಲು ವ್ಯಾಪಿಸುವಂತೆ ಅಕ್ಷಯವಾದ ಮತ್ತು ಶೂನ್ಯವಾದ ಆಕಾಶವನ್ನು ದಟ್ಟವಾಗಿ ವ್ಯಾಪಿಸಿಕೊಂಡಿತು. ಆ ತೇಜಸ್ಸಿನಿಂದ ಹೊರಟ ತೇಜಃಪುಂಜಗಳು (ಕಿರಣ ಜಾಲಗಳು) ದಿಗಂತದಲ್ಲಿರುವ ಚಕ್ರವಾಲಪರ್ವತದ ಶಿಖರಗಳಲ್ಲಿನ ವಿವಿಧ ಧಾತುಗಳ ಸಂಸರ್ಗದಿಂದ ದಿಗಂತ ಪ್ರದೇಶಗಳನ್ನು ನಾನಾ ಬಣ್ಣಗಳ ಪ್ರಕಾಶದಿಂದ ಬೆಳಗಿಸಿದವು. ಹೀಗೆ ಆಕಾಶವು ಅಪರಂಜಿಯಂತೆ ಹೊಳೆಯುತ್ತಾ ಆವರಣರಹಿತವಾದ ಅಪರಿಚ್ಛಿನ್ನವಾದ (ಸರ್ವತ್ರ ವ್ಯಾಪ್ತವಾದ) ಕೇವಲ ಪ್ರಕಾಶಾತ್ಮಕವಾಗಿರುವ ಕಾರಣ ಬ್ರಹ್ಮಜ್ಞಾನ ಸದೃಶವಾಗಿ ವಿರಾಜಿಸುತ್ತಲಿದ್ದಿತು.

೧೮. ಕಿಟಕಿಗಳ ರಂಧ್ರಗಳಲ್ಲಿ ಒಳಗೆ ಹಬ್ಬಿಕೊಂಡಿರುವ ಭಂಗಾರದ ಲತೆಗಳ ಸಮೂಹಗಳಂತೆ ತೇಜೋಮಯವಾದ ಆ ತೇಜಸ್ಸಿನ ಕಿರಣಗಳು ಬ್ರಹ್ಮನ ಪದ್ಮಕೋಶವನ್ನು [ವೈರಿಂಚಪದವೇ ಆ ತೇಜಸ್ಸಿನ ಮಂದಿರ] ಎಡಬಿಡದೆ ಆವರಿಸಿಬಿಟ್ಟವು. ಮತ್ತು ಆ ತೇಜಸ್ಸು ಉದ್ಯಾನವನಗಳಂತೆ ಕ್ಷಣಕ್ಷಣಕ್ಕೂ ವೃದ್ಧಿಗೊಂಡು ಹಬ್ಬುತ್ತಾ ಥಳಥಳನೆ ಮಿರುಗುಟ್ಟುತ್ತಾ ಇರುವ ಕಿರಣಾವಳಿಗಳಿಂದ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದಿತು.

೧೯, ಹೀಗೆ ತೇಜೋಮಂಡಲವನ್ನು ಸೃಷ್ಟಿಮಾಡಿದ ಬಳಿಕ ಚತುರ್ಮುಖ ಶರೀರಾಕಾರದಿಂದ ಇದ್ದ ಪೂರ್ವೋಕ್ತವಾದ ಮನಸ್ಸು ಅತ್ಯಂತ ಪ್ರಕಾಶವಾದ ಆ ತೇಜಸ್ಸಿನಲ್ಲಿ ತನ್ನ ಆಕಾರದಂತೆಯೇ ಆಕಾರವುಳ್ಳ ತೇಜಸ್ವಿಯಾದ

ಸ ತತಸ್ತೇಜಸಸ್ತಸ್ಮಾದಭ್ಯುದೇತಿ ದಿವಾಕರಃ ।
ಜಾಲಮಂಡಲಮಧ್ಯಸ್ಥೋ ಜ್ವಲತ್ಕನಕಕುಂಡಲಃ ॥ ೨೦ ॥

ಜ್ವಲಜ್ಜಟಾಭಾರಧರೋಪಾಂತವಿಸ್ಫಾರ ಪಾವಕಃ ।
ಜ್ವಾಲಾವಿಶಾಲಾವಯವಃ ಪೂರಿತಾಕಾಶಮಂಡಲಃ ॥ ೨೧ ॥

ಅಥ ಬ್ರಹ್ಮಾ ಮಹಾಬುದ್ಧಿರನ್ಯಾಸ್ತಾಸ್ತೇಜಸಃ ಕಲಾಃ ।
ಅಪಾಲ್ಯ ಯದಸದ್ಬ್ರಹ್ಮಾ ತರಂಗಾನಿವ ಸಾಗರಃ ॥ ೨೨ ॥

ಪುರಾಣಾದಿ ಪ್ರಸಿದ್ಧವಾದ ಮತ್ತೊಂದು ಶರೀರವನ್ನು ಕಲ್ಪಿಸಿಕೊಂಡಿತು.

೨೦. ಬಳಿಕ. ಆ ತೇಜಸ್ಸಿನ ದೆಸೆಯಿಂದ ಆ ಹಿರಣ್ಯ ಗರ್ಭದೇವನು ಸೂರ್ಯ [ದಿವಾಕರ]ನಾಗಿ ಈಗಲೂ ಪ್ರತ್ಯಕ್ಷವಾಗಿ ಉದಯಿಸುತ್ತಲೇ ಇರುವನು. ಈ ಸೂರ್ಯನು ಪ್ರಭಾಜಾಲಾತ್ಮಕವಾದ ಮಂಡಲದ ಮಧ್ಯವರ್ತಿಯಾಗಿ ವಿರಾಜಮಾನವಾದ ಕನಕಕುಂಡಲಗಳನ್ನು ಧರಿಸಿ ಹೊಳೆಯುತ್ತಿರುವನು.

೨೧. ಈ ದಿವಾಕರನ ಸಮೀಪದಲ್ಲಿ ಸುತ್ತಲೂ ಜ್ವಲಿಸುತ್ತಲಿರುವ ಜ್ವಾಲಾಮಾಲೆಗಳನ್ನು ಧರಿಸಿಕೊಂಡಿರುವ ಅಗ್ನಿಗಳು ನಿರಂತರವೂ ಜಾಜ್ವಲ್ಯಮಾನವಾಗಿರುವುವು. ಇಂತಹ ಸೂರ್ಯದೇವನು ತನ್ನ ಕಿರಣಜ್ವಾಲೆಗಳಿಂದ ವಿಶಾಲವಾದ ಅವಯವಗಳುಳ್ಳವನಾಗಿ ಗಗನಮಂಡಲವನ್ನೆಲ್ಲ ತುಂಬಿಕೊಂಡು [ಆವರಿಸಿಕೊಂಡು] ಇರುವನು.

೨೨. ಇದಾದ ಬಳಿಕ, ಸರ್ವಜ್ಞನಾದ ಆ ಚತುರ್ಮುಖ ಬ್ರಹ್ಮನು ವಿಸ್ತಾರವಾದ ಜಗತ್ತನ್ನು ನಿರ್ಮಿಸಬೇಕೆಂಬ ಸಂಕಲ್ಪವುಳ್ಳವನಾಗಿ ಆದಿತ್ಯನನ್ನು ಸೃಷ್ಟಿಮಾಡಿದ ಬಳಿಕ ಮಿಕ್ಕಂಥ ತೇಜಸ್ಸಿನ ಕಲೆಗಳನ್ನು ಒಂಭತ್ತು ಭಾಗಗಳಾಗಿ ಪ್ರತ್ಯೇಕಿಸಿ ಸಮುದ್ರವು ತರಂಗಗಳನ್ನು (ಅಲೆ) ಹೊರಕ್ಕೆ ಎರಚುವಂತೆ (ಚಿಮ್ಮುವಂತೆ) ಅವುಗಳನ್ನು ಎಸೆದುಬಿಟ್ಟನು.

ತೇಽಪಿ ಸಂಕಲ್ಪಸಂಪ್ರಾಪ್ತಸಿದ್ಧಯಃ ಸಮಶಕ್ತಯಃ ।
ಯಥಾ ಸಂಕಲ್ಪಿತಂ ವಸ್ತು ಕ್ಷಣಾದ್ದೃಷ್ಟ್ವಾಪುರಸ್ಥಿತಃ ॥ ೫೩ ॥

ಸಂಕಲ್ಪಯಂತೋ ಯಾನ್ಯಾಂಸ್ತೇ ನಾನಾಭೂತಗಣಾನ್ಬಹೂನ್ ।
ಭೂತೇಷ್ವನ್ಯಾಂಸ್ತು ತೇಷ್ವನ್ಯಾಂಸ್ತೇಷ್ವನ್ಯಾನ್ವಿವಿಧಾನಪಿ ॥ ೫೪ ॥

ಸಂಸ್ಮೃತ್ಯ ವೇದಾಂಸ್ತದನು ಯಜ್ಞಕ್ರಮಗುಣಾನ್ಬಹೂನ್ ।
ಜಗದ್ಗೃಹಾದಯಂ ಬ್ರಹ್ಮಾ ಮರ್ಯಾದಾಂ ಸಮಕಲ್ಪಯತ್ ॥ ೫೫ ॥

---

೫೩. ಹೀಗೆ ಹೊರಕ್ಕೆ ಎಸೆಯಲ್ಪಟ್ಟ ತೇಜಸ್ಸಿನ ಖಂಡಗಳೇ ಆ ಚತುರ್ಮುಖ ಬ್ರಹ್ಮನ ಸಂಕಲ್ಪವಶದಿಂದಲೇ ಸಕಲ ಸಿದ್ಧಿಗಳನ್ನೂ ಪಡೆದವರಾಗಿ ಬ್ರಹ್ಮದೇವನಿಗೆ ಸಮಾನವಾದ ಶಕ್ತಿಯುಳ್ಳವರಾದ ಒಂಭತ್ತುವಿಧ ಪ್ರಜಾಪತಿಗಳಾದವು. ಈ ಮರೀಚ್ಯಾದಿ ನವಪ್ರಜಾಪತಿಗಳೂ ಕೂಡ ಅವರವರ ಮನಸ್ಸುಗಳಲ್ಲಿ ಸಂಕಲ್ಪಗಳು ಉದಯಿಸಿದಹಾಗೆಲ್ಲ ತದನುಗುಣವಾದ ವಸ್ತುಗಳನ್ನು ಅನಾಯಾಸವಾಗಿ ತಮ್ಮೆದುರಿನಲ್ಲಿಯೇ ಕಂಡು ಆ ಕ್ಷಣದಲ್ಲಿಯೇ ಪಡೆದವರಾದರು.

೫೪. ಮತ್ತು ಆ ಪ್ರಜಾಪತಿಗಳು ದೇವದಾನವಾದಿ ಜಾತಿಭೇದಗಳಿಂದ ಬಹುವಿಧವಾದ ಮತ್ತು ವ್ಯಕ್ತಿಭೇದಗಳಿಂದ ಅಸಂಖ್ಯಾಕವಾದ ಯಾವ ಯಾವ ಭೂತಗಣಗಳನ್ನು ಸಂಕಲ್ಪಿಸಿದವರಾದರೋ ಅವುಗಳನ್ನೂ ಅವುಗಳಲ್ಲಿಯೂ ಕೂಡ ಪುತ್ರ ಪೌತ್ರಾದಿ ಪರಂಪರೆಯಿಂದ ಬೇರೆ ಬೇರೆ ಪ್ರಾಣಿಗಳನ್ನೂ ಆ ಪ್ರಾಣಿಗಳಲ್ಲಿ ಇತರ ಪ್ರಾಣಿಗಳನ್ನೂ ಅವುಗಳಲ್ಲಿಯೂ ನಾನಾವಿಧ ಇತರ ಪ್ರಾಣಿಗಳನ್ನೂ ಹೇಗೆ ಹೇಗೆ ಸಂಕಲ್ಪಿಸಿಕೊಂಡರೋ ಹಾಗೆ ಹಾಗೆ ತಮ್ಮ ಮುಂದುಗಡೆಯಲ್ಲಿಯೇ ಕಂಡವರಾದರು.

೫೫. ಅನಂತರ ಈ ಆದ್ಯಬ್ರಹ್ಮನು ಸಕಲ ವೇದಗಳನ್ನೂ ಅನೇಕ ಪ್ರಕಾರಗಳಿಂದ ಯಜ್ಞಾದಿ ಶ್ರೌತಕರ್ಮಕಲಾಪಗಳ ಪ್ರಕ್ರಿಯೆಗಳನ್ನೂ ಸ್ಮರಿಸಿಕೊಂಡು ಅವುಗಳಿಂದ ಈ ಜಗತ್ತೆಂಬ ಗೃಹದಲ್ಲಿ ಎಲ್ಲವೂ ಸುರಕ್ಷಿತವಾಗಿರುವುದಕ್ಕಾಗಿ ತಕ್ಕಂತೆ ಒಂದು ಬಗೆಯ ಕ್ರಮವಾದ ವ್ಯವಸ್ಥೆಯನ್ನು (ಮರ್ಯಾದೆಯನ್ನು) ಏರ್ಪಡಿಸಿದನು.

ಬ್ರಾಹ್ಮಂ ರೂಪಮುಪಾದಾಯ ಮನೋನಾಮ ಮಹದ್ವಪುಃ ।
ತನೋತೀತ್ಥಮಿಮಾಂ ದೃಷ್ಟಿಂ ಭೂತಸಂತತಿಸಂಕುಲಾಂ ॥ ೨೬ ॥

ಸಮುದ್ರಾಚಲವೃಕ್ಷಾಢ್ಯಾಂ ಕೃತಲೋಕೋತ್ತರಕ್ರಮಾಂ ।
ಮೇರುಭೂಪೀಠದಿಕ್ಕುಂಜಜಟಾಲೋದರಮಂಡಲಾಂ ॥ ೨೭ ॥

ಸುಖದುಃಖಜರಾಜನ್ಮ ಮರಣ ಸ್ವಾಧಿಬೋಧಿತಾಂ ।
ರಾಗದ್ವೇಷಮಯೋದ್ವಿಗ್ನಾಂ ಗುಣತ್ರಯಮಯಾತ್ಮಿಕಾಂ ॥ ೨೮ ॥

ಮನೋಹಸ್ತೈರ್ವಿರಿಂಚೋತ್ಥೈರ್ಯದ್ಯಥಾ ಕಲ್ಪಿತಂ ಪುರಾ ।
ತತ್ತಥೈವಾಖಿಲಂ ದ್ರಷ್ಟುಂ ದೃಶ್ಯತೇಽದ್ಯಾಪಿ ಮಾಯಯಾ ॥ ೨೯ ॥

೨೬-೨೭-೨೮. ಅಯ್ಯ ರಾಮ, ಪೂರ್ವೋಕ್ತವಾದ ರೀತಿಯಲ್ಲಿ ಈ ಮನಸ್ಸೆಂಬುದು ಚತುರ್ಮುಖತ್ವಾದಿ ಆಕಾರವುಳ್ಳ ಬ್ರಹ್ಮನ ರೂಪವೆಂಬ ದೊಡ್ಡ ದೇಹವನ್ನೂ ಸ್ವೀಕರಿಸಿ ಚತುರ್ವಿಧ ಭೂತ ಸಮುದಾಯಗಳಿಂದ ನಿಬಿಡವಾದ ಈ ಪ್ರಪಂಚ ಜ್ಞಾನವನ್ನು ಸರ್ವದಾ ವಿಸ್ತಾರಪಡಿಸುತ್ತಿರುವುದು. ಇಂತಹ ಪ್ರಪಂಚದಲ್ಲಿ ಸಮುದ್ರಗಳೂ ಪರ್ವತಗಳೂ ವೃಕ್ಷಗಳೂ ತುಂಬಿ ತುಳುಕುತ್ತಿರುವುವು. ಭೂರಾದಿ ಸಮಸ್ತ ಲೋಕಗಳ ಕ್ರಮವು ಅತಿ ವಿಚಿತ್ರವಾಗಿ ಪ್ರಶಸ್ತವಾದ ರೀತಿಯಲ್ಲಿ ಕ್ಲುಪ್ತವಾಗಿರುವುದು. ಈ ಪ್ರಪಂಚದ ಗರ್ಭಮಂಡಲದೊಳಗೆ ಮೇರುಪರ್ವತ, ಭೂಮಿ ಭೂತಲ (ಪಾತಾಳ) ಅಷ್ಟದಿಕ್ಕುಗಳು ಮೊದಲಾದವುಗಳು ಲತೆಗಳ ಪೊದೆಗಳಂತೆ ಜಟಿಲವಾಗಿ ಕವಿದುಕೊಂಡಿವೆ. ಶಾರೀರಕಗಳಾದ ಸುಖ, ದುಃಖ, ರೋಗ, ಜರೆ [ಮುಪ್ಪು] ಜನ್ಮ, ಮರಣ ಮುಂತಾದವುಗಳಿಂದಲೂ ನಾನಾ ಮಾನಸಿಕ ವ್ಯಥೆಗಳಿಂದಲೂ ಈ ಸಂಸಾರವು ಸರ್ವಥಾ ಹೇಯವಾದುದೆಂಬ ವಿವೇಕವನ್ನುಂಟುಮಾಡುತ್ತಿರುವುದು ರಾಗದ್ವೇಷಾದಿಗಳಿಂದ ಪ್ರಚುರವಾಗಿ ಕಳವಳಕ್ಕೆ ಕಾರಣವಾಗಿರುವುದು. ಸತ್ವರಜಸ್ ತಮಸ್ ಎಂಬ ಗುಣತ್ರಯಮಯವಾದ ಅನಿರ್ವಚನೀಯಮಾಯಾರೂಪವಾದುದು.

(೨೬ ನೆಯ ಶ್ಲೋಕದಲ್ಲಿ ದೃಷ್ಟಿಂ ಎಂಬ ಪದವಿದೆ. ಅದಕ್ಕೆ ಬದಲಾಗಿ ಸೃಷ್ಟಿಂ ಎಂದಿಟ್ಟುಕೊಂಡು ಅರ್ಥಮಾಡಿದರೆ ಚೆನ್ನಾಗಿ ಒಪ್ಪುವುದು.)

೨೯. ಹೀಗೆ, ಆದ್ಯಬ್ರಹ್ಮನ ಮನೋವೃತ್ತಿಗಳಿಂದಲಾಗಲಿ, ಕೈಗಳಿಂದಲಾಗಲಿ ಯಾವ ಯಾವ ವಸ್ತುವು ಯಾವ ಯಾವ ರೀತಿಯಲ್ಲಿ ಕಾಣುವುದಕ್ಕೂ

ಇತ್ಥಂ ಸರ್ವೇಷು ಭೂತೇಷು ಕೇಷುಚಿತ್ತ್ವಥವಾ ಪುನಃ ।
ಸಂಕಲ್ಪಯತಿ ಸಂಸಾರಂ ಪರಂ ಪಶ್ಯತಿ ಚಿತ್ಸ್ಥಿತಂ　　|| ೩೦ ||

ಮೋಹ ಏವಂಮಯೋ ಮಿಥ್ಯಾ ಜಾಗತಃ ಸ್ಥಿರತಾಂ ಗತಃ ।
ಸಂಕಲ್ಪನೇನ ಮನಸಾ ಕಲ್ಪಿತೋಽಚಿರತಃ ಸ್ವಯಂ　　|| ೩೧ ||

ಸಂಕಲ್ಪವಶತಃ ಸರ್ವಾಃ ಪ್ರಸವಂತಿ ಜಗತ್ಕ್ರಿಯಾಃ ।
ಸಂಕಲ್ಪವಶತೋ ದೇವಾ ನಿರ್ಯಾಂತಿ ನಿಯತಿಸ್ಥಿತಾಃ　　|| ೩೨ ||

ಪಡೆಯುವುದಕ್ಕೂ ಯೋಗ್ಯವಾಗಿರುವಂತೆ ಪೂರ್ವದಲ್ಲಿ ಕಲ್ಪಿಸಲ್ಪಟ್ಟಿರುವುದೋ ಆಯಾ ವಸ್ತುವೆಲ್ಲವೂ ಆಯಾ ರೀತಿಯಾಗಿಯೇ ಈಗಲೂ ವ್ಯವಸ್ಥಿತವಾಗಿ ಗೋಚರವಾಗುತ್ತಿರುವುದು ಮತ್ತು ಸಿಕ್ಕುತ್ತಲಿರುವುದು. ಇದು ತ್ರಿಗುಣಾತ್ಮಕವಾದ ಮಾಯೆಯು ಪ್ರಭಾವವು.

೩೦. ಈ ರೀತಿಯಾಗಿ ಮನಸ್ಸು ಸಮಷ್ಟಿದೃಷ್ಟಿಯಿಂದ ಸಮಸ್ತ ಭೂತಗಳಲ್ಲಿಯೂ ಅಥವಾ ವ್ಯಷ್ಟಿದೃಷ್ಟಿಯಿಂದ ಕೆಲವು ಭೂತಗಳಲ್ಲಿ ಮಾತ್ರವೂ ಇದ್ದುಕೊಂಡು ಪುನಃ ಸಂಸಾರವನ್ನು ಸಂಕಲ್ಪಿಸುವುದು. ಚಿತ್ ಆದರೋ ಸಾಕ್ಷಿಯಾಗಿದ್ದುಕೊಂಡು ಪರಾತ್ಪರವಾದ ಸ್ವಸ್ವರೂಪವನ್ನು ಮಾತ್ರವೇ ನೋಡುತ್ತಿರುವುದು.

೩೧. ಮನಸ್ಸಿನಿಂದ ಸಂಕಲ್ಪಮಾತ್ರದಿಂದಲೇ ಬಲುಬೇಗನೆ ತಾನಾಗಿಯೇ (ಅಕಾರಣವಾಗಿ) ಕಲ್ಪಿತವಾದ ಪೂರ್ವೋಕ್ತಪ್ರಕಾರವಾದ ಜಗದ್ಭ್ರಾಂತಿಯು ಮಿಥ್ಯೆಯಾಗಿಯೇ ಸ್ಥಿರವಾಗಿ ನೆಲೆಸಿರುವುದು.

೩೨. ಈ ಸಂಕಲ್ಪವಶದಿಂದಲೇ ಸಕಲ ಜಗದ್ವ್ಯವಹಾರಗಳೂ ಉದ್ಭವಿಸಿ ಪ್ರವರ್ತಿಸುವುವು. ಅಂತೆಯೇ ಸಮಸ್ತ ದೇವತೆಗಳೂ ಈ ಸಂಕಲ್ಪದಿಂದಲೇ ತಮ್ಮ ತಮ್ಮ ಕ್ಲೃಪ್ತವಾದ ನಿಯತಿಯಲ್ಲಿದ್ದುಕೊಂಡು ಪ್ರಾದುರ್ಭವಿಸುವರು.

ಕೋಪಿತಾಯಾಃ ಪ್ರಜಾನಾಥೈರ್ಜಗತ್ಸೃಷ್ಟೇಃ ಕುಲೋದ್ಭವಃ ।
ಬ್ರಹ್ಮಾ ಸಂಚಿಂತಯತ್ಯೇಷ ಪದ್ಮಾಸನಗತಃ ಪ್ರಭುಃ ॥ ೩೩ ॥

ಮನಃಸ್ಪಂದನಮಾತ್ರೇಣ ಚಿತ್ರಂ ಚಿತ್ತಂ ಯದುತ್ಥಿತಂ ।
ಸೃಷ್ಟಿರ್ವಾ ಭೋಗಿನೀ ಸ್ಫಾರಾ ವ್ಯವಹಾರವಿಕಾರಿಣೀ ॥ ೩೪ ॥

ರುದ್ರೋಪೇಂದ್ರಮಹೇಂದ್ರಾದ್ಯಾ ಶೈಲಸಾಗರಸಂಕುಲಾ ।
ಪಾತಾಲರೋದೋದಿಕ್ಸ್ವರ್ಗಮಾರ್ಗಸಂಕಟಕೋಟರಾ ॥ ೩೫ ॥

ಸಂಕಲ್ಪಜಾಲಮತ್ಯಂತಂ ಮಯೇದಮಭಿತಸ್ತತಂ ।
ಅಧುನಾ ವಿರತೋಽಸ್ಮ್ಯಸ್ಮಾದ್ವಿಕಲ್ಪೋಲ್ಲಾಸನಕ್ರಮಾತ್ ॥ ೩೬ ॥

---

೩೩. ಇಂದ್ರವಿರೋಚನಾದಿ ದೇವಾಸುರ ಚಕ್ರವರ್ತಿಗಳು ತಮ್ಮ ತಮ್ಮ ಉತ್ಕರ್ಷಕ್ಕಾಗಿ ಪ್ರಜೆಗಳಲ್ಲಿ ಧರ್ಮಾಧರ್ಮಗಳನ್ನು ಹೆಚ್ಚಿಸುವ ಸಲುವಾಗಿ ಪ್ರಯತ್ನಿಸುತ್ತಾ ಬಲಾತ್ಕಾರದಿಂದ ಸಾತ್ವಿಕ ರಾಜಸ ತಾಮಸ ವ್ಯವಹಾರಗಳಲ್ಲಿ ಪ್ರವರ್ತಿಸುವುದರ ಫಲವಾಗಿ ದುಸ್ಸಹವಾದ ನಾನಾವಿಧ ಕ್ಲೇಶಗಳು ಬಹಳವಾಗಿ ತಲೆದೋರಿ ಅವುಗಳಿಂದ ಜಗತ್ಸೃಷ್ಟಿಯು ಪೀಡಿತವಾಗಲು ಅದನ್ನು ನೋಡಿ ಪ್ರಭುವಾದ ಪೂರ್ವೋಕ್ತ ಕೂಟಸ್ಥ (ಆದ್ಯ) ಚತುರ್ಮುಖ ಬ್ರಹ್ಮನು ಅತ್ಯಂತ ಖಿನ್ನಮನಸ್ಕನಾಗಿ ತನ್ನ ಕಮಲಾಸನದ ಮೇಲೆ ಕುಳಿತುಕೊಂಡು ಈ ರೀತಿಯಾಗಿ ಚಿಂತಿಸುವನು. (ಯೋಚಿಸತೊಡಗುವನು.)

೩೪-೩೫. ನನ್ನ ಮನಸ್ಸಿನ ಸ್ವಲ್ಪ ಮಾತ್ರ ಚಲನದಿಂದಲೇ ಅತಿ ವಿಚಿತ್ರವಾದ ಈ ಚಿತ್ತವೂ ಇದರ ಉಪಭೋಗಾರ್ಥವಾಗಿ ಅತ್ಯಂತ ವಿಸ್ತೀರ್ಣವಾದ ಸಕಲ ವಿಧವ್ಯವಹಾರಗಳಿಂದ ಅನೇಕಾನೇಕ ವಿಕಾರಗಳಿಗೆ ಕಾರಣವಾಗಿ ರುದ್ರ, ಉಪೇಂದ್ರ, ಮಹೇಂದ್ರಾದಿಗಳಿಂದಲೂ ಪರ್ವತ ಸಮುದ್ರಗಳಿಂದಲೂ ದಟ್ಟವಾಗಿ ಪಾತಾಳ ಭೂಮ್ಯಂತರಿಕ್ಷಗಳು, ಅಷ್ಟದಿಕ್ಕುಗಳು, ಸ್ವರ್ಗಮಾರ್ಗಗಳು ಇತ್ಯಾದಿಗಳಿಂದ ನಿರಂತರವೂ ಸಾಂದ್ರವಾದ ಈ ಸೃಷ್ಟಿಯು ತಾನಾಗಿ ಎದ್ದು ತೋರುತ್ತಿರುವುದು.

೩೬. ಈ ಪ್ರಕಾರವಾಗಿ ಉದಯಿಸಿರುವ ಇದೆಲ್ಲವೂ ನನ್ನಿಂದ ಅತ್ಯಂತವಾಗಿ ಸುತ್ತಲೂ ಪ್ರಸರಿಸಲ್ಪಟ್ಟಿರುವ ಸಂಕಲ್ಪಜಾಲವೇ ಆಗಿದೆ. ಈಗ, ನಾನು ಸಕಲ ವಿಕಲ್ಪಗಳಿಗೆ ಆಸ್ಪದವಾದ ಸಂಕಲ್ಪಜಾಲದ ಪ್ರಸರಣ ರೂಪ ವ್ಯವಹಾರಗಳನ್ನು ನಿಲ್ಲಿಸಿಬಿಟ್ಟು ಶಾಂತನಾಗುವೆನು.

ಇತಿ ನಿಶ್ಚಿತ್ಯ ವಿರತಃ ಕಲ್ಪನಾನರ್ಥಸಂಕಟಾತ್ ।
ಅನಾದಿಮತ್ಪರಂ ಬ್ರಹ್ಮ ಸ್ಮರತ್ಯಾತ್ಮಾನಮಾತ್ಮನಾ ॥ ೩೭ ॥

ತಮಾಸಾದ್ಯ ತದಾಭಾಸೇ ಪದೇ ಗಲಿತಮಾನಸೇ ।
ಸುಖಂ ತಿಷ್ಠತಿ ಶಾಂತಾತ್ಮಾ ತಲ್ಪೇಽದಃ ಶ್ರಮವಾನಿವ ॥ ೩೮ ॥

ನಿರ್ಮಮೋ ನಿರಹಂಕಾರಃ ಪರಾಂ ಶಾಂತಿಮುಪಾಗತಃ ।
ಅವಿಕ್ಷುಬ್ಧ ಇವಾಂಭೋಧಿರಾತ್ಮನಾತ್ಮನಿ ತಿಷ್ಠತಿ ॥ ೩೯ ॥

ಧ್ಯಾನಾತ್ಕದಾಚಿದ್ಭಗವಾನ್ ಸ್ವಯಂ ವಿರಮತಿ ಪ್ರಭುಃ ।
ಬಂಧನಾತ್ ಸಲಿಲಸ್ಯಂದಾತ್ ಸೌಮ್ಯತ್ವಾದಿವ ವಾರಿಧಿಃ ॥ ೪೦ ॥

---

೩೭. ಹೀಗೆಂದು ನಿಶ್ಚಯಿಸಿ ಈ ಜಗತ್ಕಲ್ಪನಾರೂಪವಾದ ಅತ್ಯಂತ ದುಃಖ ನಿದಾನವಾದ ಮಹಾ ಅನರ್ಥದ ದೆಸೆಯಿಂದ ವಿಶ್ರಾಂತಿಯನ್ನು ಪಡೆದವನಾಗಿ ಆ ಕೂಟಸ್ಥ ಚತುರ್ಮುಖ ಬ್ರಹ್ಮನು ತನಗೆ ತಾನೇ ತನ್ನ ಆತ್ಮವಾದ ಆದ್ಯಂತ ರಹಿತವಾದ ಪರಬ್ರಹ್ಮನನ್ನು ಮನಸ್ಸಿನಿಂದ ಸ್ಮರಿಸುವನು. [ಧ್ಯಾನಿಸುವನು.]

೩೮. ಹೀಗೆ ಸ್ಮರಣೆಮಾಡಿದ ಮಾತ್ರದಿಂದಲೇ ಪರಮಾತ್ಮನನ್ನು ಸೇರಿ ಕೆಳಗೆ ಹಚ್ಚಡ ಮೊದಲಾದವುಗಳನ್ನು ಹಾಸಿ ಮೆತ್ತಗೆ ರಚಿಸಿರುವ ಹಾಸಿಗೆಯ ಮೇಲೆ ಆಯಾಸಪಟ್ಟವನು ಮಲಗಿಕೊಂಡು ವಿಶ್ರಾಂತಿಯನ್ನು ಪಡೆಯುವಂತೆ ತಾನೂ ಪ್ರಶಾಂತಾತ್ಮನಾಗಿ ಸರ್ವತ್ರ ಆ ಪರಮಾತ್ಮ ಸ್ವರೂಪವೇ ಭಾಸಮಾನವಾಗಿರುವ ಮತ್ತು ಮನೋಲಯವಾಗಿರುವ ಆತ್ಮಸ್ಥಿತಿಯಲ್ಲಿ ಸುಖವಾಗಿ ವಿಲಾಸಗೊಳ್ಳುವನು. (ರಮಿಸುವನು.)

೩೯. ಆ ಸ್ವಾತ್ಮಾನಂದ ಸ್ಥಿತಿಯಲ್ಲಿರುವ ಚತುರ್ಮುಖನು ಮಮಕಾರ ಅಹಂಕಾರಗಳಿಂದ ಮುಕ್ತನಾಗಿ ಉತ್ತಮೋತ್ತಮವಾದ ಶಾಂತಿಯನ್ನು ಪಡೆದು ಗಾಳಿಯ ಹೊಡೆತಕ್ಕೆ ಸಿಕ್ಕದೆ ನಿಶ್ಚಲವಾಗಿರುವ ಸಮುದ್ರದಂತೆ ಸ್ವಸ್ವರೂಪವಾದ ಪರಮಾತ್ಮನಲ್ಲಿಯೇ ತಾನು ಸ್ತಬ್ಧನಾಗಿರುವನು.

೪೦. ಬಳಿಕ, ಒಂದಾನೊಂದು ಸಮಯದಲ್ಲಿ ಷಡ್ಗುಣೈಶ್ವರ್ಯಸಂಪನ್ನನೂ (ಭಗವಾನ್) ಜಗತ್ಪ್ರಭುವೂ ಆದ ಚತುರ್ಮುಖನು ನಿಶ್ಚಲವಾಗಿರುವ ಸಮುದ್ರವು

ವಿಚಾರಯತಿ ಸಂಸಾರಂ ಸುಖದುಃಖಸಮನ್ವಿತಂ ।
ಆಶಾಪಾಶಶತೈರ್ಬದ್ಧಂ ರಾಗದ್ವೇಷಭಯಾತುರಂ ॥ ೪೧ ॥

ತತಃ ಸ ಕರುಣಾಕ್ರಾಂತಮನಾ ಭೂತವಿಭೂತಯೇ ।
ಕರೋತೀಹ ಮಹಾರ್ಥಾನಿ ಶಾಸ್ತ್ರಾಣಿ ವಿವಿಧಾನಿ ಚ ॥ ೪೨ ॥

ಅಧ್ಯಾತ್ಮಜ್ಞಾನಗರ್ಭಾಣಿ ವೇದವೇದಾಂಗಸಂಗ್ರಹಂ ।
ಪುರಾಣಾದೀನಿ ಚಾನ್ಯಾನಿ ಮುಕ್ತಯೇ ಸರ್ವದೇಹಿನಾಂ ॥ ೪೩ ॥

ಪುನಸ್ತತ್ಪದಮಾಲಂಬ್ಯ ಪರಮಾಪದ್ವಿನಿರ್ಗತಃ ।
ಸ್ವಸ್ಥಸ್ತಿಷ್ಠತಿ ಶಾಂತಾತ್ಮಾ ನಿರ್ಮಂದರ ಇವಾರ್ಣವಃ ॥ ೪೪ ॥

ಜಲಪ್ರವಾಹದ ಧುಮುಕುವಿಕೆಯಿಂದ ಪೂರ್ವದ ಶಾಂತಸ್ಥಿತಿಯನ್ನು ಬಿಟ್ಟು ಕ್ಷೋಭಿಸುವಂತೆ ತಾನಾಗಿಯೇ ಏಕಾಕಾರವೃತ್ತಿ ಧಾರಣಾ ನಿರ್ಬಂಧರೂಪವಾದ ಧ್ಯಾನವನ್ನು ಕೊನೆಗಾಣಿಸಿ ಬಹಿರ್ಮುಖನಾಗುವನು.

೪೧. ಆಗ–ಸುಖದುಃಖಾದಿ ನಾನಾದ್ವಂದ್ವಗಳಿಂದ ಕೂಡಿ ರಾಗದ್ವೇಷ ಭಯಾದಿಗಳಿಂದ ವ್ಯಾಕುಲವಾಗಿಯೂ ಸಾವಿರಾರು ಆಶಾಪಾಶಗಳಿಂದ ಬಿಗಿಯಲ್ಪಟ್ಟು ದಾಗಿಯೂ ಇರುವ ಈ ಘೋರವಾದ ಸಂಸಾರದ ಸ್ವರೂಪವನ್ನು ವಿಚಾರ ಮಾಡುವನು.

೪೨. ಅನಂತರ ಆ ಬ್ರಹ್ಮನು ಸಂಸಾರದಲ್ಲಿ ಬಿದ್ದು ನರಳುತ್ತಿರುವ ಸಕಲ ಪ್ರಾಣಿಗಳ ದುಃಖಗಳನ್ನು ಕಂಡು ಕರುಣಾರಸದಿಂದ ಆಕ್ರಾಂತವಾದ ಮನಸ್ಸುಳ್ಳ ವನಾಗಿ ಅವರುಗಳ ಶ್ರೇಯಸ್ಸಿಗೋಸ್ಕರ (ಕ್ಷೇಮಕ್ಕಾಗಿ) ಮಹಾರಹಸ್ಯಾರ್ಥ ಬೋಧಕಗಳಾದ ನಾನಾವಿಧ ಶಾಸ್ತ್ರಗಳನ್ನು ರಚಿಸುವನು.

೪೩. ಹಾಗೆಯೇ ಆತನು ಸಂಸಾರದಿಂದ ಮೋಕ್ಷವನ್ನು ಪಡೆಯುವದ ಕ್ಕೋಸ್ಕರ ಅಧ್ಯಾತ್ಮಜ್ಞಾನಸಂಪತ್ತಿಗೆ ಮಾರ್ಗದರ್ಶಕಗಳಾಗಿರುವ ವೇದಾಂತ ಶಾಸ್ತ್ರಗಳನ್ನೂ ವೇದಗಳನ್ನೂ ವೇದಾಂಗಗಳನ್ನೂ ಇವುಗಳ ಸಾರಸಂಗ್ರಹ ಭೂತವಾದ ಇನ್ನೂ ಇತರ ಅಷ್ಟಾದಶಪುರಾಣಾದಿಗಳನ್ನೂ ಕೂಡ ರಚಿಸಿರುವನು.

೪೪. ಪುನಃ ಆ ಚತುರ್ಮುಖನು ಸೃಷ್ಟಿವಿಕ್ಷೇಪಗಳೆಂಬ ಮಹಾವಿಪತ್ತುಗಳಿಂದ ತಪ್ಪಿಸಿಕೊಂಡು ಪೂರ್ವೋಕ್ತವಾದ ಪ್ರಶಾಂತವಾದ ಪರಮಪದವನ್ನು ಅವಲಂಬಿಸಿ

ಅವಲೋಕ್ಯ ಜಗಚ್ಚೇಷ್ಟಾಂ ಮರ್ಯಾದಾಂ ವಿನಿಯೋಜ್ಯ ಚ ।
ಬ್ರಹ್ಮಾ ಕಮಲಪೀಠಸ್ಥಃ ಪುನಃ ಸ್ವಾತ್ಮನಿ ತಿಷ್ಠತಿ ॥ ೪೫ ॥

ಕದಾಚಿತ್ಕೇವಲಂ ಸರ್ವಸಂಕಲ್ಪಪರಿಹೀನಯಾ ।
ಯದೃಚ್ಛಯಾನುಗ್ರಹಾರ್ಥಂ ಲೋಕಕ್ರಮವದಾಸ್ಥಿತಃ ॥ ೪೬ ॥

ನಾರ್ಜವಂ ನಾಸ್ಯ ಸಂತ್ಯಾಗೋ ವಪುಷೋ ನಚ ಸಂಗ್ರಹಃ ।
ನಾನಾ ನ ಚೇತನಂ ನೇಹ ನ ಸ್ಥಿತಿರ್ನಾಸ್ಥಿತಿಃ ಸ್ಥಿತಾಃ ॥ ೪೭ ॥

ಮಂದರ ಪರ್ವತವನ್ನು ಹೊರಕ್ಕೆತ್ತಿಬಿಟ್ಟ ಮೇಲೆ ನಿಶ್ಚಲವಾಗಿರುವ ಕ್ಷೀರಸಮುದ್ರದಂತೆ ಪ್ರಶಾಂತಸ್ವರೂಪನಾಗಿ ಸ್ವಸ್ಥನಾಗಿರುವನು.

೪೫. ಮತ್ತೆಯೂ ಕೂಡ ಚತುರ್ಮುಖ ಬ್ರಹ್ಮನು ತನ್ನ ಪದ್ಮಾಸನದಲ್ಲಿ ಸುಖಾಸೀನನಾಗಿದ್ದುಕೊಂಡು ಈ ಜಗತ್ತಿನ ವ್ಯವಹಾರವನ್ನು ಕಂಡು ಅದರ ಸ್ಥಿತಿಗೆ ತಕ್ಕ ಮರ್ಯಾದೆಯನ್ನು ಏರ್ಪಡಿಸಿ, ತಿರುಗಿ, ತನ್ನ ಆತ್ಮಸ್ವರೂಪದಲ್ಲಿ ನೆಲೆಸುವನು.

೪೬. ಇನ್ನೊಂದು ಸಮಯದಲ್ಲಿ, ಕೇವಲ ಲೋಕಾನುಗ್ರಹಾರ್ಥವಾಗಿಯೇ ಸಕಲ ಸಂಕಲ್ಪರಹಿತವಾದ ಸ್ವತಂತ್ರವಾದ (ಆಕಸ್ಮಿಕವಾದ) ಸ್ವೇಚ್ಛೆಯಿಂದ ಲೋಕ ಮರ್ಯಾದೆಯನ್ನು ತಾನೂ ಆಚರಿಸುತ್ತಿರುವವನಂತೆ ಇರುವನು.

೪೭. ಹೀಗಿದ್ದರೂ ಕೂಡ ಈ ಬ್ರಹ್ಮನಿಗೆ ಸಮಾಧಿಕಾಲದಲ್ಲಿ ಋಜುತ್ವವೂ ಇಲ್ಲ. ಸೃಷ್ಟಿಸಂಹಾರಕಾಲದಲ್ಲಿ (ಪ್ರಳಯ ಕಾಲದಲ್ಲಿ) ಋಜುತ್ವವನ್ನು ಬಿಡುವಿಕೆಯೂ ಇಲ್ಲ. ದೇಹೇಂದ್ರಿಯಾದಿಗಳನ್ನು ಸ್ವೀಕರಿಸುವಿಕೆಯೂ ಇಲ್ಲ. ಸೃಷ್ಟಿರೂಪದಿಂದ ನಾನಾತ್ವವೂ ಇಲ್ಲ. ಈತನು ಸಮಾಧಿಯಿಂದ ಬಹಿರ್ಮುಖನಾದ ಕಾಲದಲ್ಲಿ ಚೇತನವಾಗಿಯೂ ಇಲ್ಲ. ಪದ್ಮಾಸನದಲ್ಲಿ ಮಾತ್ರ ಇವನು ಕುಳಿತು ಕೊಂಡಿರುವನೆಂಬುದೂ ಇಲ್ಲ. ಬೇರೆ ಕಡೆಯಲ್ಲಿ ಇರುವುದಿಲ್ಲವೆಂಬುದೂ ಇಲ್ಲ. ಈ ಕಾರಣದಿಂದ ಇವನು ಬೇರೆ ಬೇರೆ ಕಾಲಗಳಲ್ಲಿ ಅನೇಕವಿಧ ಅವಸ್ಥಾಭೇದಗಳನ್ನು ಪಡೆಯುತ್ತಿದ್ದರೂ ಅಜ್ಞನಿಗೆ ಹೇಗೋ ಹಾಗೆ ವೈಷಮ್ಯಪ್ರಸಕ್ತಿಯೂ ಇರುವುದಿಲ್ಲ.

ಸರ್ವಭಾವಸಮಾರಂಭಃ ಸಮಃ ಸರ್ವಾಸು ವೃತ್ತಿಷು ।
ಪರಿಪೂರ್ಣಾರ್ಣವಾಕಾರೇ ಮುಕ್ತಶೇಷೋಽವತಿಷ್ಠತೇ ॥ ೪೮ ॥

ಕದಾಚಿತ್ಕೇವಲಂ ಸರ್ವಸಂಕಲ್ಪಪರಿಹೀನಯಾ ।
ಯದೃಚ್ಛಯಾನುಗ್ರಹಾರ್ಥಂ ಲೋಕಾನಾಂ ಪ್ರತಿಬುಧ್ಯತೇ ॥ ೪೯ ॥

ಏಷಾ ಬ್ರಾಹ್ಮೀ ಸ್ಥಿತಿಃ ಪುಣ್ಯಾ ಯಾ ಮಯೋಕ್ತಾ ಮಹಾಮತೇ ।
ಯಾತಾಂ ವಿಧಿಸುರಾನೀಕೌ ತಾನೇತಾಂ ಸಾತ್ವಿಕೀಮಪಿ ॥ ೫೦ ॥

ಚಿತ್ಸರ್ಗೋಽಪರಮಾಕಾಶೇ ಬ್ರಹ್ಮಣೋ ಯನ್ಮನಃ ಫಲಂ ।
ಉದೇತಿ ಪ್ರಥಮಃ ಸೈವ ಬ್ರಹ್ಮತ್ವಂ ಮಾಪಾಶ್ನುತೇ ॥ ೫೧ ॥

---

೪೮. ಈ ಚತುರ್ಮುಖನು ಸಕಲ ಭಾವಗಳಲ್ಲಿಯೂ ಏಕರೂಪವಾದ ವ್ಯವಹಾರವುಳ್ಳವನಾಗಿಯೂ ಸಕಲ ಚಿತ್ತ ವೃತ್ತಿಗಳಲ್ಲಿಯೂ ಸಮನಾಗಿಯೂ ನಿರ್ವಿಶೇಷನಾಗಿ ಪರಿಪೂರ್ಣವಾದ ಸಮುದ್ರದಂತೆ ಅಪಾರವಾದ ಆಕಾರವುಳ್ಳವನಾಗಿಯೂ ಗಂಭೀರನಾಗಿಯೂ ಇದ್ದುಕೊಂಡಿರುವನು.

೪೯. ಈ ಚತುರ್ಮುಖನು, ಮಗದೊಂದು ಕಾಲದಲ್ಲಿ ಕೇವಲ ಲೋಕಾನುಗ್ರಹಾರ್ಥವಾಗಿಯೇ ಯಾವದೊಂದು ವಿಧವಾದ ಸಂಕಲ್ಪವೂ ಇಲ್ಲದೆ ಆಕಸ್ಮಿಕವಾಗಿ ಉದಯಿಸಿದ ಸ್ವೇಚ್ಛೆಯಿಂದ ಸಮಾಧಿಯನ್ನು ಬಿಟ್ಟು ಎಚ್ಚರಗೊಳ್ಳುವನು.

೫೦. ಅಯ್ಯ, ಮಹಾಪ್ರಾಜ್ಞನಾದ ರಾಮ, ನಾನು ಇದುವರೆವಿಗೆ ವಿವರಿಸಿದ ಈ ಚತುರ್ಮುಖ ಬ್ರಹ್ಮನ ಸ್ಥಿತಿಯು ಪುಣ್ಯತಮವಾದುದು. ಸಾತ್ವಿಕವಾದ ಈ ಸ್ಥಿತಿಯನ್ನು ವಿಧ್ಯನೀಕ ಸುರಾನೀಕಗಳೆಂಬ ಎರಡು ಅನೀಕಗಳೂ ಕೂಡ ಪಡೆಯುವುವು.

೫೧. ಯಾವವಿಧ ಸೃಷ್ಟಿಗಳೂ ಒಂದೂ ಸುತರಾಂ ಇಲ್ಲದ (ನಿಷ್ಪ್ರಪಂಚ) ಚಿದ್ರೂಪ ಆಕಾಶದಲ್ಲಿ ಆದ್ಯಕೂಟಸ್ಥ ಬ್ರಹ್ಮನ ಮನಸ್ಸಿನಿಂದ ಕಲ್ಪಿತವಾದ ರೂಪವೇ ಮೊದಲನೆಯದಾದ ವಿಧ್ಯನೀಕವು ಅದು ಸ್ವತಸ್ಸಿದ್ಧ ಜ್ಞಾನೈಶ್ವರ್ಯದಿಂದ ಬ್ರಹ್ಮಭಾವವನ್ನು ಸುಲಭವಾಗಿ ಅನುಭವಿಸುವುದು.

ಸರ್ಗೇ ಸ್ಥಿತಿಂ ಗತೇ ತ್ವನ್ಯಾ ಯೋದೇತಿ ಕಲ್ಪನಾ ಪರಾ । ॥ ೫೨ ॥
ಸಾ ವ್ಯೋಮಾನಿಲಮಾಶ್ರಿತ್ಯ ಪ್ರವಿಶ್ಯೌಷಧಿಪಲ್ಲವಾನ್ ।

ಕಾಚಿತ್ಸುರತ್ವಮಾಯಾತಿ ಕಾಚಿದಾಯಾತಿ ಯಕ್ಷತಾಂ ।
ಉದೇತಿ ಪ್ರಥಮಂ ಸೈಷಾ ಬ್ರಹ್ಮತ್ವಂ ಸಮವಾಶ್ನುತೇ ॥ ೫೩ ॥

ಯಾ ಯತ್ತತ್ವಂ ಸಮನ್ವೇತಿ ಸಾ ತದೇವಾಶು ಜಾಯತೇ ॥ ೫೪ ॥

ಜಾತಾ ಸಂಸರ್ಗವಶತಸ್ತಸ್ಮಿನ್ನೇವ ಚ ಜನ್ಮನಿ ।
ಬಧ್ಯತೇ ಮುಚ್ಯತೇ ವಾಸೌ ಸ್ವಯಮುನ್ಮಾರಭೇದತಃ ॥ ೫೫ ॥

೫೨-೫೩. ಪೂರ್ವೋಕ್ತಪ್ರಕಾರವಾಗಿ ಮರೀಚ್ಯಾದಿ ಪ್ರಜಾಪತಿಗಳ ಮತ್ತು ಓಷಧಿವನಸ್ಪತ್ಯಾದಿಗಳ ಸೃಷ್ಟಿಯು ನಿಯತವಾದ ಸ್ಥಿತಿಯಲ್ಲಿ ನೆಲೆಸಿದ ತರುವಾಯ ಮೊದಲನೆಯದಕ್ಕಿಂತಲೂ ನ್ಯೂನವಾದ ಬೇರೆ ಮತ್ತೊಂದು ಕಲ್ಪನೆಯು ಆ ಚತುರ್ಮುಖ ಬ್ರಹ್ಮನ ಮನಸ್ಸಿನಲ್ಲಿ ಉದಯಿಸುವುದು. ಅದು ಪ್ರಥಮತಃ ಚಂದ್ರಕಲಾತ್ಮಕವಾಗಿ ಆಕಾಶವನ್ನೂ ವಾಯು ಮಂಡಲವನ್ನೂ ಆಶ್ರಯಿಸಿ ಆಮೇಲೆ ಲತೆಗಳಲ್ಲಿಯೂ ಪಲ್ಲವಗಳಲ್ಲಿಯೂ ಪ್ರವೇಶ ಮಾಡುವುದು. ಅನಂತರ ಸೋಮಲತೆ, ತುಪ್ಪ, ಹಾಲುಗಳ ರೂಪದಿಂದ ಅಗ್ನಿಯಲ್ಲಿ ಹೋಮಮಾಡಲ್ಪಟ್ಟು ಸೂರ್ಯಮಂಡಲದಲ್ಲಿ ಅಮೃತವಾಗಿ ಪರಿಣಮಿಸಿ ಪ್ರಜಾಪತಿಗಳಿಂದ ಉಪಯೋಗಿಸಲ್ಪಟ್ಟು ಅವರ ರೇತೋರೂಪದಿಂದ ಪರಿಣಮಿಸುವುದು. ಬಳಿಕ, ಆ ರೇತಸ್ಸಿನ ಮೂಲಕ ಒಂದು ಸಂಕಲ್ಪವು ಇಂದ್ರಾದಿ ದೇವತಾ ರೂಪವನ್ನೂ ಮತ್ತೊಂದು ಯಕ್ಷ ಗಂಧರ್ವಾದಿ ದೇವಯೋನಿಗಳ ರೂಪವನ್ನೂ ಪಡೆಯುವುದು. ಇದೇ ಮಾಧ್ಯಮಿಕವಾದ ಸುರಾನೀಕವು. ಇದು ಸಾತ್ವಿಕವಾಗಿರುವ ಕಾರಣ ಮನುಷ್ಯಾದಿಗಳಿಗಿಂತ ಮುಂಚೆಯೇ, ಮರೀಚ್ಯಾದಿ ಪ್ರಜಾ ಪತಿಗಳ ಅನುಗ್ರಹ, ಉಪದೇಶಗಳಿಂದ ಜ್ಞಾನೈಶ್ವರ್ಯ ಸಂಪದ್ಯುಕ್ತವಾಗಿ ಉದಯಿಸುವುದು. ಹಾಗೆಯೇ ಬ್ರಹ್ಮಾತ್ಮ ಭಾವವನ್ನು ಚೆನ್ನಾಗಿ ಅನುಭವಿಸಿ ಪಡೆಯುವುದು.

೫೪-೫೫. ದೇವತೆಗಳಲ್ಲಾಗಲಿ, ಮಾನವರಲ್ಲಾಗಲಿ ಜನ್ಮವನ್ನು ಪಡೆದ ಯಾವ ವ್ಯಕ್ತಿಯು ಭೋಗಲಂಪಟವಾದುದಾಗಲೀ ಅಥವಾ ಜ್ಞಾನ ವೈರಾಗ್ಯ ಸಂಪ

ಇತ್ಥಂ ಗತಾ ಸ್ಥಿತಿರಿಯಂ ಕಿಲ ರಾಮಭದ್ರ ।
ಸೃಷ್ಟಿಃ ಸ್ಫುಟಪ್ರಕಟಸಂಕಟಕರ್ಮಲಬ್ಧಾ ।
ಆವಿರ್ಭವೇದ್ವಿವಿಧವೇಗವಿಹಾರಭಾರ
ಸಂರಂಭಗರ್ಭವಿಧೃತಾ ಕಲನಾಪದೇ ಸಾ ॥ ೫೬ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ ಕಮಲಜವ್ಯವಹಾರವರ್ಣನಂ ನಾಮ ಏಕೋನಷಷ್ಟಿತಮಃ ಸರ್ಗಃ

ನ್ನವಾದುದಾಗಲೀ ಯಾವ ವಿಧವಾದ ಸತ್ವವನ್ನು (ಸ್ವಾಭಾವಿಕ ಗುಣವಿಶೇಷ ಅಥವಾ ಸಂಸ್ಕಾರ) ಅನುಸರಿಸುವುದೋ, ಆ ವ್ಯಕ್ತಿಯು ತನ್ನ ಸತ್ವಾನುಗುಣವಾಗಿ ಅದರ ಸಂಸರ್ಗದಿಂದ ಬಲು ಬೇಗನೆ ಅದೇ ಗುಣಗಳುಳ್ಳದ್ದಾಗಿ ಆಗಿಬಿಡುವುದು. ಹೀಗೆ ತನ್ನ ಸತ್ವಸಂಸರ್ಗವಶದಿಂದಲೇ ಜನ್ಮವನ್ನು ಪಡೆಯುವ ಕಾರಣ ಅದು, ಆ ಜನ್ಮದಲ್ಲಿಯೇ ಭೋಗಲಂಪಟವಾದ ಸತ್ವಸಂಸರ್ಗದಿಂದ ತಾನೂ ಭೋಗಲಂಪಟವಾಗಿ ಸಂಸಾರಬಂಧಕ್ಕೆ ಸಿಕ್ಕಿಕೊಳ್ಳುವುದು. ಹಾಗಲ್ಲದೆ ಜ್ಞಾನ ವೈರಾಗ್ಯ ಸಂಪನ್ನವಾದ ಸತ್ವಸಂಸರ್ಗದಿಂದ ಕೂಡಿದರೆ, ತಾವೂ ಜ್ಞಾನ ವೈರಾಗ್ಯ ಸಂಪನ್ನವಾಗಿ ಮೋಕ್ಷವನ್ನೇ ಪಡೆಯುವುದು. ಹೀಗೆ ಬಂಧಮೋಕ್ಷಗಳು ಸತ್ವಸಂಸರ್ಗಾನುಸಾರಿಗಳಾಗಿರುವ ಕಾರಣ, ತೃತೀಯಾನೀಕಕ್ಕೆ ಸೇರಿದ ಮನುಷ್ಯಾದಿಗಳು ತಾವಾಗಿಯೇ ತಮ್ಮ ಮಹಾ ಪುರುಷ ಪ್ರಯತ್ನದಿಂದ ಮನಸ್ಸಿನ ಮತ್ತು ಇಂದ್ರಿಯಗಳ ನಿಗ್ರಹಕ್ಕೆ ಉಪಾಯಗಳಾದ ಸಾಧು ಸಮಾಗಮ ಸಚ್ಛಾಸ್ತ್ರ ಶ್ರವಣಾದಿ ಸತ್ಕರ್ಮಗಳನ್ನೂ ಫಲೋದಯ ಪರ್ಯಂತವೂ ಬೇಸರಗೊಳ್ಳದೆ ನಿರಂತರ ಅಭ್ಯಾಸ ಮಾಡಬೇಕು.

೫೬. ರಾಮಭದ್ರ, ಪ್ರಕಾಶ ಬಹುಳವಾದ (ಸ್ಫುಟ) ಉಪಾಸನಗಳು, ಸರ್ವಜನ ಪ್ರಸಿದ್ಧವಾದ ಯಜ್ಞಾದಿಗಳು, ಅನರ್ಥ ಫಲಪ್ರದಗಳಾದ ನಿಷಿದ್ಧ ಮಿಶ್ರಾದಿ ವಿವಿಧ ಕರ್ಮಗಳು. ಇತ್ಯಾದಿ ನಿಮಿತ್ತಗಳಿಂದ ಕ್ರಮ ಪ್ರಾಪ್ತವಾಗಿಯೂ, ಶೀಘ್ರವಾದ ವಿವಿಧ ಪ್ರಾರಬ್ಧ ಕರ್ಮಗಳ ವೇಗಗಳಿಂದಲೂ ಕ್ರೀಡಾ ಕೌತುಕಗಳಿಂದಲೂ (ವಿಹಾರ ವಿಶೇಷಗಳು) ಕ್ರೋಧ ಲೋಭ ಮೂಲಕವಾದ ನಾನಾ ವ್ಯವಹಾರಗಳಿಂದಲೂ ವಿಶೇಷವಾಗಿ ಬಲಗೊಂಡು ವೃದ್ಧಿ ಹೊಂದಿದುದಾಗಿಯೂ ಜಗತ್ಸೃಷ್ಟಿಯಲ್ಲಿ ಉನ್ಮುಖನಾದ ಚತುರ್ಮುಖನಲ್ಲಿ ಪೂರ್ವೋಕ್ತ ಸಂಕಲ್ಪ ಕಲ್ಪನೆಯಿಂದ ಮಾತ್ರವೇ ಸ್ಥಿತಿಯನ್ನೂ ಪಡೆದಿರುವ ಅನೀಕತ್ರಯ (ವಿಧಿ, ಸುರ, ನರ) ರೂಪವಾದ ಈ ಸೃಷ್ಟಿಯು ಆವಿರ್ಭವಿಸುವುದು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ಕಮಲಜವ್ಯವಹಾರವರ್ಣನ" ಎಂಬ ಐವತ್ತೊಂಬತ್ತನೆಯ ಸರ್ಗವು

ಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಅಸ್ಮಿನ್ಭಗವತಿ ಬ್ರಹ್ಮಣಿ ಚಪಲಂ ಪದಮಾಶ್ರಿತೇ ।
ಪಿತಾಮಹೇ ಮಹಾಬಾಹೋ ಕೃತಸರ್ಗವ್ಯವಸ್ಥಿತೌ ॥ ೧ ॥

ಜಗಜ್ಜೀರ್ಣಾರಘಟ್ಟೇಽಸ್ಮಿನ್ವಹತಿ ಸ್ವವ್ಯವಸ್ಥಯಾ ।
ವಿಸ್ರೇತಭೂತಘಟಯಾ ರಜ್ಜ್ವಾಜೀವಿತತೃಷ್ಣಯಾ ॥ ೨ ॥

ಬ್ರಹ್ಮೋತ್ಥೇಷು ಚ ಭೂತೇಷು ವಿಶತ್ಸು ಭವಪಂಜರಮ್ ।
ಆವರ್ತೇಷ್ವೀಶ್ವರವ್ಯೋಮ ಬಾಲಮಧ್ಯವಿವರ್ತಿಷು ॥ ೩ ॥

ಮನಃಸ್ಪಂದೇಷು ವಾತಾಂತಲೋಲಾಹತಕಣೇಷ್ವಿವ ।
ಅನಾರತಂ ವಿನಿರ್ಯಾಂತಿ ವಿಶಂತ್ಯನ್ಯೇ ತಥಾಭಿತಃ ॥ ೪ ॥

ರಾಮ ಬ್ರಹ್ಮಣಿ ಜೀವೌಘಾಸ್ತರಂಗಾ ಇವ ವಾರಿಧೌ ।
ಅನಾದ್ಯಂತಪದೋತ್ಪನ್ನಾಃ ಕಲನಾಪದ ಮಾಗತಾಃ ॥ ೫ ॥

ಅರವತ್ತನೆಯ ಸರ್ಗ

೧–೫. ಶ್ರೀ ವಸಿಷ್ಠನು ಹೇಳಿದನು—ಎಲೈ ಮಹಾಬಾಹುವಾದ ರಾಮ, ಪಿತಾಮಹನೆನ್ನಿಸಿರುವ ಭಗವಂತನಾದ ಈ ಬ್ರಹ್ಮನು (ಚತುರ್ಮುಖನು) ಸಮಾಧಿಯನ್ನು ಬಿಟ್ಟು ಬಹಿರ್ಮುಖನಾಗಿ ಜಗತ್ತುಗಳನ್ನು ಸೃಷ್ಟಿ ಮಾಡುವ ವ್ಯಾಪಾರದಲ್ಲಿ ನಿರತನಾಗಿರಲಾಗಿ, ಜೀರ್ಣವಾದ ಒಂದು ಘಟೀ ಯಂತ್ರವು (ಕಪಿಲೆ ಅಥವಾ ಏಕ) ಅನೇಕ ಘಟಗಳನ್ನು ಬಿಗಿದಿರುವ ಹಗ್ಗದ ಸಹಾಯದಿಂದ ಭಾವಿಯೊಳಗೆ ಆಳದಲ್ಲಿರುವ ನೀರನ್ನು ಪುನಃ ಪುನಃ ಮೇಲಕ್ಕೆ ಎತ್ತಿ ಸುರಿಯುವ ಉದ್ದೇಶದಿಂದ ಗೊತ್ತಾದ ಒಂದು ಕ್ರಮದಲ್ಲಿ ಕೆಳಗಿನಿಂದ ಮೇಲಕ್ಕೂ ಮೇಲಿನಿಂದ ಕೆಳಕ್ಕೂ ಸುತ್ತುತ್ತಲಿರುವಂತೆಯೇ ಈ ಜಗತ್ತು ಪ್ರತಿಕ್ಷಣದಲ್ಲಿಯೂ ಸಾಯುತ್ತಿರುವ ಅನೇಕಾನೇಕ ಪ್ರಾಣಿಸಮೂಹಗಳುಳ್ಳದ್ದಾಗಿ ಪುನಃ ದೇಹಾಂತರಗಳನ್ನು ಪಡೆದು ಜೀವಿಸಬೇಕೆಂಬ ಆಶೆ

ಭೂತಾಕಾಶಂ ವಿಶಂತ್ಯೇತೇ ಧೂಮಶ್ರೀರಿವ ಚಾಂಬುದಮ್ ।
ಏಕತಾಂ ಯಾಂತಿ ಜೀವೌಘಾ ಬ್ರಹ್ಮಣ್ಯಾಕಾಶಮಾರುತೈಃ ॥ ೬ ॥

ಯಿಂದ (ಹಗ್ಗದಂತಿರುವ) ಬಂಧಿಸಲ್ಪಟ್ಟು ಮೇಲಕ್ಕೂ ಕೆಳಕ್ಕೂ ಅವಿಶ್ರಾಂತವಾಗಿ ತನ್ನದಾದ ಒಂದು ವ್ಯವಸ್ಥೆಯಿಂದ ಸುತ್ತುತ್ತಿರಲಾಗಿ, ಬ್ರಹ್ಮನಿಂದ ಉತ್ಪನ್ನವಾದ ಸಕಲ ಭೂತಗಳೂ ಸಂಸಾರವೆಂಬ ಪಂಜರವನ್ನು ಪ್ರವೇಶಿಸುತ್ತಿರಲಾಗಿ, ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಬಲು ಹೆಚ್ಚಾಗಿ ಅಲುಗಾಡುತ್ತಿರುವ ಗರಿಕೆ ಹುಲ್ಲುಗಳ ಕೊನೆಯಲ್ಲಿ ಅಂಟಿಕೊಂಡಿರುವ ನೀರಿನ ಹನಿಗಳಂತೆ ಅತ್ಯಂತ ಚಪಲವಾದ ಇತರ ಮನಸ್ಸುಗಳು ಪ್ರವಾಹ ಮಧ್ಯದಲ್ಲಿರುವ ನೀರಿನ ಸುಳಿಗಳ ಹಾಗೆ ಆಕಾಶದ ಮಧ್ಯದೊಳಗೆ ಸದಾ ಸುತ್ತುತ್ತಿರಲಾಗಿ ಆದ್ಯಂತ ರಹಿತನಾದ ಈಶ್ವರನ ದೆಸೆಯಿಂದ ಆವಿರ್ಭವಿಸಿ ನಾಮರೂಪಗಳಿಂದ ವ್ಯವಹಾರಯೋಗ್ಯತೆಯನ್ನು ಪಡೆದ ಕೆಲವು ಪ್ರಾಣಿ ಸಮೂಹಗಳು, ಸಮುದ್ರದಲ್ಲಿ ಅಲೆಗಳಂತೆ ಸಂತತವಾಗಿ ನಾನಾ ಕಡೆಗಳಿಂದಲೂ ಹೊರಕ್ಕೆ ಹೊರಡುತ್ತಲಿರುವುವು. ಮತ್ತೆ ಇನ್ನೂ ಕೆಲವು ಜೀವಗಳು ಹಾಗೆಯೇ ವಿಶ್ರಾಂತಿಗೋಸ್ಕರ ಬ್ರಹ್ಮನೊಳಗೆಯೇ ಪ್ರವೇಶಮಾಡುತ್ತಲಿರುವುವು.

[ಈಶ್ವರವ್ಯೋಮಬಾಲ ಮಧ್ಯವರ್ತಿಷು ಎಂಬಲ್ಲಿ ಈಶ್ವರಸ್ಯ ಮಾಯಾ ಶಬಲಿ ಬ್ರಹ್ಮಣಃ ಬಾಲಃ ಪುತ್ರಭೂತಂ ಪ್ರಥಮಜಂ ಯತ್ವ್ಯೋಮ ತನ್ಮಧ್ಯೇ ಎಂದು ತಾತ್ಪರ್ಯ ಪ್ರಕಾಶದ ವ್ಯಾಖ್ಯಾನ ತಸ್ಮಾದ್ವಾ ಏತಸ್ಮಾತ್ ಆತ್ಮನ ಆಕಾಶಸ್ಸಂಭೂತಃ ಆಕಾಶಾತ್ ವಾಯುಃ ಇತ್ಯಾದಿ ತೈತ್ತಿರೀಯ ಶ್ರುತಿಯು ಆಕಾಶದ ಮೊದಲನೆಯ ಸೃಷ್ಟಿಯೆಂಬುದರಲ್ಲಿ ಪ್ರಮಾಣವು–ಮತ್ತು ಅನಾದ್ಯಂತ ಪದೋಕ್ತನ್ನಾಃ ಅನಾದ್ಯಂತಪದ–ಆದ್ಯಂತ ರಹಿತನಾದ ಬ್ರಹ್ಮನೆಂದು ಅರ್ಥ. ಕಲನಾಪದ ಮಾಗತಾಃ ನಾಮರೂಪಗಳಿಂದ ವ್ಯವಹಾರ ಯೋಗ್ಯತೆಯನ್ನೂ ಪಡೆದವ ಎಂದರ್ಥ.]

೬. ಈ ಜೀವ ಸಮೂಹಗಳು ಮೇಘಮಂಡಲವನ್ನು ಧೂಮಶ್ರೇಣಿಯು ಪ್ರವೇಶಿಸುವಂತೆ ಪ್ರಥಮತಃ ಮಹಾಭೂತಾಕಾಶವನ್ನು ಪ್ರವೇಶಮಾಡುವುವು. ಅನಂತರ ಬ್ರಹ್ಮನಲ್ಲಿ ಅಧ್ಯಸ್ತವಾದ ಆಕಾಶಮಾರುತಗಳ ಸಹಿತ ಹಾಲು ನೀರುಗಳಂತೆ (ಕ್ಷೀರೋದಕಗಳು ಬೆರೆದುಕೊಳ್ಳುವ ರೀತಿಯಲ್ಲಿ) ಬೆರೆತು ಐಕ್ಯವನ್ನು ಹೊಂದುವುವು.

ದಿನಂ ತನ್ಮಾತ್ರವಾತೇನ ತತ್ಪ್ರಾಣಾತ್ಮತಯಾ ಯಥಾ ।
ಆಕ್ರಮ್ಯಂತೇ ಪ್ರಚಂಡೇನ ದೈತ್ಯೌಘೇನಾಮರಾ ಇವ ॥ ೭ ॥

ಭೂತಪ್ರಾಣಾನಿಲಂ ತೇನ ಗಂಧವಾಹೇನ ತೇನ ಚ ।
ನಿವಿಶಂತಿ ಶರೀರೇಷು ಜೀವಾ ಗಚ್ಛಂತಿ ವೀರ್ಯತಾಂ ॥ ೮ ॥

ತತೋ ಜಗತಿ ಜಾಯಂತೇ ಭವಂತಿ ಪ್ರಾಣಿನೋಽಸ್ಫುಟಾಃ ।
ಅಸ್ಯಾ ಧೂಮಾದಿಮಾ ಜಾತಾ ರಾಮ ಜೀವಪರಂಪರಾ ॥ ೯ ॥

---

೭. ಅನಂತರ, ಕ್ರಮೇಣ ತೇಜಸ್ಸು, ಜಲ (ಅಪ್) ಪೃಥಿವಿಗಳು ಉತ್ಪನ್ನವಾಗಲಾಗಿ ಈ ಜೀವಸಂಘಗಳು ಪ್ರಕಾಶವನ್ನು ಹೊಂದಿ (ದಿನಂ–ಪ್ರಕಾಶವನ್ನು) ಅತ್ಯಂತ ಕ್ರೂರಕರ್ಮಿಗಳಾದ ರಾಕ್ಷಸರ ಗುಂಪುಗಳಿಂದ ದೇವತೆಗಳು ಆಕ್ರಮಿಸಲ್ಪಡುವಂತೆ ಶಬ್ದಸ್ಪರ್ಶ ರೂಪರಸಗಂಧಗಳೆಂಬ ಪಂಚತನ್ಮಾತ್ರಗಳಿಂದ ಸಹಿತವಾದ ವಾಯುವಿನಿಂದಲೂ, ಇವೆಲ್ಲದರ ಉಪಭೋಗಹೇತುವಾಗಿ (ಮುಖ್ಯಾಮುಖ್ಯಗಳೆಂದು ಎರಡು ವಿಧವಾಗಿರುವ) ಪ್ರಾಣಗಳಿಂದಲೂ ಸ್ವಾಧೀನಪಡಿಸಿಕೊಳ್ಳಲ್ಪಡುವುವು.

೮–೯. ಹೀಗೆ ಈ ಜೀವಗಳು ಲಿಂಗದೇಹರೂಪವನ್ನು ಹೊಂದಿ ಭೂತಪ್ರಾಣಾತ್ಮಭಾವದಿಂದಲೂ ಭೂತತನ್ಮಾತ್ರಸಹಿತವಾದ ವಾಯುವಿನಿಂದಲೂ ಕೂಡಿಕೊಂಡು ಅನ್ನೋದಕಾದಿಗಳ ಮೂಲಕ ಚತುರ್ವಿಧ ಭೂತಗ್ರಾಮಗಳ ಪ್ರಾಣವಾಯುವನ್ನು ಸೇರಿ ನಾನಾ ಶರೀರಗಳಲ್ಲಿ ಆಶ್ರಯವನ್ನು ಮಾಡಿಕೊಂಡು ಸೇರಿಕೊಳ್ಳುವುವು. ಅನಂತರ ರೇತಸ್ಸಿನ ಭಾವವನ್ನು ಹೊಂದುವುವು. ಆ ಮೇಲೆ ಜ್ಞಾನೈಶ್ವರ್ಯಾದಿಗಳ ಅಭಿವ್ಯಕ್ತಿಯಿಲ್ಲದವುಗಳಾಗಿ ನಾನಾವಿಧ ಪ್ರಾಣಿಗಳ ರೂಪದಿಂದ ಈ ಜಗತ್ತಿನಲ್ಲಿ ಜನಿಸುವುವು.

[ಜರಾಯುಜ (ಮನುಷ್ಯಾದಿ), ಅಂಡಜ (ಹಾವು ಹಕ್ಕಿಗಳು), ಸ್ವೇದಜ (ತಿಗಣೆ ಮೊದಲಾದುವು) ಉದ್ಭಿಜ್ಜ (ಕಾಳು ಕಡ್ಡಿ ಮರ ಮೊದಲಾದುವು) ಇವು ನಾಲ್ಕುಬಗೆಯ ಭೂತಗ್ರಾಮಗಳು.) (ಇದುವರೆವಿಗೆ ಹೇಳಿರುವುದು ಮೂರನೆಯದಾದ ಮಾನವಾನೀಕದ ಸೃಷ್ಟಿ ಕ್ರಮ.)

ತನ್ಮಾತ್ರವತಿ ತಾವದ್ಭಿರಶೂನ್ಯೇಽಂಬರಕೋಟರೇ ।
ಉದೇತಿ ಯಾವದ್ಭಗವಾನಿಂದುರುದ್ದಾಮಮಂಡಲಃ ॥ ೧೦ ॥

ಕ್ಷೀರಾಂಬುಧಿನಿಭೌ ಲೋಲೈಃ ಪಾಂಡುವದ್ರಶ್ಮಿಭಿರ್ಜಗತ್ ।
ತತಸ್ತೇಷ್ವತಿರಮ್ಯೇಷು ಚಂದ್ರರಶ್ಮಿಷು ಸಂಪತತ್ ॥ ೧೧ ॥

ಕರೋತಿ ವಿಹಗೀ ಲೋಲಾ ವನೇ ಪ್ರೇಷ್ಯಾಂತರೇಷ್ವಿವ ।
ತೇಭ್ಯೋಽಪಿ ಸ್ವರಸೇನೈವ ಯಾಂತಿ ಪೀವರತಾಮಪಿ ॥ ೧೨ ॥

೧೦-೧೧. ಮತ್ತೊಂದಾದ ಜೀವಪರಂಪರೆಯು (ಸುರಾನೀಕವು), ಅಯ್ಯೋ ರಾತ್ರಿ, ಧೂಮವೇ ಮೊದಲಾದ ಮಾರ್ಗವನ್ನು ಪ್ರವೇಶ ಮಾಡಿರುವುದು. (ಹೇಗೆಂದರೆ ಇದೂ ಕೂಡ ಲಿಂಗದೇಹ ಪ್ರಾಪ್ತಿಪರ್ಯಂತವೂ ಪೂರ್ವೋಕ್ತ ಕ್ರಮದಲ್ಲಿಯೇ ಜನಿಸುವುದು. ಆ ಮೇಲೆ ಔಷಧಿ ವನಸ್ಪತಿಗಳಲ್ಲಿ ಪ್ರವೇಶಿಸಿ, ಪಶ್ವಾದಿಗಳ ಉದರವನ್ನು ಹೊಕ್ಕು, ಹಾಲು ತುಪ್ಪ ಮುಂತಾದ ಹವಿಸ್ಸುಗಳ ರೂಪದಿಂದ ಪರಿಣಾಮ ಹೊಂದಿ ಯಜ್ಞೇಶ್ವರನಲ್ಲಿ ಆಹುತಿ ಕೊಡಲ್ಪಟ್ಟುದಾಗಿ ಹೊಗೆಯ ಮೂಲಕ (ಧೂಮದ್ವಾರಾ) ಸೂರ್ಯಮಂಡಲವನ್ನು ಸೇರಿ ಸೂರ್ಯಕಿರಣಗಳ ಮೂಲಕ ಚಂದ್ರಮಂಡಲವನ್ನು ಪ್ರವೇಶಿಸುವುದು.) ಅದೂ ಕೂಡ ಚಂದ್ರನ ಷೋಡಶಕಲಾತ್ಮಕವಾಗಿ ಕಲ್ಪವೃಕ್ಷಗಳ ಫಲಗಳಲ್ಲಿ ರಸಭಾವದಿಂದ ಪ್ರವೇಶಿಸಿ ಅದನ್ನು ಉಪಭೋಗಿಸುವ ಸ್ವರ್ಗವಾಸಿಗಳ ವೀರ್ಯ (ರೇತಸ್ಸು) ಭಾವದಿಂದ ಪರಿಣಾಮಹೊಂದಿ ದೇವತೆಗಳ ಗರ್ಭದಲ್ಲಿ ಜನಿಸುವುದು. ಹೀಗೆ (ಈ ಸುರಾನೀಕ ವರ್ಗಕ್ಕೆ ಸೇರಿದ) ಜೀವಪರಂಪರೆಯು ಭಗವಂತನಾದ ಪೂರ್ಣ ಚಂದ್ರನು ಎಷ್ಟು ಅಸಂಖ್ಯಾಕ ಕಿರಣಗಳಿಂದ ಜಗತ್ತನ್ನು ಬೆಳಗುತ್ತಾ ಉದಯಿಸುವನೋ ಅಷ್ಟೇ ಅಸಂಖ್ಯಾಕವಾದ ಅತಿ ಚಂಚಲವಾದ ಬೆಳ್ಳಗಿರುವ ಕಿರಣಗಳಿಂದ ಪರಿಪೂರ್ಣ ವಾಗಿಯೂ ಕ್ಷೀರಸಮುದ್ರಕ್ಕೆ ಪ್ರತಿನಿಧಿಯಾಗಿಯೂ ಪೂರ್ವೋಕ್ತ ತನ್ಮಾತ್ರರೂಪ ಲಿಂಗದೇಹವುಳ್ಳದ್ದಾಗಿಯೂ ಇರುವ ಆಕಾಶಮಂಡಲದಲ್ಲಿದ್ದುಕೊಂಡಿರುವುದು.

೧೨. ಅನಂತರ, ಅತ್ಯಂತ ರಮಣೀಯಗಳಾದ ಆ ಚಂದ್ರಕಿರಣಗಳು ನಂದನ ಚೈತ್ರರಥಾದಿ ಉದ್ಯಾನವನಗಳಲ್ಲಿ ಪ್ರಸರಿಸಲಾಗಿ (ಈ ಸುರಾನೀಕ) ಜೀವ ಸಮುದಾಯವೂ ಕೂಡ ಆ ಚಂದ್ರಕಿರಣಗಳನ್ನು ಅನುಸರಿಸಿಕೊಂಡೇ ಪ್ರಸರಿಸುತ್ತಾ ಒಬ್ಬ ದಾಸಿಯು ಮನೆಯೊಳಗಿನ ಕೆಲಸಗಳಲ್ಲಿ ನಿರತಳಾಗಿ ಅಲ್ಲಿಂದಿಲ್ಲಿಗೆ ಓಡಾಡು ತ್ತಿರುವಂತೆ ಅಲ್ಲಿ ಚಲಿಸುತ್ತಾ ಹೆಣ್ಣು ಹಕ್ಕಿಯಂತೆ ಆ ವನಗಳಲ್ಲಿ ತಾನೂ ಪ್ರವೇಶ ಮಾಡುವುದು. ತರುವಾಯ ಆ ಚಂದ್ರಕಿರಣಗಳ ಮತ್ತು ಸೂರ್ಯಕಿರಣಗಳ

ಪಲೇಷು ತೇಷು ಬಧ್ನಾತಿ ಪದವಿಂದುಕರಾತ್ ಕ್ಷತಾ ।
ಜೀವಾಲೀ ಕ್ಷೀರಪೂರ್ಣೇಷು ಮಾತುಃ ಸ್ತನಭರೇಷ್ವಿವ ॥ ೧೩ ॥

ತಾಃ ಫಲಾವಲಯಃ ಪಕ್ವಾ ಭವಿಷ್ಯಂತಿ ಮರೀಚಿಭಿಃ ।
ತೇಷ್ವೇವ ವೀರ್ಯತಾಮಾಗತ್ಯ ತಿಷ್ಠಂತ್ಯಪ್ರಾಪ್ತಬೋಧಿತಾಃ ॥ ೧೪ ॥

ಪ್ರಸುಪ್ತವಾಸನಾಜಾಲಜೀವತಾಗರ್ಭಪಂಜರಮ್ ।
ಅಧಿತಿಷ್ಠತಿ ಬೀಜಶ್ರೀಃ ಸುಪ್ತಪತ್ರಾ ಯಥಾ ವಟಮ್ ॥ ೧೫ ॥

ಸಹಾಯದಿಂದ, ಆ ಉದ್ಯಾನಗಳಲ್ಲಿರುವ ಬಗೆಬಗೆಯಾದ ಫಲಗಳು ಕ್ರಮವಾಗಿ ವೃದ್ಧಿಹೊಂದಿ ದೊಡ್ಡವಾಗುತ್ತಾ (ಪಕ್ವವಾಗುತ್ತಾ) ಮಾಧುರ್ಯವನ್ನು ಪಡೆಯುವುವು.

೧೩. ಹೀಗೆ ರಸಪೂರ್ಣಗಳಾದ ಆ ಉದ್ಯಾನಗಳಲ್ಲಿರುವ ಫಲಗಳಲ್ಲಿ ಪೂರ್ವೋಕ್ತ ಜೀವ ಸಮುದಾಯವು ಚಂದ್ರಕಿರಣದಿಂದ ವಿಭಕ್ತವಾಗಿ (ಬೇರ್ಪಡಿಸಲ್ಪಟ್ಟು) ಸ್ತನ್ಯಪಾನಮಾಡುವ ಶಿಶುವು ಕ್ಷೀರದಿಂದ ಪರಿಪೂರ್ಣಗಳಾದ ತನ್ನ ತಾಯಿಯ ಸ್ತನಗಳನ್ನು ಚಲಿಸದೆ ಹಿಡಿದುಕೊಳ್ಳುವಂತೆ ನೆಲೆಯಾಗಿ ನಿಲ್ಲುವುದು. (ಆಶ್ರಯವನ್ನು ಪಡೆಯುವುದು.)

೧೪. ಕಾಲಕ್ರಮದಲ್ಲಿ ಆ ಫಲಸಮೂಹಗಳು ಸೂರ್ಯಕಿರಣಗಳ ಸಂಸರ್ಗದಿಂದ ಪರಿಪಕ್ವಗಳಾಗಿರುವುವು. ಆಗ ಈ ಜೀವರಾಶಿಗಳು ಆ ಹಣ್ಣುಗಳಲ್ಲಿಯೇ (ಅವುಗಳನ್ನು ತಿಂದ ಅದಿತಿ ಕಶ್ಯಪಾದಿಗಳ) ರೇತೋರೂಪವನ್ನು ಪಡೆದು (ಮೂರ್ಛೆಗೊಂಡವರ ಹಾಗೆ) ಅಪ್ರಬುದ್ಧ ಸ್ಥಿತಿಯಲ್ಲಿ ಇರುವುವು.

೧೫. ಚಿಗುರು, ಎಲೆ, ಕೊಂಬೆ ಮುಂತಾದುವೊಂದೂ ಹೊರಗೆ ಕಾಣದೆ ಇರುವ ಒಂದು ಆಲದ ಬೀಜವು (ವಟಬೀಜ) ಪತ್ರಪುಷ್ಪ ಫಲಾದಿಗಳಿಂದ ಸಮೃದ್ಧವಾದ ಒಂದು ಆಲದ ಮರವನ್ನು ಹೇಗೆ ಒಳಗೊಂಡಿರುವುದೋ ಅದರಂತೆಯೇ ಈ ಜೀವ ಸಮುದಾಯವು ಪ್ರಶಾಂತವಾದ (ಅಡಗಿಕೊಂಡಿರುವ) ವಾಸನಾಜಾಲವುಳ್ಳದ್ದಾಗಿ ನಾನಾ ಮಾತೃಗರ್ಭ ಪಂಜರಗಳನ್ನು ಆಶ್ರಯಿಸಿಕೊಂಡಿರುವುದು.

ಯಥಾ ಕಾಷ್ಠೇ ಸ್ಥಿತಶ್ಚಾಗ್ನಿಃ ಯಥಾ ಮೃದಿ ಘಟಾಃ ಸ್ಥಿತಾಃ ।
ಅನೇಕಕ್ರಮಯೋಗೇನ ಪರಾಗತ್ಯ ಮಹೇಶ್ವರಾತ್ ॥ ೧೬ ॥

ಅದೃಷ್ಟಾನ್ಯಶರೀರಶ್ರೀಃ ಕ್ರಮತೇ ಯೋ ನ ಚೋದತಿ ।
ಸ ಹಿ ಸತ್ಯೈವ ಜಾತಿಃ ಸ್ಯಾದುದಾರವ್ಯವಹಾರವಾ ॥ ೧೭ ॥

---

೧೬. ಮಾತೃಗರ್ಭದಲ್ಲಿ ಮಾತ್ರವೇ ಅಲ್ಲದೆ, ಈ ಅಪ್ರಬುದ್ಧ ಜೀವ ಸಮುದಾಯವು ಪ್ರಳಯ ಕಾಲದಲ್ಲಿ ಉಪಾಧಿನಾಶವಾಗಲು ಪರಮಾತ್ಮನ ದೆಸೆಯಿಂದ ಪ್ರಾಪ್ತವಾದ ಅವ್ಯಕ್ತದಿಂದ ಆವಿರ್ಭವಿಸಿ ಆಕಾಶಾದಿಭಾವವನ್ನು ಹೊಂದುವಾಗಲೂ ಲಿಂಗದೇಹವು ಆರಂಭವಾಗುವ ಸಮಯದಲ್ಲಿ ಚಂದ್ರಕಿರಣಗಳಲ್ಲಿ ಪ್ರವೇಶ ಮಾಡುವಾಗಲೂ ಕೂಡ ಅನೇಕ ಕ್ರಮಯೋಗದಿಂದ ಪ್ರವೃತ್ತಿಯುಂಟಾಗುವ ಕಾರಣ ಕಾಷ್ಠದೊಳಗೆ ಅಗ್ನಿಯು ಅಡಗಿರುವಂತೆಯೂ ಮೃತ್ಪಿಂಡದಲ್ಲಿ ಘಟಾದಿಗಳು ಅಭಿವ್ಯಕ್ತವಾಗದೆ ಇರುವಂತೆಯೂ ಹಾಗೆಯೇ ಪ್ರಕಟವಾಗದೆ ಮರೆಯಾಗಿ ಇದ್ದೇ ಇರುವುದು.

೧೭. ಯಾವ ಜೀವನು ಹಿಂದಣ ಜನ್ಮದಲ್ಲಿ ಪತ್ನೀಪುತ್ರಾದಿಗಳ ಶರೀರಗಳನ್ನೇ ಕಾಣದೆ ಸಕಲ ವ್ಯವಹಾರಗಳಲ್ಲಿಯೂ ಅತ್ಯಂತ ವಿರಕ್ತನಾಗಿದ್ದುಕೊಂಡು ಮರಣ ಕಾಲ ಪರ್ಯಂತವೂ ತನ್ನ ಜೀವಿತವನ್ನು ಸನ್ಮಾರ್ಗದಲ್ಲಿ ಕಳೆಯುವನೋ ಮತ್ತು ಯಾವನು ರಾಗದ್ವೇಷಾದಿಗಳಿಂದಲೂ ಕರ್ಮಕಾಂಡಾದಿ ನಾನಾ ಶಾಸ್ತ್ರಗಳಿಂದಲೂ ಐಹಿಕಾ ಮುಷ್ಮಿಕ ಭೋಗ ಸಾಧನಗಳಿಂದ ಲೌಕಿಕ ವೈದಿಕ ಕರ್ಮಗಳಲ್ಲಿ ಪ್ರಚೋದಿತನಾದರೂ ಕೂಡ ಪ್ರವರ್ತಿಸದೆಯೇ ಇರುವನೋ ಅಂತಹ ಧೀರನಾದ ಮಹಾನುಭಾವನು ಪೂರ್ವೋಕ್ತಕ್ರಮದಿಂದ ದೇವಗರ್ಭ (ದೇವಯೋನಿ)ಯಲ್ಲಿ ಜನಿಸುವವನಾದರೂ (ಪೂರ್ವ ಸಂಸ್ಕಾರವಶದಿಂದ) ಅತಿ ಪ್ರಶಸ್ತವಾದ ಕೇವಲ ಶುದ್ಧ ಸಾತ್ತ್ವಿಕ ಜನ್ಮವುಳ್ಳವನಾಗಿ ಆ ಜನ್ಮದಲ್ಲಿಯೇ ಪರಮಾರ್ಥವಾದ ಆತ್ಮತತ್ತ್ವ ಜ್ಞಾನವನ್ನು ಪಡೆದು ಜೀವನ್ಮುಕ್ತೋಚಿತವಾದ ಉದಾರವಾದ ಸಾಧು ವ್ಯವಹಾರವುಳ್ಳವನಾಗುವನು. ಹೀಗೆ ಗರ್ಭದಲ್ಲಿ ಪ್ರಾಪ್ತರಾದ ಜೀವರುಗಳಿಗೆ ಆ ಜನ್ಮದಲ್ಲಿ ನಿಮಿತ್ತ ಭೇದದಿಂದ ಅಸಾಧಾರಣ ವಿಶೇಷವುಂಟಾಗುವುದು.

ತೇ ನೈವ ಮೋಕ್ಷಭಾಗೀ ಚೇಜ್ಜನ್ಮನಾ ಸ ತು ಸಾತ್ವಿಕಃ ।
ಅಥೈತಾಂ ಯೋನಿಮಾಸಾದ್ಯ ಕೃತ್ಯಾಂ ಜನ್ಮಪರಂಪರಾಂ ।
ರಕ್ಷಾರ್ಥಂ ಪ್ರಾಪ್ತಜನ್ಮಾ ಚೇತ್ತಮೋ ರಾಜಸ ಸಾತ್ವಿಕಃ ॥ ೧೮ ॥

ಪಾಶ್ಚಾತ್ಯ ಜನ್ಮನಾ ಪುಂಸೋ ರಾಮ ವಕ್ಷ್ಯಾಮಿ ಚಾಧುನಾ
ಪ್ರಾಧಾನ್ಯೇನ ಯಥಾ ಯಾತಃ ಸಂಸಾರಮಿತಿ ಸಾತ್ವಿಕಃ । ॥ ೧೯ ॥

ಸ ಕದಾಚಿನ್ನ ಕಶ್ಚಿಚ್ಚ ಸಂಭವತ್ಯನಘಾಕೃತೇ ॥ ೨೦ ॥

ಸಂಭವಂತೀಹ ಪುರುಷಾ ರಾಮ ರಾಜಸಸಾತ್ವಿಕಾಃ ।
ಪ್ರವಿಚಾರ್ಯ ಸಮಾಯಾತಾ ಮಂತವ್ಯಂ ಚೇಹ ತದ್ಧಿಯಾ ॥ ೨೧ ॥

---

೧೮. ಆ ಜೀವನು ಅದೇ ಜನ್ಮದಲ್ಲಿಯೇ ಮೋಕ್ಷವನ್ನು ಹೊಂದಿಬಿಡುವ ಪಕ್ಷದಲ್ಲಿ ಅಗ ಅವನು ನಿಜವಾಗಿಯೂ ಪರಮ ಶುದ್ಧ ಸಾತ್ವಿಕನೆನ್ನಿಸುವನು. ಹಾಗಾದರೆ ಅವನು ಈ ದೇವಯೋನಿಯನ್ನು ಪಡೆದನಂತರ ಜನನಮರಣ ಪ್ರವಾಹ ರೂಪವಾದ ಈ ಸಂಸಾರವನ್ನು ಕತ್ತರಿಸಿಬಿಡುವುದಕ್ಕೆ ಶಕ್ಯವಾಗಿದ್ದರೂ ಕೂಡ ಭೋಗೇಚ್ಛೆಯಿಂದ ಕತ್ತರಿಸಿಹಾಕದೆ ತನ್ನ ಅಧಿಕಾರವನ್ನೂ (ಪದವಿಯನ್ನೂ) ಭೋಗಗಳನ್ನೂ ಸಂರಕ್ಷಿಸಿಕೊಳ್ಳುವುದಕ್ಕಾಗಿ ಮಾತ್ರವೇ ಜನ್ಮವನ್ನು ಪಡೆಯತಕ್ಕವನಾಗಿದ್ದ ಪಕ್ಷದಲ್ಲಿ ಅವನು ತಮೋಗುಣಯುತನಾದ ರಾಜಸನೋ ಅಥವಾ ಸಾತ್ವಿಕನೋ ಎನ್ನಿಸುವನು. (ಅಂದರೆ ತಾಮಸರಾಜಸ–ತಾಮಸ ಸಾತ್ವಿಕನೆನ್ನಿಸುವನು.)

೧೯–೨೦. ಅಯ್ಯ ದೋಷರಹಿತನಾದ ರಾಮ, ಮೊದಲನೆಯದಾದ ವಿಧ್ಯನೀಕದಲ್ಲಿ ಹುಟ್ಟುವ ಜೀವನಿಗೆ ಅವನು ಎತ್ತಿರುವ ಆ ಜನ್ಮವೇ ಕಟ್ಟಕೊನೆಯ (ಚರಮ) ಜನ್ಮವಾಗುವುದು. ಅವನು ಮನುಷ್ಯ ದೇವರುಗಳ ಅನೀಕಗಳಿಗಿಂತಲೂ ಹೆಚ್ಚು ಪ್ರಧಾನವಾದ ಪ್ರಾಜಾಪತ್ಯಾಧಿಕಾರದಿಂದ ಸಂಸಾರವನ್ನು ಪಡೆದಿರುವನು. ಇವನು ಪರಮಶುದ್ಧ ಸಾತ್ವಿಕನೆನ್ನಿಸುವನು. ಇವನು ಮುಕ್ತನಾಗುವ ವಿಧಾನವನ್ನು ನಿನಗೆ ನಾನು ಉಪದೇಶ ಮಾಡುವೆನು ಕೇಳು: ಈ ವಿಧ್ಯನೀಕದಲ್ಲಿ ಜನಿಸಿದವನು ಯಾವನೊಬ್ಬನೂ ಎಂದೆಂದಿಗೂ ಯಾವ ರೀತಿಯಲ್ಲೂ ಯಾವದೊಂದು ಯೋನಿಯಲ್ಲಿಯೂ ಸರ್ವಥಾ ಪುನಃ ಜನಿಸುವುದೇ ಇಲ್ಲವು.

೨೧. ರಾಮ, ರಜೋಗುಣ ಮಿಶ್ರಿತ ಸತ್ತ್ವಗುಣ ಸಂಪನ್ನರಾದ (ರಾಜಸ

ಪ್ರಾಧಾನ್ಯೇನ ಸಮಾಯಾತಾ ಯೇ ಯದಾ ಪದಮಾತ್ಮನಃ ।
ದುರ್ಲಭಾಃ ಪುರುಷಾ ರಾಮ ತೇ ಮಹಾಗುಣಶಾಲಿನಃ ॥ ೨೨ ॥

ಯೇ ಚಾನ್ಯೇ ವಿವಿಧಾ ಮೂಢಾ ಮೂಕಾಸ್ತಾಮಸಜಾತಯಃ ।
ತೇಷಾಂ ಸ್ಥಾವರತುಲ್ಯಾನಾಂ ಕಿಂಚ ರಾಮ ವಿಚಾರ್ಯತೇ ॥ ೨೩ ॥

ಸಾತ್ತ್ವಿಕ) ಪುರುಷರು ಯಾರೋ ಅವರೇ ಈ ಸಂಸಾರದಲ್ಲಿ ಪುನರ್ಜನ್ಮವನ್ನು ಪಡೆಯತಕ್ಕವರು. ಶುದ್ಧ ಸಾತ್ತ್ವಿಕರಾದ ಮಹಾತ್ಮರಾದರೋ ಪೂರ್ವಜನ್ಮಗಳಲ್ಲಿಯೂ ಕೂಡ ಶ್ರವಣಮನನಾದಿ ಉಪಾಯಗಳಿಂದ ಆತ್ಮತತ್ತ್ವವನ್ನು ಚೆನ್ನಾಗಿ ವಿಚಾರಮಾಡಿ ಜ್ಞಾನಿಗಳಾಗಿದ್ದುಕೊಂಡು ಈಗ ಪ್ರತಿಬಂಧಕ್ಷಯಾರ್ಥವಾಗಿ ಮಾತ್ರವೇ ಅದಕ್ಕೆ ಯೋಗ್ಯವಾದ ಶುದ್ಧ ಸಾತ್ತ್ವಿಕ ಜನ್ಮವನ್ನೇ ಪಡೆದಿರುವರು. ಈ ಜನ್ಮದಲ್ಲಿಯೂ ಕೂಡ ಅವರು ತಮ್ಮ ಬುದ್ಧಿಯಿಂದ ಸರ್ವದಾ (ನಿರಂತರವೂ) ಆತ್ಮತತ್ತ್ವವೊಂದನ್ನೇ ಮನನಮಾಡಿ ಪರಿಶೀಲಿಸಬೇಕಾಗಿರುವುದು. ಅದು ಕಾರಣ ಈ ಶುದ್ಧ ಸಾತ್ತ್ವಿಕರಾದ ವಿಧ್ಯನೀಕ ಜೀವಗಳು ಪುನರ್ಜನ್ಮವನ್ನು ಪಡೆಯುವುದೇ ಇಲ್ಲವು.

೨೨. ಅಯ್ಯ ರಾಮ, ಹೀಗೆ ಯಾವ ಸಾತ್ವಿಕರಾದ ವಿಧ್ಯನೀಕರು ನರಸುರಾನೀಕಗಳಿಗಿಂತ ಅತ್ಯಂತ ಪ್ರಶಸ್ತವಾದ ಸ್ಥಿತಿಯಿಂದ ಆತ್ಮಪದವನ್ನು (ಮುಕ್ತಿಯನ್ನು) ಪಡೆದಿರುವರೋ ಅಂತಹ ಮಹಾಗುಣಶಾಲಿಗಳಾದ ಮಹಾತ್ಮರು ಈ ಲೋಕದಲ್ಲಿ ಬಹಳ ವಿರಳ (ದುರ್ಲಭ)ರಾಗಿರುವರು.

೨೩. ಇದುವರೆಗೆ ವಿವರಿಸಿದ (ವಿಧಿ ಸುರ: ನರ) ಅನೀಕತ್ರಯಕ್ಕಿಂತಲೂ ಬೇರೆಯಾಗಿ ಕೇವಲ ತಮೋಗುಣಯುಕ್ತವಾದ (ತಾಮಸ ರಾಕ್ಷಸ ಪಿಶಾಚಾದಿಗಳೂ ತಿರ್ಯಗ್ ಜಂತುಗಳೂ ಇಂತಹ) ಬಗೆಬಗೆಯ ನಾನಾ ಜನ್ಮಗಳಲ್ಲಿರುವ ಇತರ ಜೀವ ಸಮುದಾಯಗಳು ಅತ್ಯಂತ ವಿಮೂಢರಾಗಿಯೂ ಮೂರ್ಖರಾಗಿಯೂ ಇರುವುದರಿಂದ ವೃಕ್ಷಪಾಷಾಣಾದಿ ಸ್ಥಾವರಗಳಿಗೆ ಸಮನಾಗಿರುವರು. ಇವರಿಗೆ ಜ್ಞಾನದಲ್ಲಿ ಅಧಿಕಾರ ಪ್ರಸಕ್ತಿಯೆಲ್ಲಿಂದ ಬಂದೀತು? ಇವರಿಗೆ ವಿಚಾರ ಯೋಗ್ಯತೆಯೇ ಸುತರಾಂ ಇಲ್ಲವಾದ ಕಾರಣ ಅವರ ವಿಷಯವನ್ನು ಇಲ್ಲಿ ನಾನು ಪ್ರಸ್ತಾಪಿಸುವುದಿಲ್ಲ.

ಕತಿಪಯಾ ನ ಗತಾ ಭವಭಾವನಾಂ
ನರಸುರಾಃ ಪ್ರಕೃತಕ್ರಮಜನ್ಮನಿ ।
ಅಹಮಿವ ಪ್ರವಿಚಾರಣ ಯೋಗ್ಯತಾ ।
ಮನುಗತೋ ನನು ರಾಜಸಸಾತ್ವಿಕಃ ॥ ೨೪ ॥

ಸ್ಥಿತಸ್ಯತೇ ಮಹಾಪದಾ ವಿಚಾರ್ಯ್ಯ, ಯ್ಯೈವ ಮಾಯತಾ ।
ವಿಚಾರಯ ತ್ವಮಂಜಸಾ ತದದ್ಯಜೇಹ ನ ದ್ವಯಂ ॥ ೨೫ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕೀಯೇ ಸ್ಥಿತಿಪ್ರಕರಣೇ
ವಿಚಾರಪುರುಷ ನಿರ್ಣಯ ಪ್ರಸಂಗೋಪದೇಶ ಜೀವಾವತಾರೋ ನಾಮ ಷಷ್ಟಿತಮಃ ಸರ್ಗಃ

---

೨೪. ಪ್ರಕೃತ, ಅನುಕ್ರಮದಿಂದ ಪ್ರಾಪ್ತವಾದ ಉತ್ತಮ ಜನ್ಮದಲ್ಲಿಯೂ ಕೂಡ ಅತ್ಯಲ್ಪ ಸಂಖ್ಯೆಯ ಕೆಲವು ಮನುಷ್ಯರೂ ಕೆಲವು ಸುರರೂ ಮಾತ್ರವೇ ಸಾಂಸಾರಿಕ ಭೋಗಗಳಲ್ಲಿ ಅಭಿರುಚಿಯನ್ನು ಇಡದೆ ವಿರಕ್ತರಾಗಿರುವರು. (ಹೀಗೆ ವೈರಾಗ್ಯವೆಂಬುದೇ ಲೋಕದಲ್ಲಿ ಅತ್ಯಂತ ದುರ್ಲಭವು. ಮನುಷ್ಯಾಣಾಂ ಸಹಸ್ರೇಷು ಕಶ್ಚಿತ್ ಯತ ಸಿದ್ಧಯೇ । ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ ॥ ಗೀತಾ ೭-೩. ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ । ಸ ಮಹಾತ್ಮಾ ಸುದುರ್ಲಭಃ ಗೀತಾ ೭-೧೯. ಇವುಗಳನ್ನು ಗಮನಿಸಿ) ಪ್ರಕೃತ ನಾನು ಹೇಗೆ ಈ ಜನ್ಮವನ್ನು ಪಡೆದಂದಿನಿಂದಲೂ ಶಮದಮಾದಿ ಸಕಲ ಸಾಧನ ಸಂಪತ್ತಿನಿಂದ ಸಂಪನ್ನನಾಗಿ ಪ್ರಕೃಷ್ಟವಾದ ಆತ್ಮತತ್ವ ವಿಚಾರ ಯೋಗ್ಯತೆಯುಳ್ಳವನಾಗಿದ್ದರೂ ಕೂಡ ನಿರಂತರ ಸಮಾಧಿ ಸುಖ ವಿಘ್ನಭೂತಗಳಾದ ನಿಮ್ಮ ಅರಮನೆಯ ಪೌರೋಹಿತ್ಯಾದ್ಯಧಿಕಾರ ಪ್ರಾರಬ್ಧ ವಶದಿಂದ ತಮೋಗುಣ ಮಿಶ್ರವಾದ ಸಾತ್ವಿಕನಾಗಿ (ರಾಜಸ ಸಾತ್ವಿಕನಾಗಿ) ರುವನೋ ಶುದ್ಧ ಸಾತ್ವಿಕನಾಗಿಲ್ಲವೋ ಹಾಗೆಯೇ ಪೂರ್ವೋಕ್ತ ಕೆಲವು ಮಂದಿ ನರರೂ ಸುರರೂ ಕೂಡ ರಾಜಸ ಸಾತ್ವಿಕರಾಗಿರುವರೇ ಹೊರತು ಶುದ್ಧ ಸತ್ವಗುಣ ಸಂಪನ್ನನಾದ ಮಹಾತ್ಮನು ಅತ್ಯಂತ ದುರ್ಲಭನಾಗಿರುವನೆಂದು ತಿಳಿ.

೨೫. ರಾಮಚಂದ್ರ, ನೀನೂ ನನ್ನಂತೆಯೇ ಜನ್ಮಪ್ರಭೃತಿ ಶಮದಮಾದಿಗಳಿಂದ ಸಂಪನ್ನನಾಗಿ ಸರ್ವತ್ರ ವಿರಕ್ತನಾಗಿಯೇ ಇದ್ದೀಯೆ. ಆದರೂ ನೀನು ಪರಮಪದವಾದ ಆತ್ಮತತ್ವವನ್ನೂ ಚೆನ್ನಾಗಿ ವಿಚಾರ ಮಾಡದೆ ಇರುವ

ನಿಮಿತ್ತದಿಂದಲೇ ನಿನಗೆ ಈಗ ಹೀಗೆ ಈ ಸಂಸಾರ ಭ್ರಾಂತಿಯು ಉದಯಿಸಿ ವೃದ್ಧಿಯಾಗಿ ನಿನ್ನನ್ನು ಆವರಿಸಿಕೊಂಡಿರುವುದು. ಆದುದರಿಂದ ನೀನು ಈಗಲೇ ತಡಮಾಡದೆ ನನ್ನ ಸಮ್ಮುಖದಲ್ಲಿಯೇ ನಿತ್ಯಾನಂದ ರೂಪವಾದ ಪರಮಾತ್ಮ ತತ್ವವನ್ನೇ ವಿಚಾರಮಾಡಿ ತಿಳಿಯುವವನಾಗು. ವಿಚಾರ ಮಾತ್ರದಿಂದ ಈ ಜನ್ಮದಲ್ಲಿಯೇ ನೀನೇ ಅದ್ವಿತೀಯಾತ್ಮನಾಗುವೆ ಎಂಬ ತತ್ವವನ್ನು ಅಪರೋಕ್ಷ ವಾಗಿಯೇ ಸಾಕ್ಷಾತ್ಕರಿಸುವೆ; (ಅವಿಚಾರದಿಂದಲೇ ನಿನಗೆ ಈ ವಿಧವಾದ ಸಂಸಾರ ಭ್ರಾಂತಿಯೆಂಬ ದುರಸ್ತರವಾದ ದೊಡ್ಡ ಆಪತ್ತು ಸಂಭವಿಸಿರುವುದು).

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ವಿಚಾರಪುರುಷ ನಿರ್ಣಯ ಪ್ರಸಂಗೋಪದೇಶ ಜೀವಾವತಾರ" ಎಂಬ ಅರವತ್ತನೆಯ ಸರ್ಗವು

ಏಕಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ—

ಯೇ ಹಿ ರಾಜಸಸಾತ್ವಿಕ್ಯಾ ಜಾತಾ ಭುವಿ ಮಹಾಗುಣಾಃ ।
ತೇ ನಿತ್ಯಮೇವ ಮುದಿತಾಃ ಪ್ರಕಾಶಾಃ ಖ ಇವೇಂದವಃ ॥ ೧ ॥

ನ ಖೇದಮಭಿಗಚ್ಛಂತಿ ವ್ಯೋಮಭಾಗೋ ಮಲಂ ಯಥಾ ।
ನಾಪದಾ ಮ್ಲಾನಿಮಾಯಾಂತಿ ನಿಶಿ ಹೇಮಾಂಬುಜಂಯಥಾ ॥ ೨ ॥

ನೇಹಂತೇ ಪ್ರಕೃತಾದನ್ಯತ್ತೇ ನಾನ್ಯತ್ಸ್ಥಾವರೋ ಯಥಾ ।
ರಮಂತೇ ಸ್ವಸದಾಚಾರೈಃ ಸ್ವಾರ್ಥೇಭ್ಯಃ ಪಾದಪಾ ಯಥಾ ॥ ೩ ॥

ಅರವತ್ತೊಂದನೆಯ ಸರ್ಗ

೧. ಶ್ರೀ ವಸಿಷ್ಠನು (ಶ್ರೀರಾಮನಿಗೆ) ಹೇಳಿದನು.–ಪ್ರಶಸ್ತ ಗುಣಶಾಲಿಗಳಾದ ಯಾವ ಮಹಾ ಪುರುಷರು ರಾಜಸ ಸಾತ್ವಿಕವಾದ ತಮ್ಮ ಪುರಾಕೃತ ಕರ್ಮೋಪಾಸನೆಯಿಂದ ವಿಚಾರ ಪರರಾಗಿ ಈ ಭೂಮಿಯಲ್ಲಿ ಜನಿಸುವರೋ ಅಂತಹವರು ಗಗನ ಮಂಡಲದಲ್ಲಿ ಚಂದ್ರನಂತೆ ಸರ್ವದಾ ತೇಜೋವಂತರಾಗಿಯೂ ನಿತ್ಯಾನಂದ ಮಯರಾಗಿಯೂ ವಿರಾಜಿಸುವರು.

೨. ಇಂತಹ ಮಹನೀಯರು ಅಂತರಿಕ್ಷ ಭಾಗವು ಮಾಲಿನ್ಯವನ್ನು ಎಂದೆಂದಿಗೂ ಹೊಂದದೆ ಇರುವಂತೆ ಮಾನಸಿಕವಾದ ದುಃಖವನ್ನು ಅನುಭವಿಸುವುದಿಲ್ಲ. ಸುವರ್ಣಮಯವಾದ ಕಮಲವು ರಾತ್ರಿಯಲ್ಲಿಯೂ ಕಳೆಗುಂದದೆ ವಿರಾಜಿಸುವಂತೆಯೇ ವಿಪತ್ತುಗಳಿಗೆ ಸಿಕ್ಕಿ ಶಾರೀರಕ ಕ್ಲೇಶಗಳಿಂದ ಕುಗ್ಗುವುದೂ ಇಲ್ಲ.

೩. ವೃಕ್ಷಪಾಷಾಣಾದಿ (ಮರ, ಕಲ್ಲು, ಮುಂತಾದ) ಸ್ಥಾವರಗಳು ಪ್ರಾರಬ್ಧ ಭೋಗಕ್ಕಿಂತಲೂ ಇತರವಾದ ಯಾವುದೊಂದನ್ನೂ ಅಪೇಕ್ಷಿಸದೆ ಇರುವಂತೆ,

ನಿತ್ಯಮಾಪೂರ್ಯತಾಂ ಯಾತಿ ಸುಧಾಯಾಮಿಂದುಸುಂದರೀ ।
ರಾಮ ರಾಜಸಸತ್ತ್ವಸ್ಯ ಮೋಕ್ಷಮಾಯಾತ್ಯಸೌ ಯಥಾ ॥ ೪ ॥

ಆಪದ್ಯಪಿ ನಮುಂಚಂತಿ ಶಶಿವಚ್ಛೀತತಾಮಿವ ।
ಪ್ರಕೃತ್ಯೈವ ವಿರಾಜಂತೇ ಮೈತ್ರ್ಯಾದಿಗುಣಕಾಂತಯಾ ।
ನವಸ್ತಬಕಭಾವಿನ್ಯಾ ಲತಯೇವ ವನದ್ರುಮಾಃ ॥ ೫ ॥

ಇವರೂ ತಮಗೆ ಪ್ರಕೃತವಾದ ಜ್ಞಾನ ಮತ್ತು ಅದರ ಸಾಧನೋಪಾಯಗಳನ್ನು ಮಾತ್ರ ಆಶಿಸುವರಲ್ಲದೆ ಬೇರೆ ಯಾವುದೊಂದು ಸಂಪತ್ತನ್ನೂ ಆಶಿಸುವುದಿಲ್ಲ. ಮತ್ತು ವೃಕ್ಷಗಳು ಲೋಕೋಪಕಾರಕಗಳಾದ ಪುಷ್ಪಫಲಾದಿಗಳಿಗಾಗಿ ಮಾತ್ರವೇ ಜೀವಿಸಿಕೊಂಡಿರುವಂತೆಯೇ ಇವರು ದೈಹಿಕವಾದ ಕ್ಷುತ್ಪಿಪಾಸೆಗಳ (ಹಸಿವು ಬಾಯಾರಿಕೆಗಳ) ನಿವಾರಣೆಗಾಗಿ ಯಥೋಚಿತವಾದ ಲೌಕಿಕ ವ್ಯವಹಾರಗಳಲ್ಲಿ ನಿರಭಿಸಂಧಿಯಿಂದ ವರ್ತಿಸಿದರೂ ತಮ್ಮ ಸದಾಚಾರಗಳಿಂದ ಸ್ವಾತ್ಮಾರಾಮರಾಗಿ ನಿರಂತರವೂ ನಲಿಯುತ್ತಿರುವರು.

೪. ಅಯ್ಯಾ ರಾಮಚಂದ್ರ, ರಾಜಸ ಸಾತ್ವಿಕನಾದ ಮಹಾಪುರುಷನ ಬುದ್ಧಿಯು ಶುಕ್ಲಪಕ್ಷದ ಚಂದ್ರನಂತೆ ಅತಿ ಮನೋಹರವಾಗಿ, ಶಮದಮಾದಿಗಳೆಂಬ ಅಮೃತರಸವು ವೃದ್ಧಿಹೊಂದಿದ ಹಾಗೆಲ್ಲಾ ತಾನೂ ಕ್ರಮಕ್ರಮವಾಗಿ ಅಭಿವೃದ್ಧಿಯನ್ನು ಹೊಂದಿ ಪರಿಪೂರ್ಣವಾಗುವುದು. ಇದೇ ಕೊನೆಗೆ ಮೋಕ್ಷಭಾಜನವಾಗಿಯೂ ಪರಿಣಮಿಸುವುದು.

೫. ಚಂದ್ರನು ಎಂದೆಂದಿಗೂ ತನ್ನ ಸಹಜವಾದ ಶೈತ್ಯವನ್ನು ಹೇಗೆ ಬಿಟ್ಟಿರುವುದೇ ಇಲ್ಲವೋ ಅಂತೆಯೇ ಈ ಮಹನೀಯರೂ ಎಂತಹ ದುಸ್ಸಹವಾದ ಆಪತ್ಕಾಲದಲ್ಲಿಯೂ ಕೂಡ ತಮ್ಮ ಸ್ವಾಭಾವಿಕವಾದ ಸೌಮ್ಯತೆಯನ್ನು ಬಿಡುವುದೇ ಇಲ್ಲ. ಆರಾಮ ವೃಕ್ಷಗಳು ಆಗ ತಾನೇ ಹೊಸದಾಗಿ ಉದ್ಭವಿಸಿದ ಹೂಗಳ ಗೊಂಚಲುಗಳನ್ನು ಧರಿಸಿ ಕಂಗೊಳಿಸುವ ಲತೆಗಳಿಂದ ಶೋಭಿಸುವಂತೆ ಮೈತ್ರೀ, ಕರುಣಾ, ಮುದಿತಾ ಮುಂತಾದ ಭಾವನೆಗಳಿಂದ (ಗುಣಗಳಿಂದ) ಸುಂದರವಾದ ಪ್ರಕೃತಿಯಿಂದ ವಿರಾಜಿಸುತ್ತಿರುವರು.

ಸಮಾಃ ಸಮರಸಾಃ ಸೌಮ್ಯಾಃ ಸತತಂ ಸಾಧುಸಾಧವಃ ।
ಅಬ್ಧಿವದ್ಧೃತಮರ್ಯಾದಾ ಭವಂತಿ ಭವತಾ ಸಮಾಃ ॥ ೬ ॥

ಅತಸ್ತೇಷಾಂ ಮಹಾಬಾಹೋ ಪದಮಾಪಡವಾಸನಮ್ ।
ಸತತಂ ತತ್ರ ಗಂತವ್ಯಂ ಗಂತವ್ಯಂ ನಾಪದಾರ್ಣವೇ ॥ ೭ ॥

ತಥಾ ತಥೇಹ ಜಗತಿ ವಿಹರ್ತವ್ಯಮಖೇದಿನಾ ।
ಆತ್ಮೋದಯಾಶ್ಚ ವರ್ಧಂತೇ ಯಥಾ ರಾಜಸಸಾತ್ವಿಕಾಃ ॥ ೮ ॥

ಅಚಿಂತ್ಯಗತ್ಯಾ ಸಚ್ಛಾಸ್ತ್ರಂ ವಿಚಾರ್ಯಂ ಚ ಪುನಃ ಪುನಃ
ಅನಿತ್ಯತಾ ಸ್ವಮನಸಾ ವಿವಿಧೈವಾಶುಭಾವತಃ ॥ ೯ ॥

---

೬. ಸಾಧುಗಳಲ್ಲೆಲ್ಲ ಪರಮಸಾಧುಗಳೆನ್ನಿಸಿಕೊಂಡಿರುವ ಅಂತಹ ಮಹಾ ಮಹಿಮರು, ಸರ್ವತ್ರ ಸಮರಾಗಿಯೂ ಸುಖದುಃಖಾದಿ ಸಕಲ ದ್ವಂದ್ವಗಳಲ್ಲಿಯೂ ಒಂದೇ ಸಮನಾದ ಚಿತ್ತವೃತ್ತಿಯುಳ್ಳವರಾಗಿಯೂ ಸೌಮ್ಯರಾಗಿಯೂ (ಪ್ರಶಾಂತ) ಸಮುದ್ರಗಳಂತೆ ಮರ್ಯಾದೆಯನ್ನು (ತಮ್ಮ ಎಲ್ಲೆಯಲ್ಲಿ) ಮೀರದವರಾಗಿಯೂ (ಅಂದರೆ ಲೋಕಮರ್ಯಾದೆಯನ್ನು ಅನುಸರಿಸುವವರಾಗಿಯೂ) ನಿನಗೆ ಸಮನಾಗಿರುವರು.

೭. ಎಲೈ ಮಹಾಬಾಹುವೇ, ಅವರು ಇಂತಹ ಉತ್ತಮ ಗುಣ ಸಂಪನ್ನರಾಗಿರುವ ಕಾರಣವೇ, ಅವರ ಸ್ಥಿತಿಯು ಯಾವುದೊಂದು ವಿಪತ್ತಿಗೂ ಈಡಾಗದೆ (ಅನಧಿಕರಣ) ನಿರುಪದ್ರವರಾಗಿರುವುದು. ಆದುದರಿಂದಲೇ ನೀನೂ ಕೂಡ ಅಂತಹ ಸ್ಥಿತಿಯನ್ನೇ ಪಡೆಯಲು ಸಂತತವಾಗಿ ಯತ್ನಿಸಬೇಕು. ಅಲ್ಲದೆ ವಿಪತ್ಸಾಗರದಲ್ಲಿ ಎಂದಿಗೂ ಹೋಗಿ ಬೀಳಬಾರದು.

೮. ಮತ್ತು ಸ್ವಾತ್ಮಾನಂದ ಲಾಭದಿಂದ ವಿಹರಿಸುತ್ತಿರುವ ರಜೋಗುಣ ರಹಿತರಾದ ಶುದ್ಧಸಾತ್ವಿಕರು ಹೇಗೆ ಹೇಗೆ ವ್ಯವಹಾರ ಮಾಡುತ್ತಾ ಇರುವರೋ ಹಾಗೆಯೇ ನೀನೂ ಈ ಜಗದ್ವ್ಯವಹಾರಗಳಲ್ಲಿ ಖೇದಗೊಳ್ಳದ ಮನಸ್ಸಿನಿಂದ (ಅನಿರ್ವಿಣ್ಣ ಮನಸ್ಕನಾಗಿ) ಲೀಲೆಯಾಗಿ ವಿಹರಿಸಿಕೊಂಡಿರು.

೯. ಮತ್ತು, ಅಜ್ಞ ಜನರ ಚಿಂತನೆಗೆ ಅರ್ಹವಾದ ವಿಷಯಗಳ ಕಡೆಗೆ ನಿನ್ನ

ಆದಾವಂತೇ ಚ ಯಾಂ ನಿತ್ಯಂ ಕ್ರಿಯಾಂ ತ್ರೈಲೋಕ್ಯವರ್ತಿನೀಮ್ ।
ಪದಾರ್ಥಾನಾಮಾಪದೇವಾಶು ಭಾವಯನ್ನೇತರತ್ಸುಧೀಃ । ॥ ೧೦ ॥

ಅಸಮ್ಯಗ್ದರ್ಶನಂ ತ್ಯಕ್ತ್ವಾ ವ್ಯರ್ಥಮಜ್ಞಾನ ಸಂತತಿಂ ।
ಸ್ಮರ್ತವ್ಯಂ ಸಮ್ಯಗೇವೇದಂ ಜ್ಞಾನಮನರ್ಥಮನಂತಕಮ್ ॥ ೧೧ ॥

ಮನಸ್ಸಿನ ಓಡಾಟವನ್ನು ಪೂರ್ತಿಯಾಗಿ ನಿಲ್ಲಿಸಿ, ಸಂಪ್ರದಾಯ ಶುದ್ಧವಾದ ಸಚ್ಛಾಸ್ತ್ರವನ್ನು ಪುನಃ ಪುನಃ (ಮನಸ್ಸಿನಲ್ಲಿ ಸಂಶಯಗಳು ಮತ್ತೆ ಅಂಕುರಿಸ ದಂತಾಗಿ ತತ್ತ್ವ ಜ್ಞಾನವು ದೃಢವಾಗುವ ಪರ್ಯಂತವೂ) ಸದ್ಗುರುವಿನ ಸಹಾಯ ದಿಂದ ವಿಚಾರ ಮಾಡುತ್ತಲೇ ಇರಬೇಕು. ಹೀಗೆ ಆತ್ಮಭಾವನೆಯನ್ನೇ ಬಲಪಡಿ ಸಿಕೊಂಡು ಸಕಲ ಪ್ರಾಪಂಚಿಕ ವಸ್ತುಗಳ ಅನಿತ್ಯತ್ವವನ್ನು ನಾನಾ ನಿಮಿತ್ತಗಳಿಂದ ಉಪಪಾದಿಸಿ, ಬೇಗಬೇಗನೆ ಪ್ರಪಂಚವೆಲ್ಲವೂ ಮಿಥ್ಯೆಯೇ (ಅನಿತ್ಯ) ಎಂಬು ದನ್ನೂ ತನ್ನ ಮನಸ್ಸಿನಲ್ಲಿಯೇ ವಿಚಾರಮಾಡಿ ನಿರ್ಧರಿಸಬೇಕು.

೧೦. ಹೀಗೆ ಜಗನ್ಮಿಥ್ಯಾತ್ವವನ್ನು ವಿಚಾರಮಾಡುವ ವಿವೇಕಶಾಲಿಯು ಪ್ರಥಮತಃ ಐಹಿಕ ಭೋಗೋಪಯುಕ್ತವಾದ ಸಕಲ ಲೌಕಿಕ ವ್ಯವಹಾರಗಳನ್ನೂ ತರುವಾಯ ಈ ದೇಹಪಾತಾ ನಂತರ ಪರಲೋಕಗಳಲ್ಲಿ ಅನುಭವಿಸಬಹುದಾದ ಭೋಗಗಳಿಗೆ ಸಾಧಕವಾದ ಲೋಕತ್ರಯಗತ ಸಕಲ ಶಾಸ್ತ್ರೀಯ ವ್ಯವಹಾರ ಗಳನ್ನೂ ಈ ಲೌಕಿಕ ವೈದಿಕ ಕರ್ಮಗಳಿಗೆ ಫಲಗಳಾಗಿರುವ ಪಶು, ಪುತ್ರ, ಧನ, ಸ್ವರ್ಗ, ವಿಮಾನಾದಿ ಸಕಲ ಪದಾರ್ಥಗಳನ್ನೂ ಕೂಡ ನಿಜವಾಗಿ ವಿಪತ್ತು ಗಳೆಂದೇ ಬೇಗನೆ ಮನಗಂಡು ನಿರ್ಧರಿಸಬೇಕು. ಅವುಗಳನ್ನು ಸಂಪತ್ತುಗಳೆಂಬು ದಾಗಿ ಎಂದೆಂದಿಗೂ ಭಾವಿಸಕೂಡದು.

[ಹೀಗೆ ಮೇಲಣ ಎರಡು ಶ್ಲೋಕಗಳಲ್ಲಿ ಸಚ್ಛಾಸ್ತ್ರವನ್ನು ಅಧ್ಯಾಯನ ಮಾಡಬೇಕಾದ ಆವಶ್ಯಕತೆಯನ್ನು ತತ್ತ್ವಜಿಜ್ಞಾಸುವಾದ ಅಧಿಕಾರಿಗೆ ಇರಬೇಕಾದ ಸಾಧನ ಚತುಷ್ಟಯಗಳಲ್ಲಿ ಅತಿ ಮುಖ್ಯವಾದ ನಿತ್ಯಾನಿತ್ಯ ವಸ್ತು ವಿವೇಕ, ಇಹಾಮುತ್ರಾರ್ಥ ಫಲಭೋಗ ವಿರಾಗ ಎಂಬ ಎರಡು ಸಾಧನಗಳನ್ನು ಹೇಳಿದ್ದಾಯಿತು.]

೧೧. ಅಸಮ್ಯಗ್ದರ್ಶನವೂ ಅನರ್ಥಕಾರಿಯೂ ಆದ ವಿಪರೀತ ಜ್ಞಾನ ವನ್ನೂ (ಅಂದರೆ ವಿರುದ್ಧವಾದ ತಪ್ಪು ತಿಳಿವಳಿಕೆಯನ್ನೂ) ಅಜ್ಞಾನ ಪರಂಪರೆ

ಕೋಽಹಂ ಕಥಮಿದಂ ಜಾತಂ ಸಂಸಾರಾದಂಬರಂವಿಭೋ ।
ಪ್ರವಿಚಾರ್ಯ ಪ್ರಯತ್ನೇನ ಪ್ರಾಜ್ಞೇನ ಸಹ ಸಾಧುಭಿಃ । ॥ ೧೨ ॥

ನ ಚ ಕರ್ಮಸು ಮಂಕ್ತವ್ಯಂ ನಾನರ್ಥೇನ ಸಹಾವಸೇತ್ ।
ದ್ರಷ್ಟವ್ಯಃ ಸರ್ವವಿಚ್ಛೇದಃ ಸಂಸಾರಾನುಗತಃ ಸದಾ ॥ ೧೩ ॥

ಸಾಧುರೇವಾನುಗಂತವ್ಯೋ ಮಯೂರೇಣಾಂಬುದೋ ಯಥಾ ॥ ೧೪ ॥

ಯನ್ನೂ ಬಿಟ್ಟು ಬಿಟ್ಟು ಅನಂತವೂ ಪರಮಾರ್ಥವೂ ಆದ ತತ್ತ್ವ ಜ್ಞಾನ ಲಾಭ ಕ್ಕೋಸ್ಕರ ಸಂತತವಾಗಿ ಮುಂದೆ ಹೇಳುವ ಪ್ರಕಾರದಲ್ಲಿ ಶಾಸ್ತ್ರವಿಚಾರವನ್ನು ಚೆನ್ನಾಗಿ ಸ್ಮರಿಸಬೇಕು.

೧೨. ವಿವೇಕಿಯಾದ ಜಿಜ್ಞಾಸುವು ತತ್ತ್ವಜ್ಞಾನ ಪರಿನಿಷ್ಠನಾದ ಪರಮ ಕಾರುಣಿಕನಾದ ಒಬ್ಬ ಸದ್ಗುರುವನ್ನು ಯಥಾ ವಿಧಿಯಾಗಿ ಆಶ್ರಯಿಸಿ ಪ್ರಯತ್ನ ಪಟ್ಟು ಸೇವಾದಿಗಳಿಂದ ಆತನನ್ನು ಪ್ರಸನ್ನನನ್ನಾಗಿ ಒಲಿಸಿಕೊಂಡು ಸಾಧು ಗಳಾದ ಸತೀರ್ಥ್ಯರ ಜೊತೆಯಲ್ಲಿ "ಸ್ವಾಮಿ ಗುರುಗಳೇ, ನಾನು ಯಾರು? ವಿಭುಗಳೇ, ಈ ಸಂಸಾರಾಡಂಬರವು ಹೇಗೆ ಉದ್ಭವಿಸಿತು?" ಎಂದು ಚೆನ್ನಾಗಿ ವಿಚಾರಮಾಡಿರಬೇಕು.

[ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ ಶ್ರುತಿ ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ಗೀತಾ-೪.೩೪.]

೧೩-೧೪. ಮತ್ತು ಜಿಜ್ಞಾಸುವು ಬಂಧ ಮೂಲನಾದ ಲೌಕಿಕ ವೈದಿಕ ಕರ್ಮ ಗಳಲ್ಲಿ ಮುಳುಗಿರಬಾರದು (ಅಂದರೆ ಶ್ರವಣಾಂಗವಾಗಿ ಕರ್ಮ ಸನ್ಯಾಸವನ್ನು ಮಾಡಬೇಕು.) ಅನರ್ಥಕಾರಿಯಾದ ಸಂಸಾರದೊಡನೆ ವಾಸಮಾಡಬಾರದು. ಮತ್ತು ಈ ಸಂಸಾರದಲ್ಲಿ ತನ್ನನ್ನು ಹಿಂಬಾಲಿಸಿರುವ ಸಕಲ ಪ್ರಿಯವಸ್ತುಗಳೂ ತಪ್ಪದೆ ವಿಚ್ಛಿನ್ನವಾಗಿ ಹೋಗತಕ್ಕವುಗಳೆಂದೇ ಸರ್ವದಾ ಚೆನ್ನಾಗಿ ಕಂಡು ಅರಿಯಬೇಕು. ನವಿಲು ಮೇಘವನ್ನೇ ಅನುಸರಿಸುವಂತೆ ಜಿಜ್ಞಾಸುವು ಸಾಧು ಪುರುಷನನ್ನೇ ಸರ್ವದಾ ಅನುಸರಿಸಬೇಕು.

೧೫. ಅಭ್ಯಂತರವಾದ ಅಹಂಕಾರವೂ ಅದಕ್ಕೂ ಬಾಹ್ಯವಾದ ಈ ಸ್ಥೂಲ ದೇಹವೂ ಇನ್ನೂ ದೂರದಲ್ಲಿರುವ ಪುತ್ರಮಿತ್ರ ಕಳತ್ರಾದಿ ಸಂಸಾರವೂ ಈ ಮೂರೂ

ಅಹಂಕಾರಸ್ಯ ದೇಹಸ್ಯ ಸಂಸಾರ ಸ್ಯಾಪ್ಲವಸ್ಯ ಚ ।
ಸ್ವವಿಚಾರಮಲಂಕೃತ್ಯ ಸತ್ಯಮೇವಾವಲೋಕಯೇತ್ ॥ ೧೫ ॥

ಶರೀರಮಸ್ಥಿರಮಪಿ ಸಂತ್ಯಕ್ತ್ವಾ ಘನಶೋಭನಮ್ ।
ಭೂತಮುಕ್ತಾವಲೀತಂತುಂ ಚಿನ್ಮಾತ್ರಮವಲೋಕಯೇತ್ ॥ ೧೬ ॥

ತಸ್ಮಿನ್ ಪದೇ ನಿತ್ಯತತೇ ಸರ್ವಗೇ ಸರ್ವ ಭಾವಿತೇ ।
ಶಿವೇ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಯಥಾ ॥ ೧೭ ॥

ನಾವೆಯೇ ಇಲ್ಲದ ಮೂರು ಸಮುದ್ರಗಳಂತಿರುವುವು. ಇವುಗಳನ್ನು ದಾಟ ಬೇಕಾದರೆ ಆತ್ಮವಿಚಾರವೆಂಬುದೊಂದೇ ದೃಢವಾದ ಉತ್ತಮ ನಾವೆಯು ಆದುದ ರಿಂದ ಚೆನ್ನಾಗಿ ಆತ್ಮ ವಿಚಾರಮಾಡಿ, ಅದರ ಸಹಾಯದಿಂದ ಮೇಲೆ ಉದ ಹರಿಸಿದ ಮೂರು ಸಮುದ್ರಗಳನ್ನು ದಾಟಿ ಈ ಸಂಸಾರದ ಹೊರಗೆ ಇರುವ ಪರಮಾರ್ಥ ಸತ್ಯವಾದ ಆತ್ಮತತ್ವವನ್ನೇ ಕಾಣುವವನಾಗಬೇಕು.

೧೬. ಅಸ್ಥಿರವಾದ ಈ ಶರೀರವನ್ನೂ ಅಹಂಕಾರವನ್ನೂ ಪರಿತ್ಯಾಗಮಾಡಿ ಜಗಜ್ಜಾಲವೆಂಬ ಮುಕ್ತಾಹಾರದಲ್ಲಿ ಸಕಲ ಭೂತಗಳೆಂಬ ಮುತ್ತುಗಳನ್ನು ಪವಣಿಸಿ ಕೊಂಡು (ವ್ಯಾಪಿಸಿಕೊಂಡು) ದಾರದಂತೆ (ತಂತು) ಇರುವ ಪರಮ ಮಂಗಳ ದಾಯಕವಾದ (ಸಕಲ ದೇಹಾಹಂಕಾರ ಸಾಧಾರಣವೂ ಸಾಕ್ಷಿ ಸ್ವರೂಪವೂ ಆದ) ಚಿನ್ಮಾತ್ರವನ್ನು ಸಾಕ್ಷಾತ್ಕರಿಸಬೇಕು.

೧೭. ಒಂದು ಮುಕ್ತಾಹಾರವನ್ನು ಕೈಗೆ ತೆಗೆದುಕೊಂಡು ನೋಡಿದರೆ ಉದ್ದ ವಾದ ಒಂದು ತಂತುವಿನಲ್ಲಿ ಅನೇಕಾನೇಕ ಮುತ್ತುಗಳು ಪವಣಿಸಲ್ಪಟ್ಟಿರುವುದು ಕಾಣುವುದು. ದೃಢವಾದ ಒಂದೇ ತಂತುವು ಎಲ್ಲ ಮುತ್ತುಗಳ ರಂಧ್ರಗಳನ್ನೂ ವ್ಯಾಪಿಸಿಕೊಂಡು ಆ ಮುತ್ತುಗಳನ್ನೆಲ್ಲ ಒಟ್ಟಿಗೆ ಕೂಡಿಸಿರುವುದು. ಇದರಂತೆಯೇ ನಿತ್ಯವೂ ಸರ್ವವ್ಯಾಪಿಯೂ ಸರ್ವಗತವೂ ಸರ್ವಾನುಭವಗೋಚರವೂ ಪರಮ ಮಂಗಳಪ್ರದವೂ ಆಗಿರುವ ಆ ಪರಮಪದದಲ್ಲಿ ಈ ಸಕಲ ಜಗತ್ತೂ ಪವಣಿಸ ಲ್ಪಟ್ಟು ಇರುವುದು. [ಮಯಿಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ. ಗೀತಾ].

ಯೈವ ಚಿದ್ಭುವನಾಭೋಗ ಭೂಷಣೇ ವ್ಯೋಮ್ನಿ ಭಾಸ್ಕರೇ ।
ದರಾವಿವರಕೋಶಸ್ಥೇ ಸೈವ ಚಿತ್ಕೀಟಕೋದರೇ ॥ ೧೪ ॥

ಕುಂಭವ್ಯೋಮ್ನಾಂ ನ ಭೇದೋಽಸ್ತಿ ಯಥೇಹ ಪರಮಾರ್ಥತಃ ।
ಚಿತ್ತಾ ಶರೀರಸಂಸ್ಥಾನಾಂ ನ ಭೇದೋಽಸ್ತಿ ತಥಾನಘ ॥ ೧೫ ॥

---

೧೪. ಅತ್ಯಂತ ವಿಶಾಲವಾದ ಈ ಜಗತ್ತಿಗೆಲ್ಲ ಭೂಷಣಪ್ರಾಯವಾಗಿ ಗಗನ ಮಂಡಲದಲ್ಲಿ ಬೆಳಗುವ ಸೂರ್ಯದೇವನಲ್ಲಿ ಯಾವ ಚಿತ್ತು (ಚೈತನ್ಯವು) ಇರುವುದೋ. ಅದೇ ಚಿತ್ತು ಪಾತಾಳಲೋಕದ ರಂಧ್ರದೊಳಗೆ ಜೀವಿಸಿರುವ ಒಂದು ಸಣ್ಣ ಹುಳುವಿನ ಒಳಗೂ ಇರುವುದು.

೧೫. ಎಲೈ ನಿರ್ದೋಷಿಯಾದ ರಾಮ, ಒಂದು ಬಯಲಿನಲ್ಲಿ ಅನೇಕ ಕುಂಭಗಳೊಳಗೆ ಇರುವ ಆಕಾಶಗಳು (ಬಾಲಕರ ದೃಷ್ಟಿಗೆ) ಬೇರೆ ಬೇರೆಯಾಗಿ ಕಂಡರೂ ವಸ್ತುತಃ ವಿಚಾರಮಾಡಿ ನೋಡಿದರೆ ಆ ಘಟಾಕಾಶಗಳಿಗೆ ಪರಸ್ಪರ ಭೇದವು ಇಲ್ಲವೇ ಇಲ್ಲ. ಇದರಂತೆಯೇ ನಾನಾ ಶರೀರಗಳ (ಶರೀರಗಳಲ್ಲಿರುವ ಜೀವರುಗಳ) ಚಿತ್ತಿಗೂ ಪರಸ್ಪರ ಭೇದವಿಲ್ಲವೆಂದು ತಿಳಿಯಬೇಕು.

[ಆಕಾಶವೆಂಬುದು ಸರ್ವವ್ಯಾಪಿಯು. ಘಟ, ಮಠ ಮುಂತಾದ ನಾನಾ ಉಪಾಧಿಗಳಿಂದ ಘಟಾಕಾಶ, ಮಠಾಕಾಶ ಮುಂತಾಗಿ ವ್ಯವಹರಿಸಲ್ಪಡುವುದೇ ಹೊರತು ಮಹಾಕಾಶಕ್ಕೂ ಉಪಹಿತವಾದ ಘಟಾಕಾಶಾದಿಗಳಿಗೂ ಪರಸ್ಪರ ಭೇದವಿಲ್ಲವೆಂಬುದು ನಿರ್ವಿವಾದ. ಉಪಾಧಿನಾಶ ಮಾತ್ರದಿಂದಲೇ ಐಕ್ಯವು ತಾನಾಗಿ ಸಿದ್ಧವಾಗುವುದು. ಅಂತೆಯೇ ಈ ನಾನಾ ವಿಧ ದೇಹಗಳೆಂಬ ಉಪಾಧಿವಶದಿಂದ ಸರ್ವಗತನಾದ ಆತ್ಮನು ಬೇರೆ ಬೇರೆಯಾಗಿರುವಂತೆ ತೋರುವನೇ ಹೊರತು ವಸ್ತುತಃ ವಿಚಾರದಶೆಯಲ್ಲಿ ಭೇದವು ಸುತರಾಂ ಅಸಂಭವವೆಂಬುದು ಅನುಭವ ಸಿದ್ಧವು. ಮತ್ತು ಶಾಸ್ತ್ರ ಸಿದ್ಧಾಂತವು. ಆತ್ಮಾಹ್ಯಾಕಾಶವತಾ ಜೀವೈಃ ಘಟಾಕಾಶೈರಿವೋದಿತಃ । ಘಟಾದಿಷು ಪ್ರಲೀನೇಷು ಘಟಾಕಾಶಾದಯೋ ಯಥಾ । ಆಕಾಶೇ ಸಂಪ್ರಲೀಯಂತೆ ತದ್ವಜ್ಜೀವಾ ಇಹಾತ್ಮನಿ ॥ ಇತ್ಯಾದಿ. ಶ್ರೀ ಗೌಡಪಾದೀಯ ಮಾಂಡೂಕ್ಯಕಾರಿಕಾ ಅದ್ವೈತ ಪ್ರಕರಣ. ೩–೪.]

ಸರ್ವೇಷಾಮೇವ ಭೂತಾನಾಂ ತಿಕ್ತಕಟ್ವಾದಿಭೇದಿನಾಂ ।
ಏಕತ್ವಾದನುಭೂತೇರ್ಹಿ ಕುತಶ್ಚಿನ್ಮಾತ್ರಭಿನ್ನತಾ ॥ ೨೦ ॥

ಏಕಸ್ಮಿನ್ನೇವ ಸತತಂ ಸ್ಥಿತೇ ಸನ್ಮಾತ್ರವಸ್ತುನಿ ।
ಜಾತೋಽಯಮಯಮುನ್ನಷ್ಟ ಇತಿ ತೇಷಾಂ ತವೇಹ ಧೀಃ ॥ ೨೧ ॥

ನ ಚ ತನ್ನಾಮ ವಸ್ತ್ವಸ್ತಿ ಯದ್ಭೂತ್ವಾ ಸಂಪ್ರಲೀಯತೇ ।
ಆಭಾಸಮಾತ್ರಮೇವೇದಂ ನ ಸನ್ನಾ ಸಚ್ಚ ರಾಘವ ॥ ೨೨ ॥

---

೨೦. ಸಮಸ್ತ ಪ್ರಾಣಿಗಳೂ ತಾವು ತಾವು ಬೇರೆ ಬೇರೆ ರಸಾನುಭವ ಮಾಡುವ ಕಾಲಗಳಲ್ಲಿ ಆಯಾ ಪದಾರ್ಥಗಳ ಕಹಿ, ಕಾರ ಮುಂತಾದ ಷಡ್ರಸಗಳ ಭೇದಗಳನ್ನು ತಿಳಿಯುವರು. ಆದರೆ ರಸದಲ್ಲಿ ನಾನಾ ಭೇದಗಳಿದ್ದರೂ ನಾನಾ ಪ್ರಾಣಿಗಳ ರಸಾನುಭವದಲ್ಲಿ ಮಾತ್ರ ಯಾವ ಭೇದವೂ ಇರುವುದಿಲ್ಲ. ಆ ಅನುಭವವೂ ಇರುವುದಿಲ್ಲ. ಆ ಅನುಭವವು ಒಂದೇ! ಹಾಗೆಯೇ ಈ ಚಿನ್ಮಾತ್ರದಲ್ಲಿಯೂ ದೇಹಾದಿ ಭೇದಗಳಿದ್ದಾಗ್ಯೂ) ವಸ್ತುತಃ ಭೇದವು ಸಂಭವಿಸುವುದಿಲ್ಲ.

೨೧. ಅಯ್ಯಾ ರಾಮ, ಹೀಗೆ ಅದ್ವಿತೀಯವಾದ ಆ ಸನ್ಮಾತ್ರ ವಸ್ತುವೊಂದೇ ಪರಮಾರ್ಥ ಸತ್ಯವಾಗಿ ಸರ್ವದಾ ಇರುತ್ತಿರಲಾಗಿ "ಇವನು ಹುಟ್ಟಿದನು ಇವನು ನಾಶ ಹೊಂದಿದನು" ಇತ್ಯಾದಿ ನಾನಾ ಪ್ರಕಾರವಾದ ಜ್ಞಾನವು ಪಾಮರ ಜನಗಳಿಗೆ (ಜಾತ ನಷ್ಟ ವಸ್ತುಗಳ ವಿಷಯದಲ್ಲಿ) ಉಂಟಾಗುವಂತೆಯೇ ನಿನಗೂ ಉಂಟಾಗುವುದು. ಇದು ಶಾಸ್ತ್ರೀಯವಾದುದಲ್ಲ.

೨೨. ಎಲೈ ರಾಘವ, ತತ್ತ್ವ ದೃಷ್ಟಿಯಿಂದ ವಿಚಾರ ಮಾಡಿದರೆ ಈ ಜಗತ್ತಿನಲ್ಲಿ ಯಾವುದೊಂದು ವಸ್ತುವೂ ಎಲ್ಲಿಯೂ ಯಾವಾಗಲೂ ಜನಿಸುವುದೂ ಇಲ್ಲ; ಲಯ ಹೊಂದುವುದೂ ಇಲ್ಲ. (ಇದು ಜನಿಸಿತು. ಇದು ನಷ್ಟವಾಯಿತು ಎಂಬೀ ಮೊದಲಾದ ವ್ಯವಹಾರವು) ಈ ದೃಶ್ಯ ಜಗತ್ತು ಪ್ರಾತಿಭಾಸಿಕ ವಸ್ತುಗಳಂತೆ ಕೇವಲ ಆಭಾಸ ಮಾತ್ರವೇ ಸರಿ. ಇದು ಸತ್ತೂ ಅಲ್ಲ. ಅಸತ್ತೂ ಅಲ್ಲ. (ಸದಸದ್ವಿಲಕ್ಷಣವು).

ಉದ್ಭೂತೇನಾಪ್ರಶಾಂತೇನ ಚೇತಸಾ ಸಪದಿ ಸ್ಥಿತಂ ।
ನೇಹ ಮೋಹಾಂತ ಆಮೋಕ್ಷಾನ್ನೇದಂ ಯತ್ತದಸಸ್ತು ಚ ॥ ೨೩ ॥

ಕಿಂ ಕಿಲಾಸತಿ ರಾಮೇಹ ಮೋಹಜಾಲೇ ಸಮುಜ್ಝತಿ ।
ಯತ್ಕಿಂಚಿತ್ಸಂಗಸಂಗತ್ಯಾ ವಿಮೋಹೇ ಕಾರಣಂ ಹಿ ತತ್ ॥ ೨೪ ॥

ಅಸತಿ ಜಗತಿ ಕಿಂ ಕಿಲೇಹ ಮೋಹಃ ।
ಸತಿ ಚ ಕಿಮಂಗವಿಮೋಹಕಾರಣಂ ತತ್ ।
ಜನನಮರಣಸಂಸ್ಥಿತಿಸ್ತ್ವತಸ್ತ್ವಂ
ಭವ ಖಮಿವಾತಿಸಮಃ ಸದೋಪಶಾಂತಃ ॥ ೨೫ ॥

ಇತ್ಯಾರ್ಷೇ ವಾಸಿಷ್ಠಮಹಾರಾಮಾಯಣೇ ವಾಲ್ಮೀಕಿಯೇ ಸ್ಥಿತಿ ಪ್ರಕರಣೇ
"ಜನನಮರಣಸಂಸ್ಥಿತಿಃ" ನಾಮೈಕಷಷ್ಟಿತಮಃ ಸರ್ಗಃ

---

೨೩. ಹೇಗೆಂದರೆ ಮೋಕ್ಷವು ಸಿದ್ಧಿಯಾಗುವವರೆಗೂ ಈ ಮನಸ್ಸು ಅಭಿವ್ಯಕ್ತವಾಗಿ ಮತ್ತು ಅಪ್ರಶಾಂತವಾಗಿ ಇದ್ದೇ ಇರುವುದು. ಇಂತಹ ಮನಸ್ಸಿನಿಂದ ಸ್ಫುಟವಾಗಿ ಗ್ರಹಿಸಲ್ಪಡುತ್ತಲಿರುವ ಈ ದೃಶ್ಯ ಜಗತ್ತು ಸ್ವಕಾಲದಲ್ಲಿ ಇದು ಕೊಂಡಿರುವ ಕಾರಣ, ಅದು "ಅಸತ್" ಅಲ್ಲವು. ಮೋಹವು ನಿವೃತ್ತಿಯಾದ ಮೇಲೆಯಾದರೋ (ಮೋಕ್ಷವು ಸಿದ್ಧವಾದ ಮೇಲೆಯಾದರೋ) ಇದು ಸರ್ವಥಾ ಸುತರಾಂ ಇರುವುದೇ ಇಲ್ಲವಾದ ಕಾರಣ "ಸತ್" ಆದುದೂ ಅಲ್ಲವು. ಹೀಗೆ ಈ ಜಗತ್ತು (ದೃಶ್ಯವು) "ಸತ್" ಅದುದೂ ಅಸತ್ ಆದುದೂ ಆಗಿಲ್ಲ. (ಸದಸದ್ವಿಲಕ್ಷಣ ಮಿಥ್ಯಾ ಆಗಿರುವುದು.)

[ಪರಮಾರ್ಥದಲ್ಲಿ ಈ ಜಗತ್ತು ಮನಸ್ಸಿಗೆ ಗೋಚರವಾಗುವ ಕಾಲದಲ್ಲಿಯೂ ಇರುವುದಿಲ್ಲವೆಂದೇ ತಿಳಿಯಬೇಕು.]

೨೪-೨೫. ಅಯ್ಯ ರಾಮ, ಜಗತ್ತಿನಲ್ಲಿ ಈ ಮೋಹಜಾಲವು (ಶಶವಿಷಾಣ ಮೊಲದ ಕೊಂಬು ಮೊದಲಾದುವಂತೆ) ಅತ್ಯಂತ ಅಸತ್ತಾದುದಾಗಿದ್ದ ಪಕ್ಷದಲ್ಲಿ

ಜ್ಞಾನದಿಂದ ನಿರಸ್ಯವಾದುದು (ಬಿಡಬೇಕಾದುದು) ಯಾವುದೂ ಇಲ್ಲದೆ ಹೋಗುವ ಕಾರಣ ಆಗ ಜ್ಞಾನ ಸಾಧ್ಯವಾದ ಪ್ರಯೋಜನವು ಏನು ತಾನೆ ಇರುವುದು ? ಅಥವಾ ಆದು ಅತ್ಯಂತ ಸತ್ತಾದುದೆಂದು ತಿಳಿದುಕೊಂಡರೆ ಸತ್ಯವಸ್ತುವನ್ನು ಎಂದಿಗೂ ಜ್ಞಾನವು ನಿವೃತ್ತಿ ಮಾಡಲಾರದ ಕಾರಣ ಆಗಲೂ ಜ್ಞಾನದಿಂದ ಪ್ರಯೋಜನವೇ ಇಲ್ಲದಂತಾಗುವುದು. ಹೀಗಿರುವುದರಿಂದ ಈ ದೃಶ್ಯವು ಸದಿಸದ್ವಿಲಕ್ಷಣವಾಗಿ ಅನಿರ್ವಚನೀಯವಾಗಿರುವ ಕಾರಣ. ರಜ್ಜು ಸರ್ಪಾದಿ ಜ್ಞಾನದಂತೆ ಅತ್ಯಂತ ವ್ಯಾಮೋಹಕ್ಕೆ ಕಾರಣವಾಗಿರುವುದೆಂದು ಫಲಿತವಾಯಿತು. ಅದರಿಂದ ಜಗತ್ತೇ ಇಲ್ಲದಿರುವಾಗ ಮೋಹವು ಎಲ್ಲಿಯದು ? ಜಗತ್ತು ಇರುವುದು ಎಂದರೂ ವ್ಯಾಮೋಹವು ಬರುವುದಕ್ಕೆ ಕಾರಣವು ಎಲ್ಲಿಂದ ಬರುವುದು ? ಅದರಿಂದ, ನೀನು ಜನನ, ಮರಣಗಳು ಯಾವುದೇ ಆದರೂ ಆಕಾಶದಂತೆ ಶುದ್ಧ ನಿರಂಜನನಾಗಿ ಸಮನಾಗಿ ಸದಾ ಉಪಶಾಂತನಾಗಿರು.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ ಸ್ಥಿತಿಪ್ರಕರಣದಲ್ಲಿ "ಜನನಮರಣ ಸಂಸ್ಥಿತಿ" ಎಂಬ ಅರವತ್ತೊಂದನೆಯ ಸರ್ಗವು

ದ್ವಿಷಷ್ಟಿತಮಃ ಸರ್ಗಃ

ಶ್ರೀ ವಸಿಷ್ಠ ಉವಾಚ:—

ಧೀರೋ ವಿಚಾರವಾನ್ ಸಾಕ್ಷಾದಾದಾವೇವ ಮಹಾಧಿಯಾ ।
ಶಾಸ್ತ್ರೇಣ ವಿದುಷಾ ಶಾಸ್ತ್ರಂ ಸುಜನೇನ ವಿಚಾರಯೇತ್ ॥ ೧ ॥

ಸುಜನೇನ ವಿತೃಷ್ಣೇನ ವಿದುಷಾ ಮಹತಾ ಸಹ ।
ಪ್ರವಿಚಾರ್ಯ ಮಹಾಯೋಗಾತ್ ಪದಮಾಸಾದ್ಯತೇ ಪರಂ ॥ ೨ ॥

ಅರವತ್ತೆರಡನೆಯ ಸರ್ಗ

೧. ಶ್ರೀ ವಸಿಷ್ಠನು ಹೇಳಿದನು:—ಜಿಜ್ಞಾಸುವು ಮೊಟ್ಟಮೊದಲೇ ಸುಸಂಸ್ಕೃತವಾದ ಬುದ್ಧಿಯಿಂದ ಧೀರನಾಗಿಯೂ ವಿಚಾರಪರನಾಗಿಯೂ ಇದ್ದುಕೊಂಡು ಸಾಕ್ಷಾತ್ತಾಗಿ ಸಕಲ ಶಾಸ್ತ್ರಗಳ ತತ್ತ್ವವನ್ನು ಮನಗಂಡಿರುವ ಕುಲೀನನೂ ಸದಾಚಾರ ಸಂಪನ್ನನೂ ಆದ ಸದ್ಗುರುವನ್ನು ಆಶ್ರಯಿಸಿ ಆತನೊಡನೆ ಅಧ್ಯಾತ್ಮ ಶಾಸ್ತ್ರದ ತತ್ತ್ವಗಳನ್ನು ವಿಚಾರಮಾಡಬೇಕು.

(ಧೀರ= ಬಾಹ್ಯವೂ ಆಭ್ಯಂತರವೂ ಆದ ದ್ವಂದ್ವದುಃಖಗಳನ್ನು ಸಹಿಸಬಲ್ಲವನು. ವಿಚಾರವಾನ್= ಊಹಾಪೋಹಗಳಲ್ಲಿ ಕೌಶಲ್ಯವನ್ನು ಪಡೆದವನು. ಎಂದು ತಾತ್ಪರ್ಯ ಪ್ರಕಾಶ.)

೨. ವಿರಕ್ತನೂ (ತೃಷ್ಣೆಯಿಲ್ಲದವನು) ಆತ್ಮತತ್ತ್ವಜ್ಞಾನ ಸಂಪನ್ನನೂ ಮಹಾತ್ಮನೂ ಸಂಪ್ರದಾಯಜ್ಞನೂ ಆಗಿರುವ ಗುರುವಿನ ಆಶ್ರಯದಲ್ಲಿ ಶಾಸ್ತ್ರಾರ್ಥವನ್ನು ಚೆನ್ನಾಗಿ ವಿಚಾರಮಾಡಿ ಅತ್ಯುತ್ತಮವಾದ ಜ್ಞಾನಯೋಗನಿಷ್ಠೆಯನ್ನು ಪಡೆದರೆ ಅದರಿಂದ ಪರಮಪದವು (ಮೋಕ್ಷವು) ತಾನಾಗಿಯೇ ದೊರಕುವುದು.

ಶಾಸ್ತ್ರಾರ್ಥಸುಜನಾಸಂಗವೈರಾಗ್ಯಾಭ್ಯಾಸಸತ್ಕೃತ ।
ಪುರುಷಸ್ತ್ವಮಿವಾಭಾತಿ ನಿಜವಿಜ್ಞಾನ ಭಾಜನಂ ॥ ೩ ॥

ತ್ವಮುದಾರನಿಜಾಚಾರೋ ಧೀರೋ ಗುಣಗಣಾಕರಃ ।
ಅಧಿತಿಷ್ಠಸಿ ನಿರ್ದುಃಖಂ ವೀತಸರ್ಗಮನೋಮಲಃ ॥ ೪ ॥

(ತದ್ವಿಜ್ಞಾನಾರ್ಥಂ ಸದ್ಗುರು ಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ. ಗುರುವು ಶ್ರೋತ್ರಿಯನೂ ಸದಾ ಬ್ರಹ್ಮನಿಷ್ಠನೂ ಆಗಿರಬೇಕು. ಮತ್ತು ಸಂಪ್ರದಾಯಜ್ಞನಾಗಿರಬೇಕು. ಈ ಅರ್ಥವನ್ನು ಶ್ರೀಮಚ್ಛಂಕರ ಭಗವತ್ಪೂಜ್ಯಪಾದರವರು ತಮ್ಮ ಭಗವದ್ಗೀತೆಯ ೧೩-೨ ಶ್ಲೋಕ ಭಾಷ್ಯದಲ್ಲಿ ತಸ್ಮಾತ್ ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ ಎಂಬ ವಾಕ್ಯದಿಂದ ಸ್ಪಷ್ಟಪಡಿಸಿರುವರು. ಅದಕ್ಕಾಗಿಯೇ ಸುಜನೇನ, ಮಹತಾ ಎಂಬೀ ವಿಶೇಷಣಗಳನ್ನು ಶ್ಲೋಕದಲ್ಲಿ ಕೊಟ್ಟಿದೆ.)

೩. ವೇದಾಂತಶಾಸ್ತ್ರಾರ್ಥವನ್ನು ವಿಚಾರಮಾಡುವುದರಿಂದಲೂ ಮಹಾತ್ಮರಾದ ಸತ್ಪುರುಷರ ಸಹವಾಸದಿಂದಲೂ ಸರ್ವತ್ರ ಐಹಿಕಾ ಮುಷ್ಮಿಕ ಫಲ ಭೋಗಗಳಲ್ಲಿ ವೈರಾಗ್ಯವನ್ನು ಸರ್ವದಾ ಅಭ್ಯಾಸಮಾಡುವುದರಿಂದಲೂ ಸುಸಂಸ್ಕೃತನಾಗಿರುವ ಮಹಾಪುರುಷನು ನಿನ್ನಂತೆಯೇ ಆತ್ಮಜ್ಞಾನಕ್ಕೆ ಸತ್ಪಾತ್ರನಾಗಿ ವಿರಾಜಿಸುವನು.

[ಶಾಸ್ತ್ರಾರ್ಥ= ಶಾಸ್ತ್ರ= ವೇದಾಂತ ಅದಕ್ಕೆ ಉಪಯುಕ್ತವಾದ ಇತರ ಶಾಸ್ತ್ರಗಳ ಮತ್ತು ಅರ್ಥ= ಸತ್ಕರ್ಮ ಸದಾಚಾರಾದಿಗಳ ಎಂದು ತಾ. ಪ್ರ.]

೪. ಅಯ್ಯಾ ರಾಮ, ನಿನ್ನ ಸದಾಚಾರವು ಅತ್ಯಂತ ಪ್ರಶಸ್ತವೂ ಶಿಷ್ಟಜನಾದರಣೀಯವೂ ಆಗಿರುವುದು. ನಿನ್ನ ಮನಸ್ಸಾದರೋ ಯಾವುದೊಂದು ಬಗೆಯ ವಿಕಾರಕ್ಕೂ ಒಳಗಾಗದೆ ಸರ್ವದಾ ಜ್ಞಾನನಿಷ್ಠೆಯನ್ನು ಪಡೆದು ಸ್ಥಿರವಾಗಿರುವುದು. ನೀನು ಸಕಲ ಸದ್ಗುಣಗಳ ಸಮುದಾಯಕ್ಕೂ ಗಣಿಯಾಗಿರುವೆ. ಜಗದ್ಭ್ರಾಂತಿಯೆಂಬ ಮಾಲಿನ್ಯವು ನಿನ್ನ ಮನಸ್ಸಿನಿಂದ ನಿಶ್ಶೇಷವಾಗಿ ಕಳೆದು ಹೋಗಿರುವುದು. ಅದುಕಾರಣ, ಈಗ ನೀನು ಸರ್ವೋಪದ್ರವರಹಿತವಾದ ಆತ್ಮಾನಂದರೂಪ ಪರಮಪದದಲ್ಲಿ ಅಚಲನಾಗಿದ್ದೀಯೆ.

ಸೂನಮುತ್ಸರ್ಜಿತಾಭ್ರೇಣ ಶರದ್ವ್ಯೋಮ್ನಾ ಸಮೋ ಭವಾ‌ ।
ಭವಭಾವನಯಾ ಮುಕ್ತೋ ಯುಕ್ತ ಉತ್ತಮಸಂವಿದಾ || ೫ ||

ಚಿಂತಾಮುಕ್ತಕಲಾವತ್ಯಾ ಮುಕ್ತಕಲ್ಪನಯಾ ಸ್ಥಿತಂ ।
ಮನೋ ಮುಕ್ತವಿಭಾಗಂ ಚ ಮುಕ್ತಮೇವ ನ ಸಂಶಯಃ || ೬ ||

ತನ್ವೋತ್ತಮಾನುಭಾವಸ್ಯ ತ ಇದಾನೀಂ ನರಾ ಭುವಿ ।
ಚೇಷ್ಟಾಮನುಸರಿಷ್ಯಂತಿ ರಾಗದ್ವೇಷವಿಹೀನಯಾ || ೭ ||

ಬಹಿರ್ಲೋಕೋಚಿತಾಚಾರಾ ವಿಹರಿಷ್ಯಂತಿ ಯೇ ಜನಾಃ ।
ಭವಾರ್ಣವಂ ತರಿಷ್ಯಂತಿ ಧೀಮಂತಃ ಪ್ರೋತಕಾನ್ವಿತಾಃ || ೮ ||

---

೫. ಉತ್ತಮೋತ್ತಮವಾದ ಆತ್ಮೈಕತ್ವಜ್ಞಾನ ಸಂಪನ್ನವಾಗಿ ಅತಿಹೇಯವಾದ ಈ ಸಂಸಾರ ಭಾವನೆಯನ್ನು ಕಳೆದುಕೊಂಡಿರುವ ನೀನು ಈಗ ನಿಜವಾಗಿಯೂ ಮೇಘಗಳ ಆಡಂಬರವು ಸುತರಾಂ ಇಲ್ಲದಾಗಿರುವ ಶರದೃತುವಿನ ನಭೋಮಂಡಲಕ್ಕೆ ಸಮಾನವಾಗಿ ಶೋಭಿಸುತ್ತಿರುವೆ.

೬. ರಾಮ, ನಿನ್ನ ಮನಸ್ಸು ಈಗ ಸಕಲವಿಧ ಬಾಹ್ಯಾರ್ಥಗಳ ಚಿಂತನೆಗಳನ್ನು ಬಿಟ್ಟು ಬಿಟ್ಟು ಅಂತಃ ಆತ್ಮೈಕ್ಯವನ್ನು ಮನಗಂಡು ಬ್ರಹ್ಮಾಕಾರವಾಗಿ ಪರಿಣಾಮ ಹೊಂದುವುದರಲ್ಲಿ ಕುಶಲತೆಯನ್ನು ಪಡೆದಿರುವ ಮತ್ತು ಜೀವನ್ಮುಕ್ತರ ಅನುಭವ ಸಿದ್ಧವಾದ ಕಲ್ಪನೆಯಿಂದ ಪರಿನಿಶ್ಚಿತವಾಗಿರುವುದು. ಅಲ್ಲದೆ ಭೇದಾತ್ಮಕವಾದ ದ್ವೈತ ಭ್ರಾಂತಿಯನ್ನು ಬಿಟ್ಟಿರುವುದು. ಇಂತಹ ಈ ನಿನ್ನ ಮನಸ್ಸು ಮುಕ್ತವಾದುದೇ ಸರಿ. ಈ ವಿಷಯದಲ್ಲಿ ಲೇಶಮಾತ್ರವೂ ಸಂದೇಹವಿಲ್ಲ.

೭. ಇಂತಹ ಮಹನೀಯಮಹಿಮಾನ್ವಿತನಾದ ನಿನ್ನ ಸದಾಚಾರವನ್ನು ಪೂರ್ವೋಕ್ತರಾದ ಜೀವನ್ಮುಕ್ತರು ಈಗ ಭೂಲೋಕದಲ್ಲಿ ರಾಗದ್ವೇಷಾದಿ ದೋಷ ರಹಿತವಾದ ಕಲ್ಪನೆಯಿಂದ ಅನುಸರಿಸುವರು.

(ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ । ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ಗೀತಾ-೨-೨೧.)

೮. ಹೊರಗೆ ಲೋಕಸಂಗ್ರಹಾರ್ಥವಾಗಿ ಸಮೀಚೀನವಾದ ಆಚಾರ ವ್ಯವಹಾರಗಳಿಂದ ವಿಹರಿಸಿಕೊಂಡಿರುವ ಮಹಾತ್ಮರಾದ ಜ್ಞಾನಿಗಳು ತಮ್ಮ

ತವ ತುಲ್ಯಮತಿರ್ಯಃ ಸ್ಯಾತ್ಸುಜನಃ ಸಮದರ್ಶನಃ ।
ಯೋಗ್ಯೋಽಸೌ ಜ್ಞಾನದೃಷ್ಟೀನಾಂ ಮಯೋಕ್ತಾನಾಂ ಸುದೃಷ್ಟಿವಾ᳚ ॥ ೯ ॥

ಯಾವದ್ದೇಹಂ ಧಿಯಾ ಶಿಷ್ಟ ರಾಗದ್ವೇಷವಿಹೀನಯಾ ।
ಬಹಿರ್ಲೋಕೋಚಿತಾಚಾರಸ್ತ್ವಂತಸ್ತ್ಯಕ್ತಾಖಿಲೈಷಣಃ ॥ ೧೦ ॥

ಪರಾಂ ಶಾಂತಿಮುಪಾಗಚ್ಛ ಯಥಾನ್ಯೇ ಗುಣಶಾಲಿನಃ ।
ಅವಿಚಾರ್ಯಾಸ್ತ ಏವೇಹ ಗೋಮಾಯುಶಿಶುಧರ್ಮಕಾಃ ॥ ೧೧ ॥

ಯೇ ಸ್ವಭಾವಾ ಮಹಾಸತ್ತ್ವಾ ನೃಣಾಂ ಸಾತ್ತ್ವಿಕಜನ್ಮನಾಂ ।
ತಾನ್ಭಜನ್ಪುರುಷೋ ಯಾತಿ ಪಾಶ್ಚಾತ್ತ್ಯೋದಾರಜನ್ಮತಾಂ ॥ ೧೨ ॥

ಜ್ಞಾನವೆಂಬ ನಾವೆಯ ಸಹಾಯದಿಂದ ಈ ಸಂಸಾರವೆಂಬ ಸಮುದ್ರವನ್ನು ದಾಟಿ ನಿಶ್ಚಿಂತರಾಗಿರುವರು.

೯. ಯಾವ ವಿವೇಕಶಾಲಿಯಾದ ಸತ್ಪುರುಷನು ನಿನ್ನಂತೆ ಸದ್ಬುದ್ಧಿಯುಳ್ಳವನಾಗಿ ಸರ್ವತ್ರ ಭೇದಬುದ್ಧಿಯನ್ನು ತೊರೆದು ಸಮದೃಷ್ಟಿಯುಳ್ಳವನಾಗಿರುವನೋ ಅವನೇ ನನ್ನಿಂದ ಬೋಧಿಸಲ್ಪಟ್ಟಿರುವ ಈ ಆತ್ಮತತ್ತ್ವಜ್ಞಾನೋಪದೇಶಗಳಿಗೆ ಸರಿಯಾದ ಪಾತ್ರನಾಗುವನು.

೧೦-೧೧. ಅಯ್ಯ ರಾಮ, ಈ ದೇಹವನ್ನು ಧರಿಸಿಕೊಂಡು ಜೀವಿಸಿರುವವರೆಗೂ ರಾಗದ್ವೇಷಾದಿಗಳನ್ನು ಪರಿತ್ಯಾಗಮಾಡಿ ನಿರ್ಮಲವಾದ ಬುದ್ಧಿಯಿಂದ ಹೊರಗೆ ಲೋಕೋಚಿತವಾದ ಯುಕ್ತಾಚಾರ ವಿಹಾರಗಳಿಂದ ವ್ಯವಹರಿಸುವವನಾಗಿಯೂ ಒಳಗೆ ಸಕಲವಿಧ ಆಶೆಗಳನ್ನೂ ಬಿಟ್ಟವನಾಗಿಯೂ ನೀನೂ ಗುಣಶಾಲಿಗಳಾದ ಇತರ ಜ್ಞಾನಿಗಳಂತೆಯೇ ಅತ್ಯುತ್ತಮವಾದ ಶಾಂತಿಯನ್ನು ಪಡೆದು ಆತ್ಮಾರಾಮನಾಗಿರು. ನರಿಗಳಂತೆ ಪರರನ್ನು ವಂಚಿಸತಕ್ಕವರಾಗಿಯೂ ಮತ್ತು ಯಾವ ನಿಯಮಕ್ಕೂ ಸಿಕ್ಕದೆ ಸ್ವೇಚ್ಛಾಚಾರ ನಿರತರಾಗಿಯೂ ಯಾವ ನರಾಧಮರು ಈ ಲೋಕದಲ್ಲಿ ವರ್ತಿಸುತ್ತಲಿರುವರೋ ಅಂತಹವರು ಸರ್ವಥಾ ನಿನ್ನ ವಿಚಾರಕ್ಕೆ (ಗಮನಕ್ಕೆ) ಅನರ್ಹರಾದವರು. (ಅವರ ವಿಷಯವನ್ನು ನೀನು ಗಮನಿಸಲೇಬಾರದು ಎಂದು ತಾತ್ಪರ್ಯ.)

೧೨. ಶುದ್ಧಸಾತ್ತ್ವಿಕ ಜನ್ಮಗಳನ್ನು ಹೊಂದಿರುವ ಜೀವನ್ಮುಕ್ತರಾದ

ಯಾಸೇವ ಸೇವತೇ ಜಂತುರಿಹ ಜಾತಿಗುಣಾನ್ಸದಾ ।
ಅಥಾನ್ಯಜಾತಿಜಾತೋಽಪಿ ಜಾತಿಂ ಭಜತಿ ತಾಂ ಕ್ಷಣಾತ್
ಪ್ರಾಕ್ತನಾನಖಿಲಾನ್ ಭಾವಾನ್ ಯಾಂತಿ ಕರ್ಮವಶಂ ಗತಾಃ ॥ ೧೩ ॥

ಪೌರುಷೇಣಾವಜೀಯಂತೇ ಧರಾಧರಮಹಾಕುಲಾಃ ॥ ೧೪ ॥

ಧೈರ್ಯೇಣಾಭ್ಯುದ್ಧರೇದ್ಬುದ್ಧಿಂ ಪಂಕಾನ್ಮುಗ್ಧಗವೀಮಿವ ।
ತಾಮಸೀಂ ರಾಜಸೀಂ ಚೈವ ಜಾತಿಮುನ್ಯಾಮ್ಯಪಿ ಶ್ರಿತಃ
ಸ್ವವಿವೇಕವಶಾದ್ಯಾಂತಿ ಸಂತಃ ಸಾತ್ವಿಕಜಾತಿತಾಂ ॥ ೧೫ ॥

ಮಹಾತ್ಮರಲ್ಲಿ ಸ್ವಾಭಾವಿಕವಾಗಿರುವಂತಹ ಮಹಾ ಸತ್ವಗಳಾದ ಶಮದಮಾದಿ ಸದ್ಗುಣಗಳನ್ನು ಪಡೆದಿರುವ ಸಾಧಾರಣ ಮನುಷ್ಯನೂ ಕೂಡ ಚಿತ್ತ ಶುದ್ಧಿ ವಿವೇಕ ವೈರಾಗ್ಯಾದಿ ಪೂರ್ವಕ ಕ್ರಮೇಣ ತತ್ತ್ವಜ್ಞಾನ ಸಂಪನ್ನನಾಗಿ ಅದೇ ಕೊನೆಯಾದ (ಚರಮ) ಜೀವನ್ಮುಕ್ತ ಶರೀರವನ್ನು ಹೊಂದುವನು.

೧೩. ಮನುಷ್ಯನು ಲೋಕದಲ್ಲಿ ನಿರಂತರವೂ ಯಾವ ಯಾವ ಬಗೆಯ ಜಾತಿಗುಣಗಳನ್ನು ಸೇವಿಸುತ್ತಿರುವನೋ ಅವನು ಕಾಲಾಂತರದಲ್ಲಿ ಬೇರೆ ಜನ್ಮದಲ್ಲಿ ಹುಟ್ಟಿದರೂ ಕೂಡ ಪೂರ್ವಜನ್ಮದಲ್ಲಿ ಅಭ್ಯಸ್ತವಾದ ಪೂರ್ವಜಾತಿ ಗುಣಗಳನ್ನೇ ಸಂಸ್ಕಾರವಶದಿಂದ ಒಂದು ಕ್ಷಣದೊಳಗಾಗಿ ಹೊಂದುವನು. ಸಕಲ ಪ್ರಾಣಿಗಳೂ ತಮ್ಮ ತಮ್ಮ ಕರ್ಮಪರವಶರಾಗಿ ಸ್ವಕರ್ಮಾನುಗುಣವಾಗಿ ಪ್ರಾಕ್ತನ ಸಕಲ ಭಾವಗಳನ್ನು ಸಂಸ್ಕಾರವಶದಿಂದಲೇ ಹೊಂದುವರು.

[ಯಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೇ ಕಲೇಬರಂ । ತಂತಮೇವೈತಿ ಕೌಂತೇಯ ಸದಾತದ್ಭಾವ ಭಾವಿತಃ ॥ ಎಂಬ ಗೀತೋಕ್ತಿಯನ್ನು ಗಮನಿಸಿ]

೧೪-೧೫. ಲೋಕದಲ್ಲಿ ಸುಪ್ರಸಿದ್ಧ ರಾಜಾಧಿರಾಜರ ಅಪಾರವಾದ ಸೇನೆಗಳೂ ನೀತಿ ಶಾಸ್ತ್ರಾನುಸಾರಿಯಾದ ಪೌರುಷದಿಂದ ಸೋತು ಹಾಳಾಗಿವೆ. ಮತ್ತು ವಿಂಧ್ಯ ಹಿಮಾಚಲಾದಿ ಮಹಾಪರ್ವತಗಳ ದುರ್ಗಮವಾದ ವನಮಾಲೆಗಳೂ ಪೌರುಷ ದಿಂದಲೇ ಕಡಿಯಲ್ಪಟ್ಟು ನಿರ್ನಾಮವಾಗಿವೆ. ಹೀಗೆ ಬಿಡದೆ ನಿರಂತರವೂ ಪುರುಷ ಕಾರದಲ್ಲಿ ನಿರತನಾದವನಿಗೆ ಫಲಸಿದ್ಧಿಯು ಅವಶ್ಯಂ ಭಾವಿಯಾಗಿರುವ ಕಾರಣ ಕೇವಲ ನಿಕೃಷ್ಟನಾದ ಅಜ್ಞಮನುಜನೂ ಕೂಡ ಸತತವಾದ ತನ್ನ ಪುರುಷಕಾರವನ್ನು ಬಿಡದೆ ನಡೆಸುತ್ತಾ ಅವಶ್ಯವಾಗಿ ಮೋಕ್ಷಲಾಭಕ್ಕಾಗಿಯೇ ಪ್ರಯತ್ನಿಸಬೇಕು.

ಅತಶ್ಚಿತ್ತಮಣೌ ಸ್ವಚ್ಛೇ ಯದ್ರಾಘವ ನಿಯೋಜ್ಯತೇ ।
ತನ್ಮಯೋ ವಿಭವತ್ಯೇಷಂ ತಸ್ಮಾತ್ಸ್ಯವತಿ ಪೌರುಷಂ ॥ ೧೬ ॥

ಪೌರುಷೇಣ ಪ್ರಯತ್ನೇನ ಮಹಾರ್ಹಗುಣಶಾಲಿನಃ ।
ಮುಮುಕ್ಷವೋ ಭವಂತೀಹ ಪಾಶ್ಚಾತ್ಯ ಶುಭಜಾತಯಃ ॥ ೧೭ ॥

ಈ ಕಾರಣದಿಂದ ಮನುಷ್ಯನಾದವನು ತಾಮಸ, ರಾಜಸ ಮತ್ತು ಸತ್ತ್ವತಮೋ ಮಿಶ್ರ ಮುಂತಾದ ಯಾವುದೇ ಜಾತಿಯನ್ನು ಹೊಂದಿದ್ದರೂ ಕೂಡ ಕೆಸರಿನಲ್ಲಿ ಸಿಕ್ಕಿ ಹಾಕಿಕೊಂಡು ಎದ್ದು ಬರಲಾರದೆ ನರಳುತ್ತಿರುವ ಹಸುವನ್ನು ಜನರು ಕಷ್ಟಪಟ್ಟು ಧೈರ್ಯದಿಂದ ಮೇಲಕ್ಕೆತ್ತಿಬಿಡುವಂತೆ ಧೈರ್ಯದಿಂದಲೇ ಶಬ್ದಾದಿ ವಿಷಯಗಳಲ್ಲಿ ಮುಳುಗಿರುವ ತನ್ನ ಬುದ್ಧಿಯನ್ನು ವಿಷಯಗಳ ಕಡೆಯಿಂದ ಹಿಂದಿರುಗಿಸಿ ಉದ್ಧಾರ ಮಾಡಬೇಕು. ಸತ್ಪುರುಷರು ತಮ್ಮ ವಿವೇಕ ವಶದಿಂದಲೇ ಶ್ಲಾಘ್ಯವಾದ ಸಾತ್ವಿಕ ಜನ್ಮವನ್ನು ಪಡೆಯುವರು.

[ರಾಕ್ಷಸ, ಪಿಶಾಚ ಶೂದ್ರಾದಿರೂಪ ಜಾತಿ= ರಾಜಸ ಜಾತಿ, ಕ್ಷತ್ರಿಯ ವೈಶ್ಯಾದಿರೂಪ ಜಾತಿ= ರಾಜಸಜಾತಿ. ಸರ್ಪಾದಿ ಜಾತಿ= ಸತ್ವತಮೋಮಿಶ್ರವೆಂದು ತಾತ್ಪರ್ಯ ಪ್ರಕಾಶ.]

೧೬. ಅಯ್ಯ ರಾಘವ, ಚಿತ್ತವೆಂಬುದು ಸ್ವಚ್ಛವಾದ ಸ್ಫಟಿಕ ಮಣಿಯಂತಿರುವುದು. ಸ್ಫಟಿಕಮಣಿಯಲ್ಲಿ ರಕ್ತ, ಪೀತಾದಿ ವಸ್ತುಗಳ ಸಂಸರ್ಗದಿಂದ ಕೆಂಪು ಹಳದಿ ಮುಂತಾದ ಬಣ್ಣಗಳು ಕಾಣಿಸಿಕೊಳ್ಳುವಂತೆ ಮನುಷ್ಯನ ಚಿತ್ತದೊಳಗೆ ಯಾವ ಬಗೆಯ ಗುಣವಿಶೇಷವು ಸೇರಿಸಲ್ಪಡುವುದೋ ಮನುಷ್ಯನು ಅದೇ ಗುಣ ವಿಶೇಷ ವಿಶಿಷ್ಟನಾಗಿ ಬಿಡುವನು. ಆದುದರಿಂದ ಪೌರುಷವು [ಪುರುಷಕಾರವು] ಅವಶ್ಯವಾಗಿ ಮಾಡಬೇಕಾಗಿರುವುದು.

೧೭. ಮಹಾ ಶ್ಲಾಘ್ಯಗುಣಶಾಲಿಗಳಾದ ಮುಮುಕ್ಷುಗಳು ಈ ಲೋಕದಲ್ಲಿ ತಮ್ಮ ಸ್ವಂತ ಪುರುಷ ಪ್ರಯತ್ನದಿಂದಲೇ ಪರಮಮಂಗಳರೂಪವಾದ ಮತ್ತು ಶುದ್ಧ ಸಾತ್ವಿಕವಾದ ಚರಮ (ಕೊನೆಯ) ಜನ್ಮವುಳ್ಳವರಾಗಿರುವರು. (ಅದೇ ಅವರಿಗೆ ಕೊನೆಯ ಜನ್ಮ. ಜನ್ಮಾಂತರವು ಇರುವುದಿಲ್ಲ. ಅಂದರೆ ಪುನಃ ಸಂಸಾರದಲ್ಲಿ ಜನ್ಮವೆತ್ತುವುದಿಲ್ಲ ಎಂದರ್ಥ.)

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾಕ್ವಚಿತ್ ।
ಪೌರುಷೇಣಪ್ರಯತ್ನೇನ ಯನ್ನಾಪ್ನೋತಿ ಗುಣಾನ್ವಿತಃ ॥ ೧೮ ॥

ಬ್ರಹ್ಮಚರ್ಯೇಣ ಧೈರ್ಯೇಣ ವೀರ್ಯವೈರಾಗ್ಯರಂಹಸಾ ।
ಯುಕ್ತ್ಯಾ ಯುಕ್ತೇನ ಹಿ ವಿನಾ ನ ಪ್ರಾಪ್ನೋಷಿ ತದೀಹಿತಂ ॥ ೧೯ ॥

ಹಿತಂ ಮಹಾಸತ್ವತಯಾತ್ಮತತ್ತ್ವಂ
ವಿಧಾಯ ಬುದ್ಧ್ಯಾ ಭವ ವೀತಶೋಕಃ ।
ತವ ಕ್ರಮೇಣೈವ ತತೋ ಜನೋಽಯಂ
ಮುಕ್ತೋ ಭವಿಷ್ಯತ್ಯಥ ವೀತಶೋಕಃ ॥ ೨೦ ॥

---

೧೮. ಸದ್ಗುಣಸಂಪನ್ನನಾದ ಮಹನೀಯನಿಗೆ ತನ್ನ ಪುರುಷ ಪ್ರಯತ್ನದಿಂದ ದುರ್ಲಭವಾಗುವ ವಸ್ತುವು ಈ ಭೂಲೋಕದಲ್ಲಾಗಲೀ, ಸ್ವರ್ಗದಲ್ಲಾಗಲೀ, ದೇವತೆಗಳ ಮಧ್ಯದಲ್ಲಾಗಲೀ ಎಲ್ಲಿಯೂ ಯಾವುದೂ ಇಲ್ಲವೇ ಇಲ್ಲ.

೧೯. ಬ್ರಹ್ಮಚರ್ಯ, ಧೈರ್ಯ, ವೀರ್ಯ, ತೀವ್ರವಾದ ವೈರಾಗ್ಯ, ಮತ್ತು ಯುಕ್ತಿ ಇವುಗಳಿಂದ ಯುಕ್ತವಾದ ಪುರುಷಕಾರದಿಂದ ಮಾತ್ರವೇ ನಿನ್ನ ಇಷ್ಟಾರ್ಥವನ್ನು (ಮೋಕ್ಷವನ್ನು) ಪಡೆಯಬಹುದು. ಹಾಗಲ್ಲದೆ ಬ್ರಹ್ಮಚರ್ಯಾದಿಗಳಿಲ್ಲದ ಪುರುಷಕಾರದಿಂದ ನಿನಗೆ ಯಾವುದೊಂದು ಅಭಿಮತವೂ ಸಿದ್ಧಿಸುವುದಿಲ್ಲ.

೨೦. ಆದುದರಿಂದ, ಅಯ್ಯ ರಾಮ, ಸಕಲ ದುಃಖಗಳೂ ಆತ್ಯಂತಿಕವಾಗಿ ನಾಶಹೊಂದಿ ನಿರತಿಶಯಾನಂದರೂಪ ಸ್ವಾತ್ಮಜ್ಞಾನೋದಯಕ್ಕೆ ಹೇತುವಾಗಿರುವ ಕಾರಣ ಸಕಲ ಪ್ರಾಣಿಗಳಿಗೂ ಅತ್ಯಂತಹಿತಕರವಾದ ಈ ನನ್ನ ಆತ್ಮತತ್ತ್ವೋಪದೇಶವನ್ನು ನೀನು ಕೇವಲ ಶುದ್ಧ ಸತ್ವಗುಣಸಂಪನ್ನವಾದ ನಿನ್ನ ಬುದ್ಧಿಯಿಂದ ಮನಸ್ಸಿನಲ್ಲಿ ಸ್ಥಿರಪಡಿಸಿಕೊಂಡು ಶೋಕರಹಿತನಾಗಿರು. ನಿನಗೆ ಉಪದಿಷ್ಟವಾದ ಕ್ರಮದಿಂದಲೇ ಈ ಇತರ ಜನಗಳೂ ಕೂಡ ಇನ್ನು ಮೇಲೆಯೂ ಶೋಕರಹಿತರಾಗಿ ಮೋಕ್ಷವನ್ನು ಪಡೆಯುವರು.

ಪಾಶ್ಚಾತ್ಯಜನ್ಮನಿ ವಿವೇಕಮಹಾಮಹಿಮ್ನಾ
ಯುಕ್ತೇ ತ್ವಯಿ ಪ್ರಸೃತ ಸರ್ವಗುಣಾಭಿರಾಮೇ ।
ಸತ್ವಸ್ಥಕರ್ಮಣಿ ಪದಂ ಕುರು ರಾಮಭದ್ರ
ಮೈಷಾ ಕರೋತು ಭವಸಂಗವಿಮೋಹಚಿಂತಾ ॥ ೨೧ ॥

ಇತ್ಯಾರ್ಷೇ ವಾಸಿಷ್ಠರಾಮಾಯಣೇ ವಾಲ್ಮೀಕಿಯೇ ಸ್ಥಿತಿಪ್ರಕರಣೇ
"ಗುಣಸಂಪತ್ತಿ ವರ್ಣನಂ" ನಾಮ ದ್ವಿಷಷ್ಟಿತಮಃ ಸರ್ಗಃ

---

೨೧. ಅಯ್ಯ ರಾಮಭದ್ರ, ವಿವೇಕದ ಮಹಾಮಹಿಮೆಯಿಂದ ಕೂಡಿಕೊಂಡು ಚೆನ್ನಾಗಿ ವಿಕಾಸಹೊಂದಿದ ಶಮದಮಾದಿ ಸಕಲ ಸದ್ಗುಣಗಳಿಂದ ಅತಿ ಮನೋಹರವಾದ ಈ ಕಟ್ಟಕಡೆಯ ಜನ್ಮವು ನಿನಗೆ ಪ್ರಾಪ್ತವಾಗಿರುವುದು. ಅದರಿಂದ ನೀನು ಜೀವನ್ಮುಕ್ತರ ವ್ಯವಹಾರದಲ್ಲಿ ಸ್ಥಿರವಾಗಿ ನಿಲ್ಲುವವನಾಗು. ಸರ್ವಲೋಕಪ್ರಸಿದ್ಧವಾದ ಈ ಸಂಸಾರಾಸಕ್ತರೂಪ ಮೋಹ ಚಿಂತೆಯು ನಿನ್ನಲ್ಲಿ ಎಂದಿಗೂ ಕಾಣಿಸಿಕೊಳ್ಳದೆ ಹೋಗಲಿ.

ಇಂತಿದು ಆರ್ಷವೂ ವಾಲ್ಮೀಕಿ ಪ್ರೋಕ್ತವೂ ಆದ ವಾಸಿಷ್ಠ ರಾಮಾಯಣದ
ಸ್ಥಿತಿಪ್ರಕರಣದಲ್ಲಿ "ಗುಣಸಂಪತ್ತಿ ವರ್ಣನ" ಎಂಬ ಅರವತ್ತೆರಡನೆಯ ಸರ್ಗವು.

ಸ್ಥಿತಿ ಪ್ರಕರಣ ಸಂಪೂರ್ಣಂ